ಷ. ಶೆಟ್ಟರ್

ಸಾವಿಗೆ ಆಹ್ವಾನ

ಕನ್ನಡಕ್ಕೆ
ಸದಾನಂದ ಕನವಳ್ಳಿ
ಷ. ಶೆಟ್ಟರ್

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಸಾವಿಗೆ ಆಹ್ವಾನ

ಅನುವಾದ ಮಾಲೆ

ಷ. ಶೆಟ್ಟರ್

ಸಾವಿಗೆ ಆಹ್ವಾನ

ಶ್ರವಣಬೆಳ್ಗೊಳದ ಧಾರ್ಮಿಕ ಇತಿಹಾಸದ ಹಿನ್ನೆಲೆಯಲ್ಲಿ ಮರಣ ಪ್ರಕ್ರಿಯೆಯ ಅಭ್ಯಾಸ

ಕನ್ನಡಕ್ಕೆ
ಸದಾನಂದ ಕನವಳ್ಳಿ
ಷ. ಶೆಟ್ಟರ್

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

SAVIGE ĀHWANA
Original English Text 'Inviting Death'

Author

S. Settar
Dr. S. Radhakrishnan Visiting Professor
National Institute of Advanced Studies
Indian Institute of Science Campus, Bangalore-560 012, India

Translation by

S. Settar
Sadananda Kanavalli

Publisher
N. Tippeswamy
Administrative Officer
Kannada Pustaka Pradhikara
Kannada Book Authority
Pampamahakavi Road, Chamarajapet
Bangalore-560018

First Edition : 2004

Pages : xxxii + 332 + 48 Photo pages   Price : Rs. 200/-

ISBN : 81-7713-119-2

PRINTER
ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
117/2, 5th Main Road, Chamarajpet, Bangalore-18
Phone : 26613123, 26618752

ಅರ್ಪಣೆ

ಮರಣಸಿದ್ಧಾಂತವನ್ನು ಪ್ರತಿಪಾದಿಸಿ, ಪೋಷಿಸಿ, ಪ್ರಯೋಗಿಸಿ
ಅದಕ್ಕೊಂದು ಅರ್ಥಪೂರ್ಣ ಇತಿಹಾಸವನ್ನು ನಿರ್ಮಿಸಿಕೊಟ್ಟ
ಎರಡು ಸಾವಿರ ವರ್ಷ ಕಾಲದ ಶ್ರಮಣ-ಶ್ರಾವಕ ವೃಂದಕ್ಕೆ
ಶ್ರೀ ಕ್ಷೇತ್ರವನ್ನು ಅದರ ಸತ್ ಸಂಪ್ರದಾಯದ ಇತಿಹಾಸವನ್ನು
ಜೀವಂತವಾಗಿಡಲು ಹಗಲಿರುಳೂ ಶ್ರಮಿಸುತ್ತಿರುವ
ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ
ಅವರಿಗೆ ವಿನಮ್ರಪೂರ್ವಕವಾಗಿ.

ಅಕ್ಷರ ಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಹಲವು ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿ ಮುಖ್ಯವಲ್ಲವೆ ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು

ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು !

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು ! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ ! ಅನೇಕ ತಳವರ್ಗದ ಜನಸ್ತೋಮಗಳು ಮೊದಲ ಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಇದು ಈಗ ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೨೦ರಲ್ಲಿ ಅತ್ಯುತ್ತಮ ತಾಂತ್ರಿಕಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು-ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೊ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೊ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ ! ಈ ಅಜ್ಞಾನದಿಂದ

ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು 'ಅನುವಾದ ಮಾಲೆ'ಯ ಅಡಿಯಲ್ಲಿ ಸಾಂಸ್ಕೃತಿಕವಾಗಿ ಬಹುಮುಖ್ಯವೂ ಧಾರ್ಮಿಕವಾಗಿ ವಿಶ್ಲೇಷಣಾತ್ಮಕವೂ ಆದ ಗ್ರಂಥವೊಂದನ್ನು ಪ್ರಕಟಿಸುತ್ತಿದೆ. ಕರ್ನಾಟಕ ಸಂಸ್ಕೃತಿಯನ್ನು ಹಲವು ಬಗೆಯ ನೆಲೆಗಳಲ್ಲಿ ತಿಳಿಯುವ ಪ್ರಯತ್ನವನ್ನು ನಾವು ಮಾಡಿದ್ದೇವಷ್ಟೆ. ಈ ಪ್ರಯತ್ನವು ಸಾಮಾಜಿಕ ಮತ್ತು ರಾಜಕೀಯ ಆಯಾಮಗಳನ್ನು ಬಹುವಾಗಿ ಹೊಂದಿದೆ. ಆದರೆ, ಸಾಂಸ್ಕೃತಿಕವಾಗಿ ಇನ್ನೂ ಅಭ್ಯಾಸ ಆಗಬೇಕಾಗಿದೆ. ಈಗ ಆಗಿರುವಷ್ಟು ಅಭ್ಯಾಸಗಳು ನಗಣ್ಯವೇನಲ್ಲ. ಆದರೆ, ಧಾರ್ಮಿಕೇತಿಹಾಸದ ನೆಲೆಯಿಂದ ಕನ್ನಡ ಸಂಸ್ಕೃತಿ ಇದರ ವಿಶಾಲ ಕಕ್ಷ್ಯೆಯಾದ ಭಾರತೀಯ ಸಂಸ್ಕೃತಿಯನ್ನು ತಿಳಿಯುವ, ವ್ಯಾಖ್ಯಾನಿಸುವ, ವಿಶ್ಲೇಷಿಸುವ ಕೆಲಸಗಳು ನಮ್ಮಲ್ಲಿ ಇನ್ನು ಹೆಚ್ಚಾಗಿ ನಡೆದಿಲ್ಲ. ಆ ಬಗೆಯ ವ್ಯಾಸಂಗಕ್ಕೆ ಪ್ರೊ.ಷ. ಶೆಟ್ಟರ್ ಅವರ ಗ್ರಂಥಗಳು ಮುಖ್ಯ ಕೊಡುಗೆಗಳಾಗಿವೆಯೆಂದು ಈ ಹೊತ್ತೂ ನನಗನಿಸಿದೆ.

ಕರ್ನಾಟಕ ಸಂಸ್ಕೃತಿಯು ಜೈನ ಸಮಾಜದ ಮುಖ್ಯ ನೆಲೆ-ಬೆಲೆಗಳನ್ನು ಹೊಂದಿದೆಯಷ್ಟೆ. ಇದು ಕ್ರಿ.ಶ. ೧-೨ನೆಯ ಶತಮಾನದಿಂದ ನಿರ್ದಿಷ್ಟವಾಗಿ ಆರಂಭಗೊಂಡು ಕ್ರಿ.ಶ. ೧೫-೧೬ನೇ ಶತಮಾನದ ವರೆಗೆ ವ್ಯಾಪಕವಾಗಿ ಕಂಡುಬರುತ್ತದೆ. ಆಮೇಲೂ ಈ ಜೈನ ಸಮಾಜವು ಇತರ ಸಮಾಜದ ಜತೆ ಇಟ್ಟುಕೊಂಡ ಕೊಳು-ಕೊಡುಗೆಗಳನ್ನೂ ಒಳ-ಸಂಬಂಧಾಂತರಗಳನ್ನೂ ಹಲವು ಬಗೆಗಳಲ್ಲಿ ನೋಡುವ ಅಗತ್ಯವಿದೆ. ಕರ್ನಾಟಕ ಜೈನ ಸಮಾಜ - ಸಂಸ್ಕೃತಿಯ ಅಭ್ಯಾಸದ ಮುಖ್ಯ ಕೇಂದ್ರವೆಂದರೆ, ಶ್ರವಣಬೆಳ್ಗೊಳವೇ. ಈ ಕೇಂದ್ರವು ಎರಡು ಸಾವಿರ ವರ್ಷಗಳ ಕಾಲ ತನ್ನ ಸ್ಮೃತಿಗರ್ಭದಲ್ಲಿ ಹಲವಾರು ಸಾಂಸ್ಕೃತಿಕ ಎಳೆಗಳನ್ನೂ ತಾತ್ವಿಕ ನೆಲೆಗಳನ್ನೂ ಇಟ್ಟುಕೊಂಡಿದೆ. ಶಿಲ್ಪ-ವಾಸ್ತು, ಲಲಿತಕಲೆ, ಆಚಾರ-ವಿಚಾರ, ಸಂಸ್ಕೃತಿ-ಭಾಷೆ - ಇವೇ ಮುಂತಾದುವು ಹಾಸು ಹೊಕ್ಕಾಗಿ ನೆಲೆಸಿದೆ. ಈ ಹಾಸು-ಹೊಕ್ಕುಗಳ ವಿವಿಧ ಬಗೆಗಳನ್ನು ನಾವೀಗ ತಿಳಿಯುವ ಅಗತ್ಯವಿದೆ. ಈ ಸಾಂಸ್ಕೃತಿಕ ಕೇಂದ್ರದ ವಿಶೇಷ ವ್ಯಾಸಂಗವನ್ನು ಅಂತಾರಾಷ್ಟ್ರೀಯ ವಿದ್ವಾಂಸರಾದ ಪ್ರೊ. ಷ. ಶೆಟ್ಟರ್ ಅವರು Inviting Death ಮತ್ತು Persuing Death ಈ ಎರಡೂ ಕೃತಿಗಳ ಮೂಲಕ ಅನ್ವೇಷಿಸಿದ್ದಾರೆ; ವ್ಯಾಖ್ಯಾನಿಸಿದ್ದಾರೆ; ವಿಶ್ಲೇಷಿಸಿದ್ದಾರೆ; ವರ್ತಮಾನಗೊಳಿಸಿದ್ದಾರೆ. ಇದು ಕರ್ನಾಟಕದ ಮಟ್ಟಿಗೆ ದೊಡ್ಡ ಸಾಧನೆಯೇ ಸರಿ.

ಪ್ರೊ. ಷ. ಶೆಟ್ಟರ್ ಅವರ Inviting Death ಇಂಗ್ಲೀಷಿನಲ್ಲಿ ಪ್ರಕಟವಾದಾಗ ಬಹುಖ್ಯಾತಿಯನ್ನು ಪಡೆಯಿತು. ಅದು ದೇಶ-ವಿದೇಶಗಳ ವಿದ್ವಾಂಸರ ಗಮನವನ್ನು ಸೆಳೆಯಿತು. ಈ ಕೃತಿಯ ಮಹತ್ವವನ್ನು ನಮ್ಮ ದೇಶದ ವಿದ್ವಾಂಸರಿಗಿಂತ ಹೊರದೇಶದ ವಿದ್ವಾಂಸರೇ ಮುಕ್ತವಾಗಿ ಸ್ವೀಕರಿಸಿದ್ದು ಈಗ ಚರಿತ್ರೆಗೆ ಸಂದಿರುವ ಸಂಗತಿ. ಭಾರತದ ವಿದ್ವಾಂಸರು ಈ ಕೃತಿಯನ್ನು ಹಲವು ಮಗ್ಗುಲುಗಳಿಂದ ಈಗೀಗ ನೋಡುತ್ತಿದ್ದಾರೆ. ಆದರೆ, ಕರ್ನಾಟಕದ ವಿದ್ವಾಂಸರ ಗಮನವನ್ನು ಇದು ಹೆಚ್ಚು ಸೆಳೆದಂತಿಲ್ಲ. ಈ ಗ್ರಂಥದ ವ್ಯಾಸಂಗ ಪದ್ಧತಿ, ವಿಚಾರ ಪ್ರಣಾಲಿ, ತಾತ್ವಿಕ ಎಳೆಗಳ ಬಹುವಿನ್ಯಾಸಗಳು ಇದಕ್ಕೆ ಕಾರಣವಿರಬಹುದು. ಅದು ಇಂಗ್ಲಿಷಿನಲ್ಲಿ ಇದ್ದದ್ದು ಹಲವು ಕಾರಣಗಳಲ್ಲಿ ಒಂದು. ಈಗ ಆ ಗ್ರಂಥದ ಅನುವಾದವು ಕನ್ನಡ ವ್ಯಾಸಂಗಿಗಳ ಮುಂದಿದೆ.

ಈ ಮಹಾಗ್ರಂಥವು ಜೈನ ಸಂಸ್ಕೃತಿಯ 'ಸಾವಿನ ಬಗೆ'ಯನ್ನು ಕುರಿತಿದೆ. ಇದೊಂದು ಜೈನ ಸಾಂಸ್ಕೃತಿಕ ಕೇಂದ್ರದ ಪರಿಕಲ್ಪನೆಯಾಗಿದೆ. ಈ ಪರಿಕಲ್ಪನೆಯು ಆ ಸಂಸ್ಕೃತಿಯ ಐತಿಹಾಸಿಕ, ಸಾಮಾಜಿಕ, ನೈತಿಕ, ಧಾರ್ಮಿಕ ನೆಲೆಗಳ ಜತೆ ಬಹು ವಿನ್ಯಾಸವನ್ನು ಪಡೆದಿದೆ. ಸಾವು ಒಂದು ರುದ್ರಭೀಕರ ಸನ್ನಿವೇಶವಲ್ಲ; ಅದೊಂದು ಅನೂಹ್ಯ ತತ್ವವಲ್ಲ; ಲೌಕಿಕದಲ್ಲಿದ್ದೂ ಅಲೌಕಿಕ ನೆಲೆಯನ್ನು ಹಿಡಿಯುವ ಒಂದು ಪರಿ. ಇದು ಆಹ್ವಾನವೇ ಹೊರತು ಪಲಾಯನವಲ್ಲ. ಜೈನ ಸಮಾಜ-ಸಂಸ್ಕೃತಿಯು ಸಾವೆಂಬುದು 'ಆಹ್ವಾನ'ವೆಂದೇ ಉದ್ದಕ್ಕೂ ತಿಳಿದಿದೆ. ಈ ಆಹ್ವಾನದ ಹಲವು ಪರಿಗಳನ್ನೂ ಹಾದಿಗಳನ್ನೂ ಸೂಕ್ಷ್ಮಗಳನ್ನೂ ಈ ಮಹಾಕೃತಿ ಹಿಡಿಯುತ್ತದೆ. ಈ ಗ್ರಂಥದ ರಚನೆಯಲ್ಲಿ ಪ್ರೊ. ಷ.ಶೆಟ್ಟರ್ ಅವರ ವಿಪುಲ ವ್ಯಾಸಂಗ, ವಿಶ್ಲೇಷಣ ಸಾಮರ್ಥ್ಯ, ತಾತ್ವಿಕ ದೃಷ್ಟಿಕೋನಗಳು ನಮ್ಮಲ್ಲಿ ಅಚ್ಚರಿಯನ್ನು ಉಂಟು ಮಾಡುತ್ತವೆ. ಪ್ರೊ. ಷ. ಶೆಟ್ಟರ್ ನಮ್ಮ ನಡುವಿನ ಮೇಧಾವೀ ವಿದ್ವಾಂಸರು. ಅವರು ಹೊಸತೆಲ್ಲಿದ್ದರು ತಿಳಿಯಬಲ್ಲ ಸೂಕ್ಷ್ಮಜ್ಞರು. ಸದಾ ವ್ಯಾಸಂಗವೇ ಅವರ ಕ್ರಿಯಾಶಕ್ತಿಯ ಫಲವಾಗಿದೆ. ಇಂಥ ವಿದ್ವಾಂಸರು ನಮ್ಮ ನಡುವೆ ವಿರಳರಾಗುತ್ತಿದ್ದಾರೆ. ಕನ್ನಡ, ಇಂಗ್ಲಿಷ್, ಸಂಸ್ಕೃತ, ಪ್ರಾಕೃತ - ಹೀಗೆ ಹಲವು ಭಾಷಾ - ಸಾಹಿತ್ಯಗಳ ಜತೆ ನಂಟನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಅದು ಅವರ ಜೀವನದ ಸಾತತ್ಯ ಫಲವಾಗಿದೆ. ಕನ್ನಡದ ಜೈನಕಾವ್ಯಗಳ ವ್ಯಾಸಂಗಕ್ಕೆ ಇದು ಬಹು ಉಪಕಾರಕವಾದ ಗ್ರಂಥವೆಂಬುದು ನನ್ನ ಭಾವನೆ.

ಈ ಗ್ರಂಥವು ಪ್ರಾಧಿಕಾರದ ಮಹತ್ವದ ಪ್ರಕಟಣೆಗಳಲ್ಲಿ ಒಂದೊಂದು ನಾನು ತಿಳಿಯುತ್ತೇನೆ. ಪ್ರೊ. ಷ.ಶೆಟ್ಟರ್ ಅವರ ವಿಶ್ವಾಸದ ಫಲವಾಗಿ ಈ ಗ್ರಂಥ ಪ್ರಕಟಗೊಳ್ಳುತ್ತಿದೆ. ಈ ಮಹಾಮೇಧಾವಿ ವಿದ್ವಾಂಸರಿಗೆ ಮೊದಲು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯು

ಕನ್ನಡಕ್ಕೆ ಬರಲು ಪ್ರೊ. ಸದಾನಂದ ಕನವಳ್ಳಿ ಅವರು ಪ್ರೊ. ಷ.ಶೆಟ್ಟರ್ ಜತೆ ಕೈಗೂಡಿಸಿದ್ದಾರೆ. ಅನುವಾದದಲ್ಲಿ ಕ್ರಿಯಾಶೀಲರಾದ ಪ್ರೊ. ಸದಾನಂದ ಕನವಳ್ಳಿ ಅವರಿಗೆ ಪ್ರಾಧಿಕಾರವು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಪ್ರಾಧಿಕಾರದ ಸದಸ್ಯಮಿತ್ರರ ಒತ್ತಾಸೆ, ಬೆಂಬಲ ಇಂಥ ಉತ್ತಮ ಪ್ರಕಟಣೆಗಳಿಗೆ ಕಾರಣವಾಗಿದೆ. ಈ ಸಜ್ಜನ ಮಿತ್ರರೆಲ್ಲರಿಗೆ ಕೃತಜ್ಞತೆಗಳು. ಮುದ್ರಿಸಿಕೊಟ್ಟ ಮುದ್ರಕರನ್ನೂ, ವಿನ್ಯಾಸ ರೂಪಿಸಿದ ಗೆಳೆಯರನ್ನೂ ಪುಸ್ತಕ ಪ್ರಾಧಿಕಾರವು ಅತ್ಯಂತ ಆದರದಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಮಹಾಜನತೆಯ ಸಲಹೆ-ಸಹಕಾರ, ಪ್ರೀತಿ-ವಿಶ್ವಾಸಗಳು ಸದಾ ದೊರಕುತ್ತಿರಲೆಂದು ಆಶಿಸುತ್ತೇನೆ.

ಮುಮ್ಮಾತು

ಗಂಭೀರ ದಾರ್ಶನಿಕ ಚಿಂತನೆಗಳು ಜೀವನದಷ್ಟೇ ಮರಣದ ಸುತ್ತಲೂ ತಿರುಗುತ್ತಿದ್ದು, ಗಣನೀಯ ಮಾನವ ವರ್ಗವೊಂದು ಯುಗಯುಗಾಂತರದುದ್ದಕ್ಕೂ ಮರಣದೊಂದಿಗೆ ಸೆಣಸುತ್ತಲೇ ಬದುಕಿದೆ. ಈ ಬಗ್ಗೆ ಹೆಚ್ಚು ಗಹನವಾಗಿ ಆಲೋಚಿಸಿದವರು, ಜೈನರು. ಈ ಬಗ್ಗೆ ಅವರು ಎಷ್ಟು ಚಿಂತನಾಮಗ್ನರಾಗಿದ್ದರೆಂದರೆ ಅವರ ಮರಣ ದೃಷ್ಟಿಕೋನವನ್ನು ತಿಳಿಯದೆ ಅವರ ಜೀವನದರ್ಶನವನ್ನು ಅರಿಯುವುದು ದುಸ್ಸಾಧ್ಯ. ಪ್ರಪಂಚದ ಮತ್ತಾವ ಪ್ರಮುಖ ಧರ್ಮವೂ ಜೀವನದ ಋಣಾತ್ಮಕ ಸ್ವರೂಪವನ್ನು ಮತ್ತು ಜೀವನವನ್ನು ಕೊನೆಗೊಳಿಸುವ ಖಚಿತ ಪ್ರೇರಣೆಗಳನ್ನು ಜೈನರಷ್ಟು ಸ್ಫುಟವಾಗಿ ಪ್ರತಿಪಾದಿಸಿಲ್ಲವೆಂದೇ ತೋರುವುದು. ಮರಣವನ್ನು ತ್ವರಿತಗೊಳಿಸುವ ಇಂಥ ಪ್ರಖರ ಪ್ರತಿಪಾದಕರೊಂದಿಗೆ ನಾವು ಸಹಮತಿಸಬಹುದು, ಸಹಮತಿಸದಿರಬಹುದು, ಆದರೆ, ಅರ್ಥಪೂರ್ಣವಾಗಿ ಜೀವಿಸಲೆತ್ನಿಸುವವರೆಲ್ಲರನ್ನೂ ಮರಣ ಸಮಸ್ಯೆಯು ಒಂದಿಲ್ಲೊಂದು ಬಗೆಯಲ್ಲಿ ಕಾಡಿರುವುದೆಂಬುದನ್ನು ಮಾತ್ರ ಒಪ್ಪಲೇಬೇಕು.

ಮರಣವನ್ನು ಸಮರ್ಥಿಸಿದ ಜೈನರು ಜೀವನವನ್ನು ಉದಾಸೀನತೆಯಿಂದ ಕಳಚಿಕೊಳ್ಳುವುದರ ವಿರುದ್ಧ ಎಚ್ಚರಿಸಿರುವರು. ಆತ್ಮಹತ್ಯೆಯನ್ನು ಅವರು ಬಲವಾಗಿ ವಿರೋಧಿಸಿದರು, ಏಕೆಂದರೆ ಅವರ ದೃಷ್ಟಿಯಲ್ಲಿ ಆತ್ಮಹತ್ಯೆಯು ರಾಗ ಮತ್ತು ಹಿಂಸೆಯನ್ನೊಳಗೊಂಡ ಮರಣ ಪ್ರಕ್ರಿಯೆ. ಕಾರಣ, ಇದನ್ನೊಂದು ಆಧ್ಯಾತ್ಮಿಕ ಅಪರಾಧ, ಅಪರಿಪಕ್ವ ಅಜ್ಞಾನಿಗಳ (ಬಾಲರ) ಪುಕ್ಕಲು ಪಲಾಯನ ಮಾರ್ಗ, ಎಂದು ಅವರು ಅದನ್ನು ಬಗೆದರು. ಅಂತೆಯೇ, ಆತ್ಮಹತ್ಯೆ ಖಂಡನೆಗೆ ಮಾತ್ರ ಅರ್ಹವೆಂದು ತೀರ್ಮಾನಿಸಿದರು.

ಜೈನರ ನಿಶಿತ ತರ್ಕವು ನಲವತ್ತೆಂಟು ಮರಣಪ್ರಭೇದಗಳನ್ನು ಗುರುತಿಸಿರುವುದು. ಇವುಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು: 1. ಬಾಲ ಮರಣ (ಬಾಲಿಶ ಅಥವಾ ಮೂರ್ಖರ ಮರಣ); 2. ಪಂಡಿತ ಮರಣ (ಜ್ಞಾನಿಯ ಮರಣ); 3. ಪಂಡಿತಪಂಡಿತ ಮರಣ (ಪರಮಜ್ಞಾನಿಯ ಮರಣ). ಆತ್ಮಹತ್ಯೆಯನ್ನೊಳಗೊಂಡ ಬಾಲಮರಣವನ್ನು ಸ್ಪಷ್ಟ ನುಡಿಗಳಲ್ಲಿ ತಿರಸ್ಕರಿಸಲಾಗಿದೆ. ಕೆಲಮಟ್ಟಿನ ಸಿದ್ಧಿ ಮತ್ತು ಪ್ರಜ್ಞೆಯನ್ನು ಪ್ರಮಾಣಿಸುವ ಎರಡನೆಯದನ್ನು ಸೋಪಾಧಿಕವಾಗಿ ಸ್ವೀಕರಿಸಿ ಪ್ರತಿಪಾದಿಸಲಾಗಿದೆ. ಮೂರನೆಯದನ್ನು ಹೃತ್ಪೂರ್ವಕವಾಗಿ ಅಂಗೀಕರಿಸಲಾಗಿದೆ. ಮೊದಲನೆಯದು ಎಳ್ಳಷ್ಟೂ ಫಲ ನೀಡಲಾರದು. ಎರಡನೆಯದು ಆಂಶಿಕ ಫಲವನ್ನು ಮಾತ್ರ ನೀಡುವುದು. ಮೂರನೆಯದು ಪುನರ್ಜನ್ಮ ವತ್ತ ಸೇರಿದಂತೆ ಎಲ್ಲ ಬಂಧನಗಳಿಂದ ವಿಮುಕ್ತಗೊಳಿಸ ಬಲ್ಲುದು.

ಜೈನರಿಗೆ ಮರಣವು ಕೇವಲ ಬೌದ್ಧಿಕ ಕಸರತ್ತಾಗಿರಲಿಲ್ಲ; ಅದು ಅವರ ಸಾಮಾಜಿಕ,

ಧಾರ್ಮಿಕ ಮತ್ತು ದಾರ್ಶನಿಕ ಜೀವನದಲ್ಲಿ ಪ್ರವಹಿಸುವ ಸಂಘದ ಸದಸ್ಯರ ಹಾಗೂ ಶ್ರಾವಕಾನುಯಾಯಿಗಳ ಜೀವನಕ್ರಮವನ್ನೂ ನಿಯಂತ್ರಿಸುವ ಮಂತ್ರವೆನಿಸಿತ್ತು. ಈ ಆದರ್ಶವನ್ನು ಜೀವಂತವಾಗಿರಿಸಲು ಅತ್ಯಂತ ಪ್ರಜ್ಞಾಪೂರ್ವಕವಾಗಿ ಒಂದು ಅಡಿಗಟ್ಟನ್ನು ಅವರು ರಚಿಸಿಕೊಂಡರು. ಮರಣ ವಿಧಾನವನ್ನು ಕ್ರೋಢೀಕರಿಸುವ ಮೂಲಕ ಹಾಗೂ ಧೀರತೆಯಿಂದ ಜೀವನವನ್ನು ತೊರೆದವರ ಸ್ಮಾರಕಗಳನ್ನು ನಿರ್ಮಾಣಗೊಳಿಸುವ ಮೂಲಕವನ್ನು, ಅವರು ಈ ಅಡಿರಚನೆಯನ್ನು ಅರ್ಥಪೂರ್ಣ ರೂಪಿಸಿಕೊಂಡರು. ಆತ್ಮ ಮತ್ತು ಮನಸ್ಸನ್ನು ಹಿಂಸಿಸದೆ ದೇಹ ದಂಡಿಸುವ ಕ್ರಿಯೆಯನ್ನು ಅವರು ಹಲವಾರು ಪದಗಳಿಂದ ಗುರುತಿಸಿದರು. ಅವು ಸನ್ಯಸನ ಮರಣ (ವಿರಕ್ತಿ ಮೂಲಕ ಮರಣ), ಪಂಚಪದ ಮರಣ (ಪ್ರಾರ್ಥನೆ ಮೂಲಕ ಮರಣ), ಪಂಡಿತ ಮರಣ (ಜ್ಞಾನ ಯಾ ಪಾಂಡಿತ್ಯದ ಮೂಲಕ ಮರಣ), ಸಮಾಧಿ ಮರಣ (ಧ್ಯಾನದ ಮೂಲಕ ಮರಣ) ಮುಂತಾದವುಗಳಾಗಿವೆ. ಈ ಪ್ರತಿಯೊಂದು ಪದವು ಪ್ರತೇಕವ್ರತಾಚರಣೆಯನ್ನು ಸೂಚಿಸುವಂತೆ ಕಂಡರೂ, ಇವುಗಳಲ್ಲಿ ಒಂದು ನಿರ್ದಿಷ್ಟ ವಿಧಾನವನ್ನು ಮಾತ್ರ ಅನುಸಬೇಕೆಂಬುದು ಇದರ ಉದ್ದೇಶವಾಗಿರಲಿಲ್ಲ. ಏಕೆಂದರೆ ನಿಜವಾದ ಸಾಧಕನು ಇವೆಲ್ಲವನ್ನು ಏಕ ಕಾಲಕ್ಕೆ ಪಾಲಿಸಬೇಕೆಂದಿತ್ತು. ನೀತಿ ಸಂಹಿತೆಯನ್ನು ಉಲ್ಲಂಘಿಸದೆ, ವೀರೋಚಿತ ಹೋರಾಟವನ್ನು ಮಧ್ಯದಲ್ಲಿ ಕೈಬಿಡದೆ, ಸಾವನ್ನು ಸ್ವಾಗತಿಸಿದವನು ಸಂಘಕ್ಕೂ ಸಮಾಜಕ್ಕೂ ಆದರ್ಶಪ್ರಾಯನೆನಿಸಿದನು. ಅಂಥವರಿಗೆ ನಿಸಿಧಿಸ್ಮಾರಕಗಳನ್ನು ನಿರ್ಮಿಸಿ, ಆ ಮೂಲಕ ಅವರನ್ನು ಸಮಾಜದಲ್ಲಿ ಜೀವಂತವಾಗಿಡಲಾಗುತ್ತಿತ್ತು.

ನಿರಸನಗೈದು ಮರಣಿಸಿದವರ ಬಗ್ಗೆ ಅರಿಯಲು ಮರಣಾಹ್ವಾನದ ಕ್ರೋಡೀಕೃತ ಕಟ್ಟಳೆಗಳು, ಸಾಹಿತ್ಯ ಕೃತಿಗಳಲ್ಲಿಯ ವರ್ಣನೆಗಳು, ಪೌರಾಣಿಕರ ಕತೆಗಳು, ಶಿಲಾಶಾಸನಗಲ್ಲಿ ಸಂರಕ್ಷಿಸಿಡಲಾಗಿರುವ ಐತಿಹಾಸಿಕ ಪ್ರಯೋಗಗಳು ಮತ್ತು ಕುತೂಹಲಕಾರಿ ಸ್ಮಾರಕಗಳು, ವಿಪುಲಗ್ರಾಸ ಒದಗಿಸುವವು. ನಿಜಕ್ಕೂ ಈ ಸಾಮಗ್ರಿ ಹತ್ತು ಹಲವು ಶಾಖೆಗಳ ವಿಶೇಷಜ್ಞರನ್ನೆಲ್ಲ ತೊಡಗಿಸಿಕೊಳ್ಳುವಷ್ಟು ಸಮೃದ್ಧವಾಗಿದೆ. ಸಮಾಜ ವಿಜ್ಞಾನಿಗಳು-(ಪ್ರಮುಖವಾಗಿ ಮಾನವ ಶಾಸ್ತ್ರಜ್ಞರು, ಇತಿಹಾಸಕಾರರು, ಸಮಾಜಶಾಸ್ತ್ರಜ್ಞರು, ಮನೋವಿಜ್ಞಾನಿಗಳು, ತತ್ವಜ್ಞಾನಿಗಳು, ಧರ್ಮ ಮತ್ತು ಕಲೆಯ ವ್ಯಾಖ್ಯಾನಕಾರರು), ಮರಣಾಂತಿಕ ಪ್ರಕರಣ, ಆತ್ಮಹತ್ಯೆ ಮತ್ತು ವೈದ್ಯಕೀಯ ಮರಣದ ಬಗ್ಗೆ ನಿರಂತರವಾಗಿ ಚಿಂತಿಸುವ ವೈದ್ಯ-ವಿಜ್ಞಾನಿಗಳು[1] ; ಕಾನೂನಿನ ಅಕ್ಷರಾರ್ಥ ಮತ್ತು ವ್ಯಕ್ತಿಗಳ ಸಂಸ್ಕೃತಿ ಸಿಲುಕಿಕೊಂಡಿರುವ ಕಾನೂನು ಪಂಡಿತರು, ಇವರಲ್ಲಿ

---

1. ಸಾಹಿತ್ಯ-ತತ್ವಜ್ಞಾನಿ ದೇವತಾಶಾಸ್ತ್ರಜ್ಞರ ಮತ್ತು ಇತಿಹಾಸಕಾರರಿಗಿಂತ ಹೆಚ್ಚಾಗಿ ವೈದ್ಯಕೀಯ ಶಾಸ್ತ್ರಜ್ಞ ಮತ್ತು ಮನಶಾಸ್ತ್ರಜ್ಞರಿಂದ ಮರಣವನ್ನು ಕುರಿತು ಹೆಚ್ಚು ಕೃಷಿಯಾಗಿದೆ. ಆದರೆ, ಭಾರತೀಯ ಈ ಕ್ಷೇತ್ರಕ್ಕೆ ಕೊಟ್ಟ ಕೊಡಗೆ ಅತ್ಯಲ್ಪವೆಂದೇ ಹೇಳಬೇಕು. ಇದಕ್ಕೆ ಭಿನ್ನವಾಗಿ, ಪಾಶ್ಚಿಮಾತ್ಯ ವೈದ್ಯಶಾಸ್ತ್ರಜ್ಞರು, ಮನಶಾಸ್ತ್ರಜ್ಞರು ಮತ್ತು ಸಮಾಜ ವಿಜ್ಞಾನಿಗಳಿಂದ ವಿಪುಲ ಸಾಹಿತ್ಯರಾಶಿ

ಪ್ರಮುಖರು.[2] ಮರಣದ ಸುಖಭ್ರಾಂತಿ ಅಥವಾ ಇಚ್ಛಾಮರಣದ ಮೋಡಿಯಡಿ ಜೀವಿಸುತ್ತಿರುವವರು, ಪೌರಾತ್ಯ ತತ್ವಜ್ಞಾನಿಗಳು ಮತ್ತು ಇಚ್ಛಾಮರಣದ ಆಚರಣೆಯ ಬಗ್ಗೆ ಜಿಜ್ಞಾಸೆಯುಳ್ಳವರಿಗೂ ಈ ಸಾಮಗ್ರಿಯು ತನ್ನದೇ ಆದ ಉದ್ದಿಷ್ಟವನ್ನು ಅರಹುವುದು. ಜೈವ ದರ್ಶನ ಮತ್ತು ಆಚರಣೆಗಳು ಜೀವನವನ್ನವಲಂಬಿಸಲು ಪ್ರೇರೇಪಿಸುವುದೋ-ಇಲ್ಲವೋ, ಅವು ಉತ್ತೇಜನಕಾರಿಯೋ-ನಿರುತ್ತೇಜನಕಾರಿಯೋ, ಎಂಬದು ಏನೇ ಇರಲಿ, ವ್ರತ ಮರಣಗಳನ್ನು ಅವರು ಏಕೆ ಮತ್ತು ಹೇಗೆ ಪ್ರತಿಪಾದಿಸಿದರು ಮತ್ತು ಸಾಧಿಸಿದರು ಎಂಬುದನ್ನು ತಿಳಿಯುವುದಂತೂ ನಮಗೆ ಅತ್ಯವಶ್ಯವೆನಿಸುವುದು.

ಕ್ರಿಸ್ತ ಶಕದ ಆರಂಭಿಕ ಶತಮಾನಗಳಿಂದ ಪ್ರಾರಂಭಗೊಂಡ ಸಮಾಧಿ ಮರಣಗಳ ಐತಿಹಾಸಿಕ ಪ್ರಯೋಗಗಳ ಬಗ್ಗೆ ವಿವಿಧ ಆಕರಗಳು ಬೆಳಕು ಚೆಲ್ಲುವುವು. ನಾಡಿನ ಉಳಿದೆಡೆಗಿಂತ ಕರ್ನಾಟಕದಲ್ಲಿ ಈ ಆಚರಣೆ ಬಹಳಷ್ಟು ಸಾಂದ್ರಗೊಂಡಿತ್ತೆಂದು ತೋರಿ ಬರುವುದು. ಆರಾಧನಾ, ಆಚಾರ ಮತ್ತು ಪೌರಾಣಿಕ ಕೃತಿಗಳಲ್ಲದೆ, ಧಾರ್ಮಿಕರ ಮತ್ತು ಶ್ರಾವಕರ ಅನುಭವಗಳನ್ನು ವರ್ಣಿಸುವ ನೂರಾರು ಕಾಲನಿಗದಿತ ಶಿಲಾಶಾಸನಗಳು ಇಲ್ಲಿ ಉಳಿದು ಕೊಂಡು ಬಂದಿವೆ.[3] ಶ್ರವಣಬೆಳ್ಗೊಳವಂತೂ ಈ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಂಡಿದೆ; ಏಕೆಂದರೆ, ಮರಣ ಪ್ರಮಾಣದಿಂದ ಇಷ್ಟೊಂದು ರೂಪಿತಗೊಂಡ ಮತ್ತೊಂದು ಕೇಂದ್ರವು ವಿಶ್ವದಲ್ಲೆಲ್ಲೂ ದೊರೆತಿಲ್ಲ.

ಶ್ರವಣಬೆಳ್ಗೊಳದ ಶಿಲಾಶಾಸನಗಳು ಜೈನರ ಮರಣ ಪ್ರಯೋಗಗಳ ಬಗ್ಗೆ ಸಾಕಷ್ಟು ಒಳನೋಟ ನೀಡುವುವು. ಐದು ಚೌರಸ ಕಿಲೋಮೀಟರ ಪ್ರದೇಶದಲ್ಲಿ ಮತ್ತು ಒಂದೂವರಿ ಸಹಸ್ರಮಾನ ಕಾಲಾವಧಿಯಲ್ಲಿ ಸುಮಾರು ನೂರೈವತ್ತು ವ್ಯಕ್ತಿಗಳು ವಿವಿಧ ಕಾರಣ ಮತ್ತು

ಹೊರಹೊಮ್ಮಿದೆ. ನನ್ನ ಗಮನಕ್ಕೆ ಬಂದ ಗಮನಾರ್ಹ ಗ್ರಂಥಗಳಲ್ಲಿ: "ಮರಣ ಮತ್ತು ಆತ್ಮಹತ್ಯೆ" ಕುರಿತ ಸ್ಪ್ರಿಗರ್ ಗ್ರಂಥಮಾಲೆ ಯಡಿಯಲ್ಲಿ ಬಂದ ಹಲವು ಕೃತಿಗಳು. ಇವುಗಳಲ್ಲಿ ಪ್ರಮುಖವಾದವುಗಳು: Robert Kastenbaum's *Between Life and Death* (N.Y.1979) R. Kestenbaums and R. Aisenberg, *The Psyehology of Death* (N.Y.1972): Osis and **Haraldsson**, *At the Hour of Death* (N.Y.1977); Maston, A., *After Life* (N.Y.1977); Moody R. *Life After LIfe* (Covengton, 1975). ಅತಿ ಜನಪ್ರಿಯ ಕಾಗದ ಕವಚದ ಪುಸ್ತಕಗಳಲ್ಲಿ *On Death and Dying* (ಸಾಯುವವರು ವೈದ್ಯರು, ದಾದಿಗಳು, ಧಾರ್ಮಿಕರು ಮತ್ತು ತಮ್ಮವೇ ಮನೆಯವರಿಗೆ ಕಲಿಸಬೇಕಾದುದು ಏನು) (N.Y.1970) ಮತ್ತು *Questions and Answers on Death and Dying* (N.Y. 1974) ಎರಡನೆಯ ಗ್ರಂಥವನ್ನು ರಬೀಂದ್ರನಾಥ ಟಾಗೂರರ ಉಕ್ತಿಗಳು ಮತ್ತು ಕಾವ್ಯದ ಹಿನ್ನೆಲೆಯಲ್ಲಿ ನೆಲೆಸಲಾಗಿದೆ.

2. ಒಂದು ಸ್ಪಷ್ಟ ಉದಾಹರಣೆಯೆಂದರೆ ನ್ಯಾಯಮೂರ್ತಿ ಟಿ.ಕೆ. ತುಕೋಳರ *Sallekhana is not Suicide.*

ವಿಧಾನಗಳಿಂದ ಸಾವನ್ನು ಸ್ವಾಗತಿಸಿದ ಬಗ್ಗೆ ಇಲ್ಲಿಯ ಶಾಸನಗಳು ತಿಳಿಸುವುವು. ಈಗ ಚಂದ್ರಗಿರಿಯೆಂದು ಕರೆಯಲ್ಪಡುವ ಚಿಕ್ಕ ಕಣಶಿಲಾ ಶಿಖರವು ಬಹುಕಾಲ ಸಮಾಧಿ ಮರಣದ ಕಾರ್ಯಕೇಂದ್ರವಾಗಿತ್ತು. ಇತಿಹಾಸದಲ್ಲಿ ಇದು ಕಟವಪ್ರ, ಕಳ್ವಪ್ಪು ಮತ್ತು ಸಮಾಧಿಬೆಟ್ಟ ಎಂದೇ ಪ್ರಸಿದ್ಧಿ ಪಡೆಡಿದೆ. ಈ ಬೆಟ್ಟದ ಮರಣೈತಿಹಾಸವು ಕ್ರಿ.ಪೂ. 3ನೆಯ ಶತಮಾನದಷ್ಟು ಪ್ರಾಚೀನವಾಗಿರುವುದು. ಆದರೆ, ಈಗ ಲಭ್ಯವಿರುವ ಶಾಸನೋಕ್ತ ದಾಖಲೆಗಳು ಅನಾಮಧೇಯರಾಗಿರಲಿಚ್ಛಿಸಿದ ಸರಳ ಹಾಗೂ ಧರ್ಮಿಷ್ಠ ದೇಹದಂಡನೆಕಾರರನ್ನು ಒಳಗೊಂಡಿಲ್ಲ. ಜೀವಿಸಿದ್ದಾಗಲೂ ಪ್ರಚಾರ ಬಯಸದ ಇವರು ಮರಣಕ್ಕೆ ಮುನ್ನ ತಮ್ಮ ಅಸ್ತಿತ್ವದ ಎಲ್ಲಾ ಕುರುಹನ್ನು ಅಳಿಸಿ ಹಾಕುವ ಮುಂಜಾಗ್ರತೆಯನ್ನು ಕೈಕೊಂಡರೆಂದು ತೋರುವುದು. ದೇಹದ ನಶ್ವರತೆಯನ್ನು ಮನಗಂಡ ಇವರು ದೇಹಕೆ ಮಾತ್ರ ಸಂಬಂಧಿಸಿದ ತಮ್ಮ ಹೆಸರನ್ನು ಚಿರಸ್ಮರಣೀಯಗೊಳಿವುದು ಅನಾವಶ್ಯಕವೆಂದೇ ಭಾವಿಸಿರಲು ಸಾಕು. ಮರಣವನ್ನು ಆಹ್ವಾನಿಸುವ ಅವಕಾಶಗಳನ್ನು ಆತುರತೆಯಿಂದ ಎದುರುನೋಡುತ್ತಿದ್ದ ಈ ದೇಹದಂಡನೆಕಾರರು ತಮ್ಮ ಜೀವನವಾಗಲಿ ಮರಣವಾಗಲಿ ಇತಿಹಾಸದಲ್ಲಿ ಸ್ಥಾನ ಪಡೆಯಲು ಅರ್ಹವಲ್ಲವೆಂದು ಭಾವಿಸದಿದ್ದುದರಲ್ಲಿ ಅಕ್ಷೇಪಾರ್ಹವಾದುದೇನೂ ಇಲ್ಲ.

ಸಾವಿಗೆ ಸ್ವಾಗತದ ಮೂರು ಖಂಡಗಳು ಒಂದೇ ಏಕೀಕೃತ ವೃತ್ತಾಂತವನ್ನು ವಿವರಿಸಿದರೂ ಪ್ರತಿಯೊಂದು ಖಂಡವು ತನ್ನ ಕಥಾವಸ್ತುವಿನ ಸ್ವಂತಿಕೆಯನ್ನು ಉಳಿಸಿಕೊಂಡಿದೆ.

ಮೊದಲನೆಯ ಖಂಡದಲ್ಲಿ, ಮರಣವನ್ನು ಕೇಂದ್ರಬಿಂದುವಾಗಿಟ್ಟುಕೊಂಡ ಶ್ರವಣಬೆಳ್ಗೊಳದ ಧಾರ್ಮಿಕ ಇತಿಹಾಸವನ್ನು ನಿರೂಪಿಸಲಾಗಿದೆ. ಮಹಾ ಶ್ರಮಣನೊಬ್ಬನ ಸಮಾಧಿ ಮರಣದಿಂದ ಇದು ಆರಂಭಗೊಳ್ಳುವುದು; ನಂತರ, ಮರಣ ಪ್ರಮಾಣದ ಸುತ್ತ ಕೇಂದ್ರೀಕೃತವಾದ ಅದರ ಏರಿಳಿತಗಳನ್ನು ಬಿಚ್ಚಿಕೊಳ್ಳುವುದು. ಸಮಾಧಿ ಬೆಟ್ಟದ ಬಗ್ಗೆ ಇತರರು ಭಯಪಡುತ್ತಿದ್ದ ಕಾಲದಲ್ಲಿ ದೇಹದಂಡನೆಕಾರರು ಅಲ್ಲಿಗೆ ಹಿಂಡುಗಟ್ಟಿ ಬಂದರು. ಅವರು ಸಹಿಸುತ್ತಿದ್ದ ಕೀಟಲೆಯ ಕಠೋರತೆಯನ್ನು ಕಣ್ಣಾರೆ ಕಾಣಲು ಬರುವ ಯಾತ್ರಿಗಳ ದಟ್ಟಣೆ ಹೆಚ್ಚಿದೊಡನೆ ಇವರು ಈ ಬೆಟ್ಟದಿಂದ ದೂರ ಸರಿಯತೊಡಗಿದರು. ಆಗ, ದೇವಾಲಯಗಳು, ಮಂಟಪಗಳು ಮತ್ತು ನಿರಾಲಂಭ ಸ್ತಂಭಗಳಿಂದ ಈ ಬೆಟ್ಟದ ಬಯಲು ಪ್ರದೇಶವು ತುಂಬಿಕೊಳ್ಳತೊಡಗಿತು; ಆಗ ನಿಶ್ಚಿಂತೆಯ ಆಧ್ಯಾತ್ಮಿಕ ಜೀವನಕ್ಕೆ ಮೀಸಲಾಗಿದ್ದ ಸ್ಥಾನವನ್ನು ಮತೀಯ ನಿಯಮಗಳು ಮತ್ತು ಸಾಮಾಜಿಕ ಬಾಧ್ಯತೆಗಳು ಆಕ್ರಮಿಸತೊಡಗಿದವು. ಆಧ್ಯಾತ್ಮಿಕ ಮೌಲ್ಯ ಮತ್ತು ಧಾರ್ಮಿಕ ಜೀವನದ ನಡುವಣದ ಅಂತಃಸಂಬಂಧ, ಧಾರ್ಮಿಕರು ಮತ್ತು ಶ್ರಾವಕರ ನಡುವಣ ವ್ಯವಹಾರಿಕ ಸಂಪರ್ಕ, ಧರ್ಮಪ್ರಸಾರ ಕಾರ್ಯದಲ್ಲಿ ದೇವಾಲಯ ಮತ್ತು ಮಠಗಳು ವಹಿಸಿದ ಪಾತ್ರ, ಪರಮತೀಯರ ಮತ್ಸರಪೂರ್ಣ ವಿರೋಧ ಮತ್ತು ಸಹಧರ್ಮಿಗಳ ವೈವಿಧ್ಯಮಯ ಪಾತ್ರ - ಈ ಮುಂತಾದವು ನಮ್ಮ ಮುಂದೆ ತೆರೆದು ನಿಲ್ಲುವುವು. ಇವೆಲ್ಲವೂ ಮರಣವನ್ನರುಸುವವರ ಮೇಲೆ ಒಂದಿಲ್ಲೊಂದು ಬಗೆಯಲ್ಲಿ ಪ್ರಭಾವ ಬೀರಿದವು.

ಎರಡನೆಯ ಖಂಡದಲ್ಲಿ, ಸಮಾಧಿ ಮರಣಕ್ಕೆ ಸಂಬಂಧಪಟ್ಟ ಹಲವಾರು ಪ್ರಶ್ನೆಗಳಿಗೆ ಉತ್ತರ ಹುಡುಕಲು ಪ್ರತ್ನಿಸಲಾಗಿದೆ : ಸಮಾಧಿ ಮರಣ ಎಂದರೇನು? ಸಾವನ್ನು ಸ್ವಾಗತಿಸುವ ಬಗೆಯಂತು? ಮರಣೆಸಲಿಚ್ಛಿಸಿದವರು ಯಾರು? ಮತ್ತು ಯಾವ ಉದ್ದೇಶಗಳಿಗಾಗಿ? ವಿಧಿಸಲಾದ ಯಾವ ಯಾವ ಕಟ್ಟಳೆಗಳನ್ನು ಇಲ್ಲಿ ಅನುಸರಿಸಲಾಯಿತು? ಮರಣದ ಇತಿಹಾಸದಲ್ಲಿ ಎದ್ದು ಕಾಣುವ ಪ್ರಸಿದ್ಧ ಹೆಸರುಗಳಾವು? ಸಾಧಕರೆನಿಸಿದವರು ಮರಣವನ್ನು ಮುಂದೂಡಲು ಅಥವಾ ಮಧ್ಯದಲ್ಲಿ ಕೈಬಿಡಲಿದ್ದ ಕಾರಣಗಳಾವು? ಸಮಾಜವು ಇಂಥ ಕೃತ್ಯಗಳನ್ನು ಕಾಲಾಂತರದಲ್ಲಿ ಹೇಗೆ ಸ್ವೀಕರಿಸಿತು? ಈ ಮುಂತಾದ ಪ್ರಶ್ನೆಗಳಿಗೆ ಇಲ್ಲಿ ಉತ್ತರಗಳನ್ನು ಹುಡುಕಲು ಪ್ರಯತ್ನಿಸಲಾಗಿದೆ.

ಮೂರನೆಯ ಖಂಡದಲ್ಲಿ, ಸಮಾಧಿಮರಣವನ್ನಪ್ಪಿದವರ ಗೌರವಾರ್ಥ ನೆಟ್ಟ ನಿಸಧಿಗಳನ್ನು ಅಭ್ಯಸಿಸಲಾಗಿದೆ. ಬೌದ್ಧರ 'ಛಾಯಾ'ಸ್ಥಂಭಗಳಂತೆ, ಕಲಿಗಳ 'ವೀರಗಲ್ಲು'ಗಳಂತೆ, ಸತಿಯರ 'ಮಾಸ್ತಿಕಲ್ಲು'ಗಳಂತೆ, ನಿಸಿಧಿಗಲ್ಲುಗಳೂ ತಮ್ಮದೇ ಆದ ವೈಶಿಷ್ಟತೆಯನ್ನು ಹೊಂದಿವೆ. ಇದುವರೆಗೆ ನಿಸಿಧಿಗಳ ಸ್ವರೂಪ ಮತ್ತು ವಸ್ತುವನ್ನು ತೀವ್ರ ವಿಶ್ಲೇಷಣಗೆ ಒಳಪಡಿಸಲಾಗಿಲ್ಲ. ಇಂದು ನಮಗೆ ನಿಸಿಧಿಗಳ ಸ್ಥೂಲ ಕಲ್ಪನೆ ಇರುವುದಾದರೂ ಅವುಗಳ ಸ್ಪಷ್ಟ ಸ್ವರೂಪದ ಸಂಪೂರ್ಣ ಅರುವಿಲ್ಲ. ಅವುಗಳ ವಾಸ್ತು-ಶಿಲ್ಪ ಸ್ವರೂಪ, ಅವು ನಿಂತಿರುವ ಸ್ಥಾನ, ಮತ್ತು ಅವುಗಳ ವೈವಿಧ್ಯತೆ; ಅಲ್ಲದೇ ಸ್ಮಾರಕೀಕರಣಕ್ಕೆ ಸಂಬಂಧಿತ ವ್ರತಗಳು ಮತ್ತು ಅವುಗಳನ್ನು ಗುರುತಿಸಲು ಬಳಸಿದ ಪದಗಳ ಅರ್ಥ, ಅವುಗಳ ವೈವಿಧ್ಯತೆ, ಈ ಮೊದಲಾದವನ್ನು ತಿಳಿಯಲೂ ಇಲ್ಲಿ ಪ್ರಯತ್ನಿಸಲಾಗಿದೆ.

ಪುರವಣಿಯಡಿ ನೀಡಿರುವ ಅನುಬಂಧಗಳು ಮತ್ತು ಪಾರಿಭಾಷಿಕ ಪದಕೋಶದ ಉದ್ದೇಶವು ತತ್ತರಗುಟ್ಟಿಸುವ ಅಂಕಿ ಸಂಖ್ಯೆಗಳ, ಐತಿಹಾಸಿಕ ಮತ್ತು ಸಾಹಿತ್ಯಿಕ ಹೊರೆಯನ್ನು ಮೂಲಪಾಠದಿಂದ ದೂರ ಸರಿಸುವುದಾಗಿದೆ. ಈ ಅಧ್ಯಯನಕ್ಕೆ ಗಟ್ಟಿತನವನ್ನು ಒದಗಿಸುವುದು ಅದರ ಮತ್ತೊಂದು ಉದ್ದೇಶ.

ನಿಸಿಧಿಸ್ಮಾರಕಗಳ ಬಗ್ಗೆ ನಾನು ಮಾಡಿಕೊಂಡ ಕ್ಷೇತ್ರ ಟಿಪ್ಪಣಿಗಳು 90ರ ದಶಕದಷ್ಟು ಹಿಂದಿನವು, ಆದರೆ ಅವುಗಳ ಬಗ್ಗೆ ನನ್ನ ಮಹಾಪ್ರಬಂಧವಾದ '*ಶ್ರವಬೆಳ್ಗೊಳ* ಮಾನುಮೆಂಟ್ಸ್'ನಲ್ಲಿ[4] ನಾನು ಪ್ರಸ್ತಾಪಿಸಿಲ್ಲ. ಆನಂತರ ಒಂದು ದಶಕಕಾಲ ಸ್ಮಾರಕಗಲ್ಲುಗಳ ಬಗ್ಗೆ ನನ್ನ ಅಭ್ಯಾಸವು ಮುಂದುವರಿಯಿತು. ನಿಸಿಧಿಗಳ ಪರಿಮಾಣಾತ್ಮಕ ಅಧ್ಯಯನವು ವಿವಿಧ ಬಗೆಯ ಫಲಗಳನ್ನು ನೀಡಬಲ್ಲದೆಂದು ಡಾ. ಆ.ನೇ. ಉಪಾಧ್ಯೆ ಅವರ ಒಮ್ಮೆ

3. ಗ್ರಂಥ ಸೂಚಿಯಡಿ ನೋಡಿ.
4. Sravana Belgola Monuments (ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿ.ಎಚ್.ಡಿ ಮಹಾ ಪ್ರಬಂಧ, 1967, ಅಪ್ರಕಟಿತ).

ಹೇಳಿದ ಮಾತಿನಿಂದ ಪ್ರೇರಿತನಾಗಿ ನಾನು ನಿಸಿಧಿಯ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಸಂಗ್ರಹಿಸಲುದ್ಯುಕ್ತನಾದೆ. ಕರ್ನಾಟಕದ ನಿಸಿಧಿಗಳ ಸಂಖ್ಯಾ ಸಂಕಲನದ ಬೆನ್ನಲ್ಲೇ ನಿಸಿಧಿಗಳನ್ನೂ ಕುರಿತು ಒಂದು ಚಿಕ್ಕ ಪ್ರಬಂಧ ಬರೆದೆ.[5] ಇದೇ ಕಾಲದಲ್ಲಿ ಕೈಗೊಂಡ ಕನ್ನಡ ಕಾವ್ಯಗಳ ಅಧ್ಯಯನವು ಸುಮಾರು ಮುವತ್ತು ಸಂಪುಟಗಳ ಪದಕೋಶ ರಚನೆಯಲ್ಲಿ ಫಲಿಸಿ,[6] ಈ ಕಾರ್ಯವನ್ನು ಮುಂದುವರಿಸುವಂತೆ ಮಾಡಿತು. ಆ ಸಾಮಗ್ರಿಯ ಬಹುಪಾಲು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಸಮಾಧಿ ಮರಣಕ್ಕೆ ಸಂಬಂಧಿಸಿದೆ. ಇದರೊಟ್ಟಿಗೆ, ಮಹಾಕೃತಿಯಾದ ಭಗವತಿ ಆರಾಧನಾ[7] ಹಾಗೂ ಕೊಲ್ಹಾಪುರದಲ್ಲಿ ಸಂಕಲಿಸಿದ ಶ್ರಾವಕಾಚಾರ[8] ಗ್ರಂಥಗಳಲ್ಲಿ ದೊರೆಯುವ ವಿವರಗಳು ನನ್ನನ್ನು ಹೆಚ್ಚು ಹೆಚ್ಚು ಈ ಕ್ಷೇತ್ರದೆಡೆಗೆ ಆಕರ್ಷಿಸತೊಡಗಿದವು.

ಈ ಇಲ್ಲ ಆಕರಗಳ ಅಧ್ಯಯನ ಬಹು ಆಯಾಮವುಳ್ಳ ಈ ವಿಷಯದ ಮೇಲೆ ಸ್ವಾರಸ್ಯಕರ ಬೆಳಕು ಚೆಲ್ಲಬಹುದೆಂದು ನಾನು ಎಣಿಸಿ ಒಂದು ಪ್ರಬಂಧ ಮಾತ್ರ ಬರೆಯಲು ಆರಂಭಿಸಿದೆ. ಅದು ಕೊನೆಗೆ ಎರಡು ದೊಡ್ಡ ಸಂಪುಟಗಳ ರಚನೆಯಲ್ಲಿ ಫಲಿಸಿತು: *ಪರ್ಸೂಯಿಂಗ್ ಡೆಥ್*‌ನಲ್ಲಿ ಗ್ರಾಂಥಿಕ ಸಾಮಗ್ರಿಗೆ ಪ್ರಾಧಾನ್ಯ ದೊರೆತಿದ್ದರೆ *ಇನ್‌ವಾಯಿಟಿಂಗ್ ಡೆತ್*‌ನಲ್ಲಿ ಪ್ರಾಚ್ಯಶಾಸ್ತ್ರೀಯ ಸಾಮಗ್ರಿಗೆ ಪ್ರಾಧಾನ್ಯತೆ ದೊರೆತಿದೆ. ಈ ಎರಡು ಗ್ರಂಥಗಳನ್ನು ರಚಿಸುವಾಗ ಕಲಾ ಇತಿಹಾಸಕ್ಕೆ ಇರುವ ನನ್ನ ವೃತ್ತೀಯ ಹೊಣೆಯನ್ನು ನಾನು ಮರೆತಿಲ್ಲ.

ನನ್ನ ಆಧಾರಕಲ್ಪನೆ ಮತ್ತು ವಿಶ್ಲೇಷಣೆಯನ್ನು ವಿದ್ವಾಂಸರಿಂದ ಪರಿಶೀಲಿಸಿಕೊಳ್ಳುವ ಅವಕಾಶ ಲಭಿಸಿದ್ದು ನನ್ನ ಸೌಭಾಗ್ಯ. 1982ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಇತಿಹಾಸ ಮತ್ತು ಸಂಶೋಧನ ವಿಭಾಗದಲ್ಲಿ ಮೂರು ಉಪನ್ಯಾಸಗಳ ಮಾಲಿಕೆಯಿಂದ ಆರಂಭಿಸಿ, ಯುರೋಪ ಮತ್ತು ಅಮೆರಿಕೆಗಳ ವಿವಿಧ ಕೇಂದ್ರಗಳಲ್ಲಿ ಈ ಸಂವಾದವನ್ನು 1985ರ ಆದಿಯವರೆಗೂ ಮುಂದುವರಿಸಿದೆ. ಜರ್ಮನಿ ಹಾಗೂ ಅಮೆರಿಕೆಯ ವಿಶ್ವವಿದ್ಯಾಲಯಗಳಲ್ಲಿ ನಾನು ನೀಡಿದ ಉಪನ್ಯಾಸಗಳೆಲ್ಲ ಈ ಎರಡು ಸಂಪುಟಗಳು ಅಂತಿಮ ರೂಪ ಪಡೆಯುವದಕ್ಕಿಂತ ಮುಂಚಿನವಾದುದರಿಂದ, ಇಲ್ಲಿ ಪ್ರಸ್ತುತಪಡಿಸಿದ ವಸ್ತು ನನ್ನ ಉಪನ್ಯಾಸಗಳಲ್ಲಿ ಪ್ರಸ್ತಾಪಿಸಿದ ವಸ್ತುವಿಗಿಂತ ಬಹಳಷ್ಟು ಭಿನ್ನವಾಗಿದೆ. ಎಂಬುಡರಲ್ಲಿ ಅನುಮಾನವಿಲ್ಲ.

---

5. ಶೆಟ್ಟರ್, ಎಸ್. ಮತ್ತು ರವಿ ಕೋರಿಶೆಟ್ಟರ್, "Nishidis in Karnataka- A Survey," *Memorial Stones: A Study of their Origin, Significance and Variety.* (Dharwad, 1982), ಪು. 283-297.
6. ಗ್ರಂಥ ಸೂಚಿಯಡಿ ನೋಡಿ.
7. ಶಿವಾರ್ಯ, *ಭಗವತೀ ಆರಾಧನಾ,* ಸಂ. ಕೈಲಾಸಚಂದ್ರ ಸಿದ್ಧಾಂತಶಾಸ್ತ್ರಿ. (ಸೋಲಾಪುರ, 1978) ಹಿಂದಿ ವ್ಯಾಖ್ಯಾನದೊಂದಿಗೆ.
8. *ಶ್ರಾವಕಾಚಾರ ಸಂಗ್ರಹ,* ವಿಭಾಗ. 1-5, ಸಂ. ಹೀರಾಲಾಲ್ ಶಾಸ್ತ್ರಿ, ಸೋಲಾಪುರ, (1976-78)

ನನ್ನ ಸ್ನೇಹಿತರು, ಸಹೋದ್ಯೋಗಿಗಳು ಮತ್ತು ಹಿರಿಯ ವಿದ್ವಾಂಸರೊಂದಿಗೆ ನಾನು ಆಗಾಗ ನಡೆಸಿದ ಸಮಾಲೋಚನೆಗಳು ಗಾಢವಾಗಿದ್ದು ಅವರ ಅಮೂಲ್ಯ ವಿಚಾರಗಳನ್ನು ಅಪ್ರಜ್ಞಾಪೂರ್ವಕವಾಗಿ ನಾನು ಈ ಕೃತಿಯಲ್ಲಿ ಅಳವಡಿಸಿಕೊಂಡಿದ್ದರೆ ಆಶ್ಚರ್ಯಪಡಬೇಕಿಲ್ಲ. ಪ್ರೊ. ಪ್ರಮೋದ್ ಚಂದ್ರ, ಶ್ರೀಮತಿ ಮೇರಿ ಕಾರ್ಮನ್ ಚಂದ್ರ, ಪ್ರೊ. ಗುಂಥರ್ ಸೊಂಥೈಮರ್, ಡಾ. ಮುಲ್ಕರಾಜ್ ಆನಂದ, ಪ್ರೊ, ಎ.ಕೆ. ರಾಮಾನುಜನ್, ಡಾ. ಕ್ಯಾರಲ್ ಬೋಲನ್, ಪ್ರೊ. ಕೆ. ಈಶ್ವರನ್, ಪ್ರೊ,. ಕ್ಲಾಸ್ ಫಿಷರ್, ಪ್ರೊ, ಮೈಕಲ್ ಮೈಸ್ಟರ್‌ಮತ್ತು ಪ್ರೊ. ಬ್ರೃಹ್ನ್ ಕ್ಲ ಅವರ ಸಲಹೆ ಸೂಚನೆಗಳನ್ನು ಮತ್ತು ವಿಮರ್ಶೆಗಳನ್ನು ನಾನು ವಿಶೇಷವಾಗಿ ಇಲ್ಲಿ ನೆನೆಯಬೇಕು. ಇವರೆಲ್ಲ ನನಗೆ ವೇದಿಕೆಯನ್ನು ಒದಕಿಸಿ, ಆದರಾತಿಥ್ಯ ನೀಡಿದರು; ಅಲ್ಲದೆ ಭಾರತೀಯ-ಭಾರತೀಯೇತರ ಸಾದೃಶಗಳತ್ತ ನನ್ನ ಗಮನ ಸೆಳೆದು ಮರಣದ ಬಗೆಗಿನ ನನ್ನ ತಿಳುವಳಿಕೆಯನ್ನು ಹೆಚ್ಚಿಸಿದರು. ಯುಸೇಫಿಯು ಧನಸಹಾಯ ಮತ್ತು ಸೌಲಭ್ಯಗಳನ್ನು ಒದಗಿಸಿರದಿದ್ದರೆ ಮತ್ತು ಶ್ರೀ. ನಾಗಣ್ಣ ಪಟ್ಟಣಶೆಟ್ಟಿ, ಪುತ್ರನ್‌ರು ಮತ್ತು ಹೆಜಮಾಡಿಯವರು ನಾನು ನ್ಯೂಯಾರ್ಕ್, ಫಿಲಡೆಲ್ಫಿಯಾ ಮತ್ತು ಶಿಕಾಗೊದಲ್ಲಿದ್ದಾಗ ನನ್ನ ಯೋಗಕ್ಷೇಮ ವಹಿಸಿರದಿದ್ದರೆ, ನನ್ನ ಈ ಸಾಧನೆ ಸುಲಭಸಾಧ್ಯವಾಗುತ್ತಿರಲಿಲ್ಲ.

ಪ್ರೊ. ಸದಾನಂದ ಕನವಳ್ಳಿ ಮತ್ತು ಪ್ರೊ. ಜಿ.ಬಿ.ಸಜ್ಜನ ಮುದ್ರಣಕ್ಕೆ ಹಸ್ತ ಪ್ರತಿಯನ್ನು ಸಿದ್ಧಗೊಳಿಸುವಲ್ಲಿ ನೆರವಿತ್ತದ್ದನ್ನು ನಾನು ಅವಶ್ಯಕರಾಗಿ ನೆನೆಯಬೇಕು.

ಈ ಗ್ರಂಥದ ಪಾಠವನ್ನು ಅದೆಷ್ಟು ಸಲ ಬದಲಿಸಿದೆನೊ ನನಗೆ ನೆನಪಿಲ್ಲ. ನನ್ನ ಮಡದಿ ಪ್ರೇಮಲತಾ ಇವನ್ನೆಲ್ಲ ಲೆಕ್ಕವಿಟ್ಟಿರಲು ಸಾಕು. ಏಕೆಂದರೆ, ಮೇಲಿಂದಮೇಲೆ ಬದಲಾವಣೆಗೊಳಗಾಗುತ್ತಿದ್ದ ತಿದ್ದುಪ್ರತಿಯ ಬೆರಳಚ್ಚನ್ನು ಸಿದ್ಧಗೊಳಿಸುವ ಹೊಣೆಯನ್ನು ಅವರು ಹೊತ್ತಿದ್ದರು.

ಷ. ಶೆಟ್ಟರ್

ಕನ್ನಡ ಆವೃತ್ತಿಗೆ ಲೇಖಕನ ಎರಡು ಮಾತು

೧೯೮೬ರಲ್ಲಿ ಪ್ರಕಟಗೊಂಡ 'ಇನ್ವೈಟಿಂಗ್ ಡೆತ್-ಹಿಸ್ಟಾರಿಕಲ್ ಎಕ್ಸ್‌ಪೆರಿಮೆಂಟ್ಸ್ ಆನ್ ಸೆಪಲ್ಕ್ರ್ಯುಲ್ ಹಿಲ್' ('ಮರಣಕ್ಕೆ ಆಹ್ವಾನ-ಸಮಾಧಿ ಬೆಟ್ಟದ ಮೇಲಿನ ಪ್ರಯೋಗಗಳು'), ೧೯೮೯ರಲ್ಲಿ ಯುರೋಪಿನ ವಿದ್ವಾಂಸರಿಗಾಗಿ ಪ್ರತ್ಯೇಕ ಆವೃತ್ತಿ ಪಡೆದುಕೊಂಡು, (ಲೈಡೆನ್, ಇ.ಜೆ. ಬ್ರಿಲ್) ಹೆಚ್ಚು ಪ್ರಸಾರಕ್ಕೆ ಬಂತು. ಕನ್ನಡದ ಆಕರಗಳನ್ನೇ ಅವಲಂಬಿಸಿ, ಶ್ರವಣಬೆಳ್ಗೊಳದಂತಹ ನಾಡಿನ ಪ್ರಖ್ಯಾತ ಜೈನಕೇಂದ್ರದ ಸುತ್ತ ಹೆಣೆದ ಈ ಮರಣ ಪ್ರಯೋಗದ ಸ್ವರೂಪವು ದೇಸೀ ಭಾಷೆಯ-ಅದರಲ್ಲೂ ಕನ್ನಡದ-ಜನಾಂಗಕ್ಕೆ ಲಭ್ಯವಾಗಬೇಕೆಂಬ ಸೂಚನೆಗಳು ಮೇಲಿಂದ ಮೇಲಿಂದ ನನಗೆ ಬರುತ್ತಿದ್ದರೂ ಇದನ್ನು ಪರಿಣಾಮಕಾರಿಯಾಗಿ ನನ್ನ ಮನಮುಟ್ಟಿಸಿದ ಕೀರ್ತಿಯು ಶ್ರವಣಬೆಳ್ಗೊಳ ಶ್ರೀಕ್ಷೇತ್ರದ ಭಟ್ಟಾರಕರಾದ ಶ್ರೀ ಶ್ರೀ ಚಾರುಕೀರ್ತಿ ಪಟ್ಟಾಚಾರ್ಯರಿಗೆ ಸೇರುವುದು. ಚಂದ್ರಗಿರಿ ಮಹೋತ್ಸವದ ಸಂದರ್ಭದಲ್ಲಿ 'ಅಕ್ಷರ ಕಳಸ'ದ ಯೋಜನೆಯನ್ನು ಅವರು ಹಮ್ಮಿಕೊಂಡಾಗ, ಶ್ರವಣಬೆಳ್ಗೊಳಕ್ಕೆ (ಅದರಲ್ಲೂ ಚಂದ್ರಗಿರಿಗೆ) ನೇರವಾಗಿ ಸಂಬಂಧಿಸಿದ ಈ ಗ್ರಂಥವನ್ನು ಕನ್ನಡದಲ್ಲಿ ತರಬೇಕಾದ ಆವಶ್ಯಕತೆಯನ್ನು ನೆನಪಿಸಿಕೊಟ್ಟು, ಅದನ್ನು ಆರಂಭ ಮಾಡಲು ಚಾಲನೆಯನ್ನೂ ಇತ್ತರು. ಈ ಗ್ರಂಥವು ಆದಷ್ಟು ಬೇಗ ಕನ್ನಡಿಗರಿಗೆ ತಲುಪುವಂತಾಗಬೇಕೆಂದು ಒತ್ತಾಯಪೂರ್ವಕವಾಗಿ ಅವರು ಸೂಚಿಸಿದರು. ಇದರ ಬಗ್ಗೆ ನನ್ನ ಮಿತ್ರರಾದ ಪ್ರೊಫೆಸರ್ ಸದಾನಂದ ಕನವಳ್ಳಿಯವರೊಡನೆ ಪ್ರಸ್ತಾಪಿಸಿದಾಗ, ಅವರೂ ಇದರ ಆವಶ್ಯಕತೆಯ ಬಗ್ಗೆ ಸಹಮತಿಸಿ, ಹಲವಾರು ವಾರಗಳಲ್ಲಿಯೇ ಇದರ ಅನುವಾದದ ಕರಡನ್ನು ನನ್ನ ಮುಂದೆ ಇಟ್ಟರು. ಅಲ್ಲದೆ, ಅದರೊಡನೆ ಒಂದು ಉಪಯುಕ್ತ ಸೂಚನೆಯನ್ನೂ ಅವರು ಕೊಟ್ಟರು. "ಇಂಗ್ಲೀಷಿನಲ್ಲಿರುವ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಿದ್ದೇನೂ ಸುಲಭವೇ. ಆದರೆ ಕನ್ನಡದ ಮೂಲ ಆಕರಗಳನ್ನು ಆಧಾರವಾಗಿಟ್ಟುಕೊಂಡು ಸಿದ್ಧವಾದ ಇಂಗ್ಲೀಷ್ ಪಾಠವನ್ನು ಪುನಃ ಕನ್ನಡಕ್ಕೆ ತಂದಾಗ, ಅದರ ಮೂಲ ಸ್ವಾರಸ್ಯವನ್ನು ಸೆರೆಹಿಡಿಯುವುದು ಸುಲಭ ಸಾಧ್ಯವಲ್ಲ-ಕಾರಣ, ಈ ಗ್ರಂಥವು ಕನ್ನಡದಲ್ಲಿ ಸುಲಲಿತವಾಗಿ, ಅರ್ಥಪೂರ್ಣವಾಗಿ, ಓದಿಕೊಂಡು ಹೋಗಬೇಕಾದರೆ, ಅದರ ಪುನಃಸೃಷ್ಟಿಯು ಮೂಲ ಲೇಖಕನಿಂದಲೇ.

ಆಗಬೇಕು - ಅನುವಾದಕನಿಂದ ಅಲ್ಲ" ಎಂಬುದೇ ಅದರ ತಿರುಳು. ಸದಾನಂದ ಕನವಳ್ಳಿಯವರು ಕರುಡನ್ನೇ ಆಧಾರವಾಗಿಸಿಕೊಂಡು ನಾನು 'ಸಾವಿಗೆ ಆಹ್ವಾನ'ದ ಅನುದೃಷ್ಟಿಯ ಸಾಹಸಕ್ಕಿಳಿದೆ. ಮೂಲಗ್ರಂಥದಲ್ಲಿರುವ ಯಾವೊಂದೂ ಚಿಂತನೆಯನ್ನೂ ಕೈಬಿಡದೆ ಅಥವಾ ಮಾರ್ಪಾಟುಮಾಡದೇ, ಸ್ವತಂತ್ರಪಾಠವನ್ನು ಕನ್ನಡದಲ್ಲಿ ಸಿದ್ಧಪಡಿಸುವ ಈ ಕಾರ್ಯ ಒಂದು ವರ್ಷಕ್ಕೂ ಹೆಚ್ಚು ಕಾಲ ಮುಂದುವರಿಯಿತು. ಈ ಕಾಲದಲ್ಲಿ ನಾವಿಬ್ಬರೂ ಒಟ್ಟುಗೂಡಿ ಶ್ರಮಿಸಿದೆವು - ನಾನು ಸಿದ್ಧ ಪಡಿಸಿದ ಕರಡನ್ನು ಅವರು ತಿದ್ದಿದರು, ಅವರು ತಿದ್ದಿದ್ದನ್ನು ನಾನು ಪುನಃ ಮಾರ್ಪಡಿಸಿದೆ. ಹೀಗಾಗಿ ಅಂತಿಮ ಪಾಠವು ನಮ್ಮಿಬ್ಬರಿಗೂ ಗೊತ್ತಾಗದ ಬಗೆಯಲ್ಲಿ ರೂಪತಾಳಿತೆನ್ನಬಹುದು. ಈಗ ಅದನ್ನೇ ನಾನು ಕನ್ನಡಿಗರ ಮುಂದಿಡುತ್ತಿರುವೆ.

'ಅಕ್ಷರ ಕಳಸ'ದ ಯೋಜನೆಯಡಿ ಪ್ರಕಟವಿರಬೇಕಿದ್ದ ಈ ಗ್ರಂಥವು, ಶ್ರೀಗಳ ಅನುಮತಿಯೊಂದಿಗೆ ಈಗ ಕನ್ನಡ ಪುಸ್ತಕ ಪ್ರಾಧಿಕಾರದ ಆಕರ ಮಾಲಿಕೆಯಲ್ಲಿ ಪ್ರಕಟವಾಗುತ್ತಲಿದೆ. ಇದಕ್ಕೆ ಕಾರಣ, ಪ್ರಾಧಿಕಾರದ ಅಧ್ಯಕ್ಷರೂ, ಕನ್ನಡನಾಡಿನ ಹಿರಿಯ ಶಾಸ್ತ್ರಜ್ಞರಲ್ಲಿ ಒಬ್ಬರಾದವರೂ, ಇತ್ತೀಚಿನ ದಿನಗಳಲ್ಲಿ ನನ್ನನ್ನು ಪ್ರಬಲವಾಗಿ ಆಕರ್ಷಿಸಿದವರೂ ಆದ ಪ್ರೊಫೆಸರ್ ಮಲ್ಲೇಪುರಂ ಜಿ. ವೆಂಕಟೇಶ ಅವರು. ಅವರ ಅಭಿರುಚಿಯ ಆವರಣದಲ್ಲಿ ಮರಣ ಸಿದ್ಧಾಂತವೂ ಸೇರಿದೆ ಎಂಬುದು ನನಗೆ ಮನವರಿಕೆಯಾದುದು ಅವರು ಪ್ರಾಧಿಕಾರದ ಮೂಲಕ ಈ ಗ್ರಂಥವನ್ನು ಪ್ರಕಟಿಸುವ ಅವಶ್ಯಕತೆಯನ್ನು ನನಗೆ ಮನವರಿಕೆ ಮಾಡಿಕೊಡುತ್ತಿರುವ ಕಾಲದಲ್ಲಿ. ಅವರ ಪ್ರೋತ್ಸಾಹ ಒತ್ತಾಯ, ಒಟ್ಟೊಟ್ಟಾಗಿ ಮೇಲಿಂದ ಮೇಲೆ ಬಂದುದರಿಂದಲೇ ಈ ಕಾರ್ಯವನ್ನು ಪೂರೈಸಿಕೊಡಲು ನನಗೆ ಸಾಧ್ಯವಾಯಿತು.

ಚಾಲನೆಯತ್ತ ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕರು, ಆ ಮುನಿ ಪರಂಪರೆಯ ಪರವಾಗಿ ಮತ್ತು ವೈಯಕ್ತಿಕವಾಗಿ ಈ ಗ್ರಂಥವನ್ನು (ಈ ಹಿಂದೆ ಇಂಗ್ಲಿಷ್ ಭಾಷೆಯ ಗ್ರಂಥವನ್ನು) ಸ್ವೀಕರಿಸಲು ಒಪ್ಪಿದ್ದು ನನಗೆ ತುಂಬಾ ಆನಂದ ತಂದಿದೆ. ಅವರಿಗೂ, ಮಿತ್ರರಾದ ಪ್ರೊ. ಸದಾನಂದಕನವಳ್ಳಿ ಮತ್ತು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರಿಗೂ ನಾನು ಋಣಿ. ಈ ಗ್ರಂಥವನ್ನು ಅದರಲ್ಲೂ ಚಿತ್ರಗಳನ್ನು ನನ್ನ ಮನಮುಟ್ಟುವಂತೆ ಅಚ್ಚು ಹಾಕುವ ಕಾರ್ಯದಲ್ಲಿ ಸಹಕಾರವನ್ನಿತ್ತ ಲಕ್ಷ್ಮಿ ಮುದ್ರಣಾಲಯದ ವ್ಯವಸ್ಥಾಪಕ ವರ್ಗಕ್ಕೆಲ್ಲ ನಾನು ಅಷ್ಟೇ ಋಣಿ.

ಪ. ಪಟ್ಟರ್
ಡಾ|| ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ
ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕ್ಯಾಂಪಸ್
ಬೆಂಗಳೂರು
ಜೂನ್ ೧, ೨೦೦೩

ಪರಿವಿಡಿ

ವಿಭಾಗ - ಒಂದು

ಅಧ್ಯಾಯ ಒಂದು : **ಆಧ್ಯಾತ್ಮಿಕ ಮಹೋನ್ನತಿಯ ಯುಗ**

ಮರಣದಿಂದ ಇತಿಹಾಸ ಆರಂಭ : 1
ಸಮಾಧಿಬೆಟ್ಟ - 4; ಮರಣವೇ ಮಹಾನವಮಿ - 5; ಸಂಘಗಳ ಪಾತ್ರ - 8; ಭಾವೋದ್ವಿಗ್ನತೆ, ಅಹಂಕಾರ, ವಕ್ರ ಬುದ್ಧಿಗಳಿಂದ ಮುಕ್ತರಾದವರು - 10; ಸಂಕ್ರಮಣಕಾಲ (900- 1100) - ಸರಳತೆಯ ಸವೆತ - 13; ಮರಣವನ್ನು ಆಹ್ವಾನಿಸಿದ ಪ್ರಥಮ ಶ್ರಾವಕ -14; ಯಾತ್ರಿಗಳು- 15; ನಿಸಿಧಿ ಸ್ಮಾರಕಗಳೊಡನೆ ಸ್ಥಳ ಹಂಚಿಕೊಂಡ ವೀರಗಲ್ಲುಗಳು - 18; ಲೌಕಿಕರ ಆಧ್ಯಾತ್ಮಿಕ ಒಲವು - 19; ಆಧ್ಯಾತ್ಮಿಕ ಮನೋಧರ್ಮದಲ್ಲಿ ಸ್ಥಿತ್ಯಂತರ - 22; ಮಹಾವಿಗ್ರಹ-25; ಆಧ್ಯಾತ್ಮಿಕ ಸರಳತೆಯ ಅಂತ್ಯ - 25; ಮೂಲಸಂಘದ ಪ್ರವೇಶ - 27; ಈ ಸಂಘದ ಪಾತ್ರ- 28.

ವಿಭಾಗ - ಒಂದು

ಅಧ್ಯಾಯ ಎರಡು : ಭೌತಿಕ ಮತ್ತು ಧಾರ್ಮಿಕ ಸಮೃದ್ಧಿಯ ಯುಗ

ಮೂಲಸಂಘದಪಾತ್ರ-30; ಪ್ರಧಾನ ಶಾಖೆ-33; ಇತರ ಶಾಖೆಗಳು-33; ಸಂಘದ ಬಂಧ-35; ಶ್ರಮಣರ ಪಾತ್ರ-36; ಹೊಸ ಸನ್ನದು-38; ಆಚಾರ್ಯರ ಮುಂದಾಳತ್ವ-38; ಆಡಳಿತಾತ್ಮಕ ಹೊಣೆಗಾರಿಕೆ-42; ಐತಿಹಾಸಿಕ ಅಂತಃಸಾಕ್ಷಿ-44; ಉಗ್ರಮನಸ್ಥಿತಿ-50; ಶಕ್ತಿಶಾಲಿ ಶ್ರಾವಕರ ಪಾತ್ರ-52; ಆಳರಸರು-53; ಬೆಳ್ಗೊಳವು ಪಟ್ಟಣವಾಗಿ ಬೆಳೆಯುವುದು-56; ಮಹಾನಿರ್ಮಾಪಕರು-56; ವರ್ಚಸ್ವಿ ಶ್ರಾವಕರ ಪ್ರಭಾವ-58; ವರ್ತಕಸಮುದಾಯದ ಪ್ರವೇಶ- 59; ವರ್ತಕರ ಗುಪ್ತಹೇತುಗಳು-62; ಅವಿಶ್ವಾಸದ ಕಂದರ-63; ಕವಲುದಾರಿಯಲ್ಲಿ ಸಮಾಧಿಮರಣ- 66; ಸಮಾಧಿಮರಣ-ಕೌಟುಂಬಿಕ ಆಸಕ್ತಿ-66; ಸ್ತ್ರೀಯರ ಅಗ್ಗಳಿಕೆ-67; ಸಮಾರೋಪ-69.

ವಿಭಾಗ - ಒಂದು

ಅಧ್ಯಾಯ ಮೂರು : **ಪ್ರಕ್ಷುಬ್ಧಕಾಲ**

ಸಮಾಧಿಮರಣ ಬಂದು ಮಾಸಿದ ನೆನಪು-73; ಘರ್ಷಣೆಯ ಮೊದಲ ಘಟ್ಟ (1300-1600)-75 ; ಭವ್ಯರ ಭಕ್ತರ ಘರ್ಷಣೆ- 75; ವಿರುಪೇರಾದ ನ್ಯಾಯ-77; ಮುಖಾಮುಖಿಯ ತರುವಾಯ-78; 1.ದೇವಾಲಯ ಮತ್ತು ಧಾರ್ಮಿಕ ಜೀವನ-79 ; 2.ವರ್ತಕ ಸಮುದಾಯದ ಅನುಮಾನಾಸ್ಪದ ಪಾತ್ರ- 81; ಸ್ಥಾನಿಕರು ದೇವಾಲಯದ ಭೂಮಿಯನ್ನು ವರ್ತಕರಿಗೆ ಅಡವಿಡುವರು-84 ; ಮೈಸೂರರಸರ ಸಹಾಯ ಹಸ್ತ-85 ; 3.ಯಾತ್ರಿಕರು-86; 4.ಸಂರಕ್ಷಣೆಗಾಗಿ ಮುನಿಗಳ ಹೆಣಗಾಟ-88; 5.ಆಧ್ಯಾತ್ಮಿಕ ಸ್ವರೂಪ-92 ; ಸಮಾರೋಪ-93 .

ವಿಭಾಗ - ಎರಡು

ಅಧ್ಯಾಯ ನಾಲ್ಕು : ವ್ರತಗಳ ಅರ್ಥ ಮಹತ್ವ ಮತ್ತು ವ್ಯಾಪ್ತಿ

ಮರಣಬೆಟ್ಟ-96; ವ್ರತನಿಯಮಗಳ ಪದಬಳಕೆ-98 ; ಸಲ್ಲೇಖನಾ- 99; ಸಮಾಧಿ-96 ; ಆರಾಧನಾ, ಪಂಚಪದ, ಪೌಗ್ಗಮಣ ಮತ್ತು ಪಂಡಿತರಮರಣ-100 ; ಜನಪ್ರಿಯ ಪ್ರಯೋಗಗಳು-107 ; ವ್ರತಾಚರಣೆಯ ಉನ್ನತಿ ಮತ್ತು ಅವನತಿ-108 ; ಮುನಿಗಳು-109 ; ಕಂತಿಯರು-110 ; ಗುಡ್ಡರು-110 ; ಗುಡ್ಡಿಯರು- 111; ನಿಸಿಧಿಗಳ ಹಂಚಿಕೆ-111 ; ನಿಸಿಧಿ ಪ್ರಭೇದಗಳು-111 ; ವ್ರತಗಳ ಅರ್ಥ ಮತ್ತು ಮಹತ್ವ-111 ; ಆರಾಧನಾ: ಜ್ಞಾನ ಮತ್ತು ಮರಣ- 114; ಐತಿಹಾಸಿಕ ನಿದರ್ಶನಗಳು-116 ; ಪಂಚಪದ : ಪ್ರಾರ್ಥನೆ ಮತ್ತು ಮರಣ-117 ; ಐತಿಹಾಸಿಕ ನಿದರ್ಶನಗಳು-119 ; ಸನ್ಯಸನ ಮರಣ : ವಿರಕ್ತಿ ಮತ್ತು ಮರಣ-120 ; ಐತಿಹಾಸಿಕ ನಿದರ್ಶನಗಳು- 122; ಸಲ್ಲೇಖನಾ: ನಿರಶನ ಮತ್ತು ಮರಣ- 124; ಐತಿಹಾಸಿಕ ನಿದರ್ಶನಗಳು-126 ; ಸಮಾಧಿ- 127; ಪಂಡಿತ ಮರಣ-130 ; ಐತಿಹಾಸಿಕ ನಿದರ್ಶನಗಳು-132 ; ನಿಸಿಧಿ-133 ; ಐತಿಹಾಸಿಕ ನಿದರ್ಶನಗಳು-134.

ವಿಭಾಗ - ಎರಡು

ಅಧ್ಯಾಯ ಐದು : ವ್ರತಾಚರಣೆ : ಐತಿಹಾಸಿಕ ನಿದರ್ಶನಗಳ ಪಥಾನ್ವೇಷಣೆ

ಶಾರೀರಿಕ ಮತ್ತು ಮಾನಸಿಕ ಸಿದ್ಧಿಗಳು-138; ನಿರಶನ-139; ಧ್ಯಾನ-139; ವಿರಕ್ತಿ-140; ಮರೀಯ ತತ್ವಗಳು-141; ಮಾರ್ಗದರ್ಶಕ-141 ; ಮಹಾನವಮಿ-142 ; ಧ್ಯಾನದಸ್ಥಳ ಹಾಗೂ ಭಂಗಿ- 143; ಆತ್ಮ ಸಾಕ್ಷಾತ್ಕಾರಾಮೃತ-144; ಸಮಾಧಿಮರಣ ಮತ್ತು ಆತ್ಮಹತ್ಯೆ-145; ಪ್ರಖ್ಯಾತಮರಣಗಳು-146; ಮೊದಲ ಮರಣದ ಐತಿಹಾಸಿಕತೆ-146; ಮರಣವನ್ನರಿಸಿ ಬಂದ ಪ್ರಾಚೀನ ವಲಸೆಗಾರರು-147; ಸ್ವರ್ಗದಲ್ಲಿ ಪುಣ್ಯಫಲ-148; ವಾಡಿಕೆಯ ಗುಣಗಾನ-149; ಶ್ರವಣ ಮಲ್ಲಿಷೇಣಮಲಧಾರಿದೇವ (1129)150; ಶ್ರಾವಕಿ ಮಾಚಿಕಬ್ಬೆ-152; ಪರಿಪೂರ್ಣ ಶ್ರಾವಕಿ-152; ವಿಧಿವಿಧಾನದ ವಿಶ್ಲೇಷಣೆ-153; ಶ್ರಾವಕ ಸಿಂಗಿಮಯ್ಯ ಮತ್ತು ಬಲದೇವ-(1139)155; ಲೋಭಿಗಳ ದ್ವೇಷಿ-157; ವಿಧಿವಿಧಾನದ ವಿಶ್ಲೇಷಣೆ-157 ; ಶೃತಮುನಿ (1432) ಮಹಾಶ್ರಣದ ಪರಂಪರೆ-158; ಗಾಡಾಂಧಕಾರದಲ್ಲಿ ಲೋಕ-159; ಉತ್ತರಾಧಿಕಾರಿಯ ಆಯ್ಕೆ-160; ಉತ್ತರಾಧಿಕಾರಿಯ ಶೋಕ-160; ಚೇತರಿಸಿಕೊಂಡ ಶಿಷ್ಯನ ಧರ್ಮಕಾರ್ಯಗಳು-160; ದೈಹಿಕವ್ಯಾಧಿ ಮರಣದೀಕ್ಷೆಯನ್ನು ಅರಸಹಚ್ಚುವುದು-161; ದೀಕ್ಷೆ ಮತ್ತು ವ್ರತಾಚರಣೆ-162; ಪರಿಸಮಾಪ್ತಿ-163; ನಿಶಿಧಿಗಳ ಮಹತ್ವ-164; ವಿಧಿವಿಧಾನದ ವಿಶ್ಲೇಷಣೆ-164:

ವಿಭಾಗ - ಎರಡು

ಅಧ್ಯಾಯ ಆರು: ಗೌರವಾನ್ವಿತ ಮುನಿಗಳು : ಅವರ ಸಿದ್ಧಿ ಸಾಧನೆಗಳು

ಮರಣ ಒಂದು ಸಾಮಾಜಿಕ ಘಟನೆ-170; ಸಂಪತ್ತು, ಶ್ರಾವಕರು ಮತ್ತು ನಾಯಕತ್ವ-171; ಪ್ರಕರಣಗಳ ವಿಶ್ಲೇಶಣೆ-173 ; 1.ಇಂದ್ರನಂದಿ : ಸು. 7ನೆಯ ಶತಮಾನ-173; 2.ಮೇಘಚಂದ್ರ ತ್ರೈವಿದ್ಯದೇವ : 1115-174; 3.ಶುಭಚಂದ್ರರು :1123-1313- 176; (ಅ) ಶುಭಚಂದ್ರ ತ್ರೈವಿದ್ಯದೇವ : 1163-177; (ಆ) ಆಧ್ಯಾತ್ಮಿ ಶುಭಚಂದ್ರದೇವ : 1313-177 ; (ಇ) ಶುಭಚಂದ್ರ ಸಿದ್ಧಾಂತದೇವ: 1123-178; 4.ಪ್ರಭಾಚಂದ್ರರು : 1115-1145-181; (ಅ) ಪ್ರಭಾಚಂದ್ರ: 7ನೆಯ ಶತಮಾನ-181; (ಆ) ನಯಕೀರ್ತಿಸಿದ್ಧಾಂತಚಕ್ರವರ್ತಿಯ ಶಿಷ್ಯ ಪ್ರಭಾಚಂದ್ರ-183; (ಇ) ಪ್ರಭಾಚಂದ್ರ ಭಟ್ಟಾರಕದೇವ :13ನೆಯ ಶತಮಾನ-184; (ಈ) ಪ್ರಭಾಚಂದ್ರಸಿದ್ಧಾಂತದೇವ : 1115-1145-184; 5.ಭಾನುಕೀರ್ತಿದೇವರು: 1117-187; (ಅ) ಭಾನುಕೀರ್ತಿ: 1117-188; (ಆ) ಭಾನುಚಂದ್ರ: 1118-189 ; (ಇ) ಭಾನುಕೀರ್ತಿಸಿದ್ಧಾಂತದೇವ-189; 6. ನಯಕೀರ್ತಿಗಳು : 1159-1176-192; (ಅ)ಒಂದನೆಯನಯಕೀರ್ತಿ (ನಯಕೀರ್ತಿಸಿದ್ಧಾಂತದೇವ) : 12ನೆಯ ಶತಮಾನ-192; (ಆ) ಇಮ್ಮಡಿ ನಯಕೀರ್ತಿ 13ನೆಯ ಶತಮಾನ-196 ; ಮರೆತುಹೋದ ವಿಧಿನಿಯಮ-197.

ವಿಭಾಗ - ಮೂರು

ಅಧ್ಯಾಯ ಏಳು : ನಿಸಿಧಿ : ಲಕ್ಷಣ, ವೈವಿಧ್ಯತೆ, ಕಲೆ

1.ಬಂಡೆಗಲ್ಲು, ಗುಂಡುಗಲ್ಲು ಶಾಸನಿತ ನಿಸಿಧಿಗಳು-201; (i) ಪ್ರಾಚೀನ ನಿದರ್ಶನಗಳು-201; (ii) ಇತ್ತೀಚಿನ ನಿದರ್ಶನ-202; ಸರಳಶಾಸನಗಳು-202 ; ಪಾದಚಿನ್ಹೆಗಳು-203; ಗುಂಡುಗಲ್ಲು ನಿಸಿಧಿಗಳು-204; (iii) ಇತರ ಗುಂಡುಗಲ್ಲು ನಿಸಿಧಿಗಳು -207;

2.ಬಯಲಿನಲ್ಲಿ ನಿಂತ ನಿಸಿಧಿ-ಮಾನಸ್ತಂಭಗಳು- 208; ಕೂಗೆಬ್ರಹ್ಮದೇವಸ್ತಂಭ-209; ಅತ್ಯುತ್ತಮ ಮಾನಸ್ತಂಭ-210; ಸಂಕ್ರಮಣಕಾಲದ ಮರುಹೊಂದಾಣಿಕೆಗಳು-211; ಚಾಗದಕಂಬ-212; ಏನನ್ನು ತ್ಯಾಗಮಾಡಲಾಯಿತು? -212 ; ಮಾರಸಿಂಹನ ನಿಸಿಧಿ-215.

3.ದೇವಾಲಯದಲ್ಲಿ ಪ್ರತಿಷ್ಠಾಪಿಸಿದ ನಿಸಿಧಿಕಂಬಗಳು-217; ಬಸದಿಯಲ್ಲಿರುವ ಕಂಬಗಳು-218; ಖ್ಯಾತ ರೂವಾರಿ-219; ಸಿದ್ಧರಬಸದಿಯ ಕಂಬಗಳು-221.

ವಿಭಾಗ - ಮೂರು

ಅಧ್ಯಾಯ ಎಂಟು : **ನಿಸಿದಿ : ಲಕ್ಷಣ, ವೈವಿಧ್ಯತೆ, ಕಲೆ**

ನಿಸಿಧಿ ಮಂಟಪಗಳು-224; 1.ಮಂಟಪಗಳ ಪ್ರಧಾನ ಲಕ್ಷಣಗಳು-225; 2.ಸ್ತಂಭಕೂಟ-226; 3.ರಕ್ತ ಸಂಬಂಧಿಗಳ ಸಾಮೂಹಿಕ ನಿಸಿಧಿಗಳು-226; 4.ನಿಸಿಧಿಗಳು ಮರಣ ತಾಣದಲ್ಲಿರಬೇಕೆಂಬ ಕಡ್ಡಾಯವಿರಲಿಲ್ಲ -226; 5.ಸ್ಮಾರಕಗಳ ಪವಿತ್ರೀಕರಣ-227; 6.ಪ್ರಮಾಣದಲ್ಲಿ ವೈವಿಧ್ಯತೆ-227; 7.ಉಬ್ಬುಶಿಲ್ಪಗಳು- 228; 8.ಸಾಮಾಜಿಕ ಅಂತಸ್ತು ಮತ್ತು ಅವರ ಲಿಂಗ ವೈವಿಧ್ಯತೆ-228; ರಾಷ್ಟ್ರಕೂಟ ಇಂದ್ರನ ಮಂಟಪ (982)-230; ಲಕ್ಷ್ಮೀಮತಿಯ ಮಂಟಪ (1113-1121)-231; ಪೋಚಿಕಬ್ಬೆಯ ಮಂಟಪ (1120-1123)- 235; ಮಾಚಿಕಬ್ಬೆಯ ಮಂಟಪ (1131-1145)-237; ಉತ್ತರದ ಮಂಟಪ-238; ದಕ್ಷಿಣದ ಮಂಟಪ- 241; ಮಹಾನವಮಿ ಮಂಟಪ-242; ವಿಗ್ರಹ, ಕಟ್ಟಡ, ತೇರು, ಇತ್ಯಾದಿ-245.

ಒಳಾಂತರಂಗ

ಅಧ್ಯಾಯ 1.	ಆಧ್ಯಾತ್ಮಿಕ ಮಹೋನ್ನತಿಯ ಯುಗ	1
ಅಧ್ಯಾಯ 2.	ಭೌತಿಕ ಮತ್ತು ಧಾರ್ಮಿಕ ಸಮೃದ್ಧಿಯ ಯುಗ	31
ಅಧ್ಯಾಯ 3.	ಪ್ರಕ್ಷುಬ್ಧ ಕಾಲ	73
ಅಧ್ಯಾಯ 4.	ವ್ರತಗಳ ಅರ್ಥ ಮಹತ್ವ ಮತ್ತು ವ್ಯಾಪ್ತಿ	96
ಅಧ್ಯಾಯ 5.	ವ್ರತಾಚರಣೆ : ಐತಿಹಾಸಿಕ ನಿದರ್ಶನಗಳ ಪಥಾನ್ವೇಷಣೆ	131
ಅಧ್ಯಾಯ 6.	ಗೌರವಾನ್ವಿತ ಮುನಿಗಳು : ಅವರ ಸಿದ್ಧಿ ಸಾಧನೆಗಳು	160
ಅಧ್ಯಾಯ 7.	ನಿಸಿಧಿ : ಲಕ್ಷಣ, ವೈಸಿಧ್ಯತೆ, ಕಲೆ	190
ಅಧ್ಯಾಯ 8.	ನಿಸಿಧಿ : ಲಕ್ಷಣ, ವೈಸಿಧ್ಯತೆ, ಕಲೆ	214
ಅನುಬಂಧ I		239
ಅನುಬಂಧ II		242
ಅನುಬಂಧ III		244
ಅನುಬಂಧ IV		249
ಅನುಬಂಧ V		258
ಪದಕೋಶ		262
ಗ್ರಂಥಸೂಚಿ		280
ಪ್ರಾಚೀನ ಕನ್ನಡ ಗ್ರಂಥಗಳು		282
ಆಧುನಿಕ ಕನ್ನಡ ಗ್ರಂಥಗಳು		283
ಇಂಗ್ಲೀಷ್ ಭಾಷೆಯ ಗ್ರಂಥಗಳು		284
ಚಿತ್ರಗಳು		288
ಪದಸೂಚಿ		349
ಗ್ರಂಥ ಕರ್ತರ ಇತರ ಕೃತಿಗಲು		376
ಇಂಗ್ಲಿಷ್ ಅವತರಣಿಕೆಯ ಸಿಂಹಾವಲೋಕನ		378

ಅಧ್ಯಾಯ ಒಂದು

ಆಧ್ಯಾತ್ಮಿಕ ಮಹೋನ್ನತಿಯ ಯುಗ

ಮರಣದಿಂದ ಇತಿಹಾಸ ಆರಂಭ : ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವದ ಪುಟ್ಟ ಪಟ್ಟಣವಾದ ಶ್ರವಣಬೆಳ್ಗೊಳವು ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯಲ್ಲಿದೆ. ದಿಗಂಬರ ಜೈನ ಕೇಂದ್ರಗಳಲ್ಲಿಯೆ ಪ್ರಧಾನವಾದ ಈ ಪಟ್ಟಣವು ನಮ್ಮ ದೇಶದ ಇತಿಹಾಸದಲ್ಲಿ ಅನನ್ಯ ಸ್ಥಾನವನ್ನು ಪಡೆದಿರುವುದನ್ನು ಇಲ್ಲಿಯ ಅತ್ಯಧಿಕ ಸಂಖ್ಯೆಯ ಜೈನ ಶಾಸನಗಳು ಪುಷ್ಟೀಕರಿಸುವುವು. ಅತಿ ಎತ್ತರವಾದ ಏಕಶಿಲಾ ಮಹಾವಿಗ್ರಹ, ಒಂದೂವರೆ ಸಹಸ್ರಕಾಲದ ಅವಿಚ್ಛಿನ್ನ ಇತಿಹಾಸ, ಮತ್ತೆಲ್ಲೂ ಕಾಣದಷ್ಟು ಸಂಖ್ಯೆಯ ದಿಗಂಬರ ಜೈನ ದೇವಾಲಯಗಳು ಅಲ್ಲಿ ಸಾಂದ್ರಗೊಂಡಿರವುವಲ್ಲದೆ ಅತ್ಯಧಿಕ ಸಂಖ್ಯೆಯ ನಿಸಿಧಿ ಅಥವಾ ಸ್ಮಾರಕಸ್ತಂಭಗಳೂ ಇಲ್ಲಿವೆ. ಮುನಿ ಭದ್ರಬಾಹು ಮತ್ತು ಮೌರ್ಯಸಾಮ್ರಾಟ ಚಂದ್ರಗುಪ್ತರು ಸಾವಿರಾರು ಅನುಯಾಯಿಗಳೊಂದಿಗೆ ಕ್ರಿ. ಪೂ. 3 ನೆಯ ಶತಮಾನದಲ್ಲಿ ಇಲ್ಲಿಗೆ ಬಂದರೆಂಬ ಸಹಮತವಿದೆ. ಈ ಘಟನೆಯೊಂದಿಗೆ ಶ್ರವಣಬೆಳ್ಗೊಳದ ಐತಿಹ್ಯ ಹಾಗೂ ಇತಿಹಾಸ ಆರಂಭಗೊಳ್ಳುವುವು.

ಶೈಲಶಿಲೆಯ ಮೇಲೆ ಕೊರೆದ ಕ್ರಿ. ಶ. ಸು. 600 ರ ಒಂದು ಶಾಸನದಿಂದ ಶ್ರವಣಬೆಳ್ಗೊಳದ ಲಿಖಿತ ಇತಿಹಾಸ ಪ್ರಾರಂಭಗೊಳ್ಳುವುದು. ಚಂದ್ರಗಿರಿ ಅಥವಾ ಚಿಕ್ಕಬೆಟ್ಟದ ಪಾರ್ಶ್ವನಾಥ ಬಸದಿಯ ಬಲಕ್ಕಿರುವ ಈ ಶಾಸನವು ಸಕಲ ಸಂಘದೊಂದಿಗೆ ಉಜ್ಜೈನಿಯಿಂದ ವಲಸೆ ಬಂದ ಭದ್ರಬಾಹುಮುನಿಯ ಕುತೂಹಲಕಾರಿ ಕತೆಯನ್ನು ನಿರೂಪಿಸುವುದು. ಅಷ್ಟೆ ಅಲ್ಲ. "ಸಮ್ಯಕ್ ಚಾರಿತ್ರ್ಯದಿಂದೊಡಗೂಡಿದ ತಪಸ್ಸಿನ ಗುರಿಯಾದ ಸಮಾಧಿಯನ್ನು ಸಾಧಿಸಲಿಚ್ಛಿಸಿದ"[1] ಪ್ರಭಾಚಂದ್ರ ಆಚಾರ್ಯನು ತನ್ನ ಜೀವನವನ್ನು ಕೊನೆಗೊಳಿಸಲು ಈ

---

1. ಎ ಕ II,1.

ಉನ್ನತ ಪರ್ವತಶಿಖರವನ್ನು ಆಯ್ಕೆಮಾಡಿಕೊಂಡದ್ದನ್ನೂ ತಿಳಿಸುವುದು. ಅಂದರೆ ಶ್ರವಣಬೆಳ್ಗೊಳದ ಇತಿಹಾಸವು ಶ್ರಮಣನೊಬ್ಬನ ಇಚ್ಛಾಮರಣದಿಂದಲೇ ಆರಂಭಗೊಂಡಿತೆಂದರ್ಥ.

ಚಂದ್ರಗಿರಿ (ಚಿಕ್ಕಬೆಟ್ಟ) ಮತ್ತು ವಿಂಧ್ಯಗಿರಿ (ದೊಡ್ಡಬೆಟ್ಟ) ಗಳ ಕೊಳ್ಳಪ್ರದೇಶವನ್ನು ಶ್ರವಣಬೆಳ್ಗೊಳ ಪಟ್ಟಣ ವ್ಯಾಪಿಸಿದೆ. ಆದರೆ ಈ ಎರಡೂ ಬೆಟ್ಟಗಳ ಪ್ರಸಕ್ತ ಹೆಸರುಗಳಿಗೆ ಐತಿಹಾಸಿಕ ಪ್ರಾಚೀನತೆಯಿಲ್ಲ. ಅತ್ಯಂತ ಪ್ರಾಚೀನ ಮತ್ತು ಪವಿತ್ರವಾದ ಚಿಕ್ಕಬೆಟ್ಟವನ್ನು ಆರಂಭಕಾಲದ ಶಾಸನಗಳಲ್ಲಿ *ಕಟವಪ್ರ* ಅಥವಾ *ಕಳ್ಬಪ್ಪು* ಎಂದು ಕರೆಯಲಾಗಿದೆ.[2] ಈ ಪದಗಳನ್ನು ಅನೇಕ ಬಗೆಯಲ್ಲಿ ಕಾಗುಣಿಸಿ, ಪ್ರತ್ಯಯಗಳನ್ನು ಜೋಡಿಸಿ, ಮುಂದೆ ಬಳಸಲಾದರೂ 12 ನೆಯ ಶತಮಾನದ ನಂತರ ಅವು ಶಾಸನ ಕವಿಗಳ ಸ್ಮರಣೆಯಿಂದ ಮಾಯವಾಗುವುವು.[3] 12ನೆಯ ಶತಮಾದಲ್ಲಿ ಚಿಕ್ಕಬೆಟ್ಟವನ್ನು *ವಪ್ರ* (ಬೆಟ್ಟದ ಪಾರ್ಶ್ವಭಾಗ), *ಶೈಲ* (ತಳಬಂಡೆ), *ಗಿರಿ* (ದಿನ್ನೆ), *ಶೈಲಶಿಖರ* (ತಳಬಂಡೆಯ ಶಿಖರ), *ತೀರ್ಥ* (ಪುಣ್ಯಭೂಮಿ), *ಬೆಟ್ಟ*, *ದುರ್ಗ*, *ಪರ್ವತ* ಮತ್ತು *ನಾಡು* (ಜಿಲ್ಲಾ ಕೇಂದ್ರ ಸ್ಥಳ), ಮುಂತಾದ ಪ್ರತ್ಯಯಗಳಿಂದ ಗುರುತಿಸಲಾಗಿದೆ.[4] ಅತ್ಯಂತ ಪುರಾತನ ಶಾಸನಗಳಲ್ಲಿ ಇದನ್ನು ಅಪರೂಪವಾಗಿ *ಋಷಿಗಿರಿ* ಹಾಗೂ *ತೀರ್ಥಗಿರಿ* ಎಂದೂ ಸಂಬೋಧಿಸಲಾಗಿದೆ.[5]

ಚಿಕ್ಕಬೆಟ್ಟದ ಮೇಲೆ ಅಥವಾ ಕೊಳ್ಳದಲ್ಲಿದ್ದ ಒಂದು ಕೊಳದಿಂದ ಈ ಕೇಂದ್ರಕ್ಕೆ *ಬೆಳ್ಗೊಳ* ಎಂಬ ಹೆಸರು ಬಂತು. 8 ನೆಯ ಶತಮಾನದ ಶಾಸನಗಳಲ್ಲಿ ಇದರ ಪ್ರಥಮ ಉಲ್ಲೇಖ ಬರುವುದಾದರೂ,[6] 12 ನೆಯ ಶತಮಾನಾನಂತರವೇ ಈ ಹೆಸರು ಜನಪ್ರಿಯಗೊಂಡಿತೆಂದು ಕಂಡುಬರುವುದು.[7] *ಬೆಳ್ಗೊಳ* (ಕನ್ನಡ) ಮತ್ತು *ಧವಳ ಸರಸ್*,

---

2. ಕಟವಪ್ರಕ್ಕೆ ನೋಡಿ. - 1, 13, 25, 85, 108, 110, 132, 113, 123, ಇತ್ಯಾದಿ. ಅವೆಲ್ಲವೂ 6 - 7ನೆಯ ಶತಮಾನದವುಗಳೆಂದು ಗೊತ್ತುಪಡಿಸಲಾಗಿದೆ. ಕಳ್ಬಪ್ಪು ಮತ್ತು ಅದರ ವಿಭಿನ್ನ ರೂಪಗಳಾದ ಕಬ್ಬಪ್ಪು, ಕಳ್ವಪ್ಪು ಮುಂತಾದವುಗಳಿಗಾಗಿ ನೋಡಿ – 156, 568, 174, 31, 14, 168, 78, 38, 86, 87, 94, 99, 26, ಇತ್ಯಾದಿ.
3. 6-7ನೆಯ ಶತಮಾನದವುಗಳೆಂದು ಬಗೆಯಲಾಗಿರುವ ಶಾಸನಗಳಲ್ಲಿ ಮಾತ್ರ ಕಬ್ಬಪ್ಪು ಪದವು ದೊರೆಯುತ್ತದೆ. ಇದರ ಕಡೆಯ ಉಲ್ಲೇಖಗಳಲ್ಲೊಂದು 1139ರಲ್ಲಿ (174) ಬರುವುದು.
4. ವಪ್ರ (1, 110, ಇತ್ಯಾದಿ), ಶೈಲ (123, 25, 87, ಇತ್ಯಾದಿ), ಗಿರಿ (113, 13, 132, ಇತ್ಯಾದಿ), ಶೈಲಶಿಖರ (85), ತೀರ್ಥ (156, 568, 78, 16, 49, ಇತ್ಯಾದಿ), ಬೆಟ್ಟ (30, 31), ದುರ್ಗ (99) ಪರ್ವತ (26) ಮತ್ತು ನಾಡು (174).
5. 94 ಮತ್ತು 86: ಎರಡೂ 7ನೆಯ ಶತಮಾನದ ಶಾಸನಗಳು.
6. 34 ಮತ್ತು 38.
7. 10-11ನೆಯ ಶತಮಾನಗಳಲ್ಲಿ ಈ ಹೆಸರನ್ನು ಅಪರೂಪವಾಗಿ ಮಾತ್ರ ಬಳಸಲಾಗಿದೆ. ನೋಡಿ, 150, 242, 568, ಇತ್ಯಾದಿ.

ಧವಳ ಸರೋವರ, ಶ್ವೇತ ಸರೋವರ[8] (ಸಂಸ್ಕೃತ) ಮುಂತಾದ ಪದ ರೂಪಾಂತರಗಳೆಲ್ಲ 'ಬಿಳಿ' ಅಥವಾ 'ಶುದ್ಧ' ಕೊಳವನ್ನು ಸೂಚಿಸುವುವು. 12ನೆಯ ಶತಮಾನದ ಮತ್ತು ಆ ನಂತರಕಾಲದ ಹಲವಾರು ಶಾಸನಗಳು ಬೆಳ್ಗೊಳವನ್ನು *ತೀರ್ಥ* ಎಂದು,[9] 14ನೆಯ ಶತಮಾನದಂಚಿನ ಕೆಲವು ಶಾಸನಗಳು *ನಗರ* ಎಂದು,[10] 15ನೆಯ ಶತಮಾನದ ಶಾಸನಗಳು[11] ನಾಡು ಎಂದು ಇದನ್ನು ಗುರುತಿಸಿವೆ.

10ನೆಯ ಶತಮಾನದಲ್ಲಿ ಕೊರೆದ ಗೊಮ್ಮಟ ಮಹಾವಿಗ್ರಹದಿಂದ ಮತ್ತೊಂದು ಹೆಸರನ್ನು ಈ ಕೇಂದ್ರ ಪಡೆದುಕೊಂಡಿತು. *ಪೆರ್ಗ್ಗಳ್ಬಪ್ಪು* ಎಂದು 8ನೆಯ ಶತಮಾನದ ಶಾಸನಗಳಲ್ಲಿ ಹೆಸರಿಸಲಾದ ದೊಡ್ಡಬೆಟ್ಟವನ್ನು[12] ಮಹಾವಿಗ್ರಹ ನಿರ್ಮಾಣವಾದ ನಂತರ, *ಗೊಮ್ಮಟ ತೀರ್ಥ* ಅಥವಾ *ಗೊಮ್ಮಟಪುರ*[13] ಎಂದು ಸಂಬೋಧಿಸಲಾಯಿತು. 19ನೆಯ ಶತಮಾನದ ಕೆಲವು ಶಾಸನಗಳಲ್ಲಿ ಅದನ್ನು *ದಕ್ಷಿಣ ಕಾಶಿ*ಯೆಂದೂ ಗುರುತಿಸಲಾಯಿತು.[14] ಕನ್ನಡ ಕವಿಗಳಾದ ದೇವರಾಜ (ಸುಮಾರು 15ನೆಯ ಶತಮಾನ), ಪಂಚಬಾಣ (1614) ಮತ್ತು ಚಿದಾನಂದ ಕವಿ (1680) ಈ ಕೇಂದ್ರವನ್ನು ಅನುಕ್ರಮವಾಗಿ *ಸೀತಾತಟಾಕ, ಅಭಿನವ ಪೌದನಪುರ* ಮತ್ತು *ಜಿನಗಿರಿ* ಎಂದು ವರ್ಣಿಸಿರುವರು.[15]

ಈ ಪವಿತ್ರ ಸ್ಥಳದ ಬೇರೆ ಬೇರೆ ಕೇಂದ್ರಗಳು ಗಳಿಸಿಕೊಂಡ ಮಹತ್ವದಿಂದ ಬೆಳ್ಗೊಳದ ಇತಿಹಾಸವು ಬೆಳೆಯುತ್ತಾ ಸಾಗಿತು. ಈಗ ಚಂದ್ರಗಿರಿ ಎಂದು ಕರೆಯಲಾಗುವ *ಕಟವಪ್ರವು* ಇಲ್ಲಿಯ ಎರಡು ಬೆಟ್ಟಗಳಲ್ಲಿ ಅತಿ ಚಿಕ್ಕದು. ಈ ಕಾರಣದಿಂದಾಗಿ ಇದಕ್ಕೆ ಚಿಕ್ಕಬೆಟ್ಟವೆಂಬ ಜನಪ್ರಿಯ ಹೆಸರು ಬಂತು. ಪ್ರಾಚೀನ ಕಾಲದ ಮುನಿಗಳ ಮತ್ತು ಸ್ವಯಂಪ್ರೇರಿತ ದೇಹ

---

8. ಬೆಳ್ಗೊಳದ ಮೂರು ಸಂಸ್ಕೃತೀಕೃತ ರೂಪಗಳಿಗಾಗಿ ನೋಡಿ - 77, 364 ಮತ್ತು 77.
9. 12ನೆಯ ಶತಮಾನದವೆಂದು ಗೊತ್ತುಪಡಿಸಿದ 343, 444, 571, 538, 344, 81, 476, 162, 457, 136 ಮತ್ತು ತರುವಾಯದ ಶತಮಾನಗಳ ಇತರ ಹಲವಾರು ಶಾಸನಗಳಲ್ಲಿ.
10. 1398 ರ 360, ಸುಮಾರು 15ನೆಯ ಶತಮಾನದ 473, 19ನೆಯ ಶತಮಾನದವೆಂದು ಗೊತ್ತುಪಡಿಸಲಾದ 486, 492 ಮತ್ತು 494. 19ನೆಯ ಶತಮಾನದಲ್ಲಿ ಅದನ್ನು ಬೆಳ್ಗೊಳ ಪಟ್ಟಣವೆಂತಲೂ ಕರೆಯಲಾಗುತ್ತಿತ್ತು.
11. 15ನೆಯ ಶತಮಾನದ 545 ಮತ್ತು 16ನೆಯ ಶತಮಾನದ 471.
12. 38.
13. ನೋಡಿ ಗೊಮ್ಮಟ ತೀರ್ಥವನ್ನು ಹೆಸರಿಸುವ 1173 ರ 565 ಮತ್ತು ಗೊಮ್ಮಟ ತೀರ್ಥವನ್ನು ಉಲ್ಲೇಖಿಸುವ 1159ರ 476 ಮತ್ತು 481, 12ನೆಯ ಶತಮಾನದ 344, 13ನೆಯ ಶತಮಾನದ 455 ಇತ್ಯಾದಿ.
14. 1856 ರ 486, 1857 ರ 494, ಇತ್ಯಾದಿ.
15. ಶಿರೂರ ಬಿ. ವ್ಹಿ., *ಶ್ರವಣ ಬೆಳ್ಗೊಳ: ರಾಜಕೀಯ, ಸಾಹಿತ್ಯಕ, ಸಾಂಸ್ಕೃತಿಕ ಮಹತ್ವ*, (ಧಾರವಾಡ, 1976), ಪು. 13.

ದಂಡನೆಕಾರರ 1139ರ ಶಾಸನವೊಂದು ಈ ನೆರೆಹೊರೆಯನ್ನು *ಕಬ್ಬಪ್ಪುನಾಡು* ಎಂದು ಕರೆದಿದ್ದರೂ ಅಂದಿನ *ಕಟವಪ್ರವು* ವಾಸಸ್ಥಳವಾಗಿರಲಿಲ್ಲವೆಂಬುದು ಸ್ಪಷ್ಟ. ಬೆಟ್ಟದ ಮೇಲೆ ಇಲ್ಲವೆ ಕೊಳ್ಳದಲ್ಲಿದ್ದ ಕೊಳದಿಂದಾಗಿ ಇದು *ವೆಳ್ಗೊಳ* ಅಥವಾ *ಬೆಳ್ಗೊಳ, ಶ್ವೇತ ಸರೋವರ, ಧವಳ ಸರಸ್,* ಇತ್ಯಾದಿ ಹೆಸರು ಪಡೆದುದು ನಿಜ; ಆದರೆ ಈ ಕೊಳದ ಸುತ್ತ ಬೆಳೆದ ಪಟ್ಟಣವು ಮಹತ್ವ ಪಡೆದುಕೊಂಡುದು 12ನೆಯ ಶತಮಾನದಿಂದ ಮಾತ್ರ. ಒಂದೇ ಒಂದು (15ನೆಯ ಶತಮಾನದ) ಶಾಸನದಲ್ಲಿ ಈ ಪಟ್ಟಣವನ್ನು '*ಧವಳ ಸರೋವರ ನಗರ*' ಎಂದು ಕರೆಯಲಾಗಿದೆ.[16] 8ನೆಯ ಶತಮಾನದ ಶಾಸನಗಳಲ್ಲಿ ಬರುವ ಬೆಳ್ಗೊಳದ ಉಲ್ಲೇಖವು 12ನೆಯ ಶತಮಾನಾನಂತರ ಕೊಳ್ಳದಲ್ಲಿ ಅಭಿವೃದ್ಧಿಗೊಂಡ ಪಟ್ಟಣವೆಂದೇ ಭ್ರಮಿಸಲಾಗದು. ಏಕೆಂದರೆ, *ಬೆಳ್ಗೊಳನಗರ* ಎಂಬ ಹೆಸರು 14ನೆಯ ಶತಮಾನದಿಂದ ಮಾತ್ರ ರೂಢಿಗೆ ಬಂತು.[17] 12ನೆಯ ಶತಮಾನದ ಆದಿಯಲ್ಲಿ *ತೀರ್ಥ* ಎಂದು ಗುರುತಿಸಲಾಗಿದ್ದು ಬೆಳ್ಗೊಳವನ್ನು ಮಾತ್ರ.[18] ಅದು 12-14 ನೆಯ ಶತಮಾನಗಳ ಕಾಲಾವಧಿಯಲ್ಲಿ ಪಟ್ಟಣವಾಗಿ ಅಭಿವೃದ್ಧಿಗೊಂಡು, 15ನೆಯ ಶತಮಾನದಲ್ಲಿ ಒಂದು ನಗರವಾಗಿ, ನಾಡಕೇಂದ್ರವಾಗಿ, ಪರಿವರ್ತನೆಗೊಂಡಿತು.[19]

ಈ ಪಟ್ಟಣ ಸ್ಥಾಪನೆಯ ಕಾಲದ ಸ್ಪಷ್ಟ ಸುಳಿವು ನಮಗಿನ್ನೂ ದೊರೆತಿಲ್ಲವಾದರೂ ಸುಮಾರು 12ನೆಯ ಶತಮಾನದಲ್ಲಿ ಈ ತೀರ್ಥ ಪ್ರದೇಶದಲ್ಲಿ ಯಾತ್ರಿಕರು ನೆಲೆ ನಿಲ್ಲಲು ಪ್ರಾರಂಭಿಸಿದರೆಂಬುದು ಸ್ಪಷ್ಟಗೊಂಡಿರುವುದು. 10ನೆಯ ಶತಮಾನದಲ್ಲಿ ದೊಡ್ಡಬೆಟ್ಟದ ಮೇಲೆ ಮಾಡಿಸಿದ ಗೊಮ್ಮಟ ಮಹಾವಿಗ್ರವು ಯಾತ್ರಿಗಳ ಮತ್ತು ಭಕ್ತರ ಚಿತ್ತಾಕರ್ಷಕ ಕೇಂದ್ರವಾಯಿತು. ಆದರಿಂದಾಗಿ, ಈ ಸಂಕೀರ್ಣಕ್ಕೆ ಹೊಸ ಹೆಸರುಗಳು ಪ್ರಾಪ್ತವಾದವು. ಆದರೂ 1173 ರಿಂದ ಆರಂಭಗೊಂಡ ಗೊಮ್ಮಟತೀರ್ಥ ಅಥವಾ ಗೊಮ್ಮಟಪುರ ಎಂಬ ಹೆಸರುಗಳು ಮುಂದೆ ಬಹುಕಾಲ ಬಳಕೆಯಲ್ಲಿ ಉಳಿಯಲಿಲ್ಲ. ಲಕ್ಷಾಂತರ ಪ್ರವಾಸಿಗಳನ್ನು ಆಕರ್ಷಿಸುತ್ತಿರುವ ಮಹಾವಿಗ್ರಹವು ಇಂದಿಗೂ ಪ್ರಮುಖ ಕೇಂದ್ರಬಿಂದುವಾಗಿದ್ದರೂ ಶ್ರವಣಬೆಳ್ಗೊಳದ ಇತಿಹಾಸದುದ್ದಕ್ಕೂ ಇದರ ಮಹತ್ವವನ್ನು *ಸಮಾಧಿಬೆಟ್ಟ* ಮತ್ತು *ಧವಳಸರಸ್*ಗಿಂತ ಗೌಣವೆಂದೇ ಪರಿಗಣಿಸಲಾಗಿದೆ.

ಸಮಾಧಿ ಬೆಟ್ಟ: ಭೂಮಿಗೊಂದು ಆಭರಣ : ದಾಖಲಿತ ಇತಿಹಾಸದ ಒಂದೂವರೆ ಸಹಸ್ರಮಾನ ಕಾಲದಿಂದ ದಿಗಂಬರ ಜೈನರ ಧಾರ್ಮಿಕ ಸ್ವಾಮ್ಯದಲ್ಲಿರುವ ಶ್ರವಣಬೆಳ್ಗೊಳದ


16. ಎ ಕ II, 1432 ರ 364.
17. 1398 ರ 360, 15ನೆಯ ಶತಮಾನದ 473 ಮತ್ತು 19ನೆಯ ಶತಮಾನದ 486, 492 ಮತ್ತು 494.
18. 1123ರ 162.
19. 15ನೆಯ ಶತಮಾನದ 545.

ಚರಿತ್ರೆಯು ಸ್ವಾರಸ್ಯಕರವಾಗಿದೆ. 600 ಕ್ಕಿಂತ ಮುಂಚಿನ ಇದರ ವಿವರಗಳು ಐತಿಹ್ಯದಲ್ಲಿ ಹುದುಗಿವೆ. ಈ ಸ್ಥಳವನ್ನು ಭದ್ರಬಾಹು ತಲುಪಿದಾಗ (ಕ್ರಿ. ಪೂ. 3ನೆಯ ಶತಮಾನ) ಅಥವಾ ಆ ಘಟನೆಯನ್ನು ಪುನಃ ಸ್ಮರಿಸಿದಾಗ (ಕ್ರಿ. ಶ. 600) ಶ್ರವಣಬೆಳ್ಗೊಳವು ನೆರೆಹೊರೆಯ ಗೃಹಸ್ಥರಿಗೆ ಎಳ್ಳಷ್ಟೂ ವಾಸಯೋಗ್ಯವೆನಿಸಿರಲಿಲ್ಲ. 'ಸುತ್ತೆಂಟು ನೂರು ಹಳ್ಳಿಗಳಿಂದ, ಸಂತೃಪ್ತ ಸಂಪದ್ಭರಿತ ಪ್ರಜೆಗಳಿಂದ, ಸುವರ್ಣ, ಧಾನ್ಯ ಮತ್ತು ಪಶು (ಹಸು, ಮಹಿಷ, ಆಡು, ಕುರಿ) ಸಂಪತ್ತಿನಿಂದ ತುಂಬಿದ್ದ' ಈ ನಾಡು ಉಜ್ಜೈನಿ ಸುತ್ತಲಿನ ಕ್ಷಾಮಪೀಡಿತ ಬರಡು ಪ್ರದೇಶಕ್ಕಿಂತ ತೀರ ಭಿನ್ನವಾಗಿತ್ತೇನೂ ನಿಜ; ಆದರೆ 'ವಿಸ್ತೃತ ಕಣಿವೆ, ಕೊಳ್ಳ, ಕಂದರು ಹಾಗೂ ಗುಹೆಗಳ' ನಡುವೆ ನಿಂತಿದ್ದ 'ಉನ್ನತ ಶಿಖರಗಳ ಪರ್ವತವಾದ' ಕಟವಪ್ರವು ಹೆಚ್ಚು ಕಡಿಮೆ ದುರ್ಗಮ ಪ್ರದೇಶವಾಗಿತ್ತು. ಈ 'ಬೆಟ್ಟದ ಕಪ್ಪುಶಿಲೆಗಳು ದೈತ್ಯಾಕಾರದ ಕಾರ್ಮೋಡಗಳನ್ನು ಹೋಲುತ್ತವೆ; ಅವು ಬಗೆ ಬಗೆಯ ಫಲಪುಷ್ಪ ವೃಕ್ಷಗಳ ಮಧ್ಯೆ ನಿಂತಿವೆ; ಕಗ್ಗಾಡು, ದುರ್ಗಮ ಗುಹೆ ಹಾಗೂ ಸಂದುಗೊಂದಿಗಳಿಂದೊಡಗೂಡಿದ ಈ ಪ್ರದೇಶವು ಹಿಂಡು ಹಿಂಡು ಕಾಡು ಹಂದಿ, ಚಿರತೆ, ಕತ್ತೆಕಿರುಬ, ಸರ್ಪ, ಜಿಂಕೆಗಳ ತಾಣಮಾತ್ರವಾಗಿತ್ತು'. ಜೀವದಂಜಿಕೆಯುಳ್ಳ ಯಾರನ್ನಾದರೂ ವಿಕರ್ಷಿಸುವ ಈ ಭಯವಿಸ್ಮಯಕಾರಕ ಪರಿಸರವು 'ಶೀತಶಿಲೆಯ ವಿಸ್ತಾರದ ಮೇಲೆ ದೇಹ'ವನ್ನು ದಂಡಿಸಿ, ಮರಣವನ್ನು ಆಹ್ವಾನಿಸುವವರಿಗೆ ಮಾತ್ರ 'ಭೂಮಿಗೊಂದು ಆಭರಣ' ವಾಗಿ ಕಂಡಿರಲು ಸಾಕು![20]


ಮರಣವೇ ಮಹಾನವಮಿ : 7ನೆಯ ಶತಮಾನದ ಅಂತ್ಯದ ಸುಮಾರಿಗಾಗಲೇ ಏಳುನೂರು ಪುಣ್ಯಪುರುಷರು ಕಟವಪ್ರದ ಶೀತಲ ಶಿಲೆಗಳ ಮೇಲೆ ಇಚ್ಛಾಮರಣ ಹೊಂದಿದ್ದರು.[21] ಅವರ ಹೆಸರನ್ನಾಗಲಿ ಅವರ ಗೌರವಾರ್ಥ ಮಾಡಿಸಿದ ಸ್ಮಾರಕಗಳನ್ನಾಗಲಿ ತಿಳಿಸಲಾಗಿಲ್ಲವಾದರೂ, ಸ್ವಯಂ ಪ್ರೇರಣೆಯಿಂದ ಜೀವವನ್ನು ಅಂತ್ಯಗೊಳಿಸುವವರಿಗೆ ಈ ಮರಣ ಬೆಟ್ಟವು ಅತ್ಯಂತ ಪ್ರೀತಿಯ ತಾಣವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ದೇಹದಂಡನೆಕಾರರೇ ಇತಿಹಾಸ ನಿರ್ಮಿಸಿದ ಇಂತಹ ಮತ್ತೊಂದು ಕೇಂದ್ರವು ಈ ಪ್ರಪಂಚದಲ್ಲೆಲ್ಲೂ ಇಲ್ಲ; ಈ ಎಲ್ಲಾ ಘಟನೆಗಳನ್ನು ಶಾಸನಗಳಲ್ಲಿ ಹುದುಗಿಸಿಟ್ಟಿರುವ ಚಿಕ್ಕಬೆಟ್ಟದಂತಹ ಇನ್ನೊಂದು ಬೆಟ್ಟವೂ ಈ ನಾಡಿನಲ್ಲಿ ಮತ್ತೊಂದಿಲ್ಲ. ಸಮಾಧಿ ಮರಣವನ್ನು ಸ್ಮರಿಸಿರುವ ಒಂದು ನೂರಕ್ಕಿಂತ ಹೆಚ್ಚು ಶಾಸನಗಳು ಇಂದಿಗೂ ಚಿಕ್ಕಬೆಟ್ಟದ ಮೇಲೆ ಉಳಿದುಕೊಂಡಿವೆ. ದೇಹದಂಡನೆ ವ್ರತಾಚರಣೆಯ ವೈವಿಧ್ಯತೆ ಹಾಗೂ ವಿಪುಲತೆಯಿಂದಾಗಿ ಇದನ್ನೊಂದು ಮಾನವ ಇತಿಹಾಸದ ಅದ್ಭುತ ಹಾಗೂ ಅತಿಶಯ ಕೇಂದ್ರವೆನಿಸಿದೆ.[22]

---

20. 1, 134.
21. ಅದೇ.
22. ಇವುಗಳಲ್ಲಿ 18 ಸ್ವಲ್ಪ ಅಸ್ಪಷ್ಟವಾಗಿವೆ. ಚಿಕ್ಕಬೆಟ್ಟದ ಮೇಲಿನ ನಿದರ್ಶನಗಳಲ್ಲದೆ, ಇನ್ನೂ ಕೆಲವರು ದೊಡ್ಡಬೆಟ್ಟದ ಮೇಲೆ, ಪಟ್ಟಣದಲ್ಲಿ ಮತ್ತು ನೆರೆಯ ಗ್ರಾಮಗಳಲ್ಲಿ ಮರಣವನ್ನು ಆಹ್ವಾನಿಸಿದರು.




1. ಕಟವಪ್ರ, ಪೆರ್ಗ್ಗಳ್ವಪ್ಪು ಮತ್ತು ಬೆಳ್ಗೊಳದ ಸ್ಥಳವಿನ್ಯಾಸ.



2. ಶ್ರೀಪುಷ್ಪಣಂದಿಯ ನಿಸಿಧಿಗೆ (ಸು. 8ನೆಯ ಶತಮಾನದ 95)



3. ಶ್ರೀ ಬಲದೇವಾಚಾರ್ಯನ ಪಾವುಗ್ಗಮಣ (ಸು. 8ನೆಯ ಶತಮಾನದ 92)



4. ಚಂದ್ರದೇವಾಚಾರ್ಯನು ಶಿವನಿಲೆಯನ್ನು ಮುಟ್ಟಿದ ಸ್ಥಾನ (ಸು. 7ನೆಯ ಶತಮಾನದ 94)

10ನೆಯ ಶತಮಾನದ ಅಂತ್ಯದಲ್ಲಿ ದೊಡ್ಡಬೆಟ್ಟದ ಮೇಲೆ ಜರುಗಿದ ಅಸಾಧಾರಣ ಘಟನೆಯೊಂದನ್ನು ಬಿಟ್ಟರೆ, ಈ ಸಹಸ್ರಮಾನದ ದ್ವಿತೀಯಾರ್ಧದುದ್ದಕ್ಕೂ (600-1100) ಇತಿಹಾಸವನ್ನು ನಿರ್ಮಾಣ ಮಾಡಿದ್ದು ಕಟವಪ್ರವೆಂದೇ ಹೇಳಬೇಕು. ಈ ಇತಿಹಾಸವನ್ನು ರೂಪಿಸಿದವರು ಅಸಾಮಾನ್ಯ ಶೂರರಾದ ಆಳರಸರಲ್ಲ; ಅಸಹಾಯಕರು ಮಾತ್ರವಾದ ಅಜ್ಞಾತ ಶ್ರಮಣರು, ಕಂತಿಯರು. ಇವರು ದೇಹದಂಡನೆಯನ್ನೇ ಸಾಧನವನ್ನಾಗಿಸಿಕೊಂಡು, ಲೌಕಿಕ ಆಸೆ-ಆಮಿಷಗಳ ವಿರುದ್ಧ ಸೆಣಸಿ, ಸಾವಿನ ಮಾರ್ಗವನ್ನು ಸಿದ್ಧಿಸಿಕೊಂಡು, ಇತಿಹಾಸ ನಿರ್ಮಾಣಮಾಡಿದರು. ಈ ಶ್ರಮಣರೆಲ್ಲ ಅನಾಮಧೇಯ ವ್ಯಕ್ತಿಗಳಾಗಿದ್ದು, ಇಹಲೋಕದ ಯಾವ ಸಾಧನೆಯೂ ಸ್ಮರಣೆಗೆ ಅರ್ಹವಾದುದಲ್ಲ ಎಂದು ನಂಬಿದ್ದರು. ಹೀಗಾಗಿ, ಅವರು ತಮ್ಮ ಬಗ್ಗೆ ಏನನ್ನೂ ಹೇಳಿಕೊಂಡಿಲ್ಲ. ಅವರಲ್ಲಿ ಬಹುತೇಕರು ಸಮಾಜದೊಂದಿಗಾಗಲಿ, ಸಂಘದೊಂದಿಗಾಗಲಿ, ನಿಕಟ ಸಂಪರ್ಕವಿಟ್ಟುಕೊಂಡಿರಲಿಲ್ಲ. ತಮ್ಮ ಉನ್ನತ ಆಧ್ಯಾತ್ಮಿಕ ವಂಶಾವಳಿಯನ್ನಾಗಲಿ, ಸುದೀರ್ಘವಾದ ಶಿಷ್ಯ ಪರಂಪರೆಯನ್ನಾಗಲಿ, ಅವರು ನೀಡಲಿಚ್ಛಿಪಡಲಿಲ್ಲ. ಕಟವಪ್ರದ ಭೀಕರ ಪರಿಸರವನ್ನು ಎದುರಿಸಿ, ಹಸಿವೆ, ಪ್ರಕೃತಿಯ ವಿಕೋಪ ಮತ್ತು ಹಿಂಸ್ರ ಪಶುಗಳ ದಾಳಿಗಳನ್ನು ಸರಾಗವಾಗಿ ಸಹಿಸಿದ ಇವರಿಗೆ ಮರಣವನ್ನು ಆಹ್ವಾನಿಸುವುದೇ ಅಂತಿಮ ಗುರಿಯಾಗಿತ್ತು. ಇದರಿಂದಾಗಿ ಅವರು ಯಾವುದಕ್ಕೂ ಅಂಜುವ ಕಾರಣವಿಲ್ಲದವರಾಗಿದ್ದರು.

ಸಂಘಗಳ ಪಾತ್ರ : ಹಗಲಿನಲ್ಲಿ ಅಗ್ನಿ, ರಾತ್ರಿಯಲ್ಲಿ ಹಿಮವಾಗುತ್ತಿದ್ದ ವಿಸ್ತಾರವಾದ ತಳಬಂಡೆಯು ಈ ಶ್ರಮಣರಿಗೆ ಧ್ಯಾನಸ್ಥಲ ಹಾಗೂ ವಿಶ್ರಾಮತಲ್ಪವೆನಿಸಿತ್ತು. ಮರಣಾರ್ಥಿಗಳ ಜೀವನದ ಅಂತಿಮ ಗಳಿಗೆಯಲ್ಲಿ ಶಿಷ್ಯನೊಬ್ಬ ಅವರೊಡನಿದ್ದು ಅವರ ಸೇವೆ ಮಾಡಿರಲು ಸಾಧ್ಯ. ಮರಣಹೊಂದಿದ ಗುರುವಿನ ಬಗ್ಗೆ ಸಂಕ್ಷಿಪ್ತ ಶಾಸನ ಕೆತ್ತುವ ಮೂಲಕ ಮೃತರನ್ನು ಗೌರವಿಸಿ ಇಂತಹ ಶಿಷ್ಯರು ಬಹುತೇಕ ಸಂತೃಪ್ತರಾಗುತ್ತಿದ್ದರು. ಚಿಕ್ಕಬೆಟ್ಟದ ಮೇಲೆ ಹೀಗೆ ಸ್ಮರಣೆಗೊಳಗಾದವರಲ್ಲಿ ಸುಮಾರು ಮೂವತ್ತು ಶ್ರಮಣರು ತಮ್ಮ ಸಂಘಗಳನ್ನೂ ಗುರುತಿಸಿಕೊಳ್ಳುವ ಗೋಜಿಗೆ ಹೋಗಿಲ್ಲ. ಕೆಲವರು ಮಾತ್ರ ತಮ್ಮ ಗುರುಗಳನ್ನು, ಸಂಘಗಳನ್ನು, ನೆನಪಿಗೆ ತಂದುಕೊಂಡಿರುವುರು.[23] ಕಿತ್ತೂರು, ಕೊಳಾತ್ತೂರು, ಶ್ರೀಸಂಘ, ಶ್ರೀಸಂದ್ವಿಗ್ನಸಂಘ, ನವಿಲೂರು ಅಥವಾ ಮಯೂರಗ್ರಾಮ ಸಂಘಗಳು ಸಮಾಧಿಮರಣವನ್ನು ಅನುಮೋದಿಸಿ, ಪ್ರೋತ್ಸಾಹಿಸಿದ, ಅತ್ಯಂತ ಪ್ರಾಚೀನ ಸಂಘಗಳಾಗಿವೆ. ಇಂಥಹ ಸುಮಾರು ಹತ್ತು

ನಿಶ್ಚಿತ ಮತ್ತು ಕೆಲಮಟ್ಟಿಗೆ ಅನಿಶ್ಚಿತ ಮರಣಗಳ ಶಾಸನಗಳ ಸಮಗ್ರ ಚಿತ್ರಕ್ಕಾಗಿ ನೋಡಿ - ಅನುಬಂಧ 1.

23. ಕನಕಸೇನ, ಬಲದೇವಮುನಿ (ಎ ಕ II, 2), ಆಚಾರ್ಯ ಅರಿಷ್ಟನೇಮಿ (13), ಚರಿತಶ್ರೀ (14), ಸರ್ವಜ್ಞ ಭಟ್ಟಾರಕ (15), ಗಣದೇವ (16), ಮಾಸೇನ (130), ಗುಣಭೂಷಿತ (32), ಶಾಂತಿಸೇನಮುನಿ (34), ಇತ್ಯಾದಿ ಗಮನಯೋಗ್ಯವಾಗಿವೆ.

ನಿದರ್ಶನಗಳಲ್ಲಿ ಮೂರನ್ನುಳಿದು ಉಳಿದೆಲ್ಲವೂ ನವಿಲೂರು ಮತ್ತು ಕೊಳಾತ್ತೂರು ಸಂಘಗಳಿಗೆ ಸೇರಿವೆ.[24] ಕಾಯಕ್ಲೇಶ ವ್ರತ ಕೈಗೊಂಡವರಲ್ಲಿ ತಮ್ಮ ಸಂಘಗಳನ್ನು ಹೆಸರಿಸದೆ ತಮ್ಮ ಗುರುಗಳನ್ನು ಮಾತ್ರ ಸ್ಮರಿಸಿರುವವರಲ್ಲಿ ಬಲದೇವ, ಉಗ್ರಸೇನ, ಪರ್ಜೆಡಿ ಮತ್ತು ನಾಗಸೇನ ಪ್ರಮುಖರಾಗಿರುವರು.[25]

7-11ನೆಯ ಶತಮಾನಗಳ ಕಾಲಾವಧಿಯಲ್ಲಿ ಈ ಬೆಟ್ಟದ ಮೇಲೆ ಮರಣಾಂತಿಕ ದೇಹದಂಡನೆ ಕೈಕೊಂಡ ಕಂತಿಯರು ತಮ್ಮ ತಮ್ಮ ಸಂಘವನ್ನು ಇಲ್ಲವೆ ಗುರುವನ್ನು ಅವಶ್ಯಕವಾಗಿ ಸ್ಮರಿಸಿರುವರು. ಕೊಳಾತ್ತೂರು ಸಂಘದ ಒಬ್ಬರನ್ನು ಹೊರತುಪಡಿಸಿ,[26] ಈ ಎಲ್ಲ ಕಂತಿಯರು ನವಿಲೂರು ಸಂಘದವರಾಗಿದ್ದರೆಂದು ಕಂಡುಬರುವರು.[27] ಅವರಲ್ಲೊಬ್ಬಳು ಇದರ ಅಜಿಗಣದೊಂದಿಗೆ,[28] ಇನ್ನೊಬ್ಬಳು(?) ಸಂದ್ವಿಗ್ನಗಣದೊಂದಿಗೆ ಗುರುತಿಸಿಕೊಂಡಿರುವಳು.[29] ಮಿಕ್ಕವರಾರೂ ತಮ್ಮ ಸಂಘಗಳ ಉಪಶಾಖೆ(ಗಣ)ಗಳನ್ನು ಹೆಸರಿಸಿಲ್ಲ. ನವಿಲೂರು ಸಂಘದಂತೆ, ಶ್ರೀಸಂಘವೂ ಈ ಕಾಲಕ್ಕಾಗಲೇ ಹಲವು ಶಾಖೆಗಳನ್ನು ಹೊಂದಿದ್ದು ಅದರಲ್ಲಿ ಶ್ರೀಪೂರಾನ್ವಯ ಒಂದಾಗಿತ್ತೆಂದು ತೋರುವುದು.[30]

ಸಂಘವನ್ನು ಬಿಟ್ಟು ಗುರುಗಳನ್ನು ಮಾತ್ರ ಸ್ಮರಿಸಿದ ಹಲವು ನಿದರ್ಶನಗಳಿವೆ. ಇಂಥವರಲ್ಲಿ ನಾಗಮತಿ ಗಂತಿಯೆಂಬವಳು ಚಿತ್ತೂರಿನ ಮೋನಿಗುರುವಡಿಗಳ ಶಿಷ್ಯೆಯಾಗಿದ್ದರೆ,[31] 8ನೆಯ ಶತಮಾನದ ಧಣ್ಣೆಕುಟ್ಟಾರೆವಿ ಗುರವಿಯು ಪೆರುಮಾಳು ಗುರುವಡಿಯ ಶಿಷ್ಯೆಯಾಗಿದ್ದಳು,[32] ಸುಮಾರು 10ನೆಯ ಶತಮಾನದ ಸಾಯಿಬ್ಬೆ ಕಂತಿಯು ಕುಮಾರಣಂದಿ ಭಟಾರಕರ ಶಿಷ್ಯೆಯಾಗಿದ್ದಳು.[33]

ಕಂತಿಯರು ತಮ್ಮ ಗುರವಿಯರ ಬಗ್ಗೆ ಹೆಚ್ಚು ವಿವರ ಕೊಡುವುದಿಲ್ಲ. ಪೊಲ್ಲಬ್ಬೆ

---

24. ಕಿತ್ತೂರು ಸಂಘ (91), ಶ್ರೀಸಂಘ (134), ಕೊಳತ್ತೂರು ಸಂಘ (91, 104, 108), ಸಂದ್ವಿಗ್ಗ ಗಣ(?) (32), ನವಿಲೂರು (ಮಯೂರ ಗ್ರಾಮ ಎಂತಲೂ ಕರೆಯಲಾಗುವ)ಸಂಘ (117, 118, 121, 123, 124 , ಇತ್ಯಾದಿ).
25. 27, 28, 36, 37, ಇತ್ಯಾದಿ.
26. 111. ಈ ಹೆಸರು ಬಿಟ್ಟು ಹೋಗಿದೆ.
27. 112, 113, 122, 129, 132. ಶಾಸನಗಳಲ್ಲಿ ಅದನ್ನು ನವಿಲೂರು, ನವಿಲೂರ್ವ್ವರ, ನವಿಲ್ವರ, ನಮಿಲೂರು, ಮಯೂರಗ್ರಾಮ ಸಂಘ, ಎಂದು ಕರೆಯಲಾಗಿದೆ.
28. 112.
29. 32.
30. 134.
31. 7ನೆಯ ಶತಮಾನದ 23.
32. 9.
33. 168

ಕಂತಿಯಳ ಶಿಷ್ಯೆಯಾದ ಸಾಯಿಬ್ಬೆಯ ಬಗ್ಗೆ ಮಾತ್ರ ನಮಗೆ ಸ್ವಲ್ಪ ವಿವರ ದೊರೆಯುವುದು. ತನ್ನ ಗುರುವಿನ ಸಮಾಧಿಮರಣ ನಿಮಿತ್ತ ಸ್ಮಾರಕ ನಿರ್ಮಿಸಿ, ಸುಮಾರು 11ನೆಯ ಶತಮಾನದಲ್ಲಿ ಒಂದು ಶಿಲಾಶಾಸನವನ್ನು ಇವಳು ಕೆತ್ತಿಸಿದಳೆಂದು ತಿಳಿಸಲಾಗಿದೆ.[34]

7-9 ನೆಯ ಶತಮಾನಗಳಲ್ಲಿ ಕಟವಪ್ರದ ಮೇಲೆ ಮರಣವನ್ನಪ್ಪಿದ್ದ ಶ್ರಮಣರು ಯಾವ ಸಂಘಕ್ಕೆ ಸೇರಿದ್ದರು ಮತ್ತು ಯಾವಾಗ ಸಂಘದಿಂದ ಅವರು ಬೇರ್ಪಟ್ಟರು ಎಂಬುದರ ವಿವರ ದೊರೆಯುವುದಿಲ್ಲ. ಇವರಲ್ಲಿ ಅನೇಕರು ತಮ್ಮ ಗುರುಗಳನ್ನಾಗಲೀ ಶಿಷ್ಯರನ್ನಾಗಲೀ ಹೆಸರಿಸುವುದಿಲ್ಲ; ಇದಕ್ಕೆ ಭಿನ್ನವಾಗಿ ಕಂತಿಯರೆಲ್ಲ ತಮ್ಮ ಸಂಘ ಇಲ್ಲವೆ ಗುರುವಿನೊಂದಿಗೆ ಅವಶ್ಯಕವಾಗಿ ಗುರುತಿಸಿಕೊಂಡಿರುವರು. ಇವೆರಡನ್ನೂ ಒಟ್ಟಿಗೆ ಗರುತಿಸುವ ಗೋಜಿಗೆ ಅವರೂ ಹೋಗುವುದಿಲ್ಲ. ಅಲ್ಲದೆ, ಶಿಷ್ಯರ ಹೆಸರುಗಳು ಉಲ್ಲೇಖಾರ್ಹವೆಂದು ಅವರಿಗೆ ಕಂಡುಬರಲಿಲ್ಲವೆಂದು ತೋರುವುದು. ಮೊದಮೊದಲು, ನವಿಲೂರು ಮತ್ತು ಕೊಳಾತ್ತೂರು ಸಂಘಗಳ ಸದಸ್ಯರನ್ನೇ ಅಧಿಕ ಸಂಖ್ಯೆಯಲ್ಲಿ ಕಟವಪ್ರವು ಆಕರ್ಷಿಸಿತೆಂದು ಕಾಣುವುದು, ಆದರೆ, ಕಿತ್ತೂರು ಮತ್ತು ಶ್ರೀಸಂಘಗಳ ಕನಿಷ್ಠ ಒಬ್ಬೊಬ್ಬ ಸದಸ್ಯನು ತನ್ನ ಜೀವಿತಾಂತ್ಯವನ್ನು ಸಾಧಿಸಲು ಈ ಬೆಟ್ಟಕ್ಕೆ ಬಂದ ನಿದರ್ಶನಗಳುಂಟು. 8ನೆಯ ಶತಮಾನದ ನಂತರದ ಶಾಸನಗಳಲ್ಲಿ ಈ ಸಂಘದ ಸದಸ್ಯರಾರೂ ಇಲ್ಲಿ ಕಂಡು ಬರುವುದಿಲ್ಲ. ವ್ಯಕ್ತಿಗತವಾಗಿ ಕಾಯಕ್ಲೇಶ ವ್ರತವನ್ನು ಶ್ರಮಣರು ಮುಂದುವರಿಸಿದರೂ ಈ ಸಂಘದ ಸದಸ್ಯರು ಕಟವಪ್ರದಿಂದ ದೂರ ಸರಿದು, ದೇಹದಂಡನೆಯಂತಹ ಕಠಿಣ ಸಾಧನೆಯನ್ನು ಕೈಬಿಟ್ಟರೆಂದು ತೋರುವುದು.

ಭಾವೋದ್ವಿಗ್ನತೆ, ಅಹಂಕಾರ, ವಕ್ರಬುದ್ಧಿಗಳಿಂದ ವಿಮುಕ್ತರಾದವರು : ಆರಂಭಕಾಲದ ಶ್ರಮಣರ ಆಧ್ಯಾತ್ಮಿಕ ಜೀವನವು ಆ ನಂತರ ಕಾಲದವರ (11ನೆಯ ಶತಮಾನದ) ಜೀವನ ವಿಧಾನಕ್ಕಿಂತ ತೀರ ಭಿನ್ನವಾಗಿತ್ತು. ಮೊದಲ ಘಟಕದ ಶ್ರಮಣರು ಸಮಸ್ತ ಲೌಕಿಕ ವ್ಯಾಪಾರಗಳಿಂದ ಎಷ್ಟೊಂದು ನಿರ್ಲಿಪ್ತರಾಗಿದ್ದರೆಂದರೆ, ಅಗಲಿ ಬಂದಿದ್ದ ಸಂಘವನ್ನಾಗಲಿ ಅಥವಾ ಗುರುವನ್ನಾಗಲಿ ಉಲ್ಲೇಖಿಸುವ ಗೋಜಿಗೂ ಅವರು ಹೋಗುವುದಿಲ್ಲ. ಅಂದರೆ ಸಂಘದ ಸೂತ್ರಗಳನ್ನು ಕೈಬಿಟ್ಟು, ಮರಣವನ್ನರಸುವ ತಮ್ಮವೇ ಸೂತ್ರಗಳನ್ನು ಸ್ವತಃ ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವರು ಪಡೆದಿದ್ದರೆಂದು ಇದರರ್ಥವಲ್ಲ; ಅವರು ಕಠಿಣತಮವಾದ ಆಚಾರ ಸಂಹಿತೆಯ ಪಾಲನೆಯಲ್ಲಿಯೇ ನಿರತರಾಗಿದ್ದರೆಂಬುದರಲ್ಲಿ ಅನುಮಾನವಿಲ್ಲ. ಉದಾಹರಣೆಗೆ, 7ನೆಯ ಶತಮಾನದ ಮಾಸೇನ ಋಷಿಯು ತನ್ನ ಸಂಘ ಇಲ್ಲವೆ ಗುರುವಿನ ಹೆಸರನ್ನು ಉಲ್ಲೇಖಿಸದಿದ್ದರೂ 'ಸಂಗಂಗಳಪೇಟ್ದು ಸಿದ್ಧಸಮಯನ್ತಪ್ಪಾದೆ ನೋನ್ತು' ಮರಣವನ್ನಪ್ಪಿದನೆಂದು ಸ್ಪಷ್ಟ ಪಡಿಸಿಕೊಂಡಿರುವನು.[35]

---

34. 203.
35. 30.

ಭಾವೋದ್ವಿಗ್ನತೆ, ಅಹಂಕಾರ ಮತ್ತು ವಕ್ರಬುದ್ಧಿಗಳಿಂದ ಮುಕ್ತಗೊಳಿಸಿಕೊಳ್ಳಬೇಕಾದುದು ಕಾಯಕ್ಲೇಶದಲ್ಲಿ ತೊಡಗಿದವನ ಮೂಲ ಗುರಿಗಳಾಗಿದ್ದವು. ಆರಂಭಕಾಲದ ಶ್ರಮಣರಲ್ಲಿ ಅನೇಕರು ತಮ್ಮ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸಿದ್ಧಿಗಳಿಗೆ ಮಾನ್ಯತೆ ದೊರೆಯಬೇಕೆಂದು ಬಯಸಲಿಲ್ಲ. ತಮ್ಮ ಮತಕ್ಕೆ, ಸಂಘಕ್ಕೆ ಮತ್ತು ಧಾರ್ಮಿಕ ಸಮುದಾಯಕ್ಕೆ ಸಲ್ಲಿಸಿದ ಸೇವೆಯನ್ನು ಯಾರಾದರೂ ಸ್ಮರಿಸಬೇಕೆಂದೂ ಅವರು ಬೇಡಲಿಲ್ಲ. ಅವರನ್ನು ಮರಣೋತ್ತರವಾಗಿ ಗೌರವಿಸಿದವರು ಸಹ ಮೃತರ ಸರಳ, ಉತ್ಪ್ರೇಕ್ಷೆರಹಿತ ಮತ್ತು ಸತ್ಯಸಂಗತಿಗಳನ್ನೊಳಗೊಂಡ ಸಾಧನೆಗಳನ್ನು ಮಾತ್ರ ಸ್ಮರಿಸಿದರು. ವೃಷಭಣಂದಿಯನ್ನು 'ತಪೋ ಜ್ಞಾನಾಬ್ಧಿ ಪಾರಗಃ' ಎಂದು ಮಾತ್ರ ಹೇಳಲಾಗಿದ್ದರೆ, ಉಪವಾಸಪರ ಗುರುವನನ್ನು ರಾಗದ್ವೇಷಗಳನ್ನು ಜಯಿಸಿ, 'ವಿದಾಯಸಲಿಲ' ದಿಂದ ತನ್ನನ್ನು ಪರಿಶುದ್ಧಗೊಳಿಸಿಕೊಂಡು ತಪಧ್ಯಾನಗಳನ್ನು ಸಾಧಿಸಿಕೊಂಡವನೆಂದು ವರ್ಣಿಸಲಾಗಿದೆ.[36]

ಈ ಕಾಲದ ಶ್ರಮಣರು ಇಹದಲ್ಲಿ ಅನುಭವಿಸಲು ಯೋಗ್ಯವಾದ ಯಾವ ಸುಖ-ಸಂಪತ್ತನ್ನೂ ಕಾಣಲಿಲ್ಲ. ಪರದಲ್ಲಿ ಮಾತ್ರ ಅವರು ಎಲ್ಲವನ್ನೂ ಕಂಡಕೊಂಡರು. "ಇಲ್ಲಿ, ಇಹದಲ್ಲಿ, ಪಡೆಯಲೇನುಂಟು?" ಎಂದು ಪ್ರಶ್ನಿಸಿಕೊಂಡವನೊಬ್ಬ "ತಪದ ಮೂಲಕ ಪ್ರತಿಯೊಂದು ಸುಖ ಪ್ರಾಪ್ತವಾಗುವುದು," ಎಂಬ ತೀರ್ಮಾನಕ್ಕೆ ಬಂದಿದ್ದ. ಅವರಲ್ಲಿ ಕೆಲವರು "ಪ್ರಾಣಿಗಳಿಗೆಲ್ಲ ದಯಾಸಾಗರ" ರಾಗಿದ್ದರೆ,[37] ಇನ್ನು ಕೆಲವರು "ಅಪಾರ ಅಜ್ಞಾನ ಮತ್ತು ಪಂಚೇಂದ್ರಿಯಗಳನ್ನು" ಜಯಸಿದವರಾಗಿದ್ದರು.[38] ಕೆಲವರು (ತಪ ಅಥವಾ ದೇಹದಂಡನೆಯ) ವಿದ್ಯೆಯಲ್ಲಿ ಪಾರಂಗತರಾಗಿದ್ದರೆ,[39] ಮತ್ತೆ ಕೆಲವರು "ಕಾಯಕ್ಲೇಶದಿಂದ ಸಂಯಮ, ಸದ್ಗುಣ, ಉದಾರತ್ವ, ಶ್ರದ್ಧೆ ಮತ್ತು ಪಾಂಡಿತ್ಯ" ಪಡೆದವರಾಗಿದ್ದರು.[40] ತನ್ನನ್ನು ತಾನು ಧ್ಯಾನಕ್ಕೆ ಸಮರ್ಪಿಸಿಕೊಂಡ ಈಶಾನಪರಮೇಷ್ಠಿಯು ಇತರೆಲ್ಲ ಜ್ಞಾನಕ್ಕಿಂತ ಮಿಗಿಲಾದ ಪರಿಪೂರ್ಣ ಜ್ಞಾನವನ್ನು ಸಂಪಾದಿಸಿದ್ದ.[41] ಪರಿಶುದ್ಧ ನಡತೆ ಮತ್ತು ಸದ್ಗುಣಗಳಿಂದ ರಜನೀಮತಿಗಂತಿಯು "ಪುಣ್ಯವಂತರನ್ನೆಲ್ಲ" ಮೀರಿಸಿದ್ದಳು.

ಮಾಂತ್ರಿಕಶಕ್ತಿ, ವಾಗ್ಮಿತೆ, ವಾದ ಕಲೆ, ಸಂಪತ್ತು, ಮತ್ತು ರಾಜಾನುಯಾಯಿಗಳನ್ನು ಗಳಿಸಿಕೊಳ್ಳುವ ಚಾತುರ್ಯ, ಸಂಘಸಂಸ್ಥೆಗಳಿಗೆ ಲೌಕಿಕ ಶಿಷ್ಯರನ್ನು ಮತ್ತು ದಾನದತ್ತಿಗಳನ್ನು ಆಕರ್ಷಿಸುವ ನೈಪುಣ್ಯತೆ, ಮುಂತಾದವು ಈ ಕಾಲದ ದಾಖಲೆಗಳಲ್ಲಿ ಬಹಳ ಅಪರೂಪ. 7ನೆಯ ಶತಮಾನದಲ್ಲಿ ಶ್ರಮಣ ಚರಿತಾಶ್ರೀಯನ್ನು ಮಾತ್ರ "ಹುಸಿ ಸಿದ್ಧಾಂತಗಳು ಮೂರ್ಖ

36. 85.
37. 2.
38. 14.
39. 26.
40. 86.
41. 91.



5. ನಂದಿಸೇನಮುನಿಯ ಸನ್ಯಸನ ಮರಣ (ಸು. 7ನೆಯ ಶತಮಾನದ 98)



6. ಮುನಿಶಾಂತಿಸೇನನು ಜೀವನ್ಮುಕ್ತನಾದ ಸ್ಥಾನ (ಸು. 7ನೆಯ ಶತಮಾನದ 34)

ರಾಜ ದಾಂಡಿಗನನ್ನು ತುಂಡರಿಸಿದ''[42] ವನೆಂದು (*ಮಿಥ್ಯಾತ್ವ ಪ್ರಮೋಢ ಸ್ಥಿರತರ ನೃಪನಾನ್ಮೆಟ್ಟಿ*) ವರ್ಣಿಸಲಾಗಿದೆ. ಋಷಭಸೇನ ಗುರವಡಿಗಳ ಶಿಷ್ಯನಾದ ನಾಗಸೇನನೊಬ್ಬ 'ಅರಿಮಂಡಲ' ವನ್ನು ಗೆಲ್ಲಲೋಸುಗ 'ರಾಜಪೂಜ್ಯ'ನಾದ ನಾಗನಾಯಕನೆಂಬ ಲೌಕಿಕನ ನೆರವನ್ನು ಕೋರಿದನೆಂದು ಕಂಡುಬಂದಿದೆ.[43] ಇಲ್ಲಿ ಉಲ್ಲೇಖಿಸಲಾದ ಹುಸಿ ಸಿದ್ಧಾಂತಿಗಳು ಹಾಗೂ ಶತ್ರುಗಳು ಜೈನೇತರರಾಗಿದ್ದರೋ[44] ಅಥವಾ ಆಂತರಿಕ ಪಾಖಂಡಿಗಳಾಗಿದ್ದರೋ ಎಂಬುದನ್ನು ಊಹಿಸಿ ಮಾತ್ರ ಗ್ರಹಿಸಬೇಕಾಗಿದೆ. ಆದರೆ ಈ ಶಾಸನಗಳಲ್ಲೆಲ್ಲೂ ಹಿಂದೂ ಮತ್ತು ಬೌದ್ಧ ಪಂಥಗಳನ್ನು ನೇರವಾಗಿ ಪ್ರಸ್ತಾಪಿಸಲಾಗಿಲ್ಲ. ಭದ್ರಬಾಹು ಮತ್ತು ಚಂದ್ರಗುಪ್ತರ ನಂತರ ಕೆಲಮಟ್ಟಿಗೆ ದುರ್ಬಲಗೊಂಡಿದ್ದ ಧರ್ಮವನ್ನು, ಶಾಂತಿಸೇನರಂಥ ಶ್ರಮಣರು ಪುನಶ್ಚೇತನಗೊಳಿಸಿದರೆಂದು ಕಂಡುಬರುವುದು. ಧರ್ಮಪ್ರಚಾರ ಕೈಕೊಂಡಾಗಲಿ ಅಥವಾ ವರ್ಚಸ್ವಿ ಅನುಯಾಯಿಗಳನ್ನು ಒಲಿಸಿಕೊಂಡಾಗಲಿ ಅವರಿದನ್ನು ಸಾಧಿಸದೆ, ಉನ್ನತ ಆಧ್ಯಾತ್ಮಿಕ ಜೀವನದ ಮೆಲ್ಪಂಕ್ತಿಯನ್ನು ಸಮಾಜದಲ್ಲಿ ಹಾಕುವ ಮೂಲಕ ಅದನ್ನು ಸಾಧಿಸಿದರೆಂದು ಭಾವಿಸಬಹುದು.[45]

ಸಂಕ್ರಮಣ ಕಾಲ (900-1100) ಸರಳತೆಯ ಸವೆತ: ನಿರ್ಭಯರಾಗಿ ಮರಣವನ್ನು ಆಹ್ವಾನಿಸುವ ಸರಳ ಆಧ್ಯಾತ್ಮಿಕ ಜೀವನವು 900ರ ನಂತರ ಕಟವಪ್ರದ ಮೇಲಿನ ಬೆಳವಣಿಗೆಗಳಿಂದಾಗಿ ಕ್ರಮೇಣ ಸವೆತಕ್ಕೊಳಗಾಗ ತೊಡಗಿತು. ಈ ಅಪಗಮನದ ಪ್ರಥಮ ಗುರುತು 10ನೆಯ ಶತಮಾನದಲ್ಲಿ ಸ್ಪಷ್ಟಗೊಂಡರೂ ಅದರ ಅಸ್ಪಷ್ಟ ಆರಂಭವನ್ನು 6-10 ನೆಯ ಶತಮಾನಗಳಲ್ಲಿಯೇ ಕಂಡುಕೊಳ್ಳಬಹುದು. ಇದು ಏನೇ ಇರಲಿ, ವ್ಯಕ್ತಿಯ ಪತನವನ್ನು ಮತ್ತು ಸಾಂಘಿಕ ಜೀವನದ ಉತ್ಕರ್ಷವನ್ನು 10ನೆಯ ಶತಮಾನದಲ್ಲಿ ಹೆಚ್ಚು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವುದೆಂಬುದನ್ನು ಒಪ್ಪಿಕೊಳ್ಳಲೇಬೇಕು.

ಶ್ರಾವಕರ ಪ್ರವೇಶ : ಶ್ರಮಣರ ಸೇವೆ ಮಾಡಲೆಂದು ಇಲ್ಲಿಗೆ ಬಂದ ನಿಷ್ಠಾವಂತ ಶ್ರಾವಕರಿಂದಲೆ ಆಧ್ಯಾತ್ಮಿಕ ಜೀವನದ ಅವಸಾನವು ಆರಂಭಗೊಂಡುದೊಂದು ಇತಿಹಾಸದ ವಿಪರ್ಯಾಸ. ಕಟವಪ್ರದಲ್ಲಿ ಶ್ರಮಣರು ಕೈಕೊಂಡ ಆರಂಭಕಾಲದ ಕಾಯಕ್ಲೇಶ ವಿಧಿಯ ಕಠೋರತೆಯು ಸಂಘದ ಅನೇಕ ಸದಸ್ಯರನ್ನು ಮತ್ತು ವರ್ಚಸ್ವೀ ಶ್ರಾವಕರನ್ನು ಆಕರ್ಷಿಸ ತೊಡಗಿತು. 7-8ನೆಯ ಶತಮಾನಗಳಲ್ಲಿ ಇದು ದೇಹದಂಡನೆಯ ಏಕೈಕ ಪ್ರಮುಖ ಕೇಂದ್ರವಾಗಿದ್ದು, ಅಂಥವರ ಆರೈಕೆಗೆ ಇಲ್ಲಿಗೆ ಬರುತ್ತಿದ್ದ ಶಿಷ್ಯರಿಗೆ ಅವರ ಉತ್ತರ ಕ್ರಿಯೆಗಳನ್ನು ಪೂರೈಸಿ, ನಿಸಿಧಿಗಳನ್ನು ನಿಲ್ಲಿಸಿ, ಬೆಟ್ಟದಿಂದ ನಿರ್ಗಮಿಸಿದ ನಂತರ ಈ ಬೆಟ್ಟವನ್ನು ಪುನಃ

42. 14.
43. 37.
44. ಅದೇ.
45. 34.

ಸಂದರ್ಶಿಸುವ ಪ್ರಮೇಯ ಬರುತ್ತಿರಲಿಲ್ಲ. ರೂವಾರಿಗಳು, ಲಿಪಿಕಾರರು, ಸಂಘಸದಸ್ಯರು ಮತ್ತು ಪೋಷಕರು ಇವರಲ್ಲಿ ಪ್ರಮುಖರಾಗಿದ್ದರು. ಈ ಕಾಲದ ಬಹಳಷ್ಟು ಶಾಸನಗಳು ಸ್ಮಾರಕೋತ್ಸವವನ್ನು ವಿಶೇಷವಾಗಿ ವರ್ಣಿಸುವ ಗೋಜಿಗೆ ಹೋಗುವುದಿಲ್ಲ; ಅದು ಬಹುತೇಕ ಸಂಕ್ಷಿಪ್ತವೂ ಅಡಕವೂ ಆದ ವರದಿ ಮಾತ್ರವಾಗಿದೆ. 7ನೆಯ ಶತಮಾನದ ಪಲ್ಲವಾಚಾರಿ ಎಂಬ ಕಲಾವಿದನನ್ನು ಹೊರತುಪಡಿಸಿ ಅಂದಿನ ಲಿಪಿಕಾರರೆಲ್ಲ ಅನಾಮಧೇಯರಾಗಿಯೆ ಉಳಿದಿರುವರು.[46] ಕಾಯಕ್ಲೇಶದ ವೀರೋಚಿತ ಕೃತ್ಯವನ್ನು ಕಾಣಲು ಇಲ್ಲಿಗೆ ಬಂದಿದ್ದವರ ಹೆಸರುಗಳೂ ಈ ಶಾಸನಗಳಲ್ಲಿ ಅಪರೂಪವಾಗಿ ಮಾತ್ರ ಕಾಣಿಸಿಕೊಳ್ಳುವವು. ಇದಕ್ಕೆ ಕಾರಣ, ಅವರೆಲ್ಲ ಆಗ ಅಲ್ಪ ಸಂಖ್ಯೆಯಲ್ಲಿದ್ದುದು ಅಥವಾ ಅವರ ಆಸಕ್ತಿ ಅಷ್ಟೊಂದು ತೀವ್ರತರವಾಗಿಲ್ಲದಿದ್ದುದೆಂದು ತೋರುವುದು. ಕಟವಪ್ರದ ಮೇಲೆ ಅರಸ ದಿಣ್ಣಿಕನ ಉಪಸ್ಥಿತಿಯು ಇಂತಹ ಅತ್ಯಂತ ಪ್ರಾಚೀನ ಹಾಗೂ ಅಪರೂಪದ ಉದಾಹರಣೆಗಳಲ್ಲೊಂದಾಗಿದೆ. ಆಚಾರ್ಯ ಅರಿಷ್ಟನೇಮಿಯು ಶುಕ್ಲಧ್ಯಾನ ವ್ರತವನ್ನಾಚರಿಸಿ ಮರಣ ಹೊಂದಿದಾಗ, ದಿಣ್ಣಿಕನು ಸ್ವತಃ ಉಪಸ್ಥಿತನಿದ್ದನೆಂದು 7ನೆಯ ಶತಮಾನದ ಒಂದು ಶಾಸನ ತಿಳಿಸುವುದು.[47] ಈ ಬೆಟ್ಟದ ಇತಿಹಾಸದಲ್ಲಿಯೇ ಮರಣಾಸನ್ನ ಶ್ರಮಣರನ್ನು ರಾಜನೊಬ್ಬನು ಉಪಚರಿಸಿದ ಅತ್ಯಂತ ಪ್ರಾಚೀನ ನಿದರ್ಶನವಿದಾಗಿದೆ. ಈ ಅರಸನನ್ನು ಇನ್ನೂ ಗುರುತಿಸಲಾಗದಿರುವುದೊಂದು ಆತಂಕದ ವಿಷಯ.

ಮರಣವನ್ನು ಆಹ್ವಾನಿಸಿದ ಪ್ರಥಮ ಶ್ರಾವಕ: ಆಳರಸರ ಮತ್ತು ಸಿರಿವಂತ ಶ್ರಾವಕರ ಆಶ್ರಯವನ್ನು 6-11 ಶತಮಾನಗಳ ಕಾಲಾವಧಿಯಲ್ಲಿ ಯಾವ ಮುನಿಯೂ ಕೋರಲಿಲ್ಲವೆಂದು ತೋರುವುದು. ಬಡತನದ ಬವಣೆಗಳನ್ನು ಸಂತೋಷದಿಂದ ಸಂಪಾದಿಸಿಕೊಂಡ ಶ್ರಮಣರು, ಲೌಕಿಕ ಅನುಯಾಯಿಗಳನ್ನು ಆದಷ್ಟು ದೂರವಿಟ್ಟಿದ್ದರೆಂದೇ ಭಾವಿಸಬಹುದು. ಇದಕ್ಕೆ ಒಂದೇ ಒಂದು ಅಪವಾದವನ್ನು 8ನೆಯ ಶತಮಾನದ(?) ಶಾಸನ ಒದಗಿಸುವುದು. ಇದು, ಮನಸಿಜಾ ಎಂಬ ರಾಣಿಗೆ ಸಂಬಂಧಿಸಿದ್ದು. ಇವಳು ಯಶಸ್ವಿಯಾಗಿ ವ್ರತ ಪೂರ್ತಿಗೊಳಿಸಿದಾಗ ಇಲ್ಲಿಯ ನಿವಾಸಿಯೊಬ್ಬ ಪೆರ್ಗ್ಗಳ್ಪಪ್ಪುವಿನ ಭೂಮಿಯನ್ನು ಸೇನಅಡಿಗಳಿಗೆ ದಾನ ಕೊಟ್ಟನೆಂದು ಹೇಳಲಾಗಿದೆ. ರಾಷ್ಟ್ರಕೂಟ ಶ್ರೀವಲ್ಲಭ ಮಹಾರಾಜನ ಪುತ್ರ ರಣಾವಲೋಕ ಕಂಬಯ್ಯ ಅಥವಾ ಸ್ತಂಭನ ಆಳ್ವಿಕೆಯ ಕಾಲದಲ್ಲಿ ಇದು ಸಂಭವಿಸಿತು. ನವಲೂರಿನ ನಾಳ್ಗಾವುಂಡ ಸೇರಿದಂತೆ ಹಲವು ಗಾವುಂಡರು ಹಾಗೂ ರಾಜ್ಯದ ಸೇವಾವರ್ಗದವರು ಬೆಳ್ಗೊಳ ಸಮೀಪದ ಗೋವಿಂದಪಾಡಿಗೆ ದತ್ತಿ ನೀಡಿದರೆಂದು ತಿಳಿದುಬರುವುದು. ಆಳರಸನ ಕುಟುಂಬವೊಂದನ್ನು ಕಟವಪ್ರದ ಇತಿಹಾಸದೊಂದಿಗೆ ಮೊಟ್ಟ ಮೊದಲು ಇದು ಜೋಡಿಸುವುದಲ್ಲದೆ ಮಹಾ ಶ್ರಮಣ ಕಂತಿಯರಂತೆಯೆ ಮರಣಾಂತಿಕವಾಗಿ ದೇಹದಂಡಿಸಿದ ಅತ್ಯಂತ ಪ್ರಾಚೀನ ಗುಡ್ಡಿಯೊಬ್ಬಳನ್ನೂ

---

46. 24.
47. 13.

ಈ ಶಾಸನವು ಪರಿಚಯಿಸುವುದು. ಆದರೆ ಈ ರಾಣಿಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಅವಳು ಆಚರಿಸಿದ ವ್ರತ ವಿವರಗಳೂ ಅಸ್ಪಷ್ಟವಾಗಿವೆ. ಆದರೆ ಸಂಭ್ರಮದ ಸ್ಮಾರಕೋತ್ಸವ ಮತ್ತು ದತ್ತಿ ಪ್ರಮಾಣದಿಂದ ಮನಸಿಜಾಳನ್ನು ಅಳೆದು ನೋಡಿದರೆ ಒಬ್ಬ ಮಹಾರಾಣಿಯಾಗಿರಬಹುದೆಂದು ಊಹಿಸಬಹುದು.

ಈ ಕಾಲಕ್ಕಾಗಲೆ ಕಟವಪ್ರದ ಸುತ್ತಲ ಪ್ರದೇಶವು ನೆಲೆಸಿಗರನ್ನು ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಆಕರ್ಷಿಸತೊಡಗಿತ್ತು. ಪಟ್ಟಣದ ಬೆಳವಣಿಗೆಗೆ ಬೇಕಾದ ಕೆರೆ, ಕಟ್ಟೆ, ಕುಂಟೆಗಳಲ್ಲದೆ, ಕಡಲೂರು, ಕಲದುರ್ಗ, ಅಂದಮಾಸಲ, ನವಿಲೂರು ಮತ್ತು ಗೋವಿಂದಪಾಡಿ ಮುಂತಾದ ಉಪಗ್ರಾಮಗಳು ಬೆಳ್ಗೊಳವನ್ನು ಸುತ್ತುಬಳಸಿ ಬೆಳೆಯತೊಡಗಿದ್ದವು. ನೆಲಸುನಾಡಾಗಿ ಸಂಪೂರ್ಣವಾಗಿ ಬೆಳೆದಿರದಿದ್ದರೂ ಈ ಕಾಲಕ್ಕಾಗಲೇ ಬೆಳ್ಗೊಳವು ದಟ್ಟ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತೆನ್ನುವುದರಲ್ಲಿ ಅನುಮಾನವಿಲ್ಲ. ಗೋವಿಂದಪಾಡಿಯು ಸೇರಿದಂತೆ ನೆರೆಯ ಗ್ರಾಮಗಳ ಗದ್ದೆಗಳಿಗೆ ಇಲ್ಲಿಯ ದೊಡ್ಡಕೆರೆಯು ನೀರುಣಿಸುತ್ತಿತ್ತು. ಪೆರ್ಗ್ಗಳ್ವಪ್ಪು ದೊಡ್ಡಬೆಟ್ಟಕ್ಕೆ ಸೀಮಿತವಾಗಿರದೆ ಇದಕ್ಕೆ ಹೊಂದಿಕೊಂಡ ಪ್ರದೇಶವನ್ನೂ ಆವರಿಸಿದಂತೆ ತೋರುವುದು. ಭೂಮಾಲಿಕತ್ವವನ್ನು ಪ್ರತಿಪಾದಿಸುವವರಾರೂ ಆಗ ಈ ಬೆಟ್ಟದ ಮೇಲೆ ಸ್ಥಿರವಾಗಿ ನೆಲೆನಿಂತಿರಲಿಲ್ಲವೆಂಬುದೂ, ಗೋವಿಂದಪಾಡಿ ಗ್ರಾಮವು ಇಂದಿಗೂ ಇದೇ ಹೆಸರಿನಲ್ಲಿ ಉಳಿದುಕೊಂಡುಬಂದಿರುವುದು ಇಲ್ಲಿ ಗಮನಾರ್ಹ.

ಚಿಕ್ಕಬೆಟ್ಟದ ಮೇಲೆ ನಿಷ್ಠೆಯಿಂದ ದೇಹದಂಡನೆ ಮಾಡಿಕೊಳ್ಳುವವರಿಗಾಗಿ ಮತ್ತು ಅಲ್ಲಿಗೆ ಬರುತ್ತಿದ್ದ ಯಾತ್ರಿಗಳ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಈ ದತ್ತಿಯನ್ನು ಬಿಡಲಾಗಿತ್ತೆ ವಿನಃ ಯಾವೊಂದು ಸಂಸ್ಥೆಯನ್ನು ಪೋಷಿಸಿ ಬೆಳೆಸುವುದಕ್ಕಾಗಿ ಅಲ್ಲ. ಬೆಳ್ಗೊಳಕ್ಕೆ ಶ್ರಾವಕರು ಕೊಟ್ಟ ಪ್ರಥಮ ಭೂದತ್ತಿ ಇದಾಗಿದ್ದು ಇದರಲ್ಲಿ ತೊಡಗಿಸಿಕೊಂಡವರೆಲ್ಲ ರಾಷ್ಟ್ರಕೂಟ ರಾಜ್ಯದ ಅಧಿಕಾರಿಗಳಾಗಿದ್ದರೆಂಬುದು ಗಮನಾರ್ಹ.[48]

ಯಾತ್ರಿಗಳು : ಈ ಕಾಲಾವಧಿಯಲ್ಲಿ ಕಟವಪ್ರದ ಮೆಲೆ ಸಂಭವಿಸುತ್ತಿದ್ದ ಸಮಾಧಿ ಮರಣಗಳು ಶ್ರಾವಕರ ಕುತೂಹಲವನ್ನು ವಿಶೇಷವಾಗಿ ಕೆರಳಿಸಿ ಅವರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಇಲ್ಲಿಗೆ ಬರುವಂತೆ ಮಾಡಿದವು. 7-9ನೆಯ ಶತಮಾನಗಳಲ್ಲಿ ಅವರ ಸಂಖ್ಯೆ ತೊಟ್ಟಿಕ್ಕುವಷ್ಟು ವಿರಳವಾಗಿತ್ತು. 8ನೆಯ ಶತಮಾನದಲ್ಲಿ ಬಂದ ಶ್ರೀರಣಧೀರ ಹಾಗೂ ಶ್ರೀರತ್ತ ಎಂಬುವರು ಕಟವಪ್ರದ ಮೇಲೆ ಹೆಸರು ಕೆತ್ತಿ ತಮ್ಮನ್ನು ಶಾಶ್ವತಗೊಳಿಸಿಕೊಂಡರು.[49] ಸುಮಾರು 9ನೆಯ ಶತಮಾನದಲ್ಲಿ ಶ್ರೀಬಮ್ಮ, ಈಸರಯ್ಯ ಮತ್ತು ಶ್ರೀಧರನ್[50] ಈ

---

48. 38.
49. ಅನುಕ್ರಮವಾಗಿ 271 ಮತ್ತು 8.
50. ಅನುಕ್ರಮವಾಗಿ 102, 223, ಮತ್ತು 12.

ಬೆಟ್ಟವನ್ನು ಸಂದರ್ಶಿಸಿದರು. ಇದೇ ಕಾಲದಲ್ಲಿ ನಾಗಣಂದಿ ಮತ್ತು ಕಿತ್ತಯ್ಯರು ದೇವತೆಗೆ 'ಅಡ್ಡಬೀಳಲು' ಬಂದುದಾಗಿ ಬಂಡೆಗಲ್ಲಿನ ಮೇಲೆ ದಾಖಲಿಸಿರುವರು.[51] ಒಟ್ಟಿನಲ್ಲಿ 6-9ನೆಯ ಶತಮಾನಗಳ ಕಾಲಾವಧಿಯಲ್ಲಿ ಇಲ್ಲಿಗೆ ಬಂದ ದಾಖಲಿತ ಯಾತ್ರಿಗಳ ಸಂಖ್ಯೆ ಹತ್ತು-ಹನ್ನೆರಡಕ್ಕಿಂತ ಹೆಚ್ಚಾಗಿರಲಿಲ್ಲ; ಆದರೆ ದಾಖಲಿಸುವ ಗೊಡವೆಗೆ ಹೋಗದ ಯಾತ್ರಿಕರ ಸಂಖ್ಯೆ ಇದಕ್ಕಿಂತ ಎಷ್ಟೋ ಪಟ್ಟು ಹೆಚ್ಚಾಗಿದ್ದಿರಲು ಸಾಕು.

ಈ ಬೆಟ್ಟದ ಪ್ರಥಮ ನಾಲ್ಕು ಶತಮಾನಗಳ ಇತಿಹಾಸದಲ್ಲಿ (600-1000) ದೇಹದಂಡನೆಯಿಂದ ಮರಣಹೊಂದಿದ ಗೃಹಸ್ಥರ ಸಂಖ್ಯೆ ತುಂಬಾ ಅತ್ಯಲ್ಪ. ರಾಣಿ ಮನಸಿಜಾಳಗಿಂತ(?) ಪೂರ್ವಕಾಲದ ಶ್ರಾವಕರನ್ನು ಆಗೊವ್ಮೆ-ಈಗೊವ್ಮೆ ಉಲ್ಲೇಖಿಸಲಾಗಿದ್ದರೂ ಅವರ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಡಲಾಗಿಲ್ಲ.[52] ಆದರೆ 10ನೆಯ ಶತಮಾನದ ನಂತರ ಈ ಕ್ಷೇತ್ರಕ್ಕೆ ಬಂದ ಶ್ರಾವಕಿಯರ ಬಗ್ಗೆ ಸಾಕಷ್ಟು ವಿವರಗಳು ದೊರಕುವುವು.[53] ಇವರಲ್ಲಿ ಕೆಲವರು ತೀರ್ಥಕ್ಕೆ 'ನಮನ' ಸಲ್ಲಿಸಲೋಸುಗ ಬಂದುದಾಗಿ ಹೇಳಿಕೊಂಡರೆ,[54] ಇನ್ನು ಕೆಲವರು ದೇವರಿಗೆ 'ಅಡ್ಡಬೀಳಲೋಸುಗ' ಬಂದುದಾಗಿ

51. 60.

52. ಜಂಬುನಾಯ್ಗಿರ (7ನೆಯ ಶತಮಾನದ 21) ಮತ್ತು ಕಿತ್ತೆಙಿ (ಸುಮಾರು 7ನೆಯ ಶತಮಾನದ 22) ಯಾವ ಸಂಘದ ಸದಸ್ಯರಾಗಿದ್ದರು ಇಲ್ಲವೆ ಯಾರ ಶಿಷ್ಯರಾಗಿದ್ದರು ಎಂಬುದು ನಮಗೆ ತಿಳಿಯದು. ಸುಮಾರು 7ನೆಯ ಶತಮಾನದಲ್ಲಿ (114) ತನ್ನ ಜೀವನವನ್ನು ಕೊನೆಗೊಳಿಸಿಕೊಂಡ ಪೆರ್ಮಾಣ ಕುಟುಂಬದ ಸದಸ್ಯನು ಬಹುಶಃ ಶ್ರಾವಕನಾಗಿದ್ದನೆಂದು ತೋರುವುದು.

53. 10ನೆಯ ಶತಮಾನದಲ್ಲಿ ಭೇಟಿಯಿತ್ತವರಲ್ಲಿ, ಚಂದಯ್ಯ (100), ಶ್ರೀಕಂಠಯ್ಯ (125), ಚಾಮುಂಡಯ್ಯ (137), ಸೆಟ್ಟಪಯ್ಯ (138), ಅಭಗ ನರಸಿಂಘಯ್ಯ (139), ವೈಜಯ್ಯ (142), ರಾಚಮಲ್ಲನ ಸೇನಬೋವ ಸುಭಕರಯ್ಯ (190), ಮೇಟಿಪಯ್ಯ (191), ಪುಟಿಯಣ್ಣ (196), ಬಿದ್ದರಯ್ಯ (221), ಅಕಚೆಯ್ಯ (222), ಮಾಚಯ್ಯ (225), ಚಿನಪೌಸ (226), ಶ್ರೀ ನಾಗವರ್ಮ್ಮ (231), ಗೋವಣಯ್ಯ (238), ಕಣ್ಣಬ್ಬರಸಿ ಮತ್ತು ಅವಳ ಮೂವರು ಸಹೋದರರು (241), ಚಙಿಂಗಯ್ಯ (5), ಸಿಂದಯ್ಯ (19), ಶ್ರೀಚಾವುಂಡಯ್ಯ (42), ಕವಿರತ್ನ (43), ಅಂಕಬೋಯ (44), ವಿದ್ದೆಪಯ್ಯ(45), ದೇವಣಂದಿ ಬಳರನ ಶಿಷ್ಯ (52), ಬೀರರಬಂಟ ಪರಿಕರ ನಕಿಗ (48), ಪುಳಿಚೋರಯ್ಯ (249), ಜಕ್ಕಗ (255), ಅಂದಮಾರಯ್ಯ ಮತ್ತು ಸಂಕಯ್ಯ(242), ಇತ್ಯಾದಿ. 11ನೆಯ ಶತಮಾನದ ಯಾತ್ರಿಗಳಲ್ಲಿ: ಇಸಕಯ್ಯ (58), ಬಿಧಿಯಮ್ಮ (59), ಒಬ್ಬ ಸಾಮಂತಪ್ರಭು (61), ಒಬ್ಬ ಮಹಾಮಂಡಲೇಶ್ವರ (105), ಬಸವಯ್ಯ (107), ನರಣಯ್ಯ (128), ಜಕ್ಕಯ್ಯ (143), ನಾಗವರ್ಮ್ಮ (194), ಸೌಳಯ್ಯ (197), ಕೇಶವಯ್ಯ (198), ಏಚಯ್ಯ (200), ಬಾಸ (201), ದುಗಣ (215). ನಾಗಯ್ಯ (235), ದೇಚಯ್ಯ (236), ಸಿಂದಯ್ಯ (237), ಮಧುವಯ್ಯ (240), ಕತ್ತಯ್ಯ (248), ಅಣ್ಣನ ಕಾಳೆಯ ಪಣ್ಣಗ (49), ಕೊತ್ತಯ್ಯ (51), ಶ್ರೀವರ್ಮ್ಮ ಚಂದ್ರಗೀತಯ್ಯ (56), ಚಿನಚಂದ್ರ (251), ನಾಗವರ್ಮ್ಮ (258), ಮೊದಲಾದವರ ಹೆಸರುಗಳನ್ನು ದಾಖಿಸಲಾಗಿದೆ.

54. 5, 52, 190, 49, ಇತ್ಯಾದಿ.

ಹೇಳಿಕೊಂಡಿರುವುದನ್ನು ಈಗಾಗಲೇ ಕಂಡಿರುವೆವು.[55] 10ನೆಯ ಶತಮಾನದಲ್ಲಿ ಸಂಕಯ್ಯನ ಜೊತೆಗೂಡಿ ಬಂದ ಅನ್ನಮಾರಯ್ಯ 'ಮನದಲಗ್ಗಳದೇವರೆಂಬರಂ ಕಾಣ್ಬ' ಬಯಕೆಯಿಂದ ಬಂದನಂತೆ. ಈ ತೀರ್ಥಕ್ಕೆ ಮಾರುಗೊಂಡ ಇವರೆಲ್ಲ ಬಹುಶಃ ತಮ್ಮ ಜೀವನದ ಕೊನೆಯವರೆಗೂ ಬೆಳ್ಗೊಳದಲ್ಲಿ ನಿಂತುಬಿಟ್ಟರೆಂದು ಕಾಣುವುದು.[56] ಹೀಗೆ ಬಂದವರಲ್ಲಿ ಕೆಲವರು ಹಿರಿಯ ಅಧಿಕಾರಿಗಳು (ರಾಚಮಲ್ಲನ ಸೇನಬೋವ),[57] ಸಾಮಂತರು ಮತ್ತು ಮಹಾಮಂಡಲಾಧೀಶ್ವರರು,[58] ಇನ್ನು ಕೆಲವರು ಕವಿ (ಕವಿರತ್ನ),[59] ರೂವಾರಿ (ನಾಗವರ್ಮ, ದುಗುಣ, ಇತ್ಯಾದಿ),[60] ಕಲಿ ಮತ್ತು ಕಲ್ಕುಟಿಗ (ಅಂತಬೋಯ ಮತ್ತು ವೀರಬಣ್ಣ ಪರಿಕರ ನಕಿಗ)[61] ರಾಗಿದ್ದರು.

ಯಾತ್ರಿಕರೆಲ್ಲ ಬಹುತೇಕ ಒಬ್ಬಂಟಿಗಳಾಗಿ ಬರುತ್ತಿದ್ದರು. ಇದಕ್ಕೆ ಅಪವಾದ ವೆನ್ನುವಂತೆ ಕಣ್ಣಬ್ಬರಿಸಿ ಎಂಬವಳು ತನ್ನೆಲ್ಲ ಸೋದರರೊಡಗೂಡಿ ಬಂದಳು.[62] ಈ ಯಾತ್ರಿಗಳಾರೂ ತಮ್ಮ ಸಂದರ್ಶನದ ವರದಿಗಳನ್ನು ಕೊಟ್ಟಿಲ್ಲ. ಆದರೂ ದಾಖಲಿತ ಯಾತ್ರಿಗಳ ಸಂಖ್ಯೆ 8-10ನೆಯ ಶತಮಾನಗಳಲ್ಲಿ ಹದಿನೈದು ಪಟ್ಟು ಮತ್ತು 9-10ನೆಯ ಶತಮಾನಗಳಲ್ಲಿ ಹತ್ತು ಪಟ್ಟು ಹೆಚ್ಚಿತೆಂದು ಕಂಡುಬರುವುದು. ಯಾತ್ರಿಗಳಲ್ಲಿ ಬಹಳಷ್ಟು ಜನರು ಇಂದಿನ ಕರ್ನಾಟಕ ಪ್ರದೇಶದವರಾಗಿದ್ದರಲ್ಲದೆ ಕೆಲವರಾದರೂ ಜೈನೇತರರಾಗಿದ್ದರು. 11ನೆಯ ಶತಮಾನದ ಒಬ್ಬಳೇ ಒಬ್ಬ ಮಹಿಳೆಯನ್ನು ಹೊರತುಪಡಿಸಿ ಉಳಿದೆಲ್ಲ ಯಾತ್ರಿಗಳು ಪುರುಷರಾಗಿದ್ದುದು ಗಮನಾರ್ಹ.

ಈ ಕ್ಷೇತ್ರದ ದೇವಾಲಯಗಳ ಉಲ್ಲೇಖಗಳು 9ನೆಯ ಶತಮಾನಕ್ಕಿಂತ ಮುಂಚಿನ ಕಾಲದ ಶಾಸನಗಳಲ್ಲಿ ಅಪರೂಪವಾಗಿ ಮಾತ್ರ ಬರುವುವು-ಏಕೆಂದರೆ, ಬಹುತೇಕ ಅವೆಲ್ಲ ಅನಂತರ ಕಾಲದಲ್ಲಿ ನಿರ್ಮಾಣ ಗೊಂಡವೆಂದು ಕಾಣುವುದು. ಕಾಲಕ್ರಮದಲ್ಲಿ ದೇವಾಲಯಗಳು ಯಾತ್ರಿಕರಿಗೆ ವಿಶೇಷ ಆಕರ್ಷಣೆ ಒದಗಿಸತೊಡಗಿದವು. ಆದರೆ ಅಂದಿನ ಯಾತ್ರಿಕರು ಭೂದತ್ತಿಗಳಿಂದಾಗಲಿ ಧನದತ್ತಿಗಳಿಂದಾಗಲಿ ಈ ತೀರ್ಥವನ್ನು ಶ್ರೀಮಂತಗೊಳಿಸಲಿಲ್ಲವೆಂಬುದು ಗಮನಾರ್ಹ. ಈ ಪರಿಸ್ಥಿತಿಯು ಸುಮಾರು 12ನೆಯ ಶತಮಾನದವರೆಗೂ ಮುಂದುವರಿಯಿತು.

---

55. 60, 51, 56, 240, 241.
56. 242.
57. 190.
58. ಅನುಕ್ರಮವಾಗಿ 61 ಮತ್ತು 105.
59. 43, 224.
60. 194, 215.
61. 44, 48.
62. 241.

ನಿಸಿಧಿ ಸ್ಮಾರಕಗಳೊಡನೆ ಸ್ಥಳ ಹಂಚಿಕೊಂಡ ವೀರಗಲ್ಲುಗಳು : 10ನೆಯ ಶತಮಾನದ ನಂತರ ಕಟವಪ್ರ ಬೆಟ್ಟದಲ್ಲಿ ಅನೇಕ ಬದಲಾವಣೆಗಳಾದವು. ಅಲ್ಲಿಯವರೆಗೂ ಏಕಾಂತತೆಯನ್ನು, ಗಂಭೀರ ಗೌರವತೆಯನ್ನು ಕಾಪಾಡಿಕೊಂಡು, ಮರಣಾರ್ಥಿಗಳಿಗೆ ಮಾತ್ರ ಮೀಸಲಾಗಿದ್ದ ಈ ಬೆಟ್ಟವು ಯಾತ್ರಾರ್ಥಿಗಳ ಆಗಮನದಿಂದಾಗಿ ಜನನಿಬಿಡ ಪ್ರದೇಶವಾಗತೊಡಗಿತು. ಕಾಯಕ್ಲೇಶ ವ್ರತ ಸ್ವೀಕರಿಸಿ, ಸಮಾಧಿ ವಿಧಿಯನ್ನು ಆಚರಿಸಿ, ಪಾವನ ಗೊಳಿಸಲಾಗಿದ್ದ ಶಿಲಾಶೈಲವನ್ನು ಕಾಣಲು ಭಕ್ತಿಪೂರ್ವಕವಾಗಿ ಬರುತ್ತಿದ್ದ ಯಾತ್ರಿಕರು ಕ್ರಮೇಣ ತಮ್ಮ ತೀರ್ಥಯಾತ್ರೆಯನ್ನು ಅಮರಗೊಳಿಸಲೆಂಬಂತೆ ತಮ್ಮ ತಮ್ಮ ಹೆಸರುಗಳನ್ನು, ತಾವಿತ್ತ ಅಲ್ಪಸ್ವಲ್ಪ ದಾನದತ್ತಿಗಳನ್ನು ಶಾಶ್ವತಗೊಳಿಸಲು ಶಾಸನಗಳನ್ನು ಕೆತ್ತಿಸಿ, ಅವುಗಳನ್ನು ನಿಸಿಧಿ ಶಾಸನಗಳೊಡನೆ ಬೆರೆಸತೊಡಗಿದರು. ಅವರ ಆಡಂಬರಪೂರ್ಣ ಸಂದರ್ಶನಗಳು, ಅದ್ದೂರಿಯ ಭಕ್ತಿ ಪ್ರದರ್ಶನ, ಶಬ್ದಾಡಂಬರದಿಂದೊಡಗೂಡಿದ ಅರ್ಚನಾ ವಿಧಾನ, ಕಟವಪ್ರದ ಪ್ರಾಕೃತಿಕ ಪರಿಸರಕ್ಕೆ ಧಕ್ಕೆ ತಂದವು. ಈ ಗದ್ದಲಕ್ಕಂಜಿದ ಏಕೋವಿಹಾರಿಗಳು ತಮ್ಮ ಸಾಧನೆಗೆ ಅಡ್ಡ ಬಂದ ಆತಂಕವನ್ನು ಮನಗಂಡು ಇಲ್ಲಿಂದ ಕಾಲ್ತೆಗೆಯತೊಡಗಿದರು.

10ನೆಯ ಶತಮಾನದ ನಂತರ ಇಲ್ಲಿಯ ಕವಿಗಳಿಗೆ, ರೂವಾರಿಗಳಿಗೆ, ಕಲ್ಕುಟಿಗರಿಗೆ, ಯಾತ್ರಾರ್ಥಿಗಳು ಪ್ರಧಾನ ಪೋಷಕರಾದರು. ಅವರ ಹೆಸರನ್ನು ಶೈಲಶಿಲೆಯ ಮೇಲೆ ಕೊರೆದು ಅಜರಾಮರ ಮಾಡುವುದು, ಅವರಿತ್ತ ದಾನ ದತ್ತಿಗಳನ್ನು ಶಾಸನಗಳಲ್ಲಿ ದಾಖಲಿಸುವುದು, ಅವರ ವೈಯಕ್ತಿಕ ಲೌಕಿಕ ಸಾಧನೆಗಳನ್ನು ಸ್ಮರಿಸುವುದು, ಅವರು ಹಮ್ಮಿಕೊಂಡ ಮಂದಿರ-ಮಂಟಪಗಳನ್ನು ನಿರ್ಮಾಣಮಾಡುವುದು, ಈ ರೂವಾರಿಗಳ ಪ್ರಮುಖ ಉದ್ಯೋಗಗಳಾದವು.[63] ಇದರಿಂದಾಗಿ ಸ್ತಬ್ಧ ತಪೋಯುಗವು ಮುಕ್ತಾಯಗೊಂಡು ಆಡಂಬರದ ಭಕ್ತಿಯುಗವು ಆರಂಭವಾಗಿ, ಆಧ್ಯಾತ್ಮಿಕ ಹಾಗೂ ಲೌಕಿಕತೆಯ ಮಧ್ಯೆ ಇದ್ದ ಅಂತರವನ್ನು ಆಕ್ರಮಿಸತೊಡಗಿತು. ಅಲ್ಲದೆ ಲೌಕಿಕದಲ್ಲಿ ಪ್ರಾಧಾನ್ಯತೆ ಪಡೆದ ಪ್ರತಿಷ್ಠಿತ ವ್ಯಕ್ತಿಗಳ ವೀರ ಹಾಗೂ ಸತೀ ಕಂಬಗಳು ಮಂದಿರ-ಮಂಟಪಗಳ ಸ್ಥಾನ ಪಡೆದುಕೊಂಡು, ನಿಸಿಧಿ ಮಂಟಪಗಳಿಗೆ ಸಾಟಿ ಎನ್ನುವಂತೆ ತಲೆ ಎತ್ತತೊಡಗಿದವು.[64]

---

63. ಕಟವಪ್ರಕ್ಕೆ ಬಂದಾಗ ಯಾತ್ರಿಗಳು ಮೊದಲು ಶೈಲಶಿಲೆಯ ಮೇಲಿದ್ದ ನಿಸಿಧಿ ಶಾಸನಗಳ ದರ್ಶನ ಪಡೆದು ಖ್ಯಾತರು ಮರಣವನ್ನು ಆಹ್ವಾನಿಸಿದ ಸ್ಥಳಕ್ಕೆ ಭಕ್ತಿಯಿಂದ ತಲೆಬಾಗಿದರೆಂದು ತೋರುವುದು. ಈ ಬಗೆಯ ಮರಣವು ಉತ್ಸವಾಚರಣೆಗೆ ಯೋಗ್ಯವೆಂದು ಪರಿಗಣಿಸಲಾಗಿದ್ದರಿಂದ ಇಂಥ ಸ್ಥಳಕ್ಕೆ ನೀಡಿದ ಸಂದರ್ಶನವನ್ನು ಶಾಶ್ವತಗೊಳಿಸಲೋಸುಗ ಶಾಸನಗಳನ್ನು ಕೊರೆಸುವುದೂ ರೂಢಿಗೆ ಬಂದಿತೆಂದು ಕಾಣುವುದು. ಅದು ಏನೇ ಇರಲಿ, ಅದು ಕೆಲವರ ಅಹಃನ್ನು ತಣಿಸಿತು. ಹತ್ತಿರದಲ್ಲೇ ಸುಲಭವಾಗಿ ಲಭ್ಯವಾಗಿದ್ದ ಲಿಪಿಕಾರರು ಇದನ್ನು ಪೂರೈಸಿಕೊಡಲು ಸಹಾಯಕರಾದರೆಂದು ತೋರುವುದು. ಈ ಮೂಲಕ ರೂವಾರಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರನ್ನು ಪಡೆದುಕೊಳ್ಳಲು ಪ್ರಾರಂಭಿಸಿದರು.

64. ಸುಮಾರು 10ನೆಯ ಶತಮಾನದ 188.

ತಾನು 'ಚಗ ಭಕ್ಷಣ' ಎಂದು ಸಾರಲು ಚಕ್ರವರ್ತಿ ಗೊಗ್ಗಿಯು ಕಟವಪ್ರದ ಬಂಡೆಯ ಮೇಲೆ ತನ್ನ ಹೆಸರನ್ನು ಕೆತ್ತಿಸಿದ.[65] ತಾನು 'ನೊಳಂಬ ಕುಲಾಂತಕ' ನೆಂದು ಸಾರಲು ಸಂಕರ ನಕಿಗನು ಇನ್ನೊಂದು ಶಾಸನವನ್ನು ಕೊರೆಸಿದ.[66] ಈ ಶಾಸನಗಳು ಮಹಾ ಶ್ರಮಣರ ಸಮಾಧಿ ಸ್ತುತಿ ಮಾಡುವ ನಿಸಿಧಿ ಶಾಸನಗಳೊಡನೆ ಸ್ಥಳವನ್ನು ಹಂಚಿಕೊಂಡಿವೆ. ಅಂದರೆ ಇಚ್ಛಾಮರಣ ಆಹ್ವಾನಿಸಿದವರ ಗೌರವಾರ್ಥ ನೆಟ್ಟ ನಿಸಿಧಿಗಳ ಜೊತೆ ಜೊತೆಗೆ ರಣರಂಗದಲ್ಲಿ ಮಡಿದ ಯೋಧರ ವೀರಗಲ್ಲುಗಳೂ ಸೇರಿಕೊಳ್ಳತೊಡಗಿದವೆಂದರ್ಥ. ಪೂರ್ವಗಂಧ ಹಸ್ತಿಪಿಟ್ಟುಗ (ಯುದ್ಧವನ್ನು ತೀವ್ರವಾಗಿ ಪ್ರೀತಿಸಿ, ಕೊನೆಯುಸಿರಿರುವವರೆಗೂ ಕಾದಾಡಿದವನು),[67] ಬೋಯಿಗ (ವೈರಿ ಸೈನ್ಯಕ್ಕೆ ಕಠೋರನಾದವನು),[68] ಸಾವಿಯಬ್ಬೆ (ಬಾಗಿಯೂರಿನಲ್ಲಿ ವೀರ [ಸತೀ] ಮರಣ ಹೊಂದಿದವಳು?),[69] ಈ ಮೊದಲಾದವರಿಗೆ ಮಾಡಿಸಿದ ವೀರಗಲ್ಲುಗಳು ನಿಸಿಧಿ ಮಂಟಪದ ಸ್ಥಳವನ್ನಾಕ್ರಮಿಸಿ ನಿಂತುಕೊಂಡವು. ನಿಸಿಧಿ ಸ್ತಂಬಗಳ ಜೊತೆಗೆ ವೀರಗಲ್ಲುಗಳು ಸ್ಥಳ ಹಂಚಿಕೊಂಡ ವಿಧಾನವು ಆಧ್ಯಾತ್ಮ ಲೋಕವು ಲೌಕಿಕ ಪ್ರಪಂಚದೊಡನೆ ಮಾಡಿಕೊಂಡ ಹೊಂದಾಣಿಕೆಯನ್ನು ಸಂಕೇತಿಸುವಂತಿತ್ತು.

ಲೌಕಿಕರ ಆಧ್ಯಾತ್ಮಿಕ ಒಲವು : ಈ ಕಾಲದಲ್ಲಿ ಮತ್ತೊಂದು ಬಗೆಯ ಶಾಸನಗಳನ್ನು ಕೊರೆಸಲಾಯಿತು. ಅವು ಲೌಕಿಕ ನಾಯಕರ ಆಧ್ಯಾತ್ಮಿಕ ಒಲವನ್ನು ಪರಿಚಯಿಸುವ ದಾಖಲೆಗಳಾಗಿವೆ. ವೀರನಾಯಕನ ಐಹಿಕ ಸಾಧನೆ ಹಾಗೂ ಸಾಮರ್ಥ್ಯಗಳನ್ನು ನಿರರ್ಗಳವಾಗಿ ಕೊಂಡಾಡುವ ಈ ದಾಖಲೆಗಳು ಅವನ ಜೀವನದಂಚಿನ ಮಿಣುಕು ಗಳಿಗೆಯ ಪವಿತ್ರ ಜಿಜ್ಞಾಸೆಗಳನ್ನು ಶಬ್ದಾಡಂಬರದಲ್ಲಿ ಸೆರೆಹಿಡಿದಿವೆ. ಗಂಗ ಎರೆಯಂಗನ ಮಹಾಮಂತ್ರಿಯಾದ ಗುರಿಪಾಳನ ಅಳಿಯ ನಾಗವರ್ಮನ ಮಗ ಇದಕ್ಕೊಂದು ಉದಾಹರಣೆ. ಈ ಲೌಕಿಕನು ತನ್ನ ಇಹಯಾತ್ರೆಯನ್ನು ಮುಗಿಸುವ ಸ್ವಲ್ಪ ಕಾಲ ಮುಂಚೆ ವ್ರತ ಕೈಕೊಂಡು, ಸಾವನ್ನು ಸ್ವಾಗತಿಸಿದ್ದಕ್ಕೆ ಅವನಿಗೆ ನಿಸಿಧಿ ಗೌರವ ಸಲ್ಲಿಸಿದ್ದನ್ನು 'ಇರುವೆ ಬ್ರಹ್ಮದೇವ' ದೇವಾಲಯದ ಶಾಸನವು ತಿಳಿಸುವುದು.[70] ರಾಷ್ಟ್ರಕೂಟ ಅರಸ ನಾಲ್ವಡಿ ಕೃಷ್ಣ, ಗಂಗ ಮಾರಸಿಂಹ, ಗಂಗ ಮಂತ್ರಿ ಚಾವುಂಡರಾಯ, ಮುಂತಾದವರು ಇದೇ ಬಗೆಯಲ್ಲಿ ನಿಸಿಧಿಗೆಗಳನ್ನು ಗಳಿಸಿಕೊಂಡ 10ನೆಯ ಶತಮಾನದ ಲೌಕಿಕ ನಾಯಕರಾಗಿದ್ದಾರೆ. ಕಟವಪ್ರದ ಮುನಿಸಮುದಾಯವು ಬೆಳೆಸಿಕೊಂಡು ಬಂದಿದ್ದ **ಕಠಿಣತಮ** ಸಮಾಧಿ ನಿಯಮಗಳನ್ನೆಲ್ಲ ಈ ಲೌಕಿಕರು ಪರಿಪಾಲಿಸುವ ಅವಶ್ಯಕತೆಯನ್ನು ಕಂಡುಕೊಳ್ಳಲಿಲ್ಲವೆಂದು ಕಾಣುವುದು. ಅಂದರೆ ಈ ಕಾಲದಲ್ಲಿ ಮರಣ ವ್ರತದ ನಿಯಮಗಳು

65. ಅದೇ.
66. 48.
67. 165.
68. 171.
69. 172.
70. 186.

ಸಾಕಷ್ಟು ಸಡಿಲಗೊಂಡವೆಂದೇ ಹೇಳಬಹುದು. ಒಮ್ಮೊಮ್ಮೆ ನಿಸಿಧಿ ಸ್ತಂಭಗಳಿಗೂ ವೀರಸ್ತಂಭಗಳಿಗೂ ಅಂತರವಿಲ್ಲವೇನೋ ಅನ್ನುವಷ್ಟು ಅವುಗಳ ಸ್ವರೂಪ ಬದಲಾಯಿತೆಂದು ತೋರುವುದು.

ನಿಸಿಧಿ ಸ್ಮಾರಕಗಳ ಸಾಂಪ್ರದಾಯಿಕ ಕಟ್ಟಳೆಗಳನ್ನೆಲ್ಲ ಅಕ್ಷರಶಃ ಕೈಬಿಟ್ಟು, ಅರಸನೊಬ್ಬನ ವಿಜಯಸ್ತಂಭವೇನೋ ಅನ್ನುವಂತೆ, ನಾಲ್ವಡಿ ಇಂದ್ರನ ಮರಣಸ್ಮಾರಕವನ್ನು ಚತುರ್ಮುಖ ಸ್ತಂಭವೊಂದರ ಮೇಲೆ ಕೆತ್ತಲಾಯಿತು. ಈ ಶಾಸನವು ಅರಸನ ಭೌತಿಕ ಸಾಧನೆಗಳನ್ನೆಲ್ಲ ವರ್ಣಿಸಿ, ಅಂಚಿನಲ್ಲಿ ಮಾತ್ರ ಅವನ ಮರಣದ ಪ್ರಸ್ತಾಪ ಮಾಡುವುದು. ಪುರಾತನ ಕಾಲದ ನಿಸಿಧಿ ಶಾಸನಗಳ ಅಭಿವ್ಯಕ್ತಿ ಸಂಯಮವನ್ನೆಲ್ಲ ಕೈಬಿಟ್ಟು ಈ ಶಾಸನ ಕವಿಯು ಅರಸನ ಪ್ರಭುಶಕ್ತಿ, ಔದಾರ್ಯ, ಕೌಶಲ್ಯ ಮತ್ತು ಸಾಹಸಕ್ಕೆ ಹೆಚ್ಚು ಒತ್ತು ಕೊಟ್ಟಿರುವನು. ತಪಸ್ಸು, ಕರುಣೆ, ಇಂದ್ರಿಯ ನಿಗ್ರಹ, ಜ್ಞಾನ, ಧ್ಯಾನ, ಕಾಯಕ್ಲೇಶ ಮೊದಲಾದವುಗಳಿಗೆ ಇಲ್ಲಿ ದೊರೆತ ಅವಕಾಸ ಅತ್ಯಲ್ಪ.

ರಾಷ್ಟ್ರಕೂಟ ಅರಸ ಮುಮ್ಮಡಿ ಕೃಷ್ಣನ ಮೊಮ್ಮಗನೂ, ಗಂಗ-ಗಂಗೇಯನ ಮಗಳ ಮಗನೂ ಆಗಿದ್ದ ನಾಲ್ವಡಿ ಇಂದ್ರನು "ಅರಿಭಯಂಕರ, ಅಳಿವಿನ ಜ್ವಾಲೆ" ಆಗಿದ್ದನೆಂದೂ, ಅವನ ಗುರಿ 'ಕೀರ್ತಿಯ ಆಲಯ' ವಾಗಬೇಕೆಂಬುದಾಗಿತ್ತೆಂದೂ, ಶಾಸನವು ಸ್ಪಷ್ಟಪಡಿಸುವುದು. ಅಂತ್ಯದ ಕಾಲಾವಧಿಯಲ್ಲಿ ಆತನು ಯಾಚಕರಿಗೆಲ್ಲ ಸಂಪತ್ತು ಸುರಿಸುತ್ತ, ಮಿಥ್ಯೆಯಿಂದ ಮುಕ್ತನಾಗುತ್ತ, ಪರವೆಣ್ಣುಗಳ ಬಯಕೆಯನ್ನು ತೊರೆಯುತ್ತ, ಮಡಿದನೆಂದು ತಿಳಿಸಲಾಗಿದೆ. ಇದು ಏನೇ ಇರಲಿ, ಆಶ್ರಯ ಬೇಡಿ ಬಂದವರಿಗೆ ರಕ್ಷಣೆ ನೀಡುವ, ಎದುರಾಳಿಗಳನ್ನು ಬೆನ್ನಟ್ಟಿ ಇರಿವ, ತನ್ನ ಕುಲಕಸಬನ್ನು ಅವನು ಅಂತ್ಯದವರೆಗೂ ಬಿಟ್ಟುಕೊಡಲಿಲ್ಲವೆಂದು ತೋರುವುದು. "ರವಿ ತೇಜಕ್ಕಿಂತ ಪ್ರಖರವಾದ" ಶೌರ್ಯವುಳ್ಳ ಈ ಚಲದಂಕಕಾರನನ್ನು "ಕಾಮಿನೀ ಜನೋರಸ್ಥಳಹಾರ " (ಕಾಮಿನಿಯರ ಎದೆಯ ಮೇಲಿನ ಹಾರ) ಎಂಬ ವಿಶೇಷಣದಿಂದಲೇ ಗುರುತಿಸಲಾಗಿದೆ.[71] ಈ ಅರಸನ ಮುಖ್ಯ ಸಾಧನೆಗಳಂತಿದ್ದ ಅವನ ಬಹುಶ್ರುತತೆ ಮತ್ತು ಪೋಲೋ (ಕುದುರೆಯ ಮೆಲೆ ಕುಳಿತು ಆಡುವ ಚೆಂಡಾಟ) ಆಟದಲ್ಲಿದ್ದ ನೈಪುಣ್ಯತೆಯ ಸುದೀರ್ಘ ವರ್ಣನೆಯು ಈ ಶಾಸನ ಪಾಠದ ಕೇಂದ್ರವಸ್ತು. 157 ಸಾಲುಗಳ ಪಾಠದಲ್ಲಿ 150 ಸಾಲುಗಳನ್ನು ಅವನ ಲೌಕಿಕ ಸಾಧನೆಗಳನ್ನು ವರ್ಣಿಸಲು ಮೀಸಲಿಡಲಾಗಿದೆ. ಈ ರಾಜನು "ಅಚಲ ನಿಷ್ಠೆಯಿಂದ ವ್ರತವನ್ನಾಚರಿಸಿ" ದೇವೇಂದ್ರನ ಶಕ್ತಿಯನ್ನು ಪಡೆದನೆಂದು ಶಾಸನ ಕವಿಯು ಮುಕ್ತಾಯಗೊಳಿಸುವನು. ಆದರೂ ಅವನ ಮರಣಾಂತ್ಯವನ್ನು ಕಾಣಲು

71. ಸುಮಾರು 10ನೆಯ ಶತಮಾನದ 163. *ಚಲದಗ್ಗಳಿ, ಕಲಿಗಳೊಳ್‌ಗಂಡ, ಬೀರರಬೀರ, ಎಳೆವ ಬೆಡಂಗ,* ಇತ್ಯಾದಿ ಅವನ ಬಿರುದುಗಳಾಗಿದ್ದವು. ಮೊದಲ ಮೂರು ಅವನ ಕಲಿತನವನ್ನು, ನಾಲ್ಕನೆಯದು ಪೋಲೋ ಆಟದಲ್ಲಿ ಅವನಿಗಿದ್ದ ಚತುರತೆಗೆ ಪ್ರಮಾಣ ಒದಗಿಸುವುದು.

ನೆರೆದ ಜನರು ಅವನ ಮಿಣುಕು ಜೀವಿತಗಳಿಗೆಯಲ್ಲಿ ಪ್ರದರ್ಶಿಸಿದ ದೈವಭಕ್ತಿಯನ್ನು ಬಹಳಷ್ಟು ಮೆಚ್ಚಿ ಕೊಂಡಾಡಿದರಂತೆ!

ಇಂದ್ರನ ವ್ರತಾಚರಣೆಯು ವಾಸ್ತವವಾದುದಕ್ಕಿಂತ ಬಹುಶಃ ಸಾಂಕೇತಿಕ ಮಾತ್ರವಾಗಿತ್ತೆಂದು ಕಾಣುವುದು. ಜೀನನದ ಕೊನೆಯ ಗಳಿಗೆಯಲ್ಲಿ ಅವನು ಧ್ಯಾನ ಮತ್ತು ದೇಹದಂಡನೆಯ ದೀಕ್ಷೆ ಪಡೆದಿರಲು ಸಾಧ್ಯ. ಆದರೆ ಅವನು ಆಯ್ಕೆ ಮಾಡಿದ ವ್ರತಾಚರಣೆಯನ್ನಿಲ್ಲಿ ನಿರ್ದಿಷ್ಟಪಡಿಸಿಲ್ಲ; ಅವನಿಗೆ ದೀಕ್ಷೆಕೊಟ್ಟ ಗುರುವನ್ನೂ ಹೆಸರಿಸಿಲ್ಲ; ಅಲ್ಲದೆ, ಅವನ ದೇಹದಂಡನೆಯ ಅವಧಿ ಹಾಗೂ ವಿಧಾನವನ್ನೂ ಸ್ಪಷ್ಟಪಡಿಸಿಲ್ಲ. ವಾಸ್ತವವಾಗಿ ಅವನ ಅಂತ್ಯವು ಕಟವಪ್ರದ ಮೇಲೆ ಸಂಭವಿಸಿತೊ ಇಲ್ಲವೊ ಎಂಬುದೇ ಖಚಿತವಾಗಿಲ್ಲ. ಅತ್ಯಂತ ಉಜ್ವಲ ಶಬ್ದಗಳನ್ನು ಬಳಸಿ ಈ ಅರಸನ ಮರಣವನ್ನು ಶ್ಲಾಘಿಸಿರುವುದನ್ನು ನೋಡಿದರೆ ಲೌಕಿಕ ಜಗತ್ತಿನಲ್ಲಿ ಗೌರವಯುತ ಸ್ಥಾನ ಪಡೆದವರನ್ನು ಅಂದಿನ ಸಮಾಜ ಹೇಗೆ ಗೌರವಿಸುತ್ತಿತ್ತು ಎಂಬುದು ಸ್ಪಷ್ಟಗೊಳ್ಳುವುದು.

ನಾಲ್ಕುಡಿ ಇಂದ್ರನಂತೆ ಅವನ ಸಚಿವ ಮತ್ತು ಸಂಬಂಧಿಯಾದ ಗಂಗ ಮಾರಸಿಂಹನಿಗೂ ನಿಸಿಧಿಗಂಬ ನಿರ್ಮಿಸಿ ಗೌರವಿಸಲಾಯಿತು. ಇಂದ್ರನ ಮಾನಸ್ತಂಭಕ್ಕಿಂತ ಇದು ಹೆಚ್ಚು ಎತ್ತರ ಹಾಗೂ ಆಕರ್ಷಕವಾಗಿರುವುದಲ್ಲದೆ ಪರಿಪೂರ್ಣ ಪ್ರಮಾಣದಿಂದೊಡಗೂಡಿದ ಸ್ತಂಭವಾಗಿದೆ. ಮಾರಸಿಂಹನ ಶಾಸನ ಪಾಠವು ಹೆಚ್ಚೂ ಕಡಿಮೆ ಇಂದ್ರನ ಸ್ಮಾರಕ ಶಾಸನದಂತೆಯೆ ಇದೆ. ಸ್ಮರಣೆಯ ಅಂತಿಮ ಸಂದರ್ಭವನ್ನು ಗೌಣಗೊಳಿಸಿ ಮಾರಸಿಂಹನ ವೀರಸಾಧನೆಗಳನ್ನು ಮತ್ತು ರಾಜಕೀಯ ಜೀವನವನ್ನು ವಿಶದವಾಗಿ ವರ್ಣಿಸಲಾಗಿದೆ. ಐದನ್ನು ಹೊರತುಪಡಿಸಿ ಮಿಕ್ಕ ನೂರಾಹದಿಮೂರು ಸಾಲುಗಳು ರಾಜನ ಸಮರ ಸಾಹಸಗಳಿಗೆ ಮೀಸಲಾಗಿವೆ. "ಧರ್ಮ್ಮಾವತಾರನೂ ಜಗದೇಕವೀರನೂ ನುಡಿದಂತೆ ನಡೆವ ಗಣ್ಡನೂ ವಚನ ಪರಿಪಾಲಕ ಅಹಿತ ಮಾರ್ತಣ್ಡನೂ ಕದನ ಕರ್ಕ್ಕಶನೂ ನೊಳಂಬ ಕುಲಾಂತಕನೂ" ಆಗಿದ್ದ ಮಾರಸಿಂಹನು ತನ್ನ ಜೀವಿತಾವಧಿಯಲ್ಲಿ ಹಲವಾರು ಬಸದಿಗಳನ್ನು, ಮಾನಸ್ತಂಭಗಳನ್ನು ಕಟ್ಟಿಸಿದನೆಂದು ವರ್ಣಿಸಲಾಗಿದೆ. ಹೀಗೆ, ಧರ್ಮಕಾರ್ಯಗಳನ್ನು ಜೀವನದುದ್ದಕ್ಕೂ ಭಕ್ತಿಯಿಂದ ಪಾಲಿಸಿ, ತನ್ನ ಜೀವಿತಾಂತ್ಯಕ್ಕೆ ಒಂದು ವರ್ಷ ಮುಂಚೆ ಪ್ರಭುತ್ವವನ್ನು ತ್ಯಜಿಸಿ, ಆಧ್ಯಾತ್ಮಿಕ ಜೀವನವನ್ನು ಅವನು ಸ್ವೀಕರಿಸಿದನು. ಮರಣಕ್ಕೆ ಮೂರು ದಿನ ಮುನ್ನ ಅವನು ಬಂಕಾಪುರದಲ್ಲಿ ಅಜಿತಸೇನಭಟ್ಟಾರಕರಿಂದ ದೀಕ್ಷೆ ಪಡೆದು, ಅವರ ಪಾದತಲದಲ್ಲಿ ಆರಾಧನಾವ್ರತವನ್ನು ಆಚರಿಸಿ, ಸಮಾಧಿ ಸಾಧಿಸಿನೆಂದು ತಿಳಿಸಲಾಗಿದೆ.[72]

---

72. 64.

ಶ್ರಾವಕನಿಂದ ನಿರೀಕ್ಷಿಸಿದ ಎಲ್ಲ ಕಾರ್ಯಗಳನ್ನು ಮಾರಸಿಂಹನು ಪೂರೈಸಿದನೆಂಬುದನ್ನು ಇಲ್ಲಿ ಗಮನಿಸುವುದವಶ್ಯ: ಅವನು ದಕ್ಷ ಆಳ್ವಿಕೆ ನಡೆಸಿದನು, ವೈರಿಗಳನ್ನು ಸದೆಬಡಿದನು, ದೇವಾಲಯಗಳನ್ನು ಮತ್ತು ಸ್ತಂಭಗಳನ್ನು ನಿರ್ಮಿಸಿದನಲ್ಲದೆ ಇನ್ನೂ ಅನೇಕ ಪುಣ್ಯ ಕಾರ್ಯಗಳನ್ನು ಮಾಡಿದನು. ಸಾವು ಬರುವ ಮುಂಚೆಯೇ ಐಹಿಕ ಹೊಣೆಗಾರಿಕೆಗಳನ್ನು ತ್ಯಜಿಸಿ, ನಿವೃತ್ತಿ ಕೈಕೊಂಡು, ಬಂಕಾಪುರ (ಈಗಿನ ಹಾವೇರಿ ಜಿಲ್ಲೆ) ತಲುಪುವ ಪೂರ್ವದಲ್ಲಿ ತನ್ನ ಜೀವನದ ಅಂತ್ಯವನ್ನು ಮುಂಗಂಡು, ದೀಕ್ಷೆ ಪಡೆದು, ಆರಾಧನಾವ್ರತವನ್ನಾಚರಿಸಿ, ಜೀವನವನ್ನು ಅಂತ್ಯಗೊಳಿಸಿ, ಸಮಾಧಿ ಸಾಧಕನೆನಿಸಿದನು.

ಈ ಶಾಸನದ ಅಂತಿಮ ಭಾಗವು ದೇಹದಂಡನೆಯ ಬಗ್ಗೆ ಹೆಚ್ಚು ಒತ್ತು ಕೊಡದೆ, ಅವನ ಸಮರಸಾಹಸಗಳನ್ನು ಸುದೀರ್ಘವಾಗಿ ಸ್ಮರಿಸುವುದು. ಇದನ್ನು ಕಾವ್ಯ ವೈಲಕ್ಷಣ್ಯವೆಂದು ತಳ್ಳಿಹಾಕಬಹುದು; ಆದರೆ, ಅದು ಅಷ್ಟು ಆಕಸ್ಮಿಕ ಮಾತ್ರ ಆಗಿರಲಾರದು. ಆ ಕಾಲದ ನಿಸಿಧಿ ಶಾಸನಗಳು (ಅವು ಪ್ರಭಾವಿ ಗುಡ್ಡರವಿರಲಿ ಇಲ್ಲವೆ ಧರ್ಮಿಷ್ಠ ಶ್ರಮಣ-ಕಂತಿಯರವಿರಲಿ), ಉಗ್ರ ಕಾವ್ಯದಿಂದ ಪ್ರಭಾವಿತಗೊಂಡಿರುವುದನ್ನು ನಾವು ಸುಲಭವಾಗಿ ಗುರುತಿಸಬಹುದು. ಮಾರಸಿಂಹನ ನಿಸಿಧಿಯ ಅತ್ಯಂತ ಕುತೂಹಲಕರವಾದ ಅಂಶವೆಂದರೆ ಅವನ ಮರಣವು ಕಟವಪ್ರದಲ್ಲಲ್ಲದೆ ಬೆಳ್ಗೊಳದಿಂದ ದೂರ ಸಂಭವಿಸಿದ್ದು; ಆದರೂ ಅಂಥವನಿಗೆ ಚಿಕ್ಕಬೆಟ್ಟದ ಮೇಲೆ ವಿಜಯಸ್ತಂಭ ಮತ್ತು ಮಾನಸ್ತಂಭಗಳನ್ನು ನಿಸಿಧಿ ಸ್ವರೂಪದಲ್ಲಿ ನಿಲ್ಲಿಸಿದ್ದು. ಇಷ್ಟೇ ಮಹತ್ವವಾದದ್ದು ಮಾರಸಿಂಹನು ಬೇರೆ ಬೇರೆ ಸ್ಥಳಗಳಲ್ಲಿ ನಿರ್ಮಿಸಿದ ಜಿನಬಸದಿ ಹಾಗೂ ಮಾನಸ್ತಂಭಗಳ ಉಲ್ಲೇಖ. ಶ್ರವಣಬೆಳ್ಗೊಳದ ನಿಸಿಧಿ ಶಾಸನಗಳಲ್ಲಿ ಬರುವ ದೇವಸ್ಥಾನಗಳ ಅತಿ ಪ್ರಾಚೀನ ಉಲ್ಲೇಖವೂ ಇಲ್ಲಿದೆ. ಔಚಿತ್ಯ ಪೂರ್ಣವೆನಿಸುವಂತೆ, ಚಿಕ್ಕಬೆಟ್ಟವನ್ನೆಲ್ಲ ಈ ಕಾಲದಲ್ಲಿ ದೇವಾಲಯಗಳು ಆವರಿಸಿಕೊಳ್ಳತೊಡಗಿದ್ದವು.

ಆಧ್ಯಾತ್ಮಿಕ ಮನೋಧರ್ಮದಲ್ಲಿ ಸ್ಥಿತ್ಯಂತರ : ದೇವಾಲಯಗಳ ಸಂಖ್ಯೆ ಹೆಚ್ಚಿ ಶ್ರಾವಕರು ಮತ್ತು ಯಾತ್ರಾರ್ಥಿಗಳಿಂದ ತುಂಬತೊಡಗಿದ ಕಟವಪ್ರದ ಸ್ವರೂಪದಲ್ಲಿ ಅನೇಕ ಬದಲಾವಣೆಗಳುಂಟಾಗಿದ್ದು ಈ ಕಾಲದ ಮತ್ತೊಂದು ವೈಶಿಷ್ಟ್ಯ. ಈ ಮೊದಲು ನೋಡಿರುವಂತೆ ಆರಂಭಕಾಲದ ಮೊದಲ ಹಂತದಲ್ಲಿ (6-9ನೆಯ ಶತಮಾನ) ಇದೊಂದು ತೆರೆದ ಬೆಟ್ಟವಾಗಿತ್ತು. ಅದರ ಶೈಲಶಿಲೆಯ ವಿಸ್ತಾರವು ಬಂಡೆ, ಗುಂಡು, ಗುಹೆ, ಗೊಟರುಗಳಿಂದ ತುಂಬಿಕೊಂಡಿತ್ತು. ಭದ್ರಬಾಹುವಿನ ಐತಿಹ್ಯದಿಂದಾಗಿ ಇಲ್ಲಿಯ ಒಂದು ಗುಹೆಯು ಉಳಿದೆಲ್ಲವುಗಳಿಗಿಂತ ಅಧಿಕ ಪಾವಿತ್ರತೆಯನ್ನು ಗಳಿಸಿಕೊಂಡದ್ದು ಸುಮಾರು 9-10ನೆಯ ಶತಮಾನಗಳಲ್ಲಿ.[73] ಈ ಶ್ರಮಣನ ಸಾಂಕೇತಿಕ ಪಾದಚಿಹ್ನೆಗಳನ್ನು ಈ ಕಾಲದಲ್ಲಿ ಕೆತ್ತಲಾಯಿತೊ ಇಲ್ಲವೊ ಎಂಬುದನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ. ಅದು ಏನೇ ಇರಲಿ,

73. 251.

ಭದ್ರಬಾಹುವಿನ ಪಾದಚಿಹ್ನೆಗಳ ಪೂಜೆಯು 10-13 ನೆಯ ಶತಮಾನದಲ್ಲಿ ಹೆಚ್ಚು ಜನಪ್ರಿಯವಾಯಿತೆಂಬುದರಲ್ಲಿ ಸಂದೇಹವಿಲ್ಲ.[74] ಈ ಶ್ರಮಣನ ಐತಿಹ್ಯದಿಂದ ಆಕರ್ಷಿತರಾಗಿ, ಸುಮಾರು 10ನೆಯ ಶತಮಾನದ ನಂತರ ಹೆಚ್ಚುಹೆಚ್ಚು ಸಂಖ್ಯೆಯಲ್ಲಿ ಭಕ್ತರು ಈ ಗುಹೆಯನ್ನು ಸಂದರ್ಶಿಸಲು ಉತ್ಸುಕರಾಗಿ ಬರತೊಡಗಿದರೆಂಬುದರಲ್ಲೂ ಸಂದೇಹವಿಲ್ಲ. ಇದೇ ಕಾಲದಲ್ಲಿ ಒಂದೆರಡು ದೇವಾಲಯಗಳು ಇಲ್ಲಿ ತಲೆಯೆತ್ತಿದವು. ಶಿವಮಾರನು ಕಟ್ಟಿಸಿದ ಒಂದು ದೇವಾಲಯ, ಅರಿಷ್ಟನೇಮಿಯು ಕಟ್ಟಿಸಿದ ಮತ್ತೊಂದು ದೇವಾಲಯ, ಆಗ ಚಿಕ್ಕಬೆಟ್ಟದಲ್ಲಿದ್ದ ಬಗ್ಗೆ ಲಿಖಿತ ಪುರಾವೆಗಳು ದೊರೆಯವುವು. ಆದರೆ, ಈ ಕಟ್ಟಡಗಳನ್ನು ನಿರ್ದಿಷ್ಟವಾಗಿ ಗುರುತಿಸುವುದು ಇದುವರೆಗೂ ಸಾಧ್ಯವಾಗಿಲ್ಲ. ಹೆಚ್ಚು ಮನಮೋಹಕ ಹಾಗೂ ಉಪಯುಕ್ತ ಸ್ಮಾರಕಗಳು 10ನೆಯ ಶತಮಾನದಲ್ಲಿ ಈ ಬೆಟ್ಟವನ್ನಲಂಕರಿಸಿದವೆಂದು ತೋರುವುದು.

ಕಟವಪ್ರ ಶಿಖರದಲ್ಲಿ ಪ್ರಾಕೃತಿಕ ಗುಹೆಗಳಿದ್ದಂತೆ ಒಂದೆರಡು ಪ್ರಾಕೃತಿಕ ಕೊಳಗಳೂ ಇದ್ದವು. ಭದ್ರನೆಂಬುವನು ಮತ್ತೊಂದು ಕೊಳವನ್ನು ಇಲ್ಲಿ ತೋಡಿಸಿ, ಹೆಚ್ಚುತ್ತಿದ್ದ ಯಾತ್ರಿಗಳ ಅಗತ್ಯತೆಗಳನ್ನು ಪೂರೈಸಲು ವಿಶೇಷ ಅನುವು ಮಾಡಿಕೊಟ್ಟನೆಂದು ತಿಳಿದುಬರುವುದು.[75]

ಅತಿ ದೊಡ್ಡ ಮತ್ತು ಅತ್ಯಾಲಂಕೃತ ದೇವಾಲಯವೊಂದು ಬೆಟ್ಟವನ್ನಲಂಕರಿಸಿದ್ದು ಈ ಕಾಲದಲ್ಲಿಯೆ. ಇದನ್ನು ಚಾವುಂಡರಾಯ ಮತ್ತು ಅವನ ಮಗ ಜಿನದೇವನ ಹೆಸರುಗಳಿಂದ ಗುರುತಿಸಲಾಗಿದೆ.[76]

ಶಾಸನಗಳಲ್ಲಿ ಉಲ್ಲೇಖಗೊಂಡ ಸ್ಮಾರಕಗಳಲ್ಲದೆ, ಅವುಗಳ ವಾಸ್ತುಶಿಲ್ಪ ಲಕ್ಷಣಗಳನ್ನಾಧರಿಸಿ ಇನ್ನೂ ಕೆಲವು ಬಸದಿಗಳನ್ನು 10ನೆಯ ಶತಮಾನಕ್ಕೆ ಸೇರಿಸಬಹುದು. ಈಗಿನ ಚಂದ್ರಗುಪ್ತ ಬಸದಿ ಬಹುಶಃ 9ನೆಯ ಶತಮಾನಕ್ಕೆ ಹೋಗುತ್ತದೆ.[77] ಹಿಂದಿನ ಕಾಲದಲ್ಲಿ ಆಗೊಮ್ಮೆ ಈಗೊಮ್ಮೆ ಬೆಟ್ಟಕ್ಕೆ ಬರುತ್ತಿದ್ದ ಯಾತ್ರಿಗಳು ಬಹುಶಃ ಈ ದೇವಾಲಯದಲ್ಲಿ ಅಭಿಷಿಕ್ತಗೊಂಡ ಜಿನಮೂರ್ತಿಗೆ ತಲೆಬಾಗುತ್ತಿದ್ದರು.[78] ಚಾವುಂಡರಾಯ ಬಸದಿ (ವಕ್ರಗಚ್ಛ ಬಸದಿ) ಮತ್ತು ಎರಡನೆಯ ಪಾರ್ಶ್ವನಾಥ ಬಸದಿ ಎಂದು ಈಗ ಹೆಸರು ಪಡೆದಿರುವ ಇನ್ನೆರಡು ದೇವಾಲಯಗಳು ಈ ಶತಮಾನದ ಉತ್ತರಾರ್ಧದಲ್ಲಿ ಈ ಬೆಟ್ಟವನ್ನಲಂಕರಿಸಿದವು. ವಕ್ರಗುಚ್ಛ ಬಸದಿಯ ಪೋಷಕನ ಬಗ್ಗೆ ತಿಳಿದುಬಂದಿಲ್ಲ. ಆದರೆ ಆತನು ಮೂಲಸಂಘದ ವಕ್ರಗುಚ್ಛ

---

74. 254.
75. 140, 67 ಮತ್ತು 166.
76. 151 ಮತ್ತು 150.
77. ಎಸ್. **ಶೆಟ್ಟರ್**; ***ಶ್ರವಣಬೆಳ್ಗೊಳ: ಒಂದು ಸಚಿತ್ರ ಅಧ್ಯಯನ*** (ಧಾರವಾಡ, 1981), ಪು. 17.
78. 9ನೆಯ ಶತಮಾನದ ಯಾತ್ರಿಗಳಲ್ಲಿ ಕೆಲವರು ಮಾತ್ರ ತಮ್ಮ ಹೆಸರು ಬಿಟ್ಟುಹೋಗಿರುವರು. ಅವರಲ್ಲಿ ನಾಗಣಂದಿ, ಕಿತ್ತಯ್ಯ ಕಟವಪ್ರಕ್ಕೆ ಸಂದರ್ಶನ ನೀಡಿ, ದೇವರಿಗೆ ತಲೆಬಾಗಿದರೆಂದು ಹೇಳಲಾಗಿದೆ. ಎಕ II, 60.

ಶಾಖೆಗೆ ಸೇರಿದವನೆಂದು ಹೇಳಿಕೊಂಡಿರುವುದು ಹಾಗೂ ಈ ಎರಡೂ ಬಸದಿಗಳೂ ಗಂಗರ ವಾಸ್ತುಶೈಲಿಯನ್ನು ಪ್ರತಿಬಿಂಬಿಸುವುದು ಗಮನಾರ್ಹ.[79]

11ನೆಯ ಶತಮಾನದಲ್ಲಿ ಇನ್ನೆರಡು ದೇವಾಲಯಗಳನ್ನು ನಿರ್ಮಿಸಲಾಯಿತು. ಅವು 'ಶಾಂತಿನಾಥ' ಮತ್ತು 'ಮಜ್ಜಿಗಣ' ಎಂದು ಈಗ ಹೆಸರು ಪಡೆದಿರುವ ದೇವಾಲಯಗಳಾಗಿವೆ. ವಾಸ್ತುಶಿಲ್ಪೀಯ ಲಕ್ಷಣಗಳನ್ನಾಧರಿಸಿ ಅವುಗಳನ್ನು 10ನೆಯ ಶತಮಾನದ ಕೊನೆ ಮತ್ತು 11ನೆಯ ಶತಮಾನದ ಆದಿ ಭಾಗಕ್ಕೆ ಸೇರಿಸಬಹುದು.

9-11ನೆಯ ಶತಮಾನಗಳ ಕಾಲಾವಧಿಯಲ್ಲಿ ಚಿಕ್ಕಬೆಟ್ಟದ ಮೇಲೆ ಭದ್ರಬಾಹು ಗುಹೆಯಲ್ಲದೆ ಆರೇಳು ದೇವಾಲಯಗಳು ಮತ್ತು ಒಂದೆರಡು ಸ್ಮಾರಕ ಸ್ತಂಭಗಳಿದ್ದುದನ್ನು ಈ ಎಲ್ಲ ಆಕರಗಳು ಸ್ಪಷ್ಟಗೊಳಿಸುವುವು. ಇವುಗಳಲ್ಲಿ ಚಂದ್ರಗುಪ್ತ ಬಸದಿ ಅತ್ಯಂತ ಪ್ರಾಚೀನವಾಗಿದ್ದರೆ (9ನೆಯ ಶತಮಾನ) ಮಜ್ಜಿಗಣ ಬಸದಿಯು (ಸಮಾರು 11ನೆಯ ಶತಮಾನ)[80] ತೀರ ಇತ್ತೀಚಿನದಾಗಿತ್ತು.

---

79. ಶೆಟ್ಟರ್, ಉಪರೋಕ್ತ, ಪು. 23-24.

80. ಶಾಸನ ಮತ್ತು ಪ್ರಾಕ್ತನ ಅವಶೇಷಗಳಲ್ಲಿ ಈ ಮುಂದಿನ ಚಿತ್ರ ಹೊರಹೊಮ್ಮುವುದು: (ಅ) 6-8ನೆಯ ಶತಮಾನಗಳಲ್ಲಿ ಕಟವಪ್ರದ ಶಿಖರವು ತೆರೆದ ಅಂಗಳವಾಗಿತ್ತು. ಅದರ ಶೈಲಶಿಲೆಯ ವಿಸ್ತಾರವು ಬಂಡೆಗಲ್ಲು, ಬಂಡೆಗೂಡು, ಗುಹೆ ಮತ್ತು ಕೊಳಗಳನ್ನೊಳಗೊಂಡಿದ್ದವು. ಶ್ರಮಣ-ಕಂತಿಯರು ದೇಹದಂಡನಾ ಕ್ರಿಯೆಯಲ್ಲಿ ತೊಡಗಿದ್ದ ಶೈಲಶಿಲೆಯ ಮೇಲೆ ಭದ್ರಬಾಹು ಗುಹೆಯು ದೃಷ್ಟಿ ಬೀರಿ ನಿಂತಿತ್ತು. ಶೈಲಶಿಲೆಯು ನಿಸಿಧಿಗಳಿಂದ ಮತ್ತು ಪುಣ್ಯವಂತರ ಪಾದಚಿಹ್ನೆಗಳಿಂದ ಅಲಂಕರಿಸಲ್ಪಟ್ಟಿತ್ತು.

(ಆ) 9ನೆಯ ಶತಮಾನದಲ್ಲಿ ತ್ರಿಕೂಟಗಳ ಒಂದು ಚಿಕ್ಕ ದೇವಾಲಯವು ದಕ್ಷಿಣಕ್ಕೆ ಮುಖಮಾಡಿ ನಿಂತಿತ್ತು. ಚಂದ್ರಗುಪ್ತ ಬಸದಿ ಎಂದು ಅದನ್ನು ನಂತರ ಕರೆಯಲಾಯಿತು.

(ಇ) 10ನೆಯ ಶತಮಾನದಲ್ಲಿ ಎರಡು ಸರಳ ದ್ರಾವಿಡ ಮಾದರಿಯ ಕಟ್ಟಡಗಳನ್ನು ಚಂದ್ರಗುಪ್ತ ಬಸದಿಯ ಅನತಿ ದೂರದಲ್ಲಿ ಸ್ಥಾಪಿಸಲಾಯಿತು. ಗಂಗ ಶೈಲಿಯ ಪಾರ್ಶ್ವನಾಥ ಮತ್ತು ಚಂದ್ರಗುಪ್ತ ಅಥವಾ ವಕ್ರಗಚ್ಛ ಬಸದಿಗಳನ್ನು ಬಹುಶಃ ಇದೇ ಶತಮಾನದ ಕೊನೆಗೆ ನಿರ್ಮಿಸಲಾಯಿತು. ಇವುಗಳನ್ನೆಲ್ಲ ಮರೆಮಾಚುವಂತೆ, ಚಾವುಂಡರಾಯ ಮತ್ತು ಜಿನದೇವನು ಅತ್ಯಂತ ಅಲಂಕೃತವಾದ ದ್ರಾವಿಡ ಮಾದರಿಯ ಕಟ್ಟಡವನ್ನು 10ನೆಯ ಶತಮಾನದ ಕೊನೆಯ ದಶಕದಲ್ಲಿ ಅಥವಾ 11ನೆಯ ಶತಮಾನದ ಆದಿ ಭಾಗದಲ್ಲಿ ನಿರ್ಮಿಸಿದರು.

(ಈ) ಎರಡು ಸ್ತಂಭಗಳನ್ನು 10ನೆಯ ಶತಮಾನದಲ್ಲಿ ಸ್ಥಾಪಿಸಲಾಯಿತು. ಸರಳ, ಚತುರಸ್ರಾಕಾರದ ಮತ್ತು ಅಖಂಡ ಶಿಲೆಯ ಒಂದು ಕಂಬವನ್ನು ರಾಷ್ಟ್ರಕೂಟ ನಾಲ್ಮಡಿ ಇಂದ್ರನ ಸ್ಮಾರಕವಾಗಿ ಬಯಲು ಮಂಟಪದಲ್ಲಿ ಸ್ಥಾಪಿಸಲಾದರೆ, ನಿರಾವಲಂಬಿಯಾಗಿ ನಿಂತಿರುವ, ಬೃಹತ್, ಅಲಂಕೃತ ಮಾನಸ್ತಂಭವನ್ನು ಮಾರಸಿಂಹನಿಗೆ ಸ್ಮಾರಕವೆಂದು ನಿರ್ಮಿಸಲಾಗಿತ್ತು. ಈ ಕಾಲಾವಧಿಯ ಸುಮಾರಿಗೆ ಭರತ ಎಂದು ಕರೆಯಲಾಗುವ ದೊಡ್ಡ ವಿಗ್ರಹವೂ ಬಯಲಿನಲ್ಲಿ ನಿಂತಿತ್ತು.

ಮಹಾವಿಗ್ರಹ : ಚಿಕ್ಕಬೆಟ್ಟದ ಮೇಲಿನ ದೇವಾಲಯಗಳಿಗಿಂತ ದೊಡ್ಡಬೆಟ್ಟದ ಮೇಲಿದ್ದ ಒಂದು ಅಖಂಡ ಶಿಲೆಯಲ್ಲಿ ಮೂಡಿಸಿದ ಗೊಮ್ಮಟನ ಮಹಾವಿಗ್ರಹವು ಈ ಕೇಂದ್ರದ ಆಧ್ಯಾತ್ಮಿಕ ಸ್ವರೂಪವನ್ನು ಬದಲಾಯಿಸಿತು. ಆದಿತೀರ್ಥಂಕರನ ಪುತ್ರನಾದ ಬಾಹುಬಲಿಯ ಏಕಶಿಲಾ ವಿಗ್ರಹವನ್ನು 978-993 ರ ಮಧ್ಯೆ ಯಾವಾಗಲೋ ಗಂಗ ಅರಸ ರಾಚಮಲ್ಲನ ಮಂತ್ರಿಯಾದ ಚಾವುಂಡರಾಯನು ಕಡೆಸಿದನು.[81] ಗೊಮ್ಮಟ ಎಂದು ಜನಪ್ರಿಯಗೊಂಡಿರುವ ಈ ವಿಗ್ರಹವು ಸುಮಾರು 58' 8" ಎತ್ತರವಿದೆ. ಅದು ಈ ಬೆಟ್ಟದ ನೆತ್ತಿಯ ಮೇಲೆ ತೆರೆದ ಚೌಕು ಪ್ರಾಂಗಣದಲ್ಲಿ ನಿಂತಿದೆ. ಅಂದು ಪೆರ್ಗ್ಗಳ್ಬಪ್ಪು ಎಂದು ಕರೆಯಲಾಗುತ್ತಿದ್ದ 438 ಅಡಿ ಎತ್ತರದ ಹೆಬ್ಬಂಡೆಯ ಮೇಲಿದ್ದ ಮತ್ತೊಂದು ಬಂಡೆಯನ್ನು ಕೊರೆದು ಈ ವಿಗ್ರಹವನ್ನು ರಚಿಸಲಾಯಿತು.

ಒಬ್ಬ ತೀರ್ಥಂಕರನ ವಿಗ್ರಹವನ್ನಲ್ಲದೆ ಬಾಹುಬಲಿಯ ವಿಗ್ರಹವನ್ನು ಚಾವುಂಡರಾಯನು ಏಕೆ ಇಲ್ಲಿ ಕಡೆಸಿದ ಎಂಬುದರ ಬಗ್ಗೆ ಖಚಿತ ಮಾಹಿತಿ ಇಲ್ಲ. ಆದರೆ, ಈ ವಿಗ್ರಹದ ಸುತ್ತ ಹಬ್ಬಿರುವ ಐತಿಹ್ಯ ಎಲ್ಲರಿಗೂ ಪರಿಚಿತವಾದುದಾಗಿದೆ. ಬಾಹುಬಲಿ ಕೈಕೊಂಡ ಚಾರಿತ್ರಿಕ ತಪಸ್ಸು ಚಾವುಂಡರಾಯನ ಮನಃಪಟಲದ ಮೇಲೆ ಅಪಾರ ಮುದ್ರೆ ಒತ್ತಿ ಕಟವಪ್ರದ ಮೇಲೆ ದೇಹದಂಡನೆ ಕೈಕೊಂಡ ಶ್ರಮಣ-ಕಂತಿಯರ ಕಾಯಕ್ಲೇಶದ ಸ್ವರೂಪವನ್ನು ಬಿಂಬಿಸಲು ಬಾಹುಬಲಿಯೇ ತಕ್ಕ ವಸ್ತುವೆಂದು ಚಾವುಂಡರಾಯ ಭಾವಿಸಿರಲು ಸಾಧ್ಯ. ಚಿಕ್ಕಬೆಟ್ಟದ ಮೇಲೆ ದೃಷ್ಟಿ ಹರಿಸುತ್ತ, ಕೊಳ್ಳದ ಮೇಲೆ ಪ್ರಭಾವ ಬೀರುತ್ತ, 10ನೆಯ ಶತಮಾನದ ನಂತರ ಈ ಕೇಂದ್ರದಲ್ಲಿ ಜರುಗಿದ ಪ್ರತಿಯೊಂದು ಘಟನೆಯ ಮೇಲೆ ತನ್ನ ಮುದ್ರೆಯೊತ್ತುತ್ತಾ, ಗೊಮ್ಮಟನಿಲ್ಲಿ ನಿಂತಿರುವನು. ಕಾಯಕ್ಲೇಶದಲ್ಲಿ ನಿರತರಾದ ಶ್ರಮಣರಿಗೆ ಗೌರವ ನೀಡಲು, ತೀರ್ಥಕ್ಕೆ ಮತ್ತು ದೇವರಿಗೆ ತಲೆಬಾಗಲು ಅಂದಿನವರೆಗೂ ಬರುತ್ತಿದ್ದ ಯಾತ್ರಿಕರು, ಗೊಮ್ಮಟನ ಏಕಶಿಲಾ ಮಹಾವಿಗ್ರಹವು ನಿರ್ಮಾಣವಾದ ನಂತರ, ಈ ವಿಸ್ಮಯಕಾರಕ ದೈವೀಮೂರ್ತಿಯನ್ನು ಕಾಣಲು ಅಧಿಕ ಸಂಖ್ಯೆಯಲ್ಲಿ ದೊಡ್ಡಬೆಟ್ಟಕ್ಕೆ ಬರತೊಡಗಿದರು.

ಆಧ್ಯಾತ್ಮಿಕ ಸರಳತೆಯ ಅಂತ್ಯ : ಚಾವುಂಡರಾಯನು ಎರಡೂ ಬೆಟ್ಟಗಳ ಮೇಲೆ ಎರಡು ಅದ್ಭುತಗಳನ್ನು ನಿರ್ಮಿಸಿದನೆಂಬುದೇನೋ ನಿಜ; ಆದರೆ ಅವನ ಈ ಮಹಾಕಾರ್ಯಗಳಿಂದಲೇ

(ಉ) ದೊಡ್ಡ ವಿಗ್ರಹವಿರುವ ಶಾಂತಿನಾಥ ಬಸದಿ ಮತ್ತು ಸರಳಸ್ವರೂಪದ ಮಜ್ಜಿಗಣ ಬಸದಿಗಳು 11ನೆಯ ಶತಮಾನದ ಆದಿಯಲ್ಲಿ ಶಿಖರದ ಮೇಲಿನ ಸ್ಥಳವನ್ನು ಹಂಚಿಕೊಂಡವು. ಬಹುಶಃ ಇದೇ ಶತಮಾನದಲ್ಲಿ ಭದ್ರಬಾಹು ಗುಹೆಯನ್ನು ನವೀಕರಿಸಲಾಯಿತು.

81. ಸಾಮಾನ್ಯವಾಗಿ ಸ್ವೀಕೃತವಾದ ಕಾಲ 980.

ಆಧ್ಯಾತ್ಮಿಕ ಸರಳತೆಯ ಯುಗವು ಅಂತ್ಯಗೊಂಡದ್ದು ಒಂದು ವಿಪರ್ಯಾಸ.[82] ದೊಡ್ಡಬೆಟ್ಟದಲ್ಲಿ ಕೊರೆಸಿದ ಮಹಾವಿಗ್ರಹದಿಂದಾಗಿ ಕಟವಪ್ರದ ಏಕಸ್ವಾಮ್ಯವು ಅಂತ್ಯಗೊಂಡಿತಲ್ಲದೆ, ಬೆಳ್ಗೊಳವು ಕೇವಲ ದೇಹದಂಡನೆಕಾರರ ಕೇಂದ್ರವಾಗಿ ಉಳಿಯಲಿಲ್ಲ. ಅಲ್ಲದೆ, ದೇಹದಂಡನೆಕಾರರ ಸಂಖ್ಯೆಯು 900-1100ರ ಕಾಲಾವಧಿಯಲ್ಲಿ ತೀವ್ರಗತಿಯಲ್ಲಿ ಇಳಿಯತೊಡಗಿ, ಈ ಬೆಟ್ಟದ ಮೇಲೆ ಇಚ್ಛಾಮರಣ ಸಾಧಿಸಿದ ಒಬ್ಬ ಶ್ರಮಣನ ಉದಾಹರಣೆಯೂ ದೊರೆಯದಂತಾಯಿತು. ಇಬ್ಬರು ಕಂತಿಯರು ಮಾತ್ರ ಕಟವಪ್ರದ ಮೇಲೆ ಸಮಾಧಿ ಮರಣ ಸಂಪ್ರದಾಯವನ್ನು ಆಗ ಜೀವಂತವಾಗಿಟ್ಟಂತೆ ತೋರುವುದು.[83]

ಈ ಅವಧಿಯಲ್ಲಿ ಶ್ರದ್ಧಾವಂತ ಶ್ರಮಣರನೇಕರು ಬೆಟ್ಟದಿಂದ ದೂರ ಸರಿದರು; ಇನ್ನು ಕೆಲವರು ಹೊಸ ಹವ್ಯಾಸಗಳನ್ನು ಬೆಳಸಿಕೊಂಡು, ಧರ್ಮಸಂಸ್ಥೆಗಳನ್ನು ಬಲಪಡಿಸಲು ತಮ್ಮ ಹೆಚ್ಚಿನ ಸಮಯ ಮತ್ತು ಶಕ್ತಿಯನ್ನು ವಿನಿಯೋಗಿಸತೊಡಗಿದರು. ಶ್ರೀಮಂತರನ್ನು ತಮ್ಮ ಗುಡ್ಡರನ್ನಾಗಿ ಒಲಿಸಿಕೊಳ್ಳುವ ಮೂಲಕ ಮತ್ತು ದೇವಾರ್ಚನೆಯನ್ನು ಜನಪ್ರಿಯಗೊಳಿಸುವ ಮೂಲಕ ಈ ಗುರಿ ಸಾಧಿಸಲು ಪ್ರಯತ್ನಪಡಲಾಯಿತು. ಅಜಿತಸೇನಭಟ್ಟಾರಕರು ಇಂತಹ ಒಬ್ಬ ಶಿಷ್ಯನನ್ನು ಗುರುತಿಸಿದ್ದು ಗಂಗ ಮಾರಸಿಂಹನಲ್ಲಿ. ಅಜಿತಸೇನ ಮತ್ತು ನೇಮಿಚಂದ್ರ ಮುನಿಗಳಿಗೆ ದೊರೆತ ಇಂತಹ ಶಿಷ್ಯರೆಂದರೆ ಮಂತ್ರಿ ಚಾವುಂಡರಾಯ ಮತ್ತು ಅವನ ಮಗ ಜಿನದೇವಣ. ರಾಜ್ಯಗಳನ್ನು ಸ್ಥಾಪಿಸುವಲ್ಲಿ ಮತ್ತು ರಾಜರ ಭವಿಷ್ಯವನ್ನು ರೂಪಿಸುವಲ್ಲಿ ತಮ್ಮ ಪಾಲೂ ಉಂಟೆಂದು ಜೈನ ಮುನಿಗಳು ಈ ಕಾಲದಲ್ಲಿ ಸಾಧಿಸತೊಡಗಿದರು. ಆದರೂ ಇಂಥ ಸಾಧನೆಯ ಒತ್ತಾಸೆ ಬೆಳ್ಗೊಳದಲ್ಲಿ ಹೆಚ್ಚು ಸ್ಪಷ್ಟಗೊಳ್ಳುವುದು ತರುವಾಯದ ಶಾಸನಗಳಲ್ಲಿ ಮಾತ್ರ.[84]

ಜೈನ ಮುನಿಗಳೊಂದಿಗೆ ಹೊಂದಿದ್ದ ಶಕ್ತಿಶಾಲಿ ಶ್ರಾವಕರ ಈ ಸಂಯೋಗವು ಹಿಂದಿನ ಕಾಲದ ಸಂಬಂಧಕ್ಕಿಂತ ಭಿನ್ನವಾಗಿತ್ತು. ಹಿಂದೊಮ್ಮೆ ರಾಜಮಾನ್ಯತೆಗೊಳಗಾದ ಶ್ರಮಣರು ತಮ್ಮ ದೇಹದಂಡನೆಯನ್ನು ವೀಕ್ಷಿಸಲು ಮಾತ್ರ ಶ್ರಾವಕ ನಾಯಕರನ್ನು ಬೆಟ್ಟಕ್ಕೆ

---

82. ಚಿಕ್ಕಬೆಟ್ಟದ ಮೇಲೆ ತುಂಬಾ ಸುಂದರವಾದ ಒಂದು ಬೃಹತ್ ಬಸದಿಯನ್ನು ಕಟ್ಟುವ ಮೂಲಕ ಮತ್ತು ದೊಡ್ಡಬೆಟ್ಟದ ಮೇಲೆ ಮಹಾಮೂರ್ತಿಯನ್ನು ಕೊರೆಸುವ ಮೂಲಕ, ಈ ಶ್ರೇಯಸ್ಸನ್ನು ಅವನು ಪಡೆದು ಕೊಂಡನು.

83. 10ನೆಯ ಶತಮಾನದ 168 ಮತ್ತು 11ನೆಯ ಶತಮಾನದ 203. ಅನುಕ್ರಮವಾಗಿ ಅವರು ಸಾಯಿಬ್ಬೆ ಮತ್ತು ಪೊಲ್ಲಬ್ಬೆ ಕಂತಿಯರು.

84. ಸಿಂಹಣಂದಿಯು ಗಂಗ ವಂಶವನ್ನು ಸ್ಥಾಪಿಸಿದುದನ್ನು ಬೇರೆಡೆ ದೊರೆತ ಶಾಸನಗಳು ದೃಢೀಕರಿಸುವುದು. (ಉದಾಹರಣೆಗೆ ನೋಡಿ. *ASMAR* 1921, ಪು. 19, ಎ ಕ VIII, 10ನೆಯ ಶತಮಾನದವುಗಳೆಂದು ಗುರುತಿಸಿದ ನಗರ 36 ಮತ್ತು 35), ಆದರೆ, ಅದರ ಸ್ಪಷ್ಟ ಉಲ್ಲೇಖವು ಸುಮಾರು 1129ರ ಬೆಳ್ಗೊಳದ ಶಾಸನದಲ್ಲಿ ಮಾತ್ರ ದೊರೆಯುವುದು. ಎ ಕ. II, 77.

ಬರಮಾಡಿಕೊಳ್ಳುತ್ತಿದ್ದದು ಈ ಕಾಲದಲ್ಲಿ ಬದಲಾಯಿತು.[85] ಅಲ್ಲದೆ, ಬೆಳ್ಗೊಳದ ಇತಿಹಾಸವನ್ನು ದೊಡ್ಡ ಪ್ರಮಾಣದಲ್ಲಿ ರೂಪಿಸಲು ಮೂಲಸಂಘವು ಈ ಕ್ಷೇತ್ರವನ್ನು ಪ್ರವೇಶಿಸಿ, ಅದರ ನಾಯಕತ್ವ ವಹಿಸಿಕೊಂಡಿತು.

ಮೂಲಸಂಘದ ಪ್ರವೇಶ; ಮೂಲಸಂಘದ ಪ್ರಾಚೀನತೆಯನ್ನು ಕ್ರಿಸ್ತಶಕೆಯ ಆರಂಭಿಕ ವರ್ಷಗಳಲ್ಲಿ ಗುರುತಿಸಲಾಗಿದ್ದರೂ ಬೆಳ್ಗೊಳದ ಶಾಸನಗಳು ಮಾತ್ರ ಅದರ ದಾಖಲಿತ ಇತಿಹಾಸವನ್ನು 6 ರಿಂದ 11ನೆಯ ಶತಮಾನಗಳಲ್ಲಿ ಮಾತ್ರ ಗುರುತಿಸಿವೆ. ಮೊದಲ ಸಹಸ್ರಮಾನದ ಪ್ರಥಮಾರ್ಧದಲ್ಲಿ ಈ ಸಂಘದ ಬಗ್ಗೆ ಅವು ಮೌನ ತಳೆದಿರುವುದು ವಿಚಿತ್ರವಾಗಿದೆ. ಮೂಲಸಂಘದ ಪ್ರಮುಖ ಹಾಗೂ ಅತ್ಯಂತ ಶಕ್ತಿಶಾಲಿ ಉಪಶಾಖೆಯಾದ ಕೊಂಡಕುಂದಾನ್ವಯದ ದೇಸಿಗಗಣ ಪುಸ್ತಕಗಚ್ಛದ ಪ್ರಾಚೀನ ಉಲ್ಲೇಖವು 1094ರ ಒಂದು ಶಾಸನದಲ್ಲಿ ಬರುತ್ತದೆ. ಆದರೆ ಈ ಶಾಸನವು ಬೆಳ್ಗೊಳದಲ್ಲಿರದೆ ಹಳೇಬೆಳ್ಗೊಳದಲ್ಲಿದೆ.[86] ಬೆಳ್ಗೊಳದ ಶಾಸನಗಳು ಈ ಸಂಘವನ್ನು 1113ರಿಂದ ಮಾತ್ರ ಉಲ್ಲೇಖಿಸಲಾರಂಭಿಸುವುವು.[87]

ಮೂಲಸಂಘದ ದೇಸಿಗಗಣ-ಪುಸ್ತಕಗಚ್ಛ-ಕೊಂಡಕುಂದಾನ್ವಯವಲ್ಲದೆ, ವಕ್ರ, ಇಂಗುಳೇಶ್ವರ, ನಂದಿ, ದ್ರಾವಿಡ ಮತ್ತು ಬಲಾತ್ಕಾರ, ಮುಂತಾದ ಶಾಖೆಗಳಿಗೂ ಉಲ್ಲೇಖಗಳು ಬರುವುವು.[88] ಮೂಲಸಂಘದ ವಕ್ರಗಚ್ಛ ಶಾಖೆಯ ಶ್ರಮಣರು ಬೆಳ್ಗೊಳವನ್ನು ಪ್ರಥಮವಾಗಿ ಪ್ರವೇಶಿಸಿದ್ದರಿಂದ, ಅವರಿಗೆ ಇಲ್ಲಿ ಹೆಚ್ಚಿನ ಸ್ಥಾನ ದೊರೆಕಿತ್ತೆಂದು ತೋರುವುದು. ಸುಮಾರು 12ನೆಯ ಶತಮಾನದ ಶಾಸನವೊಂದು[89] ಶ್ರಮಣ ವಡ್ಡದೇವನಿಂದ ಈ ಉಪಶಾಖೆಯ ವಂಶಾವಳಿಯನ್ನು ಗುರುತಿಸುತ್ತದೆ. ಆದರೆ, ಮಹತ್ವದ ಐತಿಹಾಸಿಕ ವ್ಯಕ್ತಿಗಳು ದೇವೇಂದ್ರಸಿದ್ಧಾಂತದೇವನನ್ನು ವಂಕಾಪುರದ (ಅಜಿತಸೇನ ಭಟ್ಟಾರಕನು ಅರಸ ಮಾರಸಿಂಹನಿಗೆ ದೀಕ್ಷೆ ನೀಡಿದ ಬಂಕಾಪುರ) 'ಯತಿವರ್ಯ' ನೆಂದು ಕರೆದಿರುವುದರಿಂದ ಬಂಕಾಪುರವು ಜೈನಧರ್ಮದ ಭದ್ರ ನೆಲೆಗಳಲ್ಲೊಂದಾಗಿತ್ತೆಂದು ಭಾವಿಸಬಹುದು. ಈ ದೇವೇಂದ್ರನಿಗೆ ಹಲವಾರು ಶಿಷ್ಯರಿದ್ದರು. ಅವರಲ್ಲಿ ವಾಸವಚಂದ್ರನೆಂಬವನು ಚಾಳುಕ್ಯರಲ್ಲಿ ರಾಜಾಶ್ರಯ ಪಡೆದಿದ್ದನು. ಅವನ ಯಶ: ಕೀರ್ತಿಯನ್ನು ಶ್ರೀಲಂಕೆಯ ಅರಸನೂ ಗುರುತಿಸಿ, ಗೌರವಿಸಿದ್ದನಂತೆ. ಗಣ್ಣವಿಮುಕ್ತಿಮಲಧಾರದೇವ ಹೇಮಚಂದ್ರನು ಗೌಳ ಮುನಿಯೆಂದು ಪ್ರಖ್ಯಾತನಾಗಿದ್ದ,

---

85. ಎ ಕ II, 37.
86. 568.
87. 155.
88. ಸುಮಾರು 12ನೆಯ ಶತಮಾನದ 79; 1282 ರ 456; 1372 ರ 380; 1163 ರ 71; 1398 ರ 360; 1432ರ 364; 1124 ರ 569, ಇತ್ಯಾದಿ.
89. 79.

ಶುಭಚಂದ್ರಕೀರ್ತಿದೇವನು ವಕ್ರಗಚ್ಛ ಶಾಖೆಗೆ ಉತ್ಕೃಷ್ಟ ಸ್ಥಾನಗಳಿಸಿಕೊಟ್ಟ ಕೀರ್ತಿಗೆ ಪಾತ್ರನಾಗಿದ್ದ ಮತ್ತು ಗೋಪಣಂದಿಯು ತ್ರಿಮುಷ್ಠಿಮುನೀಂದ್ರ (ಅಂದರೆ, ಮೂರು ಮುಷ್ಠಿ ಆಹಾರದಿಂದ ಸಂತುಷ್ಟನಾಗುವವನು) ನೆಂದು ಪ್ರಸಿದ್ಧನಾಗಿದ್ದನು. ಮೇಘಚಂದ್ರ, ಕಲ್ಯಾಣಕೀರ್ತಿ, ಬಾಳಚಂದ್ರ ಮತ್ತು ವೃಷಭಣಂದ್ಯಾಚಾರ್ಯ (ಚತುರ್ಮುಖ) ಮೊದಲಾದವರು ಈ ಸಂಘದ ಇನ್ನಿತರ ಪ್ರಸಿದ್ಧ ಮುನಿಗಳಾಗಿದ್ದರು. ವೃಷಭಣಂದ್ಯಾಚಾರ್ಯನ ಶಿಷ್ಯ ಗೋಪಣಂದಿಯು 11ನೆಯ ಶತಮಾನದ ಚತುರ್ಥಪಾದದಲ್ಲಿ ದೇಸಿಗಗಣದ ನಾಯಕನಾಗಿದ್ದನು.[90] ಇದರಿಂದ ವೃಷಭಣಂದ್ಯಾಚಾರ್ಯ ಅಥವಾ ಚುತುರ್ಮುಖ ಮುನಿಗಳು 11ನೆಯ ಶತಮಾನದ ಮಧ್ಯಕಾಲದಲ್ಲಿ ಮತ್ತು ದೇವೇಂದ್ರ ಮುನಿಯು ಅದರ ಆದಿ ಭಾಗದಲ್ಲಿ ಜೀವಿಸಿದ್ದರೆಂದು ಊಹಿಸಬಹುದು.

ಈ ಸಂಘದ ಪಾತ್ರ : 10ನೆಯ ಶತಮಾನದ ಚತುರ್ಥಪಾದ ಹಾಗೂ 11ನೆಯ ಶತಮಾನದ ಮೊದಲ ಪಾದದ ಸುಮಾರಿಗೆ ಮೂಲಸಂಘದ ವಕ್ರಗಚ್ಛ ಶಾಖೆಯ ಶ್ರಮಣರು ತಮ್ಮ ಧರ್ಮವನ್ನು ಸಂರಕ್ಷಿಸಿ ವೃದ್ಧಿಗೊಳಿಸ ಬೇಕಾದ ಅವಶ್ಯಕತೆಯನ್ನು ಮನಗಂಡಿದ್ದರು. ಪ್ರಭಾವಿ ಶ್ರಾವಕರನ್ನು ಪಕ್ಕದಲ್ಲಿರಿಸಿಕೊಂಡೇ ಧರ್ಮ ಬಲಪಡಿಸುವ ಹೊಸ ಆಂದೋಲನ ಬೆಳ್ಗೊಳದಿಂದ ಆರಂಭಗೊಳ್ಳಬೇಕೆಂದು ಅವರಲ್ಲೊಬ್ಬ ಭಾವಿಸಿದನೆಂದು ಕಾಣುವುದು. ಕಟವಪ್ರದ ಮೇಲೆ ತಮ್ಮ ಗಚ್ಛದ ಹೆಸರಿನಲ್ಲೊಂದು ದೇವಾಲಯ ಕಟ್ಟುವ ಮೂಲಕ ಈ ಹೊಸಯುಗವು ಆರಂಭಗೊಂಡಿತು. ಇದನ್ನು 'ಶಿವಮಾರ ಬಸದಿ' ಅಥವಾ 'ಚಂದ್ರಪ್ರಭ ಬಸದಿ' ಎಂದು ತಪ್ಪಾಗಿ ಮುಂಚೆ ಗುರುತಿಸಲಾಗಿತ್ತು ಮತ್ತು ಅದರ ವಾಸ್ತುಶೈಲಿಯನ್ನು ಆಧರಿಸಿ, ಅದು 11ನೆಯ ಶತಮಾನದ್ದೆಂದು ಭಾವಿಸಲಾಗಿತ್ತು. ಅದನ್ನೀಗ ಸ್ಪಷ್ಟವಾಗಿ ಗುರುತಿಸಿರುವುದಲ್ಲದೆ ಅದರ ಕಾಲವನ್ನು ಖಚಿತವಾಗಿ ನಿರ್ಣಯಿಸಬಹುದಾಗಿದೆ. ''ಮೂಲಸಂಘದ ದೇಸಿಗ ಗಣದ ವಕ್ರಗಚ್ಛ ಶಾಖೆ''ಗಾಗಿ ಇದನ್ನು ಸ್ಥಾಪಿಸಲಾಗಿತ್ತೆಂಬುದನ್ನು ಒಂದು ಶಾಸನದಿಂದ ಈಗ ಸ್ಪಷ್ಟಗೊಂಡಿರುವುದು.[91]

ಪ್ರತ್ಯೇಕ ದೇವಾಲಯವನ್ನು ಕಟ್ಟಿದ ನಂತರವೂ ಗೋಪಣಂದಿಯ (11ನೆಯ ಶತಮಾನದ ಕೊನೆಯ ಭಾಗ) ಕಾಲದವರೆಗೆ ಮೂಲಸಂಘದ ಶ್ರಮಣರು ಹೆಚ್ಚಿನ ಪ್ರಗತಿ ಸಾಧಿಸಲಿಲ್ಲವೆಂದು ತೋರುವುದು. ಹಳೆಯ ಆಧ್ಯಾತ್ಮಿಕ ಮೌಲ್ಯಗಳು ಕ್ರಮೇಣ ಕ್ಷೀಣಿಸುತ್ತಿದ್ದ ಮತ್ತು ಹೊಸ ಮೌಲ್ಯಗಳಿನ್ನೂ ಕೊನರದಿದ್ದ ನಿರ್ಣಾಯಕ ಕಾಲಘಟ್ಟದಲ್ಲಿ ಗೋಪಣಂದಿ ಜೀವಿಸಿದ್ದನು. ಬೆಳ್ಗೊಳದ ಇತಿಹಾಸದಲ್ಲಿ ಗೋಪಣಂದಿಯ ಉತ್ಕರ್ಷ ಮತ್ತು ಕಲ್ಯಾಣಿ ಚಾಳುಕ್ಯರ

---

90. 568.

91. ಈ ಶಾಸನದ ಪೂರ್ಣ ಪಾಠ ಹೀಗಿದೆ : *ಶ್ರೀ ಮೂಲಸಂಘದ ದೇಸೀಯಗಣದ ವಕ್ರಗಚ್ಛದಬಸದಿ.* ಈ ಶಾಸನವು ಎ.ಕ. II ರ ಪರಿಷ್ಕೃತ ಆವೃತ್ತಿಯಲ್ಲಿ (1973) ಸೇರಿಲ್ಲ. ಪ್ರಸಕ್ತ ಲೇಖಕನು ಇದನ್ನು 1980 ರಲ್ಲಿ ಗುರುತಿಸಿದ - ಶೆಟ್ಟರ್, ಉಪರೋಕ್ತ ಪು. 24.

ಸಾಮಂತನಾಗಿದ್ದ ಹೊಯ್ಸಳ ಎರೆಯಂಗನ ರಾಜಕೀಯ ಉಚ್ಛ್ರಾಯ ಒಂದೇ ಕಾಲದಲ್ಲಿ ನಡೆದವು.[92] ಅದೃಷ್ಟವಶಾತ್, ಗೋಪಣಂದಿಯ ಬೆಂಬಲಕ್ಕೆ ಸಮರ್ಥ ಸಹೋದ್ಯೋಗಿ ಹಾಗೂ ಶಿಷ್ಯವೃಂದದ ಬೆಂಬಲವೂ ಸುಲಭವಾಗಿ ಲಭ್ಯವಾಯಿತು.[93]

ಗೋಪಣಂದಿಯು ಸಂಘದ ಅಧ್ಯಕ್ಷನಾದೊಡನೆ 'ಬಹುಕಾಲ ಸ್ಥಗಿತಗೊಂಡಿದ್ದ ಜಿನ ಧರ್ಮ' ವನ್ನು ಬೆಳೆಸುವ ಕಾರ್ಯವನ್ನು ಮೊದಲು ಕೈಗೆತ್ತಿಕೊಂಡನು. ಇದನ್ನವನು 'ಗಂಗ ರಾಜರ ಸಂಪತ್ತಿನ ಸಹಾಯದಿಂದ' ಸಾಧಿಸಿದನು.[94] 12ನೆಯ ಶತಮಾನದ ಶಾಸನವೊಂದು ಅವನನ್ನು 'ವಕ್ರಗಚ್ಛದಲ್ಲಿ ಕೀರ್ತಿ ಪಡೆದವನೆಂದು', 'ದೇಸಿಗಗಣದ ಅಗ್ರಗಣ್ಯ' ನೆಂದು, ಜಿನಧರ್ಮವು 'ಗಂಗ ರಾಜ್ಯದಲ್ಲಿ ಸಮೃದ್ಧಿ-ಪ್ರಸಿದ್ಧಿ ಪಡೆಯುವಂತೆ' ಮಾಡಿದವನೆಂದು ವರ್ಣಿಸುವುದು. "ಈ ಅದ್ಭುತ ಕಾರ್ಯವು ಬೇರೆ ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ" ವೆಂದೂ ಗೋಪಣಂದಿಯನ್ನು ಹೊಗಳಲಾಗಿದೆ.[95] 1094ರಲ್ಲಿ ಈ ಶ್ರಮಣನು ಹೊಯ್ಸಳ ಅರಸ ಎರೆಯಂಗನಿಂದ ಹಳೆಬೆಳ್ಗೊಳದ ಎರಡು ಗ್ರಾಮಗಳನ್ನು ದತ್ತಿಯಾಗಿ ಪಡೆದು, (ಅ) "ಬೆಳ್ಗೊಳದ ಕಬ್ಬಪ್ಪು ತೀರ್ಥದ ಬಸದಿಗಳನ್ನು" ಜೀರ್ಣೋದ್ಧಾರಗೊಳಿಸಲು, (ಆ) ಆ ಬೆಟ್ಟದ ದೇವಾಲಯಗಳಲ್ಲಿಯ ಪೂಜೆಯು ನಿರಂತರವಾಗಿ ನೆರವೇರಲು ಮತ್ತು (ಇ) ಪುಣ್ಯಾತ್ಮರಿಗೆ ಮತ್ತು ಯಾತ್ರಿಕರಿಗೆ ಅನ್ನವನ್ನಿಕ್ಕಲು ಅವನ್ನು ವಿನಿಯೋಗಿಸಿದನು. ಇದು ಕಟವಪ್ರ ದೇವಾಲಯಗಳಿಗೆ ನೀಡಿದ ಅತಿ ಪ್ರಾಚೀನ ಭೂದತ್ತಿಯಾಗಿರುವುದಲ್ಲದೆ ಬೆಳ್ಗೊಳದ ಸುದೀರ್ಘ ಇತಿಹಾಸದಲ್ಲಿ ಮೂಲಸಂಘದ ಸದಸ್ಯರು ಪಡೆದ ಪ್ರಥಮ ದಾನ ಕೊಡುಗೆಯೂ ಆಗಿದೆ.[96] ಅಂತೆಯೆ, ಸಂಘದ ಶ್ರಮಣನೊಬ್ಬನು ಭೂದತ್ತಿ ಸ್ವೀಕರಿಸಿದ್ದು

---

92. ಎ ಕ II, 568.

93. ಅವನೂ, ಅವನ ಸಮಕಾಲೀನರಾದ ಮಹೇಂದ್ರಚಂದ್ರಪಂಡಿತದೇವ, ದೇವೇಂದ್ರ ಸಿದ್ಧಾಂತದೇವ, ಶುಭಕೀರ್ತಿ ಪಂಡಿತದೇವ ಮಾಘಣಂದಿ ಸಿದ್ಧಾಂತದೇವ ಜಿನಚಂದ್ರಪಂಡಿತದೇವ, ಗುಣಚಂದ್ರಮಲಧಾರಿದೇವ ಮುಂತಾದವರು ಚತುರ್ಮುಖನ ಶಿಷ್ಯರಾಗಿದ್ದರು. ಗೋಪಣಂದಿಗೂ ಜಶಕೀರ್ತಿಪಂಡಿತದೇವ, ವಾಸವಚಂದ್ರಪಂಡಿತದೇವ, ಚಂದ್ರನಂದಿಪಂಡಿತದೇವ, ಗೌಳದೇವ ಅಥವಾ ಹೇಮಚಂದ್ರಮಲಧಾರಿಗಂಧವಿಮುಕ್ತ ಮತ್ತು ತ್ರಿಮುಷ್ಠಿದೇವರೆಂಬ ಶಿಷ್ಯರಿದ್ದರು. 79.

94. 568.

95. 79. ಪಾಠದ ಈ ಭಾಗ ಅಸ್ಪಷ್ಟವಿದ್ದು, ದಶಕಗಳ ಹಿಂದಿನ ಘಟನೆಗಳನ್ನು ನೆನಪಿಸಿಕೊಳ್ಳುವಾಗ ಕವಿಯು ಗೊಂದಲಕ್ಕೊಳಗಾಗಿರುವನೆಂದು ಕಂಡುಬರುವುದು. 568ರಲ್ಲಿ ದೊರೆತಿರುವ ಪಾಠ ಸತ್ಯಕ್ಕೆ ಹೆಚ್ಚು ಸಮೀಪವಿರುವಂತಿದೆ. 79ನೆಯ ಶಾಸನವು ವಕ್ರಗಚ್ಛ ಸಂಘದ ವಂಶಾವಳಿಯಲ್ಲಿ ಇಬ್ಬರು ಗೋಪಣಂದಿಯರನ್ನು ಪ್ರಸ್ತಾಪಿಸುತ್ತದೆ - ಅವರಲ್ಲೊಬ್ಬ ದೇವಕೀರ್ತಿಯ ಶಿಷ್ಯನಾಗಿದ್ದು ತ್ರಿಮುಷ್ಠಿಮುನೀಂದ್ರನೆಂದೂ ಪರಿಚಿತನಾಗಿದ್ದ ; ಎರಡನೆಯವನು ಚತುರ್ಮುಖನ ಶಿಷ್ಯನಾಗಿದ್ದು ಎಱಿಯಂಗನಿಂದ ದತ್ತಿ ಪಡೆದುಕೊಂಡವನಾಗಿದ್ದ.

96. ಬೆಳ್ಗೊಳವನ್ನು ಉಲ್ಲೇಖಿಸುವ ಶಾಸನಗಳಲ್ಲಿ ಎರಡು ಗಮನಾರ್ಹವಾಗಿವೆ – ಇಮ್ಮಡಿ ಗಂಗ ರಾಚಮಲ್ಲನ ಆಳ್ವಿಕೆಯಲ್ಲಿ ಹೊರಡಿಸಲಾದ ರಾಮಪುರ ಶಾಸನವು (ಎ ಕ VI, 904-905 ರ ಶ್ರೀ.85) 'ಕಳ್ವಪ್ಪುಬೆಟ್ಟಕ್ಕೆ ಹೊಂದಿಕೊಂಡಿರುವ ಬೆಳ್ಗೊಳದ ಪ್ರಭುವಾದ ಮತಿಸಾಗರ

ಇದೇ ಪ್ರಥಮ ಸಲ. ಅಧಿಕಾರರೂಢ ರಾಜನೊಬ್ಬ ನೀಡಿದ ಪ್ರಥಮ ಭೂದತ್ತಿಯೂ ಇದಾಗಿದೆ. ಹೆಚ್ಚುಹೆಚ್ಚು ಶ್ರಮಣರು ಮರಣ ವ್ರತಾಚರಣೆಯ ಕಡೆಗೆ ಬೆನ್ನು ತಿರುಗಿಸುತ್ತಿದ್ದ ಹಾಗೂ ಧಾರ್ಮಿಕ ದತ್ತಿಗಳ ಸಂಪಾದನೆ ಮತ್ತು ನಿರ್ವಹಣೆಯತ್ತ ಉತ್ಸಾಹದಿಂದ ಮುನ್ನೋಡುತ್ತಿದ್ದ ಕಾಲದ ಪ್ರಾರಂಭವಿದಾಗಿತ್ತು.

ಶ್ರಮಣರ ಮರಣದ ಶೂನ್ಯ ಸಂಖ್ಯೆ ಮತ್ತು ಇಬ್ಬರು ಕಂತಿಯರ ಮರಣ ದಾಖಲೆಗಳಿಗೆ ಪ್ರತಿಯಾಗಿ 10-11ನೆಯ ಶತಮಾನಗಳ ಕಾಲಘಟ್ಟದಲ್ಲಿ ಕಟವಪ್ರದ ಮೇಲೆ ಏಳು ಶ್ರಾವಕರು ಜೀವನ ಅಂತ್ಯಗೊಳಿಸಿಕೊಂಡ ದಾಖಲೆಗಳಿವೆ. ಆದರೆ ಶ್ರಾವಕಿಯರು ಹೀಗೆ ಮರಣಹೊಂದಿದ ದಾಖಲೆಗಳಿಲ್ಲ. ಧಾರ್ಮಿಕ ವಿಧಿಗಳೊಂದಿಗೆ ಶ್ರಾವಕರು ಹೆಚ್ಚಾಗಿ ಗುರುತಿಸಿಕೊಳ್ಳುತ್ತಿದ್ದುದನ್ನು ಮತ್ತು ಶ್ರಮಣರು ಹೆಚ್ಚು ಹೆಚ್ಚಾಗಿ ಲೌಕಿಕರಾಗುತ್ತಿದ್ದುದನ್ನು ಇದು ಸೂಚಿಸುವುದು.

ಪಂಡಿತಭಟಾರನು ಬೆಟ್ಟದ ಮೇಲಿರುವ ಮುನಿ ಭದ್ರಬಾಹು ಮತ್ತು ಚಂದ್ರಗುಪ್ತರ ಪಾದಗಳನ್ನು, ಆರಾಧಿಸಿದನಲ್ಲದೆ ಅಣೆಕಟ್ಟು ಕಟ್ಟಿಸಲು ದತ್ತಿಯನ್ನು ಇತ್ತ. ಗಂಗ ಸತ್ಯವಾಕ್ಯಪೆರ್ಮಾಡಿ ಮತ್ತು ಎರೆಯಪ್ಪರಸರ ಆಳ್ವಿಕೆಯ ಕಾಲದ್ದೆಂದು ಗೊತ್ತುಪಡಿಸಲಾದ ಕ್ಯಾತನಹಳ್ಳಿಯಲ್ಲಿರುವ ಇನ್ನೊಂದು ಶಾಸನವು (ಎ ಕ VI, 9-10ನೆಯ ಶತಮಾನ, ಪಾಪು. 16) "ಕಳ್ಬಪ್ಪುತೀರ್ಥಕ್ಕೆ ಹೊಂದಿಕೊಂಡಿದ್ದ ಬೆಳ್ಗೊಳದ ಶ್ರಮಣಸಮೂಹದ ಈ ಲೌಕಿಕರನ್ನು ಉಲ್ಲೇಖಿಸುವುದಲ್ಲದೆ ಬೆಟ್ಟದ ಮೇಲಿನ ಮುನಿ ಭದ್ರಬಾಹು ಮತ್ತು ಚಂದ್ರಗುಪ್ತರ ಪಾದಚಿನ್ನೆಗಳನ್ನೂ ಉಲ್ಲೇಖಿಸುತ್ತದೆ." ಇಲ್ಲಿ ಕುಮಾರಸೇನಭಟಾರನು ಪಡೆದುಕೊಂಡನೆಂದು ಹೇಳಲಾಗುವ ದತ್ತಿಯಿದೆ. ಬೆಳ್ಗೊಳಕ್ಕೆ ಸೇರಿದ ಮುನಿಗಳು ದೇಶದ ಬೇರೆಡೆ ದತ್ತಿಗಳಿಗಾಗಿ ವ್ಯವಹರಿಸುತ್ತಿದ್ದರೆ, ಸ್ವತಃ ಬೆಳ್ಗೊಳದಲ್ಲಿ 11ನೆಯ ಶತಮಾನಕ್ಕಿಂತ ಮುನ್ನ ಅವರಲ್ಲಾರೂ ಇಂಥ ಪ್ರಯತ್ನಗಳನ್ನು ಮಾಡಿದಂತಿಲ್ಲ. ಇದನ್ನು ಈ ಎರಡು ನಿದರ್ಶನಗಳು ಸ್ಪಷ್ಟಪಡಿಸುತ್ತವೆ.

ಅಧ್ಯಾಯ ಎರಡು

ಭೌತಿಕ ಮತ್ತು ಧಾರ್ಮಿಕ ಸಮೃದ್ಧಿಯ ಯುಗ

10-11ನೆಯ ಶತಮಾನಗಳಲ್ಲಿ ಆರಂಭಗೊಂಡ ಉಪಕ್ರಮಗಳು ಮುಂದಿನ ಎರಡು ನೂರು ವರ್ಷಗಳಲ್ಲಿ ಫಲ ಕೊಡತೊಡಗಿದವಲ್ಲದೆ ಅವು ಬೆಳ್ಗೊಳದ ಇತಿಹಾಸದ ಪಥವನ್ನೇ ಬದಲಾಯಿಸಿದವು. ಈ ಎರಡನೆಯ ಕಾಲಾವಧಿಯ ಪ್ರಮುಖ ಲಕ್ಷಣಗಳು ಇಂತಿವೆ:

1. ಹೆಚ್ಚುಕಡಿಮೆ ದೇಹದಂಡನೆಗೆ ಬದ್ಧರಾಗಿದ್ದ ಶ್ರಮಣರು ಒಬ್ಬೊಬ್ಬರಾಗಿ ಕಟವಪ್ರದಿಂದ ನಿರ್ಗಮಿಸತೊಡಗಿದುದರಿಂದ ಅವರ ಸ್ಥಾನವನ್ನು ಮೂಲಸಂಘದ ವಿವಿಧ ಶಾಖೆಗಳ ಸದಸ್ಯರು ತುಂಬತೊಡಗಿದರು.

2. ವ್ಯಕ್ತಿಗತ ಸಾಧನೆಯನ್ನು ಸಾಂಘಿಕ ಶಕ್ತಿಯು ಪಲ್ಲಟಗೊಳಿಸತೊಡಗಿದಾಗ ಶ್ರಮಣರು ಮತ್ತು ಶ್ರಾವಕರು ದೇವಾಲಯ ನಿರ್ಮಾಣ-ನಿರ್ವಹಣೆಯಲ್ಲಿ ತೋರಿಸಿದಷ್ಟು ಆಸಕ್ತಿಯನ್ನು ಸರಳ ಆಧ್ಯಾತ್ಮಿಕ ಸಾಧನೆಯಲ್ಲಿ ತೋರಲಿಲ್ಲ.

3. 6-9ನೆಯ ಶತಮಾನದಲ್ಲಿ ಕಟವಪ್ರಕ್ಕೆ ಸೀಮಿತಗೊಂಡಿದ್ದ ಧಾರ್ಮಿಕ ಚಟುವಟಿಕೆಗಳು 10ನೆಯ ಶತಮಾನದಲ್ಲಿ ದೊಡ್ಡಬೆಟ್ಟಕ್ಕೆ ಹರಡಿ, ಕ್ರಮೇಣ ಕೊಳ್ಳದಲ್ಲಿ ಬೆಳೆಯುತ್ತಿದ್ದ ಪಟ್ಟಣ ಪ್ರದೇಶ ಹಾಗೂ ನೆರೆಯ ಗ್ರಾಮಗಳಿಗೂ ವಿಸ್ತರಿಸಿದವು. ಈ ವಿಸ್ತರಣೆಯ ಪ್ರಮುಖ ಲಕ್ಷಣವೆಂದರೆ ದೇವಾಲಯಾಧಾರಿತ ಅರ್ಥ ವ್ಯವಸ್ಥೆ.

4. ಮೂಲಸಂಘದ' ಕಾರ್ಯಗಳು ಬಲಿಷ್ಠ, ಪ್ರಭಾವಿ ಹಾಗೂ ಶ್ರೀಮಂತ ಶ್ರಾವಕರ ಮೂಲಕವೇ ಜರುಗುತ್ತಿದ್ದ ಕಾರಣ, ಪ್ರತಿಭಾವಂತ ಶ್ರಾವಕರು ಧಾರ್ಮಿಕ ಚಟುವಟಿಕೆಗಳನ್ನಲ್ಲದೆ ಧಾರ್ಮಿಕ ವ್ಯಕ್ತಿಗಳನ್ನೂ ಗೌಣವಾಗಿಸತೊಡಗಿದರು. ಶ್ರಮಣರಲ್ಲಿ ಕೆಲವರು ಧಾರ್ಮಿಕ ಸಂಸ್ಥೆಗಳ ಆಡಳಿತಾತ್ಮಕ ಹೊಣೆ ಹೊತ್ತರು, ಇನ್ನು ಕೇಲವರು ಈ ಜವಾಬ್ದಾರಿಗಳನ್ನು ನೇರವಾಗಿ ಶ್ರಾವಕರ ಮೇಲೆ ಹೊರಿಸಿದರು.

5. ಆಧ್ಯಾತ್ಮಿಕ ಜೀವನವು ಧಾರ್ಮಿಕ ಜೀವನದೊಂದಿಗೆ ವಿಲೀನಗೊಂಡಿದ್ದುದರಿಂದ, ವ್ರತಾಚರಣೆಗಳು ಅದ್ದೂರಿಯ ಹಬ್ಬವಾಗತೊಡಗಿದವು. ಇದರಲ್ಲಿ ಶ್ರಾವಕರ ಪಾತ್ರ-ಪಾಲ್ಗೊಳ್ಳುವಿಕೆ ಹೆಚ್ಚಿತು. ಈ ಕಾಲದಲ್ಲಿ ಸಂಘಕ್ಕೆ ಸೇರಿದ ಮುನಿಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ಶ್ರಾವಕರು ಸಮಾಧಿಮರಣವನ್ನು ಆಚರಿಸತೊಡಗಿದರು.

6. ವೈಯಕ್ತಿಕ ಬಿಂಬದ ಪ್ರಕ್ಷೇಪಣ ಈ ಯುಗದ ವಿಶಿಷ್ಟ ಲಕ್ಷಣ. ಈ ವ್ಯಕ್ತಿಗಳೆಲ್ಲ ಲೌಕಿಕ ಮತ್ತು ಧಾರ್ಮಿಕ ಸಂಸ್ಥೆಗಳ ಬೆಂಬಲ ಪಡೆದವರಾಗಿದ್ದರು : ಗಂಗರಾಜ, ಹುಳ್ಳರಾಜ, ಚಂದ್ರಮೌಳಿ ಮತ್ತು ರೇಚಿಮಯ್ಯರು ಹೊಯ್ಸಳ ರಾಜ್ಯದ ಮಹಾದಂಡನಾಯಕರಾಗಿದ್ದರು. ಇವರಿಗೆ ಸರಿದೊರೆಯಾಗಿ ಪ್ರಭಾಚಂದ್ರ ಸಿದ್ಧಾಂತದೇವ, ನಯಕೀರ್ತಿಸಿದ್ಧಾಂತದೇವ, ಬಾಳಚಂದ್ರದೇವ, ಶುಭಚಂದ್ರ ಸಿದ್ಧಾಂತದೇವ, ಮುಂತಾದವರೆಲ್ಲ ಮೂಲಸಂಘದ ಗುರುತರ ಹೊಣೆ ಹೊತ್ತ ಶ್ರಮಣರಾಗಿದ್ದರು. ಲೌಕಿಕ ಮತ್ತು ಧಾರ್ಮಿಕ ಸಾಧನೆಗಳಷ್ಟೇ ಜಿನಧರ್ಮವನ್ನು ಬಲಪಡಿಸುವ ಕಾರ್ಯದಲ್ಲಿ ವ್ಯಕ್ತಿಗತವಾಗಿ ಇವರು ತೊಡಗಿಸಿಕೊಂಡಿದ್ದರು. ವಿಲಕ್ಷಣ ರೀತಿಯಲ್ಲಿ ಈ ಎರಡೂ ವರ್ಗದವರು ತಮಗೆ ಲಭ್ಯವಿದ್ದ ಅವಕಾಶಗಳ ಪೂರ್ಣ ಪ್ರಯೋಜನ ಪಡೆದುಕೊಂಡರಲ್ಲದೆ, ಆಳರಸರನ್ನು ಹೆಚ್ಚು ಆಳವಾಗಿ ಇದರಲ್ಲಿ ತೊಡಗಿಸಲು ಪ್ರಯತ್ನಿಸಿದರು.

7. ಈ ಕಾಲಾವಧಿಯ ಧಾರ್ಮಿಕ ಜೀವನ ಆಡಂಬರಪೂರ್ಣವಾಯಿತು. ಶಾಸನಗಳ ಭಾಷೆ ಉಗ್ರವಾಯಿತು. ವಾದೀಭಸಿಂಹರು ಮುಂದೆ ಬಂದು, ಮೌನಿಯಾಚಾರ್ಯರನ್ನು ಹಿಂದಕ್ಕೆ ಸರಿಸಿದರು.

ಮೂಲ ಸಂಘದ ಪಾತ್ರ: ಧಾರ್ಮಿಕ ಜೀವನದ ಸಂವರ್ಧನೆ: 10ನೆಯ ಶತಮಾನದ ಸುಮಾರಿಗೆ ಚಿಕ್ಕಬೆಟ್ಟದ ಮೇಲೆ ದೇವಾಲಯವನ್ನು ನಿರ್ಮಿಸಿದ ಮತ್ತು 1094ರಲ್ಲಿ ಹಳೇಬೆಳ್ಗೊಳದಲ್ಲಿ ಪ್ರಥಮ ಭೂದತ್ತಿ ಪಡೆದ ಮೂಲಸಂಘದ ಶಾಖೆಯೊಂದರ ಪ್ರಸ್ತಾಪವನ್ನು ಈಗಾಗಲೇ ಮಾಡಲಾಗಿದೆ. ಮುಂಚೂಣಿಯಲ್ಲಿದ್ದ ವಕ್ರಗಚ್ಛ ಉಪಶಾಖೆಯು ಹೆಚ್ಚುಕಡಿಮೆ ಬೆಳ್ಗೊಳದ ಶಾಸನಗಳಿಂದ ಕಣ್ಮರೆಯಾಗಿ, ಮೂಲಸಂಘದ ಚಟುವಟಿಕೆಯ

ಮುಖ್ಯವಾಹಿನಿಯಲ್ಲಿ ವಿಲೀನವಾದಂತೆ ಕಂಡುಬರುವುದು.[1] ಹೀಗಾಗಿ, ಈ ಸಂಘದ ಪ್ರಸ್ತಾಪವು ಮುಂದಿನ ಕಾಲದ ಶಾಸನಗಳಲ್ಲಿ ಅಪರೂಪವಾಗುವುದು.

ಪ್ರಧಾನ ಶಾಖೆ: ದೇಸಿಯಗಣ, ಪುಸ್ತಕಗಚ್ಛ ಮತ್ತು ಕೊಂಡಕುಂದಾನ್ವಯಗಳೇ ಮೂಲಸಂಘದ ಪ್ರಮುಖ ಶಾಖೆಗಳು. ಮೂಲಸಂಘ-ದೇಸಿಯಗಣ, ದೇಸಿಯಗಣ-ಪುಸ್ತಕಗಚ್ಛ, ಕೊಂಡಕುಂದಾನ್ವಯ-ಮೂಲಸಂಘ-ದೇಸಿಯಗಣ, ಮುಂತಾಗಿ ಕರೆಯಲಾಗಿರುವ ಈ ಸಂಘವು ಕನಿಷ್ಠ ಐವತ್ತು ಶಾಸನಗಳನ್ನು ಇಲ್ಲಿ ಹೊರಡಿಸಿ, ತನ್ನ ಕಾರ್ಯ ವ್ಯಾಪ್ತಿಯನ್ನು ಪ್ರದರ್ಶಿಸಿದೆ. 1113 ರಲ್ಲಿ ಮೊಟ್ಟಮೊದಲು ಕಾಣಿಸಿಕೊಳ್ಳುವ ಈ ಸಂಘವು 12ನೆಯ ಶತಮಾನದುದ್ದಕ್ಕೂ ಕ್ರಿಯಾಶೀಲವಾಗಿದ್ದು,[2] ಸುಮಾರು ನಾನೂರು ವರ್ಷಗಳನಂತರ (15ನೆಯ ಶತಮಾನದ ಮಧ್ಯಭಾಗದಿಂದ) ಬೆಳ್ಗೊಳದ ಇತಿಹಾಸದಿಂದ ಕಣ್ಮರೆಯಾಗಿ 19ನೆಯ ಶತಮಾನದಲ್ಲಿ ಒಮ್ಮೆ ಮಾತ್ರ ಈ ಕೇಂದ್ರದ ಇತಿಹಾಸದಲ್ಲಿ ನುಸುಳಿಬರುವುದು.[3] 12-14ನೆಯ ಶತಮಾನದ ಕಾಲಾವಧಿಯಲ್ಲಿ ಇದು ಬೆಳ್ಗೊಳದಲ್ಲಿ ಮಹತ್ವದ ಪಾತ್ರ ವಹಿಸಿತ್ತೆಂಬುದರಲ್ಲಿ ಸಂಶಯವಿಲ್ಲ. ಈಗಿರುವ ದಾಖಲಿತ ಘಟನೆಗಳಲ್ಲಿ ನಲವತ್ತುಮೂರು 12ನೆಯ ಶತಮಾನಕ್ಕೆ,[4] ಮೂರು 13ನೆಯ ಶತಮಾನಕ್ಕೆ,[5] ಇನ್ನು ಮೂರು 14ನೆಯ ಶತಮಾನಕ್ಕೆ[6] ಸಂಬಂಧಿಸಿವೆ. ಅಂದರೆ, ಇದರ ಪ್ರಭಾವವು 12ನೆಯ ಶತಮಾನದಲ್ಲಿ ಅತ್ಯಧಿಕವಾಗಿತ್ತೆಂಬುದು ಇದರಿಂದ ಸ್ಪಷ್ಟಗೊಳ್ಳುವುದು.

ಇತರ ಶಾಖೆಗಳು: ಈ ಪ್ರಧಾನ ಶಾಖೆಯಲ್ಲದೆ ಮೂಲಸಂಘದ ಸುಮಾರು ಐದಾರು ಇತರ ಶಾಖೆಗಳು ಇಲ್ಲಿದ್ದವು. ಇವುಗಳಲ್ಲಿ ನಂದಿಗಣ, ವೃಷಭಗಣ, ಬಲಾತ್ಕಾರಗಣ, ಇಂಗುಳೇಶ್ವರಬಳಿ ಪ್ರಮುಖವಾಗಿದ್ದವು. ಈಗಾಗಲೇ ಕಂಡಂತೆ ಇವುಗಳಲ್ಲೆಲ್ಲ ಪ್ರಾಚೀನವಾದುದು ವಕ್ರಗಚ್ಛ; 12ನೆಯ ಶತಮಾನದಲ್ಲಿ ಮುಖ್ಯವಾಹಿನಿಯಲ್ಲಿ ಅದು ವಿಲೀನಗೊಳ್ಳುವ ಮೂಲಕ ಬೆಳ್ಗೊಳದಲ್ಲಿ ತನ್ನ ಅನನ್ಯತೆಯನ್ನು ಕಳೆದುಕೊಂಡಿತು. ವೃಷಭಗಣ

1. ಈ ವಿಲೀನವನ್ನು ಎ ಕ II, 12ನೆಯ ಶತಮಾನದ 79 ರಲ್ಲಿ ಸೂಚಿಸಲಾಗಿದೆ.
2. ಅನುಕ್ರಮವಾಗಿ 155 ಮತ್ತು 160.
3. 1809ರ 252. ಇದು ನಿಸಿಧಿ ಸ್ಮಾರಕಗಳಲ್ಲಿ ತೀರ ಇತ್ತೀಚಿನದು.
4. 1113ರ 155; 1115ರ 156; 1117ರ 170; 1118 ರ 374; 1119ರ 484 ಮತ್ತು 547 ; 1123ರ 135, 162, 176 ಮತ್ತು 532; 1145ರ 173; 1159ರ 481; 1163 ರ 71; 1173ರ 565; 1176ರ 73; 1181ರ 444, 463 ಮತ್ತು 571; 1195ರ 457. ಇವೆಲ್ಲವುಗಳ ಕಾಲವನ್ನು ನಿಖರವಾಗಿ ದಾಖಲಿಸಲಾಗಿದೆ. 12ನೆಯ ಶತಮಾನದವೆಂದು ಸ್ಥೂಲವಾಗಿ ಗೊತ್ತುಪಡಿಸಲಾದವುಗಳಲ್ಲಿ 69, 79, 80. 81, 154. 160, 287-290, 294, 297, 342, 355, 371, 372, 469, 503, 529, 531, 550, 562 ಮತ್ತು 566 ಉಲ್ಲೇಖಾರ್ಹ.
5. 1256ರ 375; 13ನೆಯ ಶತಮಾನದವೆಂದು ನಿಗದಿಪಡಿಸಿದ 483 ಮತ್ತು 526.
6. 1313ರ 72; 1398ರ 360; 14ನೆಯ ಶತಮಾನದ್ದೆನ್ನಲಾದ ನಿಗದಿಪಡಿಸಿದ 470.

ಮತ್ತು ನಂದಿಗಣಗಳೆರಡೂ ಏಕಕಾಲಕ್ಕೆ ಕಾಣಿಸಿಕೊಳ್ಳುವುವು. 1115ರದ್ದೆಂದು ನಿರ್ಧರಿಸಲಾದ ಒಂದು ಶಾಸನದಲ್ಲಿ ಈ ಎರಡೂ ಶಾಖೆಗಳನ್ನು ಮೊದಲಬಾರಿಗೆ ಉಲ್ಲೇಖಿಸಲಾಗಿದೆ.[7] ಕೊಂಡಕುಂದಾಚಾರ್ಯರು ನಂದಿಗಣಕ್ಕೆ ಸೇರಿದವರೆಂದು, ಮೇಘಚಂದ್ರತ್ರೈವಿಧ್ಯದೇವನು ವೃಷಭಗಣಕ್ಕೆ ಸೇರಿದವನೆಂದು ಇದರಲ್ಲಿ ಪ್ರತಿಪಾದಿಸಲಾಗಿದೆ. ಈ ಕಾಲಕ್ಕಾಗಲೇ ಈ ಶಾಖೆಗಳು ಮೂಲಸಂಘ, ದೇಸಿಗಗಣ ಮತ್ತು ಪುಸ್ತಕಗಚ್ಛಗಳ ಮುಖ್ಯವಾಹಿನಿಯೊಳಗೆ ಸೇರಿಕೊಂಡಿರಲು ಸಾಕು.[8] ಆದರೆ ನಂದಿಸಂಘದ ನೆನಪು ಮಾತ್ರ ಇತಿಹಾಸದಿಂದ ಪೂರ್ಣ ಅಳಿಸಿಹೋಗಲಿಲ್ಲ. ಇದರಂತೆ ವೃಷಭಗಣವನ್ನೂ ಸುಮಾರು 12ನೆಯ ಶತಮಾನದವರೆಗೆ ಪ್ರಖ್ಯಾತ ಶ್ರಮಣರು ಜೀವಂತವಾಗಿರಿಸಿದ್ದರೆಂದು ತೋರುವುದು.[9]

13 ಮತ್ತು 15ನೆಯ ಶತಮಾನದ ಎರಡು ಶಾಸನಗಳಲ್ಲಿ ಇಂಗುಳೇಶ್ವರ ಬಳಿಯ ಉಲ್ಲೇಖ ಬರುವುದು.[10] ಮೂಲಸಂಘ ಬಲಾತ್ಕಾರ ಗಣದ ಮುನಿ ವಂಶಾವಳಿಯನ್ನು ಗುರುತಿಸುವ ಸಂದರ್ಭದಲ್ಲಿ ಇದನ್ನು ಹೆಸರಿಸಲಾಗಿರುವುದರಿಂದ, 13ನೆಯ ಶತಮಾನದ ಸುಮಾರಿಗೆ ಇವೆರಡೂ ಶಾಖೆಗಳ ನಡುವಣ ಅಂತರ ಸಾಕಷ್ಟು ಸವುಕಳಿಗೊಂಡಿದ್ದಿತೆಂದು ಭಾವಿಸಬಹುದು. ಇಂಗುಳೇಶ್ವರ ಬಳಿಯ ಸದಸ್ಯರಲ್ಲಿ ಮಹಾಮಂಡಲಾಚಾರ್ಯ, ರಾಜಗುರು, ಆಚಾರ್ಯ ನೇಮಿಚಂದ್ರಪಂಡಿತದೇವರಲ್ಲದೆ ಆತನ ಶಿಷ್ಯನಾದ ಬಾಳಚಂದ್ರದೇವರೂ ಪ್ರಮುಖರಾಗಿದ್ದರೆಂದು ತೋರುವುದು.[11] ಅವರು ಈ ಕಾಲದ ಅತ್ಯಂತ ಜನಪ್ರಿಯ ಹಾಗೂ ಶಕ್ತಿಶಾಲಿ ಶ್ರಮಣರೆನಿಸಿದ್ದರು. ಈ ಶಾಖೆಯು ತನ್ನ ಅನನ್ಯತೆಯನ್ನು 15ನೆಯ ಶತಮಾನದವರೆಗೂ ಮುಂದುವರಿಸಿಕೊಂಡು ಬಂತು. ದೇವ, ನಂದಿ, ಸಿಂಹ ಮತ್ತು ಸೇನ ಸಂಘಗಳ ಮುನಿಗಳಲ್ಲಿ ಅನೇಕರು ಆಗ ಪ್ರಖ್ಯಾತರಾಗಿದ್ದರು. ದೇಸಿಯಗಣ, ಪುಸ್ತಕಗಚ್ಛ ಮತ್ತು ಇಂಗುಳೇಶ್ವರ ಬಳಿಯು ನಂದಿಸಂಘಕ್ಕೆ ಸೇರಿದ್ದಿತು. ಈ ಸಂಘವನ್ನು ಅತ್ಯಂತ ಉಚ್ಛ್ರಾಯ ಮಟ್ಟಕ್ಕೇರಿಸಿದವನೆಂದರೆ ಶ್ರಮಣ ಶ್ರುತಮುನಿ. 1432ರಲ್ಲಿ ಸಮಾಧಿಮರಣ ವಿಧಿಯನ್ನು ಕಠೋರಕ್ರಮದಲ್ಲಿ ಆಚರಿಸಿ, ಈತನು ಸಾವನ್ನು ಸ್ವಾಗತಿಸಿದನು.[12]

---

7. 156. ಅವರಿಬ್ಬರು ಜೊತೆಯಾಗಿಯೇ ಕಾಣಿಸಿಕೊಂಡ 173ನೆಯ ಶಾಸನವನ್ನೂ ನೋಡಿ.
8. ಇದೇ ಸಂಘದ ಶಾಖೆಗಳೆಂದು ಭಾವಿಸಲಾಗಿದ್ದ ವೃಷಭ ಮತ್ತು ದೇಸಿಗ ಗಣಗಳನ್ನು ಈ ಶಾಸನಗಳು ಉಲ್ಲೇಖಿಸುತ್ತವೆ.
9. 1115ರ 156 ಮತ್ತು 1145ರ 173ಗಳಲ್ಲಿ ಮಾತ್ರ ವೃಷಭ ಗಣವನ್ನು ಉಲ್ಲೇಖಿಸಿಲಾಗಿದ್ದು, ಅನಂತರ ಅದರ ಪ್ರಸ್ತಾಪ ಬರುವುದಿಲ್ಲ. ನಂದಿಸಂಘವನ್ನು 1176ರವರೆಗೆ ಉಲ್ಲೇಖಿಸಲಾಗಿದೆ; 1115 ರ 156, 1123ರ 135, 1145 ರ 173, 1163ರ 71 ಮತ್ತು 1176ರ 73ನ್ನು ನೋಡಿ. ಇಲ್ಲಿ ಇದೊಂದು ಗತಕಾಲದ ಸಂಸ್ಥೆಯಾಗಿ ಮಾತ್ರ ಕಂಡುಕೊಂಡಿದೆ.
10. 1282ರ 456 ಮತ್ತು 1432ರ 364.
11. 456.
12. 364.

1282ರಲ್ಲಿ ಮೊಟ್ಟಮೊದಲ ಬಾರಿಗೆ ಉಲ್ಲೇಖಿಸಲ್ಪಡುವ ಬಲಾತ್ಕಾರಗಣದ ಇತಿಹಾಸವು ಸ್ವಲ್ಪಮಟ್ಟಿಗೆ ಅಸ್ಪಷ್ಟವಾಗಿರುವುದಾದರೂ[13] 1372 ರವರೆಗೆ ಈ ಶಾಖೆ ಕ್ರಿಯಾಶೀಲ ವಾಗಿದ್ದುದನ್ನು ಶಾಸನೀಯ ಪ್ರಮಾಣದಿಂದ ತಿಳಿದುಕೊಳ್ಳಬಹುದು. ಧರ್ಮಭೂಷಣ ದೇವನು ದೊಡ್ಡಬೆಟ್ಟದ ಮೇಲೆ ಮರಣವನ್ನು ಆಹ್ವಾನಿಸಿದ ಈ ಗಣದ ಹೆಸರಾಂತ ಮುನಿ. ಈತನ ಶಿಷ್ಯನಾದ ವರ್ಧಮಾನಸ್ವಾಮಿಯು ಅವನ ಗೌರವಾರ್ಥ 1372 ರಲ್ಲಿ ನಿಸಿಧಿ ನಿರ್ಮಿಸಿ, ಧರ್ಮಭೂಷಣನನ್ನು ಗೌರವಿಸಿದನೆಂದು ತಿಳಿದುಬರುವುದು. ಅದು ಏನೇ ಇರಲಿ, ಇಂಗುಳೇಶ್ವರ ಬಳಿ ಮತ್ತು ಬಲಾತ್ಕಾರ ಗಣಕ್ಕೆ ಈ ಬಗೆಯ ವಿರಳ ಮತ್ತು ಸಾಂದರ್ಭಿಕ ಉಲ್ಲೇಖಗಳು, ನಂದಿಸಂಘದ ಅಸ್ಪಷ್ಟ ಪ್ರಸ್ತಾಪಗಳು, ವಕ್ರಗಚ್ಛದ ಸೀಮಿತ ಪಾತ್ರ, ಕೆಲವು ತೀರ್ಮಾನಗಳಿಗೆ ಬರಲು ಎಡೆಮಾಡಿಕೊಡುವುವು. ಮೂಲಸಂಘ-ದೇಸಿಗಗಣ-ಕೊಂಡಕುಂದಾನ್ವಯ ಪ್ರಧಾನ ಶಾಖೆಯು 12ನೆಯ ಶತಮಾನದ ಆರಂಭ ಕಾಲದಲ್ಲಿ ಎಷ್ಟೊಂದು ಬಲಿಷ್ಠವಾಗಿ ಬೆಳ್ಗೊಳದಲ್ಲಿ ಬೆಳೆದಿತ್ತೆಂದರೆ ಅದು ಇತರ ಎಲ್ಲ ಶಾಖೆಗಳನ್ನು ಮಸುಕಾಗಿಸಿದ್ದಲ್ಲದೆ, ಅವೆಲ್ಲವುಗಳ ಸತ್ವವನ್ನು ಪೂರ್ತಿಯಾಗಿ ಹೀರಿಕೊಂಡು ಬೆಳೆಯ ತೊಡಗಿತ್ತು. ದ್ರಾಮಿಣಗಣ-ಪ(ನಸೋಗೆ) ಸಂಘ-ಅರುಂಗಳಾನ್ವಯವು ಅಷ್ಟೊಂದು ಮಹತ್ವವಲ್ಲದ ಸ್ಥಾನದಲ್ಲಿತ್ತೆಂದು ಕಾಣುವುದು.[14]

ಸಂಘದ ಬಂಧ: ಮೂಲಸಂಘದ ಪರಿಪೂರ್ಣಸ್ವರೂಪವು ಶ್ರವಣ ಬೆಳ್ಗೊಳದ 12ನೆಯ ಶತಮಾನದ ಶಾಸನಗಳಿಂದ ಸ್ಪಷ್ಟವಾಗಿ ತೋರದಿದ್ದರೂ ಅದರ ಪ್ರಮುಖ ಲಕ್ಷಣಗಳನ್ನು ಗುರುತಿಸಲು ಇವು ಸಹಕಾರಿಯಾಗುವುವು. ಈ ಸಂಘದ ಶ್ರಮಣರು ಖ್ಯಾತ ಪಂಡಿತರೂ ದಕ್ಷ ಸಂಘಟಕರೂ ಆಗಿದ್ದರು. ಶಕ್ತಿಯುತ ಹಾಗೂ ಶ್ರೀಮಂತ ಶ್ರಾವಕರನ್ನು ತಮ್ಮ ಬೆನ್ನಿಗೆ ಕಟ್ಟಿಕೊಂಡು ಧಾರ್ಮಿಕ ಜೀವನವನ್ನು ಕಟ್ಟುನಿಟ್ಟಾಗಿ ಕ್ರಮಪಡಿಸುತ್ತಾ, ಅವರು ಸಂಘವನ್ನು ಸಂಘಟಿಸಿದರು. ಅವರಲ್ಲನೇಕರು ದೂರಗಾಮಿಗಳು, ಚೈತನ್ಯಶೀಲರು ಮತ್ತು ಕಲ್ಪನಾಶಕ್ತಿ ಹೊಂದಿದಂಥವರಾಗಿದ್ದರು. ಆದರೆ ಈ ಕಾಲದ ಸಂಘಗಳಲ್ಲಿ ಕಂತಿಯರಿಗೆ ವಿಶೇಷ ಸ್ಥಾನಮಾನ ದೊರೆತಿರಲಿಲ್ಲವೆಂದು ಕಾಣುವುದು; ಕಾರಣ, ಅವರಾರೂ ಪ್ರಸಿದ್ಧಿಗೆ ಬರಲಿಲ್ಲ. ಈ ಕಾಲದ ಮುನಿಗಳು ಶ್ರೀಮಂತ ಶ್ರಾವಕಿಯರನ್ನು ಪ್ರೋತ್ಸಾಹಿಸಿದರಲ್ಲದೆ ಅವರಲ್ಲಿ ಅನೇಕರನ್ನು ತಮ್ಮ ವೈಯಕ್ತಿಕ ಗುಡ್ಡಿಯರನ್ನಾಗಿ ಸ್ವೀಕರಿಸಿದ್ದರು.

ಈ ಶ್ರಮಣರೆಲ್ಲ ತೀಕ್ಷ್ಣ ಬಗೆಯ ಐತಿಹಾಸಿಕ ಪ್ರಜ್ಞೆಯನ್ನಿಟ್ಟುಕೊಂಡು ಸಂಘದ ಸೌಧವನ್ನು ಬಲಪಡಿಸಿದರೆಂಬುದರಲ್ಲಿ ಅನುಮಾನವಿಲ್ಲ. ಮೂಲಸಂಘದ ಇತಿಹಾಸವನ್ನು ಅವರು ಅತಿ ಸೂಕ್ಷ್ಮವಾಗಿ ರಚಿಸಿ ನಿರೂಪಿಸಲು ಆಸ್ಥೆವಹಿಸಿದ್ದರು. ಸುದೀರ್ಘ ಶಾಸನಗಳಲ್ಲಿ ಒಂದೇ ತೆರನಾದ ಶಬ್ದ ಭಂಡಾರವನ್ನು ಬಳಸಿ, ಸಂಘದ ಇತಿಹಾಸವನ್ನು ಪುನಃ ಪುನಃ ವಿವರಿಸಿ,

13. 456.

14. 1124ರ 569.

ಅದಕ್ಕೆ ಶಾಶ್ವತ ಸ್ಥಾನ ಕಲ್ಪಿಸಿಕೊಡಲು ಅವರು ಪ್ರಯತ್ನಪಟ್ಟರು. ಧಾರ್ಮಿಕ ಜೀವನದ ಪ್ರತಿಯೊಂದು ಮಗ್ಗುಲನ್ನು ಕ್ರಮಪಡಿಸಿದಂತೆ, ಈ ಸಂಘವು ನೇರವಾಗಿ ಇಲ್ಲವೆ ತನ್ನ ಗುಡ್ಡರ ಮೂಲಕ ಶಾಸನ ಪಾಠಗಳನ್ನು ರಚಿಸಲು ಬೇಕಾದ ಕವಿಗಳನ್ನು ಮತ್ತು ಅವುಗಳನ್ನು ಕಂಡರಿಸಲು ಬೇಕಾದ ಲಿಪಿಕಾರರನ್ನು ಪೋಷಿಸಿತು.

ವಿಧಿ ನಿಯಮಗಳ ಆಚರಣೆ, ಮರಣವನ್ನು ಸ್ಮರಣಗೊಳಿಸುವಿಕೆ, ಸ್ಮಾರಕಗಳ ಸ್ಥಾಪನೆ, ಹಾಗೂ ಭೂದತ್ತಿಗಳನ್ನು ಯಾರಿಗೆ ಹಾಗೂ ಹೇಗೆ ನೀಡಬೇಕೆಂಬುದರ ಕಟ್ಟಳೆಗಳನ್ನು ಈ ಸಂಘವು ರೂಪಿಸಿಕೊಂಡಿತು. ಸಂಘದೊಳಗೆ ಒಂದು ಬಗೆಯ ಶ್ರೇಣಿ ವ್ಯವಸ್ಥೆಯೂ ರೂಪಗೊಂಡಿತು. ಶ್ರೀಮಂತ ಗುಡ್ಡರನ್ನು ಮತ್ತು ಭವ್ಯ ಮುನಿವಂಶಜರನ್ನು ಪಡೆದಿದ್ದ ಶ್ರಮಣರು ಉಳಿದವರಿಗಿಂತ ಪ್ರಮುಖ ಸ್ಥಾನಗಳನ್ನು ಗಳಿಸಿಕೊಂಡಂತೆ ತಿಳಿದುಬರುವುದು. ಈ ಶ್ರಮಣರಲ್ಲನೇಕರು ಸಂಘ-ಸಂಸ್ಥೆಗಳ ಜವಾಬ್ದಾರಿಯನ್ನು ವಹಿಸಿಕೊಂಡರು; ಪುರೋಹಿತರಾಗಿ ಕೆಲಸ ಮಾಡಿದರು; ದತ್ತಿಗಳನ್ನು ಸ್ವೀಕರಿಸಿದರು; ಕರ್ತವ್ಯಗಳನ್ನು ಹಂಚಿಕೊಂಡರು, ಹಂಚಿಕೊಟ್ಟರು; ಸೇವೆಗಳ ಮೇಲೆ ನಿಯಂತ್ರಣವಿಟ್ಟಕೊಂಡರು; ದೇವಾಲಯ, ಕೆರೆ, ಮೊದಲಾದವನ್ನು ಕಟ್ಟಿದರು, ಕಟ್ಟಿಸಿದರು; ವೈಯಕ್ತಿಕವಾಗಿ ಇಲ್ಲವೆ ಇತರ ಶ್ರಮಣರ ಸಹಭಾಗಿತ್ವದಲ್ಲಿ ದತ್ತಿಗಳನ್ನು ನೀಡಿದರು; ವಿರಕ್ತಿ ತತ್ವವನ್ನು ತೀವ್ರವಾಗಿ ಪ್ರತಿಪಾದಿಸುತ್ತಲೇ ತಮ್ಮ ಸಂಘ-ಸಂಸ್ಥೆಗಳ ಸಂಪತ್ತಿನೊಡನೆ ಸದೃಢ ಸಂಬಂಧ ಬೆಳೆಸಿಕೊಂಡರು. ಈ ಕಾರ್ಯಭಾರಗಳೆಲ್ಲ ಎಷ್ಟರ ಮಟ್ಟಿಗೆ ಅವರ ಗಮನವನ್ನು ಸೆಳೆದಿದ್ದವೆಂದರೆ, ಜೀವನದಂಚಿನ ಮಿಣುಕು ಗಳಿಗೆಯಲ್ಲಿಯೂ ಅವುಗಳಿಂದ ಹೊರಬರಲು ಅವರಿಗೆ ಸಾಧ್ಯವಾಗಲಿಲ್ಲ.[15] ದೇಹದಂಡನೆಯ ವಿಧಿ-ವಿಧಾನದಿಂದ ಸಂಪೂರ್ಣ ಮುಕ್ತರಾಗದಿದ್ದರೂ ಅವರ ಮರಣವು ಲೌಕಿಕರ ಗಮನ ಮತ್ತು ಗೌರವವನ್ನು ಗಳಿಸಿಕೊಳ್ಳಲು ಸಮರ್ಥವೆನಿಸಿತು. ಇಂತಹ ಕೆಲವು ಆಚರಣೋತ್ಸವಗಳ ನಿಸಿಧಿ ಶಾಸನಗಳನ್ನು ಅಂದಿನ ಕವಿಗಳು ವಿಸ್ತಾರವಾಗಿ ವರ್ಣಿಸಿ ರಚಿಸಿರುವರು. ಈ ಕಾಲದ ಸಮಾಧಿಲೇಖನಗಳು ಪೂಜಾ ಸ್ಥಳಗಳ ರಾಚನಿಕ ಸ್ವರೂಪವನ್ನೂ ಪಡೆದುಕೊಂಡವು.

ಶ್ರಮಣರ ಪಾತ್ರ : ಮೂಲಸಂಘದ ಶ್ರಮಣರು ಎಚ್ಚರಿಕೆಯಿಂದ ರಕ್ಷಿಸಿಕೊಂಡು ಬಂದ ಧಾರ್ಮಿಕ ಚಟುವಟಿಕೆಗಳಲ್ಲಿ ಕೆಲವನ್ನು ದಾಖಲಿಸಲಾಗಿದೆ. ಅವರ ಧರ್ಮ ಪ್ರಸಾರದ ಪರಮೋದ್ದೇಶವು ಶ್ರಾವಕರಲ್ಲಿ ಧರ್ಮಪ್ರಜ್ಞೆಯನ್ನು ಮೂಡಿಸುವುದಾಗಿತ್ತು. ದೇವಾಲಯಗಳನ್ನು ನಿರ್ಮಿಸಿಕೊಳ್ಳುವುದು, ಹೇರಳ ಭೂದತ್ತಿ ಹಾಗೂ ಧನದತ್ತಿಗಳನ್ನು ಪಡೆಯುವುದು, ಆ ಮೂಲಕ ಧರ್ಮಸಂಸ್ಥೆಗಳನ್ನು ಬಲಪಡಿಸುವುದು, ಅವರ ಮುಖ್ಯ ಗುರಿಗಳಾಗಿದ್ದವು. ರಾಯಚೂಡಾಲಂಕೃತ ಅಥವಾ ಅರಸರಿಂದ ಪಡೆದ ಮನ್ನಣೆಯ ಉಲ್ಲೇಖಗಳು 12ನೆಯ

15. 6 ನೆಯ ಅಧ್ಯಾಯ ನೋಡಿ.

ಶತಮಾನದ ಶಾಸನಗಳಲ್ಲಿ ಪದೇ ಪದೇ ಬರುವುವು.[16] 'ತನ್ನ ಆಜ್ಞಾಧಾರಕ ನತಮಸ್ತಕ ರಾಜಸ್ತೋಮದ'[17] ಬಗ್ಗೆ ಶ್ರೀಪಾಲತ್ರೈವಿದ್ಯದೇವನು ವಿಶೇಷ ಹೆಮ್ಮೆಪಟ್ಟುಕೊಂಡಿದ್ದನು. ಕುಮಾರಸೇನಸಿದ್ಧಾಂತಿಕನು 'ಜೈನಧರ್ಮ ಜ್ಯೋತಿ' ಯನ್ನು ಪ್ರಜ್ವಲಗೊಳಿಸಿದುದನ್ನು ಹೆಮ್ಮೆಯಿಂದ ಹೇಳಿಕೊಂಡಿರುವನು.[18] ಸಂಘದ ಚಟುವಟಿಕೆಗಳು ದೂರ ದೂರ ಪಸರಿಸಲು ಆಧ್ಯಾತ್ಮಿಕ ಶಿಷ್ಯರ ತಂಡಗಳನ್ನು ಕಟ್ಟಿದ ಶ್ರೇಯಸ್ಸನ್ನು ಕೆಲವು ಶ್ರಮಣರಿಗೆ ನೀಡಲಾಗಿದೆ. ಮುನಿ ಗುಣನಂದಿಗೆ ಮುನ್ನೂರು ಶಿಷ್ಯರಿದ್ದರು. ಅವರಲ್ಲಿ ಎಪ್ಪತ್ತೆರಡು ಮುನಿಗಳು ಬಹಳ ಖ್ಯಾತಿ ಪಡೆದಿದ್ದರು. ದೇವೇಂದ್ರ ಸಿದ್ಧಾಂತದೇವನು ಇವರ ನಾಯಕನಾಗಿದ್ದನು.[19] ಈ ಬಗೆಯ ಹೇಳಿಕೆಗಳಲ್ಲಿ ಕೆಲಮಟ್ಟಿನ ಉತ್ಪ್ರೇಕ್ಷೆ ಇರಬಹುದಾದರೂ 12ನೆಯ ಶತಮಾನದ ಶ್ರಮಣರು ತಮ್ಮ ಪೂರ್ವಜರಿಗಿಂತಲೂ ಶಿಷ್ಯರೊಂದಿಗೆ ಮತ್ತು ಸಹೋದ್ಯೋಗಿಗಳೊಂದಿಗೆ ನಿಕಟ ಸಂಬಂಧವನ್ನಿರಿಸಿಕೊಂಡಿದ್ದರೆಂಬುದರಲ್ಲಿ ಸಂದೇಹವಿಲ್ಲ. ಉದಾಹರಣೆಗೆ, 11ನೆಯ ಶತಮಾನದ ಅಂತ್ಯ ಮತ್ತು 12ನೆಯ ಶತಮಾನದ ಆದಿಯಲ್ಲಿ ಜೀವಿಸಿದ್ದ ಗೋಪಣಂದಿದೇವನನ್ನು ಐವರು ಪ್ರಮುಖ ಶಿಷ್ಯರು, ಚುತುರ್ಮುಖದೇವನನ್ನು ಆರು ಪ್ರಮುಖರಲ್ಲದ ಹಲವಾರು ಶಿಷ್ಯರು ಸುತ್ತುವರಿದಿದ್ದರು.[20]

ಧರ್ಮ ಪ್ರಸಾರ ಮಾಡಲು ಮತ್ತು ತಮ್ಮ ಅನುಯಾಯಿಗಳನ್ನು ಬೆಳೆಸಲು ಶ್ರಮಣರು ಧಾರ್ಮಿಕ ಪ್ರವಾಸಗಳನ್ನು ಈ ಕಾಲದಲ್ಲಿ ಕೈಕೊಳ್ಳತೊಡಗಿದರು. 12ನೆಯ ಶತಮಾನದ ಶುಭಚಂದ್ರನು 'ಬಿಜಯಂಗೈದತ್ತಲ್ಲೆಲ್ಲ ಅಧಿಕೋತ್ಸವದಿಂದ ಧರ್ಮ ಪ್ರಭಾವ ಬಿತ್ತರಿಸಿದ'.[21] ಭಾನುಕೀರ್ತಿದೇವನು 'ಧರ್ಮದ ಪ್ರಭಾವವನ್ನು' ಬೆಳ್ಗೊಳದಿಂದ ಆರಂಭಿಸಿ, ಎಲ್ಲ ಕೇಂದ್ರಗಳಲ್ಲಿ ಪಸರಿಸುತ್ತಾ ಬೆಳಗಾವಿ ಜಿಲ್ಲೆಯ ಹೂವಿನಬಾಗಿ ತಲುಪಿದನೆಂಬ ವರದಿ ಸಿಗುವುದು.[22] ಗೋಪಣಂದಿಯಂಥ ಶ್ರಮಣರು ದೇಸಿಗಗಣದ ಮುಂಚೂಣಿಯಲ್ಲಿ ನಿಂತರು.[23] ಚಂದ್ರಪ್ರಭದೇವ, ನಯಕೀರ್ತಿಸಿದ್ಧಾಂತದೇವ, ನೇಮಿಚಂದ್ರಪಂಡಿತದೇವರಲ್ಲದೆ ಇನ್ನೂ ಕೆಲವರು ಮಹಾಮಂಡಲಾಚಾರ್ಯರಾದರು, ರಾಜಗುರುಗಳಾದರು.[24] ಮಾಘಣಂದಿಸಿದ್ಧಾಂತ ಚಕ್ರವರ್ತಿಯು ಹೊಯ್ಸಳರ ರಾಜಗುರುವೆಂದು ಗುರುತಿಸಿಕೊಂಡನು. ಕುಕ್ಕುಟಾಸನ

16. ಮಲ್ಲಿಷೇಣಮಲಧಾರಿ (1129ರ 77) ಅವರಲ್ಲೊಬ್ಬ.
17. 1124ರ 569.
18. ಅದೇ.
19. 1123 ರ 135 ಮತ್ತು 1176 ರ 73
20. 12ನೆಯ ಶತಮಾನದ 79.
21. 1123ರ 135.
22. ಸು. 12ನೆಯ ಶತಮಾನದ 81.
23. ಸು. 12ನೆಯ ಶತಮಾನದ 79.
24. 'ಮಹಾಮಂಡಲಾಚಾರ್ಯ' ಪದಕ್ಕೆ ಸು. 12ನೆಯ ಶತಮಾನದ 339, 1198ರ 340, 1273ರ

ಮಲಧಾರಿದೇವನು ಮಂತ್ರಿ ಹಳ್ಳರಾಜನ ವ್ರತ ಗುರುವಾಗಿದ್ದುದಕ್ಕೆ ಹೆಮ್ಮೆ ಪಟ್ಟನು.[25]

ಹೊಸ ಸನ್ನದು – ಮೊದಲ ಪಂಚಕಲ್ಯಾಣೋತ್ಸವ : ಜೈನ ಸಮಾಜದ ಧಾರ್ಮಿಕ ಹಾಗೂ ಲೌಕಿಕ ವಿಭಾಗಗಳನ್ನು ಚುರುಕುಗೊಳಿಸಿ, ಬೆಳ್ಗೊಳದಲ್ಲಿ ನವಚೈತನ್ಯ ತುಂಬಲು ಮೂಲಸಂಘವು ವಿಶೇಷ ಯೋಜನೆಯೊಂದನ್ನು 1118ರಲ್ಲಿ ಹಾಕಿಕೊಂಡಿತೆಂದು ತೋರುವುದು.[26] ಈ ನವಜಾಗೃತಿಯನ್ನು ಸಂಕೇತಿಸಲೆಂಬಂತೆ ಭಾನುಚಂದ್ರಸಿದ್ಧಾಂತ ಚಕ್ರವರ್ತಿಯು ಗೊಮ್ಮಟನ ಪಂಚಕಲ್ಯಾಣೋತ್ಸವವನ್ನು ಹಮ್ಮಿಕೊಂಡನು. ಅವನು 'ಶ್ರಾವಕರಿಗೆ ಏಕಾದಶ ಕರ್ತವ್ಯಗಳನ್ನು ಬೋಧಿಸಿ', ಈ ಉತ್ಸವದಲ್ಲಿ ಪಾಲ್ಗೊಳ್ಳಲು ಕೊಂಡಕುಂದಾನ್ವಯ-ಮಹಾದೇಸಿಗಣ-ಪುಸ್ತಕಗಚ್ಛದ ಸದಸ್ಯರೆಲ್ಲರನ್ನೂ ದೊಡ್ಡ ಬೆಟ್ಟಕ್ಕೆ ಬರಮಾಡಿಕೊಂಡನು. ನಾಲ್ಕು ಸಂಘಗಳ, ಎಲ್ಲ ಗಣಗಳ ಗುರುಗಳು, ಐವತ್ತು ಪ್ರಖ್ಯಾತ ಮುನಿಗಳು, ಗೌರಶ್ರೀ, ಸಾಮಶ್ರೀ,...ನಶ್ರೀ, ದೇವಶ್ರೀ, ಕನಕಶ್ರೀ, ಮೊದಲಾದವರ ನೇತೃತ್ವದಲ್ಲಿ ಬಂದ ಮುನಿ-ಕಂತಿಯರಲ್ಲದೆ ಹಲವಾರು ಶ್ರಾವಕರೂ ಇದರಲ್ಲಿ ಪಾಲ್ಗೊಂಡರು. ಇಪ್ಪತ್ತೆಂಟು ತಂಡಗಳಲ್ಲಿ ವಿಭಜನೆಗೊಂಡ ಇವರೆಲ್ಲರೂ ಈ ಧಾರ್ಮಿಕ ಸಮಾವೇಶಕ್ಕೆ ವಿಶೇಷ ಶೋಭೆ ತಂದುಕೊಟ್ಟರು. ಇಲ್ಲಿ ನೆರೆದ ನಾಲ್ಕೂ ಸಂಘಗಳ ಮತ್ತು ಎಲ್ಲಾ ಗಣಗಳ ಶ್ರಮಣರಲ್ಲಿ ಅಗ್ರಗಣ್ಯರಾದವರು ಸೋಮಚಂದ್ರಸಿದ್ಧಾಂತಚಕ್ರವರ್ತಿ, ಚತುರ್ಮುಖಭಟ್ಟಾರಕದೇವ, ಸಿಂಹಣಂದಿಭಟ್ಟಾಚಾರ್ಯ, ಶಾಂತಿ.... ಭಟ್ಟಾಚಾರ್ಯ, ಶಾಂತಿಕೀರ್ತಿಭಟ್ಟಾರಕದೇವ, ಕನಕಚಂದ್ರ ಮತ್ತು ಮಲಧಾರಿದೇವರು. ಮಹಾಮಂಡಲಾಚರ್ಯ ಹಾಗೂ ರಾಜಗುರುವೆನಿಸಿದ್ದ ಭಾನುಚಂದ್ರಸಿದ್ಧಾಂತಚಕ್ರವರ್ತಿಯ ಸಹಯೋಗಕ್ಕೆ ನಿಂತು, ಇವರೆಲ್ಲರೂ ಮಹೋತ್ಸವದಾಚರಣೆಯನ್ನು ನಿರ್ವಹಿಸಿಕೊಟ್ಟರು.

ಬೆಳ್ಗೊಳದ ದಾಖಲಿತ ಇತಿಹಾಸದಲ್ಲಿ ಪ್ರಪ್ರಥಮವೂ[27] ಅತಿ ಮಹತ್ವಪೂರ್ಣವೂ ಆದ ಈ ಉತ್ಸವವು 12ನೆಯ ಶತಮಾನದಾರಂಭದಲ್ಲಿ ಜರುಗಿದುದು ಬರಿ ಆಕಸ್ಮಿಕವೇನಲ್ಲ. ಫೆಬ್ರುವರಿ, 14, 1118ರಂದು ಬೆಟ್ಟದ ಮೇಲೆ ನೆರೆದ ಗಣಗಳೆಲ್ಲ ಈ ಅದ್ದೂರಿಯ ಉತ್ಸವ ಮಾಡಿ ನೋಡಿ ಮಾತ್ರ ತಮ್ಮ ಮಠಗಳಿಗೆ ಹಿಂತಿರುಗಲಿಲ್ಲ; ಅವರೆಲ್ಲ ತಮ್ಮ ಕರ್ತವ್ಯಗಳ ಹೊಸ ಸನ್ನದಿನೊಂದಿಗೆ ತಮ್ಮ ಕೇಂದ್ರಗಳಿಗೆ ಮರಳಿದರು. ಈ ಪಂಚಕಲ್ಯಾಣೋತ್ಸವವು ಅಕ್ಷರಶಃ ಹೊಸ ಯುಗಕ್ಕೆ ನಾಂದಿಹಾಕಿತೆಂದು ಭಾವಿಸಬಹುದು.

ಆಚಾರ್ಯರ ಮುಂದಾಳತ್ವ : ಮೂಲಸಂಘವು 12ನೆಯ ಶತಮಾನದಲ್ಲಿ ಈ

348, 1159ರ 476, ಸು.13ನೆಯ ಶತಮಾನದ 557, ಇತ್ಯಾದಿ ನೋಡಿ.

25. ಅನುಕ್ರಮವಾಗಿ 456 ಮತ್ತು 476.
26. 374.
27. ಗೊಮ್ಮಟ ಮಹಾವಿಗ್ರಹ ಪ್ರತಿಷ್ಠಾಪಿಸಿದ ನಂತರ ಚಾವುಂಡರಾಯನು ಮಸ್ತಕಾಭಿಷೇಕೋತ್ಸವವನ್ನು ನೆರವೇರಿಸಿದನೆಂದು 16ನೆಯ ಶತಮಾನದ ನಂತರದ ಸಾಹಿತ್ಯದಲ್ಲಿ ಪ್ರತಿಪಾದಿಸಲಾಗಿದೆ.

ತೀರ್ಥಕ್ಷೇತ್ರವನ್ನು ಪ್ರವೇಶಿಸಿ ಬೆಳ್ಗೊಳದ ಇತಿಹಾಸವನ್ನೇ ಬದಲಿಸಿತು. ಈ ಸಂಘದ ಕುಲಚಂದ್ರದೇವನ ಶಿಷ್ಯನಾದ ಮಾಘಣಂದಿ ಮುನಿಯು ಕೊಲ್ಹಾಪುರ ತೀರ್ಥವನ್ನು ಸಂಸ್ಥಾಪಿಸಿ, ಕೊಂಡಕುಂದ ವಂಶಾವಳಿಯನ್ನು ಉಜ್ವಲಗೊಳಿಸದ್ದಲ್ಲದೆ ಅಲ್ಲಿಯ ಸಾಮಂತ ಬಸದಿಯನ್ನು ಪ್ರಚುರಪಡಿಸಿದನು.[28] 12-13ನೆಯ ಶತಮಾನಗಳ ಕಾಲಾವಧಿಯಲ್ಲಿ ಮೂಲ ಸಂಘವು ಹೊಸ ಹೊಸ ದೇವಾಲಯಗಳನ್ನು ಕಟ್ಟುವ ಹೊಣೆ ಹೊತ್ತುನಿಂತಿತು. ಬಸ್ತಿಹಳ್ಳಿಯ ನೇಮೀಶ್ವರ ದೇವಾಲಯವನ್ನು ನೇಮಿಚಂದ್ರಪಂಡಿತದೇವನ ಶಿಷ್ಯನಾದ ಚಿಕ್ಕನೇಮಿಚಂದ್ರ ಮುನಿಯು, ತುಂಬೇನಹಳ್ಳಿಯಲ್ಲಿ ಪರವಾದಿಮಲ್ಲ ಜಿನಾಲಯವನ್ನು ವಾದಿರಾಜದೇವನು ಕಟ್ಟಿಸಿದರೆ, ಮಂಡಲಾಚಾರ್ಯ ನಯಕೀರ್ತಿದೇವನು ಪಾರ್ಶ್ವದೇವನಿಗೆ ಕನ್ನೆಬಸದಿಯನ್ನು ಕಟ್ಟಿಸಿದುದನ್ನು ಇಲ್ಲಿ ನಿದರ್ಶಿಸಬಹುದು.[29] ಮಹಾಮಂಡಲಾಚಾರ್ಯನೂ ರಾಜಗುರುವೂ ಆದ ಹಿರಿಯ ನಯಕೀರ್ತಿದೇವನು ಇದನ್ನು ಮುಂದುವರಿಸಿ, ಬೆಕ್ಕಗ್ರಾಮದಲ್ಲಿ ಚೆನ್ನಪಾರ್ಶ್ವದೇವ ಬಸದಿಯನ್ನು 1250 ರಲ್ಲಿ ಕಟ್ಟಿಸಿದನು.[30] ಇವೆಲ್ಲವೂ ಶ್ರಮಣರೇ ಕಟ್ಟಿಸಿದ ದೇವಾಲಯಗಳಾದರೆ, ಇನ್ನು ಕೆಲವನ್ನು ಅವರು ತಮ್ಮ ಗುಡ್ಡರ ಮೂಲಕ ನಿರ್ಮಾಣಮಾಡಿಸಿಕೊಂಡರು.

ತಮ್ಮ ಸದಸ್ಯರ ಸ್ಮರಣಾರ್ಥ ನಿಸಿಧಿಗಳನ್ನು ನಿರ್ಮಿಸುವ ಕಾರ್ಯದಲ್ಲೂ ಮೂಲಸಂಘದ ಶ್ರಮಣರು ನೇರವಾಗಿ ತೊಡಗಿಸಿಕೊಂಡರು. ದೇವಕೀರ್ತಿದೇವನು 1163ರಲ್ಲಿ ಸ್ವರ್ಗಸ್ಥನಾದಾಗ ಅವನ ಮೂವರು ಶಿಷ್ಯರು ಕಟವಪ್ರದ ಮೇಲೆ 'ಗುರು ನಿಷಧ್ಯಾಃ'ವನ್ನು ನಿರ್ಮಿಸಿದರು. ಅನಂತರದ ಕಾಲದಲ್ಲೂ ಈ ಬಗೆಯ ಕಾರ್ಯಗಳು ಮುಂದುವರಿದವು.[31].


ಆಚಾರ್ಯರು ಭೂದತ್ತಿ ಇಲ್ಲವೆ ಧನದತ್ತಿ ಕಾರ್ಯಕ್ರಮದಲ್ಲಿ ಸ್ವತಃ ಉಪಸ್ಥಿತರಿದ್ದು, ಅವನ್ನು ನೆರವೇರಿಸಿಕೊಡುವುದು ಈ ಕಾಲದಲ್ಲಿ ಹೆಚ್ಚು ರೂಢಿಗೆ ಬಂತು. ದತ್ತಿ ನೀಡುವಾಗ ಅವರಲ್ಲೊಬ್ಬರ ಪಾದ ತೊಳೆಯುವ ಸಾಂಕೇತಿಕ ವಿಧಿಯ ಬಗ್ಗೆ ಶಾಸನಗಳಲ್ಲಿ ಮೇಲಿಂದ ಮೇಲೆ ಪ್ರಸ್ತಾಪ ಬರುವುದು. ದೇವಾಲಯದ ಪರವಾಗಿ ದತ್ತಿ ಸ್ವೀಕರಿಸಿದ ಮತ್ತು ವಿಶಿಷ್ಟ ಸೇವೆಗಳನ್ನು ಪೂರೈಸಿಕೊಡುವ ಹೊಣೆ ಹೊತ್ತ ಅನೇಕ ಶ್ರಮಣರ ಹೆಸರುಗಳನ್ನೂ ಶಾಸನಗಳು ಉಲ್ಲೇಖಿಸುವುವು.

ಮಸ್ತಕಾಭಿಷೇಕದ ಶಾಸನಿತ ಉಲ್ಲೇಖಗಳು 14ನೆಯ ಶತಮಾನದಿಂದ ಆರಂಭಗೊಳ್ಳುವುವು, ನೋಡಿ - 1398ರ 360: 15ನೆಯ ಶತಮಾನದ 332 ಮತ್ತು 1827ರ 324.


28. 71 ಮತ್ತು 526.
29. ಅನುಕ್ರಮವಾಗಿ 562, 571 ಮತ್ತು 572.
30. 535.
31. 1163ರ 70. ಅಲ್ಲದೆ 380 ಮತ್ತು 72 ನ್ನೂ ನೋಡಿ.




7. ಸಿದ್ಧರಗುಂಡಿನ ಮೇಲಿನ...ಕೀರ್ತ್ತಿಯ (378) ಶಾಸನಿತ ನಿಸಧಿ



8. ಗೊಮ್ಮಟನ ಪಂಚಕಲ್ಯಾಣ ಅಖಂಡ ಬಾಗಿಲ ಬಳಿ, (374)



9. ಸಮಾಧಿ ಸ್ವೀಕಾರದ ಒಂದು ದೃಶ್ಯ



10. ಶ್ರವಣಬೆಳ್ಗೊಳ ಮತ್ತು ಅದರ ಸುತ್ತಮುತ್ತಲ ಗ್ರಾಮಗಳು

ಈ ಕಾಲದ ದತ್ತಿಗಳಲ್ಲಿ ತರಿ ಜಮೀನು, ತೋಟ, ಸುಂಕಗಳಲ್ಲಿಯ ನಿರ್ದಿಷ್ಟ ಪಾಲು, ಧನ, ಎಣ್ಣೆ ಗಿರಣಿ, ಮುಂತಾದವುಗಳಲ್ಲದೇ ಸಂಪೂರ್ಣ ಗ್ರಾಮಗಳೂ ಸೇರಿದ್ದವು. ಗಂಗರಾಜನ ಮಡದಿ ಮತ್ತು ತಾಯಿ ಕಟ್ಟಿಸಿದ ದೇವಾಲಯಗಳ ಸೇವೆಗಾಗಿ ಶುಭಚಂದ್ರಸಿದ್ಧಾಂತದೇವನು ಪರಮ ಗ್ರಾಮವನ್ನು ಗಂಗರಾಜನಿಂದ ಪಡೆದುಕೊಂಡನು. ಸವತಿಗಂಧವಾರಣ ಬಸದಿಯ ನಿರ್ವಹಣೆಗಾಗಿ ಶಾಂತಲೆಯು ತನ್ನ ಗುರು ಪ್ರಭಾಚಂದ್ರಸಿದ್ಧಾಂತದೇವನಿಗೆ ಮೊಟ್ಟನವಿಲೆ ಗ್ರಾಮವನ್ನು ದತ್ತಿ ಹಾಕಿಸಿಕೊಟ್ಟಳು. ಅಕ್ಕನ ಬಸದಿಯನ್ನು ನಿಭಾಯಿಸಲು ಬಾಳಚಂದ್ರದೇವನು ಅಚಲಾದೇವಿಯಿಂದ ಬೊಮ್ಮನಹಳ್ಳಿಯನ್ನು ಪಡೆದನು. ಮಹಾಮಂಡಲಾಚಾರ್ಯ ನಯಕೀರ್ತಿಸಿದ್ಧಾಂತ ಚಕ್ರವರ್ತಿಯು ಭಂಡಾರಬಸದಿಯ ಪೋಷಕನಾದ ಹುಳ್ಳರಾಜನಿಂದ ಸವಣೇರು ಗ್ರಾಮವನ್ನು ಪಡೆದುಕೊಂಡನು. ಕೊನೆಯ ದತ್ತಿಯನ್ನು ಕಾಲಾನಂತರ ಮತ್ತೊಮ್ಮೆ ನವೀಕರಿಸಿ ಭಾನುಕೀರ್ತಿದೇವನಿಗೆ ಒಪ್ಪಿಸಲಾಯಿತು.[32] ಮುನಿ ಶ್ರೀಪಾಲತ್ರೈವಿದ್ಯದೇವನು 1124 ರಲ್ಲಿ ಚಲ್ಯದಲ್ಲಿ ಒಂದು ದೇವಾಲಯವನ್ನು ನಿರ್ಮಿಸಿ, ಅದಕ್ಕೆ ಹೊಯ್ಸಳಜಿನಾಲಯವೆಂದು ಹೆಸರಿಟ್ಟು, ಇದರ ನಿರ್ವಹಣೆಗೆ ವಿಷ್ಣುವರ್ಧನನಿಂದ ಶಲ್ಯ ಗ್ರಾಮವನ್ನು ಪಡೆದನು.[33] ಸಮಕಾಲೀನ ಅರಸರು ದೇವಾಲಯಗಳಿಗೆ ನೇರವಾಗಿ ಬಿಟ್ಟ ದತ್ತಿಗಳ ಕೆಲವೇ ಕೆಲವು ನಿದರ್ಶನಗಳಲ್ಲಿ ಇದು ಒಂದು. ಧರ್ಮೋದ್ದೇಶದಿಂದ ಕೊಟ್ಟುದುದಕ್ಕಿಂತ ತಮ್ಮ ಅಧಿಕಾರವರ್ಗವು ಸಲ್ಲಿಸಿದ ಲೌಕಿಕ ಸೇವೆಗಳನ್ನು ಮೆಚ್ಚಿ, ಅವರನ್ನು ಸಂತೃಪ್ತಿಪಡಿಸಲು ಆಳರಸರು ಬಿಟ್ಟ ದತ್ತಿಗಳೇ ಹೆಚ್ಚು. ಅರಸರು ತಮ್ಮ ದಂಡನಾಯಕರ ಸಮರ ಸೇವೆಗಳಿಂದ ಸಂತುಷ್ಟರಾಗಿ ಹೇಗೆ ಕೊಡುಗೆಗಳನ್ನು ಅನುಗ್ರಹಿಸುತ್ತಿದ್ದರು ಮತ್ತು ದಂಡನಾಯಕರು ತಮ್ಮ ಧಾರ್ಮಿಕ ಸಂಸ್ಥೆಗಳನ್ನು ಶ್ರೀಮಂತಗೊಳಿಸಲು ಇಂತಹ ಸಂದರ್ಭಗಳನ್ನು ಹೇಗೆ ಬಳಸಿಕೊಳ್ಳುತ್ತಿದ್ದರು ಎಂಬುದನ್ನು ಶಾಸನಗಳು ಪುನಃ ಪುನಃ ಸ್ಪಷ್ಟಪಡಿಸುವುವು.

ಆಡಳಿತಾತ್ಮಕ ಹೊಣೆಗಾರಿಕೆ: ಹೇರಳ ಸಂಪತ್ತು ಹರಿದುಬಂದುದರಿಂದಾಗಿ ಸಾಂಸ್ಥಿಕ ಹೊಣೆ ಹೆಚ್ಚಿ, ಕ್ರಮೇಣ ಅವು ಜಟಿಲಗೊಳ್ಳತೊಡಗಿದವು. ಈ ಕಾರಣ ಆರ್ಥಿಕ ಹಾಗೂ ಸೇವಾ ನಿರ್ವಹಣೆಗಳಲ್ಲಿ 'ಗಣಾಧೀಶ'ರು, 'ಆಚಾರ್ಯ'ಮಹಾಶಯರು, 'ಮಹಾಮಂಡಲಾಚಾರ್ಯರು' ಮತ್ತು 'ರಾಜಗುರುಗಳು' ತಮ್ಮನ್ನು ತಾವು ಹೆಚ್ಚಾಗಿ ತೊಡಗಿಸಿಕೊಳ್ಳುವುದು ಅನಿವಾರ್ಯವಾಯಿತೆಂದು ಕಾಣುವುದು. ಸಂಘದ ಸದಸ್ಯರಲ್ಲನೇಕರು ಈ ವೈಭವದಲ್ಲಿ ಮೈಮರೆಯತೊಡಗಿದರು. ವಿಶೇಷತಃ ಮುನಿಗಳಿಗೆ, ಸಾಮಾನ್ಯತಃ ಯಾತ್ರಿಗಳಿಗೆ, ಪ್ರಸಾದ ವ್ಯವಸ್ಥೆ ಮಾಡುವ ವಿಪುಲ ಅವಕಾಶಗಳಿಂದಲೇ ಅವರು ಸಂತೃಪ್ತರಾಗತೊಡಗಿದರು.

---

32. ಅನುಕ್ರಮವಾಗಿ 1118ರ ೬2; 1123ರ 162; 1181ರ 444 ಮತ್ತು 571; 467 ಮತ್ತು 477.
33. 1124ರ 569. ಇನ್ನುಳಿದ ಉದಾಹರಣೆಗಳಿಗೆ ನೋಡಿ: 1206ರ 517; 12 ನೆಯ ಶತಮಾನದ 531, 13ನೆಯ ಶತಮಾನದ 573 ಮತ್ತು 564.

ಮಹತ್ವದ ಸ್ಥಾನಮಾನಗಳನ್ನು ಪಡೆದುಕೊಳ್ಳುತ್ತಾ, ಸಂಘ ಹಾಗೂ ಸಮಾಜದಲ್ಲಿ ಈ ಧರ್ಮಗುರುಗಳು ತಮ್ಮ ವರ್ಚಸ್ಸು ಬೆಳೆಸಿಕೊಂಡರು. ಒಂದೆರಡು ದಶಕಗಳಲ್ಲಿಯೆ ಅವರ ಸಂಪಾದನೆ ಎಷ್ಟೊಂದು ಹೆಚ್ಚಿತೆಂದರೆ ದೇವಾಲಯ, ಕೆರೆ, ನಿಸಿಧಿ, ವೀರಗಲ್ಲು ಮುಂತಾದ ವೆಚ್ಚದಾಯಕ ಯೋಜನೆಗಳಿಗೆ ಸ್ವತಃ ಹಣ ಒದಗಿಸುವಷ್ಟು ಅವರು ಸಶಕ್ತರಾದರು. ರಾಜನಿಂದ ಶಲ್ಯ ಗ್ರಾಮವನ್ನು ಪಡೆದ ಶ್ರೀಪಾಲತ್ರೈವಿದ್ಯದೇವನು ತರಿ ಹಾಗೂ ಖುಷ್ಕಿ ಜಮೀನನ್ನು, ತೋಟವನ್ನು, ಹೊಯ್ಸಳ ಜಿನಾಲಯದ ಸೇವಗಾಗಿ 1124ರಲ್ಲಿ ಪುನರ್ದತ್ತಿ ಮಾಡುವಷ್ಟು ಶಕ್ತನಾದನು.[34] ಅದೇ ರೀತಿ, ತನ್ನ ಗುರು ಶ್ರೀಪಾಲಯೋಗೀಂದ್ರನ ಗೌರವಾರ್ಥ ನಿರ್ಮಿಸಿದ ಪರವಾದಿಮಲ್ಲಜಿನಾಲಯದ ನಿರ್ವಹಣೆಗೆ ತರಿ ಹಾಗೂ ಖುಷ್ಕಿ ಜಮೀನನ್ನು ಸ್ವತಃ ವಾದಿರಾಜದೇವನು ನೀಡಿದನು.[35]

ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ದಾಖಲಾ ಪತ್ರಗಳನ್ನು ಆಚಾರ್ಯರು ಬರೆದುಕೊಡುವುದು 13ನೆಯ ಶತಮಾನದಲ್ಲಿ ಹೆಚ್ಚಳಗೊಂಡಿತು. ಮುನಿಚಂದ್ರದೇವ ಮೊದಲಾದ ಧಾರ್ಮಿಕ ಪ್ರಮುಖರು ಇಂತಹ ವ್ಯವಹಾರಗಳಲ್ಲಿ ಆಳವಾಗಿ ತಮ್ಮನ್ನು ತಾವು ತೊಡಗಿಸಿಕೊಂಡರು.[36] ಅವರಲ್ಲಿ ಕೆಲವರು 'ಸತ್ವಹೀನವಾದ ಐಹಿಕ ಜೀವನದ ಕಾರ್ಯಕಲಾಪಗಳಿಂದ' ದೂರನಿಂತರೂ ಧಾರ್ಮಿಕ ಸಂಸ್ಥೆಗಳ ಪ್ರವರ್ಧನೆಗಾಗಿ ಮಾಡುವ ಸಂಪತ್ಸಂಗ್ರಹಕಾರ್ಯವು ಅಧಾರ್ಮಿಕವೆಂದು ಪರಿಗಣಿಸಲಿಲ್ಲ.[37] ಸಂಘದ ಸಂಪತ್ತು ಸಂವರ್ಧನೆಗೊಂಡುದರಿಂದ, ಹೊಣೆಗಾರಿಕೆಯ ವಿಭಜನೆ ಹಾಗೂ ವೈಯಕ್ತಿಕ ಅಧಿಕಾರ ಕಕ್ಷೆಯ ಹಂಚಿಕೆ ಮೊದಲಾದವುಗಳ ಕಡೆಗೆ ಹೆಚ್ಚು ಗಮನ ಹರಿಸುವುದು ಅನಿವಾರ್ಯವಾಯಿತು. ರಾಜಗುರು ಹಿರಿಯ ನಯಕೀರ್ತಿದೇವನು ಬೆಕ್ಕ ಗ್ರಾಮದಲ್ಲಿ ದೇವಾಲಯವನ್ನು ನಿರ್ಮಿಸಿದಾಗ ಅವನ ಶಿಷ್ಯ ನಯಕೀರ್ತಿದೇವನು ತನ್ನ ಅಧೀನ ಕಕ್ಷೆಯಲ್ಲಿದ್ದ ಜಿನನಾಥಪುರದ ಹಿರಿಯ ಜಕ್ಕವ್ವೆಯ ಕೆರೆಯ ಹಿಂಬದಿಯ ತೋಟದ ತರಿ ಭೂಮಿಗಳನ್ನು ಸ್ವತಃ ದತ್ತಿ ನೀಡಿದನು.[38] ಅಂದರೆ, ಈ ಕಾಲದಲ್ಲಿ ಮುನಿಗಳು ಭೂಮಾಲಿಕತ್ವದ ಅಧಿಕಾರವನ್ನು ವಹಿಸಿಕೊಂಡು ಅದನ್ನು ಚಲಾಯಿಸುತ್ತಿದ್ದರೆಂಬುದರಲ್ಲಿ ಅನುಮಾನವಿಲ್ಲ.

---

34. 569.
35. 12ನೆಯ ಶತಮಾನದ 572; 13ನೆಯ ಶತಮಾನದ ಮತ್ತೊಂದು ಉದಾಹರಣೆ 1250ರ 535.
36. 1278ರ 478; 13ನೆಯ ಶತಮಾನದ ಆದಿಕಾಲದ 455; 1282ರ 456; 13ನೆಯ ಶತಮಾನದ 557, ಇತ್ಯಾದಿ.
37. 1124ರ 569.
38. 1250ರ 535.

ಐತಿಹಾಸಿಕ ಅಂತಃಸಾಕ್ಷಿ: 12ನೆಯ ಶತಮಾನದ ಶ್ರಮಣರ ಇತಿಹಾಸ ಪ್ರಜ್ಞೆ ಮತ್ತು ತೀವ್ರತರದ ಮನಸ್ಥಿತಿಗಳನ್ನು ತಿಳಿಯಲು ನಾವಿಲ್ಲಿ ಸ್ವಲ್ಪ ಪ್ರಯತ್ನಿಸಬಹುದು. ಶಬ್ದಾಡಂಬರ ಮತ್ತು ಉತ್ಪ್ರೇಕ್ಷೆ ಈ ಕಾಲದ ಲಿಖಿತ ದಾಖಲೆಗಳ ಕಾವ್ಯ ಲಕ್ಷಣಗಳಾಗಿವೆ. 12ನೆಯ ಶತಮಾನದ ಮಲಧಾರಿದೇವನ ಗುಡ್ಡನಾದ ಮಲ್ಲಿನಾಥ'ಕವಿ ಇದಕ್ಕೊಂದು ಉದಾಹರಣೆಯಾಗಬಹುದು.[39] 'ಬಿರುದ ಲೇಖಕ ಮದನ ಮಹೇಶ್ವರಂ' (ಬಿರುದಾಂಕಿತ ಲೇಖಕರೆಂಬ ಮನ್ಮಥರಿಗೆ ಮಹೇಶ್ವರನಿದ್ದಂತೆ) ಎಂದು ಹೇಳಿಕೊಂಡ ಈ ಕವಿಯು ತಾನೊಬ್ಬ ಅತಿಶಯ ವೀರನೆಂದೂ ಪ್ರತಿಪಾದಿಸಿಕೊಂಡಿರುವನು. ಈ ಶಾಸನದ ರೂವಾರಿಯೂ 'ಬಿರುದ ರೂವಾರಿ ಮುಖತಿಳಕ'ನೆಂದೇ ಸಾಧಿಸಿಕೊಂಡಿರುವನು.

ಸಂಘದ ಹಿಂದಿನ ಹಾಗೂ ಅಂದಿನ ಶ್ರಮಣರ ಮೌಲೀಕರಣವನ್ನು ಮತ್ತು ಅವರ ಚಲನ-ವಲನಗಳನ್ನು ರೂಪಿಸಿದ ಈ ವೀರಯುಗದ ಮನಃಪಾಕದ ಅಲ್ಪಾಂಶವನ್ನು ಇಲ್ಲಿ ಒದಗಿಸಲಾಗಿದೆ. ಮಾಯೆಯೆಂಬ ಮಲ್ಲನ ಹಮ್ಮನ್ನು ಅಡಗಿಸಿದ್ದುದರಿಂದ, ಭದ್ರಬಾಹುವಿನ ತೋಳುಗಳು ಬಲಿಷ್ಠಗೊಂಡವೆಂದು, ಯಕ್ಷಿಯ ಆಶೀರ್ವಾದದಿಂದ ಪಡೆದ ಶಬ್ದಮಾಂತ್ರಿಕತೆಯಿಂದ ಸಮಂತಭದ್ರನು ಚಂದ್ರಪ್ರಭನನ್ನು ಆಹ್ವಾನಿಸಬಲ್ಲವನಾದನಲ್ಲದೆ ಕಲಿಯುಗವೂ ಸೇರಿದಂತೆ ಎಲ್ಲ ಯುಗಗಳಲ್ಲೂ ಎಲ್ಲ ದಿಕ್ಕುಗಳಲ್ಲೂ ಜಿನಧರ್ಮದ ಜೇಷ್ಠತೆಯನ್ನು ಸಾರಲು ಸಶಕ್ತನಾದನೆಂದು 12ನೆಯ ಶತಮಾನದ ಕವಿಯೊಬ್ಬನ ವರ್ಣನೆಯು ಸಮಂತಭದ್ರನು ಹೇಗೆ "ವಾಗ್ವಾದವನ್ನು" ಆರಂಭಿಸಲು ಆತುರನಾಗಿದ್ದನೆಂಬುದನ್ನು ತೋರ್ಪಡಿಸುವುದು.

"ಮೊದಲು ನಾನು ಪಾಟಲೀಪುತ್ರ ನಗರದೊಳಗೆ, ನಂತರ ಮಾಳವ, ಸಿಂದು ಮತ್ತು ಧಕ್ಕ ನಾಡುಗಳಲ್ಲಿ, ಕಂಚೀಪುರ ಮತ್ತ ವೈದೇಶಗಳಲ್ಲಿ ಜಯಭೇರಿ ಬಾರಿಸಿ, ಈಗ ಕರಹಾಟಕ ತಲುಪಿರುವೆ. ಇದು ಪಂಡಿತರಿಂದ, ಶ್ರೀಮಂತ ಯೋಧರಿಂದ (ಪ್ರತಿವಾದಿಗಳಿಂದ), ತುಂಬಿದ ನಾಡು. ವಾಗ್ವಾದ ಮಾಡುವ ಇಚ್ಛೆಯಿಂದ, ಎಲೈ ರಾಜನೇ, ನಾನು ಶಾರ್ದೂಲ ವಿಕ್ರೀಡೆಯನ್ನು ಪ್ರದರ್ಶಿಸುವೆ. ವಾದಿ ಸಮಂತಭದ್ರನು ನಿನ್ನ ಆಸ್ಥಾನದಲ್ಲಿ ನಿಂತರೆ, ಎಲೈ ರಾಜನೇ, ಸ್ಫುಟವಾಗಿ ಚತುರತೆಯಿಂದ ಮಾತನಾಡುವ ಧೂರ್ಜಟಿ (ಶಿವ)ಯ ನಾಲಿಗೆಯೂ ಗಂಟಲೆಡೆಗೆ ತಿರ್ರನೆ ತಿರುಚಿಕೊಳ್ಳುವುದೆಂದಾಗ ಇನ್ನು (ನನ್ನೊಡನೆ ವಾದಿಸಿ ಗೆಲ್ಲುವ) ಛಲವು ಯಾರಿಗಿರಲು ಸಾಧ್ಯ?"

"ಶಾಸನ ದೇವತೆಗಳಿಂದ ಅನುಗ್ರಹೀತನಾದ ವಕ್ರಗ್ರೀವನು ಎಂತಹ ವಾಕ್ ಶಕ್ತಿಯನ್ನು ಪಡೆದಿದ್ದನೆಂದರೆ ಅವನನ್ನು ವರ್ಣಿಸುವುದು ಸಹಸ್ರ ನಾಲಿಗೆಗಳ ಆದಿಶೇಷನಿಗೂ ಅಸಾಧ್ಯವೆನಿಸಿತ್ತು. ಇಂತಹ ಶಕ್ತಿಯಿಂದ ಅವನು ವಾಗ್ಮಿವೃಂದದ ಮೇಲೆ ಸುಲಭವಾಗಿ ಜಯ

---

39. 77.

ಸಾಧಿಸಿದ್ದನಲ್ಲದೆ "ವಾದಿ ರಕ್ಕಸರ ಶಿರಗಳು ನಾಚಿಕೆಯಿಂದ ತಗ್ಗುವಂತೆ " ಆರು ತಿಂಗಳವರೆಗೆ 'ಅಥ' ಶಬ್ದದ ಬಗ್ಗೆ ವ್ಯಾಖ್ಯೆಮಾಡಿದನು.


ತ್ರಿಲಕ್ಷಣಸಿದ್ಧಾಂತವನ್ನು ಯಶಸ್ವಿಯಾಗಿ ಪಾತ್ರಕೇಸರಿಯು ಖಂಡಿಸುವಾಗ ತನ್ನ ಭಕ್ತಿಯಿಂದ ಯಕ್ಷಿ ಪದ್ಮಾವತಿಯನ್ನು ಒಲಿಸಿಕೊಂಡನು.

"ಶಿವನು ಜಾಹ್ನುವಿನ ಮಗಳನ್ನು (ಗಂಗಾ) ತನ್ನ ಜಟಾಗ್ರದಲ್ಲಿ ಧರಿಸಿದ. ಎಲ್ಯೆ, ಶ್ರೀವರ್ಧ್ವದೇವನೆ, ನೀನು ನಾಲಿಗೆಯ ತುದಿಯ ಮೇಲೆ ಸರಸ್ವತಿಯನ್ನು ಧರಿಸಿರುವೆ. ಎಲ್ಲ ಕಲೆಗಳಲ್ಲಿ ಪಾರಂಗತನಾದ ಮುನಿ ಮಹೇಶ್ವರನನ್ನು ಗಣ ಮತ್ತು ರಾಜರ ಆಶ್ರಯದಾತನಾದ ಮಹೇಶ್ವರನೂ (ಶಿವ) ಸರಿಗಟ್ಟಲಾರ. ಮುನಿ ಮಹೇಶ್ವರನ ಕೀರ್ತಿ ಎಂತಿತ್ತೆಂದರೆ ಅವನು "ಎಪ್ಪತ್ತು ಮಹಾ ವಾದಗಳಲ್ಲದೆ ಇತರ ಅಸಂಖ್ಯ ವಾದಗಳಲ್ಲಿ ವಿಜಯಿಯಾಗಿ ಬ್ರಹ್ಮರಾಕ್ಷಸರಿಗೂ (ಸಹ) ಪೂಜಾರ್ಹನಾದನು. ತನ್ನ ವಾಸಸ್ಥಾನವಾಗಿದ್ದ ಕುಂಭದಲ್ಲಿ ಗುಪ್ತವಾಗಿ ಪ್ರಕಟಗೊಂಡ ತಾರಾಳನ್ನು ಬೌದ್ಧರೊಡಗೂಡಿ ಹಿಮ್ಮೆಟ್ಟಿಸಿದ ಹಿರಿಮೆಯು ಅಕಳಂಕ ದೇವನದಾಗಿತ್ತು. ಅವನಿಂದ ಸೋತ ಪಾಖಂಡಿ (ಪ್ರತಿಸ್ಪರ್ಧಿ ಪಂಥಗಳ) ದೇವತೆಗಳು ಕೈಮುಗಿದು ಶರಣಾದವಲ್ಲದೆ ಅವನ ಪಾದಧೂಳಿಯಲ್ಲಿ ಸುಗತನೂ (ಬುದ್ಧ) ಪಾಪ ಪ್ರಾಯಶ್ಚಿತ್ತಕ್ಕೆಂಬಂತೆ ಮಜ್ಜನಗೈದನು"

ಅಕಳಂಕದೇವನನ್ನು ವರ್ಣಿಸುವ ಮತ್ತೊಂದು ಶಾಸನವೂ ಇಷ್ಟೇ ಕುತೂಹಲಕರವಾಗಿದೆ:

"ಎಲ್ಯೆ ರಾಜಾ ಸಾಹಸತುಂಗನೇ, ಶ್ವೇತಛತ್ರಾಧಿಪತಿಗಳಾದ ಅರಸರು ಅನೇಕರಿರವರು. ಆದರೆ ನಿನ್ನಂಥ ಸಮರವಿಜಯಿಗಳಾದ ಖ್ಯಾತ ಹಾಗೂ ಉದಾರ ರಾಜರು ಮಾತ್ರ ವಿರಳ. ಕಲಿಯುಗದಲ್ಲಿ ಅನೇಕ ಪಂಡಿತರಿದ್ದಾರೆ, ಅಂದರೆ, ನನ್ನಂಥ ಕವಿಗಳು, ಅಗ್ರಗಣ್ಯ ತಾರ್ಕಿಕರು, ಸಂಶೋಧನಾ ನಿಪುಣರು ಯಾರೂ ಇಲ್ಲ".

"ಎಲ್ಯೆ ರಾಜನೇ, ನಿನ್ನ ವೈರಿಗಳ ಸೊಕ್ಕಡಗಿಸುವಲ್ಲಿ ನೀನು ಕುಶಲನೆಂದು ಹೇಗೆ ಖ್ಯಾತನಾಗಿರುವೆಯೋ ಹಾಗೆಯೇ ನಾನೂ ಕೂಡ ಪಂಡಿತರ ಅಹಂಕಾರ ಸಂಹಾರಕನೆಂದು ಪ್ರಸಿದ್ಧನಾಗಿರುವೆ. ಇದು ನಿನಗೆ ಮನವರಿಕೆಯಾಗದ ಪಕ್ಷದಲ್ಲಿ, ಇಗೋ ನಾನಿಲ್ಲಿರುವೆ. ನಿನ್ನ ಆಸ್ಥಾನದಲ್ಲಿ ಸಾತ್ವಿಕ ಧಾಂಡಿಗರು ಇದ್ದಿರಲು ಸಾಕು. ಅವರಲ್ಲಿ ವಾಕ್‌ಸಾಮರ್ಥರು ಮತ್ತು ಸಕಲ ಶಾಸ್ತ್ರಪಾರಂಗತರಾದವರು ಯಾರಾದರೂ ನನ್ನೊಂದಿಗೆ ತರ್ಕಕ್ಕಿಳಿಯಲಿ. ಬೌದ್ಧರ ಎಲ್ಲಾ ಗುಂಪುಗಳನ್ನು ನಾನು ಸದೆಬಡಿದು ಸುಗತನನ್ನು ನನ್ನ ಪಾದದಡಿ ಮೆಟ್ಟಿದ್ದು ಜಂಭ ಅಥವಾ ಛಲದಿಂದಲ್ಲ, ಹಿಮಶೀತಲ ರಾಜನ ಆಸ್ಥಾನದಲ್ಲಿ ನಾಸ್ತಿಕರಾಗಿ ಕೊಳೆಯುತ್ತಿದ್ದ ಬೌದ್ಧಿಕರ ಬಗ್ಗೆ ಅನುಕಂಪಹೊಂದಿ ಮಾತ್ರ".



11. ಗೋಪಣಂದಿಯ ನಿಸಿಧಿ (79)



12. ಸಿದ್ಧರಗುಂಡಿನ ದೃಶ್ಯ (79)




13. ಬಲದೇವನ ನಿಸಿಧಿ (174)



14. ಸಿಂಗಿಮಯ್ಯನ ನಿಸಿಧಿ (174)



15. ಗುಳ್ಳೇಕಾಯಿ ಅಜ್ಜಿಯ ಮಂಟಪದ ಒಬ್ಬ ಶ್ರಾವಕಿಯ ನಿಸಿಧಿ



16. ಚಿಕ್ಕಬೆಟ್ಟದ ಶಾಂತಿನಾಥ ಬಸದಿಯ ಮುಂದಣ ಬಲಿಪೀಠ

ಮುನಿ ವಿಮಲಚಂದ್ರನು ತನ್ನ ಪ್ರತಿಸ್ಪರ್ಧಿಗಳಿಗೆ ಆಹ್ವಾನ ನೀಡಿದ್ದು ಹೀಗೆ :

''ಒಳಹೊರಗೆ ಸದಾ ಸುತ್ತಾಡುತ್ತಿದ್ದ ಅನೇಕ ಅರಸರ ಅಶ್ವತಂಡಗಳು ಮತ್ತು ಶ್ರೀಮದ್ಗಾಂಭೀರ್ಯದ ಗಜಗಳಿಂದ ತುಂಬಿದ ಅರಿಭಯಂಕರನ ವಿಶಾಲ ಅರಮನೆಯ ದ್ವಾರದಲ್ಲಿ ಶೈವರನ್ನು, ಪಾಶುಪತರನ್ನು, ತಥಾಗತನ ಪುತ್ರರನ್ನು ಮತ್ತು ಕಾಪಾಲಿಕರನ್ನು ಸಂಬೋಧಿಸಿ ಉನ್ನತ ವಿಚಾರದ ದಿಗಂಬರ ವಿಮಲಚಂದ್ರನು ಒಂದು ಎಚ್ಚರಿಕೆಯ ಫಲಕವನ್ನು ಹಾಕಿಸಿದನು. ಅದು ಇಂತಿತ್ತು : 'ಎಲವೋ ಸಜ್ಜನರೆ, ಪಾಪ ಭೂತದಿಂದ ನೀವು ಭಯಭೀತರಾಗಿದ್ದರೆ ರಾಜರನೇಕರು ಗೌರವ ತೋರುವ ಇಂದ್ರಣಂದಿಮುನಿಯ ಸೇವೆ ಮಾಡಿರಿ. ಕೋಟ್ಯಾಂತರ ವಾದಸರಣಿಗಳಲ್ಲಿ ನಿಪುಣನಾಗಿರುವ ಪಂಡಿತರಲ್ಲಿಯೆ ವಾಕ್ಚತುರನಾದ ಪರವಾದಿ ಮಲ್ಲದೇವನು ವಾಸ್ತವವಾಗಿ ಒಬ್ಬ ದೈವವೇ.'

ರಾಷ್ಟ್ರಕೂಟ ಕೃಷ್ಣರಾಜನು ಇವನಿಗೆ 'ಪರವಾದಿಮಲ್ಲ'ನೆಂಬ ಹೆಸರು ಹೇಗೆ ಬಂತೆಂದು ಕೇಳಿದಾಗ :

'ಪರ'ಎಂದರೆ ಈಗ ತೆಗೆದುಕೊಂಡಿರುವ ನಿಲುವಿಗಿಂತ ಭಿನ್ನವಾದುದು. ಆ ನಿಲುವನ್ನು ಪೋಷಿಸುವವರು 'ಪರವಾದಿನರು'. ಅವರೊಂದಿಗೆ ಹೋರಾಡುವವನು 'ಪರವಾದಿಮಲ್ಲ'. ಈ ಹೆಸರೇ ನನ್ನದೆಂದು ಸಜ್ಜನರು ಹೇಳುವರು', ಎಂದು ವ್ಯಾಖ್ಯಾನಿಸಿದನು.

ವಿದ್ಯಾಧನಂಜಯ ಹೇಮಸೇನನು ರಾಜನೊಬ್ಬನ ಆಸ್ಥಾನಕ್ಕೆ ಬಂದು ಹೀಗೆ ಪ್ರಕಟಪಡಿಸಿದನು:

''ತರ್ಕ ಹಾಗೂ ವ್ಯಾಕರಣಗಳ ಸತತಾಭ್ಯಾಸದಿಂದ ಮತ್ತು ವಾಕ್‌ಚಾತುರ್ಯದಿಂದ ಯಾರಾದರೂ ರಾಜ ಸಮ್ಮುಖದಲ್ಲಿ ಹಾಗೂ ಪಂಡಿತ ನಿರ್ಣಾಯಕರೆದುರು ನನ್ನೊಂದಿಗೆ ಸ್ಪರ್ಧೆಗಿಳಿದರೆ ಆವನಿಗೆ ನಾನು ಪೂರ್ತಿ ಸೋಲನ್ನುಂಟು ಮಾಡುವೆ. ಅದನ್ನು ಶಬ್ದಗಳಲ್ಲಿ ವರ್ಣಿಸುವುದಸದಳ. ಎಲೈ ರಾಜನೆ, ಹೇಮಸೇನನ ವಿಶ್ವಾಸ ಅಂಥಹದೆಂಬುದನ್ನು ಅರಿ''.

ಹೀಗೆ ಸೋತು ನೆಲಕಚ್ಚುವ ಭಯವನ್ನು ಹುಟ್ಟಿಸಿ, ತನ್ನನ್ನು ಎದುರಿಸಲೆತ್ನಿಸಿದ ತಾರ್ಕಿಕರನ್ನು ಅವನು ಕರುಣಾಜನಕ ಸ್ಥಿತಿಗೆ ತಂದನಂತೆ!

ರಾಜಾ ಜಯಸಿಂಹನಿಂದ ಪೂಜಿತನೂ, ಮತಿಸಾಗರನ ಶಿಷ್ಯನೂ ಆದ ವಾದಿರಾಜನ ಜೇಷ್ಠತೆಯು ಎಲ್ಲ ಪ್ರಜೆಗಳು, ತಾರ್ಕಿಕರು, ಜಯಕಾರಹಾಕಿ ಸ್ವಾಗತಿಸುವಂತೆ ಮಾಡಿತು. ಅದನ್ನು ಹೀಗೆ ಘೋಷಿಸಲಾಗಿದೆ: ''ಸರಸ್ವತಿಯ ಜನ್ಮಸ್ಥಳವಾದ ಪ್ರಖ್ಯಾತ ಚಾಳುಕ್ಯ ಸಾಮ್ರಾಟನ ರಾಜಧಾನಿಯಲ್ಲಿ ವಿಜೇತನಾದ ವಾದಿರಾಜನ ಭೇರಿಯು ಪರಿಭ್ರಮಿಸುವುದು; ದಂಡದಿಂದ ಬಾರಿಸದಿದ್ದರೂ ಅದು ಗರ್ಜಿಸಿ (ತನ್ನ ಯಜಮಾನನನ್ನು ಉದ್ದೇಶಿಸಿ)ಹೀಗೆ

ಸಾರುವುದು : *ಜಹಿ* ಅರ್ಥಾತ್ ಹೊಡಿ (ಪ್ರತಿಸ್ಪರ್ಧಿ ಲೌಕಿಕರನ್ನು), ತರ್ಕದಲ್ಲಿ ಹೆಚ್ಚುತ್ತಿರುವ ಹೆಮ್ಮೆಯೊಂದಿಗೆ; *ಜಹಿನೀ* ಅರ್ಥಾತ್ ವಾಗ್ಮಿತೆಯಲ್ಲಿ ಪರಮ ಅಭಿಮಾನದಿಂದ (ಎದುರಾಳಿ ವಾಗ್ಮಿಯನ್ನು) ತೊಲಗಿಸಿ ಬಿಡು; *ಜಹಾನಿ* ಅರ್ಥಾತ್ ಅವನ ಸಂವಾದದಿಂದ ಅಸಮಾಧಾನಗೊಂಡು (ಎದುರಾಳಿ ವಾಗ್ಮಿಗಳನ್ನು ತೊಲಗಿಸಿ ಬಿಡು); *ಜಹೀನಿ* ಅರ್ಥಾತ್ ಸ್ಪಷ್ಟ, ನಿಷ್ಠ ಮತ್ತು ಹಿತವಾದ ಕಾವ್ಯದಲ್ಲಿ ಅಭಿಮಾನಪಟ್ಟು (ಎದುರಾಳಿ ಕವಿಯನ್ನು) ತೊಲಗಿಸಿಬಿಡು.

''ಅವನ ಸಹಸ್ರ ನಾಲಿಗೆಗಳು ಸುವಿದಿತವಾಗಿರುವ ಪಾತಾಳನಾಗನಲ್ಲಿರುವುವು. ವಜ್ರಾಯುಧನನ್ನು (ಇಂದ್ರ) ಶಿಷ್ಯನನ್ನಾಗಿ ಪಡೆದಿರುವ ಧಿಷಣನು (ಬೃಹಸ್ಪತಿ) ಸ್ವರ್ಗ ಬಿಟ್ಟು ಕದಲುವುದಿಲ್ಲ. ಅವರೀರ್ವರೂ ತಮ್ಮ ಭದ್ರ ನಿವಾಸಗಳಲ್ಲಿರಲಿ...

''ರಾಜನ ಆಸ್ಥಾನದಲ್ಲಿ ಸಾರ್ವಭೌಮನಾದ ವಾದಿರಾಜನಿಗೆ ತಮ್ಮ ಜಂಭ ಕಳೆದುಕೊಂಡು ತಲೆಬಗ್ಗದ ತಾರ್ಕಿಕರು ಇನ್ನಾರಿರುವರು? ಪ್ರಾಚೀನ ಮುನಿಯ (ಬ್ರಹ್ಮ) 'ತ್ರಾಹಿ' 'ತ್ರಾಹಿ' ಎಂಬ ಚೀತ್ಕಾರ ನಿಮ್ಮನ್ನು ರಕ್ಷಿಸಲಿ...

''ಸುದೀರ್ಘವಾದ ಒಡನಾಟದಿಂದ ನನ್ನ ಪಕ್ಕದಲ್ಲಿ ಭದ್ರವಾಗಿ ಕುಳಿತಿದ್ದ ಸರಸ್ವತಿಯನ್ನು ವಾದಿರಾಜನು ಆತಂಕವಿಲ್ಲದೆ ಅಪಹರಿಸಿದನು. ಆಹ್ ನೋಡು! ಇದು ಮುನಿಗಳಿಗೆ ಸಲ್ಲುವ ರೀತಿಯೇ...

''ಮನದ ಕಾರ್ಗತ್ತಲೆಯನ್ನು ಕರಗಿಸುವ ಭೂಮಿಯ ಮೇಲಿನ ಅದ್ಭುತ ಸೂರ್ಯ''ನೆನಿಸಿದ್ದ ಅಜೀತಸೇನನು ಎಂಥ ತಾರ್ಕಿಕನಾಗಿದ್ದನೆಂದರೆ ಅವನ ಎದುರಾಳಿಗಳನ್ನೆಲ್ಲ ಹೀಗೆ ಎಚ್ಚರಿಸುತ್ತಿದ್ದನು: ಸಟೆ ಭಾಷಣದ ಅಲಂಕಾರವನ್ನು ಬಿಟ್ಟುಬಿಡು; ಜಂಭವನ್ನು ತೊರೆ; ದೈನ್ಯದಿಂದ ವಾಧೀಭಕಂಠೀರವನಿಗೆ ತಲೆಬಾಗು. ಇಲ್ಲದಿದ್ದರೆ, ಅವನ ಮಹಾಗರ್ಜನೆ ಕೇಳಿ ನೀವೆಲ್ಲ ಕಂಗೆಡುವಿರಿ. ಆ ಗರ್ಜನೆಯು ತರ್ಕಗಜಗಳನ್ನು ಸೋಲಿಸಿ ಪಾಳು ಬಾವಿಯ ಆಳದೊಳಗೆ ತಳ್ಳಿಬಿಡುವುದು... ದೇದೀಪ್ಯಮಾನನಾದ ವಾದೀಭಸಿಂಹ ಅಜಿತಸೇನನು ಪಂಥನಾಯಕನೆನಿಸಿಹನು, ತಾರ್ಕಿಕರೆಂಬ ಮದಗಜರಾಜರ ಮುಂಗಿವಿಗಳನ್ನು ಸೀಳುವವನು. ಪ್ರಜ್ವಲಿಸುವ ಮುಕುಟಗಳನ್ನು ಧರಿಸಿದ ಸಮಸ್ತ ರಾಜರೂ ನತಮಸ್ತಕರಾಗಿ ಅವನ ಪಾದಪದ್ಮಗಳನ್ನು ಮುತ್ತಿಡುವರು.''

''ಶಾಂತಿನಾಥ ಪಂಡಿತದೇವನು ಉತ್ತಮೋತ್ತಮ ಪಂಡಿತರಿಂದ ಗೌರವಾನ್ವಿತನಾಗಿ ಕವಿಕಾಂತನೆಂದು ಮನ್ನಣೆ ಪಡೆದರೆ, ಅವನ ಸಹೋದ್ಯೋಗಿ(?) ಪದ್ಮನಾಭಪಂಡಿತನು ವಾದಿಕೋಲಾಹಲನೆಂದು ಹೆಸರುವಾಸಿಯಾಗಿದ್ದನು. ತಮ್ಮ ಜಂಭಾತಿಶಯವನ್ನು (ಅಂದರೆ, ಗಂಧಮದ'ಜಲವನ್ನು) ಕಳಚಿ, ಅಸೂಯೆಯ ಉಗ್ರತೆಯನ್ನು ಮರೆತು, ದಿಙ್ಮೂಢಗೊಂಡು,

ಕರುಣಾಜನಕವಾಗಿ ಘೀಳಿಡುತ್ತ, ಆಹಾ! ಶತ್ರು ತಾರ್ಕಿಕ ಗಜಗಳು ಗಂಧಿಗಜ ಪಂಡಿತ ಪದ್ಮಪ್ರಭರ ವಾಸನೆಯಿಂದ ನಡುಗುತ್ತ ಪಲಾಯನಗೊಂಡವು", ಎಂದು ವರ್ಣಿಸಲಾಗಿದೆ.

ಉಗ್ರ ಮನಸ್ಥಿತಿ: ಆ ಯುಗದ ಪ್ರಧಾನ ಲಕ್ಷಣಗಳನ್ನು ಪರಿಚಯಿಸಲೋಸುಗ ಶಾಸನ ಪಾಠದ ಕೆಲವು ಪ್ರಮುಖ ಭಾಗಗಳನ್ನು ಆಯ್ದು ಇಲ್ಲಿ ಕೊಡಲಾಗಿದೆ. ಈ ವಾಕ್ಸರಣಿಯಲ್ಲಿ ಆಕ್ರಮಣಕಾರಿ ಪ್ರವೃತ್ತಿ ಹಾಗೂ ಅಹಂಕಾರ ಪ್ರದರ್ಶನ ಎದ್ದು ಕಾಣುವುವು. ಈ ಕಾಲದ ಪ್ರಧಾನ ಗೀಳು ತರ್ಕಕ್ಕೆ ಹೆಚ್ಚು ಸಂಬಂಧಿಸಿತ್ತೆಂಬುದು ಸುಸ್ಪಷ್ಟ. ಆಧ್ಯಾತ್ಮಿಕ ಜ್ಞಾನ ಮತ್ತು ಸರಳ ಜೀವನ ಅಂದು ಗೌಣವಾಗಿತ್ತೆಂಬುದೂ ಅಷ್ಟೇ ಸ್ಪಷ್ಟ.

ಮಧ್ಯಯುಗದ ಜೈನರು ಮಹಾಪಂಡಿತರಾಗಿದ್ದುದನ್ನು ಕನ್ನಡ ಸಾಹಿತ್ಯ ಚರಿತ್ರೆ ಪುಷ್ಟೀಕರಿಸುವುದು. ಕನ್ನಡ ಸಾಹಿತ್ಯದಲ್ಲಿ ಅವರು 12ನೆಯ ಶತಮಾನದವರೆಗೂ ಯಾರಿಗೂ ಬಿಟ್ಟುಕೊಡದ ಏಕಸ್ವಾಮ್ಯವನ್ನು ಕಾಯ್ದುಕೊಂಡಿದ್ದರೆಂಬುದರಲ್ಲಿ ಎರಡು ಅಭಿಪ್ರಾಯಗಳಿಲ್ಲ. ಸಾಹಿತ್ಯಕ್ಷೇತ್ರಲ್ಲಿ ಅವರು ಗಳಿಸಿಕೊಂಡಿದ್ದ ಪ್ರೌಢಿಮೆಗೆ ಇದು ಸಾಕ್ಷಿ.

ಇಲ್ಲಿ ವಿಶ್ಲೇಷಣೆಗೊಳಪಟ್ಟ ಶಾಸನಗಳು ಹಲವಾರು ಸಂತಕವಿಗಳನ್ನು ಮತ್ತವರ ಕೃತಿಗಳನ್ನು ಪರಿಚಯಿಸುತ್ತವೆ. ವಜ್ರಣಂದಿ ಮುನಿಯು *ನವಸ್ತೋತ್ರದ* ಕರ್ತೃ; ಅದು 'ಸಕಲ ಅರ್ಹತರ ವೈವಿಧ್ಯಮಯ ಬೋಧನೆಗಳನ್ನು ಮೈಗೂಡಿಸಿಕೊಂಡಿದ್ದ ಒಂದು ಸುಂದರವಾದ ಕೃತಿ'ಯೆನಿಸಿತ್ತು. ಸುಮತಿದೇವನು *ಸುಮತೀಶತಕ* ರಚಿಸಿದನು. ಅದು 'ಕೋಟಿ ಕೋಟಿ ವಿವೇಕ ವಿಚಾರಗಳನ್ನೊಳಗೊಂಡ ಕೃತಿ'ಯಾಗಿತ್ತು. ಚಿಂತಾಮಣಿ ಮುನಿಯು ಪ್ರತಿಯೊಬ್ಬ ಗೃಹಸ್ಥನ ಮಾರ್ಗದರ್ಶನಕ್ಕೆಂದು *ಚಿಂತಾಮಣಿ* ರಚಿಸಿ, ಮಧುರ ಸುಖವನ್ನು ಅನುಭವಿಸುವವರಿಗೆ ಸದ್ಗುಣ, ಸಂಪತ್ತು, ಸುಖ ಹಾಗೂ ಮೋಕ್ಷದ ಮಾರ್ಗವನ್ನು ಬೋಧಿಸಿದನು. ಜ್ಞಾನದೇವತೆ ಸರಸ್ವತಿಯನ್ನು ನಾಲಿಗೆಯಲ್ಲಿ ಧರಿಸಿದ ಮತ್ತು ದಂಡಿಯಿಂದ ಪ್ರಶಂಸಿಸಲ್ಪಟ್ಟ ಶ್ರೀವರ್ಧದೇವನು *ಚೂಳಾಮಣಿ* ಎಂಬ ಅನರ್ಘ್ಯ ಗ್ರಂಥವನ್ನು ರಚಿಸಿದನು. 'ಈ ಯುಗದ ಶಿಷ್ಯರ ಸೀಮಿತ ಬುದ್ಧಿಮತ್ತೆಗೆ ಅನುಕಂಪ ತೋರಿ, ಗಣಾಧೀಶ್ವರರ ಅತಿ ವಿಸ್ತಾರವುಳ್ಳ ಕೃತಿಗಳ ಸಾರವನ್ನು ಸೆರೆಹಿಡಿದು, ಚಂದ್ರಕೀರ್ತಿಯು *ಶ್ರುತಬಿಂದು* ರಚಿಸಿದನು. 'ಕಲ್ಯಾಣಾಕಾಂಕ್ಷಿ'ಗಳ ಪ್ರಯೋಜನಕ್ಕಾಗಿ ದಯಪಾಲ ಮುನಿಯು *ರೂಪಸಿದ್ಧಿ* ಎಂಬ ಅಪೂರ್ವ ಗ್ರಂಥವನ್ನು ರಚಿಸಿದನು.

ಈ ಕವಿಗಳಲ್ಲಿ ಕೆಲವರು ವಿಶಿಷ್ಟ ಬಿರುದುಗಳನ್ನು ಪಡೆದಿದ್ದರು. ಶ್ರೀಪಾಲದೇವ 'ತ್ರೈವಿದ್ಯ'ನೆನಿಸಿದ್ದರೆ (ಮೂರು ಜ್ಞಾನಗಳಲ್ಲಿ ಪಾರಂಗತ), ಮತಿಸಾಗರನು 'ಬುದ್ಧಿಯ ಸಾಗರ'ನಾಗಿದ್ದನು. ಹೇಮಸೇನನು 'ವಿದ್ಯಾಧನಂಜಯ'ನೆಂದು, ಶಾಂತಿದೇವನು 'ಶಬ್ದಚತುರ್ಮುಖ'ನೆಂದು, ಶಾಂತಿನಾಥನು 'ಕವಿಕಾಂತ'ನೆಂದು, ಮುಳ್ಳೂರಿನ ಗುಣಸೇನನು 'ಪಂಡಿತಪ್ರಭು'ವೆಂದು ಖ್ಯಾತಿ ಗಳಿಸಿಕೊಂಡಿದ್ದರು. 'ಪಂಡಿತ ಪದವಿ ಅವನಿಗೊಬ್ಬನಿಗೇ

ಸೂಕ್ತವಾಗಿತ್ತು, ಇನ್ನಾರಿಗೂ ಅಲ್ಲ' ಎಂಬ ಹೊಗಳಿಕೆಗೆ ದಯಪಾಲನು ಪಾತ್ರನಾಗಿದ್ದನು.

12ನೆಯ ಶತಮಾನದ ಆದಿಕಾಲದ ಒಂದು ಶಾಸನವು ಅಂದಿನ ಶ್ರಮಣರ ಹಂಬಲಗಳನ್ನು ಪ್ರತಿಬಿಂಬಿಸುವುದು.[40] ಅವುಗಳಲ್ಲಿ ಒಂದು, ತಮ್ಮ ಧರ್ಮಸಿದ್ಧಾಂತಗಳನ್ನು ಶ್ರಾವಕ ಅನುಯಾಯಿಗಳಿಗೆ ತಲುಪಿಸುವುದಾಗಿದ್ದರೆ, ಮತ್ತೊಂದು, ಪ್ರತಿವಾದಿಗಳನ್ನು ಯಶಸ್ವಿಯಾಗಿ ಎದುರಿಸುವುದಾಗಿತ್ತು. ಕೆಲವು ಧರ್ಮಗುರುಗಳು ತಮ್ಮ ಶಕ್ತಿಯನ್ನು ಶಾಸನ ದೇವತೆಗಳಿಂದ ಪಡೆದುಕೊಂಡಿರುವುದಾಗಿ ಹೇಳಿಕೊಂಡಿರುವರು. ಇದು ಜೈನರಲ್ಲಿ ಯಕ್ಷಿಪೂಜೆಯು ಹೆಚ್ಚು ಜನಪ್ರಿಯತೆ ಗಳಿಸಿಕೊಂಡಿದ್ದನ್ನು ಸೂಚಿಸುವುದು.[41] ವರ ನೀಡುವ ದೇವಿಯರ ಅನುಗ್ರಹ ಪಡೆದು, ಅಪಾರ ಜ್ಞಾನವನ್ನಾಧರಿಸಿದ ತರ್ಕದಿಂದ ಈ ಪಂಡಿತ ಮುನಿಗಳು ಪ್ರತಿಸ್ಪರ್ಧಿಗಳನ್ನು ಹಿಮ್ಮೆಟ್ಟಿಸಿದರಂತೆ! ಆ ಕಾರಣ, ಅವರು 'ಅರಿಭಯಂಕರ', 'ಪರವಾದಿಮಲ್ಲ', 'ವಾದಿರಾಜ', 'ವಾದೀಭಸಿಂಹ', 'ವಾದಿ ಕಂಠೀರವ', 'ವಾದಿಕೋಲಾಹಲ', ಮುಂತಾದ ಬಿರುದುಗಳನ್ನು ಧರಿಸಲು ಅರ್ಹರೆನಿಸಿದ್ದರು.

ಈ ಕಾಲದ ಬಹುತೇಕ ಶಾಸನಗಳಲ್ಲಿ ಇದೇ ಧಾಟಿಯ ವಾಕ್ಸರಣಿ ಮತ್ತು ನುಡಿಗಟ್ಟನ್ನು ಕಾಣುವೆವು.[42] ಕಾಲವು ಮುಂದೆ ಸರಿದಂತೆ, ಈ ಆಕ್ರಮಣಕಾರಿ ಪ್ರವೃತ್ತಿಯು ತೀವ್ರಗೊಂಡಿತೆಂದೆನಿಸವುದು. ಈ ಶತಮಾನದ ಇನ್ನೋರ್ವ ಕವಿಯಾದ ಮುನಿ ಗೋಪಣಂದಿಯ ಸಿದ್ಧಿಗಳನ್ನು ಹೀಗೆ ವರ್ಣಿಸಲಾಗಿದೆ.[43] "ಆಹ್! ಗಂಧಗಜ ಗೋಪಣಂದಿಯು.... (ಎದುರಾಳಿಗಳನ್ನು) ಷಡ್ದರ್ಶನಗಳ ದಿಕ್ಕಿನೆಡೆ ಅಟ್ಟಿಸಿಕೊಂಡು ಹೋದನು. ಇದರಿಂದ ಜೈಮಿನಿಯು ಸ್ತಂಭೀಭೂತನಾದ, ವೈಶೇಷಿಕನು ಎಡವಿಬಿದ್ದ, ಸುಗತನು ತಡೆದುನಿಂತು ಮುದ್ರೆಯೊತ್ತಿದ, ಅಕ್ಷಪಾದನು ಕೂಡಲೇ ಬಳೆತೊಟ್ಟ, ಲೋಕಾಯತನು ಗರ್ವಭಂಗಕ್ಕೀಡಾದ, ಸಾಂಖ್ಯನು ಬೇರೆಡೆ ಆಶ್ರಯ ಹುಡುಕುತ್ತಾ ಪಲಾಯನ ಮಾಡಿದ." ವಾಕ್ಪಟು ಗೋಪಣಂದಿಯ ಭೇರಿಯ ಸ್ಪಷ್ಟ, ತೀಕ್ಷ್ಣ ಘೋಷಣೆಯು ನಾನಾ ದಿಕ್ಕುಗಳಿಗೆ ಹರಡಿ, ಹೀಗೆ ಸಾರಿತು: 'ನಿಜಕ್ಕೂ ಅವನು ಮಾತನಾಡಲೆತ್ನಿಸುವ ವಾದಿರಿಪುಗಳ ಬಾಯಿಯನ್ನು ಮುಚ್ಚಿಸುವವನು; ಪ್ರಖ್ಯಾತ ವಾದಿಗಳ ವಾಕ್‌ಶಕ್ತಿಗೆ ಅವನು ಯಮನ ವಿಜಯದಂಡವಾಗಿರುವನು. ತಪ್ಪುಭಾಷೆ ಬಳಸುವ ಅನಿಷ್ಟ, ಅಹಂಕಾರಿ, ರಾಕ್ಷಸರಿಗೆ ಅವನು ಶಿವನಾಗಿರುವನು; ವಕ್ರ ವಿಷಯ ಕುರಿತು ತರ್ಕ ಮಾಡುವ ಜಂಭದ ವಾದಿಗಳಿಗೆ ಅವನು ಭಯಂಕರನೆನಿಸಿರುವನು. ಈ ವಾದಿಕುಳವಜ್ರಾಯುಧನು ಇತರರನ್ನು ಹೀಗೆ ಎಚ್ಚರಿಸಿ ಹೆದರಿಸಿದನು: 'ಎಲೈ ಸಾಂಖ್ಯನೇ,

40. ವಿವರಗಳಿಗಾಗಿ ನೋಡಿ, ಅದೇ ಪ್ರವೇಶಿಕೆ, ಪು, lxxxii ; ಶಿರೂರ, ಉಪರೋಕ್ತ, ಪು. 65ರಿಂದ.
41. 11ನೆಯ ಶತಮಾನದ ಕೊನೆ ಮತ್ತು 12ನೆಯ ಶತಮಾನದ ಆದಿಕಾಲದಲ್ಲಿ ಮೂರ್ತಿಶಿಲ್ಪೀಯ ವಿಶಿಷ್ಟ ಲಕ್ಷಣಗಳನ್ನು ಯಕ್ಷಿ ವಿಗ್ರಹಗಳು ಶ್ರವಣಬೆಳ್ಗೊಳದಲ್ಲಿ ಪಡೆದುಕೊಳ್ಳಲಾರಂಭಿಸುವುವು.
42. 156, 173, ಇತ್ಯಾದಿ.
43. ಗೋಪಣಂದಿ ಕಾಲದ 12ನೆಯ ಶತಮಾನದ 79 .

ಎದುರಾಡಬೇಡ, ಮೌನ ಧರಿಸು. ಎಲೈ ಭೌತಿಕನೇ, ಜಂಭದಿಂದ ಉಬ್ಬಬೇಡ. ಎಲೈ ನಿಪುಣ ಬೌದ್ಧನೇ, ತಲೆ ಎತ್ತಬೇಡ, ತೊಲಗು. ಎಲೈ ವೈಷ್ಣವನೇ, ಅಡಗಿಕೊ. ಮಧುರ ನಾಲಿಗೆಯ ಚಾರ್ವಾಕನೇ, ನಿನ್ನ ವಾಕ್ ಶಕ್ತಿಯ ಅಹಂಕಾರವನ್ನು ತ್ಯಜಿಸು. ಮದಗಜ ಮುನಿವರ್ಯ ಗೋಪಣಂದಿಯು ನಿಮ್ಮೆಲ್ಲರ ಅಹಂಕಾರವನ್ನು ಸಹಿಸುವನೆ?''

ಸಮಕಾಲೀನರು ಮತ್ತು ಅನಂತರದ ಜೈನರು ಇಂಥ ಹೊಗಳಿಕೆಗಳನ್ನು (ಅವು ವಾಸ್ತವವಿರಲಿ ಇಲ್ಲವೆ ಕಾಲ್ಪನಿಕವಾಗಿರಲಿ) ಅಭಿಮಾನದಿಂದ ನೆನಪಿಸಿಕೊಂಡಿರುವರು. *ವಿಜಯವಿಲಾಸ* ಕರ್ತೃವಾದ ಮುನಿ ಶ್ರೀಪಾಲತ್ರೈವಿದ್ಯದೇವನು ನತಮಸ್ತಕ ರಾಜಸ್ತೋಮವನ್ನು 1124ರಲ್ಲಿ ತನ್ನ ಆಜ್ಞಾವಶಮಾಡಿಕೊಂಡಿದ್ದನಲ್ಲದೆ, ವಾದೀಭಸಿಂಹ, ವಾದಿಕೋಳಾಹಳ ಮತ್ತು ತಾರ್ಕಿಕಚಕ್ರವರ್ತಿ ಎಂಬ ವಂಶಪರಂಪರಾಗತವಾಗಿ ಬಂದಿದ್ದ ಬಿರುದುಗಳನ್ನೂ ಧರಿಸಿದ್ದನೆಂದು ತಿಳಿಸಲಾಗಿದೆ.[44] ವಾದಿರಾಜ ಮುನಿಯು ಕುಂಬೇನಹಳ್ಳಿಯಲ್ಲಿ ಸ್ವತಃ ಕಟ್ಟಿಸಿದ ದೇವಾಲಯಕ್ಕೆ 'ಪರವಾದಿಮಲ್ಲ ಜಿನಾಲಯ' ಎಂಬ ಹೆಸರಿಟ್ಟಿದ್ದನ್ನು ಈ ಎಲ್ಲ ಧಾರ್ಮಿಕ ಮತ್ತು ಭೌತಿಕ ಮಿಡಿತಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು.[45]

ಶಕ್ತಿಶಾಲಿ ಶ್ರಾವಕರ ಪಾತ್ರ : ಶಕ್ತಿಶಾಲಿ ಹಾಗು ಶ್ರೀಮಂತ ಶ್ರಾವಕರ ಬೆಂಬಲವಿಲ್ಲದೆ 12-13ನೆಯ ಶತಮಾನಗಳ ಆಚಾರ್ಯರು-ಮುನಿಗಳು ಇಷ್ಟೊಂದು ಆತ್ಮವಿಶ್ವಾಸದಿಂದ ಮೆರೆಯುತ್ತಿರಲಿಲ್ಲವೆಂದು ತೋರುತ್ತದೆ. ಅಂದರೆ ಧರ್ಮಗುರುಗಳ ಪಾದಗಳಲ್ಲಿ ನತಮಸ್ತಕರಾಗಿದ್ದರೆಂದು ವರ್ಣಿಸಲಾದ ಆಳರಸರು ಇವರ ಬೆಂಬಲಕ್ಕೆ ನಿಂತಿದ್ದರೆಂದೇನು

---

44. 12ನೆಯ ಶತಮಾನದ 569. ಭೌತಿಕ ಬಡತನ ಮತ್ತು ಆಧ್ಯಾತ್ಮಿಕ ಶ್ರೀಮಂತಿಕೆಯಲ್ಲಿ ಹೆಮ್ಮೆಪಡುವ, ವಿನಯಶೀಲದ ಪರಾಕಾಷ್ಠತೆಯನ್ನು ಮುಟ್ಟಿದ, ಮೊದಲಿನ ಶ್ರಮಣರನ್ನು ಈ ವಂಶಾವಳಿಯಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. ಈ ಶ್ರಮಣರು ತಮ್ಮನ್ನು ಸೌಂದರ್ಯಾರ್ಯ (ಸುಂದರರಲ್ಲಿ ಅಗ್ರಗಣ್ಯ, ಅದೇ, 123); ಶಾಂತಿಣಂದಿ (ಶಾಂತಿಯ ವಾಸಸ್ಥಾನ, 152); ಮೌನಾಚಾರ್ಯ ಮತ್ತು ಮೋನಿಗುರವ (ಮೌನದಲ್ಲಿ ನಿರತನಾದವನು 121 ಮತ್ತು 10); ಉಪವಾಸಪರ (ಉಪವಾಸಪ್ರಿಯ, 85); ಶೌಚಾರ್ಯ (ಶುದ್ಧತೆಯ ಮೂರ್ತಿ, 89); ಚರಿತ್ರಶ್ರೀ (ಉದಾತ್ತ ಚಾರಿತ್ರಯುಳ್ಳವ, 14); ಸರ್ವಜ್ಞಭಟ್ಟಾರಕ (ಜ್ಞಾನ ಪ್ರಭು, 15); ಗುಣಕೀರ್ತಿ (ಪ್ರಶಂಸಾರ್ಹ ಶೀಲವುಳ್ಳವ, 120); ಧರ್ಮಸೇನ (ಧರ್ಮದ ಸೇನಾನಿ, 27); ವಿನಯದೇವ (ವಿನಯದ ದೇವರು, 130) ಎಂದು ಗುರುತಿಸಿಕೊಂಡಿದ್ದರು. 7-8ನೆಯ ಶತಮಾನದ ಶ್ರಮಣರಂತೆ ಅವರ ಸಮಕಾಲೀನ ಕಂತಿಯರೂ ತಮ್ಮನ್ನು ರಜನೀಮತೀ (112), ಅನಂತಮತೀ (113), ಗುಣಮತೀ (129), ಸಸಿಮತೀ (86), ಇತ್ಯಾದಿಯಾಗಿ ಗುರುತಿಸಿಕೊಂಡಿದ್ದರು.
45. 12ನೆಯ ಶತಮಾನದ 572. ರಾಣಿ ಶಾಂತಲೆಯು ಬೆಳ್ಗೊಳದಲ್ಲಿ ಕಟ್ಟಿಸಿದ ಸವತಿಗಂಧವಾರಣ (ಸವತಿಯರಿಗೆ ಗಂಧಗಜ) ಬಸದಿ ಮತ್ತು ಅದೇ ಶತಮಾನದಲ್ಲಿ ಬೆಳ್ಗೊಳದ ಸಮೀಪದ ಕಂಬದಹಳ್ಳಿಯಲ್ಲಿ ಗಂಗರಾಜನು ಕಟ್ಟಿಸಿದ ದ್ರೋಹಘರಟ್ಟ (ದ್ರೋಹಿಗಳಿಗೆ ಬೀಸುಗಲ್ಲು) ಜಿನಾಲಯದೊಡನೆ ಹೋಲಿಸಿ ನೋಡಿ - ಅದೇ, 163, 176, 538, ಇತ್ಯಾದಿ.

ಇದರ ಅರ್ಥವಲ್ಲ. ವಾಸ್ತವವಾಗಿ, ಧರ್ಮಕ್ಕೆ ಅವರ ಬೆಂಬಲ ಔದಾಸೀನ್ಯ ಹಾಗೂ ಅನಿರ್ದಿಷ್ಟತೆಯಿಂದ ಕೂಡಿತ್ತೆಂದೇ ತಿಳಿಯಬೇಕು. ಬೆಳ್ಗೊಳದ ಶಾಸನಗಳು ಇದನ್ನು ಸ್ಪಷ್ಟಪಡಿಸುತ್ತವೆ. ಜೈನ ಧರ್ಮಕ್ಕೆ ಗಂಗರು ಕೊಟ್ಟರೆಂಬ ಆಶ್ರಯದ ಬಗ್ಗೆ ಎಷ್ಟೆಲ್ಲ ಹೇಳಲಾಗಿದ್ದರೂ, ಈ ರಾಜವಂಶದ ಯಾವ ಅರಸನೂ ಶ್ರವಣಬೆಳ್ಗೊಳಕ್ಕೆ ಬಂದು, ದೇವಾಲಯವನ್ನು ಕಟ್ಟಿಸಲಿಲ್ಲ, ದತ್ತಿ ನೀಡಲಿಲ್ಲ, ಎಂಬುದನ್ನು ಗಮನಿಸುವುದವಶ್ಯ.[46] ಮಂತ್ರಿ ಚಾವುಂಡರಾಯನನ್ನು ಬಿಟ್ಟರೆ, ಗಂಗರು ಶ್ರವಣಬೆಳ್ಗೊಳದ ಇತಿಹಾಸಕ್ಕೆ ಸ್ಥೂಲವಾಗಿ ಅಪ್ರಸ್ತುತರಾಗುವರು. ಹೊಯ್ಸಳರು ಈ ಕೇಂದ್ರಕ್ಕೆ ಕೆಲಮಟ್ಟಿಗೆ ಪ್ರಸ್ತುತರಾಗಿರುವುದೇನೋ ನಿಜ; ಆದರೆ, ಅವರು ತಮ್ಮನ್ನು ಶ್ರವಣಬೆಳ್ಗೊಳದೊಡನೆ ಜೋಡಿಸಿಕೊಂಡಿದ್ದು ಹೆಚ್ಚಾಗಿ ಅವರ ಅರಸಿಯರ, ಮಂತ್ರಿಗಳ, ದಂಡನಾಯಕರ, ಭಂಡಾರಿಗಳ, ಪಟ್ಟಣಸ್ವಾಮಿಗಳ ಮತ್ತು ರಾಜವರ್ತಕರ ಮೂಲಕ ಮಾತ್ರ, ತಮ್ಮ ಆತ್ಮ ಮಿಡಿತದ ಮೂಲಕವಲ್ಲ.

ಆಳರಸರು : 11-12ನೆಯ ಶತಮಾನದ ಕಾಲಾವಧಿಯಲ್ಲಿ ಉಚ್ಛ್ರಾಯದ ಹಂತಕ್ಕೇರುತ್ತಿದ್ದ ಹೊಯ್ಸಳರು ಎಲ್ಲ ಧರ್ಮಗಳನ್ನು ಪೋಷಿಸಬೇಕಾದುದು ರಾಜನೀತಿಯ ಅವಶ್ಯಕತೆ ಎಂದು ಮನಗಂಡಿದ್ದರು. ಇಂತಹ ನೀತಿಯ ಮೂಲಕ ಪ್ರಜೆಗಳನ್ನೆಲ್ಲ ತಮ್ಮೆಡೆ ಓಲೈಸಿಕೊಳ್ಳಲು ಅವರು ಆತುರರಾಗಿದ್ದರು. ಬಲಿಷ್ಠ ಯೋಧರ ಸೇವೆಯ ಅಗತ್ಯತೆ ಅವರಿಗಿತ್ತು. ಅಂಥವರಲ್ಲಿ ಕೆಲವರು ಜೈನರಾಗಿದ್ದರು. ಆದರೆ ಯಾವ ಹೊಯ್ಸಳ ಅರಸನೂ ಜಿನಾಲಯವನ್ನು ಬೆಳ್ಗೊಳದಲ್ಲಿ ಸ್ವತಃ ನಿರ್ಮಿಸಲಿಲ್ಲ; ಸಮಾಧಿ ಮರಣವನ್ನು ಅಪ್ಪಲಿಲ್ಲ; ತಮ್ಮ ರಾಜಮನೆತನದ ಸದಸ್ಯರಿಗಾಗಲಿ ಈ ಕೇಂದ್ರದ ಧರ್ಮಗುರುಗಳಿಗಾಗಲಿ ನಿಸಿಧಿಗಳನ್ನು ಸ್ವತಃ ನಿರ್ಮಿಸಲಿಲ್ಲ, ಎಂಬುದನ್ನು ನಾವು ಗಮನಿಸಬೇಕು.

ಆರನೆಯ ಚಾಳುಕ್ಯ ವಿಕ್ರಮಾದಿತ್ಯನಡಿಯಲ್ಲಿ ಗಂಗ ಮಂಡಲಾಧಿಪತಿಯಾಗಿದ್ದ ಎಱೆಯಂಗನು ಗೋಪಣಂದಿ ಮುನಿಗೆ ರಾಚೇನಹಳ್ಳಿ ಮತ್ತು ಬೆಳ್ಗೊಳ-12ನ್ನು ದತ್ತಿ ನೀಡಿದಾಗ ಈ ಕೇಂದ್ರದ ವಿಪುಲ ವ್ಯವಹಾರಗಳಲ್ಲಿ ಹೊಯ್ಸಳ ಅರಸರು ತಮ್ಮನ್ನು ತಾವು ಮೊದಲ ಬಾರಿಗೆ ತೊಡಗಿಸಿಕೊಂಡರೆಂದು ತೋರುವುದು.[47] ಎಱೆಯಂಗನ ರಾಣಿಯು ಚಿಕ್ಕ ಬೆಟ್ಟದಲ್ಲಿ ದೇವಾಲಯ ನಿರ್ಮಾಣ ಮಾಡಿದ ದಾಖಲೆಯೊಂದು ಇತ್ತೀಚೆಗೆ ದೊರಕಿದ್ದು ಅದು ಈ ಕ್ಷೇತ್ರದೊಂದಿಗಿದ್ದ ಅವಳ ಸಂಬಂಧವನ್ನು ಸ್ಪಷ್ಟಪಡಿಸುವುದು. ಅಧಿಕಾರಿಯೊಬ್ಬ ಮಾಡಿದ ಅತ್ಯಂತ ಪ್ರಾಚೀನ ದತ್ತಿಯಲ್ಲದೆ ಬೆಳ್ಗೊಳದ ಆಚಾರ್ಯರು ದೇವಾಲಯಗಳ ಮತ್ತು ಶ್ರಮಣರ ನಿರ್ವಹಣಾ ವೆಚ್ಚಕ್ಕೆಂದು ಪಡೆದ ಪ್ರಥಮ ದತ್ತಿಯೂ ಇದಾಗಿದೆ.

---

46. ನಿಸಿಧಿಗೆಗಳು ಮಾತ್ರ ಇದಕ್ಕೆ ಅಪವಾದ.

47. 11ನೆಯ ಶತಮಾನದ ಕೊನೆಯ ಶಾಸನ 568. ಇತ್ತೀಚೆಗೆ ದೊರೆತ ಶಾಸನದಲ್ಲಿ ಎಱೆಯಂಗನ ರಾಣಿಯು ಕಟ್ಟಿಸಿದ ಒಂದು ದೇವಾಲಯದ ಪ್ರಸ್ತಾಪ ದೊರಕಿರುವುದು. ಈ ಶಾಸನವಿನ್ನೂ ಪ್ರಕಟವಾಗಬೇಕಾಗಿದೆ.

ಅರಸ ವಿಷ್ಣುವರ್ಧನನೂ ಕಾವೇರಿ ದಡದಲ್ಲಿರುವ ಶಲ್ಯ ಗ್ರಾಮವನ್ನು ಶ್ರೀಪಾಲತ್ರೈವಿದ್ಯದೇವನಿಗೆ ಕೊಟ್ಟನೆಂದು ಹೇಳಲಾಗಿದೆ. ಈ ಮುನಿಯು ಒಂದು ಬಸದಿಯನ್ನಲ್ಲಿ ಕಟ್ಟಿಸಿ, ಅದಕ್ಕೆ 'ಹೊಯ್ಸಳ ಜಿನಾಲಯ'ವೆಂದು ಹೆಸರಿಟ್ಟಿದ್ದನು. ಈ ದೇವಾಲಯದ ಹೆಸರನ್ನು ಬಹಳ ದೂರದೃಷ್ಟಿಯಿಂದ ಅವನು ಆಯ್ಕೆಮಾಡಿದ್ದನೆನ್ನುವುದರಲ್ಲಿ ಅನುಮಾನವಿಲ್ಲ. ಇದರಿಂದ ಆಳುವ ವಂಶದವರ ಭಾವನೆಗಳನ್ನು ಬೆಚ್ಚಗಿರಿಸಲು ಸಾಧ್ಯವಾದುದಲ್ಲದೆ ಅರಸನಿಂದ ಉದಾರ ದತ್ತಿಯನ್ನು ಗಳಿಸಿಕೊಳ್ಳಲೂ ಸಾಧ್ಯವಾಯಿತು.[48] ವಿಷ್ಣುವರ್ಧನನ ಉತ್ತರಾಧಿಕಾರಿಯಾದ ಒಂದನೆಯ ನರಸಿಂಹನೂ ಇಂಥದೇ ಪ್ರೇರಣೆಗೊಳಗಾಗಿ, ಬೆಳ್ಗೊಳವನ್ನು ಸಂದರ್ಶಿಸಿ, ತನ್ನ ದಂಡನಾಯಕ ಹುಳ್ಳರಾಜನು ಕಟ್ಟಿಸಿದ ಭಂಡಾರ ಬಸದಿಯ ವಾಸ್ತು ವೈಖರಿಯನ್ನು ಕಂಡು, ಅದು ಬೆಳ್ಗೊಳಕ್ಕೆ ಭವ್ಯಚೂಡಾಮಣಿಯಾಗಿದೆ ಎಂದ ಉದ್ಗರಿಸಿದನು. ಇದರಿಂದ ಉಬ್ಬಿಹೋದ ಈ ದಂಡನಾಯಕನು ಹೊಯ್ಸಳ ಆಸ್ಥಾನದ 'ಸಮ್ಯಕ್ತ್ವಚೂಡಾಮಣಿ' ಎಂಬ ಬಿರುದು ಧರಿಸಿದನು. ಒಬ್ಬರನ್ನೊಬ್ಬರು ಓಲೈಸುವ ಈ ಸೂಕ್ಷ್ಮ ವ್ಯವಹಾರದಿಂದಾಗಿ, ಅರಸನ ಉದ್ಗಾರವನ್ನೇ ಬಸದಿಯ ಎರಡನೆಯ ಹೆಸರೆಂದು ಅಂಗೀಕರಿಸಲಾಯಿತು.[49] ಹುಳ್ಳರಾಜನು ಸವಣೇರು ಗ್ರಾಮವನ್ನು ರಾಜನಿಂದ ಪಡೆದುಕೊಂಡನಲ್ಲದೆ ಅದನ್ನು ಈ ದೇವಾಲಯದ ಸೇವೆಗೆಂದು ಭಾನುಕೀರ್ತಿಗೆ ವಹಿಸಿಕೊಟ್ಟನು. ಅದರ ನಿರ್ವಹಣೆಗಾಗಿ ಕೆಲವು ಸುಂಕಗಳನ್ನು ಬಿಡಿಸಿಕೊಡುವಂತೆ ಅರಸನಲ್ಲಿ ಮನವಿಯನ್ನೂ ಮಾಡಿಕೊಂಡನು.[50]

ತನ್ನ ಸಾಮಂತನು ಸಲ್ಲಿಸಿದ ಲೌಕಿಕ ಸೇವೆಯನ್ನು ಮೆಚ್ಚಿ ಅರಸನು ದತ್ತಿ ನೀಡಿದನೋ ಅಥವಾ ಜಿನಧರ್ಮಕ್ಕೆ ನಿಷ್ಠೆ ತೋರಿ ಅದನ್ನಿತ್ತನೋ, ಎಂಬುದು ಚರ್ಚಾಸ್ಪದವಾದ ವಿಷಯ. ಹೊಯ್ಸಳರು ಯಾವುದೇ ಒಂದು ನಿರ್ದಿಷ್ಟ ಮತವನ್ನು ಪೋಷಿಸುವುದಕ್ಕಿಂತ ಹೆಚ್ಚಾಗಿ ತಮಗೆ ಪ್ರೀತಿಪಾತ್ರವಾದ ಅಧಿಕಾರೀ ವರ್ಗವನ್ನು ಸಂತೋಷಗೊಳಿಸಲು ದತ್ತಿಗಳನ್ನು ನೀಡುತ್ತಿದ್ದರೆಂದು ಕಂಡುಬಂದಿದೆ. ಅಂದರೆ ಹೊಯ್ಸಳರು ಉದಾರ ಕಾರ್ಯಗಳಲ್ಲಿ ಎಳ್ಳಷ್ಟೂ ಆಸಕ್ತರಾಗಿರಲಿಲ್ಲ ಎಂದು ಇದರ ಅರ್ಥವಲ್ಲ-ಅವರ ಉದಾರತ್ವದಲ್ಲಿ ರಾಜಕೀಯ ಲಾಭವೂ

48. 569. ಈ ಕಾಲಾವಧಿಯಲ್ಲಿ ವರ್ಚಸ್ವಿ ಆದರೆ ಕೆಲಮಟ್ಟಿಗೆ ಅನಾಸಕ್ತ ಲೌಕಿಕರ ಗಮನ ಮತ್ತು ಆಶ್ರಯ ಗಳಿಸಿಕೊಳ್ಳುವ ಕಲೆಯನ್ನು ಜೈನ ಮುನಿಗಳು ಸಾಧಿಸಿಕೊಳ್ಳತೊಡಗಿದ್ದರೆಂದು ಕಾಣುವುದು. ವಿಷ್ಣುವರ್ಧನನ ಪೂರ್ವಜನಾದ ಹೊಯ್ಸಳ ವಿನಯಾದಿತ್ಯನನ್ನು ಮನವೊಲಿಸುವಲ್ಲಿ ಅಂದಿನ ಜೈನರು ಯಶಸ್ವಿಯಾಗಿದ್ದುದನ್ನು ಇಲ್ಲಿ ಸ್ಮರಿಸಬಹುದು - *ASMAR* 1932, 16.

49. ಭಂಡಾರಬಸದಿ ಎಂಬುದು ಮೊದಲ ಹೆಸರಾಗಿದ್ದು, ಭವ್ಯಚೂಡಾಮಣಿಯೆಂಬುದನ್ನು ಎರಡನೆಯ ಹೆಸರಾಗಿ ಅಂಗೀಕರಿಸಲಾಗಿಯಿತೆಂದು ಶಾಸನಗಳು ಸ್ಪಷ್ಟಗೊಳಿಸುತ್ತವೆ. 1159ರ 481 ಮತ್ತು 476.

50. ಹುಳ್ಳರಾಜನು ಅರಸನಿಂದ ಗ್ರಾಮವನ್ನು ಪಡೆದುಕೊಂಡು, ಅದನ್ನು ದೇವಾಲಯದ ಪೋಷಣೆಗಾಗಿ ಬಿಟ್ಟುಕೊಟ್ಟನೆಂದು ಸ್ಪಷ್ಟವಾಗಿ ತಿಳಿಸಲಾಗಿದೆ (481 ಮತ್ತು 476).

ಬರೆತುಕೊಂಡಿರುತ್ತೆಂಬುದನ್ನು ಮಾತ್ರ ಮರೆಯುವಂತಿಲ್ಲ. ರಾಣಿ ಶಾಂತಲೆ ತನ್ನ ಪತಿ ವಿಷ್ಣುವರ್ಧನನಿಂದ ಮೊಟ್ಟನವಿಲೆ ಗ್ರಾಮವನ್ನು ಪಡೆದುಕೊಂಡು, ಚಿಕ್ಕಬೆಟ್ಟದ ಮೇಲೆ ಅವಳೇ ಕಟ್ಟಿಸಿದ ಸವತಿಗಂಧವಾರಣ ಬಸದಿಯ ಸೇವೆಗಳಿಗಾಗಿ ಅದನ್ನು ನೀಡಿದಳು.[51] ಅದೇ ರೀತಿ, ವಿಷ್ಣುವರ್ಧನನ ದಂಡನಾಯಕನಾದ ಗಂಗರಾಜನು ಪರಮ[52] ಮತ್ತು ಗೋವಿಂದವಾಡಿ[53] ಗ್ರಾಮಗಳನ್ನು, ಹಿರಿಯಭಂಡಾರಿ ಹುಳ್ಳರಾಜನು ಸವಣೇರು, ಬೆಕ್ಕ ಮತ್ತು ಕೆಗ್ಗೆರೆ ಗ್ರಾಮಗಳನ್ನು, ವಿಷ್ಣುವರ್ಧನ ಮತ್ತು ನರಸಿಂಹನಿಂದ ಅನುಕ್ರಮವಾಗಿ ಪಡೆದುಕೊಂಡರು.[54] ಅನಂತರ, ಬೊಮ್ಮನಹಳ್ಳಿಯನ್ನು ಬಿಟ್ಟುಕೊಡಲು ಅರಸ ಇಮ್ಮಡಿ ಬಲ್ಲಾಳನ ಮನಸ್ಸನ್ನು ಮಂತ್ರಿ ಚಂದ್ರಮೌಳಿಯು ಯಶಸ್ವಿಯಾಗಿ ಒಲಿಸಿಕೊಂಡನು.[55] ಹುಳ್ಳರಾಜನ ಅಧೀನಾಧಿಕಾರಿಯಾದ ಬೊಮ್ಮದೇವನು ಮೇರುಹಳ್ಳಿಯನ್ನು ಅದೇ ರಾಜನಿಂದ ಪಡೆದುಕೊಂಡನು.[56] ಇವೆಲ್ಲ ದತ್ತಿಗಳು ಪ್ರತ್ಯಕ್ಷ ಅಥವಾ ಪರೋಕ್ಷ ಕಾರಣಕ್ಕೊಳಪಟ್ಟಿದ್ದವು. ಪ್ರೀತಿಪಾತ್ರರಾದವರನ್ನು, ಸಾಮಂತರನ್ನು, ದಂಡನಾಯಕರನ್ನು ಮತ್ತು ಖ್ಯಾತ ಆಡಳಿತಾಧಿಕಾರಿಗಳನ್ನು ಓಲೈಸಿಕೊಳ್ಳಲು ದತ್ತಿಗಳನ್ನು ಹೊಯ್ಸಳರ ಕಾಲದಲ್ಲಿ ಕೊಡಲಾಗುತ್ತಿತ್ತೆಂಬುದು ಗಂಗರಾಜನ ವಿಷಯದಲ್ಲಿ ಹೆಚ್ಚು ಸ್ಪಷ್ಟಗೊಂಡಿದೆ. ಸಾಣೇಹಳ್ಳಿಯ ಶಾಸನವೊಂದರ ಕಣ್ಸೆಳೆಯುವ ಈ ವರ್ಣನೆಯನ್ನು ಗಮನಿಸಬಹುದು.[57]

ತಲಕಾಡಿನಿಂದ ಚೋಳಸಾಮಂತ ಆದಿಯಮನನ್ನು ಹೊಡೆದಟ್ಟಿದ ಮೇಲೆ ಗಂಗರಾಜನು ನರಸಿಂಗವರ್ಮ ಮತ್ತು ಘಟ್ಟದ ಮೇಲಿನ ಉಳಿದೆಲ್ಲ ಚೋಳಸಾಮಂತರನ್ನು ಓಡಿಸಿ, ಈ ನಾಡನ್ನೆಲ್ಲ ಒಂದೇ ಛತ್ರದಡಿ ತಂದನು. ಇದರಿಂದ ಸಂತುಷ್ಟನಾದ ಅರಸ ವಿಷ್ಣುವರ್ಧನನು ಸಂತೋಷದಿಂದ ಗಂಗರಾಜನನ್ನುದ್ದೇಶಿಸಿ 'ನಾನು ಸಂತುಷ್ಟನಾಗಿರುವೆ: ವರ ಬೇಡು' ಎಂದ. ತಾನು ಏನು ಬೇಡಿದರೂ ಅರಸನು ಕೊಡುವನೆಂಬುದನ್ನು ತಿಳಿದಿದ್ದರೂ ಸಾಮಾನ್ಯ ಜನರಂತೆ ಅದನ್ನಿದನ್ನು ಸ್ವಂತಕ್ಕೆ ಬೇಡದೆ, ಜಿನನಲ್ಲಿ ಮನನೆಟ್ಟಿದ್ದ ಗಂಗರಾಜನು ಗೋವಿಂದವಾಡಿಯನ್ನು ಬೇಡಿ ಪಡೆದು, ಗೊಮ್ಮಟ ದೇವರ ಪೂಜೆಗೆ ಆ ಗ್ರಾಮವನ್ನು ಬಿಟ್ಟುಕೊಟ್ಟನು. ಆಗ ನೆರದಿದ್ದ ಮುನಿಗಣ ಪದೇ ಪದೇ ಮೆಚ್ಚುಗೆಯ ಮಾತನಾಡುತ್ತಾ 'ಇದು ನಿಜಕ್ಕೂ ಶ್ರೇಯಕಾರ್ಯ' ಎಂದು ಉದ್ಗರಿಸಿತಂತೆ!

---

51. 1123ರ 162.
52. 1118ರ 82, 458; 12ನೆಯ ಶತಮಾನದ ಆದಿಕಾಲದ 154 ಮತ್ತು 561.
53. 1119ರ 547.
54. 1159ರ 476, 481; 12ನೆಯ ಶತಮಾನದ 342. 11173ರ 565ನ್ನೂ ನೋಡಿ.
55. 1181ರ 571, 444.
56. 1173ರ 565.
57. 547.

ಬೆಳ್ಗೊಳವು ಪಟ್ಟಣವಾಗಿ ಬೆಳೆಯುವುದು : ಮೆಚ್ಚಿಗೆಯಿಂದ ಬಿಟ್ಟಿರಲಿ, ರಾಜಕೀಯ ಕಾರಣಕ್ಕಾಗಿ ಕೊಟ್ಟಿರಲಿ, ಇಲ್ಲವೇ ಪ್ರೀತಿಪಾತ್ರರನ್ನು ಓಲೈಸಲೆಂದು ನೀಡಿರಲಿ, ಪರಮ, ಸವಣೇರು, ಬೆಕ್ಕ, ಕೆಗ್ಗೆರೆ, ಬೊಮ್ಮನಹಳ್ಳಿ, ಮೇರುಹಳ್ಳಿ, ಗೋವಿಂದವಾಡಿ, ಜಿನನಾಥಪುರ, ಮೊಟ್ಟನವಿಲೆ ಗ್ರಾಮಗಳು ಸೇರಿದಂತೆ ಬೆಳ್ಗೊಳದ ನೆರೆಹೊರೆಯ ಬಹುತೇಕ ಭೂಪ್ರದೇಶವು 12ನೆಯ ಶತಮಾನದಲ್ಲಿ ಮೂಲಸಂಘದ ಆಚಾರ್ಯರ ನಿಯಂತ್ರಣಕ್ಕೊಳಗಾಯಿತೆಂಬುದು ಮುಖ್ಯ. ಇದರಿಂದಾಗಿ ಬೆಳ್ಗೊಳವು ಸಮೃದ್ಧ ಪಟ್ಟಣವಾಗಿ ಬೆಳೆಯಲು ಸಾಧ್ಯವಾಯಿತು. ವಿವಿಧ ವಸ್ತುಗಳ ವರ್ತಕರು ಮತ್ತು ರತ್ನಾಭರಣ ವ್ಯಾಪಾರಿಗಳು ಈ ಪಟ್ಟಣದ ಪ್ರಮುಖ ಓಣಿಗಳಲ್ಲೆಲ್ಲ ನೆಲೆಸತೊಡಗಿದರು. ಕೆಲವು ರಸ್ತೆಗಳಿಗೆ ತಮ್ಮದೇ ಇಲ್ಲವೆ ತಮ್ಮ ಪೂರ್ವಜರ ಹೆಸರಿಟ್ಟು ಈ ಪಟ್ಟಣವನ್ನು ಬೆಳೆಸಿದರು.

ಬೆಳ್ಗೊಳ ಸಂಕೀರ್ಣವು ಅಭೂತಪೂರ್ವ ಭೌತಿಕ ಸಮೃದ್ಧಿ ಕಂಡಿದ್ದಲ್ಲದೆ ಕೆಲವೇ ಕೆಲವು ದಶಕಗಳಲ್ಲಿ - ವಿಶೇಷತಃ 1113 ಮತ್ತು 1175 ರ ಮಧ್ಯೆ - ಚಿಕ್ಕಬೆಟ್ಟದ ಕೇಂದ್ರಪ್ರದೇಶವು ದೇವಾಲಯಗಳಿಂದ ತುಂಬಿಹೋಯಿತು. ಇಷ್ಟೊಂದು ಸಂಖ್ಯೆಯ ದೇವಾಲಯಗಳನ್ನು ಹಿಂದಿನ ಅರ್ಧ ಸಹಸ್ರಮಾನದ ಇತಿಹಾಸವೂ ಕಂಡಿರಲಿಲ್ಲ. ಇದಲ್ಲದೆ ದೊಡ್ಡಬೆಟ್ಟದ ವಿಗ್ರಹದ ಸುತ್ತ ಸ್ವಾರಸ್ಯಕರವಾದ ಒಂದು ಸಂಕೀರ್ಣ ಬೆಳೆಯಿತು. ಅಂದಿನವರೆಗೂ ತೆರೆದಂಗಳವಾಗಿದ್ದ ಕೊಳ್ಳ ಪ್ರದೇಶವನ್ನು ದೇವಾಲಯ, ಮಠ, ಅಂಗಡಿ, ತೋಟ, ಕೆರೆ ಮತ್ತು ಕೊಳಗಳು ಆವರಿಸಿಕೊಂಡವು. ಚಿಕ್ಕಬೆಟ್ಟದಾಚೆ ಜಿನನಾಥಪುರವೆಂಬ ಮತ್ತೊಂದು ಉಪನಗರವು ಬೆಳೆಯಿತು. ಸುತ್ತಮುತ್ತಲ ಹಳ್ಳಿಗಳೆಲ್ಲ ಬೆಳ್ಗೊಳದಲ್ಲಿ ಸಮಾವೇಶಗೊಂಡು ಅದರ ಉಪಗ್ರಾಮಗಳಾದವು. ಇವೆಲ್ಲವೂ ದೇವಾಲಯಗಳ ಕೇಂದ್ರಗಳಾಗಿ ತಮ್ಮ ಅನನ್ಯತೆಯನ್ನು ಕಾಪಾಡಿಕೊಂಡವು. ಇದಕ್ಕೆಲ್ಲ ಕಾರಣರಾದವರು ಹಲವೇ ಹಲವು ಹೊಯ್ಸಳ ಸಾಮಂತರು, ಉನ್ನತಾಧಿಕಾರಿಗಳು ಮತ್ತು ವರ್ತಕರು ಎಂಬುದನ್ನು ಮರೆಯುವಂತಿಲ್ಲ.

ಮಹಾನಿರ್ಮಾಪಕರು : 12ನೆಯ ಶತಮಾನದ ಶಾಸನಕವಿಯೊಬ್ಬ ನುಡಿದಿರುವ ಮಾತೊಂದು ಇಲ್ಲಿ ಉಲ್ಲೇಖಾರ್ಹ. "ಆರಂಭಕಾಲದ ಜೈನಮತದ ದೃಢ ಪೋಷಕರು ಯಾರೆಂದು ಕೇಳಿದರೆ- ಅರಸ ರಾಚಮಲ್ಲನ ದಕ್ಷ ಮಂತ್ರಿಯಾಗಿದ್ದ *ರಾಜ* ಮಾತ್ರ ಎಂದು, ಅವನಾದ ಮೇಲೆ ಪಂಡಿತರಿಂದ ಪ್ರಶಂಸಿಸಲ್ಪಟ್ಟ ಮತ್ತು ಅರಸ ವಿಷ್ಣುವಿನ ದಕ್ಷ ಮಂತ್ರಿಯೆನಿಸಿದ್ದ *ಗಂಗಣ*ನೊಬ್ಬನೆಂದು, ಮತ್ತೆ ಅವನಾದ ಮೇಲೆ ಅರಸ ನೃಸಿಂಹದೇವನ ಮಂತ್ರಿಯಾಗಿದ್ದ *ಹುಳ್ಳ*ನೊಬ್ಬನೆಂದು ಹೇಳದೆ ಬೇರಾರನ್ನು ಹೆಸರಿಸಲು ಸಾಧ್ಯ?"

ಪ್ರಶ್ನೆಕಾರನು ಮುಂದುವರಿದು: "ಬೇರೆ ಯಾರಾದರೂ ಅಂಥವರಿದ್ದರೆ ಅವರನ್ನೇಕೆ ಹೆಸರಿಸಬಾರದು?" ಎಂದು ಕೇಳಿದಾಗ, ಅದಕ್ಕೆ ಈ ಸಾಲಿನಲ್ಲಿ ನಿಲ್ಲಲರ್ಹರಾದವರಾರೂ

ಇಲ್ಲವೆಂಬ ಸ್ಪಷ್ಟ ಉತ್ತರ ಬರುವುದು.

ಈ ಮಾತು ಶ್ರವಣಬೆಳ್ಗೊಳ ಇತಿಹಾಸದ ಸಮರ್ಪಕ ಮೌಲ್ಯಮಾಪನವಾಗಿದೆ. ಏಕೆಂದರೆ, ಚಾವುಂಡರಾಜ, ಗಂಗರಾಜ ಮತ್ತು ಹುಳ್ಳರಾಜರ ಕೊಡುಗೆಯನ್ನು ಸರಿಗಟ್ಟುವಂತಹ ದಾನಿಗಳು ಬೇರಾರೂ ಇದರ ಇತಿಹಾಸದಲ್ಲಿ ಸಿಗುವುದಿಲ್ಲ. ಇಮ್ಮಡಿ ವೀರಬಲ್ಲಾಳನ ಅಮಾತ್ಯನಾದ 12ನೆಯ ಶತಮಾನದಂಚಿನಲ್ಲಿದ್ದ ರೇಚರಸನೊಬ್ಬ ಮಾತ್ರ ಈ ಮಹಾನಿರ್ಮಾಪಕರ ಸಾಲಿನಲ್ಲಿ ನಿಲ್ಲಬಲ್ಲನಾಗಿದ್ದನೇನೋ ಅನಿಸುವುದು. ಏಕೆಂದರೆ, ಜೈನಧರ್ಮಕ್ಕೆ, ವಿಶೇಷವಾಗಿ ಶ್ರವಣಬೆಳ್ಗೊಳಕ್ಕೆ, ಅವನು ಮಾಡಿದ ಸೇವೆಯು ಅವನ ಪೂರ್ವಜರ ಕೊಡುಗೆಗಳಷ್ಟೇ ಮಹತ್ವಪೂರ್ಣದ್ದಾಗಿದೆ.

ಗಂಗರಾಜ, ಅವನ ತಾಯಿ, ಅವನ ಮಡದಿ, ಅವನ ಮಡದಿಯ ಸಂಬಂಧಿಗಳು, ಅವನ ಸೋದರಿಯರು ಮತ್ತು ಅವರ ನಿಕಟಸಂಬಂಧಿಗಳ ಪೋಷಣೆ ಇರದಿದ್ದರೆ ಈಗಿರುವ ಕತ್ತಲೆ ಬಸದಿ, ಶಾಸನ ಬಸದಿ, ಚಾವುಂಡರಾಯ ಬಸದಿಯ ಪುನರುತ್ಥಾನ, ಎರಡುಕಟ್ಟೆ ಬಸದಿ ಮತ್ತು ಶಾಂತೀಶ್ವರ ಬಸದಿಗಳನ್ನು ಹಾಗೂ ಅವಳಿ ಲಕ್ಷ್ಮೀದೇವಿ ನಿಸಿಧಿ ಮಂಟಪಗಳನ್ನು ಚಿಕ್ಕಬೆಟ್ಟವು ಪಡೆಯುತ್ತಿರಲಿಲ್ಲ. ಅಲ್ಲದೆ ಜಿನನಾಥಪುರವೂ ಸ್ಥಾಪನೆಗೊಳ್ಳುತ್ತಿರಲಿಲ್ಲ.[58] ದೊಡ್ಡಬೆಟ್ಟದ ಮೇಲಿರುವ ಮಹಾವಿಗ್ರದ ಸುತ್ತಾಲಯವು ನಿರ್ಮಾಣಗೊಳ್ಳುತ್ತಿರಲಿಲ್ಲ. ಪಾರ್ಶ್ವನಾಥ ಬಸದಿ (ಅರೆಗಲ್ ಬಸದಿ) ಹಾಗೂ ಅಲ್ಲಿನ ನಿಸಿಧಿಗಳೂ ಬೆಳಕು ಕಾಣುತ್ತಿರಲಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಬೆಳ್ಗೊಳ ಮತ್ತು ನೆರೆಹೊರೆಯ ಗ್ರಾಮಗಳು ಧಾರ್ಮಿಕ ಕೇಂದ್ರಗಳಾಗಿ ಬೆಳೆಯಲು ಗಂಗರಾಜನ ಕುಟುಂಬವೇ ಕಾರಣವೆಂದು ಬಗೆಯಬಹುದು. ಗಂಗರಾಜನು ತನ್ನ ಅರಸನಿಂದ ಪಡೆದುಕೊಂಡು ಒಪ್ಪಿಸಿದ ವಿಪುಲ ದತ್ತಿಗಳು ಬೆಳ್ಗೊಳದ ಸ್ವರೂಪವನ್ನೇ ಬದಲಿಸಿದವು. ಈ ಮಾದರಿಯನ್ನನುಸರಿಸಿ ಮಠದ ಬೊಕ್ಕಸವನ್ನು ತುಂಬಲು ಈ ಶತಮಾನದಲ್ಲಿ ಹೆಚ್ಚು ಹೆಚ್ಚು ದತ್ತಿಗಳೂ ಬಂದವು. ಹೀಗೆ ದೊರೆತ ಭೂಮಿಗೆ ನೀರಾವರಿಯ ಸೌಲಭ್ಯವನ್ನು ಒದಗಿಸಲು ಬೆಳ್ಗೊಳ ಮತ್ತು ಅದರ ಸುತ್ತಮುತ್ತ ಹಲವಾರು ಕೆರೆ, ಕೊಳ, ಸರೋವರಗಳನ್ನು ತೋಡಲಾಯಿತು. ಗಂಗಸಮುದ್ರ ಸೇರಿದಂತೆ, ಈ ಎಲ್ಲ ಕೆರೆಕಟ್ಟೆಗಳು ಜಮೀನುಗಳಿಗೆ ಮತ್ತು ತೋಟಗಳಿಗೆ ನೀರುಣಿಸಿ ಕೃಷಿಗೆ, ತೋಟಗಾರಿಕೆಗೆ, ಹೆಚ್ಚಿನ ಅನುಕೂಲತೆ ಮಾಡಿಕೊಟ್ಟವು.[59]

ಗಂಗರಾಜ ಮತ್ತು ಅವನ ಕುಟುಂಬದವರು ಹಾಕಿದ ಈ ಅಡಿಪಾಯವನ್ನು ಹುಳ್ಳರಾಜ ಮತ್ತವನ ಅಧೀನಾಧಿಕಾರಿಗಳು, ಚಂದ್ರಮೌಳಿಯ ಮಡದಿ ಆಚಿಯಕ್ಕ ಮತ್ತು ಪಟ್ಟಣದ ರತ್ನವ್ಯಾಪಾರಿಗಳು ಭದ್ರಪಡಿಸಿ, ಮುಂದುವರಿಸಿ, ಬೆಳೆಸಿದರು. ಇಲ್ಲಿಯ ದೇವಾಲಯಗಳನ್ನು

---

58. ಶೆಟ್ಟರ್, ಉಪರೋಕ್ತ ಪು. 17, 72 ಮುಂ.

59. ಎ ಕ II, 1118ರ 558; ಶೆಟ್ಟರ್, ಉಪರೋಕ್ತ ಪು. 2.

ಮತ್ತು ಗೊಮ್ಮಟ ಸಂಕೀರ್ಣವನ್ನು ಅಭಿವೃದ್ಧಿಗೊಳಿಸಿದ್ದಲ್ಲದೆ, ಹಿಂದೆಂದೂ ಕಂಡರಿಯದ ಸಂಖ್ಯೆಯಲ್ಲಿ ನಿಸಿಧಿ ಮಂಟಪಗಳನ್ನು ಮತ್ತು ವೀರಗಲ್ಲುಗಳನ್ನು ಸ್ಥಾಪಿಸಿ ಚಿಕ್ಕಬೆಟ್ಟದ ಮಹತ್ವವನ್ನು ಇಮ್ಮಡಿಗೊಳಿಸಿದರು. ವಿಷ್ಣುವರ್ಧನನ ಪಟ್ಟದ ರಾಣಿ ಶಾಂತಲೆ ಒಂದನೆಯ ನರಸಿಂಹ ಮತ್ತು ವೀರಬಲ್ಲಾಳನ ಅಧಿಕಾರಿಗಳಾಗಿದ್ದ ಮರಿಯಾನೆ ದಂಡ ನಾಯಕರು, ಇಮ್ಮಡಿ ಬಲ್ಲಾಳನ ಅಮಾತ್ಯನಾದ ರೇಚರಸ ಈ ಕ್ಷೇತ್ರದ ಭೌತಿಕ ಸಮೃದ್ಧಿಯನ್ನು ಭದ್ರಪಡಿಸಿದವರಲ್ಲಿ ಪ್ರಮುಖರಾಗಿರುವರು.

ವರ್ಚಸ್ವಿ ಶ್ರಾವಕರ ಪ್ರಭಾವ: ವರ್ಚಸ್ವಿ ಶ್ರಾವಕರು ಮೊದಲು ಈ ಕ್ಷೇತ್ರದ ಚೌಕಟ್ಟನ್ನು ಅತ್ಯುತ್ಸಾಹದಿಂದ ಬಲಪಡಿಸಲು ಮುಂದೆಬಂದರು; ಆದರೆ, ಅವರ ಉದಾರತ್ವದ ಹೊರೆಯನ್ನು ಹೊರಲಾರದೆನೋ ಎಂಬಂತೆ ಅದು ಬಿರುಕು ಬಿಡತೊಡಗಿತು. ಅಂದರೆ, ಅದಕ್ಕೆ ಕೊನೆಯ ಸ್ಪರ್ಶ ಕೊಡುವ ಮುನ್ನವೆ ಅದರ ಪತನವು ಆರಂಭಗೊಳ್ಳಲಾರಂಭಿಸಿತೆಂದರ್ಥ. ವಿಶೇಷತಃ ಧಾರ್ಮಿಕ ಜೀವನದ ಆಧ್ಯಾತ್ಮಿಕತೆಯು ಈ ಭೌತಿಕ ಸಮೃದ್ಧಿಯ ಒತ್ತಡದಿಂದ ತೀವ್ರವಾಗಿ ಘಾಸಿಗೊಂಡಿತು. ಇದಕ್ಕೆ ಮೊಟ್ಟ ಮೊದಲು ಬಲಿಯಾದುದು ಬೆಳ್ಗೊಳದ ಇತಿಹಾಸವನ್ನು ಆರಂಭಿಸಿದ, ಅತ್ಯಂತ ಗೌರವಯುತ ವ್ರತಾಚರಣೆಯಾಗಿದ್ದ, ಇಚ್ಛಾಮರಣ.

ತಮ್ಮ ವರ್ಚಸ್ವಿ ಗುಡ್ಡರನ್ನು ಸಂತೋಷಪಡಿಸದೆ ಹಾಗೂ ಕೆಲಮಟ್ಟಿಗೆ ಅವರನ್ನು ಓಲೈಸಿಕೊಳ್ಳದೆ, ಮೂಲಸಂಘದ ಶ್ರಮಣರು ತಮ್ಮ ಉಡಿಯಲ್ಲಿ ಕಟ್ಟಿಕೊಂಡ ಎಲ್ಲ ಲಾಭಗಳನ್ನು ಸದುಪಯೋಗಗೊಳಿಸಿಕೊಳ್ಳುವಂತಿರಲಿಲ್ಲ. ಗಂಗರಾಜನು ಅಂತಹ ಲಾಭಗಳನ್ನು ತಮಗಾಗಿ ಇಲ್ಲವೆ ತಮ್ಮ ಸಂಸ್ಥೆಗಳಿಗಾಗಿ ದೊರಕಿಸಿಕೊಟ್ಟಾಗಲೆಲ್ಲ ಮುನಿಸಮೂಹವು ಪದೇ ಪದೇ ಈ ಲೌಕಿಕನ ಬಗ್ಗೆ ಮೆಚ್ಚುಗೆ ಸೂಚಿಸಲು "ನಿಜಕ್ಕೂ ಇದು ಶ್ಲಾಘನೀಯ" ಎಂದು ಜಯಕಾರ ಮಾಡಬೇಕಾಯಿತು.[60] "ಮೂಲಸಂಘದ ಕೊಂಡಕುಂದ ಶಾಖೆಯು ಜೈನ ಮತದಲ್ಲಿ ಅತ್ಯಂತ ಪ್ರಾಚೀನವಾದುದು; ಇದರ ಪೋಷಕನು ನಿಸ್ಸಂದೇಹವಾಗಿಯೂ ದಂಡನಾಯಕ ಗಂಗ...." ಎಂದು ಸಾರುತ್ತಾ, 12ನೆಯ ಶತಮಾನದ ವೃತ್ತಾಂತಕಾರನೊಬ್ಬ "ಹಿಂದಿನ ರಾಯರಿಗಿಂತಲೂ ಗಂಗರಾಜನು ನೂರ್ಮಡಿ ಧನ್ಯನಲ್ಲವೆ?"[61] ಎಂದು, "ಪುಣ್ಯಶಾಲಿಗಳ ಮನಕ್ಕೆ ಸಂತೋಷ" ನೀಡುವ ಈ ಗಂಗರಾಜನನ್ನು "ಧರ್ಮಸೌಧಕ್ಕೆ ಆಸರೆಯಾಗಿರುವ ಮೂಲಸ್ತಂಭವಲ್ಲವೆ?", ಎಂದು ಪ್ರಶ್ನಿಸಿರುವನು.[62]

"ಅಭಿನವ ಗಂಗದಂಡಾಧಿಪ"ನೆಂದು ಗುರುತಿಸಲಾದ[63] ಹುಳ್ಳರಾಜನು ಸಮಾಜದಲ್ಲಿದ್ದ

60. ಎ ಕ II, 1119ರ 547.
61. 12ನೆಯ ಶತಮಾನದ 355.
62. 1120 ರ 136.
63. 1163ರ 71.

ತನ್ನ ಸ್ಥಾನದ ಬಗ್ಗೆ ಗಂಗರಾಜನಿಗಿಂತ ಹೆಚ್ಚು ಅರಿವುಳ್ಳವನಾಗಿದ್ದನು. ಹೊಯ್ಸಳ ರಾಜ್ಯದಲ್ಲಿ ಆಡಳಿತಾನುಭವವನ್ನು ಗಳಿಸಿಕೊಂಡಿದ್ದನ್ನು ಶ್ರವಣಬೆಳ್ಗೊಳದ ದೇವಾಲಯಗಳ ಆಡಳಿತೆಯನ್ನು ಸಂಘಟಿಸಿ ಸ್ಥಿರಗೊಳಿಸಲು ಅವನು ಪರಿಣಾಮಕಾರಿಯಾಗಿ ಬಳಸಿಕೊಂಡನು.[64] ಭಂಡಾರ ಬಸದಿಯನ್ನು ಕಟ್ಟಿಸಿ, ಅದನ್ನು "ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛಕ್ಕೆ ಸಂಲಗ್ನಿಸಿ",[65] ಆ ಶತಮಾನದ ಅತ್ಯಂತ ಶಕ್ತಿಶಾಲಿ ಹಾಗೂ ಜನಪ್ರಿಯ ಧರ್ಮಗುರುವಾಗಿದ್ದ ಮಹಾಮಂಡಲಾಚಾರ್ಯ ನಯಕೀರ್ತಿಸಿದ್ಧಾಂತಚಕ್ರವರ್ತಿಯನ್ನು ಅದರ ಆಚಾರ್ಯನನ್ನಾಗಿ ನೇಮಿಸಿ,[66] ಧಾರ್ಮಿಕ ಸಂಸ್ಥೆಗಳ ಆಡಳಿತೆಯಲ್ಲಿ ಸಂಘದ ಶ್ರಮಣನನ್ನು ಅವನು ನೇರವಾಗಿ ತೊಡಗಿಸಿದನು.[67] ಅಲ್ಲದೆ, "ಗೊಮ್ಮಟ ತೀರ್ಥದ (ದೇವರುಗಳ) ಪೂಜೆಗೂ ಅತ್ಯಂತ ಅರ್ಹ ವ್ಯಕ್ತಿಗಳನ್ನು" ನೇಮಿಸಿದನು.[68] ಇದನ್ನನುಸರಿಸಿ ಹುಳ್ಳನ ಸಾಮಂತನಾದ ಬೊಮ್ಮದೇವನೂ ಭಾನುಕೀರ್ತಿಸಿದ್ಧಾಂತದೇವನನ್ನು ಮತ್ತೊಂದು ದೇವಾಲಯದ ಆಚಾರ್ಯನನ್ನಾಗಿ ನೇಮಿಸಿದನು.[69] ಧಾರ್ಮಿಕಾಧಿಪತ್ಯದ ಹುದ್ದೆಗಳನ್ನು ಸ್ವೀಕರಿಸಿದ ಮಹಾಮಂಡಲಾಚಾರ್ಯರು, ಸ್ಥಾನಿಕರು, ಆಚಾರ್ಯರು, ದೇವಾಲಯ, ಕೆರೆ, ಸುಂಕ, ಮೊದಲಾದವುಗಳ ನಿರ್ವಹಣೆಯಲ್ಲಿ ಹೆಚ್ಚು ಹೆಚ್ಚಾಗಿ, ಇಂದ್ರಿಯಗಳ ಸಂಸ್ಕಾರ ಹಾಗೂ ನಿಗ್ರಹದಲ್ಲಿ ಅಪರೂಪವಾಗಿ, ತಮ್ಮನ್ನು ತಾವು ತೊಡಗಿಸಿಕೊಳ್ಳತೊಡಗಿದರು.[70]

ವರ್ತಕ ಸಮುದಾಯದ ಪ್ರವೇಶ : ಗಂಗರಾಜ, ಹುಳ್ಳರಾಜ, ಚಂದ್ರಮೌಳಿ, ಬೊಮ್ಮಣ್ಣದೇವ, ಬಲದೇವ, ರೇಚರಸ, ಮುಂತಾದ ಹೊಯ್ಸಳ ಸಾಮಂತರು, ಅವರ ಕುಟುಂಬದವರು ಮತ್ತು ಅಧೀನಾಧಿಕಾರಿಗಳಲ್ಲದೆ, ವರ್ತಕ ಸಮುದಾಯದ ಪ್ರಭಾವಿ ವರ್ಗವೊಂದು ಬೆಳ್ಗೊಳವನ್ನು ಇದೇ ಕಾಲದಲ್ಲಿ ಪ್ರವೇಶಿಸಿತು. ಚಿಕ್ಕಬೆಟ್ಟದ ಮೇಲೆ ಇವರ ಉಪಸ್ಥಿತಿಗೆ ಪ್ರಥಮ ಪ್ರಮಾಣವು 1117ರಲ್ಲಿ ಹೊಯ್ಸಳಸೆಟ್ಟಿ ಮತ್ತು ನೇಮಿಸೆಟ್ಟಿಯರ ತಾಯಿಯಿಂದ ದೊರಕುವುದು. ಈ ಸೆಟ್ಟಿಕವ್ವೆಯು ತೇರಿನ ಬಸದಿಯನ್ನು ಕಟ್ಟಿಸಿ, ಅದರ ನಿರ್ವಹಣೆಗೆ ತನ್ನ ಮಕ್ಕಳಿಂದ ಭೂದಾನ ಮಾಡಿಸಿ, ದೀಕ್ಷೆ ಪಡೆದಳು.[71] ಗಂಗರಾಜನ

---

64. ಅಧಿಕಾರ ನಿರ್ವಹಣೆಯಲ್ಲಿ ಯೋಗಂಧರಾಯಣನಿಗಿಂತಲೂ ಜಾಣನಾಗಿದ್ದನೆಂದು ಹೇಳಲಾಗಿದೆ - 481.
65. ಅದೇ.
66. ಅಧ್ಯಾಯ 6 ನೋಡಿರಿ. ಅವನು 'ಪ್ರಖ್ಯಾತ ಮೂಲಸಂಘದ ವಂಶಾವಳಿಯ ಆಧಾರಸ್ತಂಭ' ವಾಗಿದ್ದನೆಂದು ಕರೆಯಲಾಗಿದೆ. ನೋಡಿ - 565.
67. 476.
68. 565.
69. ಅದೇ.
70. 477, 478, 479, 564, 557 ಇತ್ಯಾದಿ. 1159ರ 476ರ ಶಾಸನವು ನಗದು ದತ್ತಿಗೆ ಸಂಬಂಧಿಸಿದ ಆಚಾರ್ಯನ ವಿಶೇಷ ಹೊಣೆಗಾರಿಕೆಯನ್ನು ಸ್ಪಷ್ಟಪಡಿಸುವುದು.
71. 170.

ಹೆಂಡತಿ ದಂಡನಾಯಕಿತಿ ಲಕ್ಷ್ಮೀಮತಿಯ ಸೋದರಿ ದೇಮಿಕಬ್ಬೆಯು "ಅರಸರೆಲ್ಲರ ಪ್ರೀತಿಪಾತ್ರ"ನಾಗಿದ್ದ ವರ್ತಕ ಚಾವುಂಡನನ್ನು ವರಿಸಿದ್ದಳು. ಈಕೆಯು ಸಮಾಧಿವ್ರತ ಆಚರಿಸಿ, 1120ರಲ್ಲಿ ಚಿಕ್ಕಬೆಟ್ಟದ ಮೇಲೆ ಮಡಿದು, ನಿಸಿಧಿಯನ್ನು ಪಡೆದಳು.[72] ಹಲವು ಕುಟುಂಬಗಳಿಗೆ ಸಂಬಂಧಿಸಿದ ಈ ಬಿಡಿ ಬಿಡಿ ಉದಾಹರಣೆಗಳಿಗಿಂತ ಭಿನ್ನವಾಗಿ, ವರ್ತಕರೆಲ್ಲ ಒಂದು ಸಮುದಾಯವಾಗಿ ದೊಡ್ಡಬೆಟ್ಟ ಮತ್ತು ಬೆಳ್ಗೊಳ ಪಟ್ಟಣದಲ್ಲಿ ವಿಶೇಷ ಧಾರ್ಮಿಕ ಕಲಾಪಗಳನ್ನು ಹಮ್ಮಿಕೊಂಡದ್ದನ್ನೂ ಈ ಕಾಲದಲ್ಲಿ ಕಾಣುವೆವು.

12ನೆಯ ಶತಮಾನದ ವರ್ತಕ ದಾನಿಗಳಲ್ಲಿಯೇ ಅಗ್ರಗಣ್ಯನೆಂದರೆ ವಡ್ಡವ್ಯವಹಾರಿ ಮೊಸಳೆಯ ಬಸವಿಸೆಟ್ಟಿ. ಗಂಗರಾಜನು ನಿರ್ಮಿಸಿದ ಸುತ್ತಾಲಯದಲ್ಲಿ ಈತನು ತೀರ್ಥಂಕರರ ಇಪ್ಪತ್ನಾಲ್ಕು ವಿಗ್ರಹಗಳನ್ನು ಪ್ರತಿಷ್ಠಾಪಿಸಿ ತನ್ನ ಐವರು ಮಕ್ಕಳ ಮೂಲಕ ಪರಿಸೂತ್ರವನ್ನು ರಚಿಸಿಕೊಟ್ಟನು.[73] ಇದು ಅಂಕಿಸೆಟ್ಟಿ, ಕಮ್ಮಟದ ರಾಮಿಸೆಟ್ಟಿ, ಬಿದಿಯಮಸೆಟ್ಟಿ, ಮಹದೇವಸೆಟ್ಟಿ, ನೇಮಿಸೆಟ್ಟಿ, ರಾಚಮಲ್ಲ ಮತ್ತು ಬಮ್ಮಿಸೆಟ್ಟಿ, ಮುಂತಾದ ವರ್ತಕರನ್ನು ಇನ್ನಷ್ಟು ವಿಗ್ರಹಗಳನ್ನು ಸುತ್ತಾಲಯಕ್ಕೆ ಸೇರಿಸಲು ಪ್ರೇರೇಪಿಸಿತು.[74]

ಬಸವಿಸೆಟ್ಟಿಯ ಈ ನಿದರ್ಶನವು ಮೊಸಳೆಯ ವರ್ತಕ ವರ್ಗಕ್ಕೆ ಗಣನೀಯ ಸ್ಫೂರ್ತಿ ನೀಡಿತೆಂದು ಕಾಣುವುದು. ಏಕೆಂದರೆ, ಅಲ್ಲಿಯ ವರ್ತಕ ಸಮುದಾಯವು ಬಹುಸಂಖ್ಯೆಯಲ್ಲಿ ಬೆಳ್ಗೊಳಕ್ಕೆ ಬಂದು, ಗೊಮ್ಮಟನಿಗಲ್ಲದೆ ವಿವಿಧ ದೇವಾಲಯಗಳ ನಿರ್ವಹಣೆಗೆಂದು ನಿರಂತರ ಕೊಡುಗೆಗಳನ್ನು ನೀಡಲಾರಂಭಿಸಿತು. ಈ ಗ್ರಾಮದ ಸುಮಾರು ಎಪ್ಪತ್ತೈದು ವರ್ತಕರು ನಗದು ರೂಪದಲ್ಲಿ ವಾರ್ಷಿಕ ದಾನ ನೀಡಲು ಪ್ರತಿಜ್ಞೆಗೈದದ್ದಲ್ಲದೆ.[75] ಐವತ್ತು ವರ್ತಕರ ಇನ್ನೊಂದು ತಂಡವು ತನ್ನ ಕಾಣಿಕೆಯನ್ನೂ ಇದಕ್ಕೆ ಸೇರಿಸಿತು.[76] ಹೆಚ್ಚು ಹೆಚ್ಚು ದಾನಗಳು ಇದನ್ನು ಹಿಂಬಾಲಿಸಿ ಬಂದವು. ಒಮ್ಮೆ ನೂರಾಅರವತ್ತು ವರ್ತಕರು ಇಂಥಹ ಧರ್ಮಕಾರ್ಯಕ್ಕೆ ಪಣತೊಟ್ಟು ನಿಂತರು.[77] ಅವರಲ್ಲಿ ಮೊಸಳೆ, ಅಮ್ಮಳೆ, ನಾಗರನವಿಲೆ ಮತ್ತು ಅಂಗಡಿ

---

72. 158.
73. 12ನೆಯ ಶತಮಾನದ ಆದಿಕಾಲದ 279.
74. 293, 294, 296, 298, 301 ಮತ್ತು 285.
75. ಇವರಲ್ಲಿ ಹದಿನೈದು ಜನರನ್ನು ಹೊರತುಪಡಿಸಿ ಮಿಕ್ಕವರೆಲ್ಲ ತಮ್ಮ ಅಂಕಿತನಾಮಗಳೊಂದಿಗೆ 'ಸೆಟ್ಟಿ' ಪ್ರತ್ಯಯವನ್ನು ಧರಿಸಿರುತ್ತಾರೆ. ಉಧಾಹರಣೆಗೆ - 12ನೆಯ ಶತಮಾನದ 337.
76. ಅವರೆಲ್ಲರೂ ವರ್ತಕರು. ಆದರೆ, ಇವರಲ್ಲಿ ಇಪ್ಪತ್ತೊಂದು ಜನರು 'ಸೆಟ್ಟಿ' ಎಂದು ಕರೆದುಕೊಂಡಿಲ್ಲ. ಒಬ್ಬನನ್ನು 'ಹೆಗ್ಗಡೆ' ಎಂದು, ಮೂವರನ್ನು 'ಗೌಡ' ರೆಂದು ಉಲ್ಲೇಖಿಸಲಾಗಿದೆ - 12ನೆಯ ಶತಮಾನದ 338.
77. 12ನೆಯ ಶತಮಾನದ 356. ನೂರಾಮೂವತ್ತೈದು ಮಾಣಿಕ್ಯ ಮತ್ತಿನ್ನಿತರ ವಸ್ತುಗಳ ವ್ಯಾಪಾರಿಗಳಲ್ಲಿ ಐವರು ಪಟ್ಟಣಸ್ವಾಮಿಗಳಿದ್ದರು. ಅವರಲ್ಲಿ ಏಳು ಜನ 'ಹೆಗ್ಗಡೆ - ಹೆಗ್ಗಡಿತಿಯರು', ಇಬ್ಬರು 'ನಾಯಕರು', ಒಬ್ಬ 'ಸೇನಬೋವ', ಒಬ್ಬ 'ಪಂಡಿತ' ಮತ್ತು

ಗ್ರಾಮಗಳ ಸುಮಾರು ಒಂದು ನೂರು ಮೂವತ್ತೈದು-ಸೆಟ್ಟಿ ಸೆಟ್ಟಿಕವ್ವೆಯರು ಸೇರಿದ್ದರು. ಇವರಲ್ಲದೆ ಅನೇಕ ನಗರ ಕುಟುಂಬಿಗಳು, ವರ್ತಕ ಸಮುದಾಯಗಳು, ಗೊಮ್ಮಟನ ಸೇವೆಗಾಗಿ ಭೂದತ್ತಿ ಬಿಟ್ಟವು.[78] 12ನೆಯ ಶತಮಾನದಲ್ಲಿ ಬಂದ ದಾನಗಳನ್ನು ಸರಿಗಟ್ಟದಿದ್ದರೂ, 13ನೆಯ ಶತಮಾನದಲ್ಲಿಯೂ ಹಲವಾರು ವರ್ತಕರಿಂದ ಗಮನಾರ್ಹ ಪ್ರಮಾಣದ ಕೊಡುಗೆಗಳು ಹರಿದುಬಂದವು.[79]

ಸಾಮಂತರ ಮತ್ತು ಉನ್ನತಾಧಿಕಾರಿಗಳ ಬೃಹತ್ ಕೊಡುಗೆಗಳು ಪ್ರಧಾನವಾಗಿ ಅಷ್ಟಾರಾಧನೆ, ದೇವಾಲಯಗಳ ಜೀರ್ಣೋದ್ಧಾರ ಮತ್ತು ಪುನರ್ನಿರ್ಮಾಣಗಳ ಖರ್ಚನ್ನು ತೂಗಿಸುವ ಉದ್ದೇಶಕ್ಕಾಗಿದ್ದರೆ, ವ್ಯಕ್ತಿಗತವಾಗಿ ಮಾಡಿದ ಚಿಕ್ಕಪುಟ್ಟ ದಾನಗಳು ಇಮ್ಮಡಿಗೊಳ್ಳುತ್ತಿದ್ದ ಪೂಜಾವಿಧಿಗಳನ್ನು ಪೂರೈಸಲು ಸಹಾಯವಾದವೆಂದು ತೋರುತ್ತದೆ. ಗೊಮ್ಮಟನ ಅನುದಿನದ ಅಲಂಕಾರಕ್ಕಾಗಿ ಮಾಲೆಗಳನ್ನು ಪೂರೈಸುವ ಷರತ್ತಿಟ್ಟು ಒಂದು ವರ್ತಕ ಸಮುದಾಯವು ಮಾಲೆಗಾರನೊಬ್ಬನಿಗೆ ಒಂದು ತುಂಡು ಜಮೀನನ್ನು ಒಪ್ಪಿಸಿತು.[80] ಅದೇ ರೀತಿ, ಮಹಾವಿಗ್ರಹದ ಅಭಿಷೇಕಕ್ಕಾಗಿ ಹಾಲು ಪೂರೈಸಲು ಮತ್ತೊಂದು ಗುಂಪು ಏರ್ಪಾಡು ಮಾಡಿತು.[81] ಈ ಎಲ್ಲ ಕೊಡುಗೆಗಳನ್ನು ಬೆಳ್ಗೊಳದ ದೇವಾಲಯದ ಭಂಡಾರದಲ್ಲಿಟ್ಟು ಇಲ್ಲಿಯ ರತ್ನ ವ್ಯಾಪಾರಿಗಳನ್ನು ಹಾಗೂ ವೃತ್ತಿ-ಶ್ರೇಣಿಗಳನ್ನು ಅದರ ನ್ಯಾಸಾಧಿಕಾರಿಗಳನ್ನಾಗಿ ನೇಮಿಸಲಾಯಿತು.[82] ಪಟ್ಟಣಸ್ವಾಮಿಯಾಗಿದ್ದ ನಾಗದೇವನು ನಖರ ಜಿನಾಲಯವನ್ನು 1195ರಲ್ಲಿ ಬೆಳ್ಗೊಳ ಪಟ್ಟಣದಲ್ಲಿ ಕಟ್ಟಿಸಿದನು.[83] ಇದಾದ ಒಂದೆರಡು ದಶಕಗಳ ತರುವಾಯ ಬಹುಶಃ ಈಗ ಕಾಂತರಾಜಪುರವೆಂದು ಕರೆಯಲಾಗುವ ಗ್ರಾಮದಲ್ಲಿ ಬಾಹುಬಲಿಸೆಟ್ಟಿ ಮತ್ತು ಪಾರಿಸಸೆಟ್ಟಿಯೆಂಬವರು ಎಕ್ಕೋಟಿ ಜಿನಾಲಯವನ್ನು ನಿರ್ಮಿಸಿದರು.[84] ಇದರಲ್ಲಿ ಮೊದಲನೆಯದಕ್ಕೆ ನಖರ ಸಮುದಾಯದ ಹೆಸರನ್ನೇ ಕೊಡಲಾಯಿತು; ಏಕೆಂದರೆ, ತಮ್ಮ ಸಮಾಜದ ವಿಶೇಷ ಅಗತ್ಯತೆಗಳನ್ನು ಪೂರೈಸಲೆಂದೇ ಅದನ್ನವರು ಕಟ್ಟಿಸಿದ್ದರು.

ಹತ್ತು ಇನ್ನಿತರ ಅಧಿಕಾರ ವರ್ಗಕ್ಕೆ ಸೇರಿದ್ದರು.

78. 12ನೆಯ ಶತಮಾನದ 344.
79. 1231ರ 286; 13ನೆಯ ಶತಮಾನದ 300, 345, 347, 420; 1274ರ 346.
80. 12ನೆಯ ಶತಮಾನದ 344; 13ನೆಯ ಶತಮಾನದ 345.
81. 1274ರ 346; ಇದೇ ಶತಮಾನದ 347 ಮತ್ತು 349.
82. 457.
83. ಇದನ್ನು ಬಾಹುಬಲಿ ಮತ್ತು ಪಾರಿಸಸೆಟ್ಟಿ ನಿರ್ಮಿಸಿದರು - ಸು. 41 'ನಾಯಕ'ರನ್ನು, 21 'ಗೌಡ'ರನ್ನು, ಇತರ 10 ಜನರನ್ನು, ಮತ್ತು ನಾಲ್ಕುರು 'ಸೆಟ್ಟಿ' ಗಳನ್ನು ಈ ಕಾರ್ಯವಲ್ಲಿ ತೊಡಗಿಸಿಕೊಳ್ಳಲಾಗಿತ್ತು.
84. ವರ್ತಕರ ಅಂಗಡಿಗಳು ಮತ್ತು ವಾಸಗೃಹಗಳು ನಗರಜಿನಾಲಯಕ್ಕೆ ಸಮೀಪದಲ್ಲಿಯೇ ಇದ್ದವು ಮತ್ತು ಕೆಲವು ಬೀದಿಗಳಿಗೆ ಪ್ರಮುಖ ವರ್ತಕರ ಹೆಸರುಗಳನ್ನೂ ಇಡಲಾಗಿತ್ತು. ಉದಾಹರಣೆಗೆ, ನಗರಜಿನಾಲಯದ ಉತ್ತರದ ಬೀದಿಗೆ ಕೇತಿಸೆಟ್ಟಿಕೇರಿ ಎಂಬ ಹೆಸರಿತ್ತು - 457.

ಎರಡನೆಯದು ಇತರ ಸಮುದಾಯಗಳ ಸಹಕಾರದೊಡನೆ ವರ್ತಕ ಪ್ರಮುಖರಿತ್ತ ವಿಶೇಷ ಕೊಡುಗೆಯಾಗಿತ್ತು.

ವರ್ತಕರ ಗುಪ್ತ ಹೇತುಗಳು: ಸಾಮಂತರು ಬೆಳ್ಗೊಳದ ಶಾಶ್ವತ ನಿವಾಸಿಗಳಾಗಿರಲಿಲ್ಲ. ಆದರೆ ವರ್ತಕರು ಇಲ್ಲಿಯ ಕಾಯಂ ನಿವಾಸಿಗಳಾಗಿ ಪಟ್ಟಣದ ಅವಿಭಾಜ್ಯ ಅಂಗವಾಗ ತೊಡಗಿದ್ದರು. ಇದರಿಂದಾಗಿ ಅವರಿಗೆ ಇಲ್ಲಿಯ ಘಟನೆಗಳನ್ನು ಆಸಕ್ತಿಯಿಂದ ಅವಲೋಕಿಸುವ, ಧಾರ್ಮಿಕ ಗುರುಗಳನ್ನು ಓಲೈಸಿಕೊಳ್ಳುವ ಮತ್ತು ಅವರ ಕಾರ್ಯಕ್ಷೇತ್ರಗಳಲ್ಲಿ ಹಸ್ತಕ್ಷೇಪ ಮಾಡುವ ಅವಕಾಶಗಳು ಲಭ್ಯವಾದವು. ಮೊದಲ ಹಂತದ ಗುಪ್ತ ಹೇತುವಿಲ್ಲದ ಭಕ್ತಿ-ಭಾವಾವೇಶದ ವಾತಾವರಣದಲ್ಲಿ, ಸಾಮಂತರನ್ನು ಸರಿಗಟ್ಟಲೆಂಬಂತೆ ವರ್ತಕ ಸಮುದಾಯಗಳು ತಮ್ಮ ಸಂಪತ್ತನ್ನು ಧರ್ಮಕಾರ್ಯಗಳಿಗೆ ಮುಕ್ತಮನಸ್ಸಿನಿಂದ ಸಮರ್ಪಿಸಿದವು. ಆದರೆ ದೇವಾಲಯ ಭಂಡಾರದ ಧನಸಂಗ್ರಹ ಹೆಚ್ಚುತ್ತಿರುವುದನ್ನು ಕಂಡ ಅವರು ತಮ್ಮ ವೃತ್ತಿ ಪ್ರಗತಿಗಾಗಿ ಈ ಸಂಪತ್ಸಾಧನವನ್ನು ಬಳಸಿಕೊಳ್ಳಲು ಕ್ರಮೇಣ ಯೋಜನೆಗಳನ್ನು ಮಾಡತೊಡಗಿದರು. ನ್ಯಾಸಾಧಿಕಾರಿಗಳಾಗಿದ್ದ ಕೆಲವು ನಖರರು ತಮ್ಮ ಸ್ಥಾನಮಾನದ ಪ್ರಯೋಜನ ಪಡೆದುಕೊಂಡು, ನಿರ್ದಿಷ್ಟ ಬಡ್ಡಿದರದ ಮೇಲೆ ದೇವಾಲಯದ ಭಂಡಾರದಿಂದ ಸಾಲ ತೆಗೆದುಕೊಳ್ಳಲು ಪ್ರಾರಂಭಿಸಿದರು. ಏತನ್ಮಧ್ಯೆ, ಧಾರ್ಮಿಕ ಸಂಸ್ಥೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಸಂಪತ್ತು ಶೇಖರಗೊಳ್ಳತೊಡಗಿತ್ತು.[85]

ಇವೆಲ್ಲ ಒಡನಾಟಗಳು ವರ್ತಕರನ್ನು ಮಠದ ಆಚಾರ್ಯರೊಂದಿಗೆ ಹೆಚ್ಚು ನಿಕಟವಾಗಿಸಿದವು. ಮೊದಮೊದಲು ಶ್ರಮಣರಿಗೆ ಅನುಕೂಲವೆನಿಸಿದರೂ, ಕಾಲಕ್ರಮೇಣ ಈ ಸಂಬಂಧವು ಧಾರ್ಮಿಕ ಸಂಸ್ಥೆಗಳಿಗೆ ಹಿತಕಾರಿಯಾಗಿ ಉಳಿಯಲಿಲ್ಲ. ''ಮಹಾಮಂಡಲಾಚಾರ್ಯನು, ಆಚಾರ್ಯವರ್ಯನು, ರಾಜಗುರುವೂ ಆಗಿದ್ದ ಬಲತ್ಕಾರ ಗಣದ ಬಾಳಚಂದ್ರದೇವನು ಬೆಳ್ಗೊಳ ತೀರ್ಥದ ಅಗ್ರಗಣ್ಯರಾದ ಸಮಸ್ತ ಮಾಣಿಕ್ಯ ನಖರರನ್ನು ಪ್ರಿಯ ಗುಡ್ಡರನ್ನಾಗಿ'' ಸ್ವೀಕರಿಸಿದ್ದು ಅಂದು ಪ್ರಚಲಿತವಿದ್ದ ಮನೋಭಾವಕ್ಕೆ ಸಾಕ್ಷಿಯಾಗಿತ್ತು.[86] 12ನೆಯ ಶತಮಾನದ ಕೊನೆಯ ಪಾದದ ಸುಮಾರಿಗೆ ಸಾಮಂತರ ಮತ್ತು ಉನ್ನತಾಧಿಕಾರಿಗಳ ಪೋಷಣೆ ಕ್ಷೀಣಿಸತೊಡಗಿ, ಧರ್ಮಗುರುಗಳನ್ನು ಹಾಗೂ ಧಾರ್ಮಿಕ ಸಂಸ್ಥೆಗಳನ್ನು ಪೋಷಿಸುವ

---

85. ಧಾರ್ಮಿಕ ಪ್ರಮುಖರು ಮಾಡಿದ ಮರುದತ್ತಿಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ ಇದು ಸ್ಪಷ್ಟಗೊಳ್ಳುತ್ತದೆ. ಉದಾರಹಣೆಗೆ, ಶ್ರೀಪಾಲತ್ರೈವಿದ್ಯದೇವನು ಶಲ್ಯಗ್ರಾಮವನ್ನೆಲ್ಲ ದತ್ತಿಯಾಗಿ ಪಡೆದನು; ಆದರೆ, ಈ ದೇವಾಲಯದ ಸೇವೆಗಳಿಗಾಗಿ ಖುಷ್ಕಿ, ತರಿ, ತೋಟದ ಜಮೀನುಗಳ ನಿರ್ದಿಷ್ಟ ಭಾಗಗಳನ್ನು ಮಾತ್ರ ಮರುದತ್ತಿಯಾಗಿ ನೀಡಿ, ಮಿಕ್ಕ ಭಾಗವನ್ನು ಅವನು ತನ್ನಲ್ಲೇ ಇಟ್ಟುಕೊಂಡ. 1124ರ 569.

86. 456.

ಹಾಗೂ ರಕ್ಷಿಸುವ ಹೊಣೆ ವರ್ತಕ ಸಮುದಾಯದ ಮೇಲೆ ಹೆಚ್ಚು ಬಿದ್ದಾಗ ಅವರವರಲ್ಲಿ ಭಿನ್ನಾಭಿಪ್ರಾಗಳು ಉದ್ಭವಿಸಲು ಪ್ರಾರಂಭವಾದವು.[87] ಏಕೆಂದರೆ, ಧರ್ಮಸಂಸ್ಥೆಗಳಿಂದ ಒಬ್ಬರು ಹೆಚ್ಚಿಸಿಕೊಂಡ ಲಾಭವು ಮತ್ತೊಬ್ಬರ ಅಸೂಯೆಯನ್ನು ಕೆದಕಲು ಕಾರಣವಾಯಿತು.

ಅವಿಶ್ವಾಸದ ಕಂದರ : ನಗರಜಿನಾಲಯವನ್ನು ಕಟ್ಟಿಸಿದ ನಾಗದೇವನು ಅದರ ನಿರ್ವಹಣೆಯ ಜವಾಬ್ದಾರಿಯನ್ನು ಬೆಳ್ಗೊಳದ ಧಾರ್ಮಿಕ ಗುರುವೊಬ್ಬನಿಗೆ ವಹಿಸಿಕೊಡದೆ, ವರ್ತಕರಿಗೆ ವಹಿಸಿ, ಅವರ ನಿರ್ದೇಶನದಲ್ಲಿ ಸ್ಥಾನಿಕರು ಕಾರ್ಯ ನಿರ್ವಹಿಸುವಂತೆ ಮಾಡಿ, ಒಂದು ಹೊಸ ಪದ್ಧತಿಯನ್ನು ರೂಢಿಗೆ ತಂದನು.[88] ಇದು ಧಾರ್ಮಿಕರಲ್ಲಿದ್ದ ದಕ್ಷತೆಯ ಹಾಗೂ ನೈತಿಕತೆಯ ಕೊರತೆಯನ್ನಲ್ಲದೆ ಹೆಚ್ಚುತ್ತಿದ್ದ ವರ್ತಕರ ವರ್ಚಸ್ಸನ್ನು ಸಂಕೇತಿಸುವಂತಿದೆ. ದೇವಾಲಯಕ್ಕೆ ಬಿಟ್ಟ ದತ್ತಿಯ ನಿರ್ವಹಣೆಯ ಜವಾಬ್ದಾರಿಯನ್ನು – ತೋಟ, ಖುಷ್ಕಿ-ತರಿ ಜಮೀನು, ಮನೆ, ಅಂಗಡಿ, ಎಣ್ಣೆಗಾಣ, ಸಂಪತ್ತು, ಮೊದಲಾದವನ್ನು – ಸ್ಥಾನಿಕರಲ್ಲಿ ಹಂಚಿ, ಕೆಲವು ಷರತ್ತನ್ನು ಹೇರಿ, ಆಡಳಿತೆಯನ್ನು ಪರಿಪಾಲಿಸಿಕೊಂಡು ಬರಬೇಕೆಂದು ಕಡ್ಡಾಯಗೊಳಿಸಲಾಯಿತು. ಈ ಷರತ್ತುಗಳನ್ನು ಪೂರೈಸಲು, ನಿಷ್ಠೆಯಿಂದ ಆಡಳಿತೆಯನ್ನು ನಿರ್ವಹಿಸಲು, ಸ್ಥಾನಿಕರು ಸಮರ್ಥರಾಗಿರಲಿಲ್ಲವೆಂದು ಕಂಡುಬಂದಾಗ, ಹೊಸ ಬಗೆಯ ಏರ್ಪಾಟುಗಳನ್ನು ನಖರರು ಮಾಡಬೇಕಾಯಿತು. ನಗರ ಜಿನಾಲಯದ ಪೂಜಾವಿಧಾನಗಳನ್ನು ಸಮರ್ಪಕವಾಗಿ ನಿರ್ವಹಿಸದಿದ್ದ ಪೂಜಾಕಾರಿಗಳಿಗೆ ಎಚ್ಚರಿಕೆ ನೀಡಿ, ನಖರರು ಅವರನ್ನು ತರಾಟೆಗೆ ತೆಗೆದುಕೊಳ್ಳಬೇಕಾಯಿತೆಂದು, ನಿರ್ದಿಷ್ಟ ಪ್ರಮಾಣದ ಅಕ್ಕಿಯನ್ನು ದೇವರ ನೈವೇದ್ಯಕ್ಕೆ ಅವರು ಉಪಯೋಗಿಸಲೇ ಬೇಕೆಂಬುದನ್ನು ಕಡ್ಡಾಯಗೊಳಿಸುವ ಅವಶ್ಯಕತೆ ಉಂಟಾಯಿತೆಂಬುದನ್ನು 1279ರ ಒಂದು ಶಾಸನವು ಸ್ಪಷ್ಟಗೊಳಿಸುವುದು. ಪರಿಸ್ಥಿತಿಯು ಎಷ್ಟೊಂದು ಹದಗೆಟ್ಟಿತ್ತೆಂದರೆ, ದೇವದಾನ ಭೂಮಿಯನ್ನು ಒತ್ತೆಹಾಕುವುದು, ವಿಕ್ರಯಿಸುವುದು, ಇನ್ನಿತರ ಬಗೆಯಲ್ಲಿ ಅದನ್ನು ವಿಲೇವಾರಿ ಮಾಡುವುದು ಈ ಕಾಲದಲ್ಲಿ ಸಾಮಾನ್ಯವಾಗತೊಡಗಿತು. ದೇವದಾನ ಜಮೀನುಗಳನ್ನು ಒತ್ತೆ ಹಾಕುವುದಿಲ್ಲ, ಮಾರಲು ಪ್ರಯತ್ನಿಸುವುದಿಲ್ಲ ಹಾಗೂ ಯಾವುದೇ ಬಗೆಯಲ್ಲಿ ಅದನ್ನು ವಿಲೇವಾರಿ ಮಾಡುವುದಿಲ್ಲ ಎಂಬ ಕರಾರು ಪತ್ರವನ್ನು ಪೂಜಾರಿಗಳು ಬರೆದುಕೊಟ್ಟು, ಅದನ್ನು ನಖರರಿಗೊಪ್ಪಿಸುವ ಪ್ರಸಂಗವೂ ಉಂಟಾಯಿತು.[89]

---

87. ವರ್ತಕರು ಮತ್ತು ಶ್ರಮಣರ ಮಧ್ಯೆ ಮಾಡಿಕೊಳ್ಳಲಾದ ಅಥವಾ ಇಬ್ಬರನ್ನೂ ಒಳಗೊಂಡ ವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಮುಖ್ಯವಾದವುಗಳು 13ನೆಯ ಶತಮಾನದ 455, 1282ರ 456; 1288ರ 459.
88. 1195ರ 457.
89. 1288ರ 459.

ಇಷ್ಟೆಲ್ಲ ಹೊಣೆಹೊತ್ತ ವರ್ತಕರ ನೈತಿಕಮಟ್ಟವೇನೂ ಅಪ್ರಶ್ನಾತೀತವಾಗಿರಲಿಲ್ಲ. ಏಕೆಂದರೆ ಅವರಲ್ಲಿಯೂ ಕೆಲವರು ಕುಹಕ ವಿಧಾನಗಳಿಂದ ಸಂದರ್ಭದ ಲಾಭಗಳಿಸಿಕೊಳ್ಳಲು, ಸ್ವತಃ ಹೊರಬೇಕಾದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಆತುರರಾಗಿದ್ದುದನ್ನು ಬೆಳ್ಗೊಳದ ದಾಖಲೆಗಳು ಸ್ಪಷ್ಟಪಡಿಸುವುವು. ಬೆಳ್ಗೊಳ ಮತ್ತು ಜಿನನಾಥಪುರದ ವರ್ತಕರೆಲ್ಲ ಒಮ್ಮೆ ಸಭೆ ಸೇರಿ ತಮ್ಮ ತಮ್ಮ ವಾರ್ಷಿಕ ಆದಾಯದ ಒಂದು ಭಾಗವನ್ನು ದೇವಕಾರ್ಯಕ್ಕೆ ಕೊಡಲು ಒಪ್ಪಿ ಸನ್ನದನ್ನು ಹೊರಡಿಸಿದರು; ಆದರೆ, ಈ ಸನ್ನದಿಗೆ ಮಾಡಿದ ಸಹಿಯ ಶಾಯಿ ಆರುವುದಕ್ಕಿಂತ ಮುಂಚೆಯೇ ಕೆಲವು ವರ್ತಕರು ತಮ್ಮ ಆರ್ಥಿಕ ಅಭಾವದ ನೆಪವೊಡ್ಡಿ, ಈ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸಿದ್ದನ್ನು 13ನೆಯ ಶತಮಾನದ ಒಂದು ಶಾಸನವು ಸ್ಪಷ್ಟಗೊಳಿಸುವುದು.[90] ಇದೇ ಶತಮಾನದ ಅಂಚಿನಲ್ಲಿ ಮಹಾಮಂಡಲಾಚಾರ್ಯರು ಮತ್ತು ರಾಜಗುರುಗಳನ್ನೊಳಗೊಂಡ ಮೂಲಸಂಘದ ಎಲ್ಲ ಸದಸ್ಯರು ಮತ್ತೊಮ್ಮೆ ಸಭೆ ಸೇರಿ, ಮಾಣಿಕ್ಯ ನಖರರನ್ನು ಕರೆಸಿ, ಅಂದಿನಿಂದ 'ಖಾಣ, ಅಭ್ಯಾಗತ, ಕಟಕ, ಶೇಸೆ, ಬಸದಿ ಮತ್ತು ಮನಕ್ಷತ, ಮೊದಲಾದ ಕರಗಳನ್ನಲ್ಲದೆ ಗೊಮ್ಮಟ, ಕಮಠಪಾರ್ಶ್ವ, ಮಲ್ಲಿದೇವ, ಮತ್ತಿತರ ಬಸದಿಗಳ ಜಮೀನಿನ ಕರಗಳನ್ನು "ಸ್ವಂತಕ್ಕೆ ಪಡೆದುಕೊಳ್ಳುವುದಿಲ್ಲವೆಂಬ ಭರವಸೆಯನ್ನು" ಕೊಡಬೇಕೆಂದು ಒತ್ತಾಯಿಸಿದರು.[91] ಅಂದರೆ, ಈ ಕಾಲಕ್ಕಾಗಲೆ ಬಸದಿಗಳಿಗೆ ಸೇರಬೇಕಾಗಿದ್ದ ವರ(ಕರ)ಮಾನವನ್ನು ಕೆಲವು ಪ್ರಭಾವೀ ವರ್ತಕರು ಸ್ವಂತಕ್ಕೆ ಕಬಳಿಸತೊಡಗಿದ್ದರೆಂಬುದನ್ನು ಇದು ಸ್ಪಷ್ಟಪಡಿಸುವುದು.

ವರ್ತಕರ ಹೊಣೆಯನ್ನು ನಿಖರಪಡಿಸಿದಂತೆ, ಈ ಕಾಲದ ಧಾರ್ಮಿಕ ಗುರುಗಳ ಹೊಣೆಯನ್ನೂ ಸ್ಪಷ್ಟಪಡಿಸಬೇಕಾದ ಅವಶ್ಯಕತೆ ಉಂಟಾಯಿತೆಂದು ತೋರುವುದು. ಮುನಿ ನಯಕೀರ್ತಿದೇವ ಮತ್ತು ಸಮಸ್ತ ವರ್ತಕರು ಕೂಡಿ ಹಿರಿಯಭಂಡಾರಿ ರಾಮನಾಯಕನ ಸಮ್ಮುಖದಲ್ಲಿ ಮಾಡಿಕೊಂಡ ಲಿಖಿತ ಒಡಂಬಡಿಕೆಯು ಇದಕ್ಕೊಂದು ನಿದರ್ಶನ.[92] ಅದು ಇಂತಿದೆ: (1) ಬೆಳ್ಗೊಳದ ಪ್ರತಿಯೊಬ್ಬ ವರ್ತಕನು ಎಂಟು ಪಣಗಳನ್ನು ಒಂದೇ ಕಂತಿನಲ್ಲಿ ಶಾಶ್ವತ ನಿಧಿಗೆ ಸಂದಾಯಮಾಡಬೇಕು; (2) ನ್ಯಾಯ, ಅನ್ಯಾಯ, ಮಳಬ್ರಯ, ಮುಂತಾದ ಸುಂಕಗಳನ್ನಲ್ಲದೆ ನಾಗರಿಕ ಅವಶ್ಯಕತೆಗಳನ್ನೆಲ್ಲ ಈ ಶಾಶ್ವತ ನಿಧಿಯ ಬಡ್ಡಿಯಿಂದ ಆಚಾರ್ಯನು ಸ್ವತಃ ಪೂರೈಸಬೇಕು; (3) ಉಳಿದೆಲ್ಲ ಸುಂಕಗಳನ್ನು ತುಂಬುವ ಹೊಣೆಗಾರಿಕೆಯನ್ನು ಪಟ್ಟಣದ ನಿವಾಸಿಗಳ ಮೇಲೆ ಹೇರದೆ ಸ್ವತಃ ಆಚಾರ್ಯನೇ ಅವುಗಳನ್ನೆಲ್ಲ ನಿರ್ವಹಿಸಬೇಕು.

90. 479.
91. 458. ಈ ನಿಬಂಧನೆಯನ್ನೂ ಉಲ್ಲಂಘಿಸಿ, ಅರ್ಚಕರು ಭೂಮಿಯನ್ನು ಅಡವಿಟ್ಟರು. ತಮ್ಮ ಸ್ವಂತ ಲಾಭಕ್ಕಾಗಿ ಅವರು ಇಂತಹ ಸಂದರ್ಭಗಳನ್ನು ಧಾರಾಳವಾಗಿ ಬಳಸಿಕೊಂಡರು - 1654ರ 485ನ್ನು ನೋಡಿ.
92. 13ನೆಯ ಶತಮಾನದ 455.

ಪ್ರಭಾವಿ ವರ್ತಕರ ಒಂದು ವರ್ಗ ತನ್ನ ಅಂತಸ್ತು, ಸಂಪತ್ತು ಮತ್ತು ವ್ಯವಹಾರ ಚಾತುರ್ಯ, ಮುಂತಾದವನ್ನು ಬಳಸಿಕೊಂಡು ಮಠದ ಆಚಾರ್ಯರ ಮೇಲೆ ಪ್ರಭಾವ ಬೀರತೊಡಗಿದ್ದಲ್ಲದೆ, ಅವರನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಳ್ಳಲು, ತನಗೆ ಬೇಕಾದಂತೆ ಬಳಸಿಕೊಳ್ಳಲು, ಹವಣಿಸತೊಡಗಿದ್ದುದರಿಂದ ಅದನ್ನು ತಡೆಗಟ್ಟಲು ಅವಶ್ಯಕ ಕ್ರಮ ಕೈಕೊಳ್ಳಬೇಕಾದ ಪ್ರಮೇಯ ಉದ್ಭವಿಸಿತೆಂದು ಕಂಡುಬರುವುದು.

''ಒಬ್ಬಿಬ್ಬರು ತಾವು ವರ್ತಕ ನಾಯಕರೆಂದು ನಟಿಸುತ್ತ 'ಆಚಾರ್ಯರಿಗೆ ಕವುಟಿಲ್ಯ (ಕುಟಿಲ) ಬುದ್ಧಿಯಂ ಕಲಿಸಿ', 'ಒಂದಕ್ಕೊಂದು ನೆನೆದು ತೊಳಸಾಟವ (ಗೊಂದಲ) ಮಾಡಿ', 'ಹಾಗ ಬೇಳೆಯನಳಿಸಿ ಬೇಡಿಕೊಳ್ಳಿಯೆಂದು ಆಚಾರ್ಯರಿಗೆ ಮನಂಗೊಟ್ಟೊಡೆ' (ಹಾಗ ಒಂದನ್ನು, ಬೇಳೆಯೊಂದನ್ನು ಕಬಳಿಸಲು, ಹಾಗೂ ಹೆಚ್ಚು ಹೆಚ್ಚು ಆಚಾರ್ಯರನ್ನು ಅನ್ಯಾಯಮಾರ್ಗಕ್ಕೆಳೆಯಲು ಪ್ರೋತ್ಸಾಹಿಸಿದರೆ), ಅಂತಹವರನ್ನು 'ಸಮಯದ್ರೋಹರು, ರಾಜದ್ರೋಹರು, ಬಣಂಜಿಗ ಪಗೆಯರು (ಬಣಜಿಗರ ಶತ್ರುಗಳು), ನೆತ್ತಗೆಯರು (ಜೂಜುಕೋರರು), ಕೊಲೆಕವರ್ತ್ತೆಗೊಡೆಯರು (ಕೊಲೆ ಸುಲಿಗೆಗಾರರು)', ಎಂದು ಖಂಡಿಸಲಾಗುವುದೆಂಬ ಎಚ್ಚರಿಕೆಯನ್ನು ಕೊಡಲಾಯಿತ್ತಲ್ಲದೆ, ಇಂತಹ ದೌರ್ಜನ್ಯಗಳು ನಡೆಯುತ್ತಿದ್ದುದನ್ನು ಕಂಡೂಕಾಣದಂತಿದ್ದ ನಖರಂಗಳನ್ನೇ 'ಈ ಧರ್ಮವನ್ನು.... ಕೆಡಿಸಿದವ'ವರೆಂದು ಪರಿಗಣಿಸಬೇಕೆಂದೂ, 'ಆಚಾರ್ಯರರು, ದುಷ್ಟರು' ಮಾತ್ರ ಇದಕ್ಕೆ ಹೊಣೆಗಾರರೆಂದು ತಿಳಿಯಬಾರದೆಂದು ಘೋಷಿಸಲಾಯಿತು.

ಇಂಥವರಿಂದ ಮಠಾಧಿಪತಿಗಳನ್ನು ರಕ್ಷಿಸಿ ಅವರಿಗೆ ಗೌರವಯುತ ಸ್ವಾತಂತ್ರ್ಯವನ್ನು ಒದಗಿಸಿಕೊಡಲು ಮತ್ತೊಂದು ಕಟ್ಟಳೆಯನ್ನ ತರಲಾಯಿತು. ಅದರಂತೆ ಸಮಸ್ತ ನಖರಗಳ ಅನುಮತಿಯನ್ನು ಪಡೆಯದೆ, ಒಬ್ಬಿಬ್ಬ ಗ್ರಾಮಣಿಗಳು (ನಾಯಕರೆಂದು ಕರೆದು ಕೊಳ್ಳುವವರು) ಆಚಾರ್ಯರ 'ಅರಮನೆಯನ್ನು' (ಮಠವನ್ನು) ಪ್ರವೇಶ ಮಾಡಕೂಡದು - ಹೀಗೆ ಮಾಡಲು ಪ್ರಯತ್ನಿಸುವವರನ್ನು 'ಸಮಯ ದ್ರೋಹರೆಂದು' ಪರಿಗಣಿಸಬೇಕೆಂದೂ ತೀರ್ಮಾನಿಸಲಾಯಿತು. ಈ ಎಲ್ಲ ನಿಯಮಗಳನ್ನು ವರ್ತಕ ಸಮುದಾಯವು ಕಡ್ಡಾಯವಾಗಿ ಪಾಲಿಸಿಕೊಂಡು ಬರಬೇಕಲ್ಲದೆ, ಧಾರ್ಮಿಕ ಜೀವನವನ್ನು ಸಹಜ ಪರಿಸ್ಥಿತಿಗೆ ತರಲು, ಪರಂಪಾರಗತವಾಗಿ ಬಂದಿದ್ದ ಹಕ್ಕು ಬಾಧ್ಯತೆಗಳನ್ನು ಸ್ವತಂತ್ರವಾಗಿ ನಿರ್ವಹಿಸಲು, ತಕ್ಕ ವಾತಾವರಣವನ್ನು ನಿರ್ಮಿಸಲು, ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಒತ್ತಾಯಿಸಲಾಯಿತು. ಈ ಕಟ್ಟಳೆಗಳನ್ನು ಮುರಿಯಲು ಇಲ್ಲವೆ ಮಾರ್ಪಾಡುಮಾಡಲು ಪ್ರಯತ್ನಿಸುವವರನ್ನು, ತಾವಾಗಲಿ ಬೇರೆಯವರಾಗಲಿ ಕೊಟ್ಟ ದಾನವನ್ನು ಕಬಳಿಸಲು ಪ್ರಯತ್ನಿಸಿದವರನ್ನು, ತಕ್ಕ ಶಿಕ್ಷೆಗೆ ಒಳಪಡಿಸಬೇಕೆಂದೂ ನಿರ್ಣಯಿಸಲಾಯಿತು.

ಕವಲು ದಾರಿಯಲ್ಲಿ ಸಮಾಧಿ ಮರಣ* : *ಧಾರ್ಮಿಕ ಮತ್ತು ಶ್ರಾವಕ ವರ್ಗಗಳು : ಈ ಕಾಲದ ಪುರೋಹಿತರ ಮೂರು ವರ್ಗಗಳನ್ನು ಗುರುತಿಸಬಹುದು: ಒಂದನೆಯದು, ದೇವಾಲಯಗಳಲ್ಲಿ ಪೂಜಾಕಾರ್ಯ ನೆರವೇರಿಸಿ ದೇವರಿಗೆ ನೈವೇದ್ಯ ಅರ್ಪಿಸುತ್ತಿದ್ದ ಪೂಜಕಾರರ ಮತ್ತು ಆಚಾರ್ಯರದು; ಎರಡನೆಯದು, ಮಹಾಮಂಡಲಾಚಾರ್ಯ, ರಾಜಗುರು ಮತ್ತು ಗಣಾಧಿಪತಿಗಳೆಂಬುವವರದು (ಇವರ ಕಾರ್ಯಕ್ಷೇತ್ರ ಹಾಗೂ ಕಾರ್ಯ ಸ್ವರೂಪವು ನಿಶ್ಚಿತವಾಗಿರದೆ, ಕಾಲಕಾಲಕ್ಕೆ, ವ್ಯಕ್ತಿವ್ಯಕ್ತಿಗೆ, ಅದು ಬದಲಾಗುತ್ತಿತ್ತೆಂದು ಕಾಣುವುದು; ಇವರು ವರ್ಚಸ್ವಿ ಶ್ರಾವಕರೊಂದಿಗೆ ಸಂಪರ್ಕವಿಟ್ಟುಕೊಂಡಿದ್ದರಲ್ಲದೆ, ನಾಗರಿಕ ಜವಾಬ್ದಾರಿಗಳನ್ನು ನಿರ್ವಹಿಸಲೂ ಸಮರ್ಥರಾಗಿದ್ದರು); ಮೂರನೆಯದು, ಯಾವುದೇ ನಿರ್ದಿಷ್ಟ ಬಿರುದು ಅಥವಾ ಅಧಿಕಾರ ಸ್ಥಾನವಿಲ್ಲದ ವರ್ಗದವರದು. ತಮ್ಮ ಸರಳ ಜೀವನ ಮತ್ತು ಆಧ್ಯಾತ್ಮಿಕ ಆಚರಣೆಗಳಿಂದ ಈ ವರ್ಗದವರು ಉನ್ನತ ಸಿದ್ಧಿ ಸಾಧನೆಯಲ್ಲಿ ತೊಡಗಿ, ಸಂಘದಲ್ಲೂ, ಸಮಾಜದಲ್ಲೂ, ಗೌರವಯುತ ಸ್ಥಾನಪಡೆದವರಾಗಿದ್ದರು. ಕಡಿಮೆ ಸಂಖ್ಯೆಯಲ್ಲಿದ್ದ ಮೂರನೆಯ ವರ್ಗವು ಒಂದನೆಯ ಮತ್ತು ಎರಡನೆಯ ವರ್ಗಗಳ ವರ್ಚಸ್ಸಿನಡಿ ತಾತ್ಸಾರಕ್ಕೊಳಗಾಗಿತ್ತು.

ಆ ಕಾಲದ ಶ್ರಾವಕರನ್ನೂ ಮೂರು ವರ್ಗಗಳಲ್ಲಿ ವಿಂಗಡಿಸಬಹುದು : ಒಂದನೆಯದು, ಆಳರಸರದು. ಜೈನರೋ ಜೈನೇತರರೋ ಆಗಿದ್ದು ಇವರು ತಮ್ಮ ರಾಜಕೀಯ ಉದ್ದೇಶ ಈಡೇರಿಸಿಕೊಳ್ಳಲು, ಇಲ್ಲವೆ ತಮ್ಮ ರಾಜ್ಯದ ಸೇವೆಯಲ್ಲಿ ನಿರತರಾದ ಅಧಿಕಾರಿಗಳನ್ನು ಓಲೈಸಿಕೊಳ್ಳಲು, ಅವರ ಇಚ್ಛೆಯ ಮೇರೆಗೆ ದಾನ, ದತ್ತಿ ನೀಡುತ್ತಿದ್ದರು; ಎರಡನೆಯದು, ಶಕ್ತಿಶಾಲಿ ಮತ್ತು ಪ್ರಭಾವಶಾಲಿ ಸಾಮಂತರದು. ಇವರು ರಾಜ್ಯದಲ್ಲಿ ವಿಶಿಷ್ಟ ಸ್ಥಾನ ಹೊಂದಿದ್ದರಲ್ಲದೆ, ಧರ್ಮದ ನಿಷ್ಠಾವಂತ ಪ್ರತಿಪಾದಕರೂ, ಪೋಷಕರೂ, ಆಗಿದ್ದರು. ಇವರಲ್ಲನೇಕರು ಉದಾರ ಕೊಡುಗೆಗಳನ್ನು ನೀಡಿದರಲ್ಲದೆ, ನಿಧಿ, ಸೇವೆ, ಸ್ಮಾರಕ ಮತ್ತು ಧಾರ್ಮಿಕ ವಿಧಿ-ಕರ್ತವ್ಯಗಳ ನಿರ್ವಹಣೆಯನ್ನು ಭದ್ರಪಡಿಸಲೆತ್ನಿಸಿದರು. ಬೆಳ್ಗೊಳದಲ್ಲಿ ಅವರು ತಳೆದ ಆಸಕ್ತಿ ಕಾಲಸೀಮಿತವಾಗಿದ್ದರೂ ಸಾಕಷ್ಟು ಪ್ರಭಾವ ಬೀರುವಂತಹುದಾಗಿತ್ತು; ಮೂರನೆಯದು, ಬೆಳ್ಗೊಳ ಮತ್ತು ಅದರ ಪರಿಸರ ಪ್ರದೇಶದ ಶ್ರೀಮಂತ ಹಾಗೂ ನಿಷ್ಠಾವಂತ ವರ್ತಕರದ್ದು. ಅವರಲ್ಲಿ ಪಟ್ಟಣಸ್ವಾಮಿ, ಕಡಲು ವ್ಯಾಪಾರಿ, ರತ್ನ ವ್ಯಾಪಾರಿ ಮುಂತಾದ ವರ್ಚಸ್ವಿ ವ್ಯಕ್ತಿಗಳಿದ್ದರು. ನಿಧಾನವಾಗಿ ಹಾಗೂ ನಿಶ್ಚಿತ ಗತಿಯಲ್ಲಿ ನಾಗರಿಕ ಮತ್ತ ಧಾರ್ಮಿಕ ಜೀವನಕ್ಕೆ ಕಾಲಿಟ್ಟ ಇವರು ಸಾಮಂತರ ನಿರ್ಗಮನದಿಂದ ತೆರವಾದ ಸ್ಥಾನವನ್ನು ತುಂಬಿ, ಕೊನೆಗೆ ಆಚಾರ್ಯರಿಗೂ ಇತರ ಪುಣ್ಯಾನುಯಾಯಿಗಳಿಗೂ ಸಮಸ್ಯೆಯಾಗುವಷ್ಟು ಶಕ್ತಿಶಾಲಿಗಳಾಗಿ ಬೆಳೆದು ನಿಂತರು. ಈ ಧಾರ್ಮಿಕ ಕೇಂದ್ರದ ಅವಿಭಾಜ್ಯ ಅಂಗವಾದ ವರ್ತಕ ಸಮುದಾಯವು, ಸಾಮಂತರ ಇಲ್ಲವೆ ಉನ್ನತಾಧಿಕಾರಿಗಳ ಸಮುದಾಯಗಳಿಗಿಂತಲೂ ಹೆಚ್ಚಿನ ಪಾತ್ರವನ್ನು ಬೆಳ್ಗೊಳದ ಇತಿಹಾಸದಲ್ಲಿ ವಹಿಸಿತು.

ಸಮಾಧಿ ಮರಣ- ಕೌಟುಂಬಿಕ ಆಸಕ್ತಿ : ಈ ವರ್ಗಗಳಡಿಯಲ್ಲಿ ಸಾಮಾಜಿಕ-ಆರ್ಥಿಕ

ಜೀವನವು ಏರಿಳಿತ ಕಂಡಂತೆ, ಆಧ್ಯಾತ್ಮಿಕ ಜೀವನವೂ, ವಿಶೇಷತಃ ಸಮಾಧಿ ಮರಣ ಪ್ರಕ್ರಿಯೆಯು, 12-13ನೆಯ ಶತಮಾನಗಳಲ್ಲಿ ಏರಿಳಿತ ಕಂಡಿತು. ಸಾಮಂತರ ಮತ್ತು ಉನ್ನತಾಧಿಕಾರಿಗಳ ಪಾಲು ಇದರಲ್ಲಿ ಪ್ರಮುಖವಾಗಿದ್ದರೂ ಶ್ರಾವಕರ ಪ್ರಾಬಲ್ಯವೇನೂ ಅಲ್ಪವಾಗಿರಲಿಲ್ಲ. 12ನೆಯ ಶತಮಾನದ ಸಮಾಧಿ ಮರಣ ಪ್ರಕ್ರಿಯೆಗಳಲ್ಲಿ ಗಂಗರಾಜ ಮತ್ತವನ ಕುಟುಂಬದವರಿಗೇ ಸಿಂಹಪಾಲು ಮೀಸಲಾಗಿದ್ದುದನ್ನು ಈಗಾಗಲೇ ಕಂಡುಕೊಳ್ಳಲಾಗಿದೆ. ಅವನ ತಾಯಿ ಪೋಚಿಕಬ್ಬೆ, ಹೆಂಡತಿ ಲಕ್ಷ್ಮೀಮತಿ, ಹೆಂಡತಿಯ ಸೋದರಿ ದೇಮಿಯಕ್ಕ – ಇವರೆಲ್ಲ ಕೇವಲ ಎರಡು ವರ್ಷ ಕಾಲಾವಧಿಯಲ್ಲಿ ಸಾವನ್ನು ಸ್ವಾಗತಿಸಿದರು.[93] ಲಕ್ಷ್ಮೀಯ ಸೋದರ ಬೂಚಣ ಮತ್ತು ಗಂಗರಾಜನ ಸೋದರನ ಮಗ ಏಚಿರಾಜರು ಅವರನ್ನು ಮುಂಬಾಲಿಸಿದರು ಇಲ್ಲವೆ ಹಿಂಬಾಲಿಸಿದರು.[94] 1115-1145ರ ಮಧ್ಯೆ ಗಂಗರಾಜನ ಕಟುಂಬದೊಂದಿಗೆ ಸಂಪರ್ಕ ಹೊಂದಿದ್ದ ಅನೇಕ ಆಚಾರ್ಯರೂ ಸಮಾಧಿ ಮೂಲಕ ಮರಣವನ್ನಪ್ಪಿದರು. ಮೇಘಚಂದ್ರತ್ರೈವಿದ್ಯದೇವ, ಶುಭಚಂದ್ರಸಿದ್ಧಾಂತದೇವ ಮತ್ತು ಬಾಳಚಂದ್ರದೇವರ ಮರಣಾನಂತರ ಗಂಗರಾಜ ಮತ್ತು ಅವನ ಕುಟುಂಬದವರು ಇವರೆಲ್ಲರ ಗೌರವಾರ್ಥ ನಿಸಿಧಿಗಳನ್ನು ನಿಲ್ಲಿಸಿದರು.[95] ಆದರೆ, ಗಂಗರಾಜ ಮಾತ್ರ ಸ್ವತಃ ಈ ವ್ರತವನ್ನಾಚರಿಸಲಿಲ್ಲ.

ಸುಮಾರು ಇದೇ ಬಗೆಯ ಪರಂಪರೆಯುಳ್ಳ ಇನ್ನೊಂದು ಮನೆತನವೆಂದರೆ ರಾಣಿ ಶಾಂತಲೆಯ ತವರಿನವರದು. ಶಾಂತಲೆಯ ತಾಯಿ ಮಾಚಿಕಬ್ಬೆ, ಸೋದರರಾದ ಬಲದೇವ ಮತ್ತು ಸಿಂಗಿಮಯ್ಯ, ಮಾಚಿಕಬ್ಬೆ ಮತ್ತು ಶಾಂತಲೆಯರ ಗುರುವಾದ ಪ್ರಭಾಚಂದ್ರ ಸಿದ್ಧಾಂತದೇವರು 1131-1145ರ ಕಾಲಾವಧಿಯಲ್ಲಿ ಮರಣವನ್ನು ಆಹ್ವಾನಿಸಿದರು.[96]

ಸ್ತ್ರೀಯರ ಅಗ್ಗಳಿಕೆ: 1145ರ ನಂತರ ಮರಣದ ವಿಧಾನವು ಬದಲಾಗಿ ಹೊಸ ಬಗೆಯ ವ್ರತಗಳಿಗೆ ಎಡೆಮಾಡಿಕೊಟ್ಟಂತೆ ಕಂಡುಬರುವುದು. ಹುಳ್ಳರಾಜ, ನಾಗದೇವ, ಮೊದಲಾದ ವರ್ಚಸ್ವಿ ಅಧಿಕಾರಿಗಳಾರೂ ಸಮಾಧಿಮರಣವನ್ನು ಸ್ವತಃ ಆಚರಿಸಲಿಲ್ಲ; ಅಲ್ಲದೆ, ತಮ್ಮ ಕುಟುಂಬದ ಯಾವ ಸದಸ್ಯರ ಮೇಲೂ ಅದನ್ನವರು ಹೇರಲಿಲ್ಲ. ದೇವಕೀರ್ತಿ ಮತ್ತು ನಯಕೀರ್ತಿದೇವ ಮುಂತಾದ ಆಚಾರ್ಯರ ಮರಣದ ನಂತರ, ಅವರು ಸಾಕಷ್ಟು ಅದ್ದೂರಿಯಿಂದ ನಿಸಿಧಿಗಳನ್ನು ನಿರ್ಮಿಸಿದರೇನೂ ನಿಜ;[97] ಆದರೆ, ವಾಸ್ತವವಾಗಿ,

93. ಅನುಕ್ರಮವಾಗಿ 1120ರ 136; 1121ರ 157 ಮತ್ತು 1120ರ 158.

94. ಅನುಕ್ರಮವಾಗಿ 1113ರ 155 ಮತ್ತು 12ನೆಯ ಶತಮಾನದ 532.

95. ಅನುಕ್ರಮವಾಗಿ 1115ರ 156, 1123ರ 135 ಮತ್ತು 12ನೆಯ ಶತಮಾನದ 81.

96. ಅನುಕ್ರಮವಾಗಿ 1131ರ 176, 1139 ರ 174-175 ಮತ್ತು 1145ರ 173.

97. 1163 ರ 70-71 ಮತ್ತು 1176ರ 73.

ಸಮಾಧಿಯಿಂದ ಮಡಿದ ಇಂತಹ ಆಚಾರ್ಯರ ಸ್ಮರಣಾಚರಣೆಗಳೂ ಈ ಕಾಲದಿಂದ ವಿರಳವಾಗತೊಡಗಿದ್ದವು.

12ನೆಯ ಶತಮಾನದ ಮೊದಲರ್ಧಕಾಲಘಟಕದ ಲಕ್ಷಣಗಳಲ್ಲಿ ಇಚ್ಛಾಮರಣ ಮತ್ತು ಅಂಥ ಮರಣಗಳನ್ನು ನಿಸಿಧಿಗೊಳಿಸಿದವರಲ್ಲಿ ಸಾಮಂತ ಮನೆತನಗಳ ಮಹಿಳೆಯರದೇ ಸಿಂಹಪಾಲಾಗಿತ್ತು. ಹೆಗ್ಗಡಿತಿ ಬಾಗಣಬ್ಬೆ (ಮುನಿ ಭಾನುಕೀರ್ತಿ), ಜಕ್ಕಣಬ್ಬೆ (ಶುಭಚಂದ್ರದೇವ), ಲಕ್ಷೀದೇವಿ, ಬೂಚಣ (ಮಾಘಣಂದಿತ್ರೈವಿದ್ಯದೇವ), ದೇಮಿಯಕ್ಕ ಮತ್ತು ಮಾಚಿಕಬ್ಬೆ (ಪ್ರಭಾಚಂದ್ರಸಿದ್ಧಾಂತದೇವ), ಏಚಿಯಕ್ಕ ಮತ್ತು ನಾಗಿಯಕ್ಕ, (ಬಲದೇವ ಮತ್ತು ಸಿಂಗಿಮಯ್ಯ) ಇದಕ್ಕೆ ಉದಾಹರಣೆ.[98] ಇವರ ಗೌರವಾರ್ಥ ನಿಸಿಧಿಗಳನ್ನು ಸ್ಥಾಪಿಸಿ, ಅವುಗಳ ಪೋಷಣೆಯನ್ನು ಪೂರೈಸಿಕೊಟ್ಟ ಗಂಗರಾಜ (ಶುಭಚಂದ್ರ,ಪೋಚಾಂಬಿಕೆ, ಲಕ್ಷ್ಮೀಮತಿ), ಹುಳ್ಳರಾಜ (ದೇವಕೀರ್ತಿ), ನಾಗದೇವ (ನಯಕೀರ್ತಿದೇವ), ಬೊಪ್ಪ (ಏಚಿರಾಜ), ಮೊದಲಾದವರಾರೂ ಸ್ವತಃ ಸಮಾಧಿವ್ರತವನ್ನು ಕೈಗೊಳ್ಳಲಿಲ್ಲವೆಂಬುದೂ ಗಮನಾರ್ಹ.[99]

ಸಂಖ್ಯೆಯಲ್ಲಿ ಕಡಿಮೆಯಾಗಿದ್ದರೂ, ವರ್ತಕ ಸಮುದಾಯದ ಪಾತ್ರ ಹೆಚ್ಚೂ ಕಡಿಮೆ ಇದೇ ಜಾಡು ಹಿಡಿದಿದ್ದನ್ನು ಕಾಣುವೆವು. ಹೊಯ್ಸಳಸೆಟ್ಟಿ ಮತ್ತು ಅವನ ಮಗ ಬೂಚಣ ತೀರಿಕೊಂಡಾಗ ಬೂಚಣನ ತಾಯಿ ಚಟ್ಟಿಕಬ್ಬೆಯು ಇವರಿಗೆ ನಿಸಿಧಿಗಳನ್ನು ನಿಲ್ಲಿಸಿದಳು.[100] ಮುನಿ ನಯಕೀರ್ತಿಯು ಸಾವನ್ನಪ್ಪಿದಾಗ ಅಮಾತ್ಯನೂ, ಪಟ್ಟಣಸ್ವಾಮಿಯೂ ಆಗಿದ್ದ ನಾಗದೇವನು ಅವನ ಗೌರವಾರ್ಥ ನಿಸಿಧಿಗೆಯನ್ನು ನಿಲ್ಲಿಸಿದನು.[101] ಬೆಳ್ಗೊಳದಲ್ಲಿ ಸಮಾಧಿ ಮರಣವನ್ನಪ್ಪಿದ ಇನ್ನಿತರ ಸೆಟ್ಟಿ-ಸೆಟ್ಟಿಕವ್ವೆಯರಲ್ಲಿ ಚಾಮುಂಡನ ಹೆಂಡತಿ ದೇಮಿಯಕ್ಕ, ಮಲ್ಲಸೆಟ್ಟಿಯ ಮಗಳು (ಹೆಸರು ಅಳಿಸಿದೆ), ಬಸವಣ್ಣ ಮತ್ತು ಅವನ ತಾಯಿ ದೇಮವ್ವ (ಮೊಸಳೆಯ ದೇವಿಸೆಟ್ಟಿಯ ಹೆಂಡತಿ)ರ ಹೆಸರುಗಳು ಮಾತ್ರ ಉಳಿದುಬಂದಿವೆ.[102]

ಈ ವತ್ರವನ್ನು ಸ್ವತಃ ಆಚರಿಸಲು ಅಥವಾ ಅಂಥವರನ್ನು ಗೌರವಿಸಲು ಈ ಕಾಲದ ಸೆಟ್ಟಿ-ಸೆಟ್ಟಿಕವ್ವೆಯರು ತೋರಿದ ಉತ್ಸಾಹ ಅಷ್ಟಕ್ಕಷ್ಟೆ. ಧಾರ್ಮಿಕ ಸಂಸ್ಥೆಗಳ ಹಣಕಾಸು ವ್ಯವಹಾರಗಳಲ್ಲಿ ಅವರಿಗಿದ್ದ ಉತ್ಸಾಹದ ಪ್ರಮಾಣವನ್ನು ನಾವಿಲ್ಲಿ ಕಾಣುವುದಿಲ್ಲ. ಈ

98. 12ನೆಯ ಶತಮಾನದ 81; 1123ರ 135; 1113ರ 155; 1115ರ 156; 1120ರ 158; 1145 ರ 173; 1139ರ 174 ಮತ್ತು 175.
99. 1123ರ 135; 1120ರ 136; 1122ರ 157; 1163ರ 70-71; 1176ರ 73; 12ನೆಯ ಶತಮಾನದ 532..
100. 1130ರ 208.
101. 457.
102. 158, 358 ಮತ್ತು 301.

ಕಾಲದಲ್ಲಿ ಕಂತಿಯರೂ ಅಪರೂಪವಾಗುವರು. ಶ್ರಾವಕಿಯರ ದಾಖಲೆಗೆ ಹೋಲಿಸಿ ನೋಡಿದರೆ, ಮರಣ ಕ್ಷೇತ್ರದಲ್ಲಿ ಇವರ ಸಾಧನೆ ತುಂಬಾ ನಿರಾಶಾದಾಯಕವಾಗಿರುವುದು. ಈ ಎರಡು ಶತಮಾನಗಳಲ್ಲಿ ವ್ರತಾಚರಣೆಯ ಮೂಲಕ ಮರಣವನ್ನು ಆಹ್ವಾನಿಸಿದ ಒಂದೇ ಒಂದು ನಿದರ್ಶನವನ್ನು ದಿವಾಕರಣಂದಿಯ ಶಿಷ್ಯಳಾದ ಶ್ರೀಮತಿಗಂತಿಯು ಒದಗಿಸುವಳು. ಶಿಷ್ಯೆ ಮಾರಿಕಬ್ಬೆಗಂತಿಯು ಈಕೆಯ ಗೌರವಾರ್ಥ 1119ರಲ್ಲಿ ನಿಸಿಧಿಯನ್ನು ನಿಲ್ಲಿಸಿದಳು.[103] ಈ ಪುಣ್ಯಕೇಂದ್ರದಲ್ಲಿ ಸಮಾಧಿಮರಣವನ್ನಪ್ಪಿದ ಕಂತಿಯರ ಉದಾಹರಣೆಗಳಲ್ಲಿ ಇದು ಕಟ್ಟಕಡೆಯದಾಗಿದ್ದು ಮುಂದಿಷ ಎಂಟು ಶತಮಾನಗಳ ಇತಿಹಾಸದಲ್ಲಿ ಇಂತಹ ಮತ್ತೊಂದು ನಿದರ್ಶನ ದೊರೆಯದು.

ಸಮಾರೋಪ : ಈ ಕಾಲಾವಧಿಯ ಜೀವನ-ಮರಣದ ಮಾದರಿಗಳನ್ನು 12-13ನೆಯ ಶತಮಾನದ ಸಮಾಧಿ ಮರಣದ ಇತಿಹಾಸವು ಪ್ರತಿನಿಧಿಸುತ್ತಿದ್ದು ಇದರಲ್ಲಿ ಭಾಗಿಗಳಾದವರನ್ನು ಹೀಗೆ ಗುರುತಿಸಬಹುದು:

(ಅ) ವರ್ಚಸ್ವಿ ಶ್ರಾವಕರನ್ನು ಗಳಸಿಕೊಂಡು ತಮ್ಮ ಮರಣಾನಂತರ ಅವರಿಂದ ಗೌರವಕ್ಕೊಳಗಾದ ಶ್ರಮಣರು ಇವರಲ್ಲಿ ಮೊಟ್ಟಮೊದಲಿಗರು. ಅಂಥವರಲ್ಲಿ ಮೇಘಚಂದ್ರತ್ರೈವಿದ್ಯದೇವ, ಶುಭಚಂದ್ರಸಿದ್ಧಾಂತದೇವ, ಭಾನುಕೀರ್ತಿ, ಪ್ರಭಾಚಂದ್ರ ಸಿದ್ಧಾಂತದೇವ, ದೇವಕೀರ್ತಿ ಮತ್ತು ನಯಕೀರ್ತಿಸಿದ್ಧಾಂತದೇವರು, 12ನೆಯ ಶತಮಾನದ ದಾಖಲೆಗಳಲ್ಲಿ ಎದ್ದುಕಾಣುವ ಮುನಿಗಳು.[104]

(ಆ) ಸಮಾಧಿ ಮರಣ ಕೈಕೊಂಡ, ಆದರೆ ವರ್ಚಸ್ವಿ ಗುಡ್ಡರನ್ನು ಓಲೈಸಲೆತ್ನಿಸದ, ಎರಡನೆಯ ವರ್ಗಕ್ಕೆ ಸೇರಿದವರು. ಈ ಶ್ರಮಣರಿಗೆ ಸಂಘದ ಸದಸ್ಯರು ಇಲ್ಲವೆ ಅವರ ನೇರ ಶಿಷ್ಯರು ನಿಸಿಧಿಗಳನ್ನು ಸ್ಥಾಪಿಸಿದರು. ಮುನಿ ಮಲ್ಲಿಷೇಣನು ಇದಕ್ಕೆ ಏಕೈಕ ಉದಾಹರಣೆ.[105] ಅವನು 1129ರಲ್ಲಿ ಸಲ್ಲೇಖನಾ ಮರಣವನ್ನಪ್ಪಿದಾಗ ಅವನ ಸಂಘವೆಲ್ಲ ಸೇರಿ ಕವಿ

---

103. 484.

104. ಮೊದಲ ಮೂರು ಶಾಸನಗಳು ಗಂಗರಾಜನ ಕುಟುಂಬಕ್ಕೆ (156, 135 ಮತ್ತು 81), ನಾಲ್ಕನೆಯದು ರಾಣಿ ಶಾಂತಲೆಯ ಕುಟುಂಬಕ್ಕೆ (173), ಐದನೆಯದು ಮಂತ್ರಿ ಹುಳ್ಳರಾಜನ (70 ಮತ್ತು 71) ಮತ್ತು ಕೊನೆಯದು ನಾಗದೇವನಿಗೆ (73, 457)ಸಂಬಂಧಿಸಿವೆ. ಇಂತಹ ಉದಾಹರಣೆಗಳು 13ನೆಯ ಶತಮಾನದಲ್ಲಿ ಕಂಡುಬರುವುದಿಲ್ಲ. ಆದರೂ ನೋಡಿ, 1214ರ 539.

105. 13ನೆಯ ಶತಮಾನದ ಸಂದೇಹಾಸ್ಪದ ಉದಾಹರಣೆಯೆಂದರೆ ಪದ್ಮಣಂದಿದೇವನದು. ನೋಡಿ- 1256ರ 375.

ಮಲ್ಲಿನಾಥನಿಂದ ಕಾವ್ಯವನ್ನು ಬರೆಸಿ, ಖ್ಯಾತ ರೂವಾರಿ ಗಂಗಾಚಾರಿಯಿಂದ ಸುಂದರವಾದ ನಿಸಿಧಿ ಸ್ತಂಭವನ್ನು ಕೆತ್ತಿಸಿ ನಿಲ್ಲಿಸಿತು.[106]

(ಇ) ಮೂರನೆಯ ವರ್ಗಕ್ಕೆ ಸೇರಿದವರಾರೂ ಮರಣ ವಿಧಿಯನ್ನು ಶಾಸ್ತ್ರೋಕ್ತವಾಗಿ ಪೂರೈಸಲಿಲ್ಲ, ಆದರೆ, ಅವರ ಅಂತ್ಯವನ್ನು ಸಾಕಷ್ಟು ಪ್ರಸಿದ್ಧಿಗೊಳಿಸಲಾಯಿತು. ಅತ್ಯಧಿಕ ಸಂಖ್ಯೆಯಲ್ಲಿದ್ದ ಇವರು ಮೊದಲೆರಡು ವರ್ಗಗಳನ್ನು ಆಡಂಬರದಲ್ಲಿ ಮೀರಿಸಿದ್ದರು. ಇಂಥವರಲ್ಲಿ ಪ್ರಮುಖನಾದವನು ಮಲಧಾರಿದೇವನ ಶಿಷ್ಯನಾದ ಶುಭಚಂದ್ರಸಿದ್ಧಾಂತದೇವ. ಲೋಕಾಮಗ್ರಹಿಯಾಗಿ ಭೂಮಂಡಲದಲ್ಲಿ ಯಾವ ದಿಕ್ಕಿನಲ್ಲಿ ಸಂಚರಿಸಿದರೂ, ಅಲ್ಲಿ 'ನಗುಮುಖದಿಂದ ಧರ್ಮಪ್ರಭಾವವನ್ನು ಬಿತ್ತರಿಸಿದ' ಈತನನ್ನು ಸ್ವರ್ಗಲೋಕದ ಅಪ್ಸರೆಯರು ಮತ್ತು ಭೂಲೋಕದ ದಿಕ್ಕನ್ಯೆಯರು ಮುಕ್ತಕಂಠದಿಂದ ಪ್ರಶಂಸಿಸಿದರಂತೆ! ಗಂಗರಾಜ ಹಾಗೂ ಅವನ ನಾದಿನಿ ಜಕ್ಕಣಬ್ಬೆಯ ಗುರುವಾಗಿದ್ದ ಈ ಮುನಿಯು ಅವರಿಂದ ನಿಸಿಧಿಗೌರವ ಗಳಿಸಿಕೊಂಡನು.[107]

ಮಹಾಮಂಡಲಾಚಾರ್ಯ ಕೀರ್ತಿದೇವನು 'ಕಲಿ, ವಾದಿ ಮತ್ತು ವಾಗ್ಮಿ' ಯಾಗಿದ್ದನಲ್ಲದೆ ಭೂಮಂಡಲದ ಪಂಡಿತರಲ್ಲಿಯೇ ಅಗ್ರೇಶನೆನಿಸಿದ್ದ. 'ಧೃಡ ವಾದಗಳ ಕಹಳೆಯ ಗರ್ಜನೆಯಲ್ಲಿ ಗಟ್ಟಿಗನೂ ಮತ್ತು ಬಲಿಷ್ಠನೂ ಆಗಿದ್ದ ಈತನು ಉಗ್ರ-ಕುತರ್ಕ ವಾದಗಳಲ್ಲಿ ತೊಡಗಿದ ನಿರರ್ಥಕರ ಸಂಹಾರಕನೆನಿಸಿದ್ದ. ಚಾರ್ವಾಕ, ಬೌದ್ಧ, ನೈಯಾಯಿಕ, ಕಪಿಲ ಮತ್ತು ವೈಶೇಷಿಕರನ್ನು ಬೆದರಿಸಿ ಓಡಿಸಿದ ಈ ಕೀರ್ತಿದೇವನು ಅಪ್ಸರೆಯರ ಹೃದಯ ಸೂರೆಗೊಂಡವನಾಗಿದ್ದ. ಈತನ ನಿರ್ಗಮನದಿಂದಾಗಿ ಮುನಿ ಸಮುದಾಯವು ಈ ಪ್ರಪಂಚದಲ್ಲಿ ನಮಗೆ ಆಶ್ರಯತಾಣವೆಲ್ಲಿದೆ, ಎಂದು ದುಃಖಿಸಿತಂತೆ! ಅವನ ಆಧ್ಯಾತ್ಮಿಕ ಶಿಷ್ಯರಾದ ಲಕ್ಕಣಂದಿ, ಮಾಧವೇಂದು ಮತ್ತು ತ್ರಿಭುವನಾಖ್ಯಾನರು, ಹುಳ್ಳರಾಯನ ಮೂಲಕ ಗುರುನಿಷಧ್ಯಾವನ್ನು ಪ್ರತಿಷ್ಠಾಪಿಸಿದರು.[108] ಗುಣಚಂದ್ರನ ಶಿಷ್ಯನೂ ಬೆಳ್ಗೊಳದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಪಾತ್ರಧಾರಿಯೂ ಆದ[109] ನಯಕೀರ್ತಿಸಿದ್ಧಾಂತದೇವನು ಭಂಡಾರಿ ಹುಳ್ಳರಾಜ ಮತ್ತು ಮಂತ್ರಿ ನಾಗದೇವನ ಗುರುವಾಗಿದ್ದನು. 'ಕೀರ್ತಿ ಪ್ರಕಾಶದಿಂದ ದಿಗ್ಮಂಡಳಗಳನ್ನು ಶುಭ್ರಗೊಳಿಸಿದ ' ಈತನು ಮರಣಹೊಂದಿದಾಗ ಅವನ 'ಸ್ಮರಣೆಯ

---

106. 77. ಗಂಗಾಚಾರಿಯು ಗಂಗರಾಜನ ಮನೆತನದ ಕಲಾವಿದನಾಗಿದ್ದನೆಂಬುದು ಸ್ವಾರಸ್ಯಕರವಾಗಿದೆ (ಶೆಟ್ಟರ್, ಉಪರೋಕ್ತ ಪು. 21). ಗಂಗರಾಜನು ತನ್ನ ಯಾವ ಶಾಸನದಲ್ಲೂ ಈ ಸಂತನನ್ನು ಸ್ಮರಿಸುವುದಿಲ್ಲ; ಈ ನಿಸಿಧಿಸ್ಮಾರಕದಲ್ಲೆಲ್ಲೂ ಗಂಗರಾಜನನ್ನು ಹೆಸರಿಸಿಲ್ಲ.

107. 1123ರ 135.

108. ಅಧ್ಯಾಯ 6 ನೋಡಿ.

109. ಎ ಕ II, 73.

ಗೌರವ ಕೃತ್ಯವನ್ನು ಮಾಡಲಿಚ್ಛಿಸಿ' ಮಹಾಮಾತ್ಯ ನಾಗದೇವನು ನಿಸಿಧ್ಯಾಲಯವನ್ನು 1176ರಲ್ಲಿ ನಿರ್ಮಿಸಿದನು.[110]

ಶ್ರೀಪಾಲಯೋಗೀಂದ್ರನನ್ನು ಮಲ್ಲಿಷೇಣಮಲಧಾರಿದೇವ ಮತ್ತು ತ್ರೈವಿಧ್ಯಶ್ರೀಪಾಲಯೋಗೀಂದ್ರ ಎಂದೂ ಕರೆಯಲಾಗುತ್ತಿತ್ತು.[111] ವಿಜಯವಿಲಾಸದ ಕರ್ತೃವಾದ ಈತನು 'ವಾಧೀಭಸಿಂಹ ', 'ವಾದೀಕೋಲಾಹಲ' ಮತ್ತು 'ತಾರ್ಕಿಕ ಚಕ್ರವರ್ತಿ' ಎಂದೂ ಮಾನ್ಯತೆ ಪಡೆದಿದ್ದ. ಚಲ್ಯದಲ್ಲಿ ಜಿನಾಲಯವೊಂದನ್ನು ಕಟ್ಟಿಸಿ, ಅದಕ್ಕೆ ಹೊಯ್ಸಳರ ಹೆಸರನ್ನು ಕೊಟ್ಟು, ಇದರ ನಿರ್ವಹಣೆಗಾಗಿ 1124ರಲ್ಲಿ ಅರಸ ವಿಷ್ಣುವರ್ಧನನಿಂದ ಶಲ್ಯ ಗ್ರಾಮವನ್ನು ಪಡೆದ ಮುನಿ ಈತನು. ಈ ಮಹಾವಾದಿಯ ಮರಣವನ್ನು ಅವನ ಶಿಷ್ಯೋತ್ತಮನಾದ ದೇವಕೀರ್ತಿದೇವನು ಸಾಂಪ್ರದಾಯಿಕ ನಿಸಿಧಿ ಫಲಕವನ್ನು ನಿಲ್ಲಿಸುವ ಮೂಲಕ ಆಚರಿಸದೆ, ಅವನ 'ಗೌರವಕೃತ್ಯ'ವಾಗಿ ಕುಂಬೆಯನಹಳ್ಳಿಯಲ್ಲಿ ಪರವಾದಿಮಲ್ಲ ಜಿನಾಲಯವನ್ನು ಸ್ಥಾಪಿಸಿದನು. ಸ್ಮರಣೋತ್ಸವದಲ್ಲಿ ದೇವಕೀರ್ತಿಯ ನೆರವಿಗೆ ನಿಂತವರು ಮಹಾಪ್ರಧಾನಿ, ಸರ್ವಾಧಿಕಾರಿ, ತಂತ್ರಾಧಿಕಾರಿಯಾಗಿದ್ದ ಕಮ್ಮಟದ ಮಾಚಯ್ಯ ಮತ್ತು ಅವನ ಮಾವ ಬಾಲಯ್ಯ, ಕುಂದಾದ ಹೆಗ್ಗಡೆ, ಹರಿಯಣ್ಣಹೆಗ್ಗಡೆ , ಅಶ್ವಾಧ್ಯಕ್ಷ ಹಾಗೂ ಹಿರಿಯ ಭಂಡಾರಿ ಹುಳ್ಳರಾಜನ ಭಾವ ಮೊದಲಾದ ನಾಯಕರು.

ಈ ಎಲ್ಲ ವಿವರಗಳು ಸ್ಪಷ್ಟಪಡಿಸುವುದೇನೆಂದರೆ: (1) 12-13ನೆಯ ಶತಮಾನಗಳಲ್ಲಿ ಸಮಾಧಿ ಮರಣವನ್ನು ಕೈಕೊಂಡ ಶ್ರಮಣ-ಕಂತಿಯರ ಸಂಖ್ಯೆಯು ಆ ಹಿಂದಿನ ಕಾಲಾವಧಿಯ ಸಂಖ್ಯೆಯೊಂದಿಗೆ (6-9ನೆಯ ಶತಮಾನಗಳು) ಹೋಲಿಸಿ ನೋಡಿದರೆ, ತುಂಬಾ ನಿರಾಶಾದಾಯಕವಾಗಿರುವುದು. (2) ಅವರಲ್ಲಿ ಬಹುತೇಕ ಆಚಾರ್ಯರು ಹೊಯ್ಸಳ ರಾಜ್ಯದ ವರ್ಚಸ್ವೀ ಶ್ರಾವಕ-ಶ್ರಾವಕಿಯರ ಹೆಮ್ಮೆಯ ಗುರುಗಳಾಗಿದ್ದರೆಂಬುದು; (3) ಸುಸಂಸ್ಕೃತ ವರ್ಗದ ಶ್ರಾವಕರಿಗಿಂತ ಶ್ರಾವಕಿಯರು ಸಮಾಧಿಮರಣದಲ್ಲಿ ತೀವ್ರಾಸಕ್ತಿ ತಳೆದಿದ್ದುದು; (4) 12ನೆಯ ಶತಮಾನದಲ್ಲಿ ಸನ್ಮಾನಿತರಾದ ಅರ್ಧದಷ್ಟು ಜನರನ್ನು – (ಅವರು ಸಾಂಕೇತಿಕವಾಗಿ ಸಮಾಧಿಮರಣ ಕ್ರಿಯೆಯನ್ನು ಆಚರಿಸಲಿ ಇಲ್ಲವೇ ವಿಧಿನಿಯಮ ಮೂಲಕ ಪೂರೈಸಿರಲಿ)– ಬೇರೆ ಬೇರೆ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಸೇವೆಗಳನ್ನು ಮೆಚ್ಚಿದ ಪ್ರತಿಷ್ಠಿತ ಶ್ರಾವಕ ವರ್ಗವು ನಿಸಿಧಿಗಳಿಂದ ಅವರನ್ನು ಗೌರವಿಸಿದ್ದು; (5) ಸಮಾಧಿಮರಣ ಕ್ರಿಯೆಯಲ್ಲಿ ವರ್ತಕ ಸಮುದಾಯದ ಪಾತ್ರ ಅತ್ಯಂತ ಗೌಣವಾಗಿ ಅವರು ಲೌಕಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ಹೆಚ್ಚು ತೊಡಗಿಸಿಕೊಂಡದ್ದು, ಈ ಕಾಲದ ಪ್ರಮುಖ ಅಂಶವಾಗಿದೆ.

110. 12ನೆಯ ಶತಮಾನದ 572.

111. 569.

12-13ನೆಯ ಶತಮಾನಗಳಲ್ಲಿ ಈ ದೇವಾಲಯ-ಪಟ್ಟಣದ ಭೌತಿಕ ಹಾಗೂ ಆಧ್ಯಾತ್ಮಿಕ ಪ್ರಗತಿ ಮಾತ್ರ ಗಮನಾರ್ಹ ಪ್ರಮಾಣದ್ದಾಗಿತ್ತು. ಅಲ್ಲದೆ, ಆ ಹಿಂದಿನ ಐದು ಅಥವಾ ಆ ನಂತರದ ಆರು ಶತಮಾನಗಳಲ್ಲಿ ಮಾಡಿದ ಸಾಧನೆಗಿಂತ ಈ ಸಾಧನೆ ತೀರ ವಿಶಿಷ್ಟ ಬಗೆಯದಾಗಿತ್ತು.

ಅಧ್ಯಾಯ ಮೂರು

ಪ್ರಕ್ಷುಬ್ಧ ಕಾಲ

***ಸಮಾಧಿ ಮರಣ ಒಂದು ಮಾಸಿದ ನೆನಪು (1300 - 1900)* :** ಭೌತಿಕ ಪ್ರಗತಿ, ಶ್ರಾವಕ-ಶ್ರಾವಕಿಯರ ಪಾತ್ರ, ದೇವಾಲಯ ನಿರ್ಮಾಣ, ಮುಂತಾದ ಕಾರ್ಯಗಳು 1300ರ ನಂತರ ಮಂದಗತಿ ಪಡೆದುಕೊಂಡರೂ, ಕೆಲವು ಹಿತೈಷಿಗಳು ಅವನ್ನೆಲ್ಲ ಜೀವಂತವಾಗಿಡಲು ಹಾಗೂ ಬೆಳ್ಗೊಳದ ಸಂಸ್ಥೆಗಳನ್ನು ಸಂರಕ್ಷಿಸಲು ಶ್ರಮಿಸಿದರು. ಈ ಕಾಲಕ್ಕಾಗಲೇ ಚಿಕ್ಕಬೆಟ್ಟವು ಗೌಣವಾಗಿ ಇದರ ಸ್ಥಾನವನ್ನು ಮೊದಲು ದೊಡ್ಡಬೆಟ್ಟ, ನಂತರ ಪಟ್ಟಣ ಪ್ರದೇಶ ಪಡೆದುಕೊಂಡಿದ್ದವು.

13ನೆಯ ಶತಮಾನದ ನಂತರ ಚಿಕ್ಕಬೆಟ್ಟದ ಮೇಲೆ ಶಾಸನಗಳನ್ನು ಬರೆಸುವುದೇ ಅಪರೂಪವಾಯಿತು.[1] ಗೊಮ್ಮಟ ಮಹಾವಿಗ್ರಹದ ಸುತ್ತಲೇ ಚಟುವಟಿಕೆಗಳು ಹೆಚ್ಚು ಪರಿಭ್ರಮಿಸತೊಡಗಿ ಸಮಾಧಿಮರಣಕ್ಕೆ ಪ್ರಸಿದ್ಧವಾಗಿದ್ದ ಕಟವಪ್ರದ ಪ್ರಾಮುಖ್ಯತೆ ಕುಗ್ಗತೊಡಗಿದ್ದು ಇದಕ್ಕೆ ಕಾರಣವಾಗಿರಲು ಸಾಧ್ಯ.[2] ವ್ಯಕ್ತಿ ಹಾಗೂ ಸಂಸ್ಥೆಗಳ ಮೇಲೆ ತನ್ನ ಹಿಡಿತವನ್ನು ಸ್ವಲ್ಪ ಮಟ್ಟಿಗೆ ಸಡಿಲಿಸಿಕೊಂಡ ಮೂಲಸಂಘವು ಒಂದು ಬಗೆಯಲ್ಲಿ ಬದುಕಿಯೂ ಪ್ರೇತಜೀವನವನ್ನು ಆಗ ನಡೆಸತೊಡಗಿತ್ತು. ತಮಗೆ ಬೇಕಾದಾಗ ಮಾತ್ರ ಸಂಘದಿಂದ ಲಾಭ

---

1. 1300ರ ತರುವಾಯ ಹೊರಡಿಸಿದ ಚಿಕ್ಕಪುಟ್ಟ ಟಿಪ್ಪಣಿ ಹಾಗೂ ತುಂಡು ಬರಹಗಳನ್ನೊಳಗೊಂಡ ಶಾಸನಗಳು ಇಂತಿವೆ : ಎಕ II, 74-76, 169, 252-254. ಇವುಗಳಲ್ಲಿ ಎರಡು ಮಾತ್ರ (72 ಮತ್ತು 252) ಈ ಕೇಂದ್ರದಲ್ಲಿ ಜರುಗಿದ ಬೆಳವಣಿಗೆಯ ಬಗ್ಗೆ ಮಾಹಿತಿ ನೀಡುವುವು. ಇದಕ್ಕೆ ಭಿನ್ನವಾಗಿ, ದೊಡ್ಡಬೆಟ್ಟದ ಶಾಸನಗಳು 107 ಘಟನೆಗಳನ್ನು, ಪಟ್ಟಣ ಪ್ರದೇಶದ ಶಾಸನಗಳು 52 ಮತ್ತು ನೆರೆಗ್ರಾಮಗಳ ಶಾಸನಗಳು 13 ಘಟನೆಗಳನ್ನು ಪರಿಚಯಿಸುವುವು.
2. 13ನೆಯ ಶತಮಾನದ ನಂತರದ ಮೂಲಸಂಘದ ಆವರ್ತನೆಯ ಬಗ್ಗೆ ಅಧ್ಯಾಯ II ನ್ನು ನೋಡಿ.

ಪಡೆದುಕೊಂಡು, ಲಾಭವಿಲ್ಲದಿದ್ದಾಗ ಅದನ್ನು ಅನಾದರಕ್ಕೊಳಪಡಿಸುವುದು ಈ ಕಾಲದ ಲಕ್ಷಣವಾಯಿತು. ಇದರಿಂದಾಗಿ ಸಂಘದ ಘನತೆಗೆ ಒಂದು ಬಗೆಯಲ್ಲಿ ಚ್ಯುತಿ ಬಂತು. ಸಂಘದ ಆಶ್ರಯದಲ್ಲಿದ್ದ ಆಚಾರ್ಯರು 1300ರ ನಂತರ ತಮ್ಮ ಅಡಿ ಸಂಘವನ್ನಿಟ್ಟುಕೊಳ್ಳಲು ಹವಣಿಸತೊಡಗಿದರು. ಈ ಕಾಲದ ವರ್ತಕರ ಒಡನಾಟದಲ್ಲಿಯೂ ಸಾಕಷ್ಟು ಸ್ಥಿತ್ಯಂತರಗಳಾದವು. ಅವರಲ್ಲಿ ಕೆಲವರು ಅಧಿಕಾರಿಗಳಿಂದ ತೆರವಾದ ಸ್ಥಾನ ತುಂಬಿ, ಧಾರ್ಮಿಕ ಸಂಸ್ಥೆಗಳ ಸಂರಕ್ಷಣೆಗೆ ನಿಂತರೆ, ಮತ್ತೆ ಕೆಲವರು ಧಾರ್ಮಿಕ ಸಂಸ್ಥೆಗಳಿಗೊದಗಿದ ಕ್ಷುಬ್ಧ ಪರಿಸ್ಥಿತಿಯ ದುರುಪಯೋಗ ಪಡೆದುಕೊಳ್ಳುತ್ತಾ ವೈಯಕ್ತಿಕ ಲಾಭಕ್ಕಾಗಿ ಈ ಸಂಸ್ಥೆಗಳನ್ನು ಬಳಸಿಕೊಳ್ಳತೊಡಗಿದರು. 17ನೆಯ ಶತಮಾನದ ಮಾರವಾಡಿ ಭಾಷೆಯ ಒಂದು ಶಾಸನದಲ್ಲಿ ಈ ಪ್ರವೃತ್ತಿ ತುಂಬ ಅರ್ಥಪೂರ್ಣವಾಗಿ ಅಭಿವ್ಯಕ್ತಿಗೊಂಡಿದೆ. ಗೊಮ್ಮಟ ದರ್ಶನಕ್ಕೆ ಬಂದ ಮಾರವಾಡದ ಯಾತ್ರಿಗಳು ದೇವರನ್ನು ಪ್ರಾರ್ಥಿಸುತ್ತಾ "ನಮ್ಮ ಹಣವನ್ನು (ನಿನ್ನಲ್ಲಿ) ಠೇವಣಿ ಇಡುವೆವು ; ನಿನ್ನ ಸಂಪತ್ತನ್ನು (ನಾವು) ಕೊಂಡುಯ್ಯುವೆವು",[3] ಎಂಬ ಮಾತು ಸ್ಥೂಲವಾಗಿ ಆ ಕಾಲದ ಭಕ್ತರ ವ್ಯವಹಾರ ಪ್ರವೃತ್ತಿಯನ್ನು ಪ್ರತಿಬಿಂಬಿಸುವಂತಿದೆ.

9-10ನೆಯ ಶತಮಾನಗಳಲ್ಲಾದಂತೆ 17-19ನೆಯ ಶತಮಾನಗಳಲ್ಲಿಯೂ ಯಾತ್ರಿಕರ ಸಂಖ್ಯೆ ಹೆಚ್ಚಳಗೊಂಡಿತು. ಆದರೆ ಮೊದಲ ಕಾಲಘಟ್ಟದ ಯಾತ್ರಿಗಳು ಈ ತೀರ್ಥಕ್ಕೆ ಕಾಯಕ್ಲೇಶದಲ್ಲಿ ತೊಡಗಲು ಇಲ್ಲವೆ ಅಂಥವರಿಗೆ ಪ್ರಣಾಮ ಸಲ್ಲಿಸಲು ಬಂದಿದ್ದರೆ, ಎರಡನೆಯ ಕಾಲಘಟಕದಲ್ಲಿ, ವಿಶೇಷವಾಗಿ ಮಹಾರಾಷ್ಟ್ರ ಮತ್ತು ಮಾರವಾಡದಿಂದ ಬಂದವರಲ್ಲಿ ಹೆಚ್ಚಿನವರು, ಭೌತಿಕ ಅಥವಾ ಆಧ್ಯಾತ್ಮಿಕ ಇಚ್ಛೆಗಿಂತ ಹೆಚ್ಚಾಗಿ ದೊಡ್ಡಬೆಟ್ಟದ ಮಹಾವಿಗ್ರಹದ ಅಗಾಧ ಸೌಂದರ್ಯವನ್ನು ಸವಿಯಲು ಬಂದವರಾಗಿದ್ದರು. ಸುಖವಿಹಾರದಲ್ಲಿ ತೊಡಗಿದ ಶಾಲಾಬಾಲಕರಂತೆ, ಶೈಲಶಿಲೆ, ಬಂಡೆಗಲ್ಲು, ಬೆಟ್ಟದ ಹಾಸು, ಅಲ್ಲದೆ ಲಭ್ಯವಿದ್ದ ಎಲ್ಲ ಸ್ಥಳಗಳಲ್ಲಿ ಈ ಯಾತ್ರಿಗಳು ತಮ್ಮ ಹೆಸರುಗಳನ್ನು ಗೀಚಿದರು. ಸುಮಾರು 1600 ರನಂತರ ದೊಡ್ಡಬೆಟ್ಟದ ಮಹಾವಿಗ್ರಹವು ಇಂತಹ ಯಾತ್ರಿಕರ ಅನೇಕ ತಂಡಗಳನ್ನು ಆಕರ್ಷಿಸಿದ್ದೇನೊ ನಿಜ, ಆದರೆ ಧರ್ಮ ಸಂಸ್ಥೆಗಳ ಪೋಷಣೆಗೆ ದೊಡ್ಡ ಪ್ರಮಾಣದ ದಾನದತ್ತಿಗಳೇನೂ ಅವರಿಂದ ಹರಿದುಬರಲಿಲ್ಲ.

ಈ ಕಾಲದ (1300-1900) ಇತಿಹಾಸದಲ್ಲಿ ಎರಡು ಸ್ಪಷ್ಟ ಹಂತಗಳನ್ನು ಗುರುತಿಸಬಹುದು : ಮೊದಲ ಹಂತ (1300-1600), ಉನ್ನತ ಭೌತಿಕ ಸ್ಥಿತಿಯಿಂದ ಸಂಕಷ್ಟದ ಹಂತಕ್ಕೆ ಇಳಿದದ್ದು; ಎರಡನೆಯ ಹಂತ (1600-1900), ಸಂಸ್ಥೆಗಳನ್ನು ಸಂರಕ್ಷಣೆಗೊಳಿಸುವ ಯತ್ನವು ತೀವ್ರಗೊಂಡರೂ ಅದೊಂದು ಕ್ಷುಬ್ಧ ಕಾಲವಾಗಿ ಪರಿವರ್ತನೆಗೊಂಡದ್ದು.

---

3. ಎಕ II, 17ನೆಯ ಶತಮಾನದ 306.

ಘರ್ಷಣೆಯ ಮೊದಲ ಘಟ್ಟ **(1300-1600)**: 'ವಾದೀಭಸಿಂಹ' ರ ಮಹಾಯುಗವು 14ನೆಯ ಶತಮಾನದ ಸುಮಾರಿಗೆ ಮುಕ್ತಾಯದ ಹಂತ ಮುಟ್ಟಿದಾಗ ಸೈದ್ಧಾಂತಿಕ ಸಮರವು ಕೊನೆಗೊಂಡು, ಪ್ರತಿಸ್ಪರ್ಧಿ ಮತಗಳೊಡನೆ ಮುಚ್ಚುಮರೆಯಿಲ್ಲದ ಘರ್ಷಣೆ ಆರಂಭವಾಯಿತು. ತುಂಗಭದ್ರಾ ನದಿಯ ಉತ್ತರಕ್ಕೆ ಈ ಘರ್ಷಣೆ ಜೈನ ಪ್ರತಿಷ್ಠಾನಗಳನ್ನು ಅಪವಿತ್ರಗೊಳಿಸುವಷ್ಟು ಉಗ್ರಸ್ವರೂಪ ತಾಳಿತು. ಇಂಥ ಚಳುವಳಿಯು ತುಂಗಭದ್ರೆಯ ದೂರ ದಕ್ಷಿಣಕ್ಕೂ ಕ್ರಮೇಣ ಹಬ್ಬಿ ಅದುವರೆಗೂ ಜೈನರಿಗಿದ್ದ ವಿಶೇಷ ಧಾರ್ಮಿಕ ಹಕ್ಕುಗಳನ್ನು ಪ್ರಶ್ನಿಸುವ ಉಲ್ಬಣ ಹಂತವನ್ನು ತಲುಪಿತು. ಕೆಲ ಕಾಲದವರೆಗೆ ತಳಮಳಿಸುತ್ತಿದ್ದ ಜೈನ-ಶ್ರೀವೈಷ್ಣವ ವಿರಸವನ್ನು ಹೇಗೋ ಹೊಯ್ಸಳರು ತಮ್ಮ ಆಳ್ವಿಕೆಯ ಕೊನೆಯವರೆಗೆ ತಡೆದಿದ್ದರು; ಆದರೆ ಆ ರಾಜ್ಯದ ಪತನಾನಂತರ ಈ ಕುದಿಬುಗ್ಗೆಯು ಚಿಮ್ಮಿ ಪುಟಿದೆದ್ದು, ಹರಿಹಾಯತೊಡಗಿತು.

ಭವ್ಯರು - ಭಕ್ತರ ಘರ್ಷಣೆ : 1336ರಲ್ಲಿ ಹೊಯ್ಸಳ ರಾಜ್ಯ ಪತನಗೊಂಡಿತು. ಅವರ ಸ್ಥಳ ತುಂಬಿದ ವಿಜಯನಗರದರಸರಿಗೆ ಶ್ರವಣಬೆಳ್ಗೊಳದತ್ತ ದೃಷ್ಟಿ ಹಾಯಿಸಲು ಸ್ವಲ್ಪ ಕಾಲ ಹಿಡಿಯಿತು. ಇವರು ಕೈಗೆತ್ತಿಕೊಂಡ ಪ್ರಥಮ ಸಮಸ್ಯೆ ಎಂದರೆ ಶ್ರೀವೈಷ್ಣವರ ದುಂಡಾವರ್ತನೆಯ ವಿರುದ್ಧ ಜೈನರು ಸಲ್ಲಿಸಿದ್ದ ತಕರಾರು ಮನವಿಯ ವಿಚಾರಣೆ. ಇದು ನಡೆದದ್ದು 1368ರಲ್ಲಿ.

ವಿಜಯನಗರದರಸನಾದ ವೀರಬುಕ್ಕರಾಯನು "ಆನೆಗೊಂದಿ, ಹೊಸಪಟ್ಟಣ, ಪೆನುಗೊಂಡ ಮತ್ತು ಕಲ್ಲೇಹ ಪಟ್ಟಣವನ್ನೊಳಗೊಂಡಂತೆ ಎಲ್ಲ ನಾಡುಗಳ" ಜೈನರನ್ನು ಮುಂದಿಟ್ಟುಕೊಂಡು, ಅವರ ತಕರಾರಿಗೆ ಪರಿಹಾರ ಸೂಚಿಸಿ, ಒಂದು ರಾಜಶಾಸನವನ್ನು ಹೊರಡಿಸಿದನು. (1) ಅನನ್ಯಕಾಲದಿಂದಲೂ ಜೈನರಿಗಿದ್ದ ವಿಶೇಷ ಹಕ್ಕುಗಳನ್ನು ಇತ್ತೀಚೆಗೆ ಪ್ರಶ್ನಿಸಲು ತೊಡಗಿದುದರ ಬಗ್ಗೆ, ಮತ್ತು (2) ಪರಮತೀಯರಿಂದ ಜೈನರಿಗೆ ಉಂಟಾಗಿದ್ದ ಕಿರುಕುಳಕ್ಕೆ ಈ ನಿರ್ಣಯ ಸಂಬಂಧಿಸಿತ್ತು. 'ಭವ್ಯರು' (ಅಥವಾ ಜಿನನ ಪುಣ್ಯಶಾಲಿ ಅನುಯಾಯಿಗಳು) ಮತ್ತು 'ಮುನಿವರ್ಯರ ರಾಜನಾದ' ರಾಮಾನುಜನ 'ಭಕ್ತರು' (ಶ್ರೀವೈಷ್ಣವರು) ಈ ಘರ್ಷಣೆಯ ಎರಡು ಪ್ರಬಲ ವಿರೋಧಿ ಶಕ್ತಿಗಳಾಗಿದ್ದವು.

ಇತಿಹಾಸದ ಅಪೂರ್ವ ಘಟಕವಾಗಿದ್ದ 14ನೆಯ ಶತಮಾನದಲ್ಲಿ ಈ ಬಿಕ್ಕಟ್ಟು ಎಷ್ಟೊಂದು ಉಲ್ಬಣಗೊಂಡಿತ್ತೆಂದರೆ, ಆಳರಸನೇ ಈ ಸಮಸ್ಯೆಯನ್ನು ಸ್ವತಃ ಕೈಗೆತ್ತಿಕೊಂಡು ಬಗೆಹರಿಸಬೇಕಾಯಿತು. ಜೈನರಲ್ಲದೆ, ತಿರುಕೋವಿಲ್, ಪೆರುಮಾಳ್‌ಕೋವಿಲ್ ಮತ್ತು ತಿರುನಾರಾಯಣಪುರದ ಆಚಾರ್ಯರನ್ನೊಳಗೊಂಡ ಹದಿನೆಂಟು ನಾಡುಗಳ ಶ್ರೀವೈಷ್ಣವರು, ಉಳಿದೆಲ್ಲ ಸಮಯಿಗಳು, ಸಾತ್ವಿಕರು, ಮೋಷ್ಟಿಕರು, ಪವಿತ್ರ ಸೇವೆಯವರು, ಪವಿತ್ರ ಪಾದದವರು, ಪವಿತ್ರ ಕುಲದವರು, ನಲವತ್ತೆಂಟು ಮುಖಂಡರು, ಸಾವಂತಬೋವರು, ತಿರುಕುಲ ಮತ್ತು ಜಾಂಬವಕುಲದ ನಾಯಕರು ಇದರಲ್ಲಿ ಪಾಲ್ಗೊಂಡಿದ್ದರು.

''ವೈಷ್ಣವ ದರ್ಶನ ಮತ್ತು ಜೈನ ದರ್ಶನಗಳಲ್ಲಿ ಭೇದವಿಲ್ಲ'', ಎಂದು ಘೋಷಿಸುವ ಮೂಲಕ ಅರಸನು ಮೊದಲು ತನ್ನ ವೈಯಕ್ತಿಕ ನಿಲುವನ್ನು ಸ್ಪಷ್ಟಪಡಿಸಿದನು. ಜೈನ, ವೈಷ್ಣವರ ಸಭೆಸೇರಿಸಿ ಅವರಲ್ಲಿ ಸೌಹಾರ್ದ ಉಂಟುಮಾಡಲೋಸುಗ, ಒಬ್ಬರ ಕೈಯನ್ನು ಮತ್ತೊಬ್ಬರ ಕೈಯಲ್ಲಿರಿಸಿ, ಅವರಿಬ್ಬರೂ ಒಂದೇ ವೇದಿಕೆಯ ಮೇಲೆ ನಿಲ್ಲುವಂತೆ ಮಾಡಿದನು. ಘರ್ಷಣೆಗೊಳಗಾದ ಎರಡು ಗುಂಪಿನವರೂ ಹಲವು ನಿಯಮಗಳನ್ನು ಪರಿಪಾಲಿಸುವ ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂದು ಆಗ್ರಹಿಸಿದನು. ಅವುಗಳಲ್ಲಿ ಪ್ರಮುಖವಾದವುಗಳು ಇಂತಿವೆ:

1. ಪಂಚಮಹೋಪಕರಣ ಮತ್ತು ಕಲಶಗಳನ್ನು ಹಿಂದೆ ಉಪಯೋಗಿಸುತ್ತಿದ್ದಂತೆ ಮುಂದೆಯೂ ಬಳಸುವ ಹಕ್ಕನ್ನು ಜೈನರಿಗೆ ಮರಳಿಸಬೇಕು.

2. ತನ್ನ ಧರ್ಮದ ಶ್ರೇಯಸ್ಸನ್ನು ಬಯಸುವ ಯಾವ ಶ್ರೀವೈಷ್ಣವನೂ ಜೈನ ದರ್ಶನಕ್ಕೆ ಬಾಧಕವಾಗುವ ಬಗೆಯಲ್ಲಿ ವರ್ತಿಸುವುದಿಲ್ಲವೆಂದು ಸ್ವಇಚ್ಛೆಯಿಂದ ಒಪ್ಪಿ ರಾಜ್ಯದ ಎಲ್ಲ ಬಸದಿಗಳಲ್ಲಿ ಈ ಘೋಷಣೆಯನ್ನೊಳಗೊಂಡ ಶಾಸನಗಳನ್ನು ನಿಲ್ಲಿಸಬೇಕು.

3. ತಿರುಮಲೆ ತಾತಯ್ಯನೆಂಬ ಶ್ರೀವೈಷ್ಣವನಾಯಕನು ರಾಜ್ಯದ ಪ್ರತಿಯೊಂದು ಜೈನ ಕುಟುಂಬದಿಂದ ಒಂದು ನಿಶ್ಚಿತ ಮೊತ್ತದ ವಂತಿಕೆಯನ್ನು ಪಡೆದು, ಆ ಹಣದಿಂದ ಬೆಳ್ಗೊಳತೀರ್ಥವನ್ನು ರಕ್ಷಿಸಲು ಅಂಗರಕ್ಷಕರನ್ನು ನೇಮಿಸಬೇಕು; ಇವರಲ್ಲಿ ಸುಮಾರು ಇಪ್ಪತ್ತು ಕಟ್ಟಾಳುಗಳ ಮೂಲಕ (ಶ್ರವಣಬೆಳ್ಗೊಳದ) ದೇವ ಮೂರ್ತಿಯನ್ನು (ಗೊಮ್ಮಟ ವಿಗ್ರಹ) ಸಂರಕ್ಷಿಸಲು ಪ್ರತ್ಯೇಕ ಏರ್ಪಾಟು ಮಾಡಬೇಕು. ಈ ವ್ಯವಸ್ಥೆಗೆ ಸಮ್ಮತಿಸಿ ಜೈನರು ಹಣ ಸಂದಾಯ ಮಾಡಬೇಕು.

4. ಹೀಗೆ ಸಂಗ್ರಹಿಸಿದ ಹಣದ ಮಿಕ್ಕ ಭಾಗವನ್ನು ಅದೇ ಶ್ರೀವೈಷ್ಣವ ನಾಯಕನು ರಾಜ್ಯದಲ್ಲಿ ಹಾಳುಬಿದ್ದ ಜಿನಾಲಯಗಳ ಜೀರ್ಣೋದ್ಧಾರಕ್ಕಾಗಿ ವಿನಿಯೋಗಿಸಬೇಕು;

5. ಈ ಕಂದಾಯವನ್ನು ಜೈನರೆಲ್ಲರೂ ಪ್ರತಿ ವರ್ಷ ತಪ್ಪದೆ ಸಲ್ಲಿಸಬೇಕು ಮತ್ತು ಅರಸನಿಗೆ, ಸಂಘಕ್ಕೆ ಮತ್ತು ಸಮುದಾಯಕ್ಕೆ ದ್ರೋಹ ಬಗೆಯದೆ ತಮ್ಮನ್ನು ತಾವು ಕಾಪಾಡಿಕೊಳ್ಳಬೇಕು.

6. ಯಾವ ಧಾರ್ಮಿಕನೂ (ಸನ್ಯಾಸಿ) ಹಾಗೂ ಲೌಕಿಕನೂ (ಗ್ರಾಮಮುಖ್ಯಸ್ಥ) ಈ ನಿರ್ಣಯ ಮತ್ತು ಸದ್ಭಾವನೆಯನ್ನು ಉಲ್ಲಂಘಿಸಲು ಯತ್ನಿಸಬಾರದು.

ವಿಜಯನಗರ ರಾಜ್ಯದ ಜೈನ ಹಾಗೂ ಶ್ರೀವೈಷ್ಣವರೆಲ್ಲರಿಗೂ ಅನ್ವಯಿಸಲಾದ ಈ ಕಟ್ಟಳೆಯ ಶಾಸನದ ಒಂದು ಪ್ರತಿಯನ್ನು ಕಲ್ಲೆಹ ಪಟ್ಟಣದ ಬಸುವಿಸೆಟ್ಟಿಯು ಬೆಳ್ಗೊಳದಲ್ಲಿ ಪ್ರಚುರ ಪಡಿಸಿದನು. ಈ ಒಪ್ಪಂದ ಸಾಧಿಸಲು ಮುಂದಾಳತ್ವವನ್ನು ವಹಿಸಿದ ಈ ಸೆಟ್ಟಿಯ ಪಾತ್ರವನ್ನು ಮೆಚ್ಚಿ, ಎರಡೂ ಮತಗಳ ನಾಯಕರು ಒಮ್ಮತದಿಂದ ಅವನಿಗೆ 'ಸಂಘನಾಯಕ' ಎಂಬ ಬಿರುದನ್ನಿತ್ತು ಗೌರವಿಸಿದರು.

ಏರುಪೇರಾದ ನ್ಯಾಯ : ಸಾಕಷ್ಟು ಗಮನ ಸೆಳೆದಿರುವ ಹಾಗೂ ಇತಿಹಾಸಕಾರರ ಪ್ರಶಂಸೆಯ ವಸ್ತುವಾಗಿರುವ ಈ ಶಾಸನದ ಗರ್ಭಿತ-ಗುಪ್ತ ಸಂದೇಶವು ಅಂದಿನ ಕಾಲದ ಜೈನರಿಗೆ ಸ್ಪಷ್ಟವಾಗಿರಲು ಸಾಕು. ನನಗಿಂತ ಹೆಚ್ಚು ಗೌರವಾನ್ವಿತರಾದ ವಿದ್ವಾಂಸರು ಹಾಗೂ ಇತಿಹಾಸಕಾರರು ಈ ಶಾಸನವು ವಿಜಯನಗರ ಅರಸರ ಧರ್ಮಸಹಿಷ್ಣುತೆಗೆ ನಿಲುವುಗನ್ನಡಿ ಯಾಗಿದೆ ಎಂದು ಹೆಮ್ಮೆಯಿಂದ ಬುಕ್ಕರಾಯನ ನ್ಯಾಯಗುಣವನ್ನು ಕೊಂಡಾಡಿರುವರು. ಆದರೆ ಧಾರ್ಮಿಕ ವೈಷಮ್ಯವನ್ನು ತಡೆಹಿಡಿಯಲು ಈ ನಿರ್ಣಯವು ಎಳ್ಳಷ್ಟೂ ನೆರವಾಗಲಿಲ್ಲ ವೆಂಬುದನ್ನು ಸೂಕ್ಷ್ಮಾವಲೋಕನದಿಂದ ನಾವು ಕಂಡುಕೊಳ್ಳಬಹುದು.

ವಿಜಯನಗರದರಸನ ನ್ಯಾಯ ನಿರ್ವಹಣೆಯೇ ಇಲ್ಲಿ ಒಂದು ಬಗೆಯಲ್ಲಿ ಏರುಪೇರಾಯಿತೆಂದು ಕಾಣುವುದು. ತಮಗೆ ಬಂದೊದಗಿದ ಆತಂಕಗಳನ್ನು ಅಂತ್ಯಗೊಳಿಸ ಲಾರದಂತಹ ಏರ್ಪಾಡನ್ನು ಜೈನರು ಒಪ್ಪಿಕೊಂಡದ್ದನ್ನು ನೋಡಿದರೆ, ಅವರೆಷ್ಟು ಅಸಹಾಯಕ ರಾಗಿದ್ದರೆಂಬುದು, ವಿಷಮ ಪರಿಸ್ಥಿತಿಯಿಂದ ಮುಕ್ತಿ ಪಡೆಯಲು ಅವರೆಷ್ಟು ಆತುರರಾಗಿದ್ದರೆಂಬುದು, ವೇದ್ಯವಾಗುವುದು.

ಜೈನರು ಶ್ರೀವೈಷ್ಣವರ ಕೈಮೇಲೆ ಕೈ ಇಡುವಂತೆ ಆಳರಸ ಮಾಡಿದ್ದೇನೂ ನಿಜ; ಇದು ಸಾಂಕೇತಿಕವಾಗಿ ಸೌಹಾರ್ದತೆಯನ್ನು ಸೂಚಿಸಿದರೂ ಶಾಶ್ವತವಾದ ಭರವಸೆಯನ್ನು ಜೈನರಲ್ಲಿ ಹುಟ್ಟಿಸಲಿಲ್ಲವೆಂಬುದು ಸ್ಪಷ್ಟ.

ತಮ್ಮ ದೇವತೆಗಳನ್ನು, ದೇವಾಲಯಗಳನ್ನು, ತೀರ್ಥಗಳನ್ನು, ಸಂರಕ್ಷಿಸಿಕೊಳ್ಳಲು ಜೈನರೆಲ್ಲ ಮನೆ ಮನೆಯಿಂದ ಹಣ ಸಂಗ್ರಹಮಾಡಿಕೊಡುವ ವ್ಯವಸ್ಥೆಯಾಯಿತು; ಆದರೆ ಹೀಗೆ ಸಂಗ್ರಹಿಸಿದ ಹಣವನ್ನು ವಿನಿಯೋಗಿಸುವ ಸ್ವಾತಂತ್ರ್ಯ ಜೈನರಲ್ಲಿ ಉಳಿಯದೆ, ಅದನ್ನು ಶ್ರೀವೈಷ್ಣವ ನಾಯಕನ ಅಧೀನಕ್ಕೊಳಪಡಿಸಲಾಯಿತು. ಆ ಮೂಲಕ ಶ್ರೀವೈಷ್ಣವರ ಅಧಿಕಾರವನ್ನು ಜೈನಕೇಂದ್ರವಾದ ಶ್ರವಣಬೆಳ್ಗೊಳದಲ್ಲಿ ಅಧಿಕೃತಗೊಳಿಸಲಾಯಿತೆನ್ನಬಹುದು.[4]

---

4. ಶ್ರೀವೈಷ್ಣವರ ಅತ್ಯಂತ ಪ್ರಭಾವಿ ನಾಯಕನಾದ ತಾತಾಚಾರ್ಯನನ್ನು ಜೈನರಿಂದ ವಾರ್ಷಿಕ ಕಂದಾಯ ವಸೂಲು ಮಾಡಲು ನೇಮಿಸಲಾಯಿತಲ್ಲದೆ ಈ ಕಟ್ಟಳೆಯನ್ನು ವಿವರಿಸುವ ಶಾಸನಗಳನ್ನು ಜೈನ ಬಸದಿಗಳಲ್ಲಿ ಮಾತ್ರ ನಿಲ್ಲಿಸಲು ಆದೇಶಿಸಲಾಯಿತು.

ಜೈನರಿಗೆ ಪಂಚೋಪಕರಣ, ಕಳಶ, ಮೊದಲಾದವನ್ನು ಬಳಸುವ ಧಾರ್ಮಿಕ ಹಕ್ಕುಗಳನ್ನು ದೊರಕಿಸಿಕೊಟ್ಟುದರಲ್ಲಿ ವಿಶೇಷತೆ ಏನೂ ಇರಲಿಲ್ಲ; ಏಕೆಂದರೆ ಇವೆಲ್ಲವನ್ನು ಅವರು ಅನಂತಕಾಲದಿಂದಲೂ ಅನುಭವಿಸುತ್ತಾ ಬಂದಿದ್ದರು. ಈ ಏರ್ಪಾಡಿನಿಂದ ಸ್ವತಃ ಆಳರಸನಾಗಲೀ ಶ್ರೀವೈಷ್ಣವರಾಗಲೀ ಏನನ್ನೂ ತ್ಯಾಗ ಮಾಡಲಿಲ್ಲ; ಬದಲಾಗಿ, ಶ್ರೀವೈಷ್ಣವರು ತಮ್ಮ ಅಧಿಕಾರದ ಅಂತಸ್ತನ್ನು, ಬಲವನ್ನು. ಹೆಚ್ಚಿಸಿಕೊಳ್ಳಲು ಸಮರ್ಥರಾದರು.

ಜೈನರ ಸಂಪತ್ತಿನಿಂದ ಜೈನರ ರಕ್ಷಣೆ ಮಾಡುವ ಅಧಿಕಾರ ಶ್ರೀವೈಷ್ಣವರಿಗೆ ದೊರೆಯಿತು. ಜೈನ ಸಂರಕ್ಷಣೆ ಮತ್ತು ಸಂವರ್ಧನೆಗೆ ಶ್ರೀವೈಷ್ಣವರು ಭೌತಿಕ ಕಾಣಿಕೆ ಕೊಡುವಂತೆ ಅರಸನು ಒತ್ತಾಯಪಡಿಸದಿದ್ದುದು ಒಂದು ಬಗೆಯಲ್ಲಿ ಸರಿಯೆಂದು ವಾದಿಸಬಹುದಾದರೂ ಈ ನಿಧಿಯ ನಿರ್ವಹಣೆಯ ಮತ್ತು ಜೈನ ಸ್ಮಾರಕಗಳ ಸಂರಕ್ಷಣೆಯ ಸಂಪೂರ್ಣ ಹೊಣೆಯನ್ನು ಶ್ರೀ ವೈಷ್ಣವರಿಗೆ ವಹಿಸಿಕೊಟ್ಟು, ಜೈನರನ್ನು ಈ ಹೊಣೆಗಾರಿಕೆಯಿಂದ ದೂರವಿಟ್ಟದ್ದು ನ್ಯಾಯಸಮ್ಮತವೇ ಎಂಬ ಪ್ರಶ್ನೆ ಉದ್ಭವಿಸುವುದು.

ಶ್ರೀವೈಷ್ಣವರ ವಿರುದ್ಧ ಮನವಿ ಮಾಡಿಕೊಂಡ ಜೈನರನ್ನು ಈ ನಿರ್ಣಯದ ಮೂಲಕ ವಿಜಯನಗರದರಸನು ಮತ್ತಷ್ಟು ಅವರ ಅಧೀನಕ್ಕೊಳಪಡಿಸಿದನೆಂಬ ಭಾವನೆ ಬಾರದಿರದು. ಈ ವ್ಯವಸ್ಥೆ ಜೈನರಿಗೆ ಸಂತೃಪ್ತಿಯನ್ನಾಗಲಿ, ನೆಮ್ಮದಿಯನ್ನಾಗಲಿ, ನ್ಯಾಯವನ್ನಾಗಲಿ, ತಂದುಕೊಡಲಿಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗುವುದು.

ಜೈನರ ಹಸ್ತಗಳನ್ನು ಶ್ರೀವೈಷ್ಣವರ ಹಸ್ತಗಳಲ್ಲಿರಿಸಿದ ಶಾರೀರಿಕ ಕ್ರಮವು ವಿಜಯನಗರ ರಾಜ್ಯದಲ್ಲಿ ಜೈನರ ಹಿತಾಸಕ್ತಿಯನ್ನು ಶ್ರೀವೈಷ್ಣವರ ಅಂಕಿತಕ್ಕೊಕ್ಕೊಳಪಡಿಸಿದಂತಾಯಿತೆಂದೇ ಭಾವಿಸಬೇಕು. ಒಟ್ಟಿನಲ್ಲಿ, ಈ ವ್ಯವಸ್ಥೆಯಲ್ಲಿ ಜೈನರು ಮತ್ತಷ್ಟು ಸೋತು ಶ್ರೀವೈಷ್ಣವರು ತಮ್ಮ ಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಂಡರೆಂಬುದರಲ್ಲಿ ಅನುಮಾನವಿಲ್ಲ. ಅರಸನೇ ಮಾಡಿದ ಈ ನ್ಯಾಯವ್ಯವಸ್ಥೆಯಿಂದ ನಿರುತ್ಸಾಹಗೊಂಡ ಜೈನರು ಮತ್ತಾವ ನಿಟ್ಟಿನಿಂದಲೂ ನ್ಯಾಯ ದೊರಕಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ದುರದೃಷ್ಟವಶಾತ್ ಆಧ್ಯಾತ್ಮಿಕ ಬಲವನ್ನು ಕಾಪಾಡಿಕೊಳ್ಳಲೋಸುಗ ತಮ್ಮ ಆಂತರಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲೂ ಅವರಿಗೆ ಸಾಧ್ಯವಿಲ್ಲದಂತಾಗಿತ್ತು- ಏಕೆಂದರೆ, ಭೌತಿಕ ಸಮೃದ್ಧಿಯ ಮಹಾಯುಗದ ಭರಾಟೆಯಲ್ಲಿ ಅವರ ಆಧ್ಯಾತ್ಮಿಕ ಬಲವೂ ಬಳಲಿ ಬೆಂಡಾಗಿತ್ತು.

ಮುಖಾಮುಖಿಯ ತರುವಾಯ : ಅಗತ್ಯವೆನಿಸಿದಾಗ ಮಠಾಧೀಶರಿಗೂ ಧರ್ಮ ಸಂಸ್ಥೆಗಳಿಗೂ ರಕ್ಷಣೆ ಒದಗಿಸುವಂತಹ ನಿಷ್ಠಾವಂತ, ಸಮರ್ಥ ಹಾಗೂ ವರ್ಚಸ್ವಿ ಶ್ರಾವಕರು ಈ ಕಾಲದಲ್ಲಿ ವಿರಳವಾಗಿದ್ದರೆಂದು ತೋರುವುದು. ಅಲ್ಲದೆ, ಹೊರಗಿನ ವೈರಿಗಳಂತೆ ಆಂತರಿಕ ಅನುಯಾಯಿಗಳೂ ಆಗೊಮ್ಮೆ ಈಗೊಮ್ಮೆ ಹೆಚ್ಚು ಆತಂಕಕ್ಕೆ ಕಾರಣರಾಗುತ್ತಿದ್ದರೆಂಬುದು

ಸ್ಪಷ್ಟ. ಇದರಿಂದ ಹೊರಬರಲು, ಒಮ್ಮತವನ್ನು ಸಾಧಿಸಲು, ಗತವೈಭವವನ್ನು ಪುನರುಜ್ಜೀವನಗೊಳಿಸಲು, 14-15ನೆಯ ಶತಮಾನಗಳಲ್ಲಿ ಕೆಲವು ಯತ್ನಗಳು ನಡೆದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ :

1. ಶ್ರಾವಕ-ಶ್ರಮಣರಿಂದ ಹೊಸ ಹೊಸ ದೇವಾಲಯಗಳನ್ನು ಕಟ್ಟಿಸಿ, ಧಾರ್ಮಿಕ ಜೀವನಕ್ಕೆ ಹೊಸಚೇತನ ತುಂಬುವುದು.

2. ಭಕ್ತರಿಂದ, ಅದರಲ್ಲೂ ವಣಜಿಗರ ನೆರವಿನಿಂದ, ಈ ಕ್ಷೇತ್ರದ ಭೌತಿಕ ಹಾಗೂ ಧಾರ್ಮಿಕ ಶಕ್ತಿಯನ್ನು ಇಮ್ಮಡಿಗೊಳಿಸಿಕೊಳ್ಳುವುದು.

3. ಯಾತ್ರಿಕರನ್ನು ಹೆಚ್ಚು ಹೆಚ್ಚು ಆಕರ್ಷಿಸಿ, ಧರ್ಮ ಕಾರ್ಯದಲ್ಲಿ ಅವರನ್ನು ತೊಡಗಿಸುವುದು.

4. ಮಠದ ಆಚಾರ್ಯರನ್ನು ಹೆಚ್ಚು ಬಲಪಡಿಸಿ, ಬೆಳೆಸುವುದು.

5. ಶ್ರಮಣರ ಹಾಗೂ ಶ್ರಾವಕರ ಧಾರ್ಮಿಕ ಜೀವನವನ್ನು ಸಮಾಧಿಮರಣ ಮುಂತಾದ ಆಚಾರಗಳ ಮೂಲಕ ತೀಕ್ಷ್ಣಗೊಳಿಸುವುದು.

1. ದೇವಾಲಯ ಮತ್ತು ಧಾರ್ಮಿಕ ಜೀವನ : 12ನೆಯ ಶತಮಾನದ ಪ್ರಥಮಾರ್ಧದಲ್ಲಿ ಕಟ್ಟಿದ ದೇವಾಲಯಗಳಿಗೆ ಹೋಲಿಸಿದರೆ, 1300ರ ತರುವಾಯದ ಆರುನೂರು ವರ್ಷಗಳ ಕಾಲಾವಧಿಯಲ್ಲಿ ಕಟ್ಟಿದ ದೇವಾಲಯಗಳು ಸಂಖ್ಯೆಯಲ್ಲಿ ಮತ್ತು ವಾಸ್ತು ವಿನ್ಯಾಸವು ನಿರಾಶಾದಾಯಕವೆನಿಸುವುವು. ಹೊಯ್ಸಳರ ಆಳ್ವಿಕೆಯ ಅಂಚಿನ, ಇಲ್ಲವೆ ವಿಜಯನಗರ ಆಳ್ವಿಕೆಯ ಆರಂಭದ ಕಾಲದಲ್ಲಿ, ಅಭಿನವ ಚಾರುಕೀರ್ತಿದೇವರ ಗುಡ್ಡಿಯಾದ ರಾಜಪಾತ್ರದ ಚೂಡಾಮಣಿ ಮಾಂಗಾಯಿ ಎಂಬುವಳು ಒಂದು ಜಿನಾಲಯವನ್ನು ಕಟ್ಟಿಸಿದಳು.[5] ಇದು ಪಟ್ಟಣ ಪ್ರದೇಶದಲ್ಲಿ ಕಟ್ಟಿಸಿದ ಕಟ್ಟಕಡೆಯ ದಾಖಲಿತ ಜಿನಾಲಯವಾಗಿದ್ದು ಇಂದಿಗೂ ಉಳಿದುಕೊಂಡುಬಂದಿದೆ.

ಪರಮತೀಯರಿಂದ ಗೊಮ್ಮಟ ವಿಗ್ರಹದ ಸಂರಕ್ಷಣೆಗಾಗಿ ಅಂಗರಕ್ಷಕರನ್ನು ಪಡೆದುಕೊಳ್ಳಲು ಜೈನರು ವಿಜಯನಗರದರಸನ ಮೊರೆಹೊಕ್ಕದ್ದನ್ನು ಈಗಾಗಲೇ ನೋಡಿರುವೆವು. ಆದರೆ ಅರಸರು ಮಾಡಿದ ಏರ್ಪಾಟಿನಿಂದ ಈ ಅಗತ್ಯತೆಯನ್ನು ಪೂರೈಸಿಕೊಳ್ಳಲು ಅವರಿಗಾಗಲಿಲ್ಲವಾದ ಕಾರಣ "ಧರ್ಮದ ಏಳಿಗೆಗಾಗಿ ಸ್ವಇಚ್ಛೆಯಿಂದ ಬೆಳ್ಗೊಳ ಪಟ್ಟಣದಲ್ಲಿ ವಾಸಮಾಡಿದ" ಪಂಡಿತರಾಯನೆಂಬುವನು ಗೊಮ್ಮಟ ಸಂಕೀರ್ಣಕ್ಕೆ ಒಂದು

5. 470 ಮತ್ತು 472.

ಬೃಹತ್ ಸುತ್ತಾಲಯ(ಕೋಟೆ)ವನ್ನು ಸ್ವಂತ ಖರ್ಚಿನಿಂದ ಕಟ್ಟಿಸಲು ಮುಂದಾದನೆಂದು ಕಾಣುವುದು. ಅಲ್ಲದೆ, ಹೆಚ್ಚು ಶ್ರಮಿಸದೆ ಮಹಾವಿಗ್ರಹವನ್ನು ತಲುಪಲು ಅನುಕೂಲವಾಗುವಂತೆ ಬೆಟ್ಟದ ಬೊಜ್ಜಿನ ಮೇಲೆ ಒಂದು ಸೋಪಾನ ಪಂಕ್ತಿಯನ್ನೂ ಅವನು ಕೊರೆಸಿದನು.[6]

ಅಸ್ತಿತ್ವದಲ್ಲಿದ್ದ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ ಅವನ್ನು ಸಂರಕ್ಷಿಸುವ ಪ್ರಯತ್ನಗಳು 14-17ನೆಯ ಶತಮಾನಗಳಲ್ಲಿಯೂ ಮುಂದುವರಿದವು. ಗೆರೆಸೊಪ್ಪೆಯ ಗೊಮ್ಮಟನೆಂಬುವನು ಚಿಕ್ಕಬೆಟ್ಟದ ಉತ್ತರ ಮೂಲೆಯಲ್ಲಿದ್ದ ಮೂರು ಬಸದಿಗಳನ್ನು, ಜೀರ್ಣಗೊಂಡಿದ್ದ ಚಿಕ್ಕಬಸದಿಯ (ಚಂದ್ರಗುಪ್ತನ ಬಸದಿ) ಕಲ್ಲು ಕೆಲಸವನ್ನು ಮತ್ತು ಪಟ್ಟಣದ ಮಾಂಗಾಯಿಬಸದಿಯನ್ನು, 15ನೆಯ ಶತಮಾನದಲ್ಲಿ ಜೀರ್ಣೋದ್ಧಾರಗೊಳಿಸಿದನು.[7] ಇದೇ ಶತಮಾನದ ತಿರುವಿನಲ್ಲಿ, ಚಂಗಾಳ್ವ ರಾಜನ ಪ್ರಧಾನ ಅಮಾತ್ಯನಾಗಿದ್ದ ಸಮ್ಯಕ್ತ್ವಚೂಡಾಮಣಿ ಚೆನ್ನಬೊಮ್ಮರಸ (ಬೊಮ್ಮಣ್ಣ ಮಂತ್ರಿಯ ಸೋದರ) 'ಪುಣ್ಯಶಾಲಿ ಶ್ರಾವಕ' ರನ್ನು (ನಂಜರಾಜಪಟ್ಟಣದ ಶ್ರಾವಕರು) ಸಮ್ಮೇಳಿಸಿಕೊಂಡು, (ಗೊಮ್ಮಟನ) ಬಳ್ಳಿವಾಡವನ್ನು ನವೀಕರಿಸಿದನು. ಈ ಕಾರಣ ಆತನನ್ನು ''ಜೈನ ಧರ್ಮದ ಸಮರ್ಥಕ ಮತ್ತು ಸಂರಕ್ಷಕ''ನೆಂದು ಕೊಂಡಾಡಲಾಯಿತು. ಬಹುಶಃ ದೊಡ್ಡಬೆಟ್ಟದ ಮೇಲಿನ ಬಾಹುಬಲಿ ವಿಗ್ರಹವನ್ನು ಬಳಸಿರುವ ಬಳ್ಳಿಯ ಉಬ್ಬು ಚಿತ್ರಕ್ಕೆ ಅದು ಸಂಬಂಧಿಸಿತ್ತೆಂದು ತೋರುವುದು.[8]

16-17ನೆಯ ಶತಮಾನಗಳಲ್ಲಿ ಯಾತ್ರಿಗಳು ದೊಡ್ಡ ಸಂಖ್ಯೆಯಲ್ಲಿ ಬೆಳ್ಗೊಳಕ್ಕೆ ಬರತೊಡಗಿದರೂ ಮಾರವಾಡ (ಉತ್ತರ ಭಾರತ) ಪ್ರದೇಶದಿಂದ ಬಂದ ಯಾವನೊಬ್ಬನೂ ಈ ಕ್ಷೇತ್ರಕ್ಕೆ ವಿಶೇಷ ಕೊಡುಗೆಗಳನ್ನಿತ್ತ ಹಾಗೆ ಕಾಣುವುದಿಲ್ಲ. ಬಹುಶಃ ಬೆಳ್ಗೊಳ ಮಠದ ಚಂದ್ರಕೀರ್ತಿಪಂಡಿತ ಮುನಿಯ ಆಗ್ರಹಕ್ಕೆ ಮಣಿದು, ಅವರಲ್ಲಿ ಕೆಲವರು 1648ರಲ್ಲಿ ಚತುರ್ವಿಂಶತಿ ತೀರ್ಥಂಕರ ಹೆಸರಿನ ಒಂದು ಚಿಕ್ಕ ಗುಡಿಯನ್ನು ಕಟ್ಟಿಸಿದರು.[9] ಅದು ದೊಡ್ಡಬೆಟ್ಟದ ಮೇಲಿನ ಅತಿ ಚಿಕ್ಕ ದೇವಾಲಯವಾಗಿದ್ದರೂ ಅದನ್ನು ನಿರ್ಮಿಸಲು ಧರ್ಮಚಂದ್ರ, ಮುಳ್ಳನಾಯಕ, ಗೆರ್ಝುವಲ ಜಿನಸಾ ಅಲ್ಲದೆ ಇನ್ನೂ ಐದಾರು 'ಸಾ'ಗಳು ಸಂಯುಕ್ತವಾಗಿ ಶ್ರಮಿಸಬೇಕಾಯಿತೆಂದು ತೋರುವುದು.

ಸ್ಥಳೀಯ ಸೆಟ್ಟಿಗರು ಒಟ್ಟುಗೂಡಿ ಮತ್ತೊಂದು ದೇವಾಲಯವನ್ನು 1667ರಲ್ಲಿ ಸ್ಥಾಪಿಸಿದರು. ಪುಟ್ಟಸ್ವಾಮಿಸೆಟ್ಟಿಯ ಮಕ್ಕಳೀರ್ವರಾದ ಚೆನ್ನಣ್ಣ - ಚಿಕ್ಕಣ್ಣರು ಆದೀಶ್ವರನಿಗಾಗಿ ಬಸದಿಯೊಂದನ್ನು ಕಟ್ಟಿಸಿ ಅದನ್ನು ಚೆನ್ನಣ್ಣ ಬಸದಿ ಎಂದು ಕರೆದರು. ಸ್ತಂಭಮಂಟಪ,

---

6. 364.
7. 473.
8. 329.
9. 422.

ಮಾನಸ್ತಂಭ ಮತ್ತು ಸುತ್ತಾಲಯದ ತೋರಣಗಳನ್ನು ನಿರ್ಮಿಸಿದ್ದಲ್ಲದೆ, ದೊಡ್ಡಬೆಟ್ಟದ ಮೇಲಿನ ಪ್ರಾಕೃತಿಕ ಹೊಂಡವೊಂದನ್ನೂ ಅವರು ವಿಶಾಲಗೊಳಿಸಿ, ಬೆಳ್ಗೊಳ ಪಟ್ಟಣದಲ್ಲೊಂದು ಕೆರೆಯನ್ನು ತೋಡಿಸಿದರು. ಔದಾರ್ಯದ ಅಭಾವವಿದ್ದ ಕಾಲದಲ್ಲಿ, ಈ ಬಗೆಯ ಸಾಮಾನ್ಯ (ವಿಶೇಷತಃ ವಾಸ್ತುಶಿಲ್ಪೀಯ ಹಾಗೂ ಕಲೆಯ ದೃಷ್ಟಿಯಲ್ಲಿ) ಕೊಡುಗೆಗಳೂ ಹದಿನೈದು ಶಾಸನಗಳ ಮೂಲಕ ಅಳತೆ ಮೀರಿದ ಪ್ರಚಾರ ಪಡೆದುಕೊಂಡವು.[10]

17ನೆಯ ಶತಮಾನದಲ್ಲಿ ವಾಸ್ತು ವಿಶೇಷತೆ ಪಡೆಯದ ಇನ್ನೊಂದು ಗುಡಿಯನ್ನು ಹಿರಿಸಾಲೆ ಗ್ರಾಮದ ನಾಯಕನೊಬ್ಬ ದೊಡ್ಡಬೆಟ್ಟದ ಬುಡದಲ್ಲಿ ನಿರ್ಮಿಸಿ, ಅಲ್ಲಿ ಬ್ರಹ್ಮದೇವ ಯಕ್ಷನನ್ನು ಪ್ರತಿಷ್ಠಾಪಿಸಿದನು.[11] ಜಿನನಾಥಪುರದ ಶಾಂತೀಶ್ವರ ಬಸದಿಯ ಕೆಲವು ಚಿಕ್ಕ ಪುಟ್ಟ ಕಾರ್ಯಗಳನ್ನು ಹೊರತುಪಡಿಸಿ, ಬೇರಾವ ದೇವಾಲಯವನ್ನೂ ಈ ಕಾಲದಲ್ಲಿ ಜೀರ್ಣೋದ್ಧಾರಗೊಳಿಸಲಾಗಲಿಲ್ಲ.[12] 1300-1700ರ ದೀರ್ಘಕಾಲದ ಇತಿಹಾಸದಲ್ಲಿ, ಕೇವಲ ನಾಲ್ಕು ಹೊಸ ಕಟ್ಟಡಗಳನ್ನು ಬೆಳ್ಗೊಳವು ಕಂಡರೂ, ಮಾಂಗಾಯಿ ಬಸದಿಯನ್ನುಳಿದು ಇವಾವೂ ಮಹತ್ವದ ಕಟ್ಟಡಗಳಾಗಿರಲಿಲ್ಲ. ಸ್ಮಾರಕಗಳ ಸಂರಕ್ಷಣೆಯು ಈ ಯುಗದ ಪ್ರಮುಖ ಗುರಿಯಾಗಿದ್ದು, ಎರಡು ಬೆಟ್ಟಗಳ ಮೇಲಿನ ಸುತ್ತಾಲಯ ಹಾಗೂ ಕೋಟೆಗೋಡೆಗಳು, ಚಿಕ್ಕಬೆಟ್ಟ, ಶ್ರವಣಬೆಳ್ಗೊಳ ನಗರ ಹಾಗೂ ಜಿನನಾಥಪುರದ ದೇವಾಲಯಗಳ ಜೀರ್ಣೋದ್ಧಾರ, ಗೊಮ್ಮಟ ಮಹಾವಿಗ್ರಹದ ಉಬ್ಬು ಶಿಲ್ಪಗಳ ನವೀಕರಣ ಮಾತ್ರ ಈ ಕಾಲದ ಪ್ರಮುಖ ಸಾಧನೆಗಳೆನಿಸಿದವು.

2. *ವರ್ತಕ ಸಮುದಾಯದ ಅನುಮಾನಾಸ್ಪದ ಪಾತ್ರ* : ಶ್ರೀವೈಷ್ಣವರು ಜೈನರಿಗೆ ಉಂಟುಮಾಡಿದ ಬಿಕ್ಕಟ್ಟಿನ ಸಮಯದಲ್ಲಿ ಬಸುವಿಸೆಟ್ಟಿಯನ್ನು ಹೊರತುಪಡಿಸಿ ಬೇರಾರೂ ಈ ಧರ್ಮಕ್ಷೇತ್ರದ ನೆರವಿಗೆ ಬರಲಿಲ್ಲವೆಂಬುದನ್ನು ಈ ಮುಂಚೆ ನೋಡಿದ್ದೇವೆ.[13] ಈ ಪರಿಸ್ಥಿತಿಯು ಮುಂದಿನ ಆರುನೂರು ವರ್ಷಗಳವರೆಗೂ ಮುಂದುವರಿದಂತೆ ಕಾಣುವುದು. ಈ ಕಾಲಾವಧಿಯ ಸಾಮಂತರಾಗಲಿ ಅಧಿಕಾರಿಗಳಾಗಲಿ ಹೆಚ್ಚು ಆಸಕ್ತಿ ವಹಿಸಿ ಧಾರ್ಮಿಕ ಅಥವಾ ಭೌತಿಕ ಪ್ರಗತಿ ಸಾಧಿಸಲು ಮುಂದೆ ಬರಲಿಲ್ಲ. ವರ್ತಕ ಸಮುದಾಯವು ಬೆಂಬಲಕ್ಕೆ ನಿಂತರೂ, ಆಧ್ಯಾತ್ಮಿಕ ಸಾಧನೆ ಅವರ ಗುರಿಯಾಗಿರಲಿಲ್ಲ. ಧರ್ಮದ ನೆಪದಲ್ಲಿ ಲಾಭ ಗಿಟ್ಟಿಸಿಕೊಳ್ಳುವ ಹಂಚಿಕೆಯಲ್ಲಿದ್ದ ಈ ವರ್ಗವು ಎಲ್ಲ ಬಗೆಯಲ್ಲಿ ತಮ್ಮ ಸ್ವಂತ ಆದಾಯ ಹೆಚ್ಚಿಸಿಕೊಳ್ಳಲು ಅವಕಾಶಗಳನ್ನು ಪರಿವರ್ತಿಸಿಕೊಳ್ಳಲು ಆತುರವಾಗಿದ್ದಿತೆಂಬುದರಲ್ಲಿ ಮಾತ್ರ ಅನುಮಾನವಿಲ್ಲ.

---

10. 424, 427-429, 507-516, 540. ಮುಂ.
11. 17ನೆಯ ಶತಮಾನದ 439.
12. 1632ರ 525.
13. 1368ರ 475.

ಬಸುವಿಸೆಟ್ಟಿಯು ಶ್ರೀವೈಷ್ಣವರೊಂದಿಗೆ ಸಂಧಾನ ನಡೆಸಿ, ಧರ್ಮರಕ್ಷಣೆಗಾಗಿ ಪರಿಶ್ರಮಿಸಿದರೆ, ಪಾಯಿಸೆಟ್ಟಿಯು ಗೊಮ್ಮಟದೇವರಿಗೆ ಒಂದು ಚಂಪಕ ವೃಕ್ಷವನ್ನು ಅರ್ಪಿಸಿ, ಸಮಾಧಿ ಮರಣ ಸ್ವೀಕರಿಸಿ, ಈ ಆಚಾರದ ಅಗ್ಗಳಿಕೆಯನ್ನು ಮೆರೆದನು.[14] 15ನೆಯ ಶತಮಾನದಲ್ಲಿ ಈ ಪರಿಸ್ಥಿತಿಯು ಸ್ವಲ್ಪ ಬದಲಾಗಿ ಇನ್ನೂ ಕೆಲವು ಶ್ರಾವಕರು ಧರ್ಮಕಾರ್ಯದಲ್ಲಿ ತೊಡಗಿಕೊಳ್ಳಲು ಪ್ರಯತ್ನಿಸಿದರು. ಚಾರುಕೀರ್ತಿಮುನಿಯ ಶಿಷ್ಯನಾದ ಮಾಯಣನು ಒಂದು ತುಂಡು ಭೂಮಿಯನ್ನು ಕೊಂಡು ಅದನ್ನು ಗೊಮ್ಮಟನ ಸೇವೆಗೆ ಬಿಟ್ಟನು.[15] ಬೆಳ್ಗೊಳದ ನಾಡಗಾವುಂಡರು, ಪಂಡಿತರು, ಸ್ಥಾನಿಕರು, ವೈದ್ಯರು, ಮೊದಲಾದವರು ಚಾರುಕೀರ್ತಿಮುನಿಯೊಡನೆ ಕೆಲವು ಹೊಂದಾಣಿಕೆಗಳನ್ನು ಮಾಡಿಕೊಂಡಾಗ ವರ್ತಕವರ್ಗವು ಖುದ್ದಾಗಿ ಇದರಲ್ಲಿ ಪಾಲ್ಗೊಂಡಿತು.[16] ಈ ಶತಮಾನದಲ್ಲಿ ಬೆಳ್ಗೊಳಕ್ಕೆ ಬಂದ ಯಾತ್ರಿಗಳಲ್ಲಿ ವರ್ತಕರ ತಂಡವೇ ಪ್ರಮುಖವಾಗಿತ್ತು. ಕೊಪಣನಗರದ ಮೂವರು ಗೊಮ್ಮಟನಿಗೆ ನಮನ ಸಲ್ಲಿಸಿದರು; ರತ್ನತ್ರಯ ನೋಂಪಿಯಲ್ಲಿ ಪಾಲ್ಗೊಂಡು ಸಂಘಕ್ಕೆ ಗೌರವ ಸಲ್ಲಿಸಲು ಕರಿಯ ಗೊಮ್ಮಟಸೆಟ್ಟಿಯ ನೇತೃತ್ವದಲ್ಲಿ ಬಿಡದಿಯ ವರ್ತಕರ ತಂಡವೊಂದು ಇಲ್ಲಿಗೆ ಬಂತು.[17] ಅಲ್ಲದೆ, ಗೊಮ್ಮಟನಿಗೆ ಪ್ರಣಾಮ ಸಲ್ಲಿಸಿ ಪುಣ್ಯ ಸಂಪಾದಿಸಲೋಸುಗ ಬೇರೆ ಬೇರೆ ಕೇಂದ್ರಗಳಿಂದ ಇನ್ನೂ ಅನೇಕರು ಯಾತ್ರೆ ಬಂದರೆಂದು ತಿಳಿದುಬರುವುದು.[18]

ವರ್ತಕರಂತೆ ಗೌಂಡರು-ನಾಡಗೌಂಡರೂ ಇಲ್ಲಿಯ ಭೂಮಿ ಹಾಗೂ ನಗದು ಹಣದ ವ್ಯವಹಾರಗಳಲ್ಲಿ ಹಿರಿಯ ಪಾತ್ರವಹಿಸಿದರು. ಆದರೆ ಅವರಾರೂ ಸ್ವತಃ ದಾನ ದತ್ತಿಗಳನ್ನು ಬಿಟ್ಟ ಹಾಗೆ ತೋರುವುದಿಲ್ಲ.[19] ಇದಕ್ಕೆ ಅಪವಾದವೆನ್ನುವಂತೆ ಪಂಡಿತದೇವನ ಗುಡ್ಡನಾಗಿದ್ದ ಬೆಳ್ಗೊಳನಾಡಿನ ಮತ್ತು ಮುತ್ತಗೆಹೊನ್ನ(ವ) ಳಿಯ ಒಬ್ಬ ಗೌಡನು ಮಾತ್ರ ಮಾಂಗಾಯಿ ಬಸದಿಗೆ ಭೂದತ್ತಿ ಕೊಟ್ಟ ನಿದರ್ಶನವಿದೆ.[20]

ವಿಜಯನಗರ ರಾಜ್ಯದ (15ನೆಯ ಶತಮಾನ) ಅತ್ಯಂತ ವರ್ಚಸ್ವಿ ಜೈನನೆಂದರೆ ಇರುಗಪ್ಪ ದಂಡನಾಥ. 'ಅವನ ಕರ್ಣಗಳು ಜಿನೇಂದ್ರನ ಕೀರ್ತಿಗೆ ಶೃತಿಗೊಂಡಿದ್ದವು. ಅವನ

---

14. ಅನುಕ್ರಮವಾಗಿ 475 ಮತ್ತು 353.
15. 1409ರ 361.
16. 1476ರ 363.
17. 1476ರ 291, 15ನೆಯ ಶತಮಾನದ 333-334.
18. 282 ಮತ್ತು 283.
19. 361, 363, 331, ಇತ್ಯಾದಿ.
20. 15ನೆಯ ಶತಮಾನದ 545. ಇದನ್ನು 14ನೆಯ ಶತಮಾನಕ್ಕೆ ಸೇರಿಸುವುದು ಹೆಚ್ಚು ಸೂಕ್ತ. ಏಕೆಂದರೆ, ಪಂಡಿತದೇವಮುನಿಯು ಆಗ ಜೀವಿಸಿದ್ದು ಬಸದಿ ನಿರ್ಮಾಣದ ಕಾಲದಲ್ಲಿ ಈ ದತ್ತಿ ನೀಡಿರುವ ಸಾಧ್ಯತೆಯುಂಟು.

ನಾಲಗೆ ಜಿನನ ಗುಣಗಾನ ಮಾಡಲು ಮೀಸಲಾಗಿತ್ತು. ಜಿನನನ್ನು ನಮಿಸಿಲು ಮಾತ್ರ ದೇಹವನ್ನು, ಜಿನನ ಸೇವನೆಗಳಿಗಾಗಿ ಸಂಪತ್ತನ್ನು, ಅವನು ಮುಡಿಪಾಗಿಟ್ಟಿದ್ದ' ನೆಂದು ಅವನ ಗುಣಗಾನ ಮಾಡಲಾಗಿದೆ. ಗೊಮ್ಮಟೇಶ್ವರನ ನಿರಂತರ ಸೇವೆಗಾಗಿ ಬೆಳ್ಗೊಳ ಗ್ರಾಮ, ಅದರ ಸುಂದರ ತೋಪು, ಮತ್ತು ತಾನೇ ತೋಡಿಸಿದ ತಟಾಕವನ್ನು ಪಂಡಿತರಾಯನ ಸಮ್ಮುಖದಲ್ಲಿ 1422ರಲ್ಲಿ ಈತನು ದಾನ ಮಾಡಿದನು.[21] ಗೊಮ್ಮಟನ ಬಳ್ಳಿವಾಡವನ್ನು ನವೀಕರಿಸಿದ ಮಂತ್ರಿ ಚಂಗಾಳ್ವನನ್ನು ಬಿಟ್ಟರೆ, ವಿಜಯನಗರ ಕಾಲದ ಜೈನರಲ್ಲಿ ಇರುಗಪ್ಪನು ಅತ್ಯಂತ ಪ್ರಮುಖನಾಗಿದ್ದನೆಂದು ಕಾಣುವುದು. ಹಳೆಯ ದತ್ತಿಗಳನ್ನು ನವೀಕರಿಸಿ ಬೆಳ್ಗೊಳದಲ್ಲೊಂದು ತಟಾಕವನ್ನು ಈತನು ತೋಡಿಸಿದ; ಆದರೆ, ಈತನು ಸ್ವತಃ ಕೊಟ್ಟದ್ದು, ಅಥವಾ ತನ್ನ ಅರಸರಿಂದ ಕೊಡಿಸಿದ್ದು ಅತ್ಯಲ್ಪ. 12 ನೆಯ ಶತಮಾನದ ಹೊಯ್ಸಳ ಸಾಮಂತರ ಕೊಡುಗೆಗಳಿಗೂ 15ನೆಯ ಶತಮಾನದ ವಿಜಯನಗರ ಸಾಮಂತರ ಕೊಡುಗೆಗಳಿಗೂ ಇದ್ದ ಅಂತರವು ಇಲ್ಲಿ ಎದ್ದು ಕಾಣುವುದು.

ಬೆಳ್ಗೊಳಕ್ಕೆ ತಮ್ಮ ಯಾತ್ರೆಗಳನ್ನು ಮುಂದುವರಿಸುತ್ತಾ ಅಂದಿನ ವರ್ತಕ ವರ್ಗವು ಕ್ರಮೇಣ ಸ್ಥಳೀಯ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡತೊಡಗಿತು. ಇವರಲ್ಲಿ ಕೆಲವರು ಮಾತ್ರ ನಿಸ್ಪೃಹ ಸೇವೆ ಸಲ್ಲಿಸಿದರು. ಬೇಗೂರಿನ ಸೆಟ್ಟಿಯೊಬ್ಬ ಅಖಂಡ ಬಾಗಿಲಿನ ಬಳಿ ಜಲಾನಯನವನ್ನು ನಿರ್ಮಿಸಿದ. ಭಾರಗಾವೆಯ ಇನ್ನೊಬ್ಬ ಸೆಟ್ಟಿ ದೊಡ್ಡಬೆಟ್ಟದ ಬಂಡೆಯ ಮೇಲೆ ಚಾರುಕೀರ್ತಿಭಟ್ಟಾರಕಮುನಿಯ ಪಾದಚಿಹ್ನೆಗಳನ್ನು ಕೆತ್ತಿಸಿದ.[22] ಜಿನನಾಥಪುರದ ಶಾಂತೀಶ್ವರ ಬಸದಿಯ ನಿರ್ವಹಣೆಗಾಗಿ, ದೊಡ್ಡಬೆಟ್ಟದ ಮೇಲಿನ ದೇವಾಲಯಗಳ ಸಂವರ್ಧನೆಗಾಗಿ, 17ನೆಯ ಶತಮಾನದ ಸೆಟ್ಟಿಗಳು ಬಿಟ್ಟ ಕೊಡುಗೆಯನ್ನು ಈಗಾಗಲೇ ಗಮನಿಸಲಾಗಿದೆ.[23] ಬಸದಿ, ಕೆರೆ, ಮಂಟಪ, ಮೊದಲಾದವನ್ನು ಕಟ್ಟಿಸಿದ ಪುಟ್ಟಸ್ವಾಮಿ ಸೆಟ್ಟಿಯ ಪುತ್ರ ಚೆನ್ನಣ್ಣನು, 1673ರಲ್ಲಿ ಆದೀಶ್ವರ ಬಸದಿಯ ಸೇವೆಗಾಗಿ ಜಿನ್ನೇನಹಳ್ಳಿಯನ್ನು ದತ್ತಿ ಹಾಕಿಕೊಟ್ಟ. 13ನೆಯ ಶತಮಾನದ ನಂತರ ಬೆಳ್ಗೊಳದ ಇತಿಹಾಸದಲ್ಲಿ ವರ್ತಕ ಮನೆತನದವರು ನೀಡಿದ ಕೊಡುಗೆಗಳಲ್ಲಿ ಇದು ಅತಿ ದೊಡ್ಡದು ಮತ್ತು ಮಹತ್ವದ್ದು ಎನಿಸಿತು.[24]

ಈ ಕಾಲವು ಯಾತ್ರಿಕರ ಸಂಖ್ಯೆಯಲ್ಲಿ ಇಳಿಮುಖ ಕಂಡಂತೆ, ವರ್ತಕ ಸಮುದಾಯದ ನೈತಿಕಮಟ್ಟವೂ ಕೆಳಮುಖಿಯಾದುದನ್ನು ಕಾಣುವೆವು. 16ನೆಯ ಶತಮಾನದ ಅಂಚಿನಲ್ಲಿ

---

21. 1422ರ 357.
22. ಅನುಕ್ರಮವಾಗಿ 376 ಮತ್ತು 387. ಎರಡನೆಯದು ಬೆಳ್ಗೊಳದ ಪ್ರಧಾನ ಗುರುವಿಗೆ ಗೌರವ ತೋರಿದಂತಿದೆ. ಹಿಂದಿನ ಶತಮಾನಗಳಲ್ಲಿ ಸಮಾಧಿಮರಣ ಸ್ವೀಕರಿಸಿದವರ ಪಾದಚಿಹ್ನೆಗಳಿಗಿಂತ ಇದು ಭಿನ್ನವಾಗಿದೆ.
23. 525 ಮತ್ತು 424
24. 540.

ಬೆಳ್ಗೊಳಕ್ಕೆ ಭೇಟಿಯಿತ್ತ ಕೆಲವು ವರ್ತಕರು ದರಿದ್ರ ಸ್ಥಿತಿಯಲ್ಲಿದ್ದ ಪುರೋಹಿತರನ್ನು ತಮ್ಮ ಸ್ವಂತ ಲಾಭಕ್ಕಾಗಿ ಬಳಸಿಕೊಳ್ಳವ ಮಾರ್ಗಗಳನ್ನು ಶೋಧಿಸತೊಡಗಿದರು. ಮೇಲ್ನೋಟಕ್ಕೆ ಅವರ ಬಡತನದ ಬಗ್ಗೆ ಅನುಕಂಪ ತೋರಿದಂತೆ ನಟಿಸುತ್ತ, ಅವರಿಗೆ ಸಾಲದ ಸವಲತ್ತನ್ನು ಕಲ್ಪಿಸಿಕೊಡುವ ನೆಪದಲ್ಲಿ, ಅವರ ಆಸ್ತಿಯನ್ನು, ಅವರ ಅಂಕಿತದಲ್ಲಿದ್ದ ದೇವಾಲಯಗಳ ಭೂಮಿಯನ್ನು ಅಡವಿಟ್ಟುಕೊಂಡು, ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳತೊಡಗಿದರು. ಈ ವ್ಯವಹಾರವು ಅಪಾಯಕಾರಿ ಹಂತ ಮುಟ್ಟಿ ಸ್ಥಾನಿಕರ ಮತ್ತು ತೀರ್ಥಗಳ ಆದಾಯದ ರಕ್ತನಾಳಗಳನ್ನು ಬತ್ತಿಸಿತು. ಸುತ್ತಲೂ ಹಬ್ಬಿದ ಗೊಂದಲಮಯ ಪರಿಸ್ಥಿತಿ, ಪುರೋಹಿತ ಮತ್ತು ಆಚಾರ್ಯರ ಮಧ್ಯದ ತಾಳಮೇಳದ ಅಭಾವ, ಮುಂತಾದವುಗಳು ಪುರೋಹಿತರನ್ನು ಸ್ವಾರ್ಥಿಗಳನ್ನಾಗಿ, ಸ್ವೇಚ್ಛಾಚಾರಿಗಳನ್ನಾಗಿ ಮಾಡಿ, ಅವರಿಗೆ ನೀಡಲಾಗಿದ್ದ ವಿಶೇಷ ಜವಾಬ್ದಾರಿಯನ್ನು ಮನಬಂದಂತೆ ಬಳಸಿಕೊಳ್ಳಲು ಪ್ರಚೋದಿಸಿದವು. ಆಗ ಕುಟಿಲ ವರ್ತಕ ಗುಂಪುಗಳು ಒಡ್ಡಿದ ಬಲೆಗಳಲ್ಲಿ ಪುರೋಹಿತರು ಸುಲಭವಾಗಿ ಸಿಕ್ಕಿಕೊಳ್ಳತೊಡಗಿದರು. ಗೆರೆಸೊಪ್ಪೆಯ ಚೌಡಿಸೆಟ್ಟಿಯು ಇಂಥ ವ್ಯವಹಾರದಲ್ಲಿ ತೊಡಗಿದ ಪ್ರಪ್ರಥಮ ವರ್ತಕ. ಆದರೆ ಅಡವು ವ್ಯವಹಾರದಿಂದ ಪಡೆದ ಲಾಭಾಂಶದ ಒಂದು ಭಾಗವನ್ನು ಕಂಬಯ್ಯ ಮತ್ತು ಚರಣ ಮೊದಲಾದ ಪುರೋಹಿತರಿಗೆ ಬಿಡುಗಡೆ ಮಾಡಿ 'ಒಂದು ಗುಂಪಿಗೆ ಆಹಾರದ ವ್ಯವಸ್ಥೆ ಮಾಡಲು, ತ್ಯಾಗದ ಬ್ರಹ್ಮದೇವಾಲಯದ ಎದುರಿಗಿರುವ ಹೂದೋಟವನ್ನು ಸುಸ್ಥಿತಿಯಲ್ಲಿಡಲು ಮತ್ತು ಅಕ್ಷತೆ ಪೂಜೆಗೆ ನಿರ್ದಿಷ್ಟ ಪ್ರಮಾಣದ ಅಕ್ಕಿಯನ್ನು ಪೂರೈಸಲು', ಈ ಸೆಟ್ಟಿಯು ಏರ್ಪಾಡು ಮಾಡುವ ಸೌಜನ್ಯ ತೋರಿದನು. ಪುರೋಹಿತರು ಈ ದಾನವನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿದ್ದಲ್ಲದೆ ''ಸಾಲಗಳನ್ನು ನೀಡಿ ತಮ್ಮನ್ನು ತೊಂದರೆಗಳಿಂದ ಪಾರುಮಾಡಿದ್ದಕ್ಕೆ'', ಹಾಗೂ ಉಚಿತ ಪ್ರಸಾದ ವ್ಯವಸ್ಥೆಮಾಡಿದ್ದಕ್ಕೆ, ಈ ಸೆಟ್ಟಿಯನ್ನು ಕೊಂಡಾಡಿದರು. ಇಂತಹ ವ್ಯವಹಾರದಿಂದ ಸ್ವಂತಕ್ಕೆ ಸಾಕಷ್ಟು ಧನಲಾಭ ಮಾಡಿಕೊಂಡಿದ್ದಲ್ಲದೆ, ಸಂಕಷ್ಟದಲ್ಲಿದ್ದ ವ್ಯಕ್ತಿಗಳ ಸಹಾಯಕ್ಕೆ ಬಂದ ಧರ್ಮಿಷ್ಠನೆಂಬ ಹೆಸರನ್ನೂ ಗಳಿಸಿಕೊಂಡ ಇಂಥವರು ಉದಾರ ದಾನಿಗಳೆಂದು ಈ ಕೇಂದ್ರದ ಇತಿಹಾಸದಲ್ಲಿ ಸ್ಥಾನಗಳಿಸಿಕೊಳ್ಳಲು ಸಫಲರಾದರು.

ಸ್ಥಾನಿಕರು ದೇವಾಲಯದ ಭೂಮಿಯನ್ನು ವರ್ತಕರಿಗೆ ಅಡವಿಡುವರು : ಈ ಕಾಲದ ಅಡವು ವ್ಯವಹಾರವು ಎಷ್ಟೊಂದು ಲಾಭದಾಯಕವಾಗಿತ್ತೆಂದರೆ ಚೌಡಸೆಟ್ಟಿಯಂತೆ ಅನೇಕ ವರ್ತಕರು ದೇವಾಲಯಗಳ ಭೂಮಿಯನ್ನು ಒತ್ತೆಹಾಕಿಕೊಂಡು, ಪುರೋಹಿತರಿಗೆ ಸಾಲಕೊಟ್ಟು, ''ಅವರನ್ನು ತೊಂದರೆಗಳಿಂದ ಪಾರುಮಾಡಲು'' ಮುಂದೆಬಂದರು.[25] ಹೊಸಹೊಳಲಿನ ಕೆಂಪಣ್ಣನ ಮಗ ಚನ್ನಣ್ಣ, ಗೊಮ್ಮಟನಿಗೆ ಚಂಪಕವೃಕ್ಷ ನೀಡಿ ಬೆಳ್ಗೊಳದಲ್ಲಿ ಸಮಾಧಿ

---

25. 325-328.

ಸಾಧಿಸಿದ ಪಾಯಿಸೆಟ್ಟಿಯ ಮಕ್ಕಳಾದ ಚಿಕ್ಕಣ್ಣ ಮತ್ತು ಚೆಗಪಾಯಿಸೆಟ್ಟಿ, ಮುದ್ದಣ್ಣ, ಪೆಂದಣ್ಣ, ಪದುಮರಸಯ್ಯ, ದೊಡ್ಡಣ್ಣ, ಪಂಚಬಾಣಕವಿಯ ಮಗ ಬೊಮ್ಮಯ್ಯ, ಬೊಮ್ಮಣ್ಣ ಕವಿ, ವಿಜೆಯಣ್ಣ, ಗುಮ್ಮಣ್ಣ, ಚಾರುಕೀರ್ತಿ, ನಾಗಪ್ಪ, ಬೆಡದಯ್ಯ, ಹೊಸಹಳ್ಳಿಯ ಬೊಮ್ಮಿಸೆಟ್ಟಿ, ರಾಮಣ್ಣ, ಪರೆಯಣಗೌಡ, ಬೈರಸೆಟ್ಟಿ, ಬೈರಣ್ಣ, ವೀರಯ್ಯ, ಮತ್ತಿನ್ನಿತರನ್ನು ಈ ವ್ಯವಹಾರದಲ್ಲಿ ತೊಡಗಿದ್ದರು. ಇವರ ಹೆಸರುಗಳನ್ನು ನೋಡಿದರೆ ಅಂದಿನ ಅಡವು ವ್ಯವಹಾರವು ವರ್ತಕ ಸಮುದಾಯಕ್ಕೆ ಸೀಮಿತವಾಗಿರದೆ ಶ್ರೀಮಂತ ಭೂ ಒಡೆಯ ವರ್ಗಕ್ಕೂ ಹಬ್ಬಿತ್ತೆಂದು ತೋರುವುದು. ಅದರಲ್ಲಿ ಗೌಡರು, ಆಚಾರ್ಯರು, ಕವಿಗಳು, ವ್ಯಾಪಾರಿಗಳು, ಲೆಕ್ಕಿಗರು, ಲೇಖಕರು, ಸೇನಬೋವರು ಸೇರಿಕೊಂಡಿದ್ದರೆಂಬುದೂ ಸ್ಪಷ್ಟ.[26]

ಮೈಸೂರು ಅರಸರ ಸಹಾಯ ಹಸ್ತ : ಬೆಳ್ಗೊಳದ ಧಾರ್ಮಿಕ ಸಂಸ್ಥೆಗಳ ಪ್ರಮುಖ ಆದಾಯ ನಾಲೆಗಳನ್ನೆಲ್ಲ ಬತ್ತಿಸಿದ ಈ ಭಯಾನಕ ಅವಸ್ಥೆಯ ಸುದ್ದಿಯು ಕೊನೆಗೆ ಮೈಸೂರಿನ ಆಳರಸನಾದ ಏಳನೆಯ ಚಾಮರಾಜ ಒಡೆಯರ ಕಿವಿಯನ್ನು ತಲುಪಿತು. ತನ್ನ ರಾಜ್ಯದಲ್ಲಿಯ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲೊಂದರ ದುಸ್ಥಿತಿಯ ಕತೆ ಕೇಳಿದ ಈತನು ಸ್ವತಃ ಜೈನಧರ್ಮಿಯಾಗಿರದಿದ್ದರೂ ಅದಕ್ಕೊಂದು ಪರಿಹಾರ ಒದಗಿಸುವುದು ಅರಸನಾದ ತನ್ನ ಕರ್ತವ್ಯವೆಂದು ಬಗೆದು, ಬಡ್ಡಿ ವ್ಯವಹಾರದಲ್ಲಿ ತೊಡಗಿದ್ದವರೆನ್ನೆಲ್ಲ ಮೈಸೂರಿಗೆ ಕರೆಸಿ, ಅವರಿಂದ ಲೆಕ್ಕ ಕೇಳಿ, ಮೊದಲು ಅವರ ಸಾಲ ತೀರಿಸಿ, ಭೂಮಿಯನ್ನು ಬಿಟ್ಟುಕೊಡುವಂತೆ ಅಡವುದಾರರಿಗೆ ಆಜ್ಞೆ ಮಾಡಿದನು. ಇದರ ಮೇರೆಗೆ ಅಡವು ಪತ್ರಗಳನ್ನು ಗೊಮ್ಮಟದೇವ ಮತ್ತು ಚಾರುಕೀರ್ತಿಪಂಡಿತದೇವನ ಸಮ್ಮುಖದಲ್ಲಿ ಹಿಂತಿರುಗಿಸಲು ಒಪ್ಪಂದವಾಯಿತು. ಹೀಗೆ ಮುಕ್ತಗೊಳಿಸಲಾದ ಭೂಮಿಯನ್ನು ಯಾವ ಕಾರಣಕ್ಕೂ ಪುನಃ ಅಡವಿಟ್ಟುಕೊಳ್ಳಲು ಪ್ರಯತ್ನಿಸುವುದಿಲ್ಲವೆಂಬ ಆಶ್ವಾಸನೆಯನ್ನೂ ಅವರಿಂದ ಬರೆಸಿಕೊಳ್ಳಲಾಯಿತು.[27] ಚಾಮರಾಜ ಒಡೆಯರ ಮಧ್ಯಸ್ತಿಕೆಯಲ್ಲಿ 1634ರಲ್ಲಿ ಹೊರಡಿಸಲಾದ ಈ ಸನ್ನದು 1368ರಲ್ಲಿ ಬುಕ್ಕರಾಯನ ಮಧ್ಯಸ್ತಿಕೆಯಲ್ಲಿ ಹೊರಡಿಸಿದ್ದ ಸನ್ನದಿಗಿಂತ ದೂರಗಾಮಿ ಪರಿಹಾರಗಳನ್ನು ಜೈನರಿಗೆ ಹಾಗೂ ಜೈನ ಸಂಸ್ಥೆಗಳಿಗೆ ದೊರಕಿಸಿಕೊಟ್ಟಿತು ಎನ್ನುವುದರಲ್ಲಿ ಅನುಮಾನವಿಲ್ಲ.

ಈ ವ್ಯವಹಾರಗಳೆಲ್ಲ ಅಂದಿನ ಧಾರ್ಮಿಕರ ಹಾಗೂ ಶ್ರಾವಕರ ನೈತಿಕ ಅಧಃಪತನಕ್ಕೆ ಕೈಗನ್ನಡಿಯಾಗಿವೆ. 14ನೆಯ ಶತಮಾನದ ನಂತರ ಆಂತರಿಕವಾಗಿ ಬೆಂಬಲ ನೀಡುವಂಥ ವರ್ಚಸ್ವಿ ಶ್ರಾವಕ ಅನುಯಾಯಿಗಳು ಜೈನ ಸಮಾಜದಲ್ಲಿ ಎಷ್ಟು ಅಪರೂಪವಾಗಿದ್ದರು

---

26. 1634ರ 352. ಈ ಯಾದಿಯು ತಮ್ಮ ಭೂಮಿಯನ್ನು ಅಡವಿಟ್ಟವರ ಮತ್ತು ಅಡವು ಇಟ್ಟುಕೊಂಡವರ ಹೆಸರುಗಳನ್ನು ಒಳಗೊಳ್ಳದಿದ್ದರೂ ಈ ವ್ಯವಹಾರವು ಸಮಾಜದ ಇತರ ವರ್ಗಗಳಿಗೆ, ಅವರು ಜೈನರಿರಲಿ ಬಿಡಲಿ, ಹಬ್ಬಿದುದನ್ನು ರುಜುವಾತು ಪಡಿಸುವುದು.
27. ಅದೇ.

ಎಂಬುದನ್ನೂ ಇವು ಸ್ಪಷ್ಟಗೊಳಿಸುವುವು. ಈ ಕಾರಣದಿಂದಾಗಿ ಜೈನ ಸಮಾಜವು ತನ್ನ ಉಳಿವಿಗಾಗಿ ಜೈನೇತರರನ್ನು ಅವಲಂಬಿಸಬೇಕಾಯಿತೆಂಬುದೂ ಸ್ಪಷ್ಟಗೊಳ್ಳುವುದು. ಚಾಮರಾಜ ಒಡೆಯರು ಸಾಲವನ್ನು ತೀರಿಸಿ ದೇವಾಲಯಗಳ ಭೂಮಿಯನ್ನು ಅಡವುದಾರರಿಂದ ಮುಕ್ತಗೊಳಿಸಿಕೊಟ್ಟರೆ, ಅದೇ ವಂಶದ ದೇವರಾಜಯ್ಯನು (ದೊಡ್ಡದೇವರಾಜ ಒಡೆಯರು) ಬೆಳ್ಗೊಳದ ನಿರ್ಗತಿಕ ಧಾರ್ಮಿಕರ ಸಲುವಾಗಿ ದಾಸೋಹ ನಡೆಸಲು ರಾಗಿಬೊಮ್ಮನಹಳ್ಳಿ ಗ್ರಾಮವನ್ನು ದತ್ತಿಹಾಕಿ ಕೊಟ್ಟನು.[28]

ಈ ಘಟನೆಯ ನಂತರ ವರ್ತಕ ವರ್ಗದ ವ್ಯವಹಾರಿಕ ಒಡನಾಟವು ಈ ಕೇಂದ್ರದಲ್ಲಿ ಕ್ಷೀಣಿಸತೊಡಗಿತು. 17ನೆಯ ಶತಮಾನದ ನಂತರದ ಶಾಸನಗಳಲ್ಲಿ ಸೆಟ್ಟಿಗಳು ಯಾತ್ರಿಗಳೆಂದಾಗಲಿ, ದಾನಿಗಳೆಂದಾಗಲಿ, ಅಧಿಕಾರಿಗಳೆಂದಾಗಲಿ ಅಪರೂಪವಾಗುವರು. ಅಲ್ಲದೆ ಈ ತೀರ್ಥದ ಆಧ್ಯಾತ್ಮಿಕ ಅಥವಾ ಭೌತಿಕ ಪ್ರಗತಿಗೆ ಅವರ ಕೊಡುಗೆಯೂ ಗೌಣವಾಗುವುದು.[29]

3. ಯಾತ್ರಿಕರು: ಐತಿಹಾಸಿಕ ಗಡಿಯಾರದ ಮುಳ್ಳನ್ನು 9-10ನೆಯ ಶತಮಾನಗಳಿಗೆ ಮತ್ತೊಮ್ಮೆ ತಿರುಗಿಸಲಾಯಿತೇನೊ ಎಂಬಂತೆ ಬೆಳ್ಗೊಳಕ್ಕೆ ಬಂದ ಯಾತ್ರಿಗಳ ಸಂಖ್ಯೆಯು 17-19ನೆಯ ಶತಮಾನಗಳಲ್ಲಿ ಗಣನೀಯವಾಗಿ ಹೆಚ್ಚಿತು. ಆದರೆ ಹಿಂದಿನ ಕಾಲದ ಯಾತ್ರಿಗಳಿಗಿಂತ ಭಿನ್ನವಾದ ಈ ಕಾಲದವರು, ಪ್ರಮುಖವಾಗಿ ದೊಡ್ಡಬೆಟ್ಟದ ಮೇಲಿನ ಮಹಾವಿಗ್ರಹದ ದರ್ಶನ ಪಡೆಯಲು ಬರುತ್ತಿದ್ದರು ಮಾತ್ರ. 1300-1500ರ ಕಾಲಾವಧಿಯಲ್ಲಿ ಬಂದ ಯಾತ್ರಿಗಳು ಬಹುಮಟ್ಟಿಗೆ ಕನ್ನಡ ನಾಡಿನ ವರ್ತಕರಾಗಿದ್ದರು. ಅವರಲ್ಲಿ ಕೊಪ್ಪಳ, ಬಿಡತಿ, ಗೆರೆಸೊಪ್ಪ, ಬೇಗೂರು, ಭಾರಗಾವೆ, ಇತ್ಯಾದಿ ಊರುಗಳಿಂದ ಬಂದವರೇ ಪ್ರಧಾನರಾಗಿದ್ದರು.[30]

ಕನ್ನಡ ನಾಡಿನ ಹೊರಗಿನಿಂದ ಬಂದ ಯಾತ್ರಿಕರನ್ನು ನಾವು ಶಾಸನಗಳಲ್ಲಿ ಕಾಣುವುದು 15ನೆಯ ಶತಮಾನದ ನಂತರವೆ. 1500ರಲ್ಲಿ ಜಿನಸೇನಭಟ್ಟಾರಕ ಪಂಡಿತಾಚಾರ್ಯನು

---

28. 1672ರ 551.

29. ಮುಂದಿನ ಮುನ್ನೂರು ವರ್ಷಗಲ್ಲಿ ಬಳ್ಳಿಗಾವಿಯ ಇಬ್ಬರು ಸೆಟ್ಟಿಗಳು ಮಾತ್ರ ಬೆಳ್ಗೊಳಕ್ಕೆ ಭೇಟಿ ನೀಡಿದರೆಂದು ಹೇಳಲಾಗಿದೆ: ಅದೇ, 19ನೆಯ ಶತಮಾನದ 498.

30. ಅನುಕ್ರಮವಾಗಿ 1476ರ 291; 15ನೆಯ ಶತಮಾನದ 333-334. 16ನೆಯ ಶತಮಾನದ 325, 376 ಮತ್ತು 387; 15 ನೆಯ ಶತಮಾನದ 282-283 ಮತ್ತು 16 ನೆಯ ಶತಮಾನದ 323. 16 ನೆಯ ಶತಮಾನದ ಯಾತ್ರಿಗಳಲ್ಲಿ ಗೆರೆಸೊಪ್ಪೆಯಿಂದ ಬಂದವರೇ ಅತ್ಯಧಿಕ ಸಂಖ್ಯೆಯಲ್ಲಿದ್ದರು. ನೋಡಿ- 473, 305, 474, 325-328, ಇತ್ಯಾದಿ.

ತನ್ನ ಸಂಘದೊಡಗೂಡಿ ಕೊಲ್ಲಾಪುರದಿಂದ ಇಲ್ಲಿಗೆ ಬಂದ ದಾಖಲೆ ಇದೆ.[31] ಮಾರವಾಡದಿಂದ ಬಂದ ಯಾತ್ರಿಗಳ ಮೊದಲ ತಂಡವನ್ನೂ ಇದೇ ಕಾಲದಲ್ಲಿ ಕಾಣುವೆವು.[32] ಬೆಳ್ಗೊಳದ ವ್ಯವಹಾರಗಳಲ್ಲಿ ಪಾಲ್ಗೊಂಡು ಅದರ ಭೌತಿಕ ಹಾಗೂ ಧಾರ್ಮಿಕ ಲಾಭ ನಷ್ಟಕ್ಕೆ ಕಾರಣರಾದ ಸ್ಥಳೀಯ ಯಾತ್ರಿಗಳಿಗಿಂತ ಭಿನ್ನರಾದ ಮಹಾರಾಷ್ಟ್ರ, ಗುಜರಾತ್ ಮತ್ತು ರಾಜಸ್ಥಾನದ ಯಾತ್ರಿಗಳು ಈ ಧಾರ್ಮಿಕ ಕೇಂದ್ರದೊಂದಿಗೆ ಯಾವ ಬಗೆಯಲ್ಲೂ ಗುರುತಿಸಿಕೊಳ್ಳುವ ಆಸಕ್ತಿ ತೋರಲಿಲ್ಲ. ಇಬ್ಬರು ಸ್ಥಳೀಯರ ಬಗ್ಗೆ ಹಾಗೂ ಉತ್ತರದಿಂದ ಬಂದ ಇಪ್ಪತ್ತು-ಇಪ್ಪತ್ತೈದು ಯಾತ್ರಿಗಳ ಬಗ್ಗೆ ದಾಖಲಿತ ವಿವರಗಳು ದೊರಕುವುವು.[33] ಅವರಲ್ಲಿ ಕೆಲವರು ಕಾಷ್ಠ ಸಂಘದೊಂದಿಗೆ,[34] ಇನ್ನು ಕೆಲವರು ಗೀರ್ವಾಳಿ ಸಂಘದೊಂದಿಗೆ ಗುರುತಿಸಿಕೊಂಡಿರುವರು. ಉತ್ತರದಿಂದ ಬಂದವರೆಲ್ಲ ಸಾಮಾನ್ಯವಾಗಿ ತಮ್ಮ ಹೆಸರುಗಳಿಗೆ 'ಸಾ' ಪ್ರತ್ಯಯ ಹಚ್ಚಿಕೊಂಡವರಾಗಿದ್ದರು.[35] ಈ ಕೇಂದ್ರಕ್ಕೆ ಕಾಣಿಕೆಗಳನ್ನು ಕೊಡಲಾಗಲಿ, ಈ ಧರ್ಮಕ್ಷೇತ್ರವನ್ನು ಬೆಳಸಲಾಗಲಿ, ಅವರು ಬರಲಿಲ್ಲ; ಅತ್ಯಂತ ದೈನ್ಯತೆಯಿಂದ ಗೊಮ್ಮಟನಿಗೆ ತಲೆಬಾಗಿ, ತಮ್ಮ ಸಫಲ ಯಾತ್ರೆಯನ್ನು ಆನಂದದಿಂದ ಆಚರಿಸಿ, ಧನ್ಯತಾಭಾವದಿಂದ ತಮ್ಮ ಹುಟ್ಟೂರಿಗೆ ಮರಳುವುದು ಅವರ ಪ್ರಮುಖ ಅಭೀಪ್ಸೆಯಾಗಿತ್ತು.[36] ಕಾರಣ, ಅವರಾರೂ ಈ ಧರ್ಮಕ್ಷೇತ್ರಕ್ಕೆ ದತ್ತಿ-ದಾನ ಕೊಡಲಿಲ್ಲ. ಇಲ್ಲಿಯ ಆಗುಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ತಮ್ಮ ಧಾರ್ಮಿಕ ವ್ಯಾಪಾರವನ್ನು ಸರಳೀಕರಿಸಲೆಂಬಂತೆ, ಇಂಥ ಯಾತ್ರಿಕರ ಗುಂಪೊಂದು ಗೊಮ್ಮಟ ದೇವರ ಮುಂದೆನಿಂತು ಸಾರಿದ್ದನು ಈಗಾಗಲೇ ಗಮನಿಸಿದ್ದೇವೆ. ''ನಮ್ಮ ಹಣವನ್ನು ಠೇವಣಿ ಇಡುವೆವು; ನಿನ್ನ ಸಂಪತ್ತನ್ನು ನಾವು ಕೊಂಡೊಯ್ಯುವೆವು'', ಎಂಬ ಅವರ ವ್ಯವಹಾರಿಕ ಭಾಷೆಯ ಪ್ರಾರ್ಥನಾ ವಿಧಾನವು, ಅವರ ವ್ಯಕ್ತಿತ್ವಕ್ಕೆ ಕೈಗನ್ನಡಿಯಾಗಿದೆ.

ಆದರೆ ಉತ್ತರದ ಈ ಬರಿಗೈ 'ಸಾ'ಗಳು 18ನೆಯ ಶತಮಾನದ ಉಳಿದೆಲ್ಲ ಯಾತ್ರಿಗಳಿಗಿಂತ ಅಧಿಕ ಬಗೆಯಲ್ಲಿ ಈ ಕೇಂದ್ರದ ಮೇಲೆ ತಮ್ಮ ಮುದ್ರೆಯನ್ನೊತ್ತಲು ಪ್ರಯತ್ನಪಟ್ಟರು. ದೊಡ್ಡಬೆಟ್ಟದ ಬಂಡೆಯ ಮೇಲೆ ಅನೇಕ ಶಾಸನಗಳನ್ನು ಕೊರೆಸಿ, ತಮ್ಮ ಯಾತ್ರೆಯ ಯಶಸ್ವೀ ಮುಕ್ತಾಯವನ್ನು ಅವರು ಸಾರಿದರು. ಅವರ ಮಾತೃಭಾಷೆಯಲ್ಲಿಯೆ

31. 354.
32. 473.
33. 1680ರ 421; 17ನೆಯ ಶತಮಾನದ 498.
34. 395, 394, 409 ಮತ್ತು 408.
35. 400 ಮತ್ತು 384.
36. 395, 413, 414, 410, 422, 396-398, 442, 399, 400, 384, 408-409, 306, 407, 408, 385, 386, 411, 394, 412, 415-417, ಇತ್ಯಾದಿ.

ಹೊರಡಿಸಿದ ಸುಮಾರು ಇಪ್ಪತ್ತೈದು ಶಾಸನಗಳು ಇದನ್ನು ದೃಢೀಕರಿಸುವುವು.[37] ಮೂರು ನೂರು ವರ್ಷಗಳ ಕಾಲಾವಧಿಯಲ್ಲಿ (1500-1800) ಉತ್ತರದವರಿಂದ ಬಂದ ಒಟ್ಟು ಕೊಡುಗೆಯಲ್ಲಿ (1) ದೊಡ್ಡಬೆಟ್ಟದ ಮೇಲೆ ಚೌವೀಸ ತೀರ್ಥಂಕರರಿಗೆ ಕಟ್ಟಿಸಿದ ಒಂದು ಒರಟು ಗುಡಿ, ಮತ್ತು (2) ಸುತ್ತಾಲಯ ಹಾಗೂ ಪಟ್ಟಣದಲ್ಲಿರುವ ಸಿದ್ಧಾಂತಬಸದಿಗೆ ಸೇರಿಸಿದ ಒಂದೆರಡು ಅಮೃತಶಿಲೆಯ ವಿಗ್ರಹಗಳು ಮಾತ್ರ.[38]

4. ಸಂರಕ್ಷಣೆಗಾಗಿ ಮುನಿಗಳ ಹೆಣಗಾಟ : ಬುಕ್ಕನ ಏರುಪೇರಿನ ಮತ್ತು ನಿರಾಶಾದಾಯಕ ನಿರ್ಣಯವನ್ನು ಅಂದಿನ ಜೈನರು ಒಪ್ಪಿಕೊಂಡಿದ್ದು, 14ನೆಯ ಶತಮಾನದಲ್ಲಿ ಅವರು ಎದುರಿಸುತ್ತಿದ್ದ ದುರ್ಭರ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುದು. ತೀರಾ ದುರ್ಬಲಗೊಂಡು, ಈ ಕೇಂದ್ರದೊಂದಿಗೆ ತನ್ನ ಸಂಬಂಧವನ್ನು ಸಡಿಲಿಸಿಕೊಳ್ಳತೊಡಗಿದ ಮೂಲಸಂಘವು, 15ನೆಯ ಶತಮಾನದ ಕೊನೆಯಲ್ಲಿ ಈ ಕೇಂದ್ರದಿಂದ ಪೂರ್ತಿ ನಿರ್ಗಮಿಸಿದಂತೆ ಕಾಣುವುದು.[39] ಈ ಐತಿಹಾಸಿಕ ಸಂಘವನ್ನು ಹಾಗೂ ಶಕ್ತಿಶಾಲಿ ಶ್ರಾವಕರನ್ನು ಕಳೆದುಕೊಂಡ ಶ್ರವಣಬೆಳ್ಗೊಳದ ಆಚಾರ್ಯರು ಅಳಿದುಳಿದ ತಮ್ಮ ಅಂತಸ್ತು, ಆಸ್ತಿಯನ್ನು ಸಂರಕ್ಷಿಸಿಕೊಳ್ಳಲು ಸಾಕಷ್ಟು ಹೆಣಗಾಡಬೇಕಾಯಿತು.

ಉಳಿವಿಗಾಗಿ ನಡೆದ ಈ ಹೋರಟವು ದೇವಾಲಯದ ಆಸ್ತಿಯನ್ನು ಅಧಿಕೃತವಾಗಿ ಪಟ್ಟಿಮಾಡುವುದರಿಂದ ಆರಂಭಗೊಳ್ಳುವುದು. ಧಾರ್ಮಿಕ ಸಂಸ್ಥೆಗಳ ಗಡಿಗಳನ್ನು ಸ್ಪಷ್ಟವಾಗಿ ಗುರುತಿಸಿ, ಅವುಗಳ ದಾಖಲೆಗಳನ್ನು ನವೀಕರಿಸಲಾಯಿತು. ಆಂತರಿಕ ಶೋಷಣೆಯನ್ನು ತಪ್ಪಿಸಿ, ದೇವಾಯದ ಆಸ್ತಿಗೆ ಜವಾಬ್ದಾರರಾದವರೊಡನೆ ಸಂಭವನೀಯ ಘರ್ಷಣೆಯನ್ನು ಕನಿಷ್ಠಮಟ್ಟಕ್ಕೆ ಇಳಿಸುವುದು ಇದರ ಗುರಿಯಾಗಿತ್ತು. ಉದಾಹರಣೆಗೆ, ಚಾವುಂಡರಾಯ ಬಸದಿಯ ಗಡಿಗಳನ್ನು[40] ಬೆಕ್ಕ ಗ್ರಾಮದ ಪ್ರಭುಗಳ ಸಮಕ್ಷಮದಲ್ಲಿ ಅಂತಿಮವಾಗಿ ಪುನಃ ನಿರ್ಧರಿಸಲಾಯಿತು.[41] ಇದರ ಪರಿಣಾಮವಾಗಿ ಬೆಳ್ಗೊಳ, ಜಿನನಾಥಪುರ, ಜಿನ್ನೇನಹಳ್ಳಿ ಮತ್ತು ಕಂಠೀವರಾಯಪುರಗಳ ಗಡಿಗಳನ್ನು ಮತ್ತೊಮ್ಮೆ ನಿರ್ಧರಿಸುವುದು ಅಗತ್ಯವೆನಿಸಿತು.

---

37. 405, 392, 369, 367, 366, 368, 307-8, 311-313, 318, 350, 401, 315, 317, 320, 321, 309, 314, 316, 319, 391, 404, ಇತ್ಯಾದಿ.
38. ಅನುಕ್ರಮವಾಗಿ 422, 302, ಮತ್ತು 454.
39. 13ನೆಯ ಶತಮಾನದ ನಂತರ ಮೂಲಸಂಘದ ಉಲ್ಲೇಖಗಳು ಹೆಚ್ಚು ವಿರಳವಾಗುವುವು. 14ನೆಯ ಶತಮಾನದಲ್ಲಿ ಕೇವಲ ಐದು ಶಾಸನಗಳು ಈ ಸಂಘವನ್ನು ಪ್ರಸ್ತಾಪಿಸಿದರೆ (1313ರ 72, 1372ರ 380, 1398ರ 360, 353 ಹಾಗೂ 470) 15ನೆಯ ಶತಮಾನದ ನಂತರ ಅದನ್ನು ಒಮ್ಮೆ ಮಾತ್ರ ಪ್ರಸ್ತಾಪಿಸಲಾಗಿದೆ (364) .
40. ಅನುಕ್ರಮವಾಗಿ 499, 537, 541 ಮತ್ತು 546.
41. 537.

ಜಿನನಾಥಪುರದ ಸಂಸ್ಥೆಗಳ ಮತ್ತು ಬೆಳ್ಗೊಳದ ನಗರಜಿನಾಯಲಯದ ಆಸ್ತಿಯ ವಿವರ ಬಿಟ್ಟರೆ, ಉಳಿದವುಗಳಿಗೆ ಸಂಬಂಧಿಸಿದ ಇಂತಹ ದಾಖಲೆಗಳು ಈಗ ಲಭ್ಯವಾಗುತ್ತಿಲ್ಲ.[42]

14ನೆಯ ಶತಮಾನದ ಆಚಾರ್ಯರಲ್ಲಿ ಪಂಡಿತಯತಿಯು ಅತ್ಯಂತ ಚಾಲಕ ಶಕ್ತಿಯುಳ್ಳವನಾಗಿದ್ದನೆಂದು ತೋರುವುದು. ''ಧರ್ಮಮೋಕ್ಷಾರ್ಥವಾಗಿ ಬೆಳ್ಗೊಳದಲ್ಲಿ ಸ್ವಸಂತೋಷದಿಂದ ವಾಸವಾಗಿದ್ದ''ನೆಂದು ಮತ್ತು ಪ್ರತಿಸ್ಪರ್ಧಿಗಳ ಆಕ್ರಮಣದಿಂದ ಗೊಮ್ಮಟ ಮಹಾವಿಗ್ರಹವನ್ನು ರಕ್ಷಿಸಲು ''ಬೃಹತ್ ಸುತ್ತಾಲಯ''ವನ್ನು ಸ್ವತಃ ಕಟ್ಟಿಸಿದನೆಂದು, ಈ ಮುನಿಯನ್ನು ಬಣ್ಣಿಸಲಾಗಿದೆ. ಯಾತ್ರಿಗಳು ಗೊಮ್ಮಟನನ್ನು ಸುಲಭವಾಗಿ ತಲುಪಲು ಅನುಕೂಲವಾಗಲು ದೊಡ್ಡಬೆಟ್ಟದ ಬೊಜ್ಜಿನ ಮೇಲೆ ಸೋಪಾನ ಪಂಕ್ತಿಯನ್ನೂ ಈತನು ಕೊರೆಸಿದನು.[43] ಅವನ ''ಮಹಾತಪಸ್ಸಿನ ಮಹಿಮೆ''ಯೇ ''ಬೆಳ್ಗೊಳದ ನಗರಜಿನಾಲಯವನ್ನು ಪುನಃ ಅಸ್ತಿತ್ವಕ್ಕೆ ತಂದಿತೆಂದೂ'' ತಿಳಿಸಲಾಗಿದೆ.[44] ಮಾಂಗಾಯಿ ಕಟ್ಟಿಸಿದ್ದ ದೇವಾಲಯಕ್ಕೆ ಭೂದತ್ತಿ ನೀಡುವಂತೆ ಬೆಳ್ಗೊಳನಾಡಿನ ಮುತ್ತಿಗೆಹೊನ್ನಳಿಯ ಗೌಡರನ್ನು ಈ ಆಚಾರ್ಯನು ಪ್ರೇರೇಪಿಸಿದನು.[45] ಇವೆಲ್ಲಕ್ಕೂ ಮಿಗಿಲಾಗಿ, ತನ್ನ ಜೀವಿತ ಕಾಲದಲ್ಲಿ ಗೊಮ್ಮಟನಿಗೆ ಏಳು ಬಾರಿ ಮಸ್ತಾಕಾಭಿಷೇಕವನ್ನು ಮಾಡಿಸುವ ಮೂಲಕ ಈ ಕೇಂದ್ರದ ಗತವೈಭವವನ್ನು ಈತನು ಪುನಶ್ಚೇತನಗೊಳಿಸಿದನು. ಈ ಉತ್ಸವಗಳು ಮಹಾವಿಗ್ರಹದ ಖ್ಯಾತಿಯನ್ನು ದೂರದೂರದವರೆಗೆ ಹರಡಿ, ಯಾತ್ರಿಕರ ಸಂಖ್ಯೆಯನ್ನು ಹೆಚ್ಚಿಸಿದವು. 1398ರಲ್ಲಿ ವೀರಮರಣವನ್ನು ಆಹ್ವಾನಿಸಿ ಈ ಮುನಿಯು ಇಹಲೋಕ ತೊರೆದುದನ್ನು ತಿಳಿದು, ಅಂದಿನ ವೃತ್ತಾಂತಕಾರನೊಬ್ಬನಿಗೆ ''ಎಲ್ಲವೂ ಕಾರ್ಗತ್ತಲೆಯಲ್ಲಿ ಮುಳುಗಿ ಹೋದಂತೆನಿಸಿದುದ''ರಲ್ಲಿ ಅಷ್ಟೇನೂ ಉತ್ಪ್ರೇಕ್ಷೆ ಇರಲಿಲ್ಲ.[46] ಆದರೆ ಪಂಡಿತಯತಿಯಂಥ ಚೇತನಕಾರಿ ಮುನಿಗಳು ಹಾಕಿಕೊಟ್ಟ ಮೇಲ್ಪಂಕ್ತಿ ಕೂಡಾ ಇತಿಹಾಸದ ಗತಿಯನ್ನು ಬದಲಿಸಲು ಸಾರ್ಥಕವಾಗಲಿಲ್ಲವೆಂಬುದು ಮಾತ್ರ ಅತಿ ದುಃಖಕರವಾದ ವಿಷಯ.

15-16ನೆಯ ಶತಮಾನಗಳಲ್ಲೂ ಇಂತಹ ಪ್ರಯತ್ನಗಳು ಮುಂದುವರಿದವು. ಗೆರೆಸೊಪ್ಪೆಯ ಗೊಮ್ಮಟಣ್ಣನು ಚಿಕ್ಕಬೆಟ್ಟ ಹಾಗೂ ಪಟ್ಟಣಪ್ರದೇಶದ ಹಲವು ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಬೇಕಾಗಿ ಬಂದುದನ್ನು ನೋಡಿದರೆ, ಅವು ಎಷ್ಟು ಅನಾದರಕ್ಕೊಳಗಾಗಿದ್ದವೆಂಬುದನ್ನು ಸುಲಭವಾಗಿ ಮನವರಿಕೆಮಾಡಿಕೊಳ್ಳಬಹುದು.[47]

---

42. ಅನುಕ್ರಮವಾಗಿ 523 ಮತ್ತು 500.
43. 360.
44. 364.
45. 545.
46. 364.

ಧಾರ್ಮಿಕ ಸಂಸ್ಥೆಗಳಿಗೆ ದಾನ ನೀಡುವಂತೆ ತಮ್ಮ ಶಿಷ್ಯರ ಮೇಲೆ ಪ್ರಭಾವ ಬೀರಲು ಚಂದ್ರಕೀರ್ತಿ, ಚಾರುಕೀರ್ತಿ ಮತ್ತು ಪಂಡಿತದೇವರಂಥ ಮುನಿಗಳು ಸಾಕಷ್ಟು ಪ್ರಯತ್ನ-ಪರಿಶ್ರಮ ಪಡಬೇಕಾಯಿತು.[48] ಸ್ಥಳೀಯ ಅಧಿಕಾರಿಗಳನ್ನು, ಪುರೋಹಿತರನ್ನು, ವರ್ತಕರನ್ನು, ಯಾತ್ರಿಕರನ್ನು ತಾಳ್ಮೆಯಿಂದ ಓಲೈಸಿಕೊಳ್ಳಲು ಇವರೆಲ್ಲ ವಿಶೇಷ ಕ್ರಮ ಕೈಗೊಂಡರಲ್ಲದೆ[49] ಹಲವು ಬಾರಿ ನಿಷ್ಠುರ ನಿರ್ಣಯಗಳನ್ನೂ ಕೈಕೊಂಡರು. ಮಸ್ತಕಾಭಿಷೇಕದ ಸಂದರ್ಭವೊಂದರಲ್ಲಿ ಪುರೋಹಿತರು, ಕಾರ್ಮಿಕರು, ಕಲ್ಲುಪ್ಪಾರರು, ಬಡಗಿಗಳು, ಮುಂತಾದವರಿಗೆ ಕೆಲವು ಕಾಣಿಕೆಗಳನ್ನು ಕೊಡುತ್ತಾ ಅವರ ಕರ್ತವ್ಯ ಪಾಲನೆಯಲ್ಲಿ ಚ್ಯುತಿ ಬಂದರೆ ''ದಂಡ ವಿಧಿಸಿ ಶಿಕ್ಷಿಸ''ಲಾಗುವುದೆಂದು ಪಂಡಿತಯತಿಯು ಎಚ್ಚರಿಕೆ ನೀಡಿದನು.[50] ಹೀಗೆ ದೃಢ ಕಾರ್ಯೋದ್ದೇಶವುಳ್ಳ ಆಚಾರ್ಯರು ಈ ಕೇಂದ್ರದ ನಿರ್ವಹಣೆ ವಹಿಸಿಕೊಂಡಾಗ, ಮೆತ್ತಗೆ ಮಾತಾಡಿ, ತೋರಿಕೆಯ ನಿಷ್ಠೆ, ಪ್ರಾಮಾಣಿಕತೆಯ ನಾಟಕವಾಡುತ್ತಿದ್ದ ಠಕ್ಕರು ಇಲ್ಲಿಂದ ಕಾಲ್ತೆಗೆಯಲೇಬೇಕಾಯಿತು.

ಇಷ್ಟೆಲ್ಲ ಮುನ್ನೆಚ್ಚರಿಕೆ ವಹಿಸಿದರೂ ಈ ಕೇಂದ್ರದ ಧಾರ್ಮಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು 15ನೆಯ ಶತಮಾನದನಂತರ ಸುಧಾರಿಸಲಿಲ್ಲ. ಇದಕ್ಕೆ ಪ್ರಮುಖ ಕಾರಣಗಳಲ್ಲೊಂದು ಗುಡ್ಡರಿಗೆ ಸ್ವಂತ ಮೇಲ್ಪಂಕ್ತಿ ಹಾಕಿಕೊಟ್ಟು ಸ್ಫೂರ್ತಿಕೊಡಬಲ್ಲ ಬೆಳ್ಗೊಳದ ಮಠಾಧಿಪತಿಗಳ ಅಭಾವವಾಗಿತ್ತು. ಸ್ಥಾನಿಕರು ದೇವಾಲಯದ ಭೂಮಿಯನ್ನು ಅಡವಿಟ್ಟ ಕಾಲದಲ್ಲಿ ಮಠಾಧಿಪತಿಯು ಅದನ್ನು ಕಂಡೂಕಾಣದಂತೆ ಕಣ್ಣುಮುಚ್ಚಿಕೊಂಡು, ಅಳಿದುಳಿದ ಅಲ್ಪದರಿಂದಲೇ ನೆಮ್ಮದಿ ಪಡೆದುಕೊಂಡು, ತೆಪ್ಪಗಿರುವುದನ್ನು ರೂಢಿಸಿಕೊಂಡಿದ್ದನು. ಈ ಪರಿಸ್ಥಿತಿಯು ಶಾಸನಗಳು ತೋರ್ಪಡಿಸಿದುದಕ್ಕಿಂತ ಎಷ್ಟೋಪಟ್ಟು ದುರ್ಭರವಾಗಿತ್ತೆಂಬುದನ್ನು ಊಹಿಸಿ ಮಾತ್ರ ಗ್ರಹಿಸಲು ಸಾಧ್ಯ. ಸುಮಾರು 1680ರಲ್ಲಿ *ಮುನಿವಂಶಾಭ್ಯುದಯ* ರಚಿಸಿದ ಚಿದಾನಂದಕವಿಯು ಮೈಸೂರಿನ ಅರಸನು ಬೆಳ್ಗೊಳಕ್ಕೆ ಭೇಟಿ ಕೊಟ್ಟಿದ್ದನ್ನು ದೃಢೀಕರಿಸುತ್ತಾನೆ. ತೆಲುಗು ಜಗದೇವನು ಮೇಲಿಂದ ಮೇಲೆ ಮಾಡುತ್ತಿದ್ದ ದಬ್ಬಾಳಿಕೆಯನ್ನು ಸಹಿಸಿಕೊಳ್ಳಲಾರದೆ ಮುನಿ ಚಾರುಕೀರ್ತಿದೇವನು ಬೆಳ್ಗೊಳ ತೊರೆದು ದೂರ ಹೋಗಬೇಕಾದುದನ್ನು, ಇದರಿಂದಾಗಿ ಗೊಮ್ಮಟೇಶ್ವರನ ಪೂಜೆ ನಿಂತು ಹೋಗಿದುದನ್ನು, ಮೈಸೂರು ಅರಸನು ಮನವರಿಕೆ ಮಾಡಿಕೊಂಡನೆಂದು ಈ ಕಾವ್ಯದಲ್ಲಿ ವಿವರಿಸಲಾಗಿದೆ. ಇದು ಕೇವಲ ಕವಿಕಲ್ಪನೆಯಾಗಿರಲಿಲ್ಲವೆಂಬುದನ್ನು ಬೆಳ್ಗೊಳದ ಆಕರಗಳು

---

47. 473.
48. 1409ರ 361, 1455ರ 363, 15ನೆಯ ಶತಮಾನದ 525 ಮತ್ತು 16ನೆಯ ಶತಮಾನದ 471.
49. 361, 363, 331.
50. 15ನೆಯ ಶತಮಾನದ 332.

ವಿಪುಲವಾಗಿ ದೃಢೀಕರಿಸುವುವು.[51]

ಮುನ್ನೂರು ವರ್ಷ ಕಾಲ (1600-1900) ಈ ಕೇಂದ್ರದ ಆಚಾರ್ಯರಾಗಲಿ, ಶ್ರಾವಕರಾಗಲಿ, ಬೆಳ್ಗೊಳದ ಪರಿಸ್ಥಿತಿಯನ್ನು ಸುಧಾರಿಸಲು ಶ್ರದ್ಧೆಯಿಂದ ಪ್ರಯತ್ನಿಸಲಿಲ್ಲವೆಂಬುದರಲ್ಲಿ ಅನುಮಾನವಿಲ್ಲ. ದಾನ ಯಾಚಿಸಿ ಯಾತ್ರಿಗಳಿಗೆ ಮತ್ತು ಸ್ಥಳೀಯ ಶ್ರೀಮಂತರಿಗೆ ಆಚಾರ್ಯರು ಕರೆ ಕೊಟ್ಟರೂ ಈ ಮನವಿಗಳು ಬಿದ್ದುದು ಕಿವುಡು ಕಿವಿಗಳ ಮೇಲೆ ಮಾತ್ರ ಎಂದೇ ಹೇಳಬೇಕು. ಚಾರುಕೀರ್ತಿಪಂಡಿತದೇವನ ಕೋರಿಕೆಯ ಮೇರೆಗೆ ದೊಡ್ಡಬೆಟ್ಟದ ಮೇಲೆ 1648ರಲ್ಲಿ ಕಟ್ಟಲಾದ ಚೌವೀಸ ತೀರ್ಥಂಕರ ಬಸದಿಯನ್ನು ಹೊರತುಪಡಿಸಿ, ಈ ಬಗೆಯ ಬೇರಾವ ಧರ್ಮಕಾರ್ಯಗಳು 17ನೆಯ ಶತಮಾನದಲ್ಲಿ ಸಂಭವಿಸಲಿಲ್ಲ. ಹಾಗೆ ನೋಡಿದರೆ, ಸಂಘದ ವಂಶಾವಳಿಯನ್ನು ಗುರುತಿಸುವಾಗ ಈ ಕಾಲದ ಶಾಸನಕವಿಗಳು ಸಮಕಾಲೀನ ಮಠಾಧಿಪತಿಗಳನ್ನು ಔಪಚಾರಿಕವಾಗಿಯೂ ಪ್ರಸ್ತಾಪಿಸುವುದಿಲ್ಲ; ಅಲ್ಲದೆ, ಸ್ಥಳೀಯ ಶ್ರಾವಕರೂ ತಮ್ಮ ಕುಲಗುರುಗಳನ್ನಾಗಲಿ ಅಥವಾ ಕೇಂದ್ರದ ಆಚಾರ್ಯರನ್ನಾಗಲಿ, ಉಲ್ಲೇಖಿಸುವ ಅಗತ್ಯತೆಯನ್ನು ಕಾಣುವುದಿಲ್ಲ.[52] 12ನೆಯ ಶತಮಾನದ ಪ್ರತಿಯೊಂದು ಕುಟುಂಬವೂ ತನ್ನ ಗುರುವಿನ ಹೆಸರನ್ನು ಹೇಳಿಕೊಳ್ಳುತ್ತಿದ್ದ ಸಂಪ್ರದಾಯಕ್ಕೆ ಇದು ವ್ಯತಿರಿಕ್ತವಾಗಿದೆ. ಯಾವಾಗಲೋ ಒಮ್ಮೆ ಕೆಲವು ಯಾತ್ರಿಕರು ಆಚಾರ್ಯರನ್ನು ಭೆಟ್ಟಿಯಾಗಿ ಸಣ್ಣಪುಟ್ಟ ಭಕ್ತಿಕಾರ್ಯಗಳನ್ನು ಪೂರೈಸಿಕೊಳ್ಳುವುದು, ಕಾಣಿಕೆಗಳನ್ನು ಸಲ್ಲಿಸುವುದು ಮಾತ್ರ ಮುಂದುವರಿದಂತೆ ತೋರುವುದು.[53]

ಬೆಳ್ಗೊಳದ ಆಚಾರ್ಯರ ಸ್ಥಾನಿಕ ಪ್ರತಿಷ್ಠೆ ಎಷ್ಟು ತಳಕಂಡಿತ್ತೆಂದರೆ, ಉತ್ತರದಿಂದ ಬರುತ್ತಿದ್ದ ಯಾತ್ರಿಗಳೂ ಅವರನ್ನು ಪೂರ್ಣ ನಿರ್ಲಕ್ಷಿಸತೊಡಗಿದರು. ಇಂತಹ ವರ್ತನೆಯಿಂದ ನಿರಾಶೆಗೊಂಡ 19ನೆಯ ಶತಮಾನದ ಆಚಾರ್ಯ ಸನ್ಮತಿಸಾಗರವರ್ಣಿಯು ತಮಿಳುನಾಡಿನ ಭಕ್ತರ ಮೇಲೆ ಅವಲಂಬಿಸತೊಡಗಿದನು. ಈ ಮುನಿಯ ಪ್ರಯತ್ನದಿಂದಾಗಿ, ಕುಂಬಕೋಣಂ, ತಂಜಾವೂರು, ಕಾಂಚಿ, ಮನ್ನಾರ್‌ಕೋಯಿಲ್, ತಚ್ಚೇರು, ಮುಂತಾದ ಕೇಂದ್ರಗಳ ವರ್ತಕರು

---

51. ನೋಡಿ. ಎಕ II, ಎರಡನೆಯ ಆವೃತ್ತಿ, ಸಂ. ಆರ್. ನರಸಿಂಹಾಚಾರ್, ಪು. 65; 3ನೆಯ ಆವೃತ್ತಿ, ಪು. xci

52. ಚನ್ನಣ್ಣನು ಬಸದಿಯನ್ನು ನಿರ್ಮಿಸಿದಾಗ (1667ರ 424) ಮತ್ತು ಜಿನ್ನೇನಹಳ್ಳಿಯನ್ನು ದತ್ತಿ ನೀಡಿದಾಗ (1673ರ 540), ದೇವರಾಯನು ರಾಗಿಬೊಮ್ಮನಹಳ್ಳಿಯನ್ನು ವಹಿಸಿಕೊಟ್ಟಾಗ(1672ರ 551). ರಂಗೈಯನು ಬ್ರಹ್ಮದೇವ ಮಂಟಪವನ್ನು ನಿರ್ಮಿಸಿದಾಗ (17ನೆಯ ಶತಮಾನದ 439), ಆ ಸ್ಥಳದ ಪ್ರಧಾನ ಗುರು ಗೈರುಹಾಜರಾಗಿದ್ದ ಅಥವಾ ಆತನ ಉಪಸ್ಥಿತಿಯನ್ನು ಗುರುತಿಸುವುದು ಅವಶ್ಯಕವೆನಿಸಲಿಲ್ಲ.

53. 17ನೆಯ ಶತಮಾನದ 498.

ಲೋಹವಿಗ್ರಹಗಳನ್ನು ತಂದು ಮಠಕ್ಕೆ ಕೊಟ್ಟರು. ಅವನ್ನು ಸ್ಥಾನಿಕರ ಉಸ್ತುವಾರಿಯಲ್ಲಿರುವ ಯಾವುದೇ ದೇವಾಲಯದಲ್ಲಿಡುವುದಕ್ಕಿಂತ, ಮಠದಲ್ಲಿ ರಕ್ಷಣೆ ಮಾಡುವುದು ಹಿತಕರವೆಂದು ಅಂದಿನ ಆಚಾರ್ಯರು ಭಾವಿಸಿ, ಅವನ್ನು ತಮ್ಮಲ್ಲಿಯೇ ಉಳಿಸಿಕೊಂಡರು. ಮಠಾಧಿಪತಿ ಮತ್ತು ಭಕ್ತರ (ದೇವಾಲಯದ ಸೇವಕರು, ಗುಡ್ಡರು, ಸ್ಥಳೀಯ ನಾಯಕರು, ಇತ್ಯಾದಿ) ಮಧ್ಯೆ ಉಂಟಾಗಿದ್ದ ಕಂದಕದ ವಿಸ್ತಾರವನ್ನು ಇದು ಸೂಚಿಸುತ್ತದೆ; ಅಷ್ಟೇ ಅಲ್ಲದೆ, ಮಠಾಧಿಪತಿಯ ಚಟುವಟಿಕೆಗಳು ಮಠದ ಆವರಣಕ್ಕಷ್ಟೆ ಸೀಮಿತವಾಗಿದ್ದುದನ್ನೂ ಸ್ಪಷ್ಟಗೊಳಿಸುತ್ತದೆ.

5. ***ಆಧ್ಯಾತ್ಮಿಕದ ಸ್ವರೂಪ - ಸಮಾಧಿ ಮರಣ ಒಂದು ನೆನಪು ಮಾತ್ರ*** : ಈ ವಿಷಮ ಕಾಲದಲ್ಲಿ ಕೆಲವರು ಸಮಾಧಿಮರಣದಲ್ಲಿ ಸಾಂತ್ವನ ಕಂಡರು; ಮತ್ತೆ ಕೆಲವರು ಈ ಆಚರಣೆಯ ಒಳದನಿಯನ್ನು ಕಂಡುಕೊಂಡರು; ಇನ್ನೂ ಕೆಲವರು ಎಲ್ಲ ಬಗೆಯ ಧಾರ್ಮಿಕ, ಆಧ್ಯಾತ್ಮಿಕ ಬಂಧನಗಳಿಂದ ಬಹುದೂರ ಸರಿದುನಿಂತರು.

ಈ ಆರುನೂರು ವರ್ಷಗಳಲ್ಲಿ ಬಹುಮಟ್ಟಿಗೆ ಯಾವ ಶ್ರಾವಕ-ಶ್ರಾವಕಿಯರೂ ಕಠಿಣ ವ್ರತಾಚರಣೆಗಳನ್ನು ನಿಯಮಬದ್ಧವಾಗಿ ಆಚರಿಸಿ ಸಮಾಧಿಮರಣವನ್ನು ಸ್ವೀಕರಿಸಲಿಲ್ಲ. 14ನೆಯ ಶತಮಾನದಲ್ಲಿ ಜರುಗಿದ ಪಾಯಿಸೆಟ್ಟಿಯ ಒಂದು ಸಮಾಧಿಮರಣ ಮಾತ್ರ ಆಚರಣೆ ಸಂಹಿತೆಗೆ ಹತ್ತಿರವಾಗಿತ್ತೆಂದು ತೋರುವುದು.[54] ಇದೇ ಶತಮಾನದಲ್ಲಿ ನಡೆದವೆಂದು ಹೇಳಲಾದ ಗೋಪಯ ಮತ್ತು ಬೈಚಕ್ಕರ ಮರಣ,[55] 15ನೆಯ ಶತಮಾನದಲ್ಲಿಯ ಹರಿಹರ ಮತ್ತು ದೇವರಾಟನ ಮರಣ,[56] 17ನೆಯ ಶತಮಾನದಲ್ಲಿಯ ಹರಿಯಣ ಮತ್ತು ಅವನ ಮಡದಿ ಮಹಾದೇವಿಯ ಮೋಕ್ಷಮಾರ್ಗ,[57] 19ನೆಯ ಶತಮಾನದಲ್ಲಿ ಕೃಷ್ಣರಾಜ ಒಡೆಯರ ಭಕ್ತೆಯಾಗಿದ್ದ ದೇವರಾಯರಸನ ಮರಣ,[58] ಇವು ವಿಧಿವತ್ತಾಗಿ ಜರುಗಲಿಲ್ಲವಾದುದರಿಂದ, ಅವುಗಳನ್ನು ವಿಧಿರಹಿತ ಮರಣಗಳೆಂದೇ ಗುರುತಿಸಬೇಕಾಗುವುದು. ಕೆಲವು ಶ್ರಮಣರನ್ನು ಅವರ ಕೊನೆಯ ಹಂತದ ಆಧ್ಯಾತ್ಮಿಕ ಸಾಧನೆಗಳಿಗಿಂತ ಹೆಚ್ಚಾಗಿ ಅವರ ಉಚ್ಛ್ರಾಯ ಕಾಲದಲ್ಲಿ ಪಡೆದಿದ್ದ ಉನ್ನತ ಗೌರವಕ್ಕಾಗಿ ಸ್ಮರಿಸಲಾಯಿತೆಂದು ತೋರುವುದು. ಇವರೆಲ್ಲರೂ ಅನುಸರಿಸಿದ ಆಚರಣೆಯ ವಿವರಗಳು ದೊರೆಯದ ಕಾರಣ, 14ನೆಯ ಶತಮಾನದ ಲಕ್ಷ್ಮೀಸೇನಭಟ್ಟಾರಕನ ಶಿಷ್ಯ ಮಲ್ಲಿಸೇನ, ಶಾಂತಿಕೀರ್ತಿದೇವನ ಶಿಷ್ಯ ಹೇಮಚಂದ್ರ, ಧರ್ಮಭೂಷಣದೇವ ಮತ್ತು

---

54. 14ನೆಯ ಶತಮಾನದ 353.
55. 14ನೆಯ ಶತಮಾನದ 377.
56. 1404ರ 446 ಮತ್ತು 1446ರ 445.
57. 17ನೆಯ ಶತಮಾನದ 365.
58. 1827ರ 324.

ಸಿಂಹಣಂದಿ ಆಚಾರ್ಯ, ಮುಂತಾದವರು ಮರಣವನ್ನು ವಿಧಿವತ್ತಾಗಿ ಆಹ್ವಾನಿಸಿದ ಬಗ್ಗೆ ಸಂದೇಹಗಳೇಳುವುವು.[59] ಅದೇ ರೀತಿ, 1643ರಲ್ಲಿ ಚಾರುಕೀರ್ತಿಪಂಡಿತನೂ ಸಮಾಧಿಮರಣವನ್ನು ಬಹುಶಃ ಸಾಂಕೇತಿಕವಾಗಿ ಮಾತ್ರ ಆಚರಿಸಿದನೆಂದು ತೋರುವುದು.[60] ಈ ಎಲ್ಲ ಸ್ಮಾರಕ ಶಾಸನಗಳಲ್ಲಿಯ ಒಂದು ಸಾಮಾನ್ಯ ಅಂಶವೆಂದರೆ 'ಸಮಾಧಿ', 'ಸಲ್ಲೇಖನಾ', ಇತ್ಯಾದಿ ಪದಗಳಿಂದ ಅವನ್ನು ಗುರುತಿಸದಿರುವುದು; ನಿಸಿಧಿಗಳೆಂದು ಅವನ್ನು ಹೆಸರಿಸದಿರುವುದು.

ಈ ನಿದರ್ಶನಗಳಿಗಿಂತ ಭಿನ್ನವಾಗಿ, 1313ರಲ್ಲಿ ಮಡಿದ ಆಧ್ಯಾತ್ಮಿ ಶುಭಚಂದ್ರದೇವ, 1398ರಲ್ಲಿ ಕೊನೆಕಂಡ ಪಂಡಿತಯತಿ, 1432ರಲ್ಲಿ ಸಾವನ್ನಪ್ಪಿದ ಶ್ರುತಮುನಿ ಮತ್ತು 1809ರಲ್ಲಿ ಮಡಿದ ಅಜಿತಕೀರ್ತಿದೇವರು, ನಿಖರವಾದ ವಿಧಿ ಸಂಹಿತೆಯನ್ನು ಪಾಲಿಸಿ, ಮರಣವನ್ನು ಆಹ್ವಾನಿಸಿದರವರಾಗಿದ್ದರು. 13 ರಿಂದ 18ನೆಯ ಶತಮಾನಗಳ ನಡುವಿನ ಆರುನೂರು ವರ್ಷಗಳಲ್ಲಿ ಜರುಗಿದ ಈ ನಾಲ್ಕೇ ನಾಲ್ಕು ದಾಖಲಿತ ಮರಣಗಳು, ಆಧ್ಯಾತ್ಮಿಕ ಕಠೋರತೆಯಲ್ಲಿ ಆಸಕ್ತಿ ಕ್ಷೀಣಿಸುತ್ತಿದ್ದುದನ್ನು ತೋರ್ಪಡಿಸುವುವು. ಹಾಗೆ ನೋಡಿದರೆ, ಸಮಾಧಿಮರಣದ ಯುಕ್ತ ಆಚರಣೆಯು 15ನೆಯ ಶತಮಾನದ ಅಂತ್ಯಕ್ಕೆ ಕೊನೆಗೊಂಡಿತೆಂದು, ಆನಂತರ ಸಂಭವಿಸಿದ ಘಟನೆಗಳೆಲ್ಲ ತೋರಿಕೆಯ ಪ್ರತ್ಯಾವರ್ತನೆ ಮಾತ್ರವಾಗಿದ್ದವೆಂಬ ಭಾವನೆ ಬರುವುದು.[61]

ಸಮಾರೋಪ: ಈ ಅಭ್ಯಾಸವನ್ನು ಸಮಾಪ್ತಿಗೊಳಿಸುವ ಮುಂಚೆ ಬೆಳ್ಗೊಳವು ತನ್ನ ಸುದೀರ್ಘ ಇತಿಹಾಸದಲ್ಲಿ ಹುದುಗಿಸಿಕೊಂಡಿರುವ ಸ್ಥಿತ್ಯಂತರಗಳ ಬಗ್ಗೆ ಮತ್ತೊಮ್ಮೆ ಮೆಲಕು ಹಾಕಬಹುದು. ಆಧ್ಯಾತ್ಮಿಕ ಅನ್ವೇಷಣೆಯ ಪ್ರಥಮ ಹಂತದಲ್ಲಿ (600-900)ಎಲ್ಲರ ಗಮನವು ಸಮಾಧಿಮರಣ ಹಾಗೂ ಕಟವಪ್ರದ ಮೇಲೆ ಕೇಂದ್ರೀಕೃತಗೊಂಡಿತ್ತು; ಆ ತರುವಾಯದ ಸಂಕ್ರಮಣ ಕಾಲದ ಪ್ರಥಮ ಹಂತ (900-1000)ದ ಚಟುವಟಿಕೆಗಳು ಮರಣ ಮಗ್ನತೆಯಿಂದ ಧಾರ್ಮಿಕ ಸಂಸ್ಥೆಗಳನ್ನು ಬಲಪಡಿಸುವೆಡೆ ವಾಲಿದವು. ಸಂಕ್ರಮಣ ಕಾಲದ ಪ್ರಥಮ ಹಂತದಲ್ಲಿ ಸಮಾಧಿಮರಣವನ್ನಪ್ಪಲು, ನಂತರ ಈ ಕ್ಷೇತ್ರವನ್ನು ಒಂದು ದೊಡ್ಡ ಧಾರ್ಮಿಕ ಕೇಂದ್ರವನ್ನಾಗಿ ಬೆಳೆಸಲು, ಶ್ರಾವಕರನ್ನು ಆಕರ್ಷಿಸಿದವು. ವಿಪುಲ ಭೌತಿಕ ಮತ್ತು ಧಾರ್ಮಿಕ ಸಮೃದ್ಧಿಯ ಮೂರನೆಯ ಹಂತ (1100-1300) ದಲ್ಲಿಯೂ ಸಂಕ್ರಮಣ ಯುಗದ ಚಟುವಟಿಕೆಗಳನ್ನು ಮುಂದುವರೆಸಿ, ತೀವ್ರಗೊಳಿಸಲಾಯಿತು. ವರ್ಚಸ್ವೀ ಶ್ರಾವಕ ವರ್ಗದ ತೊಡಗುವಿಕೆ, ಅಧಿಕ ಸಂಖ್ಯೆಯ ದೇವಾಲಯ ಮತ್ತು ಕೆರೆಗಳ ಅಸ್ತಿತ್ವ, ಅಭೂತಪೂರ್ವ

---

59. ಅನುಕ್ರಮವಾಗಿ 253, 379, 380 ಮತ್ತು 382.

60. 1643ರ 497.

61. ಇವುಗಳ ಬಗ್ಗೆ ಹೆಚ್ಚಿನ ವಿವರಗಳು ಮುಂದಿನ ಅಧ್ಯಾಯಗಳಲ್ಲಿ ದೊರೆಯುವುದು.

ಸಂಪತ್ಸಂಪಾದನೆಯಲ್ಲಿ ಇದು ಪರಿಸಮಾಪ್ತಿಗೊಂಡಿತು. ಇದೇ ಯುಗವು ಆಧ್ಯಾತ್ಮಿಕ ಜೀವನ ಮತ್ತು ಧಾರ್ಮಿಕ ಉತ್ಕಟತೆಯು ದುರ್ಬಲಗೊಳ್ಳುವುದನ್ನೂ ಕಂಡಿತು. ಮೂಲಸಂಘವು ಮತೀಯ ಹೊಣೆಗಳನ್ನು ನಿಯಂತ್ರಿಸಲು ಕಾಲಿಟ್ಟಿತು. ಅಲ್ಲಿಯವರೆಗೂ ಕೇಂದ್ರಬಿಂದುವಾಗಿದ್ದ ದೊಡ್ಡಬೆಟ್ಟದ ಮಹಾವಿಗ್ರಹವು ಸಮಾಧಿಬೆಟ್ಟವನ್ನು ಮರೆಮಾಚಿಸತೊಡಗಿತು. ಕೊಳ್ಳದಲ್ಲಿ ವಿಸ್ತಾರಗೊಳ್ಳುತ್ತಿದ್ದ ಪಟ್ಟಣವು ಈ ಎರಡೂ ಬೆಟ್ಟಗಳನ್ನು ಬೆಸೆದು ನಿಂತಿತು. ಬೆಳ್ಗೊಳದ ಸುತ್ತಲಿನ ಪ್ರದೇಶವು ಈ ಕೇಂದ್ರದ ಆರ್ಥಿಕ ಅಸ್ತಿತ್ವವಾಗಿ ಮಾತ್ರ ಇತಿಹಾಸದಲ್ಲಿ ಗೋಚರಿಸ ತೊಡಗಿತು.

ಎರಡನೆಯ ಸಂಕ್ರಮಣ ಯುಗ (1300-1600) ಇದನ್ನು ಹಿಂಬಾಲಿಸಿ ಬಂತು. ಈ ಕಾಲದಲ್ಲಿ ಭೌತಿಕ ಝರಿ ಬತ್ತಿ, ಹೋರಾಟದ ಯುಗ ಆರಂಭವಾಯಿತು. ಪ್ರತಿಸ್ಪರ್ಧಿ ಪಂಥಗಳೊಂದಿಗೆ ವ್ಯಾಜ್ಯ, ಶ್ರಾವಕರಲ್ಲಿ ಚಂಚಲ ಆಸಕ್ತಿ, ದೇವಾಲಯ ನಿರ್ಮಾಣ ಮತ್ತು ದತ್ತಿಕೊಡುಗೆಯ ಉತ್ಸಾಹದಲ್ಲಿ ಅಭಾವ, ಸಂಘದ ವೈಫಲ್ಯ ಹಾಗೂ ಸಮಾಧಿಮರಣ ಸೇರಿದಂತೆ ಆಧ್ಯಾತ್ಮಿಕ ಪಥದಿಂದ ದೂರ ಸರಿಯುವಿಕೆ, ಈ ಕಾಲದ ಪ್ರಮುಖ ಲಕ್ಷಣಗಳೆನಿಸಿದವು. ಪಂಡಿತರಾಯ ಮತ್ತು ಶ್ರುತಮುನಿಗಳಂಥ ಮುನಿವರ್ಯರು ಶ್ರಾವಕರನ್ನು ಓಲೈಸಿಕೊಳ್ಳಲು ಮತ್ತು ಧಾರ್ಮಿಕರಿಗೆ ಮೇಲ್ಪಂಕ್ತಿ ಒದಗಿಸಲು ಪ್ರಯತ್ನ ಮಾಡಿದರೇನೂ ನಿಜ, ಆದರೆ ಅದು ಪೂರ್ಣ ಫಲ ಕೊಡಲಿಲ್ಲ.

ಪ್ರಥಮ ಹಂತದಂತೆಯೆ ಎರಡನೆಯ ಕಾಲಮಾನವನ್ನೂ ಶ್ರಾವಕರೇ ರೂಪಿಸಿದರು; ಆದರೆ, ತಮ್ಮ ಧರ್ಮಕಾಣಿಕೆಗಳನ್ನು ವ್ಯವಹಾರದಲ್ಲಿ ತೊಡಗಿಸಿದ ಬಂಡವಾಳವೆಂದು ಪರಿಗಣಿಸಿ, ವ್ಯಾಪಾರಿ ಮನೋಭಾವನೆಯಿಂದ ಇವರು ಚೌಕಾಸಿ ಮಾಡಲು ಯತ್ನಿಸಿದರು. ಬೆಳ್ಗೊಳದ ವ್ಯವಹಾರಗಳಲ್ಲಿ ಶ್ರಾವಕರ ಪಾತ್ರ ಈ ಕಾಲದಲ್ಲಿ ಹೆಚ್ಚು ಬಲಿಷ್ಠವಾಯಿತು. ಸೆಟ್ಟಿಗಳು, ಸ್ಥಾನಿಕರು, ಪ್ರಭುಗಳು, ಗಾವುಂಡರು, ಮುಂತಾದವರಿಂದಲ್ಲದೆ ಆಗಿನ ಆರ್ಥಿಕ ಪ್ರಗತಿ ಸಾಧ್ಯವಾಗುತ್ತಿರಲಿಲ್ಲವೆಂಬುದೇನೋ ನಿಜ; ಆದರೆ ಧಾರ್ಮಿಕರು ಸಂದೇಹಾಸ್ಪದ ಪಾತ್ರ ವಹಿಸಿ, ಶ್ರೀಮಂತ ಶ್ರಾವಕರು ಅದನ್ನು ನೋಡಿಯೂ ನೋಡದಂತಿದ್ದುದರಿಂದ, ಈ ಕೇಂದ್ರದ ಇತಿಹಾಸದ ಮುಂದಿನ ಘಟ್ಟವು (1600-1900) ಆತಂಕದ ಹಂತವನ್ನು ಅನಿವಾರ್ಯವಾಗಿ ಮುಟ್ಟಿತು.

ಈ ಕಾಲಾವಧಿಯು ಆಧ್ಯಾತ್ಮಿಕ, ಧಾರ್ಮಿಕ, ಭೌತಿಕ ಕಾರ್ಯಗಳಾವೂ ಗೌರವಾನ್ವಿತವೆನಿಸಲಿಲ್ಲ; ಏಕೆಂದರೆ ಅವೆಲ್ಲವೂ ತೋರಿಕೆಯ ಆಟಗಳಾಗಿದ್ದವು ಮಾತ್ರ ಯಾತ್ರಿಗಳ ಸಂಖ್ಯೆಯೇನೋ ಉಕ್ಕೇರಿತು, ಆದರೆ ಅದಕ್ಕೆ ನಿರ್ದಿಷ್ಟ ಅರ್ಥವಿರಲಿಲ್ಲ. ಆಧ್ಯಾತ್ಮಿಕ ಅಭಾವವನ್ನು ಒಂದು ಬಗೆಯಲ್ಲಿ ಮರೆಮಾಚಲೋಸುಗಲೇನೋ ಅನ್ನುವಂತ ಮಸ್ತಕಾಭಿಷೇಕದಂತಹ ಉತ್ಸವಗಳು ಹೆಚ್ಚಾದವು. ಆದರೆ ಇದರಿಂದ ವಿಶೇಷವಾದ

ಪರಿಣಾಮವೇನೂ ಆಗಲಿಲ್ಲ. ಮಠಾಧಿಪತಿಗಳ ಮನವಿಗಳು ಹೆಚ್ಚು ಸಾಮಾನ್ಯವಾದರೂ ಶ್ರಾವಕರ ಸ್ಪಂದನ ಕಡಿಮೆಗೊಳ್ಳುತ್ತಲೇ ಸಾಗಿತು. ದೇವಾಲಯದ ಭೂಮಿಯು ಒತ್ತೆಗೊಳಗಾಗಿದ್ದಲ್ಲದೆ, ಬಾಹ್ಯ ಹಾಗೂ ಆಂತರಿಕ ಕಿರಿಕಿರಿ ತಾಳಲಾರದೆ ಮಠಾಧಿಪತಿಗಳೂ ಬೆಳ್ಗೊಳದಿಂದ ಪಲಾಯನ ಮಾಡಬೇಕಾಯಿತು. ಇಂಥ ಪರಿಸ್ಥಿತಿಯಲ್ಲಿ ಸಣ್ಣಪುಟ್ಟ ದಾನಗಳೂ ದೊಡ್ಡ ಪ್ರಮಾಣದ ಪ್ರಚಾರವನ್ನು ಪಡೆದುಕೊಂಡು, ಅಪ್ರಸ್ತುತರಾದ ಶ್ರಾವಕರೂ ಮಹತ್ವ ಗಳಿಸಿಕೊಳ್ಳತೊಡಗಿದರು. ಆಶ್ಚರ್ಯವೆಂಬಂತೆ, ಆಧ್ಯಾತ್ಮಿಕ ವ್ಯಕ್ತಿಗಳ ಕ್ಲೇಶಗಳು ಮರಣವನ್ನು ಆಹ್ವಾನಿಸುವ ನಿರ್ಬಂಧದಿಂದ ದೂರ ಸರಿದವು. ಕಟವಪ್ರವನ್ನು ಇತಿಹಾಸದೊಳಗೆ ತಂದ ಸಮಾಧಿಮರಣವು ಐತಿಹಾಸಿಕ ನೆನಪಾಗಿ ಮಾತ್ರ ಉಳಿದುಕೊಂಡಿತು.

ಅಧ್ಯಾಯ ನಾಲ್ಕು

ವ್ರತಗಳ ಅರ್ಥ ಮಹತ್ವ ಮತ್ತು ವ್ಯಾಪ್ತಿ

ಶ್ರವಣಬೆಳ್ಗೊಳವು ಪ್ರಾಚೀನ ನಿವಾಸಿಗಳಿಗೆ 'ಕಟವಪ್ರ', 'ಕಳ್ವಪ್ಪು', 'ವೆಳ್ಗೊಳ' ಎಂದು ಪರಿಚಿತವಾಗಿತ್ತು. ಇವುಗಳಲ್ಲಿ ವೆಳ್ಗೊಳದ ಅರ್ಥ (ಬೆಳ್ = ಬಿಳಿ; ಗೊಳ = ಕೊಳ) ಸ್ಪಷ್ಟವಿದೆ; ಆದರೆ, ಮಿಕ್ಕೆರಡರ ಅರ್ಥ ಅಷ್ಟು ಸ್ಪಷ್ಟವಿಲ್ಲ. ಉದಾಹರಣೆಗೆ, ಕಟವಪ್ರ ಎಂದರೆ ಸಮಾಧಿ ಬೆಟ್ಟವೆಂದು ವಾದಿಸುವವರು 'ಕಟ'ವನ್ನು ಸಮಾಧಿ ಎಂದು 'ವಪ್ರ'ವನ್ನು ಬೆಟ್ಟ ಎಂದು ಅರ್ಥೈಸುವರು. ಒಬ್ಬ ಮುನಿಯ ಸಮಾಧಿ ಮರಣದೊಂದಿಗೆ ಈ ಕೇಂದ್ರದ ಇತಿಹಾಸ ಆರಂಭಗೊಂಡದ್ದು ಮತ್ತು 7-8ನೆಯ ಶತಮಾನಗಳಲ್ಲಿ ತಮ್ಮ ಅಂತ್ಯ ಸಾಧಿಸಲು ಅನೇಕರು ಇದನ್ನು ಆಯ್ದುಕೊಂಡದ್ದು, ಈ ವ್ಯಾಖ್ಯೆಕ್ಕೆ ಸಮರ್ಥನೆ ನೀಡಿವೆ. ಸುಮಾರು 600-700 ರ ಕಾಲಾವಧಿಯ ಒಂಭತ್ತು ಶಾಸನಗಳಲ್ಲಿ 'ಕಟವಪ್ರ', 'ಕಟವಪ್ರ ಗಿರಿ', 'ಕಟವಪ್ರ ಶಿಖರ' ಮತ್ತು 'ಕಟವಪ್ರ ಶೈಲ' ಎಂಬ ಪ್ರಯೋಗಗಳು ಬರುವುವು.[1] ಸೋಜಿಗವೆಂದರೆ ಕ್ರಿ.ಶ. 700ರ ನಂತರ ಈ ಪದಬಳಕೆ ಸಂಪೂರ್ಣವಾಗಿ ನಿಂತುಹೋಗುವುದು.

ಮರಣಬೆಟ್ಟ : ಕಟವಪ್ರವೆಂಬ ಸಂಸ್ಕೃತ ಪದದ ದ್ರಾವಿಡ ರೂಪಾಂತರ 'ಕಳ್ವಪ್ಪು'. 7ನೆಯ ಶತಮಾನದಿಂದ ಮತ್ತು 12ನೆಯ ಶತಮಾನದವರೆಗೂ ಈ ಪದ ಚಾಲನೆಯಲ್ಲಿದ್ದು, ಸುಮಾರು 1139ರ ನಂತರ ಅದು ಥಟ್ಟನೆ ಮಾಯವಾಗುವುದಕ್ಕೆ ಕಾರಣ ಹುಡುಕುವುದು ಕಷ್ಟ.[2]

1. ಎ ಕ II, 11, 13, 15, 85, 108, 110, 113, 123 ಮತ್ತು 132. ಅವುಗಳ ಲಿಪಿಶೈಲಿಯನ್ನಾಧರಿಸಿ ಈ ಶಾಸನಗಳ ಕಾಲ ನಿರ್ಧರಿಸಿರುವುದರಿಂದ ಇವೆಲ್ಲ ನಿರ್ಣಯಗಳು ಅಂತಿಮವೆಂದು ಪರಿಗಣಿಸಲು ಬಾರವು.
2. 7ನೆಯ ಶತಮಾನದವೆಂದು ಗೊತ್ತುಪಡಿಸಿದ 122, 86, 87, 94 ಮತ್ತು 99; 8ನೆಯ ಶತಮಾನವೆನ್ನಲಾದ ಗೊತ್ತುಪಡಿಸಿದ 30, 38, 26, 16 ಮತ್ತು 31; 10ನೆಯ ಶತಮಾನದ 168 ಮತ್ತು 78; 11ನೆಯ ಶತಮಾನದ 49 ಮತ್ತು 568; 12ನೆಯ ಶತಮಾನದ 156ಮತ್ತು 174.

ಕಳ್ವಪ್ಪು ಅಥವಾ ಕಟವಪ್ರದ ಅರ್ಥ 'ಸಮಾಧಿ ಬೆಟ್ಟ'ವೆಂಬುದನ್ನು ವಿದ್ವಾಂಸರೆಲ್ಲಾ ಸಹಮತಿಸುವುದಿಲ್ಲ. ಕಳ್ ಧಾತುವಿನ ಅರ್ಥ 'ನೀರು' ಎಂದೂ, 'ಕಪ್ಪುಬಣ್ಣ ' ಎಂದೂ ಕೆಲವರು ವಾದಿಸುವರು. ಪ್ರಥಮ ವ್ಯಾಖ್ಯಾನವನ್ನು ಸಮರ್ಥಿಸುವವರು 'ಕಳ್ವಪ್ಪು' ಪದವು 'ಬಿಳಿನೀರು' (ಬಪ್ಪು = ಬಿಳ್ಪು ; ಕಳ್ = ನೀರು) ಸೂಚಿಸುವುದೆಂದು ನಂಬುವರು. ಈ ವ್ಯಾಖ್ಯಾನವು ಸ್ವಾರಸ್ಯಕರವಾಗಿದೆ, ಏಕೆಂದರೆ, ಅದು ಬೆಳ್ಗೊಳಕ್ಕೆ (ಬೆಳ್‌ಕೊಳ = ಬಿಳಿ ಕೊಳ) ಸಂವಾದಿಯಾಗಿದೆ. ಕಳ್ವಪ್ಪು ಮತ್ತು ಬೆಳ್ಗೊಳ ಪದಗಳೆರಡೂ ಬಹುಶಃ ಒಂದೇ ಪವಿತ್ರ ಕೊಳವನ್ನು ಸೂಚಿಸುವವು.[3] ''ಕಳ್'' ನ್ನು ''ಕರ್'' (ಕಪ್ಪು) ಎಂದು ಗ್ರಹಿಸುವವರು ಈ ಪದವು ಕಪ್ಪು ಗುಡ್ಡವನ್ನು ಸೂಚಿಸುವುದೆಂದು ವಾದಿಸುವರು.[4] ಇಲ್ಲಿಯ ಬೆಟ್ಟವಾದರೋ ಕಪ್ಪೂ ಇರದೆ, ಬಿಳಿಪೂ ಇರದೆ, ಕಂದು-ಹಳದಿ ಬಣ್ಣದ್ದಾಗಿದೆ.

ಈ ನಾಮಕರಣವನ್ನು ಪ್ರೇರೇಪಿಸಿದ್ದು ಬರಿ ಬಣ್ಣ ಮಾತ್ರವಾಗಿರದೆ ಬೆಟ್ಟದಲ್ಲಿ ಸಂಭವಿಸಿದ ವ್ರತನಿಯಮವೆಂಬುದು ನಮ್ಮ ಭಾವನೆ. 'ಕಟ'ವೆಂಬುದು 'ಕಳ್' ಕನ್ನಡ ಪದದ ಸಂಸ್ಕೃತ ಧಾತುವಾಗಿದ್ದ ಪಕ್ಷದಲ್ಲಿ ಎರಡೂ ಒಂದೇ ಅರ್ಥ ಕೊಡಬೇಕಿತ್ತು. ಕಳ್ ಪದದ ನಾನಾ ಅರ್ಥಗಳ ಕೂಲಂಕಷ ಶೋಧನೆಯ ಪರಿಣಾಮವೂ ಒಂದೇ ಆಗಬೇಕಾಗಿತ್ತು. ಕನ್ನಡದಲ್ಲಿ 'ಕಳ್' ಅಂದರೆ 'ಬಿಡಿಸು', 'ಸಡಿಲಗೊಳಿಸು', 'ಶುದ್ಧೀಕರಿಸು', 'ಸಾಯು' ಎಂಬರ್ಥಗಳಿದ್ದರೆ, 'ಕಳಲ್'ಎಂದರೆ 'ಅಂತ್ಯ' ಎಂಬರ್ಥವುಂಟು. ಇವು ಕಟದ ಅರ್ಥಕ್ಕೆ (ಹೆಣ, ಗೋರಿ) ಬಹುಮಟ್ಟಿಗೆ ಹೊಂದಿಕೊಳ್ಳುವುವು; ಹೀಗಾಗಿ, ಈ ಬೆಟ್ಟವು ಇಚ್ಛಾಮರಣಗಳ ತಾಣವಾಗಿತ್ತೆಂಬುದನ್ನು ಇವು ದೃಢೀಕರಿಸುತ್ತವೆ. ಇದರ ಪ್ರಸಿದ್ಧಿ ಹರಡಿದ ನಂತರ 'ಮರಣಬೆಟ್ಟ' ಅಥವಾ 'ಸಮಾಧಿಬೆಟ್ಟ' ಎಂಬ ಹೆಸರುಗಳು ಸಾಮಾನ್ಯರ ಬಳಕೆಯಲ್ಲಿ ಬಂದವೆಂದು ತೋರುವುದು.[5] ಭದ್ರಬಾಹು ಮತ್ತು ಚಂದ್ರಗುಪ್ತರ ಮರಣಗಳು ಕ್ರಿ.ಪೂ. 3ನೆಯ ಶತಮಾನದಲ್ಲಿ ಚಿಕ್ಕಬೆಟ್ಟದ ಮೇಲೆ ಸಂಭವಿಸಿದವೆಂಬ ಐತಿಹ್ಯವನ್ನು ಈ ಮೊದಲೆ ತಿಳಿಯಲಾಗಿದೆ. ಆ ಮರಣ ಘಟನೆಗಳು ಇತಿಹಾಸದಲ್ಲಿ ಕಟವಪ್ರಕ್ಕೆ ವಿಶೇಷ ಸ್ಥಾನ ಒದಗಿಸಿಕೊಟ್ಟದ್ದಲ್ಲದೆ, ಇಚ್ಛಾಮರಣಗಳಿಗೆ ಅದರ ಮಹೋನ್ನತಿಯನ್ನೂ ಸಾರಿದವು. ಪ್ರಸಿದ್ಧ ಪೂರ್ವಜರಲ್ಲೊಬ್ಬನಾದ ಭದ್ರಬಾಹು ಆಯ್ದುಕೊಂಡಿದ್ದ ಪವಿತ್ರ ಸ್ಥಳದಲ್ಲೇ ತಾವೂ ಜೀವನವನ್ನು ಅಂತ್ಯಗೊಳಿಸಿಕೊಳ್ಳಬೇಕೆಂದು ಅನಂತರ ಕಾಲದ ಶ್ರಮಣ-ಕಂತಿಯರು ಇಚ್ಛಿಸಿದರೆಂದು ತೋರುವುದು.

---

3. 34.
4. ಅದೇ, ಪೀಠಿಕೆ. ಪು. XII.
5. ಅದೇ, 30

ವ್ರತಾಚರಣೆಯ ವಿಧಾನವನ್ನು ಸಮಾಧಿ, ಸಲ್ಲೇಖನಾ, ಸನ್ಯಸನ, ಪಂಡಿತ, ಪೌಗ್ಗಮಣ, ಪಂಚಪದ, ಆರಾಧನಾ, ಮುಂತಾದ ಪದಗಳಿಂದ ಗುರುತಿಸಿದರೆ, ಹೀಗೆ ಮರಣವನ್ನಪ್ಪಿದವರ ಗೌರವಾರ್ಥ ನಿಲ್ಲಿಸಿದ ಸ್ಮಾರಕಗಳನ್ನು 'ನಿಸಿಧಿ' ಪದದಿಂದ ಗುರುತಿಸಲಾಗಿದೆ. ನಿಸಿಧಿ ಪದವನ್ನು ಹದಿನೇಳು ಬೇರೆ ಬೇರೆ ಬಗೆಯಲ್ಲಿ ಕಾಗುಣಿಸಿದ್ದರೂ ಅದರ ಅರ್ಥದಲ್ಲಿ ವಿಶೇಷ ಬದಲಾವಣೆಯೇನೂ ಆಗಲಿಲ್ಲ.[6] 'ನಿಶೀಹಿಯ' ಎಂಬ ಪ್ರಾಕೃತ ಧಾತುವಿನಿಂದ ವ್ಯುತ್ಪತ್ತಿ ಪಡೆದುದೆಂದು ವಾದಿಸಲಾಗಿರುವ 'ನಿಸಿಧಿ' ಪದವು ಧ್ಯಾನಾಸಕ್ತನು ಆಯ್ದುಕೊಂಡ 'ಸ್ಥಳ' ಹಾಗೂ 'ಭಂಗಿ' ಗಳನ್ನು ಸೂಚಿಸುವುದೆಂದು ಬಗೆಯಲಾಗಿದೆ. ಹಲವಾರು ಮುನಿಗಳು ಧ್ಯಾನಕ್ಕಾಗಿ ಈ ಬೆಟ್ಟದ ಹಾಸುಬಂಡೆ ಮತ್ತು ಬಂಡೆಗೂಡುಗಳನ್ನು ('ಕಳ್ವಪ್ಪಿನ ಶೈಲದೊಳ್'), ಶೀತಲ ಶಿಲೆಯ ವ್ಯಾಪಕ ವಿಸ್ತಾರವನ್ನು ('ತಲಾಸು ಶಿಲಾಸು ಶೀತಲಾಸು') ಆಯ್ದುಕೊಂಡರೆಂದು ತಿಳಿಸಲಾಗಿದೆ.[7] ಕೆಲವರು ಕುಕ್ಕುಟಾಸನ ಮತ್ತು ಪಲ್ಯಂಕದಲ್ಲಿ ಧ್ಯಾನ ಮಾಡಿದರೆ, ಇನ್ನು ಕೆಲವರು ಕಾಯೋತ್ಸರ್ಗ ಮತ್ತು ಏಕಪಾರ್ಶ್ವ ನಿಯಮ ಅನುಸರಿಸಿ, ಕಾಯಕ್ಲೇಶದಲ್ಲಿ ತೊಡಗಿದ್ದರು.[8]

ಸಮಾಧಿಮರಣವು ಇಹಲೋಕದ ಕಷ್ಟಕೋಟಲೆಗಳಿಂದ ಮುಕ್ತಿನೀಡುವುದಲ್ಲದೆ ಸ್ವರ್ಗದಲ್ಲಿ ಸ್ಥಾನವನ್ನು ಗಳಿಸಿಕೊಡುವುದೆಂದು ನಂಬಲಾಗಿತ್ತು. ಹೀಗೆ ಮಡಿದವರು 'ಸ್ವರ್ಗಾಗ್ರ', 'ಸ್ವರ್ಗಾಲಯ', 'ಸುರಲೋಕ' ಅಥವಾ 'ಇಂದ್ರಲೋಕ', ಇಲ್ಲವೆ 'ಸುರಪಾದ' ಅಥವಾ 'ಇಂದ್ರಪಾದ' ಸೇರುವರೆಂದು ಭಾವಿಸಲಾಗಿತ್ತು. ಅಂದರೆ, ಅವರು ಸಿದ್ಧಸ್ಥರಾಗುವರೆಂಬ ಭರವಸೆ.[9] ಹೀಗೆ ಧರ್ಮಾತ್ಮರ ನೆಚ್ಚಿನ ತಾಣವಾಗಿದ್ದ ಈ ಬೆಟ್ಟವು ನಿಜಕ್ಕೂ ಬಹುಬೇಗ 'ತೀರ್ಥಗಿರಿ' ಅಥವಾ 'ಋಷಿಗಿರಿ' ಎಂದು ಖ್ಯಾತಿ ಪಡೆದುದರಲ್ಲಿ ಆಶ್ಚರ್ಯವಿಲ್ಲ.[10]

ವ್ರತನಿಯಮಗಳ ಪದ ಬಳಕೆ : 'ನಿಸಿಧಿ' ಪದವು ಸುಮಾರು 7-8ನೆಯ ಶತಮಾನಗಳ ಶಾಸನಗಳಲ್ಲಿ ಪ್ರಥಮ ಬಾರಿಗೆ ಕಾಣಿಸಿಕೊಳ್ಳುವುದಾದರೂ,[11] ಅದು ವ್ಯಾಪಕವಾಗಿ ಪ್ರಸಾರಕ್ಕೆ ಬಂದುದು 12ನೆಯ ಶತಮಾನದಲ್ಲಿ ಮಾತ್ರ.[12] 10ನೆಯ ಶತಮಾನದ ಇಲ್ಲಿಯ ಯಾವೊಂದು

---

6. ಉಪಾಧ್ಯೆ. ಎ. ಎನ್. ''ನಿಸಿಧಿ - ಇಟ್ಸ್ ಮೀನಿಂಗ್'', *ಮೆಮೊರಿಯಲ್ ಸ್ಟೋನ್ಸ್*, ಸಂ. ಎಸ್. ಶೆಟ್ಟರ್ ಮತ್ತು ಜಿ.ಡಿ. ಸೊಂಥೈಮರ್ (ಧಾರವಾಡ, 1982), ಪು. 45-46.
7. ಎ ಕ II, 87 ಮತ್ತು 1.
8. ಕುಕ್ಕುಟಾಸನಕ್ಕಾಗಿ 77, 135, 336 ಮತ್ತು 486; ಏಕಪಾರ್ಶ್ವಕ್ಕಾಗಿ 136, ಕಾಯೋತ್ಸರ್ಗ ಮತ್ತು ಪಲ್ಯಂಕಗಳಿಗೆ 77ಮತ್ತು 156 ಅನುಕ್ರಮವಾಗಿ ನೋಡಿ.
9. 25 ಮತ್ತು 77.
10. 86 ಮತ್ತು 94.
11. 17, 22, 32, 95, 104, 111, 118, 119 ಮತ್ತು 129.
12. 364.

ಶಾಸನದಲ್ಲೂ ಈ ಪದವನ್ನು ಬಳಸಿಲ್ಲ; ಅಲ್ಲದೆ, ಸುಮಾರು 1432 ರ ನಂತರ ಧರ್ಮಿಷ್ಠರ ಶಬ್ದಕೋಶದಿಂದಲೇ ಈ ಪದವು ಕಣ್ಮರೆಯಾಗುವುದು.[13] ಶ್ರವಣಬೆಳ್ಗೊಳದ 37 ಶಾಸನಗಳಲ್ಲಿ ಈ ಪದವನ್ನು 39 ಬಾರಿ ಬಳಸಲಾಗಿದೆ.

ಸಲ್ಲೇಖನಾ : 'ಸಲ್ಲೇಖನಾ' ಪದವು ಬಹಳ ವಿರಳವಾಗಿ ಇಲ್ಲಿಯ ಶಾಸನಗಳಲ್ಲಿ ಬರುವುದು. 12ನೆಯ ಶತಮಾನಕ್ಕಿಂತ ಮುಂಚಿನ ಮತ್ತು 1432ರ ನಂತರದ ಶಾಸನಗಳಲ್ಲಿ ಅದು ಕಾಣಿಸಿಕೊಳ್ಳುವುದಿಲ್ಲ. ಈ ಕೇಂದ್ರದ ಮುನ್ನೂರು ವರ್ಷಗಳ ಇತಿಹಾಸದಲ್ಲಿ ಅದು ಐದು ಬಾರಿ ಮಾತ್ರ ಬಳಸಲ್ಪಟ್ಟಿರುವುದು ಕುತೂಹಲಕಾರಕ.[14]

ಸಮಾಧಿ : ಸುಮಾರು 600-1432 ರ ಕಾಲಾವಧಿಯ 16 ಶಾಸನಗಳಲ್ಲಿ 18 ಬಾರಿ '*ಸಮಾಧಿ*' ಪದವನ್ನು ಬಳಸಲಾಗಿದೆ. ಅದು ಮೊದಲು ಕಾಣಿಸಿಗುವುದು 7ನೆಯ ಶತಮಾನದಲ್ಲಾದರೂ ಮುಂದಿನ ನೂರಾರು ವರ್ಷಗಳಲ್ಲಿ ಇದು ಬರುವುದು ಆಗೊಮ್ಮೆ-ಈಗೊಮ್ಮೆ ಮಾತ್ರ.[15] ಇದರ ಬಳಿಕ 12ನೆಯ ಶತಮಾನದಲ್ಲಿ ಸರ್ವ ಸಾಮಾನ್ಯವಾಗಿದ್ದರೂ 13,14 ಮತ್ತು 15ನೆಯ ಶತಮಾನದವುಗಳೆನ್ನಲಾಗುವ ಕೇವಲ ನಾಲ್ಕು ಶಾಸನಗಳಲ್ಲಿ ಮಾತ್ರ ಕಾಣಿಸಿಕೊಂಡು, ಆನಂತರ ಅದು ಕಣ್ಮರೆಯಾಗುವುದು.[16]

ಆರಾಧನಾ, ಪಂಚಪದ, ಪೌಗ್ಗಮಣ ಮತ್ತು ಪಂಡಿತಮರಣ : 'ಆರಾಧನಾ' ಪದವು 7ನೆಯ ಶತಮಾನದಲ್ಲಿ ಆರು ಬಾರಿ,[17] ಮುಂದಿನ 500 ವರ್ಷಗಳಲ್ಲಿ ಕೇವಲ ಎರಡು ಬಾರಿ ಪ್ರಯೋಗವಾಗಿರುವುದು.[18] ಇಚ್ಛಾಮರಣದ ಸಂದರ್ಭದಲ್ಲಿ 'ಪಂಚಪದ'ದ ಪುರಾತನತೆಯು 7ನೆಯ ಶತಮಾನದಷ್ಟು ಹಿಂದಕ್ಕೆ ಹೋಗುವಂತಿದೆ.[19] 12-13ನೆಯ ಶತಮಾನಗಳ ಕಾಲಾವಧಿಯಲ್ಲಿ ಸಾಕಷ್ಟು ಪ್ರಚಾರದಲ್ಲಿದ್ದ ಈ ಪದವನ್ನು ಉಲ್ಲೇಖಿಸಿರುವ 6 ಶಾಸನಗಳು ದೊರಕಿವೆ.[20] 'ಪೌಗ್ಗಮಣ' ಅಥವಾ 'ಪಂಡಿತಮರಣ' ಅನುಕ್ರಮವಾಗಿ 8ನೆಯ ಮತ್ತು

13. ಈ ಪದವನ್ನು ದಾಖಲಿಸಿದ ತೀರ ಇತ್ತೀಚಿನ ಶಾಸನ 364 .
14. 77, 81, 136, 364 ಮತ್ತು 359.
15. 64.
16. 12ನೆಯ ಶತಮಾನದವುಗಳೆಂದು ಗೊತ್ತುಪಡಿಸಿದ ಆರು ಶಾಸನಗಳಲ್ಲಿ (77, 157, 158, 175, 176 ಮತ್ತು 484), 13ನೆಯ ಶತಮಾನದವೆಂದು ಗೊತ್ತುಪಡಿಸಿದ ಎರಡು ಶಾಸನಗಳಲ್ಲಿ(536 ಮತ್ತು539), 14ನೆಯ ಶತಮಾನದ ಒಂದು ಶಾಸನದಲ್ಲಿ (353) ಮತ್ತು 15ನೆಯ ಶತಮಾನದ ಒಂದು (**364**) ಶಾಸನದಲ್ಲಿ, ಈ ಪದ ಪ್ರಯೋಗಗೊಂಡಿದೆ.
17. 1, 2, 26, 86, 110 ಮತ್ತು 121.
18. 10ನೆಯ ಶತಮಾನದ 64 ಮತ್ತು 12ನೆಯ ಶತಮಾನದ 81.
19. 7ನೆಯ ಶತಮಾನದ್ದೆಂದು ಗೊತ್ತುಪಡಿಸಿದ ಒಂದೇ ಒಂದು ಶಾಸನವಿದೆ (117) .
20. 1123 ಮತ್ತು 1139ರ ಮಧ್ಯದ ಕಾಲಾವಧಿಯವೆನ್ನಲಾದ 174, 175, 176; 1120ರ 136;

12ನೆಯ ಶತಮಾನಗಳಲ್ಲಿ ಒಮ್ಮೊಮ್ಮೆ ಮಾತ್ರ ಬಂದಿರುವುವು.[21]

ಜನಪ್ರಿಯ ಪ್ರಯೋಗಗಳು: 'ನಿಸಿಧಿ'ಯ ನಂತರ 'ಸನ್ಯಸನ' ಪದವು ಈ ಕೇಂದ್ರದಲ್ಲಿ ವ್ಯಾಪಕ ಬಳಕೆಯಲ್ಲಿದ್ದಂತೆ ತೋರುವುದು. 7ನೆಯ ಶತಮಾನದಲ್ಲಿ ಪ್ರಾರಂಭಗೊಂಡು 12ನೆಯ ಶತಮಾನದಲ್ಲಿ ಅದು ಹೆಚ್ಚು ಜನಪ್ರಿಯತೆ ಪಡೆದುಕೊಂಡಿತು.[22] 22 ಶಾಸನಗಳಲ್ಲಿ ಬರುವ 28 ಉಲ್ಲೇಖಗಳಲ್ಲಿ 9 ಶಾಸನಗಳು ಅಥವಾ 14 ಉಲ್ಲೇಖಗಳು 12ನೆಯ ಶತಮಾನಕ್ಕೆ ಸೇರಿವೆ. ಮೊದಲ ನಾನೂರು ವರ್ಷಗಳಲ್ಲಿ (700-1100) ಕೇವಲ ಎರಡು ಸಲ ಮತ್ತು 1200-1398ರ ಕಾಲಾವಧಿಯಲ್ಲಿ ಮತ್ತೆರಡು ಸಲ ಈ ಪದವನ್ನು ಬಳಸಲಾಗಿದೆ.[23] 14ನೆಯ ಶತಮಾನದ ನಂತರ ಇದು ಇಲ್ಲಿಯ ಶಾಸನಗಳಿಂದ ಕಣ್ಮರೆಯಾಗುವುದು.

ಶ್ರವಣಬೆಳ್ಗೊಳ ಶಾಸನಗಳಿಂದ ಈ ಪದ ಬಳಕೆಗಳ ಬಗ್ಗೆ ಕೆಳಕಂಡ ಸ್ಥೂಲ ಕಲ್ಪನೆಯನ್ನು ಪಡೆದುಕೊಳ್ಳಬಹುದು:

(i) ಸ್ಮಾರಕಗಳ ನಿರ್ಮಾಣ ಕಾರ್ಯವು ಸುಮಾರು 600ರಲ್ಲಿ ರೂಢಿಗೆ ಬಂದು ಒಂದು ಶತಮಾನದ ನಂತರ ಅದು ಕ್ರಮೇಣ ಕ್ಷೀಣಿಸಿದರೂ, 12ನೆಯ ಶತಮಾನದಲ್ಲಿ ಅದನ್ನು ಪುನರುತ್ಥಾನಗೊಳಿಸುವ ಪ್ರಯತ್ನ ಮಾಡಲಾಯಿತು. 14ನೆಯ ಶತಮಾನದ ನಂತರ ಈ ಆಚರಣೆ ಬಹುತೇಕ ನಿಂತುಹೋಯಿತು.[24]

(ii) 1400ಕ್ಕಿಂತ ಮುಂಚೆ ನಿರ್ಮಿಸಿದ ಸ್ಮಾರಕಗಳನ್ನೆಲ್ಲ ವಿಶಿಷ್ಟ ಅಥವಾ ವಿಶೇಷ ಪದಗಳಿಂದ ಗುರುತಿಸಲಾಗಿಲ್ಲ. ಆರಂಭಿಕ ಹಂತದಲ್ಲಿ ಈ ವ್ರತಾಚರಣೆಯನ್ನು 'ಆರಾಧನಾ' ಅಥವಾ ' ಸನ್ಯಸನ' ಅಥವಾ 'ಸಮಾಧಿ' ಎಂದು ಗುರುತಿಸಿದರೆ, ಸ್ಮಾರಕಗಳನ್ನೆಲ್ಲ ಸಾಮಾನ್ಯವಾಗಿ 'ನಿಸಿಧಿ' ಎಂದು ಗುರುತಿಸಲಾಗಿದೆ. 'ಸಲ್ಲೇಖನಾ' ಮತ್ತು 'ಪಂಡಿತಮರಣ' ಎಂಬ ಪದಗಳು 12ನೆಯ ಶತಮಾನದಲ್ಲಿ ಇಲ್ಲಿಯ ಶಾಸನಗಳನ್ನು ಪ್ರವೇಶಿಸಿದವು.[25]

1213ರ 539 ಮತ್ತು 1313ರ 72.

21. ಅನುಕ್ರಮವಾಗಿ 92 ಮತ್ತು 176.
22. 1, 27, 28, 36, 37, 85, 98, 112 ಈ ಶಾಸನಗಳನ್ನೆಲ್ಲ 7ನೆಯ ಶತಮಾನದವುಗಳೆಂದು ಗೊತ್ತುಪಡಿಸಲಾಗಿದೆ. 17 ನೆಯ ಶಾಸನವನ್ನು 8ನೆಯ ಶತಮಾನದ್ದೆಂದು, 78ನ್ನು 10ನೆಯ ಶತಮಾನದ್ದೆಂದು, 524 ನ್ನು 11ನೆಯ ಶತಮಾನದ್ದೆಂದು ಸೂಚಿಸಲಾಗಿದೆ 77, 81, 136, 157, 158, 174, 176, 484 ಮತ್ತು 532 ಸಂಖ್ಯೆಯ ಶಾಸನಗಳನ್ನು 12ನೆಯ ಶತಮಾನದವೆಂದು ಗೊತ್ತುಪಡಿಸಲಾಗಿದೆ.
23. 1214ರ 539 ಮತ್ತು 1398ರ 360. ಎರಡನೆಯ ಗುಂಪಿಗೆ ಸೇರಿದವುಗಳಾಗಿವೆ.
24. ಅನುಬಂಧ I ನೋಡಿ.
25. ಅನುಬಂಧ II ನೋಡಿ.

(iii) 'ಆರಾಧನಾ' ಪದವನ್ನು 7ನೆಯ ಶತಮಾನದ ನಂತರ ಕ್ವಚಿತ್ತಾಗಿ ಬಳಸಿದರೆ 12ನೆಯ ಶತಮಾನದ ನಂತರ ಇದನ್ನು ಒಮ್ಮೆಯೂ ಬಳಸಿಲ್ಲ. 'ಸನ್ಯಸನ' ಪದವು 7ನೆಯ ಮತ್ತು 12ನೆಯ ಶತಮಾನಗಳ ಕಾಲಾವಧಿಯಲ್ಲಿ ಸಾಕಷ್ಟು ಪ್ರಸಾರದಲ್ಲಿದ್ದರೂ 14ನೆಯ ಶತಮಾನದ ನಂತರ ಬಹುಮಟ್ಟಿಗೆ ಅದು ಜನಮನದಿಂದ ಕರಗಿಹೋಯಿತು. 'ಸಮಾಧಿ' ಮತ್ತು 'ನಿಸಿಧಿ' ಪದಗಳ ಬಳಕೆಯೂ ಸರಿಸುಮಾರಾಗಿ 'ಸನ್ಯಸನ' ಪದದ ಇತಿಹಾಸವನ್ನೇ ಹೋಲುವುದು. 12ನೆಯ ಶತಮಾನದಲ್ಲಿ ಮೇಲಿಂದ ಮೇಲೆ ದೊರೆಯುವ 'ಪಂಚಪದ'ವೂ 14ನೆಯ ಶತಮಾನದ ನಂತರ ಅದೃಶ್ಯವಾಗುವುದು.[26]

ಈ ಕೇಂದ್ರದ 66 ಸ್ಮಾರಕ ಶಾಸನಗಳಲ್ಲಿ 107 ಬಾರಿ ಈ ಪದಗಳನ್ನು ಬಳಸಲಾಗಿದೆ. ಇವುಗಳ ಸಂಖ್ಯಾ ಹಂಚಿಕೆ ಇಂತಿವೆ : ಆರಾಧನಾ - 8; ಸಲ್ಲೇಖನಾ - 5; ಸಮಾಧಿ - 18; ಸನ್ಯಸನ - 28; ಪಂಚಪದ - 7; ಪೌಗ್ಗಮಣ - 1; ಪಂಡಿತಮರಣ - 1 ಮತ್ತು ನಿಸಿಧಿ - 39. ಇದರಲ್ಲಿ ಕೆಲವರ ಮರಣಗಳನ್ನು ಮತ್ತು ಸ್ಮಾರಕಗಳನ್ನು ಒಂದಕ್ಕೂ ಹೆಚ್ಚು ಪದಗಳಿಂದ ಗುರುತಿಸಲಾಗಿವೆ.[27]

(iv) ಶ್ರವಣಬೆಳ್ಗೊಳದಲ್ಲಿ 123 (+30?) ವ್ಯಕ್ತಿಗಳ ಗೌರವಾರ್ಥ ನಿಲ್ಲಿಸಿದ ಒಟ್ಟು 113 (+20?) ಸ್ಮಾರಕ ಶಾಸನಗಳಲ್ಲಿ ಕೇವಲ 66 ಮರಣಗಳನ್ನು ಒಂದಿಲ್ಲೊಂದು ವಿಶಿಷ್ಟ ಪದದಿಂದ ಗುರುತಿಸಲಾಗಿದೆ. ಇಲ್ಲಿ ಗೌರವಿಸಲಾದ ಇತರ ವ್ಯಕ್ತಿಗಳು ಕೈಗೊಂಡ ಮರಣ ಸ್ವರೂಪದ ಬಗ್ಗೆ ಸಂದೇಹ ಮೂಡಿ, ಅವರು (ಅ) ಸಮಾಧಿ ವ್ರತವನ್ನಾಚರಿಸಿ ತೀರಿಕೊಂಡರೋ ಇಲ್ಲವೋ, (ಆ) ಬೆಳ್ಗೊಳದಲ್ಲಿ ತೀರಿಕೊಂಡರೋ ಇಲ್ಲವೋ, ಎಂಬ ಪ್ರಶ್ನೆಗಳು ಉದ್ಭವಿಸುವುವು.

(v) 12ನೆಯ ಶತಮಾನದ ನಂತರ ಇಚ್ಛಾಮರಣ ವಿರಳವಾಗುವುದರಿಂದ 'ಸನ್ಯಸನ', 'ಸಮಾಧಿ', 'ಸಲ್ಲೇಖನಾ', ಮುಂತಾದ ಪದಗಳು ಜನಪ್ರಿಯತೆಯನ್ನು ಕಳೆದುಕೊಳ್ಳುವುವು. 'ಆರಾಧನಾ' ಪದವು 12ನೆಯ ಶತಮಾನದ ನಂತರದ ಶಾಸನಗಳಲ್ಲಿ ಒಮ್ಮೆಯೂ ಬರುವುದಿಲ್ಲ.[28]

ವ್ರತಾಚರಣೆಯ ಉನ್ನತಿ ಮತ್ತು ಅವನತಿ: ಮೇಲೆ ಲಕ್ಷಿಸಿದಂತೆ (ಅ) ಶ್ರವಣಬೆಳ್ಗೊಳದ ಎಲ್ಲ ಸ್ಮಾರಕಗಳನ್ನು 'ನಿಸಿಧಿ' ಎಂದು ಕರೆಯಲಾಗಿಲ್ಲ; (ಆ) ಇಲ್ಲಿ ಸಾವನ್ನಪ್ಪಿದವರೆಲ್ಲ ಸಮಾಧಿ ವ್ರತವನ್ನಾಚರಿಸಲಿಲ್ಲ; (ಇ) ಸ್ಮಾರಕಗಳನ್ನು ಪಡೆದವರೆಲ್ಲ ಬೆಳ್ಗೊಳದಲ್ಲಿಯೇ ತೀರಿಕೊಂಡರೆಂದು ಭಾವಿಸುವಂತಿಲ್ಲ. ಅತಿ ಪೂರ್ವಕಾಲದಲ್ಲಿ ಇಲ್ಲಿಯ ಸ್ಮಾರಕಗಳನ್ನು (7-

---

26. ಅದೇ.
27. ಅದೇ.
28. ಅದೇ.

9ನೆಯ ಶತಮಾನ) ವ್ರತವನ್ನಾಚರಿಸಿ ಮಡಿದವರಿಗೆ ಮಾತ್ರ ಚಿಕ್ಕಬೆಟ್ಟದ ತಳಬಂಡೆಯ ಮೇಲೆ ಕೊರೆಯಲಾಗುತ್ತಿತ್ತು; ಆದರೆ, ಅವೆಲ್ಲವನ್ನೂ 'ನಿಸಿಧಿ' ಎಂದು ಗುರುತಿಸಲಾಗಿಲ್ಲ. ಮೊದಮೊದಲಿಗೆ ಶ್ರಮಣ-ಕಂತಿಯರಲ್ಲಿ ಜನಪ್ರಿಯವಾಗಿದ್ದ ಈ ವ್ರತಾಚರಣೆಯು ಕಾಲಾನಂತರ ಗುಡ್ಡ-ಗುಡ್ಡಿಯರಲ್ಲೂ ಜನಪ್ರಿಯಗೊಂಡಿತು.

ಜೈನಧರ್ಮ ತನ್ನ ವೈಭವ ಶಿಖರವನ್ನು ಈ ಕೇಂದ್ರದಲ್ಲಿ ತಲುಪಿದ 9-11ನೆಯ ಶತಮಾನಗಳಲ್ಲಿಯೆ ಈ ಆಚರಣೆ ಅವಸಾನಗೊಂಡುದೊಂದು ಆಶ್ಚರ್ಯಕರವಾದ ವಿಷಯ. 800-1000 ಕಾಲಾವಧಿಯಲ್ಲಿ ಒಬ್ಬ ಕಂತಿಯ, ಐವರು ಗುಡ್ಡರ ಮತ್ತು ಒಬ್ಬ ಗುಡ್ಡಿಯ ಗೌರವಾರ್ಥ ಕೊರೆಸಿದ ಕೇವಲ ಆರು ಸ್ಮಾರಕ ಶಾಸನ ದೊರೆತಿದ್ದು, ಸಮಾಧಿ ಮರಣವು ಶ್ರಮಣ-ಕಂತಿಯರಲ್ಲಿ ಜನಪ್ರಿಯತೆ ಕಳೆದುಕೊಂಡುದನ್ನು ಇದು ಸೂಚಿಸುವುದು. ಶಾಸನ ಪಂಡಿತರು ನಿರ್ಧರಿಸುವ ಕಾಲವನ್ನು (600-800) ಒಪ್ಪುವುದಾದರೆ, 600-1300ರ ಕಾಲಾವಧಿಯಲ್ಲಿ ನಿರ್ಮಿಸಿದ 113 ಸ್ಮಾರಕಗಳಲ್ಲಿ,[29] 65 ಶ್ರಮಣರ, 12 ಕಂತಿಯರ, 27 ಗುಡ್ಡರ ಮತ್ತು 11 ಗುಡ್ಡಿಯರ ನಿಸಿಧಿಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಕೆಲವು ಗುಡ್ಡ-ಗುಡ್ಡಿಯರ ಹೆಸರುಗಳು ಹಾಗೂ ಅವರು ಮಡಿದ ಸ್ಥಳಗಳ ಬಗ್ಗೆ ಸಂದೇಹಗಳಿವೆ.[30]

(i) ಮುನಿಗಳು : ಇಚ್ಛಾಮರಣದ ಅವನತಿಯ ಪ್ರಕ್ರಿಯೆ 10ನೆಯ ಶತಮಾನದಲ್ಲಿ ಆರಂಭಗೊಂಡು, 14ನೆಯ ಶತಮಾನದ ನಂತರ ಅದು ಬಹುಮಟ್ಟಿಗೆ ಅಂತ್ಯಗೊಂಡಿತೆಂದು ಹೇಳಬಹುದು. 10-11ನೆಯ ಶತಮಾನಗಳಲ್ಲಿ ಯಾವ ಮುನಿಯೂ ಇಲ್ಲಿ ಇಚ್ಛಾಮರಣ ಸ್ವೀಕರಿಸಲಿಲ್ಲ. ಆರು ನಿದರ್ಶನಗಳುಳ್ಳ 12ನೆಯ ಶತಮಾನದಲ್ಲಿ ಈ ಆಚರಣೆ ಪುನರುಜ್ಜೀವನಗೊಂಡಿತೆಂದರೂ, 13ನೆಯ ಶತಮಾನದಲ್ಲಿ ಅದು ಎರಡೇ ಎರಡು ನಿದರ್ಶನಗಳಿಗಿಳಿಯಿತು. 13ನೆಯ ಶತಮಾನದ ನಂತರದ ಆರು ನಿದರ್ಶನಗಳಿಂದ ಇದು ಮತ್ತೊಮ್ಮೆ ಚೇತರಿಸಿಕೊಂಡಿತೆಂದು ಕಂಡುಬರುವುದು.

7-8ನೆಯ ಶತಮಾನಗಳ ಅಪರೂಪದ 48 ನಿದರ್ಶನಗಳಿಗೆ ಹೋಲಿಸಿ ನೋಡಿದರೆ ಮುಂದಿನ ಶತಮಾನಗಳಲ್ಲಿ ಬರುವ ಅಲ್ಪ ಸಂಖ್ಯೆಯ ಉಲ್ಲೇಖಗಳು ಈ ಆಚರಣೆಯಲ್ಲಿ ಆದ ಸ್ಥಿತ್ಯಂತರದ ನಿಜಸ್ವರೂಪವನ್ನು ಸೂಚಿಸುವುವು. 600-800 ಕಾಲಾವಧಿಯಲ್ಲಿ ಬಹು ಸಾಮಾನ್ಯವಾಗಿದ್ದ ಈ ಆಚರಣೆ 900 ರ ನಂತರ ತುಂಬಾ ವಿರಳವಾಯಿತು. 12ನೆಯ ಶತಮಾನದಲ್ಲಿ ಪುನರುಜ್ಜೀವನಗೊಂಡರೂ ಆನಂತರದ ಕಾಲಾವಧಿಯಲ್ಲಿ ಇದು ಅಪವಾದವೆನ್ನುವಷ್ಟು ವಿರಳವಾಯಿತೆಂಬುದನ್ನು ದಾಖಲೆಗಳು ಸ್ಪಷ್ಟಪಡಿಸುವುವು.[31]

---

29. ಅನುಬಂಧ I.
30. ಅನುಬಂದ III.
31. ಅನುಬಂಧ I.

(ii) ಕಂತಿಯರು : ಕಂತಿಯರ ಇಚ್ಛಾಮರಣದ ಬಗೆಗೂ ಸ್ವಲ್ಪ ಹೆಚ್ಚೂಕಡಿಮೆ ಇಂತಹದೇ ಚಿತ್ರವಿದೆ. ಶಾಸನ ತಜ್ಞರು ಸೂಚಿಸಿದ ದಿನಾಂಕಗಳನ್ನು ಒಪ್ಪುವುದಾದರೆ, 1100ಕ್ಕೆ ಮುಂಚೆ 12 ಕಂತಿಯರು ಇಚ್ಛಾಮರಣ ಸ್ವೀಕರಿಸಿದರೆಂದು ತೀರ್ಮಾನಿಸ ಬೇಕಾಗುವುದು. ಇವುಗಳ ಪೈಕಿ 7ನೆಯ ಶತಮಾನದಲ್ಲಿ ಎಂಟು, 8ನೆಯ ಶತಮಾನದಲ್ಲಿ ಒಂದು, 10ನೆಯ ಶತಮಾನದಲ್ಲಿ ಒಂದು, 11ನೆಯ ಶತಮಾನದಲ್ಲಿ ಒಂದು ಮತ್ತು 12ನೆಯ ಶತಮಾನದಲ್ಲಿ ಒಂದು ಮಾತ್ರ ಮರಣ ನಿದರ್ಶನಗಳು ದೊರೆಯುವುವು. 7ನೆಯ ಶತಮಾನದ ನಂತರ ಅಪರೂಪವಾಗಿ ಕಂತಿಯರು ಸಮಾಧಿಮರಣ ಸ್ವೀಕರಿಸಿದುದನ್ನು ಇದು ಸ್ಪಷ್ಟಪಡಿಸುವುದು.[32]

(iii) ಗುಡ್ಡರು: ಗುಡ್ಡರಿಗೆ ಒಟ್ಟು 21 ನಿಸಿಧಿಗಳನ್ನು ಈ ಕ್ಷೇತ್ರದಲ್ಲಿ ನಿರ್ಮಿಸಲಾಗಿದೆ. 700-900ರ ಕಾಲಾವಧಿಯಲ್ಲಿ ಒಬ್ಬ ಗುಡ್ಡನೂ ಈ ಗೌರವಕ್ಕೆ ಪಾತ್ರನಾಗಲಿಲ್ಲವೆಂದು ತೋರುವುದು. ಮಿಕ್ಕವುಗಳಲ್ಲಿ ಐದು ನಿದರ್ಶನಗಳು 10ನೆಯ ಶತಮಾನದವೆಂದು ಗುರುತಿಸಲಾಗಿದ್ದರೆ, 11ನೆಯ ಶತಮಾನದಲ್ಲಿ ಮಡಿದವರ ಹೆಸರು ಮತ್ತು ಊರು ಸಂದೇಹಾಸ್ಪದವಾಗಿಯೇ ಉಳಿದಿದೆ. ಗುಡ್ಡರ ಇಚ್ಛಾಮರಣದ ಇತಿಹಾಸವು 15ನೆಯ ಶತಮಾನದ ಏಕೈಕ ನಿದರ್ಶನದಿಂದ ಮುಕ್ತಾಯಗೊಳ್ಳುತ್ತದೆ. 7-9ನೆಯ ಶತಮಾನಗಳ ಕಾಲದ ಸುಮಾರು 21 ಸ್ಮಾರಕಗಳಲ್ಲಿ ಎರಡು ನಿದರ್ಶನಗಳು ವಿಶಿಷ್ಟವಾಗಿವೆ: ಆ ಎರಡರಲ್ಲೊಂದು 17ನೆಯ ಶತಮಾನದ ಸೋಮನಾಥಪುರದ ಅಗ್ರಹಾರದ ಬ್ರಾಹ್ಮಣನ ಮರಣಕ್ಕೆ ಸಂಬಂಧಿಸಿದ್ದಾದರೆ, ಇನ್ನೊಂದು ಮೈಸೂರು ಒಡೆಯರ ಅಧಿಕಾರಿಯೊಬ್ಬನ ಆಕಸ್ಮಿಕ ಮರಣಕ್ಕೆ ಸಂಬಂಧಿಸಿದೆ. ಇದರಿಂದ ಸ್ಪಷ್ಟಗೊಳ್ಳುವುದೇನೆಂದರೆ, ಗುಡ್ಡರಿಗೆ ನಿಸಿಧಿ ನಿರ್ಮಿಸುವುದು 10ನೆಯ ಶತಮಾನದಲ್ಲಿ ಸಾಕಷ್ಟು ಜನಪ್ರಿಯವಾಗಿ, 12 ನೆಯ ಶತಮಾನದ ಅಂತ್ಯದವರೆಗೆ ಅದು ಮುಂದುವರಿಯಿತು. ಆ ನಂತರ ಅದು ಬಹುಮಟ್ಟಿಗೆ ಮಾಯವಾಯಿತು.[33]

ಹೀಗೆ ಮಡಿದವರಲ್ಲಿ ಇಬ್ಬರು ಮಾತ್ರ ಆಳುವ ಮನೆತನದವರಾಗಿದ್ದರು. ಇವರಲ್ಲೊಬ್ಬ ರಾಷ್ಟ್ರಕೂಟ ಅರಸ ನಾಲ್ಮಡಿ ಇಂದ್ರ; ಇನ್ನೊಬ್ಬ, ಗಂಗ ಮಾರಸಿಂಹ.[34] ವಿಜಯನಗರ ವಂಶದವರೆಂದು ಭಾವಿಸಲಾಗಿರುವ ಹರಿಹರ ಮತ್ತು ದೇವರಾಯ ಎಂಬುವರ ಮರಣದ ಉಲ್ಲೇಖಗಳು ಸಂದೇಹಾಸ್ಪದವಾಗಿವೆ. ಅವರ ಸಮಾಧಿ ಮರಣದ ಸ್ವರೂಪವಾಗಲಿ, ಅವರ ನಿಸಿಧಿಗಳ ನಿಶ್ಚಿತತೆಯಾಗಲಿ, ಅವರ ರಾಜಮಾನ್ಯತೆಯಾಗಲಿ, ಈ ದಾಖಲೆಗಳಲ್ಲಿ ಸ್ಪಷ್ಟಗೊಂಡಿಲ್ಲ.[35]

32. ಅನುಬಂಧ III.
33. ಅದೇ.
34. ಎ ಕ II, ಅನುಕ್ರಮವಾಗಿ 163 ಮತ್ತು 64.
35. 445 ಮತ್ತು 446.

ನಿಸಿಧಿಗಳನ್ನು ಪಡೆದ ಬಹುತೇಕ ಗುಡ್ಡರು ಉಚ್ಚ ವರ್ಗದವರಾಗಿದ್ದರು: ಐವರು ಮಂತ್ರಿ-ದಂಡನಾಯಕರ ಮನೆತನದವರು, ಐವರು ಶ್ರೀಮಂತ ವರ್ತಕರು, ಇಬ್ಬರು ಹೆಗ್ಗಡೆ-ಗೌಡರು, ಇಬ್ಬರು ಕಲಿಗಳು ಮತ್ತು ಒಬ್ಬ ಗ್ರಾಮಲೆಕ್ಕಿಗನು[36] ಇವರಲ್ಲಿ ಸೇರಿದ್ದರು. ನಿಸಿಧಿಗಳನ್ನು ಪಡೆದ ಇತರ ಎಂಟು ಜನ ಗುಡ್ಡರ ಸಾಮಾಜಿಕ ಅಂತಸ್ತನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುತ್ತಿಲ್ಲ.

(iv) ಗುಡ್ಡಿಯರು : 600-900 ಕಾಲಾವಧಿಯಲ್ಲಿ ಇಚ್ಛಾಮರಣ ಹೊಂದಿದ ಗುಡ್ಡಿಯರ ಒಂದೂ ನಿದರ್ಶನವೂ ಇಲ್ಲ. 10ನೆಯ ಶತಮಾನದಲ್ಲಿಯೂ ಅದು ವಿರಳವಾಗಿತ್ತು. 12ನೆಯ ಶತಮಾನದಲ್ಲಿ ಒಂದೇ ಸಾಮಾಜಿಕ ಸ್ತರದ ಗುಡ್ಡಿಯರು ನಿಸಿಧಿಗಳನ್ನು ಪಡೆದುದು ಸ್ವಾರಸ್ಯಕರವಾಗಿದೆ; ಇವರಲ್ಲಿ ಕೆಲವರು ಸಮಾಧಿ ವ್ರತಾಚರಣೆಗಳನ್ನು ಕಟ್ಟುನಿಟ್ಟಾಗಿ ಆಚರಿಸಿದರೆ, ಇನ್ನು ಕೆಲವರು ಹಾಗೆ ಮಾಡಲಿಲ್ಲ. ಗುಡ್ಡಿಯರ ಇಚ್ಛಾಮರಣದ ಇತಿಹಾಸವು 10ನೆಯ ಶತಮಾನದಲ್ಲಿ ಆರಂಭಗೊಂಡು, 12ನೆಯ ಶತಮಾನದಲ್ಲಿ ನಿಶ್ಚಿತತೆ ಪಡೆದುಕೊಂಡು, 13ನೆಯ ಶತಮಾನದಲ್ಲಿ ಅಂತ್ಯಗೊಳ್ಳುವುದು.[37]

ನಿಸಿಧಿಗಳ ಹಂಚಿಕೆ: ಬೆಳ್ಗೊಳದ ಬಹುತೇಕ ನಿಸಿಧಿಗಳು ಚಿಕ್ಕಬೆಟ್ಟದ ಮೇಲಿವೆ. ಇಲ್ಲಿ 93 ಶಾಸನ-ಸ್ಮಾರಕಗಳು ದೊರಕಿದ್ದರೆ, ದೊಡ್ಡಬೆಟ್ಟದ ಮೇಲೆ 12, ಜಿನನಾಥಪುರದಲ್ಲಿ 3 ಮತ್ತು ಬೆಳ್ಗೊಳ ಪಟ್ಟಣದಲ್ಲಿ 5 ಕಂಡುಬಂದಿದೆ.[38]. 13ನೆಯ ಶತಮಾನಕ್ಕಿಂತ ಮುಂಚಿನ ನಿಸಿಧಿಗಳೆಲ್ಲವೂ ಚಿಕ್ಕಬೆಟ್ಟದ ಮೇಲಿದ್ದರೆ, ಸಂದೇಹಾಸ್ಪದವಾದ ಎರಡು ನಿದರ್ಶನಗಳನ್ನು (375 ಮತ್ತು 358) ಬಿಟ್ಟು, ದೊಡ್ಡಬೆಟ್ಟದ ಮೇಲಿನ ಎಲ್ಲ ನಿಸಿಧಿಗಳೂ 14ನೆಯ ಶತಮಾನದವುಗಳಾಗಿವೆ.

ನಿಸಿಧಿ ಪ್ರಭೇದಗಳು : ಬಂಡೆಗಲ್ಲು ಹಾಗೂ ಗುಂಡುಗಲ್ಲುಗಳ ಮೇಲೆ ನಿಸಿಧಿ ಶಾಸನಗಳನ್ನು ಕೆತ್ತುವುದು ಅತಿಹೆಚ್ಚು ರೂಢಿಯಲ್ಲಿತ್ತು. ನಿಸಿಧಿ ಶಿಲಾಫಲಕಗಳ ನಿರ್ಮಾಣ 12ನೆಯ ಶತಮಾನದಲ್ಲಿ ಹೆಚ್ಚು ಪ್ರಸಾರಕ್ಕೆ ಬಂದರೂ ಅದು ಪ್ರಾರಂಭಗೊಂಡಿದ್ದು 10ನೆಯ ಶತಮಾನದಲ್ಲಿ. ವಿಗ್ರಹ, ಶಿಲಾಕೂಟ, ಮುಂತಾದ ಪ್ರಭೇದಗಳು ಅಪವಾದವಾಗಿ ಮಾತ್ರ ಆನಂತರದ ಕಾಲಾವಧಿಯಲ್ಲಿ ಕಾಣಿಸಿಕೊಳ್ಳುವುವು.

ವ್ರತಗಳ ಅರ್ಥ ಮತ್ತು ಮಹತ್ವ : ರೂಢಿಯಲ್ಲಿದ್ದ ಬೇರೆ ಬೇರೆ ಆಚಾರ ಪದಗಳ ಬಗ್ಗೆ ಈಗಾಗಲೆ ನೋಡಲಾಗಿದೆ. ಈ ಪದಗಳನ್ನು ಬಿಡಿ ಬಿಡಿಯಾಗಿಯೇ ಬಳಸಿರಲಿ, ಇಲ್ಲವೆ

---

36. ಅನುಬಂಧ III.
37. ಅದೇ.
38. ಅನುಬಂಧ I.

ಸಂಯುಕ್ತವಾಗಿ ಬಳಸ್ಪಿರಲಿ, ಅವೆಲ್ಲ ಜೀವನವನ್ನು ಅಂತ್ಯಗೊಳಿಸಿದ ವಿಧಾನವನ್ನು ಮಾತ್ರ ಸೂಚಿಸುವುವು. ಪ್ರತಿಯೊಂದು ಪದವೂ ತನ್ನದೇ ಅರ್ಥಛಾಯೆಯುಳ್ಳ ವ್ರತಾಚರಣೆಯನ್ನು ಒತ್ತಿ ಹೇಳುವುದರಿಂದ ಪ್ರತಿಪದದ ವಿಶೇಷ ಮಹತ್ವವನ್ನು ಗಮನಿಸುವುದು ಅವಶ್ಯವೆನಿಸವುದು.

ಶ್ರವಣಬೆಳ್ಗೊಳದ ಶಾಸನಗಳಲ್ಲಿ ಸುಮಾರು ಏಳು ಆಚಾರ-ಪದಗಳನ್ನು ಬಳಸಲಾಗಿದ್ದು ಅವು ಇಂತಿವೆ:

(ಅ) ಗ್ರಂಥ ಜ್ಞಾನಕ್ಕೆ ಪ್ರಾಧಾನ್ಯತೆ ನೀಡುವ 'ಆರಾಧನಾ'.

(ಆ) ಮೂಲಮಂತ್ರಗಳಿಗೆ ಪ್ರಾಮುಖ್ಯತೆ ಕೊಡುವ 'ಪಂಚಪದ'.

(ಇ) ವಿರಕ್ತಿಗೆ ಮತ್ತು ಭೋಗವರ್ಜನೆಗೆ ಒತ್ತು ನೀಡುವ 'ಸನ್ಯಸನ'.

(ಈ) ನಿರಸನಕ್ಕೆ ಅಗ್ರಸ್ಥಾನವಿತ್ತಿರುವ 'ಸಲ್ಲೇಖನಾ'.

(ಉ) ಧ್ಯಾನಕ್ಕೆ ಮಹತ್ವವಿತ್ತ 'ಸಮಾಧಿ'.

(ಊ) ಸಮ್ಯಕ್ ಜ್ಞಾನಕ್ಕೆ ಪ್ರಾಮುಖ್ಯತೆ ಕೊಡುವ 'ಪಂಡಿತ'.

(ಋ) ದೇಹದಂಡನೆಗೆ ಪ್ರಾಧಾನ್ಯತೆ ಕೊಟ್ಟಿರುವ 'ಪೌಗ್ಗಮಣ'.

ಶ್ರವಣಬೆಳ್ಗೊಳದ ಆರಂಭಿಕ ಇತಿಹಾಸದಲ್ಲಿ ಸಂಭವಿಸಿದ ಕೆಲವು ಸಮಾಧಿ ಮರಣಗಳನ್ನು ಇಂತಹ ಯಾವುದಾದರೊಂದು ಪದದಿಂದ ಗುರುತಿಸಿದರೆ, ಬಹುತೇಕ ಮರಣಗಳನ್ನು ಸಂಯುಕ್ತ ಪದಗಳಿಂದ ಗುರುತಿಸಲಾಗಿದೆ. ಕನಕಸೇನ ಮತ್ತ ಬಲದೇವ ಶ್ರಮಣರು ಹಾಗೂ ಸಸಿಮತಿ ಕಂತಿಯು 7ನೆಯ ಶತಮಾನದಲ್ಲಿ ಆರಾಧನಾ ವ್ರತವನ್ನಾಚರಿಸಿ ಜೀವನ ಕೊನೆಗೊಳಿಸಿದರೆಂದು ಹೇಳಲಾಗಿದೆ.[39] ಕೊಳತ್ತೂರು [40] ಮತ್ತು ಮಯೂರ ಸಂಘದ[41] ಶ್ರಮಣರ, ನವಿಲೂರ ಸಂಘದ ಕಂತಿಯರ [42] ಮರಣಗಳನ್ನೆಲ್ಲ ಸಮಾಧಿ ವ್ರತಾಚರಣೆಯಡಿ ವರ್ಗೀಕರಿಸಲಾಗಿದೆ. ಹಾಗೆಯೇ 7ನೆಯ ಶತಮಾನದಲ್ಲಿ ಮರಣವನ್ನು ಆಹ್ವಾನಿಸಿದ ಹಲವರ ವ್ರತಾಚರಣೆಯನ್ನು ಸನ್ಯಸನ ಪದದಿಂದ ಗುರುತಿಸಲಾಗಿದೆ.[43] ಸಲ್ಲೇಖನಾ ಇಲ್ಲವೆ ಪಂಚಪದದೊಂದಿಗೆ ಮಾತ್ರ

39. ಎ ಕ II, ಅನುಕ್ರಮವಾಗಿ 2 ಮತ್ತು 86. ಮೊದಲನೆಯ ಶಾಸನ ಈ ಶ್ರಮಣರ ಮರಣವನ್ನು ಸ್ಮರಿಸಿದೆ.

40. ಸು. 7ನೆಯ ಶತಮಾನದ 25, 108 ಮತ್ತು 111.

41. ಸು. 7ನೆಯ ಶತಮಾನದ 123 ಮತ್ತು 132.


42. ಸು. 7ನೆಯ ಶತಮಾನದ 112, 123, ಮತ್ತು 132.

ಗುರುತಿಸಿದ ಮರಣಗಳು ಈ ಕಾಲದ ದಾಖಲೆಗಳಲ್ಲಿ ಕಂಡುಬರುವುದಿಲ್ಲ - ಏಕೆಂದರೆ, ಬೇರೆ ಬೇರೆ ಪದಗಳೊಂದಿಗೆ ಬೆರೆಸಿ, ಇವನ್ನು ಸಂಯುಕ್ತವಾಗಿ ಬಳಸಲಾಗಿದೆ.[44]


ಸಂಯುಕ್ತ ಪದಗಳಿಂದ ಗುರುತಿಸಲಾದ ಮರಣಗಳೂ ಗಮನೋಚಿತವಾಗಿವೆ. ಉದಾಹರಣೆಗೆ 10ನೆಯ ಶತಮಾನದಲ್ಲಿ ಅಜಿತಸೇನಭಟ್ಟಾರಕನ ಗುಡ್ಡನಾದ ಮಾರಸಿಂಹನು ಆರಾಧನಾ ಯೋಗವನ್ನಾಚರಿಸಿ, ಸಮಾಧಿಮರಣವನ್ನು ಸಾಧಿಸಿದನೆಂದು ಹೇಳಲಾಗಿದೆ.[45] 12ನೆಯ ಶತಮಾನದ ಗುಡ್ಡಿ-ಗುಡ್ಡರ ಹಾಗೂ ಶ್ರಮಣರ ಮರಣವನ್ನೂ ಇದೇ ಬಗೆಯಲ್ಲಿ ಗುರುತಿಸಲಾಗಿದೆ. ಶಾಂತಲೆಯ ತಾಯಿ ಮಾಚಿಕಬ್ಬೆಯು ಸನ್ಯಸನವನ್ನಪ್ಪಿ, ಸಮಾಧಿಯ ಕಥನವನ್ನಾಲಿಸುತ್ತಾ ಪಂಡಿತಮರಣ ಹೊಂದಿದಳೆಂದು,[46] ದಂಡನಾಯಕ ಗಂಗರಾಜನ ಮಡದಿ ಲಕ್ಷ್ಮೀಮತಿಯು ಸನ್ಯಸನವನ್ನನುಸರಿಸಿ, ಸಮಾಧಿಯಿಂದ ತನ್ನ ಜೀವನವನ್ನು ಕೊನೆಗೊಳಿಸಿದಳೆಂದು,[47] ಲಕ್ಷ್ಮೀಮತಿಯ ಸೋದರಿ ದೇಮಿಯಕ್ಕಳು ವ್ರತಾಚರಣೆಯ ಕೊನೆಯ ಹಂತದಲ್ಲಿ ಸಮಾಧಿಯನ್ನಾಚರಿಸಿ ಸನ್ಯಸನ ಮರಣವನ್ನು ಸಾಧಿಸಿದಳೆಂದು,[48] ಗಂಗರಾಜನ ತಾಯಿ ಪೋಚಿಕಬ್ಬೆಯು ಪಂಚಪದಗಳನ್ನು ಪಠಿಸುತ್ತಾ ಸನ್ಯಸನ ದೀಕ್ಷೆ ಪಡೆದು, ಏಕಪಾರ್ಶ್ವನಿಯಮಕ್ಕನುಗುಣವಾಗಿ ದೇಹದ ಒಂದೇ ಮಗ್ಗುಲಿನಲ್ಲಿ ಒರಗಿಕೊಂಡು ಸಮಾಧಿಮರಣವನ್ನು ಸಾಧಿಸಿದಳೆಂದು,[49] ದಂಡನಾಯಕ ಬಲದೇವ ಮತ್ತು ಬಾಚಿಕಬ್ಬೆಯರ ಮಗನಾದ ಪೆರ್ಗ್ಗಡೆ ಸಿಂಗಿಮಯ್ಯನು ಪಂಚಪದಗಳನ್ನು ಧ್ಯಾನಿಸುತ್ತಾ ಸಮಾಧಿ ಮರಣವನ್ನಪ್ಪಿದನೆಂದು,[50] ಭಾನುಕೀರ್ತಿಮುನಿಯು ಸಲ್ಲೇಖನಾ ವಿಧಿಯನ್ನನುಸರಿಸಿ ಸನ್ಯಸನ ಮರಣಕ್ಕೆ ಶರಣಾದನೆಂದು,[51] ಕಾಳಬ್ಬೆಯು ಪಂಚಪದಗಳನ್ನು ಪಠಿಸಿ, ಸಲ್ಲೇಖನಾವನ್ನಾಚರಿಸಿ, ಸಮಾಧಿ ಪಡೆದು, ಸನ್ಯಸನ ಮರಣ ಸಾಧಿಸಿದಳೆಂದು [52] ವಿವರಿಸಲಾಗಿದೆ.

ವಿರಕ್ತಿ, ಧ್ಯಾನ, ನಿರಸನ, ಜ್ಞಾನಾರ್ಜನೆ, ಕಾಯಕ್ಲೇಶ, ಮೊದಲಾದವುಗಳಲ್ಲಿ ಒಂದಕ್ಕೆ

43. 28, 36, 37, 85, 98, 112, ಇತ್ಯಾದಿ.
44. ಇತರ ಪದಗಳೊಂದಿಗೆ 'ಸಲ್ಲೇಖನಾ' ಪದವನ್ನು ಸಂಯೋಜಿಸಿದ ನಿದರ್ಶನಗಳಿಗೆ ನೋಡಿ - 77, 81, 539 ಮತ್ತು 364. ಪಂಚಪದದೊಂದಿಗೆ ಇತರ ಪದಗಳ ಸಂಯೋಜನೆಗೆ ನೋಡಿ - 117, 136, 176, 174, 175, 589, ಇತ್ಯಾದಿ.
45. 64.
46. 176.
47. 157.
48. 158.
49. 136.
50. 175.
51. 81. ಮಲ್ಲಿಷೇಣನ ಮರಣಕ್ಕೆ 77ನ್ನು ನೋಡಿ.
52. 539.



18 ಆರಾಧನಾ ವ್ಯಾಖ್ಯಾನ




19 ಆರಾಧನಾ ಗ್ರಂಥದ ಅರ್ಚನೆ

ಮಾತ್ರ ಹೆಚ್ಚಿನ ಮಹತ್ವ ನೀಡಿರಲಿಲ್ಲವೆಂಬುದನ್ನು ಈ ಐತಿಹಾಸಿಕ ನಿದರ್ಶನಗಳು ಸೂಚಿಸುವಂತಿವೆ. ಏಕೆಂದರೆ, ಈ ಆಚರಣೆಯು ಇವೆಲ್ಲವುಗಳನ್ನು, ಇಲ್ಲವೆ ಇವುಗಳಲ್ಲಿ ಬಹುತೇಕ ವ್ರತಗಳನ್ನು ಒಳಗೊಂಡಿತ್ತು. ಗ್ರಂಥಗಳಲ್ಲಿ ಈ ಎಲ್ಲ ಪದಗಳ ವಾಚ್ಯಾರ್ಥವನ್ನು ಹಾಗೂ ವ್ರತಾಚರಣೆಯ ಮಹತ್ವವನ್ನು ಪ್ರಸ್ತಾಪಿಲಾಗಿದೆ.


(ಅ) *ಆರಾಧನಾ* : *ಜ್ಞಾನ ಮತ್ತು ಮರಣ* : ಅತ್ಯಂತ ವ್ಯಾಪಕ ಅರ್ಥದಲ್ಲಿ ಆರಾಧನಾ ವ್ರತವು ತತ್ವದ ಅರಿವನ್ನು ಮತ್ತು ಆರಾಧನಾ ಗ್ರಂಥಗಳ ಅಧ್ಯಯನವನ್ನು ಸೂಚಿಸುವುದು. ''ಮರಣದ ಸಂದಿಗ್ಧ ಸಮಯದಲ್ಲಿ ಉನ್ನತಮಟ್ಟದ ವಿರಕ್ತಿ, ತಾಳ್ಮೆ, ನಿಗ್ರಹ ಮತ್ತು ಸಮಚಿತ್ತತೆಯನ್ನು ಕಾಯ್ದುಕೊಳ್ಳುವ ನಿಷ್ಠೆ, ಜ್ಞಾನ, ಚಾರಿತ್ರ್ಯ ಮತ್ತು ತಪಸ್ಸುಗಳೆಂಬ ವಿರಕ್ತ - ಆದರ್ಶಗಳನ್ನು ಯಶಸ್ವಿಯಾಗಿ ಸಾಧಿಸುವ ಹಾಗೂ ಆಧ್ಯಾತ್ಮಿಕ ಶುಚಿತ್ವ ಮತ್ತು ವಿಮುಕ್ತಿ ಪ್ರಾಪ್ತಿಯ'' ತತ್ತ್ವವನ್ನು ಇದು ಗರ್ಭೀಕರಿಸಿಕೊಂಡಿದೆ.[53] ಸಾಧಕನು ಆರಾಧನಾ ಗ್ರಂಥಗಳನ್ನು ಅರಿವಿನಿಂದ ಅಧ್ಯಯನ ಮಾಡಿಯಾಗಲಿ, ಗುರುವಿನ ವ್ಯಾಖ್ಯಾನವನ್ನು ಆಲಿಸಿಯಾಗಲಿ, ಇಲ್ಲವೆ ಇವೆರಡನ್ನೂ ಒಗ್ಗೂಡಿಸಿಕೊಂಡಾಗಲಿ, ಪಡೆದುಕೊಳ್ಳಬೇಕಾಗಿತ್ತು. ವಾಚನ ಮತ್ತು ಗ್ರಹಣ ತಮ್ಮಷ್ಟಕ್ಕೆ ತಾವೇ ಅಂತಿಮ ಗುರಿಗಳಾಗುವುದಿಲ್ಲ; ಏಕೆಂದರೆ ಅವು ವಿರಕ್ತಿಯನ್ನು ಪರಿಪೂರ್ಣಗೊಳಿಸುವ ವಿಧಾನಗಳು ಮಾತ್ರ.[54] ಆರಾಧನಾ ವಿಧಿಯು ಸಮ್ಯಕ್ ದರ್ಶನ,

---

53. ಶ್ರೀಹರಿಷೇಣಾಚಾರ್ಯನ *ಬೃಹತ್‌ಕಥಾಕೋಶ* (ಸಿಂಘಿ ಜೈನ ಮಾಲಿಕೆ, ಸಂ. 17, ಮುಂಬಯಿ, 1943), ಸಂ. ಎ. ಎನ್. ಉಪಾಧ್ಯೆ, ಪೀಠಿಕೆ, ಪು. 47.



20 ಪದ್ಮಣಂದಿದೇವರ ಆರಾಧನಾ (375)



21 ಆರಾಧನಾ ಶ್ರವಣ

ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ್ಯ ಮತ್ತು ಸಮ್ಯಕ್ ತಪಗಳನ್ನು ಒಳಗೊಂಡಿದೆ. ಈ ಚತುರ್ವಿಧ ಪಥವು *ಸಮದಾ* (ಸಮಚಿತ್ತತೆ), *ಮಜ್ಝತ್ಥಮ್* (ಇತರರಲ್ಲಿರುವ ಧಾರ್ಷ್ಟ್ಯದ ಸಹನ), *ಸುದ್ಧೋಭಾವೋ* (ಭಾವ ಶುದ್ಧಿ), *ವೀಯರಾಯತಮ್* (ಬಾವೋದ್ವಿಗ್ನ ಶೂನ್ಯತೆ), *ಚಾರಿತ್ತಮ್* (ಕದಡದ ನಡೆ) ಮತ್ತು *ಧಮ್ಮ* (ಧರ್ಮಶ್ರದ್ಧೆ) ಗಳನ್ನು ಗಳಿಸಿಕೊಡುವುದೆಂದು ತಿಳಿಸಲಾಗಿದೆ.[55]

ಆರಾಧನಾ ಒಂದು *ಚಾರಣ* (ಆಧ್ಯಾತ್ಮಿಕ) ಗ್ರಂಥ. ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಸಾಧಿಸಿಕೊಳ್ಳಬೇಕೆನ್ನುವವನಿಗೆ ಅದರ ಅಧ್ಯಯನ ಅವಶ್ಯಕ. ಈ ಸಾಹಿತ್ಯರಾಶಿಯಲ್ಲಿ *ಆರಾಧನಾ ಆಚಾರ* ಮತ್ತು *ತ್ರಿಷಷ್ಟಿಲಕ್ಷಣಪುರಷಚರಿತೆ* ಗಳು ಅಡಕವಾಗಿದೆ. ಕಾಲಕಾಲಕ್ಕೆ ವಿಭಿನ್ನ ಬಗೆಯ ದೇಹದಂಡನೆಕಾರರ ಅಗತ್ಯತೆಗಳನ್ನು ಪೂರೈಸಲೆಂದು ಮುನಿ ಪ್ರಾಜ್ಞರು *ಆರಾಧನಾ* ಗ್ರಂಥದ ಹಲವಾರು ಸುದೀರ್ಘವಾದ ಮತ್ತು ಸಂಕ್ಷಿಪ್ತವಾದ ಆವೃತ್ತಿಗಳನ್ನು ಸಿದ್ಧಗೊಳಿಸಿದರು. ಲೋಹಾಚಾರ್ಯನ *ಆರಾಧನಾ* ಗ್ರಂಥವು 84,000 ಶ್ಲೋಕಗಳನ್ನು ಹೊಂದಿತ್ತು; ಅದನ್ನು ಶಿವಾರ್ಯನು *ಮೂಲಾರಾಧನಾ*ದಲ್ಲಿ ಒಂದು ಮೂರಾಂಶಕ್ಕೆ ಇಳಿಸಿದನು. ಇವೆರಡೂ ಗ್ರಂಥಗಳು ಈಗ ಲಭ್ಯವಿಲ್ಲ. ಆದರೆ ಆರಾಧನಾ ಗ್ರಂಥದ ಕನಿಷ್ಠ ಮೂವತ್ತು ರೂಪಾಂತರಗಳು ಇಂದಿಗೂ ಉಳಿದುಕೊಂಡುಬಂದಿವೆ.[56] ಇವುಗಳಲ್ಲಿ ಸುಮಾರು 2,166 - 2,170 ಸ್ತೋತ್ರಗಳುಳ್ಳ ಶಿವಾರ್ಯನ *ಭಗವತೀ ಆರಾಧನಾ*, 10,053 ಶ್ಲೋಕಗಳ ಜಿನಚಂದ್ರಸೂರಿಯ *ಆರಾಧನಾಮಾಲಾ* ಅಥವಾ *ಸಮ್ವೇಗರಂಗಶಾಲಾ* ಅತ್ಯಂತ ವಿಶದವಾದವುಗಳಾದರೆ, ಕೇವಲ 17 ಸ್ತೋತ್ರಗಳ *ಆರಾಧನಾಕಲಕ* ಅತ್ಯಂತ ಅಡಕವಾದುದಾಗಿದೆ. ಕನ್ನಡದಲ್ಲಿ ಬಹಳಷ್ಟು

54. ಪಂಪ, *ಆದಿಪುರಾಣ*, II, 50 - ವ.
55. ಜಿನೇಂದ್ರವರ್ಣಿಯ *ಜೈನೇಂದ್ರಸಿದ್ಧಾಂತಕೋಶ.* ಸಂ. 1, ಪು. 284 ರಲ್ಲಿ ಉದಾಹರಿಸಿದ ಬೃಹದ್ನಯಚಕ್ರ.
56. ಉಪಾಧ್ಯೆ, ಉಪರೋಕ್ತ, ಪು. 53.

ಪ್ರಸಿದ್ಧವಾದದ್ದು ಶಿವಕೋಟ್ಯಾಚಾರ್ಯನ *ವಡ್ಡಾರಾಧನಾ*[57] (ವಡ್ಡ = ದೊಡ್ಡ ಅಥವಾ ಸಮಗ್ರ) ಗ್ರಂಥವಾಗಿದೆ.

ಸ್ವತಃ ಪಂಡಿತರಾದ ಸಾಧಕರು ಭಕ್ತಿ ಮತ್ತು ನಿಷ್ಠೆಯಿಂದ *ಆರಾಧನಾ* ಗ್ರಂಥವನ್ನು ಮನನ ಮಾಡುತ್ತಿದ್ದರು. ಪಂಡಿತರಲ್ಲದವರು ನಿರೂಪಕನ ಮೂಲಕ ಈ ಗ್ರಂಥದ ತಿರುಳನ್ನು ತಿಳಿದುಕೊಳ್ಳುತ್ತಿದ್ದರು. ಇವೆರಡೂ ಸಾಧ್ಯವಿಲ್ಲದವರು ಗ್ರಂಥವನ್ನು ಭಕ್ತಿಯಿಂದ ಪೂಜಿಸುತ್ತಿದ್ದರು.[58] ಉಬ್ಬುಶಿಲ್ಪಗಳುಳ್ಳ ಬಹುತೇಕ ನಿಸಿಧಿ ಸ್ಮಾರಕಗಳು ಆರಾಧನಾ ಪಠಣ ಇಲ್ಲವೆ ಅದರಿಂದಾಯ್ದ ಉಪದೇಶವನ್ನೊಳಗೊಂಡ ವ್ರತವಿಧಾನವನ್ನು ಸ್ಫುಟವಾಗಿ ಪ್ರತಿಬಿಂಬಿಸುವುವು.

ಐತಿಹಾಸಿಕ ನಿದರ್ಶನಗಳು : ಆರಾಧನಾ ಮರಣದ ಎಂಟು ಐತಿಹಾಸಿಕ ನಿದರ್ಶನಗಳು ಶ್ರವಣಬೆಳ್ಗೊಳದಲ್ಲಿ ದೊರೆತಿದ್ದು, ಇವುಗಳಲ್ಲಿ ಹೆಚ್ಚಿನವು 7ನೆಯ ಶತಮಾನಕ್ಕೆ ಸೇರಿವೆ. 10 ಮತ್ತು 12ನೆಯ ಶತಮಾನಗಳಲ್ಲಿ ಇಂತಹ ಒಂದೊಂದೇ ನಿದರ್ಶನ ದೊರೆಯುವುದು.[59] 700-900 ರ ಹಾಗೂ 1001-1100 ರ ಕಾಲಾವಧಿಯಲ್ಲಿ ಇಂತಹ ಒಂದೂ ನಿದರ್ಶನ ದೊರೆಯದಿರುವುದು ಕುತೂಹಲಕಾರಕ. ಇದರಿಂದ 700ರ ನಂತರದ ಐನೂರು ವರ್ಷಗಳಲ್ಲಿ ಕೇವಲ ಇಬ್ಬರು ಆರಾಧನಾ ಮರಣವನ್ನಪ್ಪಿದ್ದರೆಂದು ಮತ್ತು 12ನೆಯ ಶತಮಾನದ ನಂತರ ಈ ವ್ರತವನ್ನು ಯಾರೂ ಆಚರಿಸಲಿಲ್ಲವೆಂದು ಭಾವಿಸಬೇಕಾಗುವುದು. ಈ ಎಂಟು ನಿದರ್ಶನಗಳಲ್ಲಿ ಒಂದೇ ಒಂದು ಶ್ರೀಮತೀ ಎಂಬ ಕಂತಿಗೆ,[60] ಇನ್ನೊಂದು ಶ್ರಾವಕನಾದ ಗಂಗಮಾರಸಿಂಹನಿಗೆ ಸಂಬಂಧಿಸಿದರೆ,[61] ಮಿಕ್ಕವುಗಳೆಲ್ಲ ಶ್ರಮಣರಿಗೆ[62] ಸಂಬಂಧಿಸಿವೆ.

ಆರಾಧನಾ ಒಂದು ಯೋಗವೆಂದು[63] ವಿಧಿ[64] ಎಂದು, ಶಾಸನಗಳಲ್ಲಿ ವರ್ಣಿಸಲಾಗಿದೆ.

---

57. *ವಡ್ಡಾರಾಧನೆ*, ಸಂ. ಡಿ. ಎಲ್. ನರಸಿಂಹಾಚಾರ್, (ಮೈಸೂರು, 1959). ಈ ಕೃತಿಯ ಇತ್ತೀಚಿನ ಅಧ್ಯಯನಕ್ಕೆ ನೋಡಿ. ಖಡಬಡಿ ಬಿ. ಕೆ., *ವಡ್ಡಾರಾಧನೆ : ಒಂದು ಅಧ್ಯಯನ* (ಧಾರವಾಡ, 1979).
58. ಆರಾಧನಾ ತಪಸ್ಸಿನ ಕೂಲಂಕಷ ವಿವರಣೆಗಾಗಿ ನೋಡಿ, *ತ್ರಿಷಷ್ಠಿ*., ಸಂ. ಎಚ್. ಎಂ. ಜಾನ್ಸನ್, ಸಂಪುಟ I, ಪು. 20 ಮತ್ತು ಅನಂತರದ ಪುಟಗಳು.
59. ಎ ಕ II, ಸು. 7ನೆಯ ಶತಮಾನದ 1, 2, 26, 86, 110, 121; 10ನೆಯ ಶತಮಾನದ 64; 12 ನೆಯ ಶತಮಾನದ 81.
60. 86.
61. 64.
62. ಇವರು : ಮುನಿಗಳಾದ ಪ್ರಭಾಚಂದ್ರ, ಕನಕಸೇನ ಮತ್ತು ಬಲದೇವ, ಗುಣದೇವ, ಇಂದ್ರನಂದಿ, ವೃಷಭನಂದಿ ಮತ್ತು ಭಾನುಕೀರ್ತಿ. 12ನೆಯ ಶತಮಾನದ ಭಾನುಕೀರ್ತಿಯನ್ನು ಹೊರತುಪಡಿಸಿ ಮಿಕ್ಕವರು ಬಹುತೇಕ 600-700ರ ಕಾಲಾವಧಿಯಲ್ಲಿ ಮರಣವನ್ನಪ್ಪಿದರು.

ಬಹುತೇಕ ಪ್ರಕರಣಗಳಲ್ಲಿ ಅದು ಮರಣವನ್ನು ಆಹ್ವಾನಿಸುವ ಪ್ರಧಾನ ವಿಧಿಯಾಗಿದ್ದರೆ, ಎರಡು ನಿದರ್ಶನಗಳಲ್ಲಿ ಅದನ್ನು ಇತರ ವಿಧಿಗಳೊಂದಿಗೆ ಸಂಯುಕ್ತಗೊಳಿಸಲಾಗಿದೆ. ಉದಾಹರಣೆಗೆ, ಪ್ರಭಾಚಂದ್ರನು ಸಮಾಧಿ ಕೈಕೊಂಡನೆಂದು, ಅವನನ್ನನುಸರಿಸಿ ಏಳುನೂರು ಶ್ರಮಣರು ಸನ್ಯಸನ ಮರಣ ಸಾಧಿಸಿದರೆಂದು ಸ್ಪಷ್ಟಪಡಿಸಲಾಗಿದೆ; ಇಲ್ಲಿ ಆರಾಧನಾವನ್ನು ಸನ್ಯಸನ ಮತ್ತು ಸಮಾಧಿ ಪದಗಳ ಪೂರ್ವಪ್ರತ್ಯಯವನ್ನಾಗಿ ಬಳಸಲಾಗಿದೆ.[65] ಜಿನಾಗಮದಲ್ಲಿ ಇರುವಂತೆಯೇ ಭಾನುಕೀರ್ತಿಯು ಆರಾಧನಾ ವ್ರತವನ್ನಾಚರಿಸಿದ್ದರೂ ಅವನು ನಿಜಕ್ಕೂ ಸನ್ಯಸನದಲ್ಲಿ ನಿರತನಾಗಿ (*ಸನ್ಯಸನ ಸನ್ನದ್ಧ*), ಸಲ್ಲೇಖನಾವನ್ನು ಪರಿಪಾಲಿಸುತ್ತ (*ಸಲ್ಲೇಖನಾ ನಿಮಿತ್ತ*) ಸಾವನ್ನು ಸ್ವಾಗತಿಸಿದನೆಂದು ತಿಳಿಸಲಾಗಿದೆ.[66] ಇದರಂತೆ ಮಾರಸಿಂಹನೂ ಆರಾಧನಾ ವ್ರತವನ್ನಾಚರಿಸಿ ಸಮಾಧಿಮರಣ ಸಾಧಿಸಿದನೆಂದು ತಿಳಿಸಲಾಗಿದೆ.[67] ಮರಣಗಳನ್ನು ಗುರುತಿಸಲು ಒಂದಕ್ಕಿಂತ ಹೆಚ್ಚು ಪದಗಳನ್ನು ತಾರತಮ್ಯವಿಲ್ಲದೆ ಬಳಕೆ ಮಾಡಿರುವುದು ಮತ್ತು ಆರಾಧನಾ ಪದದಿಂದ ಬೇರೆ ಬೇರೆ ಉದಾಹರಣೆಗಳನ್ನು ಶಾಸನಗಳಲ್ಲಿ ಗುರುತಿಸಿರುವುದು ಕುತೂಹಲಕರವಾಗಿವೆ.[68]

(ಆ) ***ಪಂಚಪದ* : *ಪ್ರಾರ್ಥನೆ ಮತ್ತು ಮರಣ*** : ಮೂಲಾಧಾರವಾದ ಐವರು ಜಿನ ಗುರುವರ್ಯರೇ ಪಂಚಪರಮೇಷ್ಠಿಗಳು. ಅವರು *ಅರ್ಹಂತ* (ಸರ್ವಜ್ಞಾನಿ), *ಸಿದ್ಧ* (ಪರಿಪೂರ್ಣ), *ಉಪಾಧ್ಯಾಯ* (ಗುರು), *ಆಚಾರ್ಯ* (ಜ್ಞಾನಿ) ಮತ್ತು *ಸಾಧು* (ಮುನಿ). ಇವರನ್ನು ಪ್ರಾರ್ಥಿಸುವುದು ವಿಧಿಕ್ರಿಯೆಯ ಮಹತ್ವದ ಅಂಗ. ದೈನಂದಿನ ಜೀವನದಲ್ಲಿ ಸಮಸ್ಯೆಗಳನ್ನು ಎದುರಿಸಲು ಶ್ರಾವಕರಿಗೆ ಅಗತ್ಯವಿರುವಷ್ಟೇ ಅದು ದೇಹದಂಡಿಸುವ ಮುನಿಗಳ ಮೋಕ್ಷಪ್ರಾಪ್ತಿಗೂ ಅಗತ್ಯವೆನಿಸಿದೆ. ಆಧ್ಯಾತ್ಮಿಕ ಶಕ್ತಿ ನೀಡುವ ಈ ಪ್ರಣವಗಳು ಇಂತಿವೆ:

ಣಮೋ ಅರಹಂತಾಣಮ್ : ಅರಹಂತನಿಗೆ ಪ್ರಣಾಮಗಳು.

---

63. 121.
64. 64.
65. 1.
66. 81.
67. 64. ಇಂತಹ ಮತ್ತೊಂದು ಉದಾಹರಣೆಗೆ 121ನ್ನು ನೋಡಿ.
68. ಬಹುಶಃ ಈ ವ್ರತಾಚರಣೆಯ ಅಪೂರ್ಣ ತಿಳುವಳಿಕೆಯಿಂದಾಗಿ ಶಾಸನ ಪಂಡಿತರು ಈ ಪಾಠಗಳ ವ್ಯಾಖ್ಯಾನ ಮತ್ತು ಭಾಷಾಂತರ ಒದಗಿಸುವಾಗ ಅವನ್ನು ಗೋಜಲುಗೊಳಪಡಿಸಿರುವರು. 1, 2, 23, 110, 121, 64 ಮತ್ತು 81ನೆಯ ಶಾಸನಗಳ ಭಾಷಾಂತರದಲ್ಲಿ ಆರಾಧನಾ ಪದವನ್ನು ಸಂಪೂರ್ಣವಾಗಿ ಕೈ ಬಿಟ್ಟಿರುವುದು, ಇಲ್ಲವೆ ಅದರ ಸ್ಥಾನದಲ್ಲಿ ಇನ್ನೊಂದು ಪದವನ್ನು ಬಳಸಿರುವುದು, ಇದಕ್ಕೆ ಸಾಕ್ಷಿ. 1ನೆಯ ಶಾಸನದ ಪಾಠದ ಉಪಾಂತ್ಯ ಸಾಲು (ಪು. 364) ಸನ್ಯಸನ ಎಂದಿರಬೇಕಿತ್ತು, ಸಮಾಧಿಯಂದಲ್ಲ; ಸಂಖ್ಯೆ 2ರ 5-6 ನೆಯ ಸಾಲುಗಳಲ್ಲಿ ಕೊಟ್ಟಿರುವ ಸಮಾಧಿ ಪದದ ಸ್ಥಾನದಲ್ಲಿ ಆರಾಧನಾ ಪದವಿರಬೇಕು. ಈಗ ಕೊಟ್ಟಿರುವ "ಚೆನ್ನಾಗಿ ಪೂಜೆ ಮಾಡಿ" ಎಂಬುದರ ಬದಲಾಗಿ "ಆರಾಧನಾವನ್ನು ಯುಕ್ತವಾಗಿ ಆಚರಿಸಿ" ಎಂದು, 26ನೆಯ

ಣಮೋ ಸಿದ್ಧಾಣಮ್	:	ಸಿದ್ಧರಿಗೆ ಪ್ರಣಾಮಗಳು.
ಣಮೊ ಆಯಿರಿಯಾಣಮ್	:	ಆಚಾರ್ಯರಿಗೆ ಪ್ರಣಾಮಗಳು.
ಣಮೋ ಉವಜ್ಝಾಯಾಣಮ್	:	ಉಪಾಧ್ಯಾಯರಿಗೆ ಪ್ರಣಾಮಗಳು.
ಣಮೋ ಲೋಯೆ ಸರ್ವಸಾಹೂಣಮ್	:	ಸರ್ವ ಸಾಧುಗಳಿಗೆ ಪ್ರಣಾಮಗಳು

ಈ ಪ್ರಾರ್ಥನೆಯನ್ನು ಪಂಚನಮಸ್ಕಾರ, ಪಂಚಪದ, ಪಂಚಾಕ್ಷರಪದ, [69] ನಮಸ್ಕಾರ ಮಂತ್ರ[70] ಅಥವಾ ಭಾವನಮಸ್ಕಾರ [71] ಎಂದು ಕರೆಯಲಾಗಿದೆ. ಅ. ನ. ಉಪಾಧ್ಯೆಯವರು ಅಭಿಪ್ರಾಯಪಡುವಂತೆ "ಪಂಚನಮಸ್ಕಾರ ಪಠಣಕ್ಕೆ ವಿಪತ್ಕಾಲದಲ್ಲಿ ರಕ್ಷಿಸುವ ಅದ್ಭುತ ಶಕ್ತಿಯಿದೆ; ಅದಕ್ಕೆ ಅಗೌರವ ತೋರುವ ಯಾವುದೇ ಪ್ರಯತ್ನವು ವಿನಾಶಕ್ಕೆ ದಾರಿಮಾಡಿಕೊಡುವುದು."[72]

ದೈಹಿಕ ಶಕ್ತಿ ಮತ್ತು ಮಾನಸಿಕ ಸ್ಥಿರತೆ ಇರುವ ಪ್ರತಿಯೊಬ್ಬನೂ ಈ ಸ್ತೋತ್ರವನ್ನು ಪಠಿಸಬೇಕು. ಪಠಣಾಶಕ್ತಿ ಕುಗ್ಗಿದಾಗ ಇತರರು ಈ ಸ್ತೋತ್ರ ಪಠಿಸುವುದನ್ನು ಭಕ್ತಿಯಿಂದ ಆಲಿಸಬೇಕು. ಜಟಾಯುವಾಗಿ ಜನ್ಮ ತಳೆದ ಅರಸ ದಂಡಕನು ಜಿನಧರ್ಮ ಸ್ವೀಕರಿಸಿದ ಮೇಲೆ ಪಂಚನಮಸ್ಕಾರ ಪಠಿಸುತ್ತಾ ಮಡಿದನೆಂದು ವರ್ಣಿಸಲಾಗಿದೆ. 'ಕ್ರಮೇಣ ತೀವ್ರಗೊಳ್ಳುತ್ತ ಹೋಗುವ ನಿರಸನದಿಂದ ಆರಂಭಗೊಂಡು, ದೇಹದಂಡನೆಯ ವಿಧಾನವು ಕೊನೆಯುಸಿರೆಳೆಯುವ ಮುನ್ನ ಪಂಚ ನಮಸ್ಕಾರಗಳ ಮೇಲೆ ಶಕ್ತಿ ಮೀರಿದ ಚಿತ್ತೈಕಾಗ್ರತೆಯ ಅತ್ಯುನ್ನತ ಸ್ಥಿತಿಗೇರಬೇಕು' ಎಂದು *ರತ್ನಕರಂಡಕ ಶ್ರಾವಕಾಚಾರವು* ತಿಳಿಸುವುದು.[73]

ಅರುಹ, ಅಶರೀರ, ಆಚಾರ್ಯ, ಉಪಾಧ್ಯಾಯ ಮತ್ತು ಮುನೀಶ್ವರ ಎಂಬ ಈ ಪಂಚಪರಮೇಷ್ಠಿಗಳ ಮೊದಲ ಅಕ್ಷರಗಳನ್ನು ಮೇಳೈಸಿಕೊಂಡು ಜೈನ ಪ್ರಣವ ರೂಪಿತಗೊಂಡಿದೆ. ಅದು ಹೀಗಿದೆ : *ಅಅಆಉಮ್* > *ಅವುಮ್* = *ಓಂ.*[74] ಏಕಕಾಲಕ್ಕೆ ಈ

ಶಾಸನದ ಮೂರನೆಯ ಸಾಲಿನಲ್ಲಿ (ಪು. 368) ಇರಬೇಕಿತ್ತು. ಪಾಠದ ಸರಿಯಾದ ಅರ್ಥವನ್ನು ತಿಳಿಸಲು (ಪು. 394), *ಆರಾಧನಾ* ಪದವನ್ನು ಪರಿಗಣಿಸಿ 81 ರ 79-81 ಸಾಲುಗಳನ್ನು ಭಾಷಾಂತರಿಸಬೇಕಿತ್ತು.


69. ಪಂಪ, *ಆ.ಪು.* II, 54-55; ಜನ್ನ, *ಅನಂತ.ಪು.* XIV, 51- ವಚನ, ಪು. 297.
70. ಉಪಾಧ್ಯೆ, *ಉಪರೋಕ್ತ* ಪು. 29.
71. *ಭಗವತೀ ಆರಾಧನಾ,* 788.
72. ಖಡಬಡಿ, ಉಪರೋಕ್ತ, ಪು. 82.
73. *ರತ್ನ.ಶ್ರಾ.* V, 128, 137.

ಸ್ತೋತ್ರಗಳ ಪಠಣ ಮತ್ತು ಶ್ರವಣ ಮಾಡಬೇಕೆಂದು ಜಿನಸೇನಾಚಾರ್ಯನು ತಿಳಿಸುವನು. ಸಾಧಕನು ಸಿದ್ಧರನ್ನು ತನ್ನ ಮಸ್ತಕದಲ್ಲಿ, ಅರ್ಹತನನ್ನು ತನ್ನ ಆತ್ಮದಲ್ಲಿ, ಆಚಾರ್ಯನನ್ನು ತನ್ನ ಮನದಲ್ಲಿ ಪ್ರತಿಷ್ಠಾಪಿಸಿಕೊಂಡು, ಉಪಾಧ್ಯಾಯನನ್ನು ತನ್ನ ಕವಚವನ್ನಾಗಿಸಿಕೊಂಡು, ಸಾಧುಗಳನ್ನು ತನ್ನ ವಿಘ್ನವಿನಾಶಕ ಶಕ್ತಿಗಳನ್ನಾಗಿ ಪರಿವರ್ತಿಸಿಕೊಂಡು, ತನ್ನ ಗುರಿಯನ್ನು ಸಾಧಿಸುವನು.[75] ''ಅವಿನಾಶಿ ಪ್ರಾರ್ಥನಾ ನುಡಿಗಳು ಸ್ವರ್ಗಕ್ಕೆ ಸೋಪಾನ'' ಎಂದು ಕವಿ ಪಂಪನು ಅವುಗಳನ್ನು ಸಮೀಕರಿಸುವ. ''ಪಂಚಪದಗಳನ್ನು ಸ್ಫುಟವಾಗಿ ಪಾಠಿಸಬೇಕು; ಅವುಗಳನ್ನು ಉಚ್ಚರಿಸಲು ಅಶಕ್ತನಾದವನು ನಮಸ್ಕಾರಗಳನ್ನು ಅಥವಾ ನಾಮಗಳನ್ನು ಉಸುರಬೇಕು; ಇದೂ ಕಷ್ಟಕರವಾದರೆ ಇವುಗಳ ಪ್ರಥಮಾಕ್ಷರಗಳನ್ನು ಜಪಿಸಬೇಕು; ಇದಕ್ಕೂ ತೊಂದರೆಯಾದರೆ ಕೇವಲ 'ಅ' ಎನ್ನಬೇಕು; ಇದೂ ಸಾಧ್ಯವಾಗದಿದ್ದರೆ, ಎಲ್ಲ ಪ್ರಯತ್ನ ಕೈಬಿಟ್ಟು, ಒರಗಿ ಕುಳಿತು, ನೆರೆದ ಮುನಿಗಳು ಮಾಡುವ ಸ್ತೋತ್ರ ಪಠಣವನ್ನು ಆಲಿಸಬೇಕು',[76] ಎಂದು ಈ ವಿಧಿನಿಯಮವನ್ನು ವರ್ಣಿಸಿರುವನು.


ಐತಿಹಾಸಿಕ ನಿದರ್ಶನಗಳು : ಶ್ರವಣಬೆಳ್ಗೊಳದ ಸುಮಾರು ಆರೇಳು ಶಾಸನಗಳು ಪಂಚಪದ,[77] ಪಂಚನಮಸ್ಕ್ರಿಯೆ[78] ಮತ್ತು ಪಂಚನಮಸ್ಕಾರ[79] ವ್ರತಗಳನ್ನು ಉಲ್ಲೇಖಿಸುವುವು. 12ನೆಯ ಶತಮಾನಕ್ಕೆ ಮುಂಚೆ ಅಥವಾ 14ನೆಯ ಶತಮಾನದ ನಂತರ ಈ ವ್ರತಾಚರಣೆಗೆ ಹೆಚ್ಚು ಪ್ರಾಧಾನ್ಯತೆ ದೊರೆಯದಿದ್ದುದನ್ನು ಇಲ್ಲಿಯ ದಾಖಲೆಗಳು ಧ್ವನಿಸುತ್ತವೆ. 14ನೆಯ ಶತಮಾನದ ಆರಂಭ ಕಾಲದ ಏಕೈಕ ಉದಾಹರಣೆಯನ್ನು ಹೊರತುಪಡಿಸಿದರೆ, ಇವೆಲ್ಲ ಶಾಸನಗಳು ಶ್ರಾವಕರ ಮರಣಗಳಿಗೆ ಸಂಬಂಧಿಸಿವೆ. ಇವುಗಳಲ್ಲಿ ಗುಡ್ಡಿಯವು - 3,[80] ಗುಡ್ಡರವು - 2 ಇವೆ.[81] ಮುನಿಗೆ ಸಂಬಂಧಿಸಿದ ಒಂದೇ ಒಂದು ಉಲ್ಲೇಖ ಮಾತ್ರ ಇಲ್ಲಿ ದೊರೆತಿದೆ.[82]

---

74. ಜಿನಸೇನಾಚಾರ್ಯ, *ಪೂರ್ವಪುರಾಣಂ*, ವಿ. ಶಾಂತರಾಜಶಾಸ್ತ್ರಿಗಳ ಟೀಕೆಯೊಂದಿಗೆ, (ಮೈಸೂರು, 1933), V. 246.
75. ಅದೇ. V. 245.
76. *ಉಪರೋಕ್ತ*, II, 54-55.
77. ಎ ಕ II, 1120ರ 136; 1131ರ 176; 1139ರ 174; 1139 ರ 175.
78. 1313ರ 72.
79. 1214ರ 539.
80. ಇವರಾರೆಂದರೆ : ದಂಡನಾಯಕ ಗಂಗರಾಜನ ತಾಯಿ ಪೋಚಿಕಬ್ಬೆ (136), ಶಾಂತಲೆಯ ತಾಯಿ ಮಾಚಿಕಬ್ಬೆ, (176) ಮತ್ತು ಕಾಳಬ್ಬೆ (539). ಕಾಳಬ್ಬೆಯ ಮನೆತನದ ಬಗ್ಗೆ ಹೆಚ್ಚಿನ ವಿವರಗಳು ದೊರೆಯುವುದಿಲ್ಲ.
81. ಬಲದೇವ (174) ಮತ್ತು ಸಿಂಗಿಮಯ್ಯ (175) ಎಂಬ ಅಧಿಕಾರಿಗಳು.
82. 72.



22 ಶುಭಚಂದ್ರ ಮಹಾಯತಿಯ ಪಂಚಪದ (72)




25 ಶೃತಮುನಿಯ ಸಲ್ಲೇಖನಾ (364)

ಈ ಕೇಂದ್ರದ ಶಾಸನಗಳ ಸೂಕ್ಷ್ಮಾವಲೋಕನದಿಂದ ತಿಳಿದುಬರುವುದೇನೆಂದರೆ, ಇಲ್ಲಿಯ ಬಹುತೇಕ ಮರಣಗಳು 'ಪಂಚಪದ'ವಲ್ಲದೆ ಬೇರೆ ಪದಗಳೊಂದಿಗೆ ಸಮೀಕೃತಗೊಂಡಿದ್ದವೆಂಬುದು. ಸನ್ಯಸನ, ಸಲ್ಲೇಖನಾ ಮತ್ತು ಸಮಾಧಿ ಅವುಗಳಲ್ಲಿ ಪ್ರಧಾನವಾಗಿದ್ದವು. ಪಂಚಪದಗಳನ್ನು ಧ್ಯಾನಿಸುತ್ತಾ ಸಿಂಗಿಮಯ್ಯನು ಸಮಾಧಿವ್ರತವನ್ನು ಪೂರ್ತಿಗೊಳಿಸಿ ಅಂತ್ಯ ಸಾಧಸಿದ. ಇದೇ ರೀತಿ, ಬಲದೇವ ಮತ್ತು ಮಾಚಿಕಬ್ಬೆಯರು ಸಲ್ಲೇಖನಾವನ್ನು ಪೂರ್ತಿಗೊಳಿಸಿ ಅಂತ್ಯ ಕಂಡುಕೊಂಡರು. ಕಾಳಬ್ಬೆಯು ಸಲ್ಲೇಖನಾ ವ್ರತವನ್ನಾಚರಿಸಿದ ಮೇಲೆ ಪಂಡಿತಮರಣ ಸಾಧಿಸುವ ಮುನ್ನ ತನ್ನ ಗುರುಗಳ ಬೋಧನೆಯಂತೆ ಸನ್ಯಸನದಲ್ಲಿ ಮಗ್ನಳಾಗಿ, ಸಮಾಧಿ ಪಠಣವನ್ನು ಆಲಿಸುತ್ತ, ಪಂಚಪದಗಳನ್ನು ಪಠಿಸುತ್ತ, ಸನ್ಯಸನವನ್ನಾಚರಿಸಿದಳು. ಪಂಚಪದ ಪಠಣವು ಉಸಿರಿರುವವರೆಗೆ ಮುಂದುವರಿಯುವ ವ್ರತಾಚರಣೆ ಎಂಬುದನ್ನು ಈ ಉದಾಹರಣೆಗಳು ಸ್ಪಷ್ಟಪಡಿಸುವುವು. ದೇಹದಂಡನೆಗೈದು ('*ಕಾಯೆಬ್ರತ ಸಮಾರೋಪಮ್*'), ಜಿನನನ್ನು ಧ್ಯಾನಿಸಿ ('*ಚಿತ್ತೆ ಶುಭವನಾಮ್ ಜೈನೀಮ್*') ಮತ್ತು ಪಂಚಗುರುಗಳಿಗೆ ನಮನ ಸಲ್ಲಿಸುತ್ತಾ ('*ವಾಕ್ಯೆ ಪಂಚನಮಸ್ಕ್ರಿಯಾಮ್*') ಶುಭಚಂದ್ರನು ದೇಹ ತ್ಯಜಿಸಿದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.[83]

(ಇ) ***ಸನ್ಯಸನ ಮರಣ* : *ವಿರಕ್ತಿ ಮತ್ತು ಮರಣ*** : ಸನ್ಯಸನ ಎಂದರೆ ಐಹಿಕ ಬಂಧನಗಳನ್ನು ತ್ಯಜಿಸುವುದು. ಇಂಥ ವಿರಕ್ತಿಯಿಲ್ಲದ ಸಮಾಧಿಮರಣ ಖಂಡಿತವಾಗಿಯೂ ಊನಗೊಂಡದ್ದೆನಿಸುವುದು. ಅತ್ಯಂತ ಸರಳ ರೂಪದಲ್ಲಿ ಇದೊಂದು *ಅನಿಕೇತನ* ಸ್ಥಿತಿಯಾಗಿದ್ದು, *ಪಾವಜ್ಜಾ* ಅಥವಾ ಗೃಹಸ್ಥ ಜೀವನದಿಂದ ಅನಿಕೇತನ ಸ್ಥಿತಿಯೆಡೆಗೆ (*ಅಗಾರೊ ಅಣಾಗರಿಯಮ್*) ನಿರ್ಗಮನದ ಫಲಶ್ರುತಿಯಾಗಿದೆ. ಶ್ರಮಣ, ನಿರ್ಗ್ರಂಥ, ಬಿಕ್ಕು. ಸಾಧು ಮುಂತಾದ ಪದಗಳಿಂದ ಗುರುತಿಸಲಾದ ಶ್ರಮಣರು ಮತ್ತು ನಿರ್ಗ್ರಂಥಿ, ಭಿಕ್ಷುಣಿ, ಸಾಧುಣಿ, ಕಂತಿ ಮುಂತಾದ ಶ್ರಮಣ-ಕಂತಿಯರಾಗಿರಬಹುದು; ಇಲ್ಲವೆ ತಮ್ಮ ಕುಟುಂಬದಿಂದ ಅಥವಾ ಕೌಟುಂಬಿಕ ಹೊಣೆಗಳಿಂದ **ಬಿಡಿಸಿಕೊಂಡು** (ಶ್ರಾವಕರು) ಸನ್ಯಾಸ ಸ್ವೀಕರಿಸಿದ ಗೃಹಸ್ಥರಾಗಿರಬಹುದು.

83.72, ಯಾವುದೇ ನಿರ್ದಿಷ್ಟ ಪದದಿಂದ ಶುಭಚಂದ್ರನ ಮರಣವನ್ನು ಗುರುತಿಸಿಲ್ಲದಿರುವುದನ್ನು ನೋಡಿದರೆ, ಈ ಮುನಿಯ ಸಮಾಧಿ ವಿಧಿ ಬಗ್ಗೆ ಅನುಮಾನ ಬರುವುದು.


ಈ ಪದಗಳಿಂದ ಗುರುತಿಸಲಾದ ಕಂತಿಯರು [84] ವಿಹಿತವಾದ ಸನ್ಯಾಸಿಗಳು; ಅಂದರೆ, ಭಿಕ್ಷೆಯಿಂದ (ಹಾಗಾಗಿ ಭಿಕ್ಕು) ಜೀವನ ಸಾಗಿಸಿ, ಮನೆ ಬಿಟ್ಟು, ಪರಿವ್ರಾಜಕ ಜೀವನವನ್ನು ಕ್ರಮಬದ್ಧವಾಗಿ ಸ್ವೀಕರಿಸಿದವರು. ಈ ವಿಹಿತ ಸನ್ಯಾಸಿಗಳು ಏಳೂವರೆ ವರ್ಷ ಆಯುಷ್ಯದ ನಂತರ ಯಾವಾಗ ಬೇಕಾದರೂ ಜೀವನವನ್ನು ತೊರೆಯಬಹುದಾಗಿತ್ತು. ಅವರ ವ್ರತವು 'ಉಡುಗೆ ತೊಡುಗೆಗಳನ್ನು ಬಿಚ್ಚಿ ಒಪ್ಪಿಸುವು'ದರಿಂದ ಆರಂಭಗೊಂಡು, ಸಮಾಧಿ ಮರಣದೊಂದಿಗೆ ಮುಕ್ತಾಯಗೊಳ್ಳುವುದು. ದೇಹದಂಡನೆಕಾರನು ತನ್ನ ಜೀವನವನ್ನು ಅಂತ್ಯಗೊಳಿಸುವಾಗ ಪಡೆಯುವ ಸನ್ಯಾಸ ದೀಕ್ಷೆಗಿಂತ ಇದು ಭಿನ್ನವೆಂದು ತಿಳಿಯಬೇಕು. ಇವರು ತಮ್ಮ ಸಂಘದಿಂದ ನಿರ್ಗಮಿಸುವ ವಿರಕ್ತಿ ಕ್ರಿಯೆಯು ಸಮಾಧಿ, ಸಲ್ಲೇಖನಾ, ಆರಾಧನಾ ಮುಂತಾದವುಗಳಲ್ಲಿ ಸಮಾವೇಶಗೊಂಡಿದೆಯಾದರೂ ಸನ್ಯಸನಮರಣ ಪ್ರಭೇದವನ್ನು ಸ್ವತಂತ್ರ ವಿಧಿಯಾಗಿ ಪರಿಶೀಲಿಸಿದಂತಿಲ್ಲ. ಸನ್ಯಸನವನ್ನು ಸಮಾಧಿಮರಣದೊಂದಿಗೆ ಸಮೀಕರಿಸುವ ಅತ್ಯಂತ ಹಳೆಯ ದಖ್ಖನದ ಗ್ರಂಥಗಳಲ್ಲೊಂದೆಂದರೆ ಜಿನಸೇನಾಚಾರ್ಯನ *ಪೂರ್ವಪುರಾಣ*ವೆಂದು ಕಾಣುವುದು. ಸಮಾಧಿ ಸಾಧಕನು ಪ್ರಾಯೋಪಗಮಣವನ್ನು ಸ್ವೀಕರಿಸುವ ಮುನ್ನ ಸನ್ಯಸನ ದೀಕ್ಷೆ ಪಡೆಯಬೇಕೆಂದು ಈ ಗ್ರಂಥದಲ್ಲಿ ತಿಳಿಸಲಾಗಿದೆ. ಸನ್ಯಸನದಿಂದ ಇಂದ್ರಲೋಕ ಸೇರುವ ಮೊದಲು ಅವನು ಆಹಾರದ ಆಸೆ ಮತ್ತು ದೈಹಿಕ ಬಂಧನಗಳನ್ನು ಕಡಿದುಕೊಳ್ಳುವನೆಂದೂ ಹೇಳಲಾಗಿದೆ.[85]




23 ಪೋಚಿಕಬ್ಬೆಯ ಸನ್ಯಸನ (136)

ಅದು ಏನೇ ಇರಲಿ, ಕನ್ನಡ ಕವಿಗಳು ಅದನ್ನೊಂದು ಮರಣ ಪ್ರಭೇದವೆಂದು ಗುರಿತಿಸಿರುವರು. ಅವರು ಸಂಸಾರಿಯ ಜೀವನದಿಂದ ಸಾಧು ಜೀವನಕ್ಕೆ ಬದಲಾವಣೆಯನ್ನು ಸೂಚಿಸುವ ಸನ್ಯಾಸನ ಸ್ವೀಕಾರವನ್ನಲ್ಲದೆ,[86] ಸನ್ಯಸನ ವ್ರತಾಚರಣೆ ವಿಧಾನವನ್ನೂ (*ಸನ್ಯಸನಮ್ ಗೆಯ್ದು*)[87] ಪ್ರಸ್ತಾಪಿಸುವರು.

84. ವಿವರಗಳಿಗೆ ನೋಡಿ, ಡಬ್ಲ್ಯು. ಷೂಬ್ರಿಂಗ್, *ದಿ ಡಾಕ್ಟ್ರಿನ್ ಆಫ್ ದಿ ಜೈನಾಸ್ - ಡಿಸ್ಕ್ರೈಬ್ಡ್ ಆಫ್ಟರ್ ದಿ ಓಲ್ಡ್ ಸೋರ್ಸಸ್* (ದಿಲ್ಲಿ, 1962), ಪು. 248-49; ದೇವ್, ಎಸ್. ಬಿ., *ಹಿಸ್ಟರಿ ಆಫ್ ಜೈನ ಮಾನಾಕಿಜಮ್ - ಫ್ರಾಮ್ ಇನ್‌ಸ್ಕ್ರಿಪ್ಷನ್ಸ್ ಅಂಡ್ ಲಿಟರೆಚರ್*, (ಪೂನಾ, 1956), ಪು. 44 ಮತ್ತು ಅನಂತರ.
85. ಜಿನಸೇನಾಚಾರ್ಯ, ಉಪರೋಕ್ತ ಕೃತಿ, IV, 141, ಪು. 158 ಮತ್ತು V, 10-11, ಪು. 158.
86. ಶಿವಕೋಟ್ಯಾಚಾರ್ಯ, ವಡ್ಡಾ. ಪು. 83.
87. ಅದೇ. ಪು. 70 ಮತ್ತು 94.



24 ಲಕ್ಷ್ಮೀಮತಿಯ ಸಲ್ಲೇಖನಾ (157)



26 ದೇಮತಿಯ ಸಮಾಧಿ (158)

ಸನ್ಯಸನ ಒಂದು ವಿಧಿ ಮತ್ತು ವಿಧಾನ.[88] ಶಿವಕೋಟ್ಯಾಚಾರ್ಯ, ಚಾವುಂಡರಾಯ ಮುಂತಾದವರು ಈ ವಿಧಾನವನ್ನು ಮೇಲಿಂದ ಮೇಲೆ ಪ್ರಸ್ತಾಪಿಸಿದರೂ ಇದರ ಸ್ಫುಟವಾದ ವ್ಯಾಖ್ಯಾನ ದೊರೆಯುವುದು ಪಾರ್ಶ್ವಪಂಡಿತನಿಂದ.[89] ಇತರ ವ್ರತಗಳನ್ನು ಆಚರಿಸಲು ಸಮಯವಿಲ್ಲದವರು ಇದನ್ನು ಆಯ್ದುಕೊಳ್ಳುತ್ತಿದ್ದರೆಂದು ಬಂಧುವರ್ಮ ಸೂಚಿಸುವಂತಿದೆ.[90] ಬಹುಶಃ ಈ ಕಾರಣಗಳಿಂದಾಗಿ ಮಹಾಭಾರತದ ಕರ್ಣನು ಜೀವಿತದ ಒಂದೇ ಒಂದು ಯಾಮ ಉಳಿದಾಗ, ಯುದ್ಧಭೂಮಿಯಲ್ಲಿಯೆ ಈ ವ್ರತ ದೀಕ್ಷೆಯನ್ನು ಪಡೆದುಕೊಳ್ಳಬೇಕಾಯಿತೆಂದು ತೋರುವುದು.[91]

ಐತಿಹಾಸಿಕ ನಿದರ್ಶನಗಳು : ಶ್ರವಣಬೆಳ್ಗೊಳದ ಇಪ್ಪತ್ತು ಶಾಸನಗಳು ಸನ್ಯನಸ ವ್ರತವನ್ನು *ಸನ್ಯಸನಮ್ ನೊಂತು*[92], *ಸನ್ಯಸನದ ವಿಧಿಯಿಮ್*[93], *ಸನ್ಯಸನ ಶಾಸ್ತ್ರಕ್ರಮಾತ್*[94], *ಸನ್ಯಸನಮ್‌ಗೆಯ್ದು*,[95] *ಸನ್ಯನಸಯೋಗದೊಳ್*[96], *ಸನ್ಯಸನಸಮನ್ವಿತಮ್*, *ಸನ್ಯಸನ ಸನ್ನದ್ಧ*,[97] ಮುಂತಾದ ಪದಗಳಿಂದ ಪ್ರಸ್ತಾಪಿಸುವುವು. ಈ ವ್ರತವನ್ನು ಶಾಸ್ತ್ರ, ಯೋಗ, ವಿಧಿ, ವಿಧಾನ,

88. ಅದೇ. ಪು. 24 ಮತ್ತು 93.
89. ಪಾರ್ಶ್ವಪಂಡಿತ, *ಪಾ.ಪು.*, XIII. 96- ವ, ಪು. 533.
90. ಬಂಧುವರ್ಮ, *ಜೀ.ಸಂ.*, VI. 44-ವ, ಪು. 112.
91. ಮಹಾಬಲ, *ನೇ.ಪು.*, XIII. 2, ಪು. 387.
92. ಎ ಕ II. 27. 78. ಇತ್ಯಾದಿ.
93. 81.
94. 85.
95. 98.
96. 112.
97. 539. 112 . 81.

ಇತ್ಯಾದಿಯಾಗಿ ಗ್ರಹಿಸಲಾಗಿದೆ.[98] ಅದು ದುರ್ಧರವಾದರೂ ಅತ್ಯಂತ ಶ್ರೇಷ್ಠ ವಿಧಾನವೆಂದು ಪರಿಗಣಿಸಲಾಗಿತ್ತು.[99]

ಸನ್ಯಸನ ವ್ರತಾಚರಣೆಯಿಂದ ಮರಣವನ್ನಪ್ಪುವುದು 12ನೆಯ ಶತಮಾನದಲ್ಲಿ ಹೆಚ್ಚು ರೂಢಿಗೆ ಬಂದಂತೆ ತೋರುವುದು. ಏಕೆಂದರೆ, ಇಂತಹ ಒಂಭತ್ತು ನಿದರ್ಶನಗಳನ್ನು ಈ ಶತಮಾನದಲ್ಲಿ ದಾಖಲಿಸಲಾಗಿದೆ. ಅಂದರೆ, ಶ್ರವಣಬೆಳ್ಗೊಳ ಇತಿಹಾಸದಲ್ಲಿ ಬರುವ ಒಟ್ಟು ಸನ್ಯಸನ ಮರಣಗಳಲ್ಲಿ ಸುಮಾರು ಅರ್ಧದಷ್ಟು ಆ ಶತಮಾನಕ್ಕೆ ಸೇರಿದ್ದವೆಂದರ್ಥ.[100] ಈ ಆಚರಣೆಯ ಪ್ರಾಚೀನತೆಯು 7ನೆಯ ಶತಮಾನದಷ್ಟು ಹಿಂದಕ್ಕೆ ಹೋಗುವುದಾದರೂ[101] 8-11ನೆಯ ಶತಮಾನಗಳಲ್ಲಿ ಅದು ಉದಾಸೀನಕ್ಕೊಳಗಾಗಿತ್ತೆಂಬ ಭಾವನೆ ಬರುವುದು. 12ನೆಯ ಶತಮಾನದಾರಂಭದಲ್ಲಿ ಈ ಆಚರಣೆ ಹೆಚ್ಚು-ಕಡಿಮೆ ನಿಂತುಹೋಯಿತೆನ್ನುವಷ್ಟು ಇಳಿಮುಖವಾಯ್ತು. 13 ಮತ್ತು 14ನೆಯ ಶತಮಾನಗಳಲ್ಲಿ ಈ ಮರಣದ ಕೇವಲ ಎರಡು ನಿದರ್ಶನಗಳು ದೊರೆತರೆ, 1398ರ ನಂತರ ಇದರ ಪ್ರಸ್ತಾಪ ಒಮ್ಮೆಯೂ ಬರುವುದಿಲ್ಲ.[102]

ಸನ್ಯಸನ ಮರಣವು ಶ್ರಮಣರಲ್ಲಿ ಜನಪ್ರಿಯವಾಗಿತ್ತೆಂಬುದನ್ನು ಶ್ರವಣಬೆಳ್ಗೊಳದ ಶಾಸನಗಳು ಪುಷ್ಟೀಕರಿಸುವುವು. ಶ್ರಮಣರ ನಂತರ ಈ ಆಚರಣೆ ಪ್ರಚಾರಲ್ಲಿದ್ದುದು ಶ್ರಾವಕಿ (5); ಕಂತಿ (2) , ಮತ್ತು ಶ್ರಾವಕ (2) ರಲ್ಲಿ.[103]

---

98. 85, 158, 360.
99. 360 ಮತ್ತು 176.
100. ಇವೆಲ್ಲ 12ನೆಯ ಶತಮಾನದ ಪ್ರಥಮಾರ್ಧದಲ್ಲಿ ಸಂಭವಿಸಿದವು; ನೋಡಿ - 77, 81, 136, 157, 158, 174, 176, 484 ಮತ್ತು 532.
101. 7ನೆಯ ಶತಮಾನದಲ್ಲಿ ಆರು ನಿದರ್ಶನಗಳು ದೊರೆಕಿದ್ದರೂ ಇವುಗಳ ಕಾಲ ನಿರ್ಣಯ ಅನಿಶ್ಚಿತವಾಗಿದೆ - ಅದೇ, 27, 28, 36, 85, 98, 112. 8-11ನೆಯ ಶತಮಾನಗಳಲ್ಲಿ ಈ ಬಗೆಯ ಮರಣಗಳನ್ನು ದಾಖಲಿಸಿಲ್ಲ. 8ನೆಯ ಶತಮಾನದ 17ನೆಯ, ಸುಮಾರು 10ನೆಯ ಶತಮಾನದ 78ನೆಯ ಮತ್ತು 11ನೆಯ ಶತಮಾನದ 524ನೆಯ ಶಾಸನಗಳ ದಿನಾಂಕಗಳು ಪ್ರಶ್ನಾರ್ಹವಾಗಿವೆ. ಅಂದರೆ, 12ನೆಯ ಶತಮಾನದ ಹಿಂದಿನ ಎಲ್ಲ ಸನ್ಯಸನ ಮರಣಗಳ ಕಾಲದ ಬಗ್ಗೆ ಅನಿಶ್ಚಿತತೆ ಇದೆ ಎಂದರ್ಥ.
102. 1214ರ 539 ಮತ್ತು 1398ರ 360.
103. ನೋಡಿ- ಶ್ರಮಣರಿಗೆ 17, 27, 28, 36, 77, 81, 85, 98, 360, (378) ಮತ್ತು 539; ಶ್ರಾವಕಿಯರಿಗೆ 78, 136, 157, 158 ಮತ್ತು 176; ಕಂತಿಯರಿಗೆ 112 ಮತ್ತು 484 ಮತ್ತು ಶ್ರಾವಕರಿಗೆ 174 ಮತ್ತು 532. ಅಂದರೆ ಕನಿಷ್ಟ ಹನ್ನೊಂದು ಶ್ರಮಣರು, ಐವರು ಶ್ರಾವಕಿಯರು, ಇಬ್ಬರು ಕಂತಿಯರು ಮತ್ತು ಇಬ್ಬರು ಶ್ರಾವಕರು ಶ್ರವಣಬೆಳ್ಗೊಳದಲ್ಲಿ ಸನ್ಯಸನ ವ್ರತಗಳನ್ನಾಚರಿಸಿ ಮಡಿದಿದ್ದು ಸ್ಪಷ್ಟ.

ಪ್ರಾಕೃತ ಮತ್ತು ಸಂಸ್ಕೃತ ಗ್ರಂಥಗಳು ಸಾಮಾನ್ಯವಾಗಿ ಸನ್ಯಸನವನ್ನು (ವಿರಕ್ತಿ) ಇಚ್ಛಾಮರಣಕ್ಕೆ ದಾರಿತೋರುವ ವ್ರತವೆಂದು ಪರಿಗಣಿಸಿದರೆ, ಕೆಳ ದಖ್ಖನದಲ್ಲಿ ಸನ್ಯಸನವನ್ನು ಸಮಾಧಿ, ಸಲ್ಲೇಖನಾ ಮತ್ತಿತರ ಮರಣ ಸ್ವರೂಪಗಳ ಅಂತಸ್ತಿಗೇರಿಸಲಾಗಿದೆ. ಕೆಲವು ಶಾಸನಗಳು ಸನ್ಯಸನ ಮರಣವನ್ನು ಮಾತ್ರ ಪ್ರಸ್ತಾಪಿಸುವುವು; ಇನ್ನು ಕೆಲವು ಅದನ್ನು ಇತರ ಪದಗಳೊಂದಿಗೆ ಸಂಯೋಜಿಸುವುವು. ಉದಾಹರಣೆಗೆ, ಮಲ್ಲಿಷೇಣ ಮತ್ತು ಭಾನುಕೀರ್ತಿ ಮುನಿಗಳು ಸನ್ಯಸನವನ್ನಾಚರಿಸಿ, ಸಲ್ಲೇಖನಾವನ್ನನುಸರಿಸಿ, ಸಮಾಧಿಯಲ್ಲಿ ಅಂತ್ಯ ಸಾಧಿಸಿಕೊಂಡರೆಂದು ವರ್ಣಿಸಲಾಗಿದೆ.[104] ಮಾಚಿಕಬ್ಬೆಯು ಸಲ್ಲೇಖನಾ ಸಾಧಿಸುವ ಮುನ್ನ ಸನ್ಯಸನವನ್ನು ಸ್ವೀಕರಿಸಿ, ಪಂಚಪದ ಕುರಿತು ಧ್ಯಾನಿಸಿದಳು.[105] ಲಕ್ಷ್ಮೀಮತಿ, ಬಲದೇವ, ಮಾಚಿಕಬ್ಬೆ, ಶ್ರೀಮತಿಕಂತಿ ಮತ್ತು ಬಾಳಚಂದ್ರನ ಶಿಷ್ಯನೊಬ್ಬ ಆಚರಿಸಿದ ಮರಣವಿಧಿಗಳು ಇದೇ ಬಗೆಯನ್ನು ಸೂಚಿಸುವುವು.[106]

(ಈ) ***ಸಲ್ಲೇಖನಾ : ನಿರಶನ ಮರಣ*** : ದೇಹವನ್ನು ಕೃಶವಾಗಿಸುವ (*ಲೇಖನಾ*) ಪ್ರಶಂಸಾರ್ಹ (*ಸತ್*) ವಿಧಾನವನ್ನು ಸಲ್ಲೇಖನಾ ಎಂದು ಗುರುತಿಸಲಾಗಿದೆ; ಕಾರಣ ಸಲ್ಲೇಖನಾ "ಆತ್ಮವನ್ನು ರಕ್ಷಿಸಲು ದೇಹವನ್ನು ಶಿಕ್ಷಿಸುವ" ವಿಧಾನವೆಂದು ಅರ್ಥೈಸಲಾಗಿದೆ.[107] ಇದನ್ನು ಆಚರಿಸುವವನೇ ಸಾಧಕನೆಂದು ಜಿನಸೇನಾಚಾರ್ಯನು ಸಾರುವನು.[108]

ದಖ್ಖನದಲ್ಲಿ 'ಸನ್ಯಸ' ಮತ್ತು 'ಸಮಾಧಿ' ಪದಗಳಿಗಿಂತ 'ಸಲ್ಲೇಖನಾ' ಪದ ತೀರ ಕಡಿಮೆ ಪ್ರಚಲಿತವಿತ್ತು. ಕನ್ನಡ ಕವಿಗಳಲ್ಲಿ ಬಂಧುವರ್ಮನು ಇದರ ಅತ್ಯಂತ ಸ್ಪಷ್ಟ ವರ್ಣನೆ ಒದಗಿಸಿದರೆ, ಆಯತವರ್ಮನು ಈ ವಿಧಿಯನ್ನು ಆದ್ಯಂತವಾಗಿ ಶೋಧಿಸಿರುವನು. ಮಿಕ್ಕವರು ಈ ಪದವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬಳಸಿರುವರು, ಇಲ್ಲವೆ ಆಕಸ್ಮಿಕವಾಗಿ ಉಲ್ಲೇಖಿಸಿರುವರು.[109] ಶಿವಕೋಟ್ಯಾಚಾರ್ಯನು ತನ್ನ ಪ್ರಾಕೃತ ಕೃತಿಯಲ್ಲಿ ಮತ್ತು

---

104. ಸನ್ಯಸನ, ಸಲ್ಲೇಖನಾ ಮತ್ತು ಸಮಾಧಿ ಪದಗಳು ಜೊತೆಗೂಡಿಯೆ ಬರುವ ಮಲ್ಲಿಷೇಣನ ಮರಣವನ್ನು ಶಾಸನ 77ರಲ್ಲಿ ವಿವರಿಸಿಲಾಗಿವೆ. 'ಸನ್ಯಸನ', 'ಸಲ್ಲೇಖನ', 'ಆರಾಧನಾ' ಪದಗಳು ಒಟ್ಟಿಗೆ ಬರುವ ಭಾನುಕೀರ್ತಿಯ ಮರಣದ ಪ್ರಸ್ತಾಪವು ಶಾಸನ ಸಂ. 81ರಲ್ಲಿದೆ.
105. 136.
106. 157, 174, 176, 484 ಮತ್ತು 539.
107. ಸಿಕ್ದರ್, ಜೆ. ಸಿ. *ಸ್ಟಡೀಸ್ ಇನ್ ದಿ ಭಗವತಿ ಸೂತ್ರ* , (ಮುಜಫರ್‌ಪುರ, 1964), ಪು. 398.
108. ಜಿನಸೇನಾಚಾರ್ಯ, *ಉಪದೋಕ್ತ*, ಪು. 145.
109. ಚಾವುಂಡರಾಯನನ್ನು (ಹಾಗೂ ಬಂಧುವರ್ಮನ *ಜೀವಂಸಂಬೋಧನೆ*) ಹೊರತುಪಡಿಸಿ ಈ ಪದವನ್ನು ಇಮ್ಮಡಿ ನಾಗವರ್ಮ, ಶಾಂತಿನಾಥ, ಆಚಣ್ಣ, ಬಂಧುವರ್ಮ, ಪಾರ್ಶ್ವಪಂಡಿತ ಮತ್ತು ಜನ್ನ ಬಳಸಿರುವರು. ಬಂಧುವರ್ಮ *ಹರಿ.ವಂ.*, X, II ಪು. 210 ಮತ್ತು ಆಯತವರ್ಮನ *ಕನ್ನಡ ರತ್ನಕರಂಡಕ ಶ್ರಾವಕಾಚಾರ್ಯ*ದಲ್ಲಿ (ಹಸ್ತ ಪ್ರತಿಗಳಿಂದ ಮಿರ್ಜಿ ಅಣ್ಣಾರಾಯರು ವಿಪುಲವಾಗಿ ಉದ್ಧರಿಸಿರುವರು) ಹೆಚ್ಚಿನ ವಿವರಗಳು ದೊರೆಯುತ್ತವೆ.

ಸಮಂತಭದ್ರನು ತನ್ನ ಸಂಸ್ಕೃತ ಗ್ರಂಥದಲ್ಲಿ ತಳೆದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ಈ ಅಧ್ಯಯನವನ್ನು ಕೈಕೊಂಡರೆ ಹೆಚ್ಚು ಅರ್ಥಪೂರ್ಣವಾಗುವುದೆಂದು ತೋರುವುದು.

ಜೀವಿತಾವಧಿಯ ಅಂತಿಮ ಹಂತದಲ್ಲಿ ಸಲ್ಲೇಖನಾ ವಿಧಿಯನ್ನು ಕೈಕೊಳ್ಳಬೇಕು, ಆದರೆ ಆ ತಪವನ್ನು ಜೀವನದುದ್ದಕ್ಕೂ ಆಚರಿಸುತ್ತಾ ಅದರ ಕಠೋರತಮ ಕ್ರಮಗಳನ್ನು ಜೀವಿತಾಂತ್ಯದಲ್ಲಿ ಪೂರೈಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ಇದನ್ನು ಯುದ್ಧಸಿದ್ಧತೆಗೆ ಹೋಲಿಸುವ ಆಯತವರ್ಮನು ಹೀಗೆ ಹೇಳುವನು: ''ಯುದ್ಧವನ್ನು ಮುಂಗಂಡು, ಬಿಲ್ಲುಗಾರಿಕೆ, ಕತ್ತಿವರಸೆ, ಅಶ್ವಾರೋಹಣ, ಗಜಾರೋಹಣ, ರಥಾರೋಹಣಗಳೆಂಬ ಕಲೆಗಳಲ್ಲಿ ಪಳಗಿ, ಪ್ರಭುತ್ವ ಸಂಪಾದಿಸಿಕೊಂಡು, ಯಾವಾಗ ಯುದ್ಧ ಆರಂಭಗೊಂಡರೂ ಅದರಲ್ಲಿ ವಿಜಯಿಯಾಗಿ ಹೊರಬರುವ ವೀರನಂತೆ, ಸಲ್ಲೇಖನಾ ವ್ರತಧಾರಿಯು ಜೀವನದುದ್ದಕ್ಕೂ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.''[110] ಈ ವ್ರತಾಚರಣೆ ಹನ್ನೆರಡು ವರ್ಷಕಾಲ ಸುದೀರ್ಘವಾಗಿ ಸಾಗಬಹುದೆಂದು ಕೆಲವು ಗ್ರಂಥಗಳಲ್ಲಿ ಪ್ರತಿಪಾದಿಸಲಾಗಿದೆ.[111]

ಸಲ್ಲೇಖನಾವನ್ನು (ಅ) ಬಾಹ್ಯ ಮತ್ತು (ಬ) ಅಭ್ಯಂತರ ಶುದ್ಧೀಕರಣ ಎಂಬ ವಿಧಾನಗಳನ್ನಾಗಿ ವಿಂಗಡಿಸಲಾಗಿದೆ.[112] ನಿರಸನದ ನಾನಾ ವಿಧಾನಗಳ ಮೂಲಕ ಪರಿಣಾಮಕಾರಿಯಾಗಿ ಸಾಧಿಸಬಲ್ಲ ಬಾಹ್ಯ ಸಲ್ಲೇಖನಾ ವಿಧಿಯು ದೈಹಿಕ ಪ್ರಚೋದನೆಗಳನ್ನು ನಿಗ್ರಹಿಸುವಲ್ಲಿ ಸಹಕಾರಿಯಾಗುವುದು. ಪ್ರಾಯಶ್ಚಿತ್ತ, ಮನನ, ಪೂಜೆ, ಇತ್ಯಾದಿಗಳ ಮೂಲಕ ಸಾಧಿಸಬಲ್ಲ ಅಭ್ಯಂತರ ಸಲ್ಲೇಖನಾ ವಿಧಿಯು ಚಿತ್ತೈಕಾಗ್ರತೆ ಮತ್ತು ಅವಧಾನ ನಿಯಂತ್ರಣ ಸಾಧಿಸಲು ಸಹಕಾರಿಯಾಗುವುದು. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ, ದೇಹವನ್ನು ಕಶಾಪ್ರಹಾರಕ್ಕೊಳಪಡಿಸಿ, ಕಷಾಯಗಳನ್ನು (ಚತುರ್ವಿಧ ರಾಗದ್ವೇಷಗಳಾದ ಕೋಪ, ಅಹಂಕಾರ, ವಂಚನೆ ಮತ್ತು ದ್ವೇಷ) ದೂರಟ್ಟಿ, ಈ ಗುರಿಯನ್ನು ಸಾಧಿಸಬೇಕು. ತಪಸ್ಸನ್ನು ಆಚರಿಸುವವನನ್ನು ರಾಗದ್ವೇಷಗಳಿಂದ ಮುಕ್ತಗೊಳಿಸುವುದೆ ಕಷಾಯ ಸಲ್ಲೇಖನಾದ ಗುರಿ. ಕೊನೆಯುಸಿರೆಳೆಯುವ ಮುಂಚೆ ಸಲ್ಲೇಖನಾ ಅತಿಚಾರಗಳನ್ನು ನಿಗ್ರಹಿಸಬೇಕಿದ್ದರೆ, ನಿರಸನ ಮತ್ತು ಧ್ಯಾನಗಳು ದೇಹದಂಡನಕಾರನನ್ನು ಮರಣದ ಅಂಚಿಗಷ್ಟಲ್ಲದೆ ಆಧ್ಯಾತ್ಮಿಕದ ಶಿಖರಸ್ಥಾನಕ್ಕೂ ಕೊಂಡೊಯ್ಯುವುವು. ಜೀವೇಚ್ಛೆ, ಮರಣೇಚ್ಛೆ, ಭಯದಿಂದ ಪಲಾಯನಾಪೇಕ್ಷೆ, ಹಳೆಯ ಗೆಳೆಯರ ನೆನಪು ಮತ್ತು ಸುಖಾಪೇಕ್ಷೆ, ಇಹಲೋಕದಲ್ಲಿ ಅನುಭವಿಸಿದ

110. *ರತ್ನ.ಶ್ರಾ.*, ಪು. 519, ಟಿಪ್ಪಣಿ 1.

111. ಪಾರ್ಶ್ವಪಂಡಿತ, *ಪಾ.ಪು.*, IV, 99, ಪು. 156.

112. *ಭ.ಆ.* 208.

ಕಷ್ಟಕೋಟಲೆಗೆ ಪ್ರತಿಯಾಗಿ ಪರಲೋಕದಲ್ಲಿ ಫಲಾಪೇಕ್ಷೆ-ಎಂಬುವೇ ಈ ಅತಿಚಾರಗಳಾಗಿವೆ.[113]

ಐತಿಹಾಸಿಕ ನಿದರ್ಶನಗಳು : ಸಲ್ಲೇಖನಾ ವ್ರತವನ್ನು ಉಲ್ಲೇಖಿಸುವ ಐದು ಶಾಸನಗಳು ಮಾತ್ರ ಶ್ರವಣಬೆಳ್ಗೊಳದಲ್ಲಿವೆ. ಒಂದನ್ನುಳಿದು ಇವೆಲ್ಲ ಶ್ರಮಣರಿಗೆ ಸಂಬಂಧಿಸಿವೆ.[114] ಗಂಗರಾಜನ ತಾಯಿ ಪೋಚಿಕಬ್ಬೆ ಈ ವ್ರತವನ್ನಾಚರಿಸಿದ ಏಕೈಕ ಶ್ರಾವಕಿ.[115] ಇವುಗಳಲ್ಲಿ ಯಾರ ಮರಣವೂ 12ನೆಯ ಶತಮಾನಕ್ಕಿಂತ ಮುಂಚೆ ಸಂಭವಿಸಲಿಲ್ಲ. 1432ರ ನಂತರದ ಶಾಸನಗಳಾವುದರಲ್ಲೂ ಈ ಪದದ ಪ್ರಸ್ತಾಪವೇ ಬರುವುದಿಲ್ಲ.[116]

ಇಲ್ಲಿ ದೊರೆತ ಐದು ನಿದರ್ಶನಗಳಲ್ಲಿ ಮೂರು 12ನೆಯ ಶತಮಾನಕ್ಕೆ ಸೇರಿವೆ; ಆದರೆ ಮರಣದ ಪ್ರತ್ಯೇಕ ಪ್ರಭೇದವಾಗಿ ಸಲ್ಲೇಖನಾ ವ್ರತ ಒಂದನ್ನೇ ಪ್ರಸ್ತಾಪಿಸದಿರುವುದು ಕುತೂಹಲಕರವಾಗಿದೆ.[117] ಸನ್ಯಸನ ಮತ್ತು ಆರಾಧನಾ [118] ಮುಂತಾದ ಪದಗಳ ಜೊತೆಗೂಡಿ, ಇವೆಲ್ಲವುಗಳೊಡನೆ ಅಥವಾ ಇವುಗಳಲ್ಲಿ ಒಂದರೊಡನೆ ಸಂಯೋಜಿಸಿ, ಸಲ್ಲೇಖನಾ ವ್ರತವನ್ನು ಪ್ರಸ್ತಾಪಿಸಲಾಗಿದೆ.[119]

ಈ ವಿವರಗಳಿಂದ : (ಅ) ಸಲ್ಲೇಖನಾ ಪದ ಬಹಳಷ್ಟು ಬಳಕೆಯಲ್ಲಿರಲಿಲ್ಲ, ಮತ್ತು (ಆ) ಕನಿಷ್ಠಪಕ್ಷ ದಕ್ಷಿಣದಲ್ಲಿ 'ಸಲ್ಲೇಖನಾ ಮರಣ' ಪ್ರಕಾರವು ವಿರಳವಾಗಿತ್ತು, ಎಂಬುದು ಸ್ಪಷ್ಟ.[120]

(ಉ) ***ಸಮಾಧಿ*** : *ಧ್ಯಾನ ಮತ್ತು ಮರಣ* : ''ದೈಹಿಕ ಅಥವಾ ಮಾನಸಿಕ ಪ್ರಜ್ಞಾ ಶೂನ್ಯಸ್ಥಿತಿ''ಯೇ ಸಮಾಧಿ ಎಂದು ಹಾರ್ನಲ್ ವ್ಯಾಖ್ಯಾನಿಸುವರು.[121] ಹೆಲೆನ್ ಜಾನ್ಸನ್ ಅದನ್ನು ''ಅಮೂರ್ತ ಧ್ಯಾನ'' ವೆಂದು ಗುರುತಿಸುವಳು. ಅಂದರೆ, ಅದು ನಿರ್ದಿಷ್ಟ ವಸ್ತುವಿನ

---

113. ನೋಡಿ. ಆಯತವರ್ಮನ ಟೀಕೆಯನ್ನು (*ರತ್ನ.ಶ್ರಾ.*, ಪು. 556, ಟಿಪ್ಪಣಿ 1); *ತತ್ತ್ವಾರ್ಥಾಧಿಗಮ* ಸೂತ್ರ, VII, ಪು. 37.
114. ಎ ಕ II, 77, 81, 364 ಮತ್ತು 539.
115. 136.
116. 364.
117. 77.
118. 81.
119. 136 ಮತ್ತು 539 ಇದಕ್ಕೆ ಅತ್ಯುತ್ತಮ ಉದಾಹರಣೆಗಳನ್ನೊದಗಿಸುವುವು.
120. ಈ ಸಂಗತಿಯನ್ನು ಸ್ಪಷ್ಟಪಡಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಆದರೆ, ಪ್ರಾಕೃತ ಮತ್ತು ಸಂಸ್ಕೃತ ಕವಿಗಳಿಗೆ ಇತರರಿಗಿಂತ ಇದು ಪ್ರಿಯವಾಗಿತ್ತೆಂದು ನಾವು ಸೂಚಿಸುವೆವು. ಶ್ರವಣಬೆಳ್ಗೊಳದ ಐದು ಶಾಸನಗಳಲ್ಲಿ ಎರಡು ಸಂಸ್ಕೃತದಲ್ಲಿದ್ದರೆ ಇನ್ನು ಮೂರು ಕನ್ನಡದಲ್ಲಿವೆ. ಆದರೆ, 'ಸಲ್ಲೇಖನಾ' ಪದವು ಸಂಸ್ಕೃತ-ಕನ್ನಡ ಸಮ್ಮಿಶ್ರ ಪಾಠದ ಕನ್ನಡ ಭಾಗದಲ್ಲಿ ಕಾಣಿಸುತ್ತದೆ.
121. *ಉವಸಗದಸಾಓ*, ಸಂ. ಹಾರ್ನೆಲ್, ಟಿಪ್ಪಣಿ. 163.

ಮೇಲಿನ ಧ್ಯಾನಕ್ಕಿಂತ ಭಿನ್ನವಾದುದು ಎಂದರ್ಥ.[122] ಅದನ್ನು ಸಮಾಧಿಯೋಗವೆಂದೂ ಕರೆಯಲಾಗಿದೆ: ಸಮಾಧಿ ಎಂದರೆ ಚಿತ್ತೈಕಾಗ್ರತೆ ಮತ್ತು ಯೋಗ ಎಂದರೆ ಕಾಯಾ-ವಾಚಾ-ಮನಸಾ ಸಹಗಾಮಿ ಕ್ರಿಯೆ.[123] "ಜ್ಞಾತೃ, ಜ್ಞೇಯ ಮತ್ತು ಮನನ ವಿಧಾನಗಳ ಚಿತ್ತ ಭ್ರಮಣೆಯಿಂದ ಧ್ಯಾನವು ಮುಕ್ತವಾದಾಗ ನಾವು ಸಮಾಧಿ ಪಡೆಯುವೆವು", ಎಂದು ವ್ಯಾಖ್ಯಾನಿಸಿರುವರು ಸೋಗಾನಿ.[124]

ಸಮಾಧಿಯನ್ನು *ಸಂಪ್ರಜ್ಞಾತಾ* ಮತ್ತು *ಅಸಂಪ್ರಜ್ಞಾತಾ, ಸಬೀಜ* ಮತ್ತು *ನಿರ್ಬೀಜ, ಸಾಲಂಬನಾ* ಮತ್ತು *ನಿರಾಲಂಬನಾ* ಎಂದು ವಿಂಗಡಿಸಬಹುದು. "ಜೈನ ಧರ್ಮವು ಧ್ಯಾನ ಮತ್ತು ಸಮಾಧಿಯ ನಡುವೆ ವ್ಯತ್ಯಾಸ ಕಾಣುವುದಿಲ್ಲ; ಮೇಲಾಗಿ, ಇವನ್ನು ಶುಕ್ಲಧ್ಯಾನದಡಿ ಸೇರಿಸುವುದು."[125] ಹೀಗಾಗಿ, ಸಮಾಧಿಯು "ಕರ್ಮತಃ ಶುಕ್ಲಧ್ಯಾನವೇ" ಎಂದು ಹೆಲೆನ್ ಜಾನ್ಸನ್ ತೀರ್ಮಾನಿಸಿರುವಳು.[126] ಶುಕ್ಲಧ್ಯಾನದ ಉಪಾಂಗಗಳನ್ನಾಧರಿಸಿ, ಆತ್ಮ ವಿಮೋಚನಾ ವಿಧಾನವನ್ನು ಸದೇಹಿ ಹಾಗೂ ನಿರ್ದೇಹಿ ಎಂದು ವರ್ಗೀಕರಿಸಲಾಗಿದೆ.[127]

ಆಚಾರಾಂಗ ಸೂತ್ರದ ಪ್ರಕಾರ, ಚಂಚಲ ಮನಸ್ಸಿಟ್ಟುಕೊಂಡು ಅಮೂರ್ತ ಧ್ಯಾನದ ಸಮಾಧಿ ಸ್ಥಿತಿಯನ್ನು ಪಡೆದುಕೊಳ್ಳುವುದು ಅಸಾಧ್ಯವಾದ ಮಾತು.[128] ಸಮಾಧಿಮರಣವು ವಿರಕ್ತಿ ಸದ್ಗುಣದ ಫಲವಾದ ತಪಸ್ಸಿನ ಅತ್ಯುನ್ನತ ಕ್ರಿಯೆಯೆಂದು *ರತ್ನಕರಂಡಕ ಶ್ರಾವಕಾಚಾರ* ಒತ್ತಿಹೇಳುವುದು. ಈ ಅಂತ್ಯಕ್ರಿಯೆ ಪರಿಸಮಾಪ್ತಿ ಎಷ್ಟೊಂದು ಮಹತ್ವದ್ದೆಂದರೆ, ಅದನ್ನು ಪೂರೈಸದೆ ಮಿಕ್ಕ ಆಚರಣೆಗಳಿಗೆ ಅರ್ಥಬರುವುದಿಲ್ಲ.[129] ತನ್ನ ಜೀವನದ ಕೊನೆಯ ಗಳಿಗೆಗಳಲ್ಲಿ ಅಂತ್ಯಕ್ರಿಯೆಯನ್ನು ತ್ಯಜಿಸಿದರೆ, ಜೀವನದುದ್ದಕ್ಕೂ ವಿರಕ್ತಿ ಆಚರಣೆಗಳಲ್ಲಿ ತೊಡಗಿದವನೂ ತನ್ನೆಲ್ಲ ಸಿದ್ಧಿಗಳಿಗೆ ಎರವಾಗುವನು, ಎಂಬುದು *ಭಗವತೀ ಆರಾಧನಾದ* ಅಭಿಮತ. ತನ್ನ ಜೀವಿತಾವಧಿಯ ಕೊನೆಯ ಘಟ್ಟದಲ್ಲಿ ಮಾಡುವ ಪರಿಶ್ರಮವು ಅತ್ಯಂತ ಮಹತ್ವದ್ದು; ಏಕೆಂದರೆ, ಪರಿಪೂರ್ಣ ಜೀವನವು ಪರಿಪೂರ್ಣ ಅಂತ್ಯದಿಂದಲೇ ದೃಢಪಡುತ್ತದೆ - *ದುಖ್ಖ ಖಾಒ ಕಮ್ಮ ಖಾಒ ಸಮಾಧಿ ಮರಣಮ್ ಚ ಬೋಹಿಲಹೋವೆ.*[130]

---

122. ಜಾನ್ಸನ್ ಎಚ್., ಉಪರೋಕ್ತ, 1, ಪು. 46, ಟಿಪ್ಪಣಿ 70.
123. ಜಾಕೋಬಿ (ಸಂ.), *ಉತ್ತರಾಧ್ಯಯನ ಸೂತ್ರ*, X, ಪು. 34.
124. ಸೊಗಾನಿ, ಕೆ. ಸಿ., *ಎಥಿಕಲ್ ಡಾಕ್ಟ್ರಿನ್ ಆಫ್ ಜೈನಿಸಮ್*, ಪು. 249.
125. ಅದೇ.
126. ಪೂರ್ವೋಕ್ತ.
127. ಪೂರ್ವೋಕ್ತ.
128. *ಆಚಾರಾಂಗ ಸೂತ್ರ*. ಪು. 49.
129. *ರತ್ನ. ಶ್ರಾ.* V, 123, ಪು. 519.
130. *ಭ. ಆ.* 10.

ಸಮಾಧಿಯನ್ನು ಪ್ರಸ್ತಾಪಿಸದ ಪುರಾತನ ಅಥವಾ ಮಧ್ಯಕಾಲೀನ ಜೈನ ಕವಿಗಳೇ ವಿರಳ. ಅದನ್ನು ಮರಣವೆಂದಲ್ಲದೆ ವಿಧಿ, ಫಲ, ಸಾಂಧೋನಾಪಾಯ, ಸಾಧನೋಪಾಯ, ಸಾಧುಸಮಾದಿ, ಇತ್ಯಾದಿಯಾಗಿ ಪ್ರಸ್ತಾಪಿಸಲಾಗಿದೆ.[131] ಆಚಾಮ್ಲ, ಸಲ್ಲೇಖನಾ, ಸನ್ಯಸನ, ಆರಾಧನಾ, ಮುಂತಾದ ವ್ರತಗಳೊಂದಿಗೆ ದೇಹದಂಡನೆ ಪ್ರಕ್ರಿಯೆಯ ಮಕ್ತಾಯವು ಸಮಾಧಿಯನ್ನು ಮುಂಬಾಲಿಸುವುದು ಇಲ್ಲವೆ ಅದರಲ್ಲಿ ಐಕ್ಯವಾಗುವುದು ಎಂಬುದನ್ನು ಈ ಉಲ್ಲೇಖಗಳು ಸೂಚಿಸುವುವು.[132]

ಸಮಾಧಿ ವ್ರತಾಚರಣೆಯ ಎರಡು ಮಹತ್ವದ ಅಂಗಗಳೆಂದರೆ ಇಂದ್ರಿಯ ನಿಗ್ರಹ ಮತ್ತು ಚಿತ್ತೈಕಾಗ್ರತೆ. ದೇಹದಂಡನೆಯು ಸಂಕಲ್ಪಶಕ್ತಿಯನ್ನು ದುರ್ಬಲಗೊಳಿಸುವ ಬದಲು ದರ್ಶನ ಮತ್ತು ಚಾರಿತ್ರ್ಯಗಳಲ್ಲಿ ವಿಶ್ವಾಸವನ್ನು ಬಲಪಡಿಸುವುದು. ಪೀಠಿಕಾ ಇಲ್ಲವೆ ಜಾತಿ ಮಂತ್ರಗಳನ್ನು ಪುನರುಚ್ಚರಿಸುವುದರಿಂದ ಏಕಾಗ್ರತೆ ಉಂಟಾಗುವುದು. ಇದನ್ನು 'ಸಮಾಧಿ ಮರಣಮ್ ಭವತು' ಎಂಬ ಪದಪುಂಜದ ನಿರಂತರ ಪಠಣದಿಂದ ಸಮರ್ಥವಾಗಿ ಸಾಧಿಸಬಹುದು.[133]

15ನೆಯ ಶತಮಾನದ ಕನ್ನಡ ಕವಿ ಮಂಗರಾಜನು ಸಮಾಧಿ ವ್ರತದ ಸ್ಪಷ್ಟ ಚಿತ್ರಣ ನೀಡಿರುವವರಲ್ಲಿ ಪ್ರಮುಖನಾಗಿರುವನು. ಶ್ರವಣಬೆಳ್ಗೊಳದ ಒಂದು ಕಲ್ಲು ಚಪ್ಪಡಿಯ ಮೇಲೆ ಈ 'ಗ್ರಂಥ'ವನ್ನು ಕೊರೆದಿರವುದು ಸಾಕಷ್ಟು ಕುತೂಹಲಕರವಾಗಿದೆ. ಈ ಶಾಸನಕಾವ್ಯದಿಂದ ತಿಳಿದುಬರುವುದೇನೆಂದರೆ :

(ಅ) ಸಮಾಧಿಮರಣನಿರತನು ಲೋಕದ ನಿಜಸ್ವರೂಪವನ್ನು, ಅದರ ಕ್ಷಣ ಭಂಗುರತೆಯನ್ನು, ಮನವರಿಕೆಯಾಗುವವರೆಗೆ ಚಿಂತಿಸಬೇಕು; ಮತ್ತು

(ಆ) ಅರ್ಧನಿಮೀಲಿತ ನಯನಗಳಿಂದೊಡಗೂಡಿ, ಅಚಲ ಮನಸ್ಸಿನಿಂದ ಸಿದ್ಧರೂಪವನ್ನು ಪ್ರತಿಷ್ಠಾಪಿಸಿಕೊಂಡು, ಮೂಲಮಂತ್ರಗಳಿಂದ ಅದನ್ನು ಅಭಿಷೇಕಗೊಳಿಸುತ್ತಾ, ಆತ್ಮವನ್ನು ಕುರಿತು ಧ್ಯಾನಿಸಬೇಕು.[134]

---

131. ಶಿವಕೋಟ್ಯಾಚಾರ್ಯನಿಂದ (10ನೆಯ ಶತಮಾನ) ಮೊದಲ್ಗೊಂಡು ಬಾಹುಬಲಿ ಪಂಡಿತನವರೆಗಿನ (14ನೆಯ ಶತಮಾನ) ಹದಿನೆಂಟು ಕನ್ನಡ ಕವಿಗಳು ಸಮಾಧಿ ಮತ್ತು ಅದರ ರೂಪಾಂತರಗಳನ್ನು ಪ್ರಸ್ತಾಪಿಸುವರು.

132. ಉದಾಹರಣೆಗೆ, ನೋಡಿ, ಆಚಣ್ಣ *ವ.ಪು.*, XII, 84-ವ, ಪು. 199; ನಾಗಚಂದ್ರ, *ರಾ.ಚ.ಪು.*, IX, 98-ವ, ಪು, 296; ನಯಸೇನ, *ಧರ್ಮ*, V, ಪು. 255; ಮಹಾಬಲ, *ನೇ.ನಾ.ಪು.* IX, 31-ವಚನ, ಪು. 252 ಇತ್ಯಾದಿ.

133. ಚಾವುಂಡರಾಯ, *ತ್ರಿಷಷ್ಟಿ.*, 16 ಪು. 232-34.

134. ಎ ಕ II. 364. ಇದರ ಬಗ್ಗೆ ಹೆಚ್ಚಿನ ವಿವರಗಳು ಈ ಗ್ರಂಥದ ಮುಂದಿನ ಭಾಗವಲ್ಲಿ ದೊರೆಯುವುವು.


ಈ ಕೇಂದ್ರದ ಸುಮಾರು 16 ಶಾಸನಗಳು ಸಮಾಧಿಯನ್ನು ಆರಾಧನಾ, ಸಾಧನಾ, ವಿಧಿ, ಕ್ರಿಯೆ ಎಂದು ಪ್ರಸ್ತಾಪಿಸುವುವು.[135] ಈ ಮರಣವನ್ನು 'ನೋಂತು', 'ನೆರೆದು' ಅಥವಾ 'ಕೂಡಿ', 'ವೆರಸಿ', 'ಕೇಳುತ್ತ', 'ಪಡೆದು', 'ಸ್ವೀಕೃತ' ಮಾಡಿ, ಸಾಧಿಸಬಹುದೆಂದು ಹೇಳಲಾಗಿದೆ.[136] ಈ ಸುಖಾನುಭವವನ್ನು ಇಲ್ಲವೆ ಪ್ರಶಾಂತ ಸಮಾಧಿಯನ್ನು 'ಸುಚರಿತ ತಪಸ್ಸಮಾಧಿ' ಎಂದೂ ಗುರುತಿಸಲಾಗಿದೆ.[137]

ದಾಖಲಿತ ಸಮಾಧಿ ನಿದರ್ಶನಗಳು 7ನೆಯ ಶತಮಾನದಿಂದ 15ನೆಯ ಶತಮಾನದ ಪ್ರಥಮಾರ್ಧದವರೆಗೆ ಪಸರಿಸಿಕೊಂಡಿದ್ದರೂ 800-1000ದ ಕಾಲಾವಧಿಯಲ್ಲಿ ಅಪರೂಪದ ಒಂದು ನಿದರ್ಶನ ಮಾತ್ರ ದೊರಕುವುದು.[138] 12ನೆಯ ಶತಮಾನದ ಪ್ರಥಮಾರ್ಧವು ಅತ್ಯಧಿಕ ಸಂಖ್ಯೆಯಲ್ಲಿ ಈ ಮರಣಗಳನ್ನು ದಾಖಲಿಸಿರುವುದು.[139] ಶಾಸನ ಪಂಡಿತರು ನಿರ್ಧರಿಸಿದ ಕಾಲವನ್ನು ಒಪ್ಪುವುದಾದರೆ 7ನೆಯ ಶತಮಾನಕ್ಕೆ ಎರಡನೆಯ ಸ್ಥಾನ ದೊರಕುವುದು.[140] ಈ ಆಚರಣೆಯು 12ನೆಯ ಶತಮಾನದ ಮಧ್ಯದಿಂದ ಇಳಿಮುಖವಾಯಿತು. 13ನೆಯ ಶತಮಾನದಲ್ಲಿ ಕೇವಲ ಎರಡು ಮತ್ತು 14 ಮತ್ತು 15ನೆಯ ಶತಮಾನಗಳಲ್ಲಿ ಈ ವ್ರತದ ಒಂದೊಂದು ನಿದರ್ಶನ ಮಾತ್ರ ದೊರೆಯುವುವು.[141]

ಸಮಾಧಿಮರಣವು ಶ್ರಮಣರಲ್ಲಿ ಹೆಚ್ಚು ರೂಢಿಯಲ್ಲಿದ್ದಂತೆ ಕಂಡುಬರುವುದು. 7ನೆಯ ಶತಮಾನದ ನಾಲ್ವರು ಶ್ರಮಣರು ಸಮಾಧಿಯಿಂದ ಮಡಿದ ಸ್ಪಷ್ಟ ಆಧಾರಗಳಿವೆ. ಇದಾದನಂತರ ದೊರೆಯುವ ಮತ್ತೊಂದು ಉದಾಹರಣೆಯು 1129ರ ನಂತರದ್ದು. 13ನೆಯ ಶತಮಾನದಲ್ಲೊಂದು, 15ನೆಯ ಶತಮಾನದಲ್ಲಿ ಮತ್ತೊಂದು ನಿದರ್ಶನ ದೊರೆಯುವುವು.[142] ಇದಕ್ಕೆ ಭಿನ್ನವಾಗಿ, 7ನೆಯ ಶತಮಾನದಲ್ಲಿ ಈ ಮರಣವನ್ನಪ್ಪಿದ ಕಂತಿಯ ಒಂದೇ ಒಂದು

135. 1, 64, 123, 114, 77, ಮತ್ತು 158.
136. 64, 25, 108, 157, 176, 539 ಮತ್ತು 364.
137. ಅನುಕ್ರಮವಾಗಿ 353, 364 ಮತ್ತು 1.
138. 10ನೆಯ ಶತಮಾನದಲ್ಲಿ ಗಂಗ ಮಾರಸಿಂಹನ ಸಮಾಧಿಮರಣ (ಅದೇ, 64) ಹೊರತುಪಡಿಸಿ ಸುಮಾರು 800 ಮತ್ತು 1120 ರ ನಡುವೆ ಇನ್ನೊಂದು ಉದಾಹರಣೆ ಕಾಣಸಿಗದು.
139. 77, 157, 158, 176 ಮತ್ತು 484.
140. 1, 25, 108, 123 ಮತ್ತು 132. ಆದರೆ, ಅವುಗಳ ಕಾಲದ ಖಚಿತತೆಯ ಬಗ್ಗೆ ಸಂದೇಹವುಂಟು; ಏಕೆಂದರೆ, ಇಷ್ಟು ಜನಪ್ರಿಯವಾಗಿದ್ದ ವ್ರತಾಚರಣೆಯು ಸಮರ್ಪಕ ಕಾರಣಗಳಿಲ್ಲದೆ ಮುಂದಿನ ನಾಲ್ಕು ಶತಮಾನಗಳಲ್ಲಿ ಥಟ್ಟನೆ ಮಾಯವಾಗಲು ಸಾಧ್ಯವೆ, ಎಂಬ ಸಂದೇಹ ಬರುವುದು.
141. 15ನೆಯ ಶತಮಾನದ 539 ಮತ್ತು 356. 1432 ರ ನಂತರದ ಯಾವ ಶಾಸನದಲ್ಲೂ ಈ ಆಚರಣೆಗಳನ್ನು ದಾಖಲಿಸಿಲ್ಲ.
142. 7ನೆಯ ಶತಮಾನದ 1, 25, 108; 12ನೆಯ ಶತಮಾನದ 77; 13ನೆಯ ಶತಮಾನದ 539; 15ನೆಯ ಶತಮಾನದ 364.

ಉದಾಹರಣೆಯಿದೆ; ಇನ್ನೊಂದು ಉದಾಹರಣೆ 12ನೆಯ ಶತಮಾನದ್ದಾಗಿದೆ.[143] 10ನೆಯ ಶತಮಾನದಲ್ಲೊಂದು, 12ನೆಯ ಶತಮಾನದಲ್ಲಿ ಇನ್ನೊಂದು, 14ನೆಯ ಶತಮಾನದಲ್ಲಿ ಮತ್ತೊಂದು, ಹೀಗೆ ಮೂವರು ಶ್ರಾವಕರ ಮರಣದ ಉದಾಹರಣೆಗಳಿವೆ.[144] ಇಂಥ ಮರಣವನ್ನಪ್ಪಿದ ಎಲ್ಲ ಶ್ರಾವಕಿಯರು 12ನೆಯ ಶತಮಾನದವರಾಗಿರುವುರು.[145] ಅಂದರೆ ಶ್ರವಣಬೆಳ್ಗೊಳದ ಇತಿಹಾಸದಲ್ಲಿ ಒಟ್ಟು ಏಳು ಶ್ರಮಣರು, ಇಬ್ಬರು ಕಂತಿಯರು, ಮೂವರು ಶ್ರಾವಕರು, ಮೂವರು ಶ್ರಾವಕಿಯರು, ಸಮಾಧಿಮರಣ ಸ್ವೀಕಿರಿಸಿದರು ಎಂದರ್ಥ. ಇವರಲ್ಲಿ ಐವರು ಬಹುಶಃ 7ನೆಯ ಶತಮಾನದಲ್ಲಿ, ಒಬ್ಬರು 10ನೆಯ ಶತಮಾನದಲ್ಲಿ, ಆರು ಜನ 12ನೆಯ ಶತಮಾನದಲ್ಲಿ, ಇಬ್ಬರು 13ನೆಯ ಶತಮಾನದಲ್ಲಿ, ತಲಾ ಒಬ್ಬರು 14 ಮತ್ತು 15ನೆಯ ಶತಮಾನಗಳಲ್ಲಿ ಸಾವನ್ನು ಸ್ವೀಕರಿಸಿದರು. ಸನ್ಯಸನದ ನಂತರ ಸಮಾಧಿಯು ಶ್ರವಣಬೆಳ್ಗೊಳದಲ್ಲಿ ಹೆಚ್ಚು ಆಚರಣೆಯಲ್ಲಿದ್ದ ವ್ರತಕ್ರಮವಾಗಿತ್ತು.



24 ಮಾಚಿಕಬ್ಬೆಯ ಪಂಡಿತಮರಣ (176)

(ಊ) ***ಪಂಡಿತ ಮರಣ*** : *ಜ್ಞಾನಿಯ ಮರಣ* : ಪಂಡಿತ ಮರಣದಲ್ಲಿ ಮೂರು ಪ್ರಭೇದಗಳಿವೆ. (1) ಪಂಡಿತಪಂಡಿತ ಮರಣ ಅಥವಾ ಉತ್ತಮೋತ್ತಮ ಮರಣ; (2) ಪಂಡಿತ ಮರಣ ಅಥವಾ ಜ್ಞಾನಿಯ ಮರಣ, ಮತ್ತು (3) ಬಾಲಪಂಡಿತ ಮರಣ ಅಥವಾ ಅಜ್ಞಾನಿಯ ಮರಣ. ಪಂಡಿತಪಂಡಿತ ಮರಣವನ್ನು ತೀರ್ಥಂಕರರಂಥ ಸರ್ವಜ್ಞಾನಿಗಳು ಮಾತ್ರ ಸಾಧಿಸಬಲ್ಲವರಾಗಿದ್ದರು. ಜೀವನ್ಮುಕ್ತರಾದ ಇಂಥ ಮಹಾತ್ಮರು ನಿತ್ಯಮುಕ್ತರು. ಇದು ಸಾಧಾರಣ ಸಾಧಕರಿಗೆ ನಿಲುಕುವಂತಹದಲ್ಲವೆಂದು ಪರಿಗಣಿಸಲಾಗಿದೆ. ಬಹುಶಃ ಈ ಕಾರಣದಿಂದಾಗಿ ಪಂಡಿತಪಂಡಿತ ಮರಣದ ಐತಿಹಾಸಿಕ ನಿದರ್ಶನಗಳಾವೂ ದೊರೆಯುವುದಿಲ್ಲ. ಆದರೆ, ಪಂಡಿತ ಮರಣದ ಉಲ್ಲೇಖಗಳಿಗೆ ಇಂತಹ ಕೊರತೆಯಿಲ್ಲ.

ಜಿನಾಗಮಗಳು ನಾಲ್ಕು ಬಗೆಯ ಪಂಡಿತರನ್ನು ಮತ್ತು ಮೂರು ಬಗೆಯ ಪಂಡಿತ ಮರಣಗಳನ್ನು ಗುರುತಿಸುತ್ತವೆ. ವ್ಯವಹಾರ, ಸಮ್ಯಕ್ತ್ವ, ಜ್ಞಾನ ಮತ್ತು ಚಾರಿತ್ರ ಮಾರ್ಗಗಳಲ್ಲಿ

143. ಸು. 7ನೆಯ ಶತಮಾನದ 132 ಮತ್ತು 12ನೆಯ ಶತಮಾನದ 484.

144. 10ನೆಯ ಶತಮಾನದ 64, 12ನೆಯ ಶತಮಾನದ 175, 14ನೆಯ ಶತಮಾನದ 353.

145. 157, 158 ಮತ್ತು 176.

ಅವರ ಸಿದ್ಧಿಗಳ ಆಧಾರದ ಮೇಲೆ ಪಂಡಿತರನ್ನು ಗುರುತಿಸಲಾಗಿದೆ. ಮೂರು ಬಗೆಯ ಮರಣಗಳೆಂದರೆ - ಭಕ್ತಪ್ರತ್ಯಾಖ್ಯಾನ, ಇಂಗಿಣೀ ಮತ್ತು ಪ್ರಾಯೋಪಗಮಣ (ಪೌಗ್ಗಮಣ). ಐಹಿಕ ಜೀವನವನ್ನು ತ್ಯಾಗಮಾಡಿ ಪರಿಪೂರ್ಣ ಚಾರಿತ್ರ ಸಾಧಿಸಿದವನ ಮರಣವು ಪಂಡಿತ ಮರಣವೆಂದು *ಆಚಾರಾಂಗಸೂತ್ರ* ವ್ಯಾಖ್ಯಾನಿಸುವುದು.[146]

ಮೇಲ್ಕಾಣಿಸಿದ ಮೂರು ಪ್ರಬೇಧಗಳಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಿಕೊಂಡು ಸಾಧಕನು ಪಂಡಿತಮರಣವನ್ನು ಆಹ್ವಾನಿಸಬಹುದಾಗಿತ್ತು. ಭಕ್ತಪ್ರತ್ಯಾಖ್ಯಾನವು ಏನನ್ನು ಸಂಗ್ರಹಿಸಿಕೊಳ್ಳಬೇಕು (*ಭುಜ್ಜತೆ-ಭುಕ್ತ*) ಮತ್ತು ಏನನ್ನು ತ್ಯಾಗಮಾಡಬೇಕು (*ಪ್ರತ್ಯಾಖ್ಯಾನ* - ಪೈಣ್ಣ) ಎಂಬುದಕ್ಕೆ ಪ್ರಾಮುಖ್ಯತೆ ನೀಡುತ್ತದೆ. ಆಹಾರ ಮತ್ತು ನೀರಿನ ಸಂಪೂರ್ಣ ವರ್ಜನೆ ಪಂಡಿತಮರಣದ ಎಲ್ಲ ಪ್ರಕಾರಗಳಿಗೆ ಅನ್ವಯಿಸುವುದಾದರೂ ಭಕ್ತಪ್ರತ್ಯಾಖ್ಯಾನ ದೊಂದಿಗೆ ಅದು ವಿಶೇಷವಾಗಿ ಸಂಬಂಧಿತವಾಗಿದೆ. ಏಕೆಂದರೆ, ಇಲ್ಲಿ ನಿರಸನಕ್ಕೆ ಅತಿ ಮಹತ್ವದ ಸ್ಥಾನ ಕೊಡಲಾಗಿದೆ.

ಇಂಗಿಣೀ ಮರಣ ಇದಕ್ಕಿಂತ ಒಂದು ಮೆಟ್ಟಲು ಎತ್ತರವಾದುದು. ಇಲ್ಲಿ ನಿರಸನವನ್ನು ಮೀರಿದ ಆತ್ಮಸಾಕ್ಷಾತ್ಕಾರ (*ಇಂಗಿತ*) ಕ್ಕೆ ಪ್ರಾಧಾನ್ಯತೆ ದೊರೆತಿದೆ. ಹೀಗಾಗಿ, *ಇಂಗಿತಮ್ ಆತ್ಮಾ ನೋ,* ಎಂಬ ಉಕ್ತಿ.

ಪಾದೋಪಗಮಣ, ಪೌಗ್ಗಮಣ (ಪಾದ = ಪಾದ; ಗೌ = ಚಲಿಸುವ) ಎಂತಲೂ ಕರೆಯಲಾಗುವ ಪ್ರಾಯೋಪಗಮಣವು ಇಂಗಿಣೀ ಮರಣಕ್ಕಿಂತ ಒಂದು ಮೆಟ್ಟಲು ಎತ್ತರವಾದುದು. ಈ ಮೂರು ಬಗೆಯ ಮರಣಗಳಲ್ಲಿರುವ ವ್ಯತ್ಯಾಸಗಳನ್ನು ಕಾಯಕ್ಲೇಶದ ತೀವ್ರತೆ, ವಿಧಾನ ಮತ್ತು ಕಾಲಾವದಿಯನ್ನಾಧರಿಸಿ ಗುರುತಿಸಲಾಗಿದೆ. ಅವು ಇಂತಿವೆ :

೧. ಭಕ್ತಪ್ರತ್ಯಾಖ್ಯಾನದಲ್ಲಿ ಸಾಧಕನು ನಿಧಾನವಾದ ಮತ್ತು ಹಳತಾದ ಕಾಯಕ್ಲೇಶದ ವಿಧಾನವನ್ನು ಆಯ್ದುಕೊಳ್ಳುವನು. ಅವನು ಆಹಾರವನ್ನು ತ್ಯಜಿಸುವನು; ಆದರೆ, ಅವಶ್ಯವೆನಿಸಿದಾಗ ಜಲಪಾನ ಮಾಡುವನು. ಅವನು ಯಾವುದೇ ಬಗೆಯ ಹಿತಕರವಾದ ಭಂಗಿಯನ್ನು ಆಯ್ದುಕೊಳ್ಳುವನು; ಅಲ್ಲದೆ, ತನ್ನ ಇಚ್ಛೆಗನುಗುಣವಾಗಿ ಅದನ್ನು ಬದಲಿಸುವನು. ಸ್ವಸಹಾಯ ಮಾಡಿಕೊಳ್ಳಲು ಮತ್ತು ಅನ್ಯರಿಂದ ಸಹಾಯ ಪಡೆಯಲು ಅವನಿಗೆ ಅನುಮತಿಯುಂಟು.

೨. ಇಂಗಿಣೀಯಲ್ಲಿ ಸಾಧಕನು ಎಲ್ಲ ಬಗೆಯ ಆಹಾರ ಮತ್ತು ಸ್ಥಾನ(ಭಂಗಿ) ವನ್ನು ತ್ಯಜಿಸುವನು. ಬೇರೆಯವರ ಸೇವೆ-ಸಹಾಯಗಳನ್ನೂ ನಿರಾಕರಿಸುವನು. ಸ್ವಾವಲಂಬಿಯಾಗಿ

---

146. *ಆಚಾರಾಂಗ ಸೂತ್ರ,* ಪು. 75 ದಿಂದ.

ಸ್ವಸಹಾಯ ಮಾಡಿಕೊಳ್ಳಲು ಅವನಿಗೆ ಅನುವುಂಟು. ಕ್ವಚಿತ್ತಾಗಿ ತನ್ನ ದೇಹವನ್ನು ಜರುಗಿಸುವ ಸ್ವಾತಂತ್ರ್ಯವನ್ನು ಅವನು ಪಡೆದಿದ್ದರೂ ಈ ಕಾರ್ಯ ಅವನ ಸಂಸ್ತರಕ್ಕೇ ಸೀಮಿತವಾಗಬೇಕು.

೩. ಪ್ರಾಯೋಪಗಮಣದಲ್ಲಿ ಉಗ್ರವಾಗಿ ದೇಹವನ್ನು ದಂಡಿಸಿ, ಜೀವವನ್ನು ಬೇಗ ಬಿಡುಗಡೆಗೊಳಿಸುವ ಗುರಿಯನ್ನು ಸಾಧಕನು ಹೊಂದಿರುವನು. ಅವನು ಆಹಾರ ನೀರನ್ನಲ್ಲದೆ ಅನ್ಯರಿಂದಲೂ ತನ್ನಿಂದಲೂ ಸೇವೆಗಳನ್ನು ನಿರಾಕರಿಸಿಕೊಳ್ಳಲೇಬೇಕು. ಅಷ್ಟೇ ಅಲ್ಲ, ಭಂಗಿಯನ್ನು (ಸ್ಥಾನ) ಬದಲಿಸುವ ಸ್ವಾತಂತ್ರ್ಯವೂ ಅವನಿಗಿಲ್ಲ. ಈ ಅವಸ್ಥೆಯಲ್ಲಿ, ತನ್ನ ಆಸನ ಮತ್ತು ಭಂಗಿಗೆ ಅಂಟಿಕೊಂಡು, ತನ್ನ ಭೂತ ಶಕ್ತಿಗಳು ಮಾಡುವ ಎಲ್ಲ ಬಗೆಯ ದಾಳಿಗಳನ್ನು ಕೊನೆಯವರೆಗೂ ಅವನು ಸಹಿಸುವನು.

ಐತಿಹಾಸಿಕ ನಿದರ್ಶನಗಳು : ಶ್ರವಣಬೆಳ್ಗೊಳದ ಶಾಸನಗಳಲ್ಲಿ ಈ ಎಲ್ಲ ವಿಧಿ-ವಿಧಾನಗಳ ವಿವರಗಳು ದೊರೆಯುವುದಿಲ್ಲ. ಆದರೆ ಆರಂಭಕಾಲದ ಶ್ರಮಣರಲ್ಲೊಬ್ಬನಾದ ಬಲದೇವಾಚಾರ್ಯನು ಪೌಗ್ಗಮಣ ಮರಣವನ್ನು ಆಹ್ವಾನಿಸಿದನೆಂದು ತಿಳಿದುಬರುವದು.[147] ಮಾಚಿಕಬ್ಬೆಯು ಪಂಡಿತಮರಣವಿಧಾನವನ್ನು ಕೈಕೊಂಡ ಏಕೈಕ ನಿದರ್ಶನ ಒದಗಿಸುವಳು. ಶ್ರವಣಬೆಳ್ಗೊಳದ ದೇಹದಂಡನೆಕಾರರು ಪಂಡಿತಮರಣದೊಳಗಿನ ಸೂಕ್ಷ್ಮ ವ್ಯತ್ಯಾಸಗಳಿಗೆ ಹೆಚ್ಚಿನ ಮಹತ್ವ ನೀಡಲಿಲ್ಲವೆಂಬುದನ್ನು ಇಲ್ಲಿಯ ಶಾಸನಗಳು ಸ್ಪಷ್ಟಪಡಿಸುವುವು.[148]

ಯಾವ ಶಾಸನವೂ ಬಾಲಪಂಡಿತ ಮರಣವನ್ನು ಉಲ್ಲೇಖಿಸುವುದಿಲ್ಲ. *ಸ್ಥಾನಾಂಗದ* ಪ್ರಕಾರ, ಇದನ್ನು ಆಂಶಿಕವಾಗಿ ಸ್ವಯಂ ನಿಗ್ರಹದಿಂದ (*ಸಮ್ಯತ ಸಮ್ಯತ*) ಸಾಧಿಸಬಹುದು. ಇದಕ್ಕೆ ವೈದೃಶ್ಯವಾಗಿ ಪಂಡಿತಮರಣದಲ್ಲಿ ಸಂಪೂರ್ಣ ನಿಗ್ರಹವಿರುವುದು. ಬಾಲಪಂಡಿತನು ಆಧ್ಯಾತ್ಮಿಕ ಮನೀಷೆಗಳನ್ನೇನೊ ಹೊಂದಿರುವನು; ಆದರೆ, ಬಾಹ್ಯ ಕಾರಣಗಳಿಂದಾಗಿ ಅವನು ಎಲ್ಲ ವಿಧಿ ನಿಯಮಗಳನ್ನು ಪಾಲಿಸುವುದಿಲ್ಲ, ದೀಕ್ಷೆ ಪಡೆಯುವುದಿಲ್ಲ, ವ್ರತವನ್ನಾಚರಿಸುವುದಿಲ್ಲ. ಸ್ವಯಂ ಮಂತ್ರಾಲೋಚನೆ ಮಾಡಿಕೊಳ್ಳುವ ಸಾಮರ್ಥ್ಯವುಳ್ಳ ಅವನು ಕೊನೆಯ ಗಳಿಗೆಯಲ್ಲಿ ಒಂದು ಸ್ಥಿರ ಭಂಗಿಯನ್ನು ಅಂಗೀಕರಿಸಿ ಅಂತ್ಯವನ್ನು ಸಾಧಿಸಿಕೊಳ್ಳುವನು. ದೀಕ್ಷೆ ಪಡೆಯದೆ ಪುಣ್ಯಮರಣ ಹೊಂದಿದ ಹಲವಾರು ಮುನಿಗಳ ಮರಣಗಳನ್ನು ಶ್ರವಣಬೆಳ್ಗೊಳದಲ್ಲಿ ಸ್ಮಾರಕಗೊಳಿಸಲಾಗಿದೆ. ಇವುಗಳನ್ನೆಲ್ಲ ಬಾಲಪಂಡಿತ ಮರಣಗಳೆಂದೇ ಗುರುತಿಸಬಹುದು.[149]

ನಿಸಿಧಿ : *ಉಚಿತ ಭಂಗಿ* ಮತ್ತು *ಮರಣ* : ಈ ಪದವು ದೇಹದಂಡನಕಾರರು ಆಯ್ದುಕೊಂಡ ಸ್ಥಳ ಮತ್ತು ಭಂಗಿ ಎರಡನ್ನೂ ಸೂಚಿಸುವುದು.[150] *ಆಚಾರಾಂಗವು ನಿಸೀಹವು*

147. ಎ ಕ II, 92.
148. 176.
149. ನೋಡಿ, ಅಧ್ಯಾಯ ಆರು.
150. ಎಚ್. ಎಂ. ಜಾನ್ಸನ್, ಉಪರೋಕ್ತ, ಸಂಪುಟ VI, 19, ಟಿಪ್ಪಣಿ 41.

ಮನನಕ್ಕಾಗಿ ಆಯ್ದುಕೊಂಡ ಸ್ವಚ್ಛ ಸ್ಥಳ ಎಂದು ಗುರುತಿಸುವುದು.[151] ದೇಹದಂಡನಕಾರ ಸಾಧಿಸಬೇಕಾದ ಇಪ್ಪತ್ತೆರಡು ಪರೀಷಹಗಳಲ್ಲಿ (ಮೋಕ್ಷ ಸಾಧನೆಯ ಪಥದಲ್ಲಿ ಎದುರಾಗುವ ಸಂಕಷ್ಟಗಳು) ಹತ್ತನೆಯದು *ನಿಸೀಹಿಯ* (*ನೈಷೇಧಿಕಾ*). ಇದರ ಅರ್ಥ 'ಮನನ ಸ್ಥಳ' ಎಂದು. ಇದು ಸಾಮಾನ್ಯವಾಗಿ ಗ್ರಾಮದಿಂದ ದೂರವಿರುವ,[152] ಶವವನ್ನು ವಿಸರ್ಜಿಸುವ, ಸ್ಮಶಾನ ಪ್ರದೇಶವೆಂದು *ಭಗವತೀ ಆರಾಧನಾ* ಗುರುತಿಸುವುದು.[153]

ಮಧ್ಯಯುಗದ ಕನ್ನಡ ಸಾಹಿತ್ಯದಲ್ಲಿ ಈ ಪದದ ಪಸ್ತಾಪವು ಹಲವೆಡೆ ಬರುವುದು. ಧರ್ಮಿಷ್ಠರು ಭೇಟಿಯಿತ್ತು ಗೌರವ ಸಲ್ಲಿಸುತ್ತಿದ್ದ ಕೇಂದ್ರಗಳನ್ನು ನಿಸಿಧಿಗಳೆಂದು ಗುರುತಿಸಲಾಗಿದೆ.[154] ಶ್ರಮಣರು ದೇವಾಲಯ ಪ್ರವೇಶಿಸುವಾಗ ನಿಸಿಧಿಸ್ಥಿತಿ (ಶುದ್ಧತೆ, ತಪ ಮತ್ತು ಧ್ಯಾನಸ್ಥಿತಿ) ಯಲ್ಲಿರುತ್ತಿದ್ದರೆಂದು ವರ್ಣಿಸಲಾಗಿದೆ.[155] ಇಂಗಿತಮರಣದ ಸಾಧಕನು ತನ್ನ ಆಸನವನ್ನು ತೊರೆಯುವಾಗ, ಹೊರಬರುವಾಗ, *ಆಸಿಯ* (*ಆಸಿಕಾ*) ಎಂದು ಮತ್ತು ಆಸನಗ್ರಹಣ ಮಾಡುವಾಗ *ಣಿಷಿಧಿಯ* (*ನಿಸಿಧಿಕಾ*) ಎಂದು ನುಡಿಯಬೇಕೆಂದಿರುವುದು.[156] ದೇವಾಲಯವನ್ನು ಪ್ರವೇಶಿಸುವಾಗ 'ನಿಸಿಧಿ' ಪದವನ್ನು ಪುನಃ ಪುನಃ ಉಚ್ಚರಿಸುವುದನ್ನು ಕವಿ ಬಾಹುಬಲಿಯು ಪ್ರಸ್ತಾಪಿಸುವನು.[157] ದೇವಾಲಯ ಪ್ರವೇಶಿಸುವ ಮುನ್ನ ಮೂರು ಬಾರಿ *ನೈಸೇಧಕಿ* ಪದವನ್ನು ಆವಂತಿಯ ಗಣಿಕೆಯರು ಉಚ್ಚರಿಸಿದುದನ್ನು *ತ್ರಿಷಷ್ಠಿ ಶಲಾಕ ಪುರುಷ ಚರಿತೆ* ತಿಳಿಸುವುದು.[158]

ಸಮಾಧಿ, ಸಲ್ಲೇಖನಾ, ಸನ್ಯನಸ ಮುಂತಾದ ಪದಗಳಿಗಿಂತ ಭಿನ್ನವಾದ ಅರ್ಥವನ್ನು 'ನಿಸಿಧಿ' ಹೊಂದಿರುವುದು ಸ್ಪಷ್ಟ. ದೇಹದಂಡನೆಗೆ ಆಯ್ದ ಸ್ಥಳ ಅಥವಾ ಭಂಗಿ, ಮಾನಸಿಕ ಸ್ಥಿತಿ, ಶವವನ್ನು ವಿಸರ್ಜಿಸುವ ಸ್ಥಳ ಮುಂತಾದವನ್ನೆಲ್ಲ ಇದು ಸೂಚಿಸುವುದು. ಆದರೆ ಅದನ್ನು ಸಾಮಾನ್ಯವಾಗಿ ವ್ರತಾಚರಣೆಯ ಮೂಲಕ ಸಾವನ್ನಪ್ಪಿದವರ ಗೌರವಾರ್ಥ ನಿರ್ಮಿಸಿದ ಸ್ಮಾರಕಗಳಿಗೆ ಅನ್ವಯಿಸಲಾಗಿರುವುದನ್ನು ಐತಿಹಾಸಿಕ ಪ್ರಮಾಣಗಳು ಸಾದೃಶ್ಯಪಡಿಸುವುವು.

ಐತಿಹಾಸಿಕ ನಿದರ್ಶನಗಳು : ಶ್ರವಣಬೆಳ್ಗೊಳದಲ್ಲಿಯ ಸುಮಾರು ಮೂವತ್ತೈದು ಶಾಸನಗಳು ನಿಸಿಧಿಯನ್ನು ಪ್ರಸ್ತಾಪಿಸುತ್ತ ಈ ಪದವನ್ನು ನಾನಾ ರೀತಿಗಳಲ್ಲಿ ಕಾಗುಣಿಸಿವೆ :

---

151. *ಆಚಾರಾಂಗ ಸೂತ್ರ* II, 9, ಪು. 179, ಟಿಪ್ಪಣಿ 1; ಹಾಗೂ ನೋಡಿ, ಪು. 120.
152. *ಭ.ಆ.*, 1972-75, 1985 ಮತ್ತು 1995.
153. ಅದೇ, 1974.
154. ಶಿವಕೋಟ್ಯಾಚಾರ್ಯ, *ವಡ್ಡಾ.*, ಪು. 9. 90.
155. ಚಾವುಂಡರಾಯ, *ತ್ರಿಷಷ್ಠಿ.*, ಪು. 400; ನಯಸೇನ, *ಧರ್ಮಾ.*, 56 ಮತ್ತು 205.
156. *ಭ.ಆ.* 2050
157. ಬಾಹುಬಲಿ, *ಧ.ನಾ.ಪು.*, V, 47 - ವಚನ, ಪು, 93.
158. ಜಾನ್ಸನ್, ಹೆಲೆನ್., ಉಪರೋಕ್ತ VI, ಪು. 272, ಷೂಬ್ರಿಂಗ್, ಡಬ್ಲ್ಯು, ಉಪರೋಕ್ತ, ಪು. 269.

(ಅ) 'ನಿಸಿಧಿ' ಮತ್ತು ಅದರ ಲಘು ರೂಪಾಂತರಗಳಾದ 'ನಿಸಿಧಿಗೆ' ಮತ್ತು 'ನಿಸಿಧಿ' ಬಹು ಸಾಮಾನ್ಯವಾಗಿ ಬರುವ ಪ್ರಾಯೋಗಗಳಾಗಿವೆ. ಹನ್ನೆರಡಕ್ಕೂ ಹೆಚ್ಚಿನ ಶಾಸನಗಳಲ್ಲಿ ಇವುಗಳ ಉಲ್ಲೇಖ ದೊರೆಯುವುವು.[159] ಕೆಲವು ಸಂದರ್ಭಗಳಲ್ಲಿ ಮೂರನೆಯ ಉಚ್ಚಾರಾಂಶವನ್ನು ಅಲ್ಪಪ್ರಾಣಿಸಿ 'ನಿಸಿದಿ'[160] ಎಂದು, ಅಥವಾ ದ್ವಿತ್ತಿಸಿ ನಿಸಿದ್ದಿ'[161] ಎಂದು ಕರೆಯಲಾಗಿದೆ. ಅಥವಾ ಒಮ್ಮೊಮ್ಮೆ 'ನಿಸಿದ್ಧಿ' ಮತ್ತು 'ನಿಸಿದ್ಧಿಕಾ'ಗಳಂತೆ ಅದೇ ವ್ಯಂಜನಕ್ಕೆ ಒತ್ತುಕೊಟ್ಟು ಮಹಾಪ್ರಾಣಿಸಲಾಗಿದೆ.

(ಆ) 'ನಿಸಿಧಿ(ಗೆ)' ಮತ್ತು ಅದರ ರೂಪಾಂತರಗಳಾದ 'ನಿಸಿಧಿ' ಮತ್ತು 'ನಿಸಿಧಿಗೆ' ಎಂಬುದು ಎರಡನೆಯ ಬಗೆಯ ಕಾಗುಣಿತಗಳಾಗಿವೆ.[162] ಇಲ್ಲಿಯ ಪ್ರಮುಖ ವ್ಯತ್ಯಾಸವೆಂದರೆ 'ಸ'ದ ತತ್ಸಮವಾದ 'ಶ' ಲಂಬಿತ ಅನುನಾಸಿಕ ಮತ್ತು ಮೂರನೆಯ ಅಕ್ಷರವನ್ನು ಆಗಾಗ ಮಹಾಪ್ರಾಣಿಸಿರುವುದು.[163]

(ಇ) 'ನಿಸ್ತಿಗೆ'ಯು 'ನಿಸಿಧಿ'ಯ ನುಡಿ ರೂಪವಾಗಿದ್ದು ಶಾಸನಗಳಲ್ಲಿ ಬಹಳ ಕ್ವಚಿತ್ತಾಗಿ ಕಾಣಸಿಗುವುದು.[164]

(ಈ) 'ನಿಷದ್ಯಾ' ಅಥ'ವಾ ಅದರ ರೂಪಾಂತರಗಳಾದ 'ನಿಷದ್ಯಾಯಾಃ' 'ನಿಷಿಧ್ಯಾಲಯ'[165] ಮುಂತಾವುಗಳಲ್ಲಿ 'ದ' ಅಲ್ಪಪ್ರಾಣವನ್ನು ಕನ್ನಡ ವರ್ಣಮಾಲೆಯ ಐವತ್ತೆರಡನೆಯ ಅಕ್ಷರವಾದ 'ಸ'ವನ್ನೂ ಉಳಿಸಿಕೊಂಡಿವೆ. ಏಕೆಂದರೆ, ಅವು ಸಾಮಾನ್ಯವಾಗಿ ಸಂಸ್ಕೃತ ಪಾಠಗಳಲ್ಲಿ ಬರುತ್ತವೆ. ಎರಡನೆಯ ಅಕ್ಷರವನ್ನು ಇನ್ನೂ ಪರಿವರ್ತಿಸಿ 'ನಿಷಿಧ್ಯಾಲಯ' ಮತ್ತು 'ನಿಷಿಧಿಗೆ' ಎಂತಲೂ ಕೆಲವೊಮ್ಮೆ ಬಳಸಲಾಗಿದೆ.[166]

ಈ ನಾಲ್ಕು ಸ್ವರೂಪಗಳನ್ನು ಮತ್ತು ಅವುಗಳ ಲಘು ರೂಪಾಂತರಗಳನ್ನು ಬಿಟ್ಟು ಶ್ರವಣಬೆಳ್ಗೊಳದ ಶಾಸನಗಳು ಪ್ರಾಕೃತ ಪದ 'ನಿಸಿಹೀಯ'ವನ್ನಾಗಲಿ ಸಂಸ್ಕೃತ ಪದಗಳಾದ

---

159. ನಿಸಿಧಿ(ಗೆ) ಪದಕ್ಕೆ ನೋಡಿ, ಎ ಕ II, 17, 22, 95, 104, 118, 119, 129, 156, 208, 253, 358, 532, ಮತ್ತು ನಿಸಿಧಿ ಪದಕ್ಕೆ ನೋಡಿ 379.
160. ಕನಿಷ್ಠ ಮೂರು ಇಂತಹ ನಿದರ್ಶನಗಳಿವೆ. ನೋಡಿ-32, 68 ಮತ್ತು 213.
161. 379.
162. ನಿಸಿಧಿ(ಗೆ) ಪದಕ್ಕೆ 81, 135, 136, 155, 175, 212, 378 ನೋಡಿ; ನಿಶೀಧಿಗೆ 484 ನೋಡಿ; ನಿಶೀಧಿಕಾಕ್ಕೆ 342 ನೋಡಿ.
163. 71 ಮತ್ತು 212.
164. 72.
165. ಅನುಕ್ರಮವಾಗಿ 364, 70 ಮತ್ತು 73.
166. ನಿಷಿಧ್ಯಾಲಯಕ್ಕೆ 73, ನಿಷಿಧಿಗೆ 131 ಮತ್ತು 157, ನಿಷಿದ್ದಿಗೆ 457 ನೋಡಿ.

'ನೈಷೇಧಿಕ' ಅಥವಾ 'ನೈಷೇಧಕಿ'ಯನ್ನಾಗಲಿ ಬಳಸಿಲ್ಲ.[167] ಇವುಗಳಲ್ಲಾವುದನ್ನೂ ವ್ರತಾಚರಣಯೊಂದಿಗೆ ಗುರುತಿಸಿಲ್ಲ. ಹಲವು ನಿದರ್ಶನಗಳಲ್ಲಿ ಅದು ದೇಹದಂಡನೆಯ ಮರಣಕ್ಕೆ ಪೂರ್ವಗಾಮಿಯಾಗಿಲ್ಲ. ನಿಸಿಧಿಗಳೆಂದು ಸ್ಪಷ್ಟವಾಗಿ ಗುರುತಿಸಿದ ಶಾಸನಗಳು ಮೂರು ಗುಂಪುಗಳಲ್ಲಿ ಕಾಣಿಸಿಕೊಂಡಿದ್ದು, ಅವು ಇಂತಿವೆ:

(i) ಸನ್ಯಸನ, ಸಮಾಧಿ, ಸಲ್ಲೇಖನಾ ಮುಂತಾದ (ಅಥವಾ ಇವುಗಳಲ್ಲಿ ಒಂದಕ್ಕಿಂತ ಹೆಚ್ಚಿನವನ್ನು ಸಂಯೋಜಿಸಿ) ವ್ರತಪಥಗಳನ್ನು ಅನುಸರಿಸಿದವರ ಸ್ಮರಣಾರ್ಥ ನಿಸಿಧಿಗಳನ್ನು ನಿರ್ಮಿಸಲಾಗುತ್ತಿತ್ತು. ಶ್ರವಣಬೆಳ್ಗೊಳದಲ್ಲಿ ನಿರ್ಮಿಸಿದ ಇಂಥ ಹತ್ತಾರು ಸ್ಮಾರಕಗಳು (ನಿಸಿಧಿಗಳು)[168] ಪಂಡಿತಮರಣಕ್ಕೆ ಸೇರಿದವುಗಳಾಗಿರಬಹುದು.

(ii) ಆಂಶಿಕವಾಗಿ ವ್ರತಗಳನ್ನಾಚರಿಸಿ ಮಡಿದರೂ, ವಿಧಿಬದ್ಧವಾಗಿ ದೀಕ್ಷೆ, ದೇಹದಂಡನೆ ಮತ್ತು ಧ್ಯಾನ ಪಾಲಿಸಿದವರ ಇಲ್ಲವೆ ಪಾಲಿಸಲಾಗದವರ ಸ್ಮರಣಾರ್ಥವೂ ನಿಸಿಧಿಗಳನ್ನು ನಿರ್ಮಿಸಲಾಗುತ್ತಿತ್ತು. ''ಎಲ್ಲರೊಂದಿಗೆ ಸಂಬಂಧ ಕಳಚಿಕೊಂಡ '' ಮೇಲೆ ಒಬ್ಬ ಸಾವನ್ನಪ್ಪಿದನು.[169] ಇನ್ನೊಬ್ಬನು ''ಆತ್ಮವನ್ನು ಕುರಿತು ಧ್ಯಾನಿಸುತ್ತ ಪಲ್ಯಂಕಾಸನದಲ್ಲಿ ಕುಳಿತು'' ಮಡಿದ.[170] ಮಗುದೊಬ್ಬ ''ತನ್ನ ಸಂಬಂಧಿಗಳಿಂದ ಬಿಡಿಸಿಕೊಂಡು ಸಮಚಿತ್ತತೆಯನ್ನು ಕಾಯ್ದುಕೊಂಡು'' ಮರಣವನ್ನು ಸ್ವಾಗತಿಸಿದನು.[171]

(iii) ಪರಿಪೂರ್ಣವಾಗಿಯಾಗಲಿ, ಆಂಶಿಕವಾಗಿಯಾಗಲಿ, ವ್ರತಗಳನ್ನು ಆಚರಿಸದಿದ್ದರೂ, ಅಂಥವರು ತಮ್ಮ ಸಾಮಾಜಿಕ ಅಥವಾ ಮಠೀಯ ಅಂತಸ್ತಿನಿಂದಾಗಿ, (ಅಥವಾ ಧರ್ಮಪೋಷಣೆಗೆ ಸಲ್ಲಿಸಿದ ಸೇವೆಯಿಂದಾಗಿ), ಗೌರವಯೋಗ್ಯರೆಂದು ಪರಿಗಣಿತರಾಗುತ್ತಿದ್ದರು. ಅವರ ಸ್ಮರಣಾರ್ಥ ನಿಸಿಧಿಗಳನ್ನು ನಿರ್ಮಿಸಲಾಗುತ್ತಿತ್ತು ಎಂಬುದನ್ನು

---

167. ಹೆಲೆನ್ ಜಾನ್ಸನ್ ಸಂಪಾದಿಸಿರುವ ಗ್ರಂಥದಲ್ಲಿ 'ನಿಸೇಧಿಕಾ' ಎಂಬ ಪದದ ಪ್ರಸ್ತಾಪವಿದೆ. ಆದರೆ ಅದನ್ನು ''ಸಾದಾ ಬೇಯಿಸಿದ ಅನ್ನ ಮತ್ತು ರೊಟ್ಟಿಯಂಥ ಒಣ ಊಟ'' ಎಂದು ಅರ್ಥೈಸಲಾಗಿದೆ. ಆದರೆ, 272ನೆಯ ಪುಟದಲ್ಲಿ ಬರುವ 'ನೈಷೇಧಕಿ' ಮತ್ತು 19ನೆಯ ಪುಟದಲ್ಲಿ (ಟಿಪ್ಪಣಿ 19) ಬರುವ 'ನೈಷೇಧಿಕೀ' ಪದಗಳನ್ನು ದೇಹದಂಡನಕಾರನ ಸ್ಥಳ ಹಾಗೂ ಭಂಗಿಯೆಂದು ಅನುಕ್ರಮವಾಗಿ ಅರ್ಥೈಸಲಾಗಿದೆ.

168. ಸುಮಾರು ಹನ್ನೆರಡು ಮರಣಾರ್ಥಿಗಳಲ್ಲಿ ಐವರು ಸನ್ಯಸನವನ್ನು (ಎ ಕ. II, 17, 158, 174, 360, 532), ಇಬ್ಬರು ಸಮಾಧಿಯನ್ನು (175, 484), ಮತ್ತೊಬ್ಬನು ಸಲ್ಲೇಖನಾ (136) ವನ್ನು ಸ್ವೀಕರಿಸಿದರು. ಅಲ್ಲದೆ, ಸಂಯುಕ್ತ ವ್ರತಾಚರಣೆಯನ್ನು ಕೈಕೊಂಡ ಕನಿಷ್ಠ ನಾಲ್ಕು ಉದಾಹರಣೆಗಳಿವೆ: ಸಲ್ಲೇಖನಾ-ಸಮಾಧಿ-ಸನ್ಯಸನ (81), ಸನ್ಯಸನ-ಸಮಾಧಿ (157-158), ಸಲ್ಲೇಖನಾ-ಸಮಾಧಿ (364) ಇವಕ್ಕೆ ಉದಾಹರಣೆ.

169. 155 : '*ಸರ್ವಸಂಗ ಪರಿತ್ಯಾಗ ಪೂರ್ವ್ವಕ*'.

170. 156 : '*ಪಲ್ಯಂಕ ಆಸನದೊಳಿರ್ದ್ದು ಆತ್ಮ ಭಾವನೆಯಿಂ ಭಾವಿಸುತ್ತಮ್*'.

171. 208 : '*ತನ್ನ ಬಂಧುಗಳಂ ಬಿಡಿಸಿ ಸಮಚಿತ್ತದೋಳ್*'.

ಸಾಬೀತುಪಡಿಸಲು ಶ್ರವಣಬೆಳ್ಗೊಳದಲ್ಲಿ ಕನಿಷ್ಠ ಇಪ್ಪತ್ತು ಉದಾಹರಣೆಗಳು ದೊರೆಯುವುವು.[172] ದೇಹದಂಡನೆ ಮತ್ತು ಧ್ಯಾನದ ವಿಧಿಯನ್ನು ಬಹುಮಟ್ಟಿಗೆ ಈ ಶಾಸನಗಳಲ್ಲಿ ಪ್ರಸ್ತಾಪಿಸಲಾಗಿಲ್ಲ. ಇವರ ವ್ರತಾಚರಣೆಯು ವಾಸ್ತವಕ್ಕಿಂತ ಸಾಂಕೇತಿಕವಾಗಿದ್ದುದರಿಂದ ಅವರನ್ನು ಬಾಲಪಂಡಿತರೆಂದೇ ಗುರುತಿಸಬಹುದು.

(iv) ಅವುಗಳ ಖಂಡ ಸ್ವರೂಪದಿಂದಾಗಿ ನಿರ್ದಿಷ್ಟವಾಗಿ ಗುರುತಿಸಲಾಗದ ಕೆಲವು ನಿಸಿಧಿಗಳಿವೆ.

ಒಂದಿಲ್ಲೊಂದು ವ್ರತೋಪಾಯದಿಂದ ಜೀವನವನ್ನು ಅಂತ್ಯಗೊಳಿಸಿದವರೆಲ್ಲರಿಗೂ ನಿಸಿಧಿ ಗೌರವ ದೊರೆಯುವುದನ್ನು ನೋಡಿದರೆ, ಇದು ದೇಹದಂಡನೆಯ ಉಗ್ರತೆ ಅಥವಾ ದೇಹದಂಡನೆಕಾರನ ಅಂತಸ್ತಿಗಿಂತಲೂ ಆಯಾ ಕಾಲದ ಸಾಮಾಜಿಕ ಅಥವಾ ಆಧ್ಯಾತ್ಮಿಕ ಪ್ರಜ್ಞೆಯನ್ನವಲಂಬಿಸಿತ್ತೆಂದೆನಿಸುವುದು.[173] ಸ್ಮಾರಕಗಳನ್ನು ಸ್ಥಾಪಿಸುವ ಪದ್ಧತಿಯು ಶ್ರವಣಬೆಳ್ಗೊಳದಲ್ಲಿ 7ನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಆದರೆ, ಅದು 12ನೆಯ ಶತಮಾನದವರೆಗೆ ಹೆಚ್ಚು ಪ್ರಸಾರಕ್ಕೆ ಬರಲಿಲ್ಲ. ಅಲ್ಲದೆ ಮಠೀಯ ಸಮುದಾಯದಾಚೆ 600ರ ನಂತರದ ಅರ್ಧ ಸಹಸ್ರಮಾನ ಕಾಲದಲ್ಲಿ (600ರಿಂದ 1100) ನಿರ್ಮಿಸಿದ ಎಂಟು ನಿಸಿಧಿಗಳಿಗೆ[174] ಹೋಲಿಸಿದರೆ, 12ನೆಯ ಶತಮಾನದ ಶಾಸನ ಪ್ರಮಾಣವು ಒಂದಿಷ್ಟು ತಲೆ ಗಿಮ್ಮೆನಿಸುವಂತಹ ಪ್ರಮಾಣ ಮುಟ್ಟಿದಂತೆ ಕಾಣುವುವು. 12ನೆಯ ಶತಮಾನದ ಪ್ರಥಮಾರ್ಧವು ಕನಿಷ್ಠ ಹನ್ನೆರಡು, ದ್ವಿತೀಯಾರ್ಧವು ಕನಿಷ್ಟ ಮೂರು ನಿಸಿಧಿ ಸ್ಮಾರಕಗಳನ್ನು ಕಂಡವು.[175] ಈ ಪದ್ಧತಿಯನ್ನು 1200ರ ನಂತರ ಬಹುಮಟ್ಟಿಗೆ ಕೈಬಿಡಲಾಯಿತು; ಆದರೂ ಅದರ ಸಂಭಾವ್ಯ ನಿಲುಗಡೆಯ ಮುನ್ನ ಅದು ಸ್ವಲ್ಪ ಚೇತರಿಸಿಕೊಂಡದ್ದನ್ನು ಶ್ರವಣಬೆಳ್ಗೊಳದ ಇತಿಹಾಸದಿಂದ ಕಂಡುಕೊಳ್ಳಬಹುದು.[176] ಇಲ್ಲಿಯ ನಿಸಿಧಿಗಳಲ್ಲಿ ಸಿಂಹಪಾಲು ಶ್ರಮಣರಿಗೆ

---

172. 22, 32, 68, 70, 72, 73, 95, 104, 118, 119, 129, 135, 212, 213, 253, 358, 379, 457, ಇತ್ಯಾದಿ.

173. 1100ಕ್ಕಿಂತ ಮುಂಚೆ ನಿರ್ಮಿಸಿದ ಎಲ್ಲ ನಿಸಿಧಿಗಳು ಅನಿಕೇತನರ ಶ್ರಮಣ-ಕಂತಿಯರ ಮರಣಗಳನ್ನು ಸ್ಮಾರಕಗೊಳಿಸುವುವು.

174. ಇವಾವೆಂದರೆ : 7ನೆಯ ಶತಮಾನದ 104, 118, 22, 129; 8ನೆಯ ಶತಮಾನದ 17, 95; 9ನೆಯ ಶತಮಾನದ 68 (10ನೆಯ ಶತಮಾನದಲ್ಲಿ ಯಾವುದೂ ಇಲ್ಲ); 11ನೆಯ ಶತಮಾನದ 131. 'ನಿಸಿಧಿ' ಪದವನ್ನು ಸ್ಪಷ್ಟವಾಗಿ ಬಳಸಿರುವ ಆಧಾರದಮೇಲೆ ಇವನ್ನು ಗುರುತಿಸಲಾಗಿದೆ.

175. ಸ್ಪಷ್ಟ ಉಲ್ಲೇಖಗಳಿಗಾಗಿ ನೋಡಿ - 81, 135, 136, 155-158, 174, 175, 208, 212, ಮತ್ತು 532. 12ನೆಯ ಶತಮಾನದಂಚಿನ ಶಾಸನಗಳೆಂದರೆ 70, 73, 457. 12ನೆಯ ಶತಮಾನವು ಅತ್ಯಧಿಕ ಸಂಖ್ಯೆಯ 'ನಿಶಿಧಿಕಾಸಂತತಿ'ಯನ್ನು ಕಂಡಿತು - 342.

176. 14ನೆಯ ಶತಮಾನದಲ್ಲಿ ಐದು ನಿಸಿಧಿಗಳನ್ನು (72, 253, 360, 378, 379) ದಾಖಲಿಸಲಾಗಿದ್ದರೆ 13ನೆಯ ಶತಮಾನದಲ್ಲಿ ಕೇವಲ ಎರಡನ್ನು ಮಾತ್ರ ಸ್ಪಷ್ಟವಾಗಿ ಗುರುತಿಸಲಾಗಿದೆ (358 ಮತ್ತು 539). 15ನೆಯ ಶತಮಾನದ ಒಂದೇ ಒಂದು ನಿದರ್ಶನವನ್ನು (364) ಹೊರತುಪಡಿಸಿ ಶ್ರವಣಬೆಳ್ಗೊಳದ ಶಾಸನಗಳಲ್ಲಿ ಈ ಪದವು ಕಾಣಸಿಗುವುದಿಲ್ಲ.

ದೊರಕಿದೆ.[177] ಕಂತಿಯರಿಗೆ ದೊರೆತದ್ದು ಅತ್ಯಲ್ಪ.[178] ಇವೆರಡರ ಮಧ್ಯದ ಪ್ರಮಾಣವನ್ನು ಶ್ರಾವಕರು[179] ಮತ್ತು ಶ್ರಾವಕಿಯರು[180] ಹಂಚಿಕೊಂಡಿರುವರು.

---

177. ಶ್ರಮಣರ 20 ನಿದರ್ಶನಗಳಿವೆ : 17, 22, 32, 68, 70, 72, 73, 81, 95, 104, 118, 119, 135, 156, 253, 360, 264, 378, 539 ಮತ್ತು 457.

178. ಕೇವಲ ಎರಡೇ ಎರಡು ನಿದರ್ಶನಗಳಿವೆ : 7ನೆಯ ಶತಮಾನದ 129 ಮತ್ತು 1119 ರ 484.

179. ಈ ಶ್ರಾವಕರು 12ನೆಯ ಶತಮಾನಕ್ಕೆ ಸೇರಿದವರು - 155, 174, 175, 208, 532 ಮತ್ತು 212.

180. ಈ ನಾಲ್ವರಲ್ಲಿ ಮೂವರು 12ನೆಯ ಶತಮಾನದ ಆರಂಭಕಾಲದವರು (136, 157, 129), ಮಿಕ್ಕವನು 13ನೆಯ ಶತಮಾನದವನೆಂದು ಗುರುತಿಸಲಾಗಿದೆ.

ಅಧ್ಯಾಯ ಐದು

ವ್ರತಾಚರಣೆ : ಐತಿಹಾಸಿಕ ನಿದರ್ಶನಗಳ ಪಥಾನ್ವೇಷಣೆ

ಶಾರೀರಿಕ ಮತ್ತು ಮಾನಸಿಕ ಸಿದ್ಧಿಗಳು : ಮರಣಾಪೇಕ್ಷಿಯು 'ಜೀವನೇಚ್ಛೆ, ಮರಣೇಚ್ಛೆ. ಕುಟುಂಬ ಮತ್ತು ಮಿತ್ರರ ಸುಖ ಸೇರಿದಂತೆ ಎಲ್ಲ ಬಗೆಯ ವಾಂಛೆಗಳಿಂದ ಮುಕ್ತನಾಗಿರಬೇಕು', ಎಂದು *ವಡ್ಡಾರಾಧನೆ* ತಿಳಿಸುವುದು. ಹಿಂದಿನ ಸುಖಗಳನ್ನು ಸ್ಮರಿಸಬಾರದು. ಭವಿಷ್ಯತ್ತಿನ ಫಲಗಳನ್ನು ಅಪೇಕ್ಷಿಸಬಾರದು. ಹಸಿವೆ ನೀರಡಿಕೆಗಳನ್ನು ನಿಗ್ರಹಿಸಬೇಕು. ಉಷ್ಣ, ಶೀತ, ನೋವು ಸೇರಿದಂತೆ ಇಪ್ಪತ್ತೆರಡು ಪರೀಷಹಗಳನ್ನು ಜಯಿಸಬೇಕು ಮತ್ತು ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.[1] ರತ್ನತ್ರಯಗಳನ್ನು ಗಳಿಸಲು ಧರ್ಮಧ್ಯಾನ ಮತ್ತು ಶುಕ್ಲಧ್ಯಾನಗಳಲ್ಲಿ ನಿರತನಾಗಿ ಮರಣಾಪೇಕ್ಷಿಯು ದರ್ಶನ, ಜ್ಞಾನ ಮತ್ತು ಚಾರಿತ್ರ್ಯಗಳನ್ನು ಸಾಧಿಸಬೇಕು. ವೀರೋಚಿತ ಧ್ಯಾನದಲ್ಲಿ ಮಗ್ನನಾಗಿ ಅವನು ಅಂತರ್ಗತ ಕೇವಲಿ ಆಗಬೇಕು.[2] ಕುಟುಂಬ, ಸಮಾಜ, ಸಂಪತ್ತು, ಮತ್ತಿನ್ನಿತರ ಬಗೆಯ ರಾಗಗಳಿಂದ ನಿರ್ಲಿಪ್ತನಾಗದೆ, ಇಂದ್ರಿಯನಿಗ್ರಹವಾಗಲಿ ಅಥವಾ ಕಾಯಕ್ಲೇಶವಾಗಲಿ ಸಾಧ್ಯವಾಗದು. ತಾನು ಮಾಡಿದ ಪಾಪಕೃತ್ಯಗಳನ್ನು ಅರಿತುಕೊಂಡು ಹಂತಹಂತವಾಗಿ ದೇಹ-ಮನಸ್ಸುಗಳನ್ನು ನಿಗ್ರಹಿಸಿ, ಕಠೋರ ಮರಣಕ್ಕೆ ತನ್ನನ್ನು ತಾನು ಅಣಿಗೊಳಿಸಿಕೊಳ್ಳಬೇಕು. ಐಹಿಕ ಬಂಧನಗಳಿಂದ ವಿರಕ್ತಿಹೊಂದಿ ಕೊನೆಯುಸಿರೆಳೆಯುವ ಘಳಿಗೆಯಲ್ಲಿ ಗುರುವಿನಿಂದ

---

1. ಶಿವಕೋಟ್ಯಾಚಾರ್ಯ, ವಡ್ಡಾ. ಪು. 49, 66, 94, 131.
2. ಅದೇ, ಪು. 20 ಮತ್ತು 52.

ದೀಕ್ಷೆ, ಮಾರ್ಗದರ್ಶನ, ಅಥವಾ ಸಹೋದ್ಯೋಗಿಗಳಿಂದ ನೆರವನ್ನು ಸಾಧಕನು ಪಡೆಯಬಹುದಾಗಿತ್ತು. ವ್ರತಾವಿಧಾನಗಳ ಮೇಲೆ ನಿಯಂತ್ರಣ ಹೊಂದಿದವರಿಗೆ ತಮಗೆ ತಕ್ಕ ಧ್ಯಾನಭಂಗಿ ಮತ್ತು ಜಪಮಂತ್ರಗಳನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿತ್ತು. ಧರ್ಮಗ್ರಂಥಗಳನ್ವಯ ಸಾಧಕನು ನಗ್ನತೆಯನ್ನು ಅಂಗೀಕರಿಸಬೇಕೆಂದು ನಿರೀಕ್ಷಿಸಲಾಗಿತ್ತು; ಆದರೆ, ಬೆಳ್ಗೊಳದಲ್ಲಿ ವ್ರತಾಚರಣೆಗೈದ ಶ್ರಾವಕರು ಮತ್ತು ಕಂತಿಯರ ಮೇಲೆ ನಗ್ನತೆಯ ಕಟ್ಟಳೆಯನ್ನು ಕಡ್ಡಾಯಗೊಳಿಸಿರಲಿಲ್ಲವೆಂದು ತೋರುವುದು.[3]

ನಿರಸನ: ಸಮಾಧಿ ವ್ರತಾಚರಣೆಯಲ್ಲಿ ನಿರಸನಕ್ಕೆ ಮಹತ್ವದ ಸ್ಥಾನವಿದೆ. ರಾಗದ್ವೇಷ ಹಾಗೂ ದೈಹಿಕ ಕಾಮನೆಗಳನ್ನು ಕಳಚಿಕೊಂಡು ಶರೀರ ನಿಗ್ರಹಣ ಮಾಡಿಕೊಳ್ಳುವ ಪ್ರಮುಖ ಮಾಧ್ಯಮವೆಂದು ಇದನ್ನು ಪರಿಗಣಿಸಲಾಗಿತ್ತು. ನಿರಸನದ ಹಂತಹಂತದ ವಿಧಾನವನ್ನು *ರತ್ನಕರಂಡಕ ಶ್ರಾವಕಾಚಾರವು* ವಿವರಿಸುವುದು. ಸಾಧಕನು ಗಟ್ಟಿ ಆಹಾರವನ್ನು ತ್ಯಜಿಸುವುದರೊಂದಿಗೆ ಆರಂಭಿಸಿ, ಸತ್ವಯುತ ದ್ರವಗಳನ್ನು ತೊರೆದು, ಜಲಪಾನವನ್ನೂ ಬಿಡುವುದರಲ್ಲಿ ಈ ವಿಧಿ ಮುಕ್ತಾಯಗೊಳ್ಳುವುದು.[4] ವ್ರತಾಚರಣೆಯ ವಿಧಾನ ಮತ್ತು ಅವಧಿಯ ಬಗ್ಗೆ ಶಾಸನಗಳು ಪುನಃ ಪುನಃ ಪ್ರಸ್ತಾಪ ಮಾಡುವುವು. ಮುನಿ ಮಲ್ಲಿಷೇಣ[5] ಮತ್ತು ಅರಸ ಮಾರಸಿಂಹ[6] ಮೂರು ದಿನ ಮಾತ್ರ ನಿರಸನ ಕೈಗೊಂಡು ತಮ್ಮ ಗುರಿ ಸಾಧಿಸಿದರೆ, ತರೆಕಾಡ ಪೆರ್ಜೆಡಿಯ ಗುರವಡಿಯು ೨೧ ದಿವಸ ನಿರಸನ ಕೈಕೊಳ್ಳಬೇಕಾಯಿತು.[7] ಉಗ್ರಸೇನ ಗುರವಡಿ, ಮಾಚಿಕಬ್ಬೆ, ಅಜಿತಕೀರ್ತಿದೇವ, ಮತ್ತಿತರರು ಒಂದು ತಿಂಗಳ ಕಾಲ[8] ಮತ್ತು ನಾಗಮತಿಗಂತಿ ಮೂರು ತಿಂಗಳ ಕಾಲ ನಿರಸನಗೈದು, ಕೊನೆಯುಸಿರೆಳೆದರು.[9] ಕಳಂತೂರಿನ ಗೊರವನೊಬ್ಬನು ೧೧೮ ವರ್ಷ ನಿರಸನಗೈದನೆಂಬುದು ತೀರಾ ಉತ್ಪ್ರೇಕ್ಷೆಯಿಂದೊಡಗೂಡಿದ್ದಾಗಿದ್ದೆನಿಸುವುದು.[10]

ಧ್ಯಾನ: ನಿರಸನವು ಸಮಾಧಿ ವ್ರತಾಚರಣೆಯ ಸಾಧನವೇ ಹೊರತು ಅಂತಿಮ ಲಕ್ಷ್ಯವಲ್ಲ. ಇದು ದೇಹವನ್ನು ದಂಡಿಸುವ ಮತ್ತು ಆತ್ಮವನ್ನು ಶುಭ್ರೋಜ್ವಲಗೊಳಿಸುವ ಧ್ಯಾನವಿಧಾನ. ಪರಿಸರವೂ ಧ್ಯಾನಕ್ಕೆ ತನ್ನದೇ ಕೊಡುಗೆಯನ್ನು ನೀಡುವುದೆಂಬುದನ್ನು ಅಂಗೀಕರಿಸಲಾಗಿತ್ತು.[11]

---

3. ಭಾರ್ಗವ, *ಜೈನ ಎಥಿಕ್ಸ್*, ಪು. 141.
4. ಅದೇ.
5. ಎ ಕ II, 77.
6. 64.
7. 36.
8. 28, 176 ಮತ್ತು 252.
9. 23.
10. 25.
11. 89.

ಉದಾಹರಣೆಗೆ, ಕಟವಪ್ರದ ತಳಬಂಡೆಯು ಹಗಲು ಮತ್ತು ಇರುಳಿನಲ್ಲಿ, ಬೇಸಿಗೆ ಮತ್ತು ಚಳಿಗಾಲದಲ್ಲಿ, ವಿಪರೀತ ಉಷ್ಣ ಮತ್ತು ಶೀತವನ್ನು ಒದಗಿಸಿ, ಪ್ರಕೃತಿಯ ನಿರ್ದಯತೆಗೆ ಧ್ಯಾನಿಯು ತನ್ನನ್ನು ತಾನು ಒಡ್ಡಿಕೊಳ್ಳಲು ಸಹಕಾರಿಯಾಗಿತ್ತೆಂದು ಪರಿಗಣಿಸಲಾಗಿತ್ತು. 7ನೆಯ ಶತಮಾನದ ಪ್ರಭಾಚಂದ್ರ ಮುನಿಯು ಈ ಬೆಟ್ಟದ ಅದ್ಭುತ ವನ್ಯ ಪರಿಸರವನ್ನು ಗುರುತಿಸಿ, ಕಾಯಕ್ಲೇಶಕ್ಕೆ ಇದು ತಕ್ಕ ಸ್ಥಳವೆಂದು ಮನದಂದು, ಇದನ್ನು ಆಯ್ದುಕೊಂಡಿದ್ದನು. ಮರಣಾಂತಿಕ ಧ್ಯಾನ ಮತ್ತು ನಿರಸನ ಕೈಕೊಂಡವರು ಮೊದಲು ಬೆಟ್ಟಕ್ಕೆ ಪ್ರದಕ್ಷಿಣೆ ಹಾಕಿ, ಅದರ ಅಡಿಗೆ ಸಾಷ್ಟಾಂಗವೆರಗಿ, ಅನಂತರ ಅದನ್ನೇರುತ್ತಿದ್ದರು.[12]

ವಿರಕ್ತಿ : ಐಹಿಕ ಬಂಧನಗಳ ಸಂಪೂರ್ಣ ವಿರಕ್ತಿಯು, ನಿರಸನ ಮತ್ತು ಧ್ಯಾನಗಳನ್ನು ಮುಂಬಾಲಿಸಿದವೆಂಬುದನ್ನು ತಿಳಿಸಲು ಬೆಳ್ಗೊಳದಲ್ಲಿ ಸಾಕಷ್ಟು ಪ್ರಮಾಣ ದೊರೆಯುವುದು. ಮುನಿಗಳು ತಮ್ಮ ಸಂಘ-ಗಣಗಳಿಗೆ ವಿದಾಯ ಹೇಳಿ,[13] ಉತ್ತರಾಧಿಕಾರಿಗಳನ್ನು ನೇಮಿಸಿ, ಸಂಘಗಳ ನಿರ್ವಹಣೆಯ ಏರ್ಪಾಡು ಮಾಡುತ್ತಿದ್ದರು.[14] ವಿರಕ್ತಿಗೆ ಸುಮಾರು ಒಂದು ವರ್ಷ ಕಾಲ ಪೂರ್ವದಲ್ಲಿ ಅರಸರು ತಮ್ಮೆಲ್ಲ ಹೊಣೆಗಳಿಂದ ಬಿಡಿಸಿಕೊಂಡು, ರಾಜ್ಯಾಡಳಿತಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡಿದ ನಿದರ್ಶನಗಳೂ ದೊರೆಯುವುವು.[15] ಶ್ರಾವಕ-ಶ್ರಾವಕಿಯರು ತಮ್ಮ ಬಂಧುಮಿತ್ರರ ಸಂಬಂಧವನ್ನು ಸಾಕಷ್ಟು ಮುಂಚಿತವಾಗಿಯೇ ಕಡಿದುಕೊಳ್ಳುತ್ತಿದ್ದರೆಂದೂ ತಿಳಿಸಲಾಗಿದೆ.[16]

ಪಾಪವೃಕ್ಷವನ್ನು ಬೇರು ಸಹಿತ ಕಿತ್ತೆಸೆಯುವ,[17] ಅಜ್ಞಾನವನ್ನು ಹೊಡೆದೋಡಿಸುವ, ಪಂಚೇಂದ್ರಿಯ (*ಪಂಚಗಂಧೇಭ*) ಗಳನ್ನು ನಿಗ್ರಹಿಸುವ[18] ಮತ್ತು ಆತ್ಮದ ಮೇಲೆ ಪ್ರಭುತ್ವ ಸಾಧಿಸುವ[19] ಮಾರ್ಗಗಳಲ್ಲಿ ಎದುರಾಗುವ ಮುಖ್ಯ ಅಡೆತಡೆಗಳೆಂದರೆ ಅಭಿಮಾನ,[20] ಭ್ರಮೆ,[21] ರಾಗ, ದ್ವೇಷ[22] ಮತ್ತು ಮೋಹ.[23] ಇವುಗಳಿಂದ ಮುಕ್ತರಾಗಲು "ನಿನಗೇನು ಬೇಕು, ನಿನಗೇನು ಬೇಕು?"[24] ಎಂದು ಕೇಳುತ್ತಾ, ತನ್ನೆಲ್ಲ ಐಹಿಕ ಸಂಪತ್ತನ್ನು ಒಂದೊಂದಾಗಿ ತೊರೆದು,

---

12. 1.
13. 13 ಮತ್ತು 360.
14. 1.
15. 64.
16. 208.
17. 117.
18. 110.
19. 15.
20. 110.
21. 14.
22. ಅದೇ.
23. 110.
24. 173.

ಸಮಚಿತ್ತತೆಯನ್ನು ಸಾಧಿಸಿ,[25] ಧ್ಯಾನಿಯು ತಪಸ್ಸಿನ ಕಠಿಣ ಮಾರ್ಗ ತುಳಿಯಲು ಅಣಿಗೊಳ್ಳುತ್ತಿದ್ದನು.

ಮಠೀಯ ತತ್ವಗಳು : ಸಂಘದ ಸಿದ್ಧಸಮಯವನ್ನು[26] (ಸಿದ್ಧರ ನ್ಯಾಯಸಂಹಿತೆ) ಉಲ್ಲಂಘಿಸದಂತೆ ಎಚ್ಚರ ವಹಿಸಿ, ಜ್ಞಾನಿಗಳು ಸನ್ಯಸನ ವಿಧಿಯ ಆರಾಧನಾ ಪಥವನ್ನನುಸರಿಸಿ,[27] ಮುನಿವ್ರತಗಳನ್ನಾಚರಿಸುತ್ತಿದ್ದರು.[28] ಚಿತ್ತೈಕಾಗ್ರತೆಯನ್ನು ಗುರುವಿನ ಪಾದದ ಮೇಲಿರಿಸಿ, ಸನ್ಯಸನ ಶಾಸ್ತ್ರಗ್ರಂಥಗಳನ್ನು ಅರ್ಥಮಾಡಿಕೊಂಡು (*ಸನ್ಯಸನ ಶಾಸ್ತ್ರಮಾತ್*),[29] *ಜೈನಾಗಮದಲ್ಲಿ* ವಿಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಅವರು ಅನುಸರಿಸುತ್ತಿದ್ದರು. ಗಣನಾಯಕನ ಅನುಮತಿ ಪಡೆದು ಶ್ರುತಮುನಿಯು ತನ್ನ ಮೋಕ್ಷಕ್ಕೆ ಸಹಕಾರಿಯಾದ ಮಾರ್ಗವನ್ನು ಆಯ್ದುಕೊಂಡನೆಂದು ಸ್ಪಷ್ಟಪಡಿಸಲಾಗಿದೆ.[30]

ಗಣನಾಯಕನು ಸಾಧಕನ ಮರಣಾಧಿಕಾರವನ್ನು ನಿರಾಕರಿಸುವ ಹಕ್ಕನ್ನು ಹೊಂದಿರಲಿಲ್ಲ; ಆದರೆ, ಅವನ ಸಂಕಲ್ಪ ಮತ್ತು ನಿಷ್ಠೆಯನ್ನು ಪರೀಕ್ಷಿಸಲು ಸಮಾಧಿ ವಿಧಾನದ ಕಠೋರತೆಯನ್ನು ವಿವರಿಸಿ, ಸಾಧಕನ ಮನಸ್ಸನ್ನು ಬೇರೆಡೆ ತಿರುಗಿಸಲೆತ್ನಿಸುವ ವಿಶೇಷ ಹೊಣೆಯನ್ನು ಹೊಂದಿದ್ದನು.[31] ಇಂತಹ ಸಂದರ್ಭದಲ್ಲಿ ಶ್ರುತಮುನಿಯ ಉತ್ತರವು ಮರಣವನ್ನಪ್ಪಲು ಸಂಕಲ್ಪ ಮಾಡಿದವರಿಂದ ಬರುತ್ತಿದ್ದ ಮಾದರಿಯ ಮಾತಾಗಿರಲು ಸಾಕು. 'ಓ ಧರ್ಮಪ್ರಿಯನೆ,...ಪರಮಜ್ಞಾನಿಯಾದ ನಿನಗೆ ಧರ್ಮಿಷ್ಠರ ಕರ್ತವ್ಯಗಳ ಅರಿವಿದೆ' ಎನ್ನುತ್ತಾ ಶ್ರುತಮುನಿಯು ಕಾಯದಿಂದ ತನ್ನನ್ನು ಬಿಡುಗಡೆಗೊಳಿಸಿಕೊಳ್ಳುವ ಧ್ಯಾನಕಲೆಯನ್ನು ಅರುಹಬೇಕೆಂದು ಗುರುವಿನಲ್ಲಿ ಪ್ರಾರ್ಥಿಸಿಕೊಂಡನಂತೆ.[32]

ಮಾರ್ಗದರ್ಶಕ : ಗುರುಗಳ ದೀರ್ಘ ಮಾರ್ಗದರ್ಶನದ ಸ್ಪಷ್ಟ ಉಲ್ಲೇಖಗಳು ಶಾಸನಗಳಲ್ಲಿ ಹೆಚ್ಚು ದೊರೆಯುವುದಿಲ್ಲವಾದರೂ ಸಂಘದ ನಾಯಕನನ್ನು ಶ್ರಮಣರು ಆಶ್ರಯಿಸಿದಂತೆ, ಗುರುಗಳನ್ನು ಗುಡ್ಡರೂ ಅವಲಂಬಿಸಿದ್ದರೆಂಬುದು ಸ್ಪಷ್ಟಗೊಂಡಿರುವುದು. ಪೋಚಿಕಬ್ಬೆ, ಲಕ್ಷ್ಮೀಮತಿ, ದೇಮತಿ, ಅರಸ ನಾಲ್ಪಡಿ ಇಂದ್ರ, ಪೆರ್ಗ್ಗಡೆ ಸಿಂಗಿಮಯ್ಯ ಮುಂತಾದವರೆಲ್ಲ ಸಮಾಧಿವ್ರತವನ್ನಾಚರಿಸಿ ಸಾವನ್ನು ಸ್ವಾಗತಿಸಿದರು. ಆದರೆ ಅವರಿಗೆ

---

25. 208.
26. 1.
27. 14.
28. 30.
29. 85.
30. 77.
31. 364.
32. ಅದೇ.

ದೀಕ್ಷೆಯಿತ್ತ ಗುರುಗಳ ವಿವರಗಳು ದೊರೆಯುವುದಿಲ್ಲ. ಮಾಚಿಕಬ್ಬೆಯ ದೀಕ್ಷಾಗುರುವಿನ ಬಗ್ಗೆಯೂ ಖಚಿತ ವಿವರವಿಲ್ಲ; ಆದರೆ, ಆಕೆಯು 'ಮುನಿಗಳಾದ ಪ್ರಭಾಚಂದ್ರ, ವರ್ಧಮಾನ ಮತ್ತು ರವಿಚಂದ್ರರು ಪಠಿಸಿದ' ಸಮಾಧಿಯನ್ನಾಲಿಸುತ್ತಾ ಮರಣವನ್ನು ಆಹ್ವಾನಿಸಿದಳೆಂದು ಹೇಳಲಾಗಿದೆ.[33] ತಮ್ಮ ಶಿಷ್ಯರ ಸಮಾಧಿವ್ರತಾಚರಣೆಯ ಕಾಲದಲ್ಲಿ ಗುರುಗಳು ಇಲ್ಲವೆ ಸಂಘದ ಸದಸ್ಯರು ಮೇಲ್ವಿಚಾರಕರಾಗಿ ನಿಲ್ಲುತ್ತಿದ್ದರು. ದೇವತೆ ಮತ್ತು ಮುನಿಗಳ ಸನ್ನಿಧಿಯಲ್ಲಿ ಬಲದೇವನು ವ್ರತವನ್ನು ಆಚರಿಸಿದನೆಂದು,[34] ನಾಲ್ಪಡಿ ಇಂದ್ರನು ತನ್ನ ಗುರುವಿನ ಪದತಲದಲ್ಲಿ ಧ್ಯಾನ ಮಾಡಿದನೆಂದು ಸ್ಪಷ್ಟಪಡಿಸಲಾಗಿದೆ.[35]

ಮಹಾನವಮಿ: ಸಮಾಧಿಮರಣವೊಂದು ಮಹಾನವಮಿ ಎಂದೇ ಬಗೆಯಲಾಗಿತ್ತು. ಈ ಉತ್ಸವದಲ್ಲಿ ಪಾಲ್ಗೊಳ್ಳಲು ಗಣನೀಯ ಸಂಖ್ಯೆಯಲ್ಲಿ ಧರ್ಮಿಷ್ಠರು ನೆರೆಯುತ್ತಿದ್ದರು. ಚಾತುರ್ವರ್ಣಗಳ ಸಕಲ ಸಮಾಜವು ಅರಿಷ್ಟನೇಮಿಯ ಸಮಾಧಿಮರಣವನ್ನು ನೋಡಲು ನೆರೆದಿತ್ತೆಂದು ಹೇಳಲಾಗಿದೆ.[36] ನಾಲ್ಪಡಿ ಇಂದ್ರನ ಮರಣವನ್ನು ಪ್ರತ್ಯಕ್ಷಕಂಡ ಸ್ತ್ರೀ ಪುರುಷರ ಸಮೂಹವು ಅವನ ವೀರಮರಣದ ವಿಧಾನವನ್ನು ಮುಕ್ತಕಂಠದಿಂದ ಕೊಂಡಾಡಿತು.[37] ಭಕ್ತ ಸಮೂಹಕ್ಕೆ ಅಚ್ಚರಿಯಾಗುವ ರೀತಿಯಲ್ಲಿ ಮುನಿ ಮಲ್ಲಿಷೇಣ ಮಲಧಾರಿಯು ಕೊನೆಯುಸಿರೆಳೆಯುವ ಮುನ್ನ ತನ್ನ ಸ್ಮೃತಿ ಪ್ರಜ್ಞೆ ಕುರಿತು ತಾನೇ ಆಶುಪದ್ಯವೊಂದನ್ನು ರಚಿಸಿ, ವಾಚಿಸಿದನು.[38] ಸಂಬಂಧಿಗಳು ಹಾಗೂ ಸ್ನೇಹಿತರು ಬೇಡಿದುದೆಲ್ಲವನ್ನು ಕೊಟ್ಟು, ಅವರಿಂದ ವಿದಾಯ ಪಡೆದು, ಮಾಚಿಕಬ್ಬೆಯು ಲೋಕದ ಜಯಘೋಷದ ಮಧ್ಯೆ ಸಾವನ್ನಪ್ಪಿದಳೆಂದು ವರ್ಣಿಸಲಾಗಿದೆ.[39] ಶ್ರುತಮುನಿಯು ಅಂತ್ಯ ಸಾಧಿಸಿದಾಗ ಅವನನ್ನು ಸಂದರ್ಶಿಸಲು ಬಂದ ಮುನಿ-ಮಹಾಪೂರವು ಅವನ ವೀರಾಂತ್ಯವನ್ನು ಮುಕ್ತಕಂಠದಿಂದ ಶ್ಲಾಘಿಸಿ,[40] ಅವನ ಪ್ರಮುಖ ಶಿಷ್ಯರ, ಕಂತಿಯರ ಮತ್ತು ಗುಡ್ಡರ ಸಮ್ಮುಖದಲ್ಲಿ ನಿಸಿಧಿಯನ್ನು ನೆಟ್ಟು, ಅವನಿಗೆ ಗೌರವ ಸಲ್ಲಿಸಿತು. ಭವ್ಯರು, ಚಾತುರ್ವರ್ಣಗಳು, ಸಂಘ, ಗಣ ಮತ್ತು ಗಚ್ಛದ ಸದಸ್ಯರು, ಸಾಮಾನ್ಯವಾಗಿ ಸಮಾಧಿಮರಣವನ್ನು ವೀಕ್ಷಿಸಲು ಹೆಚ್ಚು ಉತ್ಸುಕರಾಗಿರುತ್ತಿದ್ದರು. ಮರಣವು ಅವರಿಗೆ ಶೋಕಸಮಯವೆನಿಸದೆ ಒಂದು ಮಹೋತ್ಸವದ ಶುಭಮುಹೂರ್ತವೆನಿಸಿತ್ತು.

---

33. 176.
34. 174.
35. 163.
36. 13.
37. 163.
38. 77.
39. 176.
40. 364.

ಧ್ಯಾನದ ಸ್ಥಳ ಹಾಗೂ ಭಂಗಿ : ಸಮಾಧಿ ಸಾಧಕನಿಗೆ ಧೈರ್ಯ, ದೃಢನಂಬಿಕೆ, ಸಹನಾಶಕ್ತಿ, ದೈಹಿಕ-ಮಾನಸಿಕ ಒತ್ತಡಗಳನ್ನು ನಿಗ್ರಹಿಸುವ ಸಾಮರ್ಥ್ಯ, ಮುಂತಾದ ವುಗಳು ಅಗತ್ಯವಾಗಿದ್ದವು. ಇಂಥ ಮರಣಾಪೇಕ್ಷಿಗಳು ಸಂತೋಷದಿಂದ ಸಹಿಸಿದ ಕಾಠಿಣ್ಯಗಳನ್ನು ಕವಿಗಳು ಕೊಂಡಾಡಿರುವರು. ಕಳಂತೂರಮುನಿ ಕೈಕೊಂಡ ತಪಸ್ಸು ಅಸಿಧಾರಾವ್ರತದಷ್ಟೆ, ಅಗ್ನಿಯನ್ನು ಪ್ರವೇಶಿಸಿದಷ್ಟೆ, ಸರ್ಪದ ಪ್ರಾಣಾಂತಿಕ ವಿಷದಂತಗಳಿಂದ ತೂರಿಬರುವಷ್ಟೆ, ಘೋರವೂ, ಕಠಿಣವೂ ಆಗಿತ್ತು.[41] ಪ್ರಭಾಚಂದ್ರನು ಧ್ಯಾನಕ್ಕಾಗಿ ಆಯ್ದುಕೊಂಡ ಪರಿಸರವೇ ಇತರರನ್ನು ಎದೆಗುಂದಿಸುವಂತಿತ್ತು. ಅದನ್ನು ಬೃಹತ್ ಪ್ರಮಾಣದ ಕರಿಬಂಡೆಗಳು, ಗಿಡಗಂಟೆಗಳಿಂದ ತುಂಬಿದ ಪೊದೆಗಳು, ಹಿಂಸ್ರ ಪ್ರಾಣಿಗಳು ಮತ್ತು ಆಳವಾದ ಅಪಾಯಕಾರಿ ಗುಹೆ-ಕೊಳ್ಳ-ಕಂದರಗಳು, ಸುತ್ತುಗಟ್ಟಿದ್ದವು.[42] ಕಳ್ಬಪ್ಪುವಿನ ಬೇರೆ ಬೇರೆ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡವರೂ ಇದೇ ಬಗೆಯ ಅಸೌಖ್ಯಗಳನ್ನು ಅಂಜದೇ ಆಹ್ವಾನಿಸಿದ್ದರು.[43]

ದೇಹದಂಡನೆಯು ತಪಸ್ಸಿನ ಒಂದು ಅಂಗ ಮಾತ್ರ. ಚಿತ್ತೈಕಾಗ್ರತೆ ಮತ್ತು ವಾಂಛೆನಿಗ್ರಹಕ್ಕೆ ಸಹಕಾರಿಯಾದ ವ್ರತ ಮತ್ತು ವಿಧಿಗಳ ಆಚರಣೆ ಈ ತಪಸ್ಸಿನ ಪ್ರಮುಖ ಅಂಗವಾಗಿತ್ತು. ಶುಕ್ಲಧ್ಯಾನ ವ್ರತವು ಇಂತಹ ಒಂದು ಆಚರಣೆ.[44] ನವಿಲೂರ ಸಂಘದ ಗುಣದೇವಮುನಿ ಮತ್ತು ಅನಂತಮತೀಕಂತಿ ಆರಾಧನಾ ವ್ರತವನ್ನು ಸ್ವೀಕರಿಸುವ ಮುನ್ನ ದ್ವಾದಶ ವಿಧ ತಪಸ್ಸುಗಳನ್ನಾಚರಿಸಿದರು.[45] ಒಬ್ಬರು ಅನಾಕುಳಚಿತ್ತನಾಗಿ ಧ್ಯಾನ ಮಾಡಿದರೆ,[46] ಇನ್ನೊಬ್ಬರು ಪೂರ್ತಿ ಬೆಂಡಾಗುವವರೆಗೆ (ಪಳಿತಂಕ)[47] ಚಿತ್ತೈಕಾಗ್ರತೆಯಿಂದ ಧ್ಯಾನ ಮಾಡಿದರು; ಮತ್ತೊಬ್ಬನು ಕೊನೆಯವರಿಗೂ ಹರ್ಷಚಿತ್ತದಿಂದಿದ್ದು ಕಟ್ಟುನಿಟ್ಟಿನ ವ್ರತವನ್ನಾಚರಿಸಿದನು.[48] ಇವರಲ್ಲಿ ಮೊದಲನೆಯವನು ಅರಸನಾಗಿದ್ದರೆ, ಮಿಕ್ಕವರಿಬ್ಬರು ಶ್ರಮಣರಾಗಿದ್ದರು. ಪೋಚಿಕಬ್ಬೆಯು ಏಕಪಾರ್ಶ್ವ ನಿಯಮದಿಂದ (ಒಂದೇ ಮಗ್ಗುಲಿನಲ್ಲಿ ಒರಗಿಕೊಂಡು) ತನ್ನ ಅಂತ್ಯ ಸಾಧಿಸಿದರೆ,[49] ಮೇಘಚಂದ್ರ ತ್ರೈವಿದ್ಯದೇವನು ಪಲ್ಯಂಕಾಸನವನ್ನಳವಡಿಸಿಕೊಂಡು ದೇಹದಂಡಿಸಿದನು.[50] ತ್ಯಜಿಸಬೇಕಾದುದೆಲ್ಲವನ್ನೂ ತ್ಯಜಿಸಲು ಮತ್ತು ಜ್ಞಾನದ ನಿಜಸ್ವರೂಪವನ್ನು ಅರಿಯಲು ಪಲ್ಯಂಕಾಸನವು ಅತ್ಯಂತ ಸೂಕ್ತವಾದ ಭಂಗಿಯೆಂದು

41. 25.
42. 11.
43. 252.
44. 13.
45. 26 ಮತ್ತು 113.
46. 163.
47. 130.
48. 87.
49. 136.
50. 156.

ತಿಳಿಸಲಾಗಿದೆ.[51] ಚಲ್ಲದಂಕರಾವ (ದೃಢ ಚಾರಿತ್ರ್ಯವುಳ್ಳ ಮಲ್ಲ) ಹೊಯ್ಸಳ ಸೆಟ್ಟಿಯು[52] ಇದೇ ಭಂಗಿಯನ್ನು ಬಳಸಿಕೊಂಡನು. ಲೋಕದ ನಿಜಸ್ವರೂಪ ಮತ್ತು ಅದರ ಕ್ಷಣಭಂಗುರತೆಯನ್ನು ಕುರಿತು ಚಿಂತನೆ ಮಾಡುತ್ತಾ, ತನ್ನನ್ನು ತಾನು ಅಣಿಗೊಳಿಸಿಕೊಂಡು, ಅರ್ಧನಿಮೀಲಿತ ನೇತ್ರಗಳಿಂದ ಶೃತಮುನಿಯು ಧ್ಯಾನಗೈದನೆಂದು ವರ್ಣಿಸಲಾಗಿದೆ. ತನ್ನ ಹೃದಯ ಕಮಲದ ಮಧ್ಯೆ ಸಿದ್ಧಸ್ವರೂಪವನ್ನು ಪ್ರತಿಷ್ಠಾಪಿಸಿಕೊಂಡು, ಅಮೃತ ಧಾರೆಯಂತೆ ಸುರಿಯುವ ಮೂಲಸ್ತೋತ್ರದಿಂದ (ಪಂಚಪದ) ಅದನ್ನು ಸಿಂಚನಗೊಳಿಸಲು ಅವನಿಗೆ ಸಾಧ್ಯವಾಯಿತು. ಅವನ ಈ 'ವೀರಕೃತ್ಯ'ವು ಮುನಿ ಸಮೂಹವನ್ನೆಲ್ಲ ಹರ್ಷೋದ್ಗಾರಗೈಯ್ಯುವಂತೆ ಮಾಡಿತು.[53]

ಆತ್ಮ ಸಾಕ್ಷಾತ್ಕಾರಾಮೃತ: ಭಂಗಿ ಮತ್ತು ಮುದ್ರೆಗಳು ಸಮಾಧಿ ಧ್ಯಾನಿಯ ದೇಹವನ್ನು ನಿಯಂತ್ರಿಸಿದರೆ, ಪಂಚಪದ ಪಠಣವು ಅವನ ಚಿತ್ತವನ್ನು ನಿಯಂತ್ರಿಸುವುದೆಂದು ಭಾವಿಸಲಾಗಿತ್ತು. ಪಂಚಪದವು ಸಕಲ ನೋಂಪಿಗಳ ಮೂಲ ಸ್ತೋತ್ರವಾಗಿದ್ದು, ಸನ್ಯಸನ ವ್ರತದ (*ಸನ್ಯಸ ಆರಾಧಿತ*) ಅಡಿಗಲ್ಲು.[54] ನೋಂಪಿಗಳು ಮುನಿವ್ರತಗಳನ್ನು,[55] ಸಿದ್ಧಸಮಯಗಳನ್ನು[56] ಮತ್ತು ಆರಾಧನಾ ವ್ರತವು[57] ಆರಾಧನಾಯೋಗ,[58] ಸಲ್ಲೇಖನಾ,[59] ಪಂಡಿತಮರಣಗಳನ್ನು[60] ನಿಯಂತ್ರಿಸುವುವು. ಈ ಸ್ತೋತ್ರಪಠಣವು ದುಃಖ ಮತ್ತು ದರ್ಪಗಳ ಪರಿಣಾಮಗಳಿಂದಲ್ಲದೆ (ಆರ್ತರೌದ್ರ ಪರಿಣಾಮ),[61] ಅಭಿಮಾನ, ವಂಚನೆ, ಮೊದಲಾದವುಗಳಿಂದ ವಿಮುಕ್ತಿಗೊಳಿಸಬಲ್ಲದು.[62] ಇದು ರಾಗದ ಏಣಿಯಿಂದ, [63] ಮೋಹದ ಜಾಲದಿಂದ,[64] ಪಾವನಗೊಳಿಸಲು ಸನ್ಯಸನಕ್ಕೆ ದಾರಿ ಮಾಡಿಕೊಡಲೂ ಸಮರ್ಥವಾಗಿದೆ.[65] ಪಂಚಪದವು ಆರಾಧನೆಯ ಸೇತು. ಅಮೃತ ಕಾರಂಜಿ.[66] ಆತ್ಮಸಾಕ್ಷಾತ್ಕಾರದ ಸುಧೆ.[67]

---

51. 176.
52. 208.
53. 364.
54. 1.
55. 14.
56. 30.
57. 86.
58. 121.
59. 81 ಮತ್ತು 136.
60. 176.
61. 72.
62. 117.
63. 174.
64. 175.
65. 176.
66. 364.
67. 156.

ಸಮಾಧಿಮರಣ ಮತ್ತು ಆತ್ಮಹತ್ಯೆ : ಮೋಲ್ನೋಟಕ್ಕೆ ಸ್ವಲ್ಪ ಮಟ್ಟಿಗೆ ಸಾದೃಶ್ಯವೆನಿಸಿದರೂ, ಸಮಾಧಿ ಮರಣವು ಆತ್ಮಹತ್ಯೆಗಿಂತ ತುಂಬಾ ಭಿನ್ನ. ಸಮಾಧಿಮರಣವು ರಾಗ ರಹಿತವಾಗಿದ್ದರೆ ಆತ್ಮಹತ್ಯೆಯು ರಾಗಪೂರ್ಣವೂ, ಆವೇಶದಿಂದೊಡಗೂಡಿದ್ದು ಇವುಗಳ ವ್ಯತ್ಯಾಸವನ್ನು ಪೂಜ್ಯಪಾದನು ಗುರುತಿಸಿರುವನು.[68] ಯಾರು ಬೇಕಾದರೂ, ಜೀವನದ ಯಾವ ಹಂತದಲ್ಲಿ ಬೇಕಾದರೂ, ಸಮಾಧಿಮರಣವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುವುದಿಲ್ಲ. ಸಾಧಕನಿಗೆ ಈ ವಿಶೇಷಾಧಿಕಾರವನ್ನು ಕೊಡುವ ಅಥವಾ ನಿರಾಕರಿಸುವ ನಿಯಮಗಳಿದ್ದವು. ಯಾವಾಗ ಈ ವ್ರತವನ್ನು ಕೈಕೊಳ್ಳಬೇಕೆಂಬ ಸವಿವರವಾದ ಚರ್ಚೆಯ ನಂತರ, ಮರಣ ಸನ್ನಿಹಿತವಾದಾಗ, ಗುಣಪಡಿಸಲಾರದಂತಹ ಮಾನಸಿಕ ಮತ್ತು ದೈಹಿಕ ಅಸ್ವಾಸ್ಥ್ಯ ಉಂಟಾದಾಗ ಮಾತ್ರ ಸಮಾಧಿ ವ್ರತವನ್ನು ಅಂಗೀಕರಿಸಬಹುದೆಂದು ನಿರ್ಣಯಿಸಲಾಗಿದೆ. ಇದನ್ನು *ಸಾಗಾರಧರ್ಮಾಮೃತ* ಮತ್ತು *ರತ್ನಕರಂಡಕ ಶ್ರಾವಕಾಚಾರ* ಅನುಮೋದಿಸಿರುವುವು. ಸಮಂಜಸ ಉದ್ದೇಶಗಳಿಂದ ಸಮರ್ಥಿಸಲಾರದ ಮರಣದ ಬಗ್ಗೆ *ಭಗವತೀ ಆರಾಧನಾ* ಎಚ್ಚರಿಕೆ ಕೊಟ್ಟಿದೆ.[69]

ಶ್ರವಣಬೆಳ್ಗೊಳದಲ್ಲಿ ಮಡಿದ ಮುನಿಗಳಲ್ಲಿ ಪ್ರಭಾಚಂದ್ರ, ವೃಷಭಣಂದಿ ಮತ್ತು ಕಂತಿಯರಲ್ಲಿ ಸಸೀಮತಿ[70] ಮರಣಸನ್ನಿಹಿತವಾದುದನ್ನು ಮನದಂದಾಗ ಈ ವ್ರತವನ್ನು ಕೈಕೊಂಡರು. ನಂದಿಸೇಣನು ಇಹಜೀವನದಿಂದ ಪೂರ್ತಿ ಜಿಗುಪ್ಸೆಗೊಂಡನಂತರವೇ ಈ ಮಾರ್ಗವನ್ನು ಆಯ್ಕೆ ಮಾಡಿಕೊಂಡನು.[71] ಶೃತಮುನಿಯು ಇಹಜೀವನದ ಮಾಯಾ ಸ್ವರೂಪದಿಂದ ನಿರಾಶೆಗೊಂಡು ಈ ವ್ರತವನ್ನು ಸ್ವೀಕರಿಸಿದನು.[72] ದೈಹಿಕ ಬಂಧನವು ಹಲವಾರು ಅರ್ಥಶೂನ್ಯ ಭೂತಶಕ್ತಿಗಳ ಆಗರವಾಗಿದ್ದು, ಅದನ್ನು ನಾಶಪಡಿಸದೆ ಮೋಕ್ಷ ದುಸ್ಸಾಧ್ಯವೆಂಬುದನ್ನು ಅರಿತು, ಚಾರುಕೀರ್ತಿಮುನಿಯು ಸಮಾಧಿಯನ್ನು ಅಂಗೀಕರಿಸಿದನು.[73] ಸ್ವರ್ಗಸೌಧದಲ್ಲಿಯ ದಿವ್ಯಾನಂದವನ್ನು ಸವಿಯಲೋಸುಗ ಮುನಿ ರಾಮಚಂದ್ರನು ತನ್ನ ಜೀವನವನ್ನು ಅಂತ್ಯಗೊಳಿಸಲಿಚ್ಛಿಸಿದನು.[74] ಸರ್ಪ ಕಚ್ಚಿದಾಗ ಅಕ್ಷಯ ಕೀರ್ತಿಯು,[75] ದುಸ್ಸಹ ಅನಾರೋಗ್ಯದಿಂದ ಬಳಲುತ್ತಿದ್ದಾಗ ಬಾಳಚಂದ್ರನು,[76] ದುಃಖದಲ್ಲಿ ಮುಳುಗಿದಾಗ ಮಾಚಿಕಬ್ಬೆಯು,[77] ಜೀವನವನ್ನು ಅಂತ್ಯ ಗೊಳಿಸಲು ಸಮರ್ಥ ಕಾರಣಗಳನ್ನು ಕಂಡುಕೊಂಡರು.

68. ಭಾರ್ಗವ, *ಉಪರೋಕ್ತ*, ಪು. 140.
69. ಅದೇ, ಪು. 178.
70. ಎ ಕ II , 1, ಅನುಕ್ರಮವಾಗಿ 1, 85, 86.
71. 98.
72. 364.
73. ಅದೇ.
74. 72.
75. 24.
76. 559.
77. 176.

ಇವೆಲ್ಲ ಉದಾಹರಣೆಗಳು ಭಾವಾವೇಶ ರಹಿತ ಹಾಗೂ ದೈಹಿಕ ಮತ್ತು ಬೌದ್ಧಿಕ ಸಮತೋಲನವನ್ನು ಕದಡದೆ ಇದ್ದ ಪರಿಸ್ಥಿತಿಗಳಲ್ಲಿ, ಸ್ವ-ಇಚ್ಛೆಯಿಂದ ಕೈಕೊಂಡ ನಿರ್ಣಯಗಳಾಗಿದ್ದವೆಂಬುದು ಸ್ಪಷ್ಟ. ಆದರೆ, ಸಮಾಧಿಯನ್ನು ಆತ್ಮಹತ್ಯೆಯಿಂದ ಬೇರ್ಪಡಿಸುವುದು ಮರಣ ಪ್ರೇರಣೆಗಿಂತ ಹೆಚ್ಚಾಗಿ ಮರಣ ವಿಧಾನವಾಗಿದೆ. ಸಮಾಧಿ ವ್ರತನಿರತನು ಬಲವಂತ ಕೃತ್ಯಗಳನ್ನೆಸಗಿಕೊಂಡು ತನ್ನ ದೇಹಕ್ಕೆ ಅಪಾಯ ಮಾಡಿಕೊಳ್ಳಲು ಅನುಮತಿಯಿರಲಿಲ್ಲ. ಏಕೆಂದರೆ, ಜೀವನ ಪೋಷಣೆಯ ಮೂಲಾಧಾರವನ್ನೇ ನಿರಾಕರಿಸಿ, ಅಂತ್ಯಗೊಳ್ಳುವ ಹಂತದವರೆಗೆ ಅವನು ದೇಹವನ್ನು ದಂಡಿಸಬೇಕಿತ್ತು. ಅಂದರೆ, ಆತ್ಮಹತ್ಯೆಯಲ್ಲಿ ಅನಿವಾರ್ಯವಾಗಿರುವ ದೈಹಿಕ ಆಘಾತ ಮತ್ತು ಆವೇಶಾತ್ಮಕ ಪ್ರೇರಣೆಗಳು ಸಮಾಧಿ ಮರಣದಲ್ಲಿ ಎಳ್ಳಷ್ಟೂ ಇರಬಾರದೆಂದರ್ಥ. ಭಕ್ತನೊಬ್ಬನು ಬೆಳ್ಗೊಳದ ಬಾಹುಬಲಿ ಮಹಾವಿಗ್ರಹವನ್ನು ಕಂಡ ಮೇಲೆ ಇನ್ನು ಜೀವಿಸುವುದು ಅರ್ಥಶೂನ್ಯವೆಂದು ಮನದಂದು ಜೀವನ ಮುಕ್ತಿಗೊಳಿಸಿಕೊಂಡ ಒಂದು ನಿದರ್ಶನ ದಾಖಲಾಗಿದೆ.[78] ಅಂದರೆ, ಒಂದು ಬಗೆಯ ಸಿದ್ಧಿ ಪ್ರಾಪ್ತಿಯ ನಂತರ ಈ ನಿರ್ಣಯ ತೆಗೆದುಕೊಂಡದ್ದನ್ನು, ಆ ನಂತರ ಜೀವನ ಮುಂದುವರೆಸಲು ಯಾವುದೇ ಕಾರಣವಿಲ್ಲವೆಂದು ಅವನು ಮನಗಂಡದ್ದನ್ನು ಇಲ್ಲಿ ಸ್ಪಷ್ಟಗೊಳಿಸಲಾಗಿದೆ.

ಪ್ರಖ್ಯಾತ ಮರಣಗಳು : 12ನೆಯ ಶತಮಾನಕ್ಕಿಂತ ಮುಂಚಿನ ಕಾಲದ ಶ್ರಮಣ-ಕಂತಿಯರು, ಶ್ರಾವಕ-ಶ್ರಾವಕಿಯರು, ತಮ್ಮ ಅಂತ್ಯವನ್ನು ಸಾಧಿಸಿಕೊಳ್ಳಲೆಂದೇ ಈ ಪುಣ್ಯಕ್ಷೇತ್ರಕ್ಕೆ ಬಂದದ್ದು ಸುಸ್ಪಷ್ಟ. ಕೆಲವರು ತಮ್ಮ ಮರಣದ ಮುಸ್ಸಂಜೆಯಲ್ಲಿ ಬಂದರೆ ಇನ್ನು ಕೆಲವರು ಅದಕ್ಕಿಂತ ಸ್ವಲ್ಪ ಮುಂಚೆ ಬಂದು ಕೊನೆಯುಸಿರೆಳೆಯುವವರೆಗೂ ಇಲ್ಲಿ ಉಳಿದರು. ಬೆಳ್ಗೊಳವು ನೆಲೆಸುನಾಡಿನ ಕೇಂದ್ರವಾದಾಗ ಇದು ಸಂಪೂರ್ಣ ಬದಲಾಯಿತು.

ಮೊದಲ ಮರಣದ ಐತಿಹಾಸಿಕತೆ : ಈಗಾಗಲೆ ಗಮನಿಸಿದಂತೆ, ಶ್ರವಣಬೆಳ್ಗೊಳದ ಇತಿಹಾಸವು ಶ್ರಮಣನೊಬ್ಬನ ಸಮಾಧಿ ಮರಣದಿಂದ ಪ್ರಾರಂಭಗೊಳ್ಳುವುದು. ಐತಿಹ್ಯವು ಈ ಶ್ರೇಯಸ್ಸನ್ನು ಭದ್ರಬಾಹುವಿಗೆ (ಕ್ರಿ.ಪೂ. 3ನೆಯ ಶತಮಾನ) ಕೊಟ್ಟರೆ, ಸಮಕಾಲೀನ ಶಾಸನಗಳು ಮುನಿ ಪ್ರಭಾಚಂದ್ರನಿಗೆ (ಕ್ರಿ. ಶ. 7ನೆಯ ಶತಮಾನ)[79] ನೀಡುವುವು. ಬೆಳ್ಗೊಳಕ್ಕೆ ಭದ್ರಬಾಹು-ಚಂದ್ರಗುಪ್ತರು ವಲಸೆ ಬಂದುದನ್ನು ಮತ್ತು ಪವಿತ್ರ ಕಳ್ವಪ್ಪುವಿನ ಮೇಲೆ ಸಮಾಧಿ ಮರಣದಿಂದ ಜೀವನವನ್ನು ಅಂತ್ಯಗೊಳಿಸಿದುದನ್ನು ಬರಿ ದಂತ ಕಥೆಯೆಂದು ತಳ್ಳಿ ಹಾಕುವಂತಿಲ್ಲ. ಈ ಘಟನೆಯನ್ನು ಇಲ್ಲಿಯ ಅತಿ ಪ್ರಾಚೀನ ಶಾಸನವಲ್ಲದೆ ಇನ್ನೂ ಕೆಲವು

78. 365.

79. 1.

ಆಕರಗಳು ದೃಢಪಡಿಸಿರುವುವು.[80] 7ನೆಯ ಶತಮಾನದ ನಂತರದ ಕನಿಷ್ಠ ಆರು ಶಾಸನಗಳು ಈ ಘಟನೆಯನ್ನು ಸ್ಮರಿಸುವುವು.[81] ಶ್ರೀರಂಗಪಟ್ಟಣದ ಒಂದು ಮತ್ತು 9ನೆಯ ಶತಮಾನದವೆಂದು ಬಗೆಯಲಾದ ಇನ್ನೆರಡು ಶಾಸನಗಳು ಅದಕ್ಕೆ ಆಧಾರ ಒದಗಿಸುವುವು.[82] ಚಿಕ್ಕಬೆಟ್ಟದ ಮೇಲಿರುವ ಭದ್ರಬಾಹು ಗುಹೆ ಮತ್ತು ಚಂದ್ರಗುಪ್ತ ಬಸದಿಗಳೂ ಇದಕ್ಕೆ ಪರೋಕ್ಷವಾಗಿ ಪ್ರಮಾಣ ಒದಗಿಸುವುವು. ಸುಮಾರು 700ರಷ್ಟೊತ್ತಿಗೆ ಈ ಬೆಟ್ಟವು ಭದ್ರಬಾಹು ಮತ್ತು ಚಂದ್ರಗುಪ್ತರ ಹೆಸರುಗಳೊಂದಿಗೆ ನಿಕಟವಾಗಿಸಿಕೊಂಡು ತನ್ನ ಪಾವಿತ್ರ್ಯತೆ ಮತ್ತು ಪ್ರಸಿದ್ಧಿಯನ್ನು ನೂರ್ಮಡಿಗೊಳಿಸಿಕೊಂಡಿತ್ತೆಂಬುದರಲ್ಲಿ ಅನುಮಾನವಿಲ್ಲ.

ಮರಣವನ್ನರಿಸಿ ಬಂದ ಪ್ರಾಚೀನ ವಲಸೆಗಾರರು: ಸುಮಾರು 600 ರಿಂದ ಬೆಳ್ಗೊಳವು ಹಲವಾರು ಮುನಿ, ಕಂತಿ, ಗುಡ್ಡರನ್ನು ಆಕರ್ಷಿಸಿತು. 7ನೆಯ ಶತಮಾನದಲ್ಲಿ ಹೀಗೆ ಬಂದ ಪ್ರಮುಖರೆಂದರೆ ದಕ್ಷಿಣ ಮಧುರೆಯ ಅಕ್ಷಯಕೀರ್ತಿ,[83] ಕಳಂತೂರಿನ ವಿಶೋಕಭಟಾರ ಮತ್ತು ಪೆಗ್ಗೊರವ,[84] ಚಿತ್ತೂರಿನ (ಅಡೆಯೆರೆ ನಾಡಿನ) ನಾಗಮತಿಗಂತಿ[85] ಮತ್ತು ಇಣುಂಗೂರಿನ ಮೆಳ್ಳಿಗವಾಸಗುರವ.[86] ಇವರೆಲ್ಲ ದೂರದ ಕೇಂದ್ರಗಳಿಂದ ಬಂದವರು. ಕರ್ನಾಟಕ ರಾಜ್ಯದಲ್ಲಿರುವ ಕಿತ್ತೂರು, ಮಾಲನೂರು, ತರೆಕಾಡು, ಮೋರಿಂಗೆರೆ, ಐಹೊಳೆ, ಮುಂತಾದ ಕೇಂದ್ರಗಳಿಂದಲೂ ಹಲವರು ಬಂದಿದ್ದರು.[87] ಈಗಿನ ಧಾರವಾಡ ಜಿಲ್ಲೆಯ(?) ನವಿಲೂರು ಅಥವಾ ಮಯೂರಗ್ರಾಮವು 7ನೆಯ ಶತಮಾನದಲ್ಲಿ ಮಹತ್ವದ ಜೈನ ಕೇಂದ್ರವಾಗಿತ್ತೆಂದು ಕಾಣುವುದು. ಮಯೂರಗ್ರಾಮ ಸಂಘದ ಆಜಿಶಾಖೆಯ ಅನೇಕ ಶ್ರಮಣ-ಕಂತಿಯರು ಬೆಳ್ಗೊಳಕ್ಕೆ ಯಾತ್ರೆ ಬಂದರೆಂದು ತಿಳಿಸಲಾಗಿದೆ.[88] ಈ ಸಂಘದ ರಜನೀಮತಿ, ಅನಂತಮತಿ, ಗುಣಮತಿ, ಪ್ರಭಾವತಿ, ಅಮಿತಮತಿ ತಮ್ಮ ಅಂತಿಮ ದಿನಗಳನ್ನು ಕಳ್ಬಪ್ಪುವಿನ ಮೇಲೆ ಕಳೆದರು.[89] ಶ್ರೀಸಂಘದ ವೃಷಭಣಂದಿ, ಸೌಂದರ್ಯಾರ್ಯ, ಮೇಘಣಂದಿ, ಪುಷ್ಪ ಸೇನಾಚಾರಿಗಳಲ್ಲದೆ ಮತ್ತೊಬ್ಬ ಆಚಾರ್ಯನು ಈ ಗ್ರಾಮದಿಂದ ಇದೇ ಉದ್ದೇಶ ಸಾಧಿಸಲು ಬಂದರೆಂದೂ

80. ಶೆಟ್ಟರ್, ಉಪರೋಕ್ತ, ಪು. 5.
81. ಎಕ II, 1 (ಸು. 600), 254 (ಸು. 11ನೆಯ ಶತಮಾನ), 77 (1129), 71 (1163) ಮತ್ತು 364 (1432).
82. ಎಕ III, ಶ್ರೀಪ. 147 ಮತ್ತು 148.
83. ಎಕ II, 24.
84. 104 ಮತ್ತು 25.
85. 23.
86. 31.
87. ಅನುಕ್ರಮವಾಗಿ 27; 28, 36, 174 ಮತ್ತು 208.
88. 112.
89. 112, 113, 129 ಮತ್ತು 132.

ಹೇಳಲಾಗಿದೆ.[90] ಹಾಗೆ ನೋಡಿದರೆ, 12ನೆಯ ಶತಮಾನಕ್ಕಿಂತ ಮುಂಚೆ ನಿಲ್ಲಿಸಿದ ಹೆಚ್ಚು ಕಡಿಮೆ ಎಲ್ಲ 73 ನಿಸಿಧಿಗಳು ಹೊರಗಿನಿಂದ ಬಂದ ಶ್ರಮಣ-ಕಂತಿಯರ ಮರಣವನ್ನು ಸ್ಮರಿಸುವುವು.

ಸ್ವರ್ಗದಲ್ಲಿ ಪುಣ್ಯಫಲ : 12ನೆಯ ಶತಮಾನದ ನಂತರವೂ ಇಚ್ಛಾಮರಣ ಬಯಸಿ ಬಂದವರಲ್ಲಿ ಸ್ಥಳೀಯರಿಗಿಂತ ಹೊರಗಿನವರೇ ಅಧಿಕ ಸಂಖ್ಯೆಯಲ್ಲಿದ್ದರು. ಉದಾಹರಣೆಗೆ, ಆಳರಸರು, ಆಡಳಿತಾಧಿಕಾರಿಗಳು, ವರ್ತಕರು, ಇಲ್ಲವೆ ಇಂಥವರ ಕುಟುಂಬದವರಾದ ಶಾಂತಲೆ, ಮಾಚಿಕಬ್ಬೆ, ಗಂಗರಾಜ, ಪೋಚಿಕಬ್ಬೆ, ದೇಮವ್ವೆ, ಹುಳ್ಳರಾಜ, ದೇವರಾಜ, ಬಲದೇವ, ನಾಗವರ್ಮ, ಪೆರ್ಗ್ಗಡೆ ಸಿಂಗಿಮಯ್ಯ, ಹೊಯ್ಸಳಸೆಟ್ಟಿ, ಮುಂತಾದವರು ತಮ್ಮ ಜೀವನದ ಮುಸ್ಸಂಜೆಯಲ್ಲಿ ಈ ಬೆಟ್ಟಕ್ಕೆ ಬಂದಿದ್ದರು. ಇವರಲ್ಲಿ ಕೆಲವರು ನಿಸಿಧಿಗಳ ಮೂಲಕ ತಮ್ಮ ಸಂಬಂಧಿಕರನ್ನು ಗೌರವಿಸಲು ಇಲ್ಲಿಗೆ ಬಂದಿದ್ದರು. ಮಾಚಿಕಬ್ಬೆ ಬೆಳ್ಗೊಳದಲ್ಲಿ ಸುಮಾರು ಒಂದು ತಿಂಗಳವರೆಗೆ ವ್ರತವನ್ನಾಚರಿಸಿದಳೆಂದು ತಿಳಿಸಲಾಗಿದೆ.[91] ಆದರೆ, ಪೆರ್ಗ್ಗಡೆ ಸಿಂಗಿಮಯ್ಯ ಸಮಾಧಿವ್ರತ ಕೈಕೊಂಡು ಮಡಿದುದು ಪ್ರಶ್ನಾರ್ಹವಾಗಿರುವಂತೆಯೆ ಅವನು ಬೆಳ್ಗೊಳದಲ್ಲಿಯೇ ಕೊನೆಯುಸಿರೆಳೆದನೆಂಬುದಕ್ಕೆ ನಿರ್ದಿಷ್ಟ ಆಧಾರ ದೊರೆಯದಾಗಿದೆ.[92] ಮಾಚಿಕಬ್ಬೆಯ ಗುರು ಪ್ರಭಾಚಂದ್ರದೇವನು ಇಲ್ಲಿ ನಿಸಿಧಿಯನ್ನು ಪಡೆದನು; ಆದರೆ, ಸಮಾಧಿವ್ರತವನ್ನಾಚರಿಸಿ ಬೆಳ್ಗೊಳದಲ್ಲಿ ಅವನು ಮಡಿದನೆಂದು ಸಿದ್ಧಪಡಿಸಲು ಆಗುತ್ತಿಲ್ಲ.

ಸಮಾಧಿ ವ್ರತಗಳನ್ನಾಚರಿಸದಿದ್ದ ಕೆಲವು ವರ್ಚಸ್ವೀ ಮುನಿಗಳನ್ನು ಮತ್ತು ಶ್ರಾವಕಿಯರನ್ನು ಇಲ್ಲಿ ಗೌರವಿಸಲ್ಪಟ್ಟ ಸಾಧ್ಯತೆಗಳುಂಟು.[93] ಇದನ್ನು ಮಾವನಗಂಧಹಸ್ತಿ ಪಿಟ್ಟುಗ, ದಂಡನಾಯಕ ಬೂಚಣ, ನಯಕೀರ್ತಿಮುನಿ, ದೇವಕೀರ್ತಿ, ಮತ್ತಿತರರ ನಿಸಿಧಿಗಳು ದೃಢೀಕರಿಸುವುವು.[94] ಅವರಲ್ಲಿ ಕೆಲವರು ಸಮಾಧಿವ್ರತವನ್ನು ಆಚರಿಸಿ ಮಡಿದರೂ ಅವರದನ್ನು ಈ ಪುಣ್ಯಕೇಂದ್ರದಲ್ಲಿಯೆ ಆಚರಿಸಿದರೆಂದು ಬಗೆಯುವಂತಿಲ್ಲ. ಮುನಿಗಳಾದ ದೇವಕೀರ್ತಿ ಪಂಡಿತದೇವ, ಶುಭಚಂದ್ರ, ನಯಕೀರ್ತಿ, ಭಾನುಕೀರ್ತಿ,[95] ಮೇಘಚಂದ್ರದೇವ, ಗುಡ್ಡಗುಡ್ಡಿಯರಾದ ಪೋಚಿಕಬ್ಬೆ, ದಂಡನಾಯಕ ಬೂಚಣ, ಚಾಮುಂಡನ ಮಡದಿ ದೇಮತಿ, ಗಂಗರಾಜನ ಮಡದಿ ಲಕ್ಷ್ಮಿ ಮತ್ತು ರಾಷ್ಟ್ರಕೂಟ ಅರಸ ಇಮ್ಮಡಿ ಇಂದ್ರ,[96] ಮುಂತಾದವರು ವ್ರತವನ್ನು ಆಚರಿಸಿದರೆಂಬುದರ ಬಗ್ಗೆ ಮತ್ತು ಬೆಳ್ಗೊಳದಲ್ಲಿಯೆ ಮಡಿದರೆಂಬುದರ ಬಗ್ಗೆ

90. ಅನುಕ್ರಮವಾಗಿ 121, 123, 124, 118 ಮತ್ತು 117.
91. 176.
92. 175.
93. 173.
94. 165, 155, 73 ಮತ್ತು 70-71.
95. ಅನುಕ್ರಮವಾಗಿ 70, 72, 73, 81.
96. ಅನುಕ್ರಮವಾಗಿ 136, 155, 156, 158, 157 ಮತ್ತು 163.

ಖಚಿತ ಮಾಹಿತಿ ದೊರೆಯುವುದಿಲ್ಲ. ತಾವು ಹೊಂದಿದ್ದ ಉನ್ನತ ಆಧ್ಯಾತ್ಮಿಕ ಅಥವಾ ಸಾಮಾಜಿಕ ಅಂತಸ್ತಿನ ಬಲದಿಂದ ಇವರಲ್ಲಿ ಕೆಲವರು ನಿಸಿಧಿಗಳನ್ನು ಪಡೆದುಕೊಂಡಿರಬಹುದೆಂದೆನಿಸುವುದು. ಇನ್ನು ಕೆಲವರು ಬಹುಶಃ ವರ್ಚಸ್ವಿ ಅಥವಾ ಶ್ರೀಮಂತ ಶಿಷ್ಯರನ್ನು ಪಡೆದ ಅದೃಷ್ಟಶಾಲಿಗಳಾಗಿದ್ದರು. ತಮ್ಮ ಹಿರಿಯರನ್ನು ಮತ್ತು ಸಹೋದ್ಯೋಗಿಗಳನ್ನು ಈ ಪುಣ್ಯಕೇಂದ್ರದಲ್ಲಿ ನಿಸಿಧಿಗಳ ಮೂಲಕ ಗೌರವಿಸಿದರೆ ಮೃತರಿಗೆ ಸ್ವರ್ಗದಲ್ಲಿ ಪುಣ್ಯ ಪ್ರಾಪ್ತಿಯಾಗುವುದೆಂದು ಈ ಕಾಲದ ನಂಬಿಕೆಯಾಯಿತ್ತೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾದುದು ಅವಶ್ಯಕ.

ವಾಡಿಕೆಯ ಗುಣಗಾನ: ಸಮಾಧಿವ್ರತದಿಂದ ಸಾವನ್ನಪ್ಪಿದವರ ಗೌರವಾರ್ಥ, ಅವರು ಅಂತ್ಯ ಸಾಧಿಸಿದ ಸ್ಥಳದಲ್ಲಿಯೇ ಸಾಮಾನ್ಯವಾಗಿ ನಿಸಿಧಿ ಸ್ಮಾರಕಗಳನ್ನು ನಿಲ್ಲಿಸಲಾಗುತ್ತಿತ್ತು. ಆದರೆ ಬೆಳ್ಗೊಳದಲ್ಲಿ ಮರಣ ಹೊಂದದವರನ್ನಿಲ್ಲಿ ಗೌರವಿಸಿದ ಅನೇಕ ನಿದರ್ಶನಗಳೂ ದೊರೆಯುವುವು. ಉದಾಹರಣೆಗೆ, ಮಾರಸಿಂಹನು ಮೂರು ದಿನ ಸಮಾಧಿ ವ್ರತವನ್ನಾಚರಿಸಿ, ಈಗಿನ ಹಾವೇರಿ ಜಿಲ್ಲೆಯ ಬಂಕಾಪುರದಲ್ಲಿ ಮಡಿದನು. ಆದರೆ, ಚಿಕ್ಕಬೆಟ್ಟದ ಮೇಲೆ ಒಂದು ಮಾನಸ್ತಂಭವನ್ನು (ಈಗಿನ ಕೂಗೆಬ್ರಹ್ಮದೇವ ಸ್ತಂಭ) ನಿಲ್ಲಿಸಿ, ಅವನನ್ನು ಗೌರವಿಸಲಾಯಿತು.[97] ಬಳ್ಳಾರಿ ಜಿಲ್ಲೆಯ ಮೋರಿಂಗೆರೆಯಲ್ಲಿ ದಂಡನಾಯಕ ಬಲದೇವನು ಮಡಿದಾಗ ಅವನ ಸಹೋದರಿ ಏಚಿಯಯಕ್ಕಳು ಚಿಕ್ಕಬೆಟ್ಟದ ಮೇಲೆ ಅವನ ಗೌರವಾರ್ಥ ನಿಸಿಧಿಯನ್ನು ನಿಲ್ಲಿಸಿ, ಕೆರೆ ಮತ್ತು ಒಮ್ಮೆಳಿಗೆಹಳದ ಪಟ್ಟಸಾಲೆಯನ್ನು ಕಟ್ಟಿಸಿ, ಈ ಸ್ಮಾರಕೋತ್ಸವದ ಅಂಗವಾಗಿ ಭೂದತ್ತಿಗಳನ್ನು ಬಿಟ್ಟಳೆಂದು ಒಂದು ಶಾಸನ ದಾಖಲಿಸಿದೆ.[98] ತೀರ್ಥಯಾತ್ರೆಯ ನಿಮಿತ್ತ ಉತ್ತರ ಕರ್ನಾಟಕದ ಭಾಗಕ್ಕೆ ಹೋಗಿದ್ದ ಭಾನುಕೀರ್ತಿಯು ತನ್ನ ಪ್ರಯಾಣ ಮಧ್ಯದಲ್ಲಿ ಇಂದಿನ ಬೆಳಗಾವಿ ಜಿಲ್ಲೆಯ ಹೂವಿನಬಾಗಿಯಲ್ಲಿ ಸನ್ಯಸನ ವ್ರತವನ್ನಾಚರಿಸಿ ಮಡಿದಾಗ, ಅವನ ಗುಡ್ಡಿ ಹೆಗ್ಗಡತಿ ಬಾಗಣಬ್ಬೆಯು ಚಿಕ್ಕಬೆಟ್ಟದ ಮೇಲೆ ಅವನ ಗೌರವಾರ್ಥ ನಿಸಿಧಿಯನ್ನು ನಿಲ್ಲಿಸಿದಳು. ಈ ನಿಸಿಧಿಗಲ್ಲು ಇಂದು ಚಂದ್ರಗುಪ್ತ-ಕತ್ತಲೆ ಬಸದಿಗಳ ಸಭಾಂಗಣದಲ್ಲಿದೆ.[99]

ಸ್ಮಾರಕ ಪಡೆದವರು ಕಳ್ಬಪ್ಪುವಿನ ಮೇಲೆ ಸಮಾಧಿ ವ್ರತವನ್ನಾಚರಿಸಿ ಅಂತ್ಯ ಸಾಧಿಸಿದರೆಂದು 7ರಿಂದ 9ನೆಯ ಶತಮಾನದವರೆಗಿನ ಶಾಸನಗಳು ಸ್ಪಷ್ಟವಾಗಿ ತಿಳಿಸುವುವು. ಆದರೆ ವ್ರತಾಚರಣೆಯನ್ನು ಹಾಗೂ ಮರಣತಾಣಗಳನ್ನು ಗುರುತಿಸುವ ಸ್ಪಷ್ಟ ದಾಖಲೆಗಳು 11-12ನೆಯ ಶತಮಾನಗಳ ನಂತರದ ದಾಖಲೆಗಳಲ್ಲಿ ವಿರಳಗೊಳ್ಳುವುವು. ಸಮಾಧಿ ವ್ರತವನ್ನಾಚರಿಸಿದವರ ಮತ್ತು ಬೆಳ್ಗೊಳದಲ್ಲಿ ಸಾವನ್ನಪ್ಪಿದವರ ಗೌರವಾರ್ಥ ಮಾತ್ರ ಮೊದ

97. 64.
98. 174.
99. 81.


ಮೊದಲು ನಿಸಿಧಿಗಳನ್ನು ನಡೆಸಲಾಗುತ್ತಿದ್ದುದು ಕಾಲಕಳೆದಂತೆ ಅದೊಂದು ಸಾಂಪ್ರದಾಯಿಕ ಕ್ರಿಯೆಯಾಗಿ, ಸಹಜವಾಗಿ ಮಡಿದವರನ್ನು, ಅಥವಾ ಬೆಳ್ಗೊಳದ ಹೊರಗೆ ಮಡಿದವರನ್ನು, ಈ ಗೌರವಕ್ಕೆ ಅರ್ಹರೆಂದು ಬಗೆಯಲಾಯಿತೆಂದು ತೋರುವುದು. ಶವ ಸಂಸ್ಕಾರ ಮಾಡಿದ ಸ್ಥಳದಲ್ಲಿಯೇ ಶಿಲಾಕೂಟವನ್ನು ನಿರ್ಮಿಸುವ ವಾಡಿಕೆಯು ಬೆಳ್ಗೊಳದಲ್ಲಿ ರೂಢಿಯಲ್ಲಿತ್ತೆಂದು ಸುಮಾರು 1214ರ ಒಂದು ಶಾಸನದಿಂದ ತಿಳಿದುಬರುವುದು; ಆದರೆ, ಈ ಶಾಸನದಲ್ಲಿ ಸ್ಮಾರಕವನ್ನು 'ನಿಸಿಧಿ'ಯೆಂದು ಗುರುತಿಸಲಾಗಿಲ್ಲ.[100]

ವ್ರತಾಚರಣೆಯ ನಾಲ್ಕು ಮಹೋನ್ನತ ಉದಾಹರಣೆಗಳನ್ನು ಇಲ್ಲಿ ನಿರೂಪಿಸಲಾಗಿದೆ : ಇವುಗಳಲ್ಲಿ ಮೂರು 12ನೆಯ ಶತಮಾನದವಾದರೆ, ಒಂದು 15ನೆಯ ಶತಮಾನದ್ದಾಗಿದೆ. ಇವುಗಳಲ್ಲೆರಡು ನಿಸಿಧಿಗಳು ಮುನಿಗಳ ಗೌರವಾರ್ಥ, ಇನ್ನೆರಡು ಗುಡ್ಡರ ಗೌರವಾರ್ಥ, ನಿಲ್ಲಿಸಿದವುಗಳು. ಒಬ್ಬ ಸ್ತ್ರೀಯನ್ನು ಬಿಟ್ಟು ಇವೆಲ್ಲ ಪುರುಷರ ಮರಣಕ್ಕೆ ಸಂಬಂಧಿಸಿವೆ.

ಶ್ರಮಣ ಮಲ್ಲಿಷೇಣ ಮಲಧಾರಿದೇವ (1129) : ಗೌತಮಗಣಧರ, ಭದ್ರಬಾಹು, ಚಂದ್ರಗುಪ್ತ ಮತ್ತು ಸಮಂತಭದ್ರ ಮುನಿಗಳ ಗುರುವಂಶದಲ್ಲಿ ಬಂದ ಮಲಧಾರಿದೇವನ[101] ಪಾದಗಳನ್ನು ರಾಜಮಹಾರಾಜರ ಮುಕುಟಗಳು ಪ್ರಕಾಶಮಾನಗೊಳಿಸಿದವು. ನಿಜ ಬಗೆಯ ಆತ್ಮಸಂಯಮ ಹೊಂದಿದ್ದ ಇವನು ಸದಾ ಅಜ್ಞಾನದ ವಿರುದ್ಧ ಕಾದಾಡುತ್ತಿದ್ದ. ತಾನು ಮಲವನ್ನು ಧರಿಸಿದ್ದರೂ, ಭಕ್ತರ ಮನವನ್ನಾವರಿಸಿದ್ದ ಮೈಲಿಗೆಯನ್ನು ಅವನು ಶುಚಿಗೊಳಿಸಬಲ್ಲವನಾಗಿದ್ದ. ಮಹಾನೇಮನಿಷ್ಠೆಯ ಚೇತನವಾಗಿದ್ದ ಈ ಮುನಿಯು, ಆಂತರಿಕ ಪರಿಶುದ್ಧತೆಯನ್ನು ಸಾಧಿಸಿ, ತನ್ನ ದೇಹದ ಮೇಲೆಲ್ಲ ಮಲವನ್ನು ಧರಿಸಿಕೊಂಡಿದ್ದನಲ್ಲದೆ ಮೂಲೋಕದ ದೇವಿಯನ್ನು ಪಡೆಯಲು ಅವನು ಪರಿಶುದ್ಧತೆಗೆ ನಿಷ್ಠನಾಗಿದ್ದನು. ಲೋಕದ ಕಷ್ಟವನ್ನು ನಿವಾರಿಸಲು ಅವನು ತಪಸ್ಸು ಕೈಕೊಂಡ. ಸಹಿಷ್ಣುತೆ ಮತ್ತು ಕ್ಷಮಾಗುಣದಲ್ಲಿ ಸರಿದೊರೆಯಿಲ್ಲದವನಾದ ಈತನು ಪ್ರೀತಿ, ದಯೆ, ನ್ಯಾಯದ ಸಾಕಾರಮೂರ್ತಿಯೆನಿಸಿದ್ದ. ಆಮಿಷಗಳಿಂದ ಮುಕ್ತನಾಗಿದ್ದ ಸಜ್ಜನರು ಶ್ಲಾಘಿಸುತ್ತಿದ್ದ ಮತ್ತು ಮುನಿಗಳ ಗೌರವಕ್ಕೆ ಪಾತ್ರನಾಗಿದ್ದ ಮಲಧಾರಿದೇವನನ್ನು ಶ್ರಮಣರೆಲ್ಲ ಆಗಮಗಳ ವ್ಯಾಖ್ಯಾನಕ್ಕಾಗಿ ಅರಸಿ ಬರುತ್ತಿದ್ದರು.

ರುಜುವಾತುಪಟ್ಟ ಅವನ ಚಿತ್ತ ಪರಿಪಕ್ವತೆ : ಮುನಿ ಮಲ್ಲಿಷೇಣನು ಧವಳಸರಸ್ಸಿನಲ್ಲಿ ತಪಸ್ಸಿನ ಕೊನೆಯ ಹಂತವನ್ನು ಆಚರಿಸಿದನು. ವಿರಕ್ತಿ ಮತ್ತು ಧ್ಯಾನಗಳಿಂದ ಔನ್ನತ್ಯಕ್ಕೇರಿದ ಅವನು ಮನ್ಮಥನನ್ನು ಸಂಪೂರ್ಣವಾಗಿ ನಾಶಪಡಿಸಲೆಂಬಂತೆ ನಶ್ವರ ದೇಹವನ್ನು ತ್ಯಜಿಸಿದನು. ಪ್ರಖ್ಯಾತ ಮುನಿ ಅಜಿತಸೇನ ಪಂಡಿತದೇವನ ದಿವ್ಯ ಪಾದಪದ್ಮಗಳಲ್ಲಿ ದುಂಬಿಯಾಗಿ,

100. 539.
101. 77.



28 ಮಲ್ಲಿಷೇಣ ಮಲಧಾರಿದೇವನ ಸಲ್ಲೇಖನಾ (77)

ಜಿನಾಗಮಗಳಲ್ಲಿ ಪ್ರತಿಪಾದಿಸಿದ ಸಲ್ಲೇಖನಾ ವ್ರತದನ್ವಯ, ಅವನು ದೇಹವನ್ನು ತ್ಯಜಿಸಲು ಅಣಿಯಾದನು. ಬಳಲಿಕೆಯ ಯಾವ ಚಿಹ್ನೆಯನ್ನೂ ತೋರಗೊಡದೆ, ಮರಣಶಯ್ಯೆಯಲ್ಲಿದ್ದಾಗಲೂ ಒಂದು ಸ್ತೋತ್ರವನ್ನು ರಚಿಸಿ ತನ್ನ ಮಾನಸಿಕ ಪರಿಪಕ್ವತೆಯನ್ನು ರುಜುವಾತುಪಡಿಸಿದನು. ಈ ಸ್ತೊತ್ರವನ್ನು ಕೇಳಿ ಸಮಾಧಿವ್ರತವನ್ನು ವೀಕ್ಷಿಸಲು ನೆರೆದ ಸಮಸ್ತ ಗಣವು ಆನಂದ ಪರವಶವಾಯಿತು. ಅದು ಹೀಗಿತ್ತು :

ಆರಾಧ್ಯ ರತ್ನತ್ರಯಂ ಆಗಮೋಕ್ತಂ (ಆಗಮೋಕ್ತ ರತ್ನತ್ರಯಗಳನ್ನು ಪಡೆದು)
ವಿಧಾಯ ನಿಶ್ಶಲ್ಯಮ್ ಅಶೇಷ ಜಂತೋಃ (ಜೀವಜಂತುಗಳಿಗೆಲ್ಲಾ ನೋವುಂಟು ಮಾಡುವುದಕ್ಕೆ ವಿದಾಯ ಹೇಳಿ)
ಕ್ಷಮಾಮ್ ಚ ಕೃತ್ವಾ ಜಿನಪಾದಮೂಲೇ (ಜಿನಪಾದ ಮೂಲದಲ್ಲಿ ಕ್ಷಮೆ ಯಾಚಿಸಿ)
ದೇಹಮ್ ಪರಿತ್ಯಹ ದಿವ್ಯಂ ವಿಶಾಮಹಃ (ದೇಹ ತ್ಯಜಿಸಿ ಸ್ವರ್ಗ ಪ್ರವೇಶಿಸುವೆನು)

ಮೂರು ದಿನ ಕಾಲ ನಿರಸನಗೈದು ಮಾರ್ಚ್ 10, 1129ರ ರವಿವಾರದಂದು ಈ ಮುನಿಯು ದೇಹ ತ್ಯಾಗ ಮಾಡಿದನು.

ವಿಧಿ ವಿಧಾನದ ವಿಶ್ಲೇಷಣೆ : ಈ ಶಾಸನದಿಂದ ಹೊರಹೊಮ್ಮುವ ಸ್ವಾರಸ್ಯಕರ ವಿವರಗಳಲ್ಲಿ ಇವು ಗಮನಾರ್ಹವಾಗಿವೆ :

1. ಮೊದಲನೆಯದು ಸಮಾಧಿ ಕಾಲದಲ್ಲಿ ಗುರುವಿನ ಉಪಸ್ಥಿತಿ ಮತ್ತು ಮಾರ್ಗದರ್ಶನಕ್ಕೆ ಸಂಬಂಧಿಸಿದ್ದು. ಮಲ್ಲಿಷೇಣ ಮಲಧಾರಿದೇವನು ತನ್ನ ಗುರು ಅಜಿತಸೇನ ಪಂಡಿತದೇವನ ದಿವ್ಯ ಪಾದಗಳಲ್ಲಿ ಚಿತ್ತವನ್ನಿರಿಸಿ ಧವಳಸರಸ್ಸಿನಲ್ಲಿ ತಪಸ್ಸನ್ನಾಚರಿಸಿದನು.

2. ಎರಡನೆಯದು ಆಚರಣೆಗಳಿಗೆ ಸಂಬಂಧಿಸಿದ್ದು. ಈ ಮುನಿಯು ಜಿನಾಗಮಗಳಲ್ಲಿ ಪ್ರತಿಪಾದಿಸಿದ ಸಲ್ಲೇಖನಾ ಮಾರ್ಗವನ್ನನುಸರಿಸಿ ಮೂರು ದಿನ ನಿರಸನಗೈದನು.

3. ಮೂರನೆಯದು ಸಮಾಜದ ಪಾತ್ರ ಮತ್ತು ಪ್ರತಿಕ್ರಿಯೆಗೆ ಸಂಬಂಧಿಸಿದ್ದು. ಅವನ ಸಮಾಧಿಯನ್ನು ವೀಕ್ಷಿಸಲು ಮತ್ತು ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳಲು ಭಕ್ತರ, ಸಹೋದ್ಯೋಗಿಗಳ, ಅನುಯಾಯಿಗಳ ಸಮೂಹವೇ ಅವನು ಮರಣಹೊಂದಿದ ಸ್ಥಳದಲ್ಲಿ ನೆರೆದಿತ್ತು.

4. ನಾಲ್ಕನೆಯದು ಧ್ಯಾನಿಯು ತನ್ನ ಜೀವನದ ಮುಸ್ಸಂಜೆಯಲ್ಲಿ ಹೊಂದಿದ್ದ ದೈಹಿಕ ಅಥವಾ ಮಾನಸಿಕ ಜಾಗೃತಿಗೆ ಸಂಬಂಧಿಸಿದ್ದು. ಮಾನಸಿಕ ಪರಿಪಕ್ವತೆಯನ್ನು ಪ್ರದರ್ಶಿಸಲು ಮತ್ತು ನೆರೆದವರನ್ನೆಲ್ಲ ಇನ್ನಷ್ಟು ಹರ್ಷಗೊಳಿಸಲು, ಈ ಮುನಿಯು ತನ್ನ ದೇಹ ಶಕ್ತಿಯ ಕೊನೆಯ ಅಂಶವನ್ನು ವಿನಿಯೋಗಿಸಿ, ಶಾಂತ ಮನಸ್ಸಿನಿಂದ, ಸಮಾಧಿ ಗುರಿಯ ತತ್ವಸಾರವನ್ನು ಪ್ರಕಟಿಸುವ ಸ್ತೋತ್ರವೊಂದನ್ನು ರಚಿಸಿದನೆಂದು ಹೇಳಲಾಗಿದೆ.

5. ಕೊನೆಯದು ಅಂತಿಮ ಗುರಿಗೆ ಸಂಬಂಧಿಸಿದ್ದು. ತ್ರಿರತ್ನಗಳನ್ನು ಸಾಧಿಸಿ, ಅಹಿಂಸೆಯನ್ನಾಚರಿಸಿ, ಜಿನದೇವತೆಯ ಕ್ಷಮೆಯನ್ನು ಯಾಚಿಸುತ್ತಾ, ಧ್ಯಾನಿಯು ಸ್ವರ್ಗ ಸೇರಿದನೆಂದು ಸ್ಪಷ್ಟಗೊಳಿಸಲಾಗಿದೆ.

ಶ್ರಾವಕಿ ಮಾಚಿಕಬ್ಬೆ (1131) : ಬದುಕು ಅರ್ಥಹೀನ : ಬಲದೇವ ದಂಡನಾಯಕ ಮತ್ತು ಬಾಚಿಕಬ್ಬೆಯರ ಪುತ್ರಿಯಾದ ಮಾಚಿಕಬ್ಬೆಯು[102] ಶೈವನಾದ ಹಿರಿಯ ಪೆರ್ಗ್ಗಡೆ ಮಾರಸಿಂಗಯ್ಯನನ್ನು ವರಿಸಿದ್ದಳು. ಇವರ ಮಗಳಾದ ಶಾಂತಲೆಯು ಹೊಯ್ಸಳರಸ ವಿಷ್ಣುವರ್ಧನನ ಹಿರಿಯ ರಾಣಿಯಾದಳು. ತನ್ನ ತಂದೆ ತಾಯಿಗಳ ಮನೋವೈಶಾಲ್ಯತೆಯನ್ನು ಮತ್ತು ಪತಿಯ ಹೃದಯವೈಶಾಲ್ಯತೆಯನ್ನು ಮೇಳೈಸಿಕೊಂಡ ಶಾಂತಲೆಯು ಶ್ರೀ ವೈಷ್ಣವ, ಶೈವ ಮತ್ತು ಜೈನಧರ್ಮಗಳಿಗೆ ಸಮಾನ ಪೋಷಣೆ ಕೊಟ್ಟಳು. ಅವಳು ಚಿಕ್ಕಬೆಟ್ಟದ ಮೇಲೆ ಸವತಿಗಂಧವಾರಣ ಬಸದಿಯನ್ನು ಕಟ್ಟಿಸಿದರೆ, ಪ್ರಸಿದ್ಧ ಶೈವ ಕೇಂದ್ರವಾದ ಶಿವಗಂಗೆಯಲ್ಲಿ ಜೀವನವನ್ನು ಕೊನೆಗೊಳಿಸಿದಳು. ಆಗ ತಾನೇ ಪತಿಯನ್ನು ಕಳೆದುಕೊಂಡಿದ್ದ ಮಾಚಿಕಬ್ಬೆಯು ತನ್ನ ಒಬ್ಬಳೇ ಮಗಳ ಮರಣದಿಂದ ಎಷ್ಟೊಂದು ವ್ಯಾಕುಲಗೊಂಡಳೆಂದರೆ ಇನ್ನು ಜೀವಿಸುವುದು ಅರ್ಥಶೂನ್ಯ ಎಂದು ಅವಳು ಇತ್ಯರ್ಥಕ್ಕೆ ಬಂದಳು.

ಪರಿಪೂರ್ಣ ಶ್ರಾವಕಿ : 'ಸದ್ಗುಣಾಲಯ'ವಾಗಿದ್ದ ಮಾಚಿಕಬ್ಬೆಯು ತನ್ನ ದೇವತೆಗೆ, ಪತಿಗೆ ಮತ್ತು ಮುನಿಪಾದಗಳಿಗೆ ನಿಷ್ಠಳಾಗಿದ್ದ ಕಾರಣ ಅವಳನ್ನು ಪ್ರತಿಯೊಬ್ಬರೂ ಗೌರವಿಸಿ ಕೊಂಡಾಡುತಿದ್ದರು.

ಪ್ರೀತಿಯ ಮಗಳ ಮರಣ ವಾರ್ತೆ ಕೇಳಿದಾಗ 'ಮಹಾರಾಣಿಯೇ ದೇವರಲ್ಲಿ ಐಕ್ಯವಾದಾಗ, ನಾನೇಕೆ ಹಿಂದೆ ಉಳಿಯಲಿ?', ಎಂದು ಮಾಚಿಕಬ್ಬೆ ಉದ್ಗರಿಸಿದಳು.

102. 176.

ತನ್ನ ಆಶ್ರಿತರಿಗೆ ಸಮೃದ್ಧಿಯ ಸುಧೆ (ಬೇಡಿದುದೆಲ್ಲವನ್ನು ನೀಡುವ ಕಾಮಧೇನು) ಯಾಗಿದ್ದ ಅವಳು 'ಯಾರಿಗೇನು ಬೇಕು?'' ಎಂದು ಕೇಳುತ್ತಾ, ತನ್ನಲ್ಲಿದ್ದುದೆಲ್ಲವನ್ನೂ ಉದಾರ ಮನಸ್ಸಿನಿಂದ ವಿತರಿಸಿದಳು. ಸಂಪತ್ತನ್ನೆಲ್ಲ ಹಂಚಿದ ಮೇಲೆ ಅವಳು ಘನತೆಯಿಂದ ಬಂಧುಬಳಗಕ್ಕೆ ವಿದಾಯ ಹೇಳಿ, ಬೆಳ್ಗೊಳಕ್ಕೆ ಬಂದಳು.

ಗುರುಗಳಾದ ಪ್ರಭಾಚಂದ್ರ ಸಿದ್ಧಾಂತದೇವ, ರವಿಚಂದ್ರ ಮತ್ತು ವರ್ಧಮಾನದೇವರುಗಳ ಸಮ್ಮುಖದಲ್ಲಿ ಸನ್ಯಸನ ವ್ರತವನ್ನಂಗೀಕರಿಸಿ, ಮನಸ್ಸನ್ನು ಆಧ್ಯಾತ್ಮಜ್ಞಾನದಿಂದ ಶ್ರೀಮಂತಗೊಳಿಸಿಕೊಂಡು, ಈ ಕಠಿಣ ವ್ರತವನ್ನಾಚರಿಸಲು ಅವಳು ಅಣಿಯಾದಳು. ಏಕಪಾರ್ಶ್ವಾಸನವನ್ನು ಆಯ್ದುಕೊಂಡು, ಜಿನನ ಪಾದಪದ್ಮಗಳಲ್ಲಿ ಚಿತ್ತವನಿಟ್ಟು, ಪಂಚಪದಗಳನ್ನು ಪಠಿಸಿದಳು. ಒಂದು ತಿಂಗಳು ಕಾಲ ನಿರಸನಗೈದು, ಸನ್ಯಸವನ್ನಪ್ಪಿ, ತನ್ನ ಗುರು ಮತ್ತಿತರ ಮುನಿಗಳು ಪಠಿಸಿದ ಸಮಾಧಿ ವ್ಯಾಖ್ಯೆಯನ್ನು ಆಲಿಸುತ್ತ, ಮರ್ತ್ಯವಾಸಿಗಳೆಲ್ಲ ಅವಳ ಗುಣಗಾನ ಮಾಡುತ್ತಿರುವಾಗ, ನಿರಾಯಾಸವಾಗಿ ದೇವ ಪದವಿಯನ್ನು ಮಾಚಿಕಬ್ಬೆ ಪ್ರಾಪ್ತಿಸಿಕೊಂಡಳು.

ಅವಳ ಉಗ್ರ-ಭಯಂಕರ ವ್ರತವನ್ನು ಪೂರ್ತಿಗೊಳಿಸುವುದುದನ್ನು ವೀಕ್ಷಿಸಲು ನೆರೆದವರೆಲ್ಲ: 'ಸನ್ಯಸನವನ್ನು ಸ್ವೀಕರಿಸಿದ ಸ್ತ್ರೀಯರಲ್ಲಿ ಮಾಚಿಕಬ್ಬೆಯನ್ನು ಮೀರಿದವರಾರುಂಟು? ಮಾಚಿಕಬ್ಬೆಯಂತೆ ಅಚಲ ಮತ್ತು ಕಠೋರ ಸನ್ಯಸನ ವ್ರತವನ್ನು ಸ್ವೀಕರಿಸಿ, ಪಂಡಿತ ಮರಣವನ್ನಾಚರಿಸಿ, ಭೂಮಂಡಲದಲ್ಲಿ ಉನ್ನತ ಕೀರ್ತಿಗಳಿಸಿದವರಾರುಂಟು?', ಎಂದು ಪ್ರಶ್ನಿಸಿಕೊಂಡರು.

ಇದೆಲ್ಲವನ್ನು ಕಣ್ಣಾರೆ ಕಂಡ ಕೀರ್ತನಕಾರ ಕವಿಯು 'ಅವಳನ್ನು (ಅವಳ ವೀರಕೃತ್ಯವನ್ನು) ಬಣ್ಣಿಸಬಲ್ಲೆನೆಂತು?' ಎಂದು ತನಗಿದ್ದ ಶಬ್ದ ಸಂಪತ್ತಿನ ಅಡಚಣೆಯ ಬಗ್ಗೆ ದೂರಿಕೊಂಡನು.

ವಿಧಿ ವಿಧಾನದ ವಿಶ್ಲೇಷಣೆ: ಮೇಲಿನ ಎರಡು ಶಾಸನಗಳ ನಡುವಿನ ಕಾಲದ ಅಂತರ ಒಂದೆರಡು ವರ್ಷ ಮಾತ್ರವಿರುವುದಾದರೂ ಮಲ್ಲಿಷೇಣ ಮಲಧಾರಿದೇವನ ಶಾಸನಕ್ಕಿಂತ ಮಾಚಿಕಬ್ಬೆಯ ಸಮಾಧಿ ಶಾಸನವು ಹೆಚ್ಚು ವಿವರಗಳನ್ನು ಒದಗಿಸುವುದು. ಅವುಗಳಲ್ಲಿ ಕೆಲವು ಗಮನೋಚಿತವಾಗಿವೆ :

1. ಮಾಚಿಕಬ್ಬೆಯ ವ್ರತವನ್ನು ಸನ್ಯಸನ, ಸಮಾಧಿ ಮತ್ತು ಪಂಡಿತ ಎಂಬ ಮೂರು ಪದಗಳಿಂದ ಗುರುತಿಸಲಾಗಿದೆ ಮತ್ತು ತಪಸ್ಸಿನ ಅತ್ಯಾವಶ್ಯಕ ಭಾಗವಾದ ಪಂಚಪದ ಪಠಣಕ್ರಿಯೆಯೆಡೆಗೂ ನಮ್ಮ ವಿಶೇಷ ಗಮನವನ್ನು ಸೆಳೆಯಲಾಗಿದೆ.

2. ಸಾವನ್ನು ಸ್ವಾಗತಿಸಲು ಅವಳಿಗಿದ್ದ ಕಾರಣಗಳನ್ನು ಸ್ಪಷ್ಟಪಡಿಸಲಾಗಿದೆ. ಅವುಗಳಲ್ಲಿ ಮಾಚಿಕಬ್ಬೆಯ ಕುಟುಂಬದಲ್ಲಿ ಜರುಗಿದ ಒಂದೆರಡು ದುರಂತಗಳು ಪ್ರಮುಖವಾಗಿದ್ದವು. ತನ್ನ ಪತಿಯ ಸಾವನ್ನು ಹಿಂಬಾಲಿಸಿ ಬಂದ ಪ್ರೀತಿಯ ಪುತ್ರಿಯ ಸಾವು ಮಾಚಿಕಬ್ಬೆಗೆ ತನ್ನ ಬದುಕಿನ ಅರ್ಥಶೂನ್ಯತೆಯನ್ನು ಮನಗಾಣಿಸಿಕೊಟ್ಟಿತೆಂದು ಸ್ಪಷ್ಟಪಡಿಸಲಾಗಿದೆ.

3. ಮನೆಯಿಂದ ಹೊರಹೊರಡುವ ಮೊದಲು ಮಾಚಿಕಬ್ಬೆಯು ತನ್ನ ಅಂತಿಮ ಕರ್ತವ್ಯಗಳನ್ನೆಲ್ಲ ಮೊದಲು ಪೂರೈಸಿದಳು. ಬಂಧುಬಾಂಧವರೊಡನಿದ್ದ ಬಂಧನದಿಂದ ಸಂಪೂರ್ಣ ಕಳಚಿಕೊಂಡು, ಸಂಬಂಧಿಗಳಿಗೆಲ್ಲ ಘನತೆಯಿಂದ ಅವಳು ವಿದಾಯ ಹೇಳಿದಳು. "ಯಾರಿಗೇನು ಬೇಕು?" ಎಂದು ಕೇಳಿ, ತನ್ನಲ್ಲಿರುವುದನ್ನೆಲ್ಲ ಕೊಟ್ಟು, ಬರಿಗೈ ಸಂಪಾದಿಸಿಕೊಂಡಳು.


4. ಬೆಳ್ಗೊಳಕ್ಕೆ ಬಂದ ಮೇಲೆ ಕಠಿಣತಮ ವ್ರತವನ್ನಂಗೀಕರಿಸಿ, ಸಮಚಿತ್ತತೆಯನ್ನು ಕಳೆದುಕೊಳ್ಳದೆ ಸಮಾಧಿಮರಣದ ನೇಮನಿಷ್ಠೆಯ ಮಾರ್ಗವನ್ನು ಅವಳು ತುಳಿದಳು.

5. ತನ್ನ ಗುರು ಪ್ರಭಾಚಂದ್ರಸಿದ್ಧಾಂತದೇವರಿಂದಲ್ಲದೆ ಇನ್ನಿಬ್ಬರು ಮುನಿಗಳಿಂದ ಅವಳು ಮಾರ್ಗದರ್ಶನ ಪಡೆದಳು. ಪ್ರಾಯಶಃ ತಿಂಗಳ ಪರ್ಯಂತದ ನಿರಸನದ ಅವಧಿಯಲ್ಲಿ ದಿನೇದಿನೇ ತನ್ನ ದೈಹಿಕ ಶಕ್ತಿ ಕುಂದುತ್ತಾ ಪಂಚಪದಗಳನ್ನು ಪಠಿಸಲೂ ಅಸಾಧ್ಯವಾದ ಸ್ಥಿತಿಯನ್ನು ತಲುಪಿದಾಗ, ಅರ್ಧನಿಮೀಲಿತ ನಯನಗಳಾಗಿ ಮುನಿಗಳು ಮಾಡುತ್ತಿದ್ದ ಪಠಣವನ್ನು ಆಲಿಸುತ್ತ, ಏಕಪಾರ್ಶ್ವಾಸನವನ್ನು ಸ್ವೀಕರಿಸಿದಳು. ಮಾಚಿಕಬ್ಬೆಯು ಕೊನೆಯುಸಿರೆಳೆಯುವವರೆಗೆ ಅವಳ ಗುರುಗಳು ಸಮಾಧಿ ಶಾಸನವನ್ನು ಕಥಿಸಿ ಅವಳಿಗೆ ಉಪದೇಶವಿತ್ತರು.

6. ಮರಣವನ್ನು ಆಹ್ವಾನಿಸುವ ಅವಳ ಧೀರ ನಿರ್ಧಾರದ ವಾರ್ತೆಯು ಶ್ರಾವಕರನ್ನು ಮತ್ತು ಧರ್ಮಿಷ್ಠರನ್ನೂ ಆಕರ್ಷಿಸಿತು. ಬೃಹತ್ ಸಂಖ್ಯೆಯಲ್ಲಿ ನೆರೆದ ಅವರೆಲ್ಲ ಅವಳ ಗುಣಗಾನ ಮಾಡಿದರು. ಓರ್ವ ಸ್ತ್ರೀಯ ಈ ದಿಟ್ಟ ಸಾಧನೆಯನ್ನು ಬಣ್ಣಿಸಲು ಬೇಕಾದ ಸೂಕ್ತ ಪದಗಳಿಗಾಗಿ ಕವಿಯೊಬ್ಬ ವ್ಯರ್ಥವಾಗಿ ತಡಕಾಡಿದನು. ಇದೆಲ್ಲವನ್ನು ಕಂಡ ಜನರು ಅಚ್ಚರಿಯಿಂದ ಜೀವನದಲ್ಲಿ ಮತ್ತು ಮರಣದಲ್ಲಿ ಇವಳನ್ನು ಸರಿಗಟ್ಟಬಲ್ಲವರಾರು? ಎಂದು ತಮ್ಮ ತಮ್ಮೊಳಗೆ ಪ್ರಶ್ನಿಸಿಕೊಂಡರು.

ಈ ಶಾಸನದ ಸ್ವಾರಸ್ಯಕರ ಅಂಶವೆಂದರೆ ಯಾವ ಹಂತದಲ್ಲೂ ಅದನ್ನು ಸ್ಮಾರಕವೆಂದು ಅಥವಾ ನಿಸಿಧಿಯೆಂದು ಕರೆಯದಿರುವುದು. ಆದರೆ ದಾನ ಶಾಸನದಂತೆ ಕಾಣುವ ಈ ಸ್ಮಾರಕವು ಒಂದು ನಿಸಿಧಿ ಎನ್ನುವುದರಲ್ಲಿ ಅನುಮಾನವಿಲ್ಲ.

ಶ್ರಾವಕ ಸಿಂಗಿಮಯ್ಯ ಮತ್ತು ಬಲದೇವ (1139): ಮರಣವನ್ನರಸಿದ ಮರ್ತ್ಯರು: ಮಾಚಿಕಬ್ಬೆಯ ಮರಣದ ಸುಮಾರು ಎಂಟು ವರ್ಷಗಳ ನಂತರ ಅವಳ ತೌರುಮನೆಯ ಇಬ್ಬರು ವ್ಯಕ್ತಿಗಳು ಅವಳ ಮೇಲ್ಪಂಕ್ತಿಯನ್ನು ಅನುಸರಿಸಿದರು. ಇವರಲ್ಲೊಬ್ಬ ಸೋದರನಾದ



29 ಸಿಂಗಿಮಯ್ಯನ ನಿಸಿಧಿ (175)

ಹಿರಿಯ ಪೆರ್ಗ್ಗಡೆ ಸಿಂಗಿಮಯ್ಯನಾಗಿದ್ದರೆ,[103] ಮತ್ತೊಬ್ಬ ಎರಡನೆಯ ಸೋದರನ ಮಗನಾದ ಬಲ್ಲಪ ಅಥವಾ ಬಲದೇವನಾಗಿದ್ದ.[104] ತನ್ನ ಅಜ್ಜನ ಹೆಸರಿಟ್ಟುಕೊಂಡಿದ್ದ ಬಲದೇವನು ನಾಗದೇವ-ನಾಗಿಯಕ್ಕರ ಸಂಜಾತನಾಗಿದ್ದ.

ಸಿಂಗಿಮಯ್ಯ ಮತ್ತು ಬಲದೇವರಿಬ್ಬರು ಇಪ್ಪತ್ತು ದಿನಗಳ ಅಂತರದಲ್ಲಿ ಮೃತಪಟ್ಟರು. ಬಲದೇವ ಸಾವನ್ನಪಿದುದು 5ನೆಯ ನವೆಂಬರ್, 1139ರಂದು ; ಸಿಂಗಿಮಯ್ಯನು ಮಡಿದದ್ದು ಅದೇ ವರ್ಷ ನವೆಂಬರ್ 24ರಂದು. ಇಬ್ಬರೂ ಸನ್ಯಸನ ವ್ರತವನ್ನು ಸ್ವೀಕರಿಸಿ ಮರಣ ಸ್ವಾಗತಿಸಿದರು. ಆದರೆ, ಬಲದೇವನು ಬೆಳ್ಗೊಳದಿಂದ ಒಂದೆರಡು ನೂರು ಮೈಲು ದೂರವಿರುವ ಮೋರಿಂಗೆರೆಯಲ್ಲಿ ಮೃತನಾದರೆ, ಸಿಂಗಿಮಯ್ಯನೆಲ್ಲಿ ಮೃತನಾದನೆಂಬುದು ಖಚಿತವಾಗಿ ತಿಳಿದುಬರುತ್ತಿಲ್ಲ. ಅವರ ಕುಟುಂಬದ ಸ್ತ್ರೀಯರು ಬೆಳ್ಗೊಳದಲ್ಲಿ ನಿಸಿಧಿ ನಿಲ್ಲಿಸಿ, ಅವರನ್ನು ಗೌರವಿಸಿದರು.


ಧರ್ಮಶೀಲತೆ, ಘನತೆ, ಸಜ್ಜನಿಕೆ, ಔದಾರ್ಯ, ಧೈರ್ಯ, ರೂಪ, ಪಾಂಡಿತ್ಯ ಮತ್ತು ಸಾಹಸದಲ್ಲಿ ಸರಿಸಾಟಿಯಿರದ ಮಹಾಪ್ರಚಂಡ ದಂಡನಾಯಕ ಬಲದೇವನು ಅರ್ಹದ್ಭಕ್ತನಾಗಿದ್ದನು. ಆಸ್ಥಾನ ಹಾಗೂ ಯುದ್ಧರಂಗಳಗಳಲ್ಲಲ್ಲದೆ, ಭಕ್ತಿ ಕ್ಷೇತ್ರದಲ್ಲೂ ಅವನು ಖ್ಯಾತನಾಗಿದ್ದನು. ಮುನಿಗಳಿಗೆ, ಆಶ್ರಿತರಿಗೆ ಮತ್ತು ಪಂಡಿತರಿಗೆ ನೀಡಿದ ಉದಾರ ದಾನಗಳಿಂದ ಧರ್ಮರಕ್ಷಕನೆಂಬ ಹೆಸರು ಪಡೆದ ಈ ಆಧುನಿಕ ಶ್ರೇಯಾಂಸುವು ತನ್ನ ಚಿಂತನಾಪರಿಣತಿಯಿಂದಲೂ ಖ್ಯಾತನಾಗಿದ್ದನು.

103. 175.
104. 174.

ಬಲದೇವ ಬಾಚಿಕಬ್ಬೆಯರಿಗೆ ನಾಗದೇವ ಮತ್ತು ಸಿಂಗಣ ಎಂಬಿಬ್ಬರು ಪುತ್ರರು ಜನಿಸಿದರು. ನಾಗದೇವ ಮತ್ತು ನಾಗಿಯಕ್ಕರಿಗೆ ಬಲ್ಲಣ ಮತ್ತು ಏಚಿಯಕ್ಕ ಎಂಬಿಬ್ಬರು ಮಕ್ಕಳು ಹುಟ್ಟಿದರು.



30 ಪಂಡಿತಾರ್ಯನ ನಿಸಿಧಿ (360)



31 ಬಲದೇವನ ನಿಸಿಧಿ (174)

ದಂಡನಾಯಕ ಬಲದೇವನು ಎಳ್ಳಷ್ಟೂ ಅಳುಕದೆ ಐಹಿಕ ಬಂಧನದ ಸಂಕೋಲೆಗಳನ್ನು ಕಡಿದು ಹಾಕಿ, ಪಂಚಪದಗಳನ್ನು ಪಠಿಸುತ್ತ , ಗುರುದೇವತೆಗಳನ್ನು ಸಾಕ್ಷಿಯಾಗಿಸಿಕೊಂಡು, ಪುಣ್ಯಸ್ಥಳವಾದ ಮೋರಿಂಗೆರೆಯಲ್ಲಿ ದೇವತ್ವಕ್ಕೇರಿದನು. ಈತನ ಪರೋಕ್ಷ ವಿನಯವಾಗಿ, ಅವನ ತಾಯಿ ನಾಗಿಯಕ್ಕ ಮತ್ತು ಸಹೋದರಿ ಏಚಿಯಕ್ಕ ಕಳ್ಬಪ್ಪು ನಾಡಿನ ಒಮ್ಮಳಿಗೆಯ ಹಳದಲ್ಲಿ ಒಂದು ಪಟ್ಟಸಾಲೆಯನ್ನು ಕಟ್ಟಿಸಿ, ಅದನ್ನು ಹಾಗೂ ಅರಕೆರೆ ಗ್ರಾಮದ ಒಂದು ಕೆರೆ ಮತ್ತು ಭೂಮಿಯನ್ನೂ ತಮ್ಮ ಗುರು ಪ್ರಭಾಚಂದ್ರಸಿದ್ಧಾಂತದೇವನಿಗೆ ದಾನಕೊಟ್ಟರು.


ವಿಧಿ ವಿಧಾನದ ವಿಶ್ಲೇಷಣೆ: ಬಲದೇವನು ಪ್ರಾಯಶಃ ಚಿಕ್ಕ ವಯಸ್ಸಿನಲ್ಲಿ ಮೃತಪಟ್ಟನು. ಅವನು ಮೋರಿಂಗೆರೆಗೆ ಯಾವುದೋ ಕಾರ್ಯನಿಮಿತ್ತ ಹೋಗಿದ್ದಾಗ ಅಲ್ಲಿ ದೈಹಿಕ ಪೀಡೆಗೊಳಗಾದನೆಂದು ತೋರುವುದು. ತನ್ನ ಅಂತ್ಯ ಸನ್ನಿಹಿತವಾದುದನ್ನು ಅರಿತುಕೊಂಡ ಈ ನಿಷ್ಠಾವಂತ ಜೈನನು ಸನ್ಯಸನ ವ್ರತ ಕೈಗೊಂಡು ಮರಣ ಪ್ರಕ್ರಿಯೆಯನ್ನು ತೀವ್ರಗೊಳಿಸಿದಂತೆ ಕಾಣುವುದು.

ಈ ನಿಸಿಧಿಯಲ್ಲಿರುವ ಎರಡು ಸ್ವಾರಸ್ಯಕರ ವಿಷಯಗಳು ಮರಣಸ್ಥಳ ಮತ್ತು ವಿಧಾನಕ್ಕೆ ಸಂಬಂಧಿಸಿವೆ.

1. ಬಲದೇವನು ಮೋರಿಂಗೆರೆಯಲ್ಲಿ ಮೃತಪಟ್ಟನಾದರೂ ಅವನನ್ನು ಬೆಳ್ಗೊಳದಲ್ಲಿ ಗೌರವಿಸಲಾಯಿತು. ಬೇರೆಡೆ ಮಡಿದವರಿಗೂ ಬೆಳ್ಗೊಳದಲ್ಲಿ ನಿಸಿಧಿ ನಿಲ್ಲಿಸುವ ಪದ್ಧತಿಯು 12ನೆಯ ಶತಮಾನದ ಸುಮಾರಿಗೆ ಸ್ವೀಕೃತವಾಗಿದ್ದುದನ್ನು ಇದು ಸ್ಪಷ್ಟಪಡಿಸುವುದು.

2. ಈ ಕಾಲದಲ್ಲಿ ಮೃತರನ್ನು ನಿಸಿಧಿ ಸ್ತಂಭ-ಫಲಕದಿಂದಲ್ಲದೆ ಸ್ಮಾರಕ-ಕಟ್ಟಡಗಳಿಂದಲೂ ಸ್ಮರಿಸಲಾಗುತ್ತಿದ್ದುದು ನಿಚ್ಚಳವಿದೆ. ಶಾಸನದಲ್ಲಿ ಇವನ್ನು ನಿಸಿಧಿಯೆಂದು ಗುರುತಿಸಿಲ್ಲ, ಆದರೆ ಇತರ ಸ್ಮಾರಕಗಳಂತೆ ಬಲದೇವನ ಶಿಲಾಫಲಕವನ್ನೂ ಶ್ರವಣ

ಬೆಳ್ಗೊಳದಲ್ಲಿಯೇ ಬರೆಸಿ, ಕೊರೆಸಿ, ಪ್ರತಿಷ್ಠಾಪಿಸಲಾಯಿತು. ಈ ಸಂದರ್ಭದಲ್ಲಿ ಕೊಡಮಾಡಲಾದ ಪಟ್ಟಸಾಲೆ, ಕೆರೆ ಮತ್ತು ಭೂದತ್ತಿಯು ಈ ಆಚರಣೆಯನ್ನು ಸಾಂಸ್ಥೀಕರಣದತ್ತ ಕೊಂಡೊಯ್ದ ಸಂಕೇತಗಳಾಗಿವೆ.



32 ಪಂಡಿತಾರ್ಯನ ವ್ರತಾಚರಣೆ ಸಿದ್ಧರಬಸ್ತಿ. (360)

ಮೇಲ್ನೋಟಕ್ಕೆ ಕಾಣುವಂತೆ, 12ನೆಯ ಶತಮಾನದ ನಿಸಿಧಿ ಸ್ಮಾರಕಾಚರಣೆಯು ತನ್ನ ಮೂಲ ಉಗ್ರತೆ ಮತ್ತು ಸರಳತೆಗಳ ಕೆಲ ಅಂಶಗಳನ್ನು ಕಳೆದುಕೊಂಡು, ಬಹಳ ಸಂಕೀರ್ಣವಾಗಿ, ಸಾಕಷ್ಟು ವೆಚ್ಚದಾಯಕ ಆಚರಣೆಯಾಗಿ ಪರಿವರ್ತನೆಗೊಂಡಿತ್ತು. ಮುನಿಗಳಿಗೆ ಮತ್ತು ದೇವಾಲಯಗಳಿಗೆ ನೀಡಿದ ದತ್ತಿಗಳು ಮಾತ್ರವಲ್ಲದೆ ಇನ್ನಿತರ ಆಚರಣೆಗಳೂ ಇದರೊಡನೆ ಮೇಳೈಸಿಕೊಂಡಿದ್ದವು. ಬಂಕಾಪುರದಲ್ಲಿ ಮೃತಪಟ್ಟರೂ ಅರಸ ಮಾರಸಿಂಹನು ಮಾನಸ್ತಂಭ ಸ್ಮಾರಕವೊಂದನ್ನು ಚಿಕ್ಕಬೆಟ್ಟದ ಮೇಲೆ ಪಡೆದ ಉದಾಹರಣೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇದು ನಿಸಿಧಿ ಸ್ಮಾರಕದ ಪ್ರತಿಷ್ಠಾಪನೆ ಮತ್ತು ಪೂಜೆಯ ಆರಂಭವನ್ನು ಸೂಚಿಸುವುದೋ ಇಲ್ಲವೋ ತಿಳಿಯದು; ಆದರೆ, ಈ ಕಾಲದಲ್ಲಿ ನಿಸಿಧಿಗಳು ಸಾಕಷ್ಟು ಪಾವಿತ್ರತೆಯನ್ನು ಪಡೆದುಕೊಂಡಿದ್ದವೆಂಬುದರಲ್ಲಿ ಅನುಮಾನವಿಲ್ಲ.

ಲೋಭಿಗಳ ದ್ವೇಷಿ : ದಂಡನಾಯಕ ಬಲದೇವ ಮತ್ತು ಬಾಚಿಕಬ್ಬೆಯರ ಪುತ್ರ ಸಿಂಗಿಮಯ್ಯನು 'ಸರ್ವಲೋಕದ ಮಿತ್ರ ಮತ್ತು ಲೋಭಿಗಳ ವೈರಿ'ಯಾಗಿದ್ದನಲ್ಲದೆ, ರತಿ ರೂಪಿಯಾದ ಸಿರಿಯಾದೇವಿಯನ್ನು ಕೈಹಿಡಿದ ಭಾಗ್ಯವಂತನಾಗಿದ್ದನು. ತನ್ನ ಮರಣ ಸನ್ನಿಹಿತವಾದುದನ್ನು ಅರಿತಾಗ, ಐಹಿಕ ಬಂಧನಗಳನ್ನು ಕಳಚಿಕೊಂಡು, ಸಿಂಗಿಮಯ್ಯನು ಸಮಾಧಿ ವ್ರತವನ್ನು ಸ್ವೀಕರಿಸಿದನು. ಜಿನನ ಪಾದಪದ್ಮಗಳಲ್ಲಿ ಭಕ್ತಿಯಿಂದ ಚಿತ್ತವನ್ನು ಏಕಾಗ್ರಗೊಳಿಸಿ, ಪಂಚಪದಗಳನ್ನು ಸತತವಾಗಿ ಸ್ತುತಿಸಿ, ಇಂದ್ರಲೋಕ ಸೇರಿದನು. ಸೋಮವಾರ ನವೆಂಬರ್ 5, 1239ರಂದು ಮಹಾಮಂಡಲಾಚಾರ್ಯ ಪ್ರಭಾಚಂದ್ರಸಿದ್ಧಾಂತದೇವನ ಗುಡ್ಡಿಯಾದ ಸಿರಿಯವ್ವೆಯು ತನ್ನ ನಾದಿನಿ ನಾಗಿಯಕ್ಕಳೊಡಗೂಡಿ, ಮಹಾಪೂಜೆಗೈದು, ಈ ನಿಸಿಧಿಗಳನ್ನು ನಿಲ್ಲಿಸಿದಳು.

ವಿಧಿ ವಿಧಾನದ ವಿಶ್ಲೇಷಣೆ: ಈ ಶಾಸನವು ಮೌನತಾಳಿರುವ ಕೆಲವು ಸ್ವಾರಸ್ಯಕರವಾದ ವಿಷಯಗಳು ಇಂತಿವೆ :

1. ಸಮಾಧಿ ವ್ರತಾಚರಣೆಯ ಅವಧಿಯಲ್ಲಿ ಸಿಂಗಿಮಯ್ಯನು ಪಡೆದ ದೀಕ್ಷೆ ಮತ್ತು ಮಾರ್ಗದರ್ಶನದ ವಿವರಗಳನ್ನು ಇಲ್ಲಿ ಸ್ಪಷ್ಟಗೊಳಿಸಿಲ್ಲ. ಹಂತಹಂತವಾಗಿ ಕಠಿಣಗೊಂಡ ದೇಹದಂಡನೆಯು ಅವನ ಮರಣವನ್ನು ಮುಂಬಾಲಿಸಿದ್ದರೂ ಅವನು ಎಷ್ಟು ಕಾಲ ಕಾಯಕ್ಲೇಶದಲ್ಲಿ ತೊಡಗಿದ್ದನೆಂಬುದನ್ನಾಗಲಿ, ಹೇಗೆ ವ್ರತವನ್ನು ಆಚರಿಸಿದನೆಂಬುದನ್ನಾಗಲಿ, ಶಾಸನವು ತಿಳಿಸುವುದಿಲ್ಲ.

2. ಅವನು ಬೆಳ್ಗೊಳದಲ್ಲಿ ಮರಣ ಹೊಂದಿದನೋ-ಇಲ್ಲವೋ, ಎಂಬುದನ್ನೂ ಇಲ್ಲಿ ಸ್ಪಷ್ಟಗೊಳಿಸಿಲ್ಲ.

3. ಸಮಾಧಿವ್ರತದ ಅಥವಾ ನಿಸಿಧಿ ನಿಲ್ಲಿಸುವ ಸಮಯದಲ್ಲಿ ಇದ್ದ ಮುನಿಗಳ ಬಗ್ಗೆ ತಾಳಿರುವ ಮೌನವೂ ಕುತೂಹಲಕರವಾಗಿದೆ.

4. ಸಮಾಧಿಮರಣವನ್ನು ವೀಕ್ಷಿಸಲು ಸೇರಿದ್ದ ಸಮಾಜವರ್ಗಕ್ಕೆ ಇಲ್ಲಿ ವಿಶೇಷ ಮಹತ್ವ ದೊರೆತಿಲ್ಲ.


ಸಂಕ್ಷಿಪ್ತತೆಯ ದೃಷ್ಟಿಯಿಂದ ಕವಿಯು ಈ ವಿವರಗಳನ್ನು ಕೈಬಿಟ್ಟಿರುವ ಸಾಧ್ಯತೆಯುಂಟು. ಸಿಂಗಿಮಯ್ಯನ ವ್ರತಾಚರಣೆಗಳು ಸಾಂಕೇತಿಕ ಸ್ವರೂಪದವುಗಳಾಗಿದ್ದು ಸವಿಸ್ತಾರತೆಯನ್ನೊಳಗೊಂಡಿರಲಿಲ್ಲವೆಂದು ಭಾವಿಸಲೂ ಇಲ್ಲಿ ಅನುವುಂಟು. ಉಳಿದ ನಿಸಿಧಿಯ ವಿವರಗಳೊಂದಿಗೆ ಈ ಶಾಸನಸಾರವನ್ನು ಹೋಲಿಸಿ ನೋಡಿದರೆ ಇದು ಸ್ಪಷ್ಟಗೊಳ್ಳುವುದು.


ಶ್ರುತಮುನಿ (1432): ಮಹಾಶ್ರಮಣ ಪರಂಪರೆ[105] : ಮುನಿವರ್ಯರಲ್ಲಿ ಕೊನೆಯವನಾದ ಭದ್ರಬಾಹುವಿನಾರಭ್ಯ, ಚಂದ್ರಗುಪ್ತ, ಕೊಂಡಕುಂದ, ಉಮಾಸ್ವಾತಿ, ಬಳಾಕಪಿಂಛ, ಸಮಂತಭದ್ರ, ಪೂಜ್ಯಪಾದ, ಅಕಳಂಕಸೂರಿ, ಮೊದಲಾದವರ ಮೂಲಕ ಮಹಾಸಂಘವು ಜಿನೇಂದ್ರನ ಚತುರ್ಮುಖಗಳಂತೆ ಸೌಹಾರ್ದಯುತ ಚತುರ್ ಶಾಖೆಗಳಾಗಿ ಪ್ರವಹಿಸಿತು. ದೇವ, ನಂದಿ, ಸಿಂಹ ಮತ್ತು ಸೇನ ಶಾಖೆಗಳಲ್ಲಿ ನಂದಿಸಂಘವು ಹೆಚ್ಚು ಪ್ರಸಿದ್ಧಿ ಪಡೆಯಿತು. ಹೀಗೆ ಉಚ್ಛ್ರಾಯ ಸ್ಥಿತಿಗೆ ಬಂದ ನಂದಿಸಂಘ ದೇಸಿಯಗಣ ಪುಸ್ತಕಗುಚ್ಛದ ಇಂಗುಳೇಶ ಶಾಖೆಯಲ್ಲಿ ಶ್ರುತಕೀರ್ತಿಭಟ್ಟಾರಕ ಜನಿಸಿದನು. ಸಕಲ ಜೀವಿಗಳಿಗೂ ತನ್ನ ಅಭಯಹಸ್ತ ಚಾಚಿ, ಇಂದ್ರಿಯಗಳನ್ನು ನಿಗ್ರಹಿಸಿ, ಸಿದ್ಧನ ತತ್ವಗಳನ್ನು ಪ್ರಚುರಪಡಿಸುತ್ತಾ, ಘನಮಹಿಮೆಗೆ ಆತನು ಪಾತ್ರನೆನಿಸಿದನು. ತನ್ನ ಉಜ್ವಲ ಪ್ರವಚನಗಳಿಂದ ಅನುಯಾಯಿಗಳಲ್ಲಾವರಿಸಿದ್ದ ಕತ್ತಲೆಯನ್ನು ಅವನು ಹೊಡೆದೋಡಿಸಿದನು; ತನ್ನ ಪಾಂಡಿತ್ಯರಾಶಿಯನ್ನು ಬಳುವಳಿ ನೀಡಿ, ಅವರು ಕರ್ತವ್ಯ ನಿಷ್ಠರಾಗುವಂತೆ ಮಾಡಿ, ಸಮಾಧಿಯ ಮೂಲಕ ಸುರಲೋಕಕ್ಕೆ ಹೋಗಲು ಅಣಿಯಾದನು.

---

105. 364.

ಅವನ ಶಿಷ್ಯನಾಧ ಚಾರುಕೀರ್ತಿಮುನಿಯು 'ತಪಸ್ಸು ಮತ್ತು ಸಂಕಲ್ಪದಲ್ಲಿ ಕಠೋರನು ಚಾರಿತ್ರ್ಯದಲ್ಲಿ ಘನಗಂಭೀರನು, ದೈಹಿಕವಾಗಿ ಕೃಶನೂ ಆಗಿದ್ದರೂ', ತಪೋಬಳ್ಳಿಗಳಿಂದ ಪಾಪವೃಕ್ಷವನ್ನು ಬಿಗಿದು ಅದರ ಉಸಿರನ್ನಡಗಿಸಲು ಸಮರ್ಥನಾಗಿದ್ದನು.





33 ಶೃತಮುನಿಯ ಸಲ್ಲೇಖನಾ (364)

ವ್ಯಾಕರಣ, ತರ್ಕ ಮತ್ತಿತರ ಶಾಸ್ತ್ರಗಳಲ್ಲಿ ಪಾರಂಗತನಾದ ಈ ಮುನಿಯು ಸಾರತ್ರಯಗಳನ್ನು ಲೋಕಕ್ಕೆಲ್ಲ ಪ್ರಚುರಪಡಿಸಿದನು. ಸಾಕ್ಷಾತ್ ಲಕ್ಷ್ಮಿಯೆ ಈ ಮುನಿಯ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದುದರಿಂದ ಅವಳ ಪ್ರಭುವಾದ ವಿಷ್ಣು ವ್ಯಾಕುಲಗೊಂಡು ಶ್ಯಾಮವರ್ಣ ಹೊಂದಿದನು. ಅವನ ದೇಹವನ್ನು ಸ್ಪರ್ಶಿಸಿದ ಗಾಳಿಯೇ ರುಜಿನಗಳನ್ನು ಗುಣಪಡಿಸುವ ಶಕ್ತಿ ಹೊಂದಿರುವುದೆಂಬ ಖ್ಯಾತಿಯಿದ್ದಾಗ, ಅರಸ ಬಲ್ಲಾಳನನ್ನು ಬಂಧಿಸಿದ ಭಯಂಕರ ರೋಗಪಾಶದಿಂದ ಅವನನ್ನು ಈ ಮುನಿಯು ಬಿಡುಗಡೆಗೊಳಿಸಿದನೆಂದರೆ ಆಶ್ಚರ್ಯವೆಲ್ಲಿಯದು? ತನ್ನ ಮೇಧಾಶಕ್ತಿಯ ನಿರ್ದಿಷ್ಟ ಬಲದಿಂದ ತಕ್ಕದಾದ ಸಮಾಧಿ ವಿಧಿಯನ್ನು ಆಯ್ದುಕೊಂಡು, ಬಗೆಬಗೆಯ ಪಾಪಕೂಪಗಳ ಆಗರವಾದ ಈ ಮರ್ತ್ಯದೇಹವನ್ನು ಕಳಚಿಕೊಂಡು ಈ ಮುನಿಯು ಸ್ವರ್ಗ ಪ್ರವೇಶಿಸಿದನು.

ಗಾಢಾಂಧಕಾರದಲ್ಲಿ ಲೋಕ: ತನ್ನ ಗುರುವಿನ ನಿರ್ಗಮನದಿಂದ ಉಂಟಾದ ಶೂನ್ಯತೆಯನ್ನು ಪಂಡಿತದೇವನು ತುಂಬಿರದಿದ್ದರೆ, ಈ ಲೋಕವು ಹುಸಿ ಸಿದ್ಧಾಂತಗಳ ಗಾಢಾಂಧಕಾರದಲ್ಲಿ ಮುಳುಗಿ ಹೋಗುತ್ತಿತ್ತೇನೋ. ವಿಷಯಲಂಪಟ ಅನಿಷ್ಟಗಳ ದಮನಕಾರ, ಪಾಂಡಿತ್ಯರಕ್ಷಕ, ಶಾಸ್ತ್ರ ವಿರೋಧಿ ಮತಗಳ ಸಂಹಾರಕ, ಎಂದು ಇವನನ್ನು ಕೊಂಡಾಡಲಾಯಿತು. ಪೃಥ್ವಿಯ ಮೇಲಿನ ಸಕಲ ಶಾಸ್ತ್ರಗಳ ತಿರುಳನ್ನು ಹೀರಿಕೊಂಡು ತನ್ನ ಪಾಂಡಿತ್ಯದಿಂದ ಬೆಳಗಿದ ಈತನು ಪಂಡಿತರಿಗೆ, ಶ್ರಾವಕರಿಗೆ ಅತ್ಯಂತ ಗೌರವಪಾತ್ರನೆನಿಸಿದನು.

ಕಠೋರ ತಪಸ್ಸನ್ನಾಚರಿಸಿ ಅಗಾಧ ಪುಣ್ಯವನ್ನು ಗಳಿಸಿಕೊಂಡ ಪಂಡಿತಯತಿಯು ಸುರಲೋಕಕ್ಕೆ ತೆರಳಿದಾಗ, ಸಿದ್ಧಾಂತಯೋಗಿಯು ಅವನ ಉತ್ತರಾಧಿಕಾರಿಯಾದನು. ಸಿದ್ಧಶಾಸ್ತ್ರಗಳನ್ನು ಮಂಡಿಸುತ್ತಾ, ಸಿದ್ಧಾಂತಯೋಗಿಯು ಅನೇಕಾಂತ ಅಥವಾ ಸ್ಯಾದ್ವಾದ

ಸಿದ್ಧಾಂತದಿಂದ ಎಲ್ಲ ಹುಸಿವಾದಿಗಳ ಹುಟ್ಟಡಗಿಸಿದನು. ವೈಭವ, ಯೌವನ, ಸ್ತ್ರೀ, ಇವಾವೂ ಅವನನ್ನು ವ್ಯಾಮೋಹಗೊಳಿಸಲಿಲ್ಲ; ಅಧಿಕಾರ, ಐಶ್ವರ್ಯ, ಅವನನ್ನು ಚಪಲಗೊಳಿಸಲಿಲ್ಲ. ಆಧ್ಯಾತ್ಮಿಕ ಜ್ಞಾನ ಪ್ರಸಾರದಿಂದ ಮಾತ್ರ ಧರ್ಮಪೋಷಣೆ ಸಾಧ್ಯವೆಂಬುದನ್ನು ಮನಗಂಡಿದ್ದ ಈ ಮುನಿಯು ತೀಕ್ಷ್ಣಬುದ್ಧಿಯ ಶಿಷ್ಯರನ್ನು ಆಯ್ದು, ಅವರನ್ನು ಆದ್ಯಂತವಾಗಿ ಪಳಗಿಸಿದನು. ತಾಯಿ ಹಸುವಿನ ಹಾಲುಂಡ ಕರುವಿನಂತೆ ಅವನ ನಿಷ್ಠಾವಂತ ಶಿಷ್ಯರು ಗುರುವಿನಿಂದ ಜ್ಞಾನ ಪಡೆದುಕೊಂಡು ಬಲಿಷ್ಠರಾಗಿ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಸಿದ್ಧಾಂತಯೋಗಿಯ ಇಂಥ ಶಿಷ್ಯರಲ್ಲಿ ಒಬ್ಬ, ಶೃತಮುನಿ.

ಉತ್ತರಾಧಿಕಾರಿಯ ಆಯ್ಕೆ : ಸಿದ್ಧಾಂತಯೋಗಿಯ ಶಿಷ್ಯರಲ್ಲಿ ಶೃತಮುನಿಯು ಎಷ್ಟೊಂದು ಎದ್ದು ಕಾಣುತ್ತಿದ್ದನೆಂದರೆ, ಕವಿಗಳು ಅವನನ್ನು ಉನ್ನತ ಪರ್ವತಶಿಖರಗಳಲ್ಲಿಯೇ ಎತ್ತರವಾದ ಮಂದಾರ ಪರ್ವತಕ್ಕೆ ಹೋಲಿಸಿದರು. ಅವನ ಶ್ರೇಷ್ಠತೆ, ಚಾರಿತ್ರ್ಯ, ಗುಣ, ಮೇಧಾಶಕ್ತಿ, ಜ್ಞಾನ ಮತ್ತು ವ್ಯಕ್ತಿತ್ವವನ್ನು ಮನದಂದು ಸಿದ್ಧಾಂತಯೋಗಿಯು ಅವನನ್ನು ಸೂರಿಯ ಸ್ಥಾನಕ್ಕೇರಿಸಿ, ಸಂತಸಪಟ್ಟನು. ತನ್ನ ಮರ್ತ್ಯಜೀವನವು ಅತ್ಯಲ್ಪ ಉಳಿದುದನ್ನು ಮನಗಂಡ ಅವನು ಈ ಯೋಗ್ಯ ಶಿಷ್ಯನ ಕೈಗೆ ಗಣವನ್ನು ಒಪ್ಪಿಸಿ, ಸಮಾಧಿವ್ರತಕ್ಕೆ ತಕ್ಕಂತಹ ತಪಸ್ಸನ್ನಾಚರಿಸಲು ಸನ್ನದ್ಧನಾದನು. ಹೀಗೆ ನಿರ್ಧರಿಸಿದನಂತರ, ಪಾಂಡಿತ್ಯ ಮತ್ತು ಚಾರಿತ್ರ್ಯ ಬಲದಿಂದ ಕೀರ್ತಿಗಳಿಸಿಕೊಂಡಿದ್ದ ತನ್ನ ಶಿಷ್ಯೋತ್ತಮನನ್ನು ತನ್ನೆಡೆ ಬರಮಾಡಿಕೊಂಡು, ಅವನನ್ನು ಕುರಿತು – 'ಈ ಗಣವು ಸದ್ಗುಣಗಳ ಆಲಯವಾಗಿದೆ. ಅದು ನನ್ನ ಹಿರಿಯರಿಂದ ಪೋಷಣೆಗೊಂಡು ಬೆಳೆದಿದೆ. ನಾನು ಈವರೆಗೆ ಅದನ್ನು ಸಂರಕ್ಷಿಸಿದಂತೆ ನೀನೂ ಸಂರಕ್ಷಿಸಬೇಕು', ಎಂದು ಆಜ್ಞಾಪಿಸಿ ಗಣನಾಯಕತ್ವವನ್ನು ಅವನಿಗೆ ವಹಿಸಿಕೊಟ್ಟನು.

ಉತ್ತರಾಧಿಕಾರಿಯ ಶೋಕ : ತನ್ನ ಗುರುವಿನಿಂದ ಅಗಲುವ ಸಂಭಾವ್ಯತೆಯಿಂದ ಶೃತಮುನಿಯು ಹತಾಶೆಗೊಂಡು ದುಃಖಿತನಾದನು. ಅವನ ಮ್ಲಾನ ವದನವನ್ನು ಕಂಡು ಸಿದ್ಧಾಂತಯೋಗಿಯು 'ಕಮಲದ ಮೇಲೆ ಬಿದ್ದ ಧೂಳು ಸ್ತ್ರೀಯ ಕೋಮಲ ಉಸಿರಿಗೊಳಗಾದ ಬಳಿಕವೂ ಅಲ್ಲಿ ಉಳಿದೀತೇ", ಎಂದು ಶಿಷ್ಯನನ್ನು ಪ್ರಶ್ನಿಸಿ, ಅವನಿಗೆ ಸಾಂತ್ವನ ಹೇಳಿ, ಈ ಮಾನಸಿಕ ತಳಮಳವು ಕ್ಷಣಿಕವೆಂದು ಭರವಸೆ ನೀಡುತ್ತಾ, ಸತ್ಕೃತ್ಯಗಳ ಫಲವಾದ ದೈವತ್ವವನ್ನು ಪ್ರಾಪ್ತಿಸಿಕೊಂಡನು.

ಚೇತರಿಸಿಕೊಂಡ ಶಿಷ್ಯನ ಧರ್ಮ ಕಾರ್ಯಗಳು : ಗುರುವಿನ ನಿರ್ಗಮನದ ನಂತರ ಶೃತಮುನಿಯು ಸೂರಿಯ ಸ್ಥಾನವನ್ನು ವಹಿಸಿಕೊಂಡು, ನಿಷ್ಕಂಳಕ ಗುಣ, ಜ್ಞಾನ ಮತ್ತು ಚಾರಿತ್ರ್ಯಗಳಿಂದ ಸಂಘವನ್ನು ಬೆಳೆಸಿದನು. ಒಬ್ಬ ಧರ್ಮನಿಷ್ಠ ಮುನಿಯು ಮಾಡಬೇಕಾದುದನ್ನೆಲ್ಲ ಮಾಡಿ, ಅವನು ಸಂಘವನ್ನು ಸಂರಕ್ಷಿಸಿದನು. ಅಪರಿಗ್ರಹವಾದುದನ್ನೆಲ್ಲ ತ್ಯಜಿಸಿ, ಧರ್ಮದ ಅಕಳಂಕಿತ ಪರಿಶುದ್ಧತೆಯನ್ನು ಕಾಯ್ದುಕೊಂಡು, ತನ್ನ ಗುರುವಿನ ನಿರೀಕ್ಷೆಗಳನ್ನೆಲ್ಲ ಈಡೇರಿಸಿದನು.

ಸಟೆ ಮತಗಳ ಅಬ್ಬರದ ಪ್ರಚಾರಕರ ಅರ್ಥಹೀನ ಬೊಬ್ಬೆಯನ್ನೆಲ್ಲ ಕುಶಲ ವಾದಗಳಿಂದ ಅಡಗಿಸಿ, ಕೀರ್ತಿದೇವಿಯು ಅವನಲ್ಲಿ ಸದಾ ನೆಲೆಸುವಂತೆ ಮಾಡಿಕೊಂಡ ಶೃತಮುನಿಯು ಪುರಾಣ ಪುರುಷನೆನಿಸಿದನು. ಶೃತಮುನಿಯ ಕೀರ್ತಿಯನ್ನು ಈ ವಾದ ಸ್ಪಷ್ಟಗೊಳಿಸುವುದು :

''ಹೇಳು, ನೀನಾರು ? ಸ್ತ್ರೀಯೆ ?'' ಎಂದು ಕವಿ ಕೇಳುವನು.

''ಶೃತಮುನಿಯ ಕೀರ್ತಿ'' ಎಂದವನಿಗೆ ಉತ್ತರ ಸಿಗುವುದು.

''ನೀನೇಕೆ ಬಂದೆ ?'' ಎಂಬುದು ಮುಂದಿನ ಪ್ರಶ್ನೆ.

''ಬ್ರಾಹ್ಮಣನೇ, ನನ್ನ ಪ್ರೀತಿಪಾತ್ರನಾದ ಪಂಡಿತನಿಗಾಗಿ ಭೂಮಂಡಡದೆಲ್ಲೆಡೆ ನಾನು ಹುಡುಕುತ್ತಲಿರುವೆ'' ಎಂದು ಉತ್ತರ ಬರುವುದು.

''ಇಂದ್ರನಿಲ್ಲವೆ?'' ಎಂದು ಕೇಳಿದ್ದಕ್ಕೆ,

''ಇರುವ, ಆದರೆ ಅವನು ಕುಲಗಳ (ಪರ್ವತಗಳ) ಸಂಹಾರಕನಲ್ಲವೆ?'' ಎಂಬ ಶಂಕೆಯನ್ನು ಮುಂದೊಡ್ಡಲಾಗುವುದು.

''ಕುಬೇರನಿಲ್ಲವೆ ?'' ಎಂದು ಪ್ರಶ್ನಿಸಿದ್ದಕ್ಕೆ,

'' ಅವನೊಬ್ಬ ಕ್ಷುಲ್ಲಕ (ಕಿನ್ನರ) ನಲ್ಲವೆ?'' ಎಂಬ ಉತ್ತರ.

''ಶೇಷನಿರುವನಲ್ಲ?'' ಎಂದಾಗ,

''ಅವನೋ ನಿಂದಕ (ಎರಡು ನಾಲಿಗೆಯವ)'' ಎಂದು ಉತ್ತರ ಸಿಗುವುದು.

''ರುದ್ರನೆಂತು?'' ಎಂದು ಕೇಳಿದಾಗ,

''ಅವನಾದರೋ ಗೊಲ್ಲ (ಆತ್ಮಗಳ ಪ್ರಭು)'' ಎಂಬ ವಾದ ವ್ಯಕ್ತವಾಗುವುದು.

ವಾಕ್‌ಚತುರನಾಗಿದ್ದ ಕವಿಗಳಲ್ಲಿ ಅಗ್ರೇಸರನಾಗಿದ್ದ ಈ ಪಂಡಿತಮುನಿಯು ಸಮಂತಭದ್ರ, ಪೂಜ್ಯಪಾದ ಮತ್ತು ಮಯೂರಪಿಂಛ ಮುನಿಗಳ ವೈಯಕ್ತಿಕ ಸಾಧನೆಗಳನ್ನೆಲ್ಲವನ್ನೂ ಸಿದ್ಧಿಸಿಕೊಂಡಿದ್ದನು.

ದೈಹಿಕ ವ್ಯಾಧಿ ಮರಣದೀಕ್ಷೆಯನ್ನು ಆರಸಹಚ್ಚುವುದು : ಮುನಿಮಂಶ ಪ್ರಕಾಶಕನಾಗಿದ್ದ ಜಿನಧರ್ಮದ ಈ ಮಹಾಪ್ರತಿಪಾದಕನನ್ನು ಕೊಲ್ಲಲೋಸುಗ ವ್ಯಾಧಿಯೊಂದನ್ನು ವಿಧಿಯು ಗುಪ್ತವಾಗಿ ಕಳಿಸಿದನು. ಶ್ರೀಮಂತನ ಕೊರಮ ಸಂಗಡಿಗನಂತೆ ಆ ವ್ಯಾಧಿಯು ಅವನ ದೇಹವನ್ನು ಪ್ರವೇಶಿಸಿ, ಅವನನ್ನು ನಿರ್ವಿಣ್ಣಗೊಳಿಸಿ, ಹಿಂಸಿಸ ತೊಡಗಿತು. ಆದರೆ ಇದರಿಂದ ಅವನ ಅಂಗಾಂಗಗಳು ಕೃಶಗೊಂಡವೇ ವಿನಃ ಅವನ ಆಚರಣೆಗಳಲ್ಲ. ಅವನ ದೇಹ ಕಂಪಿಸಿತೇ

ವಿನಃ ಅವನ ಚಿತ್ತವಲ್ಲ. ದುರ್ಬರ ವ್ಯಾಧಿಯಿಂದ ಬಳಲಿದರೂ ಅವನು ಅತ್ಯಂತ ನಿಷ್ಠೆಯಿಂದ ದೈನಂದಿನ ಕರ್ತವ್ಯಗಳ ಪರಿಪಾಲನೆಯನ್ನು ನಿಲ್ಲಿಸಲಿಲ್ಲ. ಅಸ್ಥಿಮಜ್ಜೆಗೆ ನುಗ್ಗಿದ ವ್ಯಾಧಿಯನ್ನು ಇನ್ನು ಗುಣಪಡಿಸಲಾಗದೆಂದು ಖಚಿತಪಡಿಸಿಕೊಂಡ ಶೃತಮುನಿಯು ಸಂಘಜೇಷ್ಠನನ್ನು ಸಂಧಿಸಿ, ಅವನ ಪಾದಕ್ಕೆರಗಿ, ಕೈಜೋಡಿಸಿ ಇಂತೆಂದನು:

''ಘನ ಧರ್ಮಾತ್ಮನಾದ ಪಂಡಿತಯೋಗಿರಾಜನೆ, ನಿನ್ನ ಅನುಗ್ರಹದಿಂದ ನಾನು ಧವಳ ಕೀರ್ತಿ, ಜ್ಞಾನ, ವ್ರತ, ಶೀಲ, ತಪೋಫಲ ಮತ್ತು ಅನಂತ ಪುಣ್ಯಗಳನ್ನು ಪಡೆದಿರುವೆ. ಇಹಲೋಕದಲ್ಲಿ ನಾನು ಬಯಸಬೇಕಾದುದು ಇನ್ನೇನಿದೆ? ಈ ದೇಹವಲ್ಲದೆ ಮೂಲೋಕದಲ್ಲಿ ಇದಕ್ಕಿಂತ ದುಃಖಕರವಾದ ವಸ್ತು ಇನ್ನಾವುದುಂಟು? ಅದನ್ನು ವ್ಯಾಧಿ ಬಂಧಿಸಿದಾಗ ಅದಕ್ಕಿಂತ ಹೇಯವಾದುದು ಇನ್ನಾವುದಿದೆ? ಎಲೈ ಮಹಾಜ್ಞಾನಿಯೆ, ಉತ್ತಮರ ಕರ್ತವ್ಯಗಳನ್ನಲ್ಲದೆ ಧ್ಯಾನದ ಮೂಲಕ ದೇಹತ್ಯಾಗ ಮಾಡುವ ವಿಧಾನವನ್ನು ನೀನು ಬಲ್ಲೆ. ಕಾರಣ ನನಗೆ ಅದರ ದೀಕ್ಷೆಯನ್ನಿತ್ತು ಅನುಗ್ರಹಿಸು.''

ದೀಕ್ಷೆ ಮತ್ತು ವ್ರತಾಚರಣೆ: ಇಚ್ಛಾಮರಣದ ಉಗ್ರ ಪಥವನ್ನು ಬಿಡುವಂತೆ ಅವನ ಮನವೊಲಿಸಲು ಪ್ರಯತ್ನಿಸಿ ವಿಫಲನಾದ ಗಣಿಗಳ ಪ್ರಭುವು, ಸೂಕ್ತವಾದ ಸಲ್ಲೇಖನಾ ದೀಕ್ಷೆಯನ್ನು ಶೃತಮುನಿಗೆ ನೀಡಿದನು. ದೀಕ್ಷಿತ ಮುನಿಯು ಚಿಂತಿಸಬೇಕಾದುದನ್ನೆಲ್ಲ ಶಾಂತಚಿತ್ತದಿಂದ ಚಿಂತಿಸತೊಡಗಿದನು :

'ಐಹಿಕ ಜೀವನ ಸಾಗರದಲ್ಲಿ ಭಯಂಕರವಾದ ಜೀವಿಜಂತುಗಳು ತುಂಬಿರುವುವು. ಈ ಸಾಗರವು ಕ್ರೂರ ಘನಕ್ರೂರ ತಿಮಿಂಗಲು ಹಾಗೂ ಮೊಸಳೆಗಳ ತಂಡಗಳಿಂದ, ಜೀವನ್ಮರಣಗಳ ಬೃಹತ್ ತೆರೆಗಳಿಂದ ತುಂಬಿದ್ದು, ಹಗಲು ರಾತ್ರಿ ಹಿಂಸಿಸುತ್ತಿವೆ. ಈ ದೇಹವು ಸಂಕಷ್ಟಗಳ ಆಲಯ. ದಿಗಂಬರರು ಮಾತ್ರವಲ್ಲದೆ ಎಲ್ಲರೂ ಅದನ್ನು ತ್ಯಜಿಸುವುದುಚಿತ. ಆದ್ದರಿಂದ ಮುನಿಗಳು ವಿಧಿ-ವಿಧಾನಗಳಿಂದ ಉಗ್ರವಾಗಿ ದೇಹದಂಡಿಸಿ, ಅದನ್ನು ಕಿತ್ತೆಸೆಯಲು ಸದಾ ಉತ್ಸುಕರಾಗುವರು. ದೇಹದಲ್ಲಿ ಸಾಂದ್ರಗೊಂಡ ಭೋಗವಸ್ತುಗಳು ಪುನರ್ಜನ್ಮಗಳ ಮಹಾಕೆಡುಕನ್ನು ಮಾತ್ರ ಗಳಿಸಿಕೊಡಬಲ್ಲ ವಿಷದಿಂದ ತುಂಬಿ ತುಳುಕುತ್ತವೆ; ಕಾರಣ, ಮುನಿಗಳೆಲ್ಲ ಕರ್ಮಗಳನ್ನು ನಾಶ ಮಾಡಿ, ದೇಹವನ್ನು ತ್ಯಜಿಸಿ, ಅಮರತ್ವವನ್ನು ತಲುಪಬಯಸುವರು'.

'ದೇಹದ ಊರುಗೋಲನ್ನಾಧರಿಸಿ ಯಾವ ಜ್ಞಾನಿ ಮಾತ್ರ ಪೃಥ್ವಿಯ ಮೇಲೆ ಅಲೆದಾಡಬಯಸುವನು? ಕಷ್ಟದ ಅಗ್ಗಿಷ್ಟಿಕೆಯಲ್ಲಿ ಈ ದೇಹವಿರುವುದು. ಇಂದ್ರಿಯಗಳೆಂಬ ತೈಲದಲ್ಲಿ ಅದು ತೊಯ್ದಿರುವುದು. ಅಸಹ್ಯವಾದ ಐಹಿಕ ಬದುಕಿನ ಸುಡುಬಿಸಿಲಿನಲ್ಲಿ ಅದು ಬೆಂದಿರುವುದು. ಸ್ತ್ರೀಯನ್ನು ಸೃಷ್ಟಿಸಲಾಗಿದೆ - ಅಂದಮೇಲೆ ಮತ್ತೊಂದು ಪಾಪವನ್ನೇಕೆ ಸೃಷ್ಟಿಸಬೇಕು? ದೇಹವನ್ನು ಸೃಷ್ಟಿಸಲಾಗಿದೆ - ಅಂದಮೇಲೆ ಮತ್ತೊಂದು ನರಕವನ್ನೇಕೆ

ಸೃಷ್ಟಿಸಬೇಕು? ಗಂಡು ಸಂತಾನ ಸೃಷ್ಟಿಯಾದನಂತರ ಬೇರೆ ವೈರಿಗಳನ್ನೇಕೆ ಸೃಷ್ಟಿಸಬೇಕು? ಬ್ರಹ್ಮನ ಎಲ್ಲ ಸೃಷ್ಟಿಗಳೂ ಹೀಗೆ ವ್ಯರ್ಥವಾಗಿವೆಯಲ್ಲವೆ?'.

'ಈ ದೇಹವು ಅಪಾರ ಸಂಕಷ್ಟಗಳ ಭ್ರೂಣ. ಯೌವ್ವನ, ಸಂಪತ್ತು, ರಾಗಾತಿಶಯಗಳಲ್ಲಿ ಅದು ದಹಿಸಿ ಹೋಗುವುದು. ವೃದ್ಧಾಪ್ಯವು ಕೋಪಾಸ್ತ್ರದ ಒರೆ. ಹೀಗೆ, ಜೀವನದ ಪ್ರತಿ ಹಂತದಲ್ಲಿ ವಿಪತ್ತಲ್ಲದೆ ಬೇರೇನಿರುವುದು? ಪೂರ್ವಜನ್ಮದ ಸುಕೃತದಿಂದ ನಾನೀಗ ಉದಾತ್ತ ಜೀವನ, ಸದೃಡ ದೇಹ, ಅಪರೂಪವಾದ ಮೇಧಾಶಕ್ತಿ, ಉತ್ತಮ ಸಹೋದ್ಯೋಗಿಗಳ ಸಂಯೋಗ ಹಾಗೂ ಜಿನದೇವತೆಯ ಅನುಗ್ರಹವನ್ನು ಪಡೆದಿರುವೆ. ನನ್ನಷ್ಟು ಭಾಗ್ಯಶಾಲಿ ಇನ್ನಾರಿರುವರು?'

ಹೀಗೆ ಲೋಕಸ್ವರೂಪದ ಬಗ್ಗೆ ಚಿಂತಿಸಿ, ಅದು ಕ್ಷಣಭಂಗುರವೆಂಬುದನ್ನು ಸಾಬೀತು ಪಡಿಸುತ್ತಾ ಶಾಂತ ಮತ್ತು ಅಚಲ ಚಿತ್ತನಾಗಿ, ಅರ್ಧನಿಮೀಲೀತ ನಯನಗಳಿಂದ ಧ್ಯಾನಗೈಯುತ್ತಾ, ಶೃತಮುನಿಯು ಸಮಾಧಿಯಲ್ಲಿ ನಿರತನಾದನು.

ಪರಿಸಮಾಪ್ತಿ : ತನ್ನ ಹೃನ್ಮಂದಿರದಲ್ಲಿ ಸಿದ್ಧಸ್ವರೂಪವನ್ನು ಪ್ರತಿಷ್ಠಾಪಿಸಿಕೊಂಡು, ಮೂಲಮಂತ್ರಗಳಿಂದ ಅದನ್ನು ಸಿಂಚನಗೊಳಿಸುತ್ತಾ, ಅವನು ದೇಹತ್ಯಾಗ ಮಾಡಿದನು. ನೆರೆದ ಮುನಿಗಳೆಲ್ಲ ಅವನನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಪಾಪ ಮತ್ತು ಮಾಯೆಗಳಿಂದ ವಿಮುಕ್ತಿ ಪಡೆದು, ಶೃತಮುನಿಯು ಭೋಗಾಂಕಗಳನ್ನು ಒಂದೊಂದಾಗಿ ಏರುತ್ತ, ಕಲ್ಪವನ್ನು ತಲುಪಿದನು. ಸೋಪಾನ ಪಂಕ್ತಿಯನ್ನು ಹೊಂದಿದ್ದ ಆ ಕಲ್ಪದ ಒಳಗೆ ಒಂದು ಕಣ ಧೂಳಿಯೂ ಇರಲಿಲ್ಲ; ಏಕೆಂದರೆ ತಮ್ಮಿಂದ ಉಕ್ಕುವ ಆನಂದಬಾಷ್ಪಗಳಿಂದ ಅಪ್ಸರೆಯರು ಅದನ್ನು ತೊಳೆದು, ತೊಳೆದು, ಸದಾ ಶುಚಿಯಾಗಿಟ್ಟಿದ್ದರು.

ಶೃತಮುನಿಯ ನಿರ್ಗಮನದ ನಂತರ ಲೋಕವನ್ನೆಲ್ಲ ಶೂನ್ಯತೆ ತುಂಬಿತು. ಅವನ ಭಕ್ತರ ಮನವನ್ನು ದಿಗ್ಭ್ರಮೆಯೆಂಬ ಕತ್ತಲು ವ್ಯಾಪಿಸಿತು. ಅಸಹನೀಯ ವಿರಹದಿಂದಾಗಿ ಅವರ ಕಣ್ಣೀರು ದುಃಖ ಜ್ವಾಲೆಯಲ್ಲಿ ತಳಮಳಿಸಿತು.

ಹೀಗೆ ಸಾರ್ವತ್ರಿಕ ಗೌರವಕ್ಕೊಳಗಾದ ಶೃತಮುನಿಯು ತನ್ನ ಪರಿಶುದ್ಧ ಚಾರಿತ್ರ್ಯದಿಂದ ಎಲ್ಲರ ಮನಸ್ಸನ್ನು ಸೂರೆಗೊಂಡನು. ದೈವಶಕ್ತಿಯು ಮಹಾಮುನಿಯೊಬ್ಬನ ಜೀವನವನ್ನು ಅಂತ್ಯಗೊಳಿಸಿತು. 'ಆದ್ದರಿಂದ, ಓ ಮಾನವರೇ, ತಪಶ್ಯಸ್ತ್ರದಿಂದ ದೇಹವನ್ನೇ ಸಂಹರಿಸಿರಿ', ಎಂದು ಪ್ರಾಜ್ಞರು ಕರೆಯಿತ್ತರು.

ನಿಸಿಧಿಯ ಮಹತ್ವ : 'ಜುಲೈ 7, 1432ರ ಸೋಮವಾರದಂದು ಶೃತಮುನಿಯ ಈ ನಿಷದ್ಯ (ಸಮಾಧಿ ಲೇಖ)ವನ್ನು ಧರ್ಮವನ್ನು ಜ್ಞಾಪಿಸಲೋಸುಗ ಇಲ್ಲಿ ನಿಲ್ಲಿಸಲಾಯಿತು. ನಿಷ್ಕಳಂಕ ಚಾರಿತ್ರ್ಯನೊಬ್ಬನು ಇಹ ಜೀವನ ತ್ಯಜಿಸಿ ಪರಲೋಕಕ್ಕೆ ನಿರ್ಗಮಿಸಿದ ಸ್ಥಳಕ್ಕೆ

ಗೌರವ ತೋರುವುದು ಮೃತರಿಗೆ ಗೌರವ ತೋರಿದಂತಲ್ಲವೇ?

ಸರಸ್ವತಿಯ ವೀಣೆಗೆ ಸರಿಸಮಾನವಾದ ಈ ಸಂಸ್ಕೃತ ಕಾವ್ಯವನ್ನು ಮಂಗರಾಜನು ರಚಿಸಿದನು. ರಚನೆಯ ಧ್ವನಿಯೊಂದಿಗೆ (ಅರ್ಥ) ಸಂಗೀತ ಸ್ವರ (ಸ್ವರಾಂಶವನ್ನು) ಸಂಯೋಜಿಸಿ ಅವನು ಹಾಡಬಲ್ಲವನಾಗಿದ್ದನು.'

ವಿಧಿ ವಿಧಾನ ವಿಶ್ಲೇಷಣೆ: ಮರಣ ಕಾಲದಲ್ಲಿ ಮತ್ತು ಅನಂತರ ಜರುಗುವ ಘಟನೆಗಳ ಅತ್ಯಂತ ಸ್ಪಷ್ಟ ಚಿತ್ರವನ್ನು ಸಿದ್ಧಾಂತಬಸದಿಯ ಈ ನಿಸಿಧಿ ಶಾಸನವು ಒದಗಿಸುವುದು. ಇದು ಶ್ರವಣಬೆಳ್ಗೊಳದಲ್ಲಿರುವ ಅತ್ಯಂತ ಸುದೀರ್ಘ, ಉತ್ಕೃಷ್ಟ ಮತ್ತು ಕಟ್ಟಕಡೆಯ ನಿಸಿಧಿ ಸ್ಮಾರಕವೂ ಆಗಿದೆ.

1. ಸಂಘವನ್ನಾಗಲಿ, ಮುನಿಗಣವನ್ನಾಗಲಿ, ಶ್ರಾವಕ ಪ್ರಮುಖರನ್ನಾಗಲಿ, ಈ ಶಾಸನವು ಪ್ರಸ್ತಾಪಿಸುವುದಿಲ್ಲ. ಹೊಯ್ಸಳ ಬಲ್ಲಾಳನನ್ನು ದುರ್ಭರ ರೋಗದಿಂದ ಮುಕ್ತಗೊಳಿಸಿದ ಅನುಷಂಗಿಕ ಪ್ರಸ್ತಾಪ ಮಾತ್ರ ಇಲ್ಲಿದೆ. ಇದನ್ನು ಬಿಟ್ಟರೆ ಇಲ್ಲಿ ಬರುವ ಇನ್ನೊಬ್ಬ ಲೌಕಿಕನೆಂದರೆ ಕವಿ ಮಂಗರಾಜ ಮಾತ್ರ.

2. ಈ ಶಾಸನವು ನಂದಿ ಮತ್ತು ಇಂಗುಳೇಶ್ವರ ಸಂಘಗಳ ಮುನಿಗಳಿಗೆ ಸಂಬಂಧಿಸಿದೆ. ವಿಪರೀತ ಶೀತಬಾಧೆ, ರೋಗ, ಇಲ್ಲವೆ ಇನ್ನಾವುದೆ ದೈಹಿಕ ಅಸ್ವಾಸ್ಥ್ಯದಿಂದ ಪಾರುಮಾಡಿಕೊಳ್ಳಲು ಬಹುತೇಕ ಎಲ್ಲ ಮುನಿಗಳು ಅವರವರ ಜೀವನದ ಮುಸ್ಸಂಜೆಯಲ್ಲಾಗಲಿ, ಸ್ವಲ್ಪಕಾಲ ಮುಂಚೆಯಾಗಲಿ, ಸಮಾಧಿಯನ್ನಾಚರಿಸಿ ಅಂತ್ಯ ಸಾಧಿಸಿಕೊಳ್ಳುತ್ತಿದ್ದರೆಂದು ಈ ಶಾಸನದಿಂದ ತಿಳಿದುಬರುವುದು. ಚಾರುಕೀರ್ತಿ, ಪಂಡಿತರಾಜ, ಸಿದ್ಧಾಂತಯೋಗಿ ಮತ್ತು ಶೃತಮುನಿಗಳು ಬಹುಶಃ 12 ರಿಂದ 15ನೆಯ ಶತಮಾನಗಳ ಕಾಲಾವಧಿಯಲ್ಲಿ ಜೀವಿಸಿದ್ದರು. ಇವರ ಸಮಾಧಿ ವ್ರತಾಚರಣೆಗಳು, ಸಾಮಾನ್ಯವಾಗಿ ನಿರೂಪಿತಗೊಂಡಿರುವ ಸಮಾಧಿ-ವ್ರತಾಚರಣೆಗಳಿಗಿಂತ ಹೆಚ್ಚು ವಿಶದವಾಗಿ ದಾಖಲೆಗೊಂಡಿವೆ.

3. ಇಲ್ಲಿಯ ವಿವರಣೆಯು ಮಠೀಯ ಪರಂಪರೆಯ ಮೇಲೆ ಸಾಕಷ್ಟು ಬೆಳಕು ಚೆಲ್ಲುವುದು. ಶಿಷ್ಯರ ತರಬೇತಿ, ಉತ್ತರಾಧಿಕಾರಿಗಳ ಆಯ್ಕೆ, ಸಂಘವನ್ನು ಹಸ್ತಾಂತರಿಸುವ ವಿಧಾನ, ಗುರುವಿನ ನಿರ್ಗಮನದ ಗಳಿಗೆಯಲ್ಲಿ ಶಿಷ್ಯರಲ್ಲಿ ಉದ್ಭವಿಸುತ್ತಿದ್ದ ಆತಂಕ, ಮೊದಲಾದವುಗಳು ಇವುಗಳಲ್ಲಿ ಗಮನಾರ್ಹ. ರಾಜನೇ ಇರಲಿ ಶ್ರಮಣನೇ ಇರಲಿ, ಐಹಿಕ ಬಂಧನಗಳನ್ನು ತೊರೆಯುವ ಮೊದಲು ಯೋಗ್ಯ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿ, ತನ್ನ ರಾಜ್ಯದ ಅಥವಾ ಸಂಘದ ಹಿತರಕ್ಷಣೆಗೆ ಏರ್ಪಾಡು ಮಾಡುವುದೊಂದು ಪ್ರಮುಖ ಕರ್ತವ್ಯವೆನಿಸಿತ್ತು. ಆರಂಭ ಕಾಲದ ಶಾಸನಗಳಲ್ಲಿ ಈ ಬಗೆಯ ಹಸ್ತಾಂತರದ ಬಗ್ಗೆ ಹೆಚ್ಚು ಪ್ರಸ್ತಾಪ ಬರುವುದಿಲ್ಲ. ಬಹುಶಃ ಇದಕ್ಕೆ ಕಾರಣವೆಂದರೆ, ಆ ಕಾಲದ ಶ್ರಮಣರು ಮಠೀಯ

ಸಂಸ್ಥೆಗಳಲ್ಲಿ ತಮ್ಮನ್ನು ಹೆಚ್ಚು ತೊಡಗಿಸಿಕೊಂಡಿರದಿಲ್ಲದ್ದು; ಅಲ್ಲದೆ, ಶೃತಮುನಿಯ ಕಾಲದಲ್ಲಿದ್ದಂತೆ, ಮಠೀಯ ಸಂಸ್ಥೆಗಳು ಹೆಮ್ಮರವಾಗಿ ಬೆಳೆದಿರದಿಲ್ಲದ್ದು.

4. ಪ್ರಕಾಂಡ ಪಂಡಿತರಾಗಿದ್ದ ಶ್ರಮಣರು ಕೂಡ ಸಂಘದ ವಯೋವೃದ್ಧರ ಅನುಮತಿಯಿಲ್ಲದೆ ಮರಣ ದೀಕ್ಷೆಯನ್ನು ಪಡೆದುಕೊಳ್ಳುವಂತಿರಲಿಲ್ಲವೆಂಬುದು ಇಲ್ಲಿ ಸ್ಪಷ್ಟಗೊಂಡಿದೆ. ಪಂಡಿತೇಂದ್ರ ಯೋಗಿರಾಜನಿಂದ ದೀಕ್ಷೆ ಬೇಡಿದ ಶೃತಮುನಿಯ ನಿದರ್ಶನವು ಇದನ್ನು ಸಾಬೀತುಗೊಳಿಸುವುದು. ದೀಕ್ಷೆ ಕೊಡುವ ಮೊದಲು ಈ ಕಠಿಣ ಮಾರ್ಗವನ್ನು ತುಳಿಯದಿರಲು ದೀಕ್ಷಾಗುರು ಪ್ರಯತ್ನಮಾಡಿ, ಮರಣಾರ್ಥಿಯ ಮನಸ್ಥೈರ್ಯವನ್ನು ಹೇಗೆ ತಿಳಿದುಕೊಳ್ಳುತ್ತಿದ್ದನೆಂಬುದು ಇಲ್ಲಿ ವ್ಯಕ್ತಗೊಂಡಿದೆ. ಮರಣ ಮಾರ್ಗದಿಂದ ಸಾಧಕನ ಮನಃ ಪರಿವರ್ತನೆ ಮಾಡುವುದಕ್ಕಿಂತ ಹೆಚ್ಚಾಗಿ ಅವನ ಸಂಕಲ್ಪ ಶಕ್ತಿಯನ್ನು ಪರೀಕ್ಷಿಸುವುದೇ ಇದರ ಉದ್ದೇಶವಾಗಿತ್ತೆಂದು ಕಾಣುವುದು.

5. 'ಪ್ರತಿಯೊಬ್ಬನು ತನ್ನ ಸಾಮರ್ಥ್ಯ ಮತ್ತು ಅಂತಸ್ತಿಗನುಗುಣವಾಗಿ ಸಮಾಧಿ ಮಾರ್ಗ'ವನ್ನು ಆಯ್ಕೆಮಾಡಿಕೊಳ್ಳುತ್ತಿದ್ದನೆಂಬುದಕ್ಕೆ ಅನೇಕ ನಿದರ್ಶನಗಳು ದೊರೆಯುವುವು. ವ್ರತಾಚರಣೆಯಲ್ಲಿ ಸಣ್ಣ ಪುಟ್ಟ ವ್ಯತ್ಯಾಸಗಳಿದ್ದವೆಂಬುದನ್ನು, ಕಠಿಣತಮ ತಪಸ್ಸನ್ನು ಸದೃಢ ಸಾಧಕರಿಗೆ ಮಾತ್ರ ಶಿಫಾರಸು ಮಾಡಲಾಗುತ್ತಿತ್ತೆಂಬುದನ್ನು, ಇದು ಸೂಚಿಸುವುದು. ಇಲ್ಲಿ ಉಲ್ಲೇಖಗೊಂಡಿರುವ ವಿವರಗಳೆಲ್ಲ ತಪಸ್ಸು ಮತ್ತು ಧ್ಯಾನಕ್ಕೆ ಸಂಬಂಧಿಸಿದ್ದು, ನಿರಸನದ ವಿಧಾನಕ್ಕಾಗಲಿ ಅಥವಾ ಆಚರಣೆಯ ಕಾಲಾವಧಿಗಾಗಲಿ ಅಲ್ಲ. ಶೃತಕೀರ್ತಿ ಭಟ್ಟಾರಕನು ಬುದ್ಧಿಮತ್ತೆಯ ಬಲದಿಂದ ತಾನು ನಿರ್ಣಯಿಸಿದ್ದ ಸಮಾಧಿ ಪ್ರಭೇದವನ್ನು ಸಾಧಿಸಿದನು. ಪಂಡಿತಯತಿಯು 'ಕಠಿಣ ತಪಸ್ಸನ್ನಾಚರಿಸಿದನು' ಮಾತ್ರ. ಶೃತಮುನಿಯು ''ತನಗೆ ತಕ್ಕುದಾದ ಸಲ್ಲೇಖನಾವನ್ನು ಸ್ವೀಕರಿಸಿ''ದನಾದರೆ, ಸಿದ್ಧಾಂತಯೋಗಿಯು ''ಸಮಾಧಿಯೋಗ್ಯ ತಪ'' ವನ್ನಾಚರಿಸಿದನು. ಈ ಸಮಸ್ತ ಶ್ರಮಣರು ಬೆಳ್ಗೊಳದಲ್ಲಿಯೆ ತಮ್ಮ ಜೀವನಾಂತ್ಯಗೊಳಿಸಿರಬಹುದು; ಇಲ್ಲವೆ ಇವರಲ್ಲಿ ಕೆಲವರು ಬೇರೆಡೆ ಸಾವನ್ನಪ್ಪಿ ಈ ಪುಣ್ಯ ಕೇಂದ್ರದಲ್ಲಿ ನಿಸಿಧಿ ಗೌರವಕ್ಕೆ ಪಾತ್ರರಾಗಿರಬಹುದು.

6. ಬೆಳ್ಗೊಳದ ಪ್ರಖ್ಯಾತ ನಿಸಿಧಿಗಳಲ್ಲಿ ಕೊನೆಯದಾದ ಶೃತಮುನಿಯ ಶಾಸನವು ನಿಸಿಧಿಗಳಿಗೆ ಸಮಾಜ ನೀಡುತ್ತಿದ್ದ ಮಹತ್ವವನ್ನು ತಿಳಿಸುವ ಅತ್ಯುತ್ತಮ ದಾಖಲೆಯಾಗಿದೆ. ಇದರಿಂದ ವ್ಯಕ್ತವಾಗುವುದೇನೆಂದರೆ: (ಅ) 15ನೆಯ ಶತಮಾನದಾರಂಭಕ್ಕೆ ನಿಸಿಧಿಯ ಪವಿತ್ರೀಕರಣ ಮತ್ತು ಪೂಜೆ ಸಾಕಷ್ಟು ಜನಪ್ರಿಯಗೊಂಡಿತ್ತು, ಮತ್ತು (ಆ) ನಿಕ್ಕಳಂಕನು ಮಡಿದ ತಾಣಕ್ಕೆ ನೀಡುವ ಗೌರವವು ಮೃತನಿಗೆ ಸಲ್ಲಿಸುವ ಗೌರವವೆಂದೇ ಭಾವಿಸಲಾಗಿತ್ತು.

15ನೆಯ ಶತಮಾನದ ನಂತರ ಸಮಾಧಿಮರಣವು ಬಹುಮಟ್ಟಿಗೆ ಬೆಳ್ಗೊಳದ ಇತಿಹಾಸದಿಂದ ಮಾಯವಾಯಿತು. ತದನಂತರದ ಶ್ರಮಣರು ಸಂಸ್ಥೆಯ ಆಡಳಿತ ಸಂರಕ್ಷಣೆಯಲ್ಲಿ ಎಷ್ಟೊಂದು ಸಿಲುಕಿಕೊಂಡರೆಂದರೆ, ಇಂಥ ವ್ರತಗಳನ್ನು ಆಚರಿಸಲು ಅವರಿಗೆ ಸಮಯವೇ ದೊರಕಲಿಲ್ಲವೆಂದು ಕಾಣುವುದು. ಸುಮಾರು ಒಂದು ನೂರು ನಿದರ್ಶನಗಳಲ್ಲಿ ಕೊನೆಯದಾದ 1430ರ ಈ ನಿಸಿಧಿಯು ಬೆಳ್ಗೊಳದ ಇತಿಹಾಸದಲ್ಲೊಂದು ಹೆಗ್ಗುರುತಾಗಿದೆ. ಇಲ್ಲಿಂದ ಮುಂದೆ ಸಮಾಧಿ, ಸನ್ಯಸ, ಪಂಚನಮಸ್ಕಾರ, ಸಲ್ಲೇಖನಾ, ಆರಾಧನಾ, ಮೊದಲಾದ ಪದಗಳು ಶ್ರವಣಬೆಳ್ಗೊಳ ಕವಿಗಳ ಶಬ್ದಭಂಡಾರದಿಂದ ಬಹುತೇಕ ಮರೆಯಾಗುವುವು.

ಅಧ್ಯಾಯ ಆರು

ಗೌರವಾನ್ವಿತ ಮುನಿಗಳು : ಅವರ ಸಿದ್ಧಿ ಸಾಧನೆಗಳು

ನಿಸಿಧಿಗಳಿಂದ ಗೌರವಾನ್ವಿತರಾದವರಲ್ಲಿ ಶ್ರವಣಬೆಳ್ಗೊಳದ ಕೆಲವು ಮುನಿಗಳು ಪಾಂಡಿತ್ಯ, ಧರ್ಮ ಮತ್ತು ಸಿದ್ಧಾಂತಗಳಲ್ಲಿ ಖ್ಯಾತಿ ಪಡೆದವರಾಗಿದ್ದರೆ, ಇನ್ನೂ ಕೆಲವರು ಮಠ, ದೇವಾಲಯ ಮೊದಲಾದವುಗಳ ನಿರ್ಮಾಣ ಕಾರ್ಯದಲ್ಲಿ ಹೆಸರು ಗಳಿಸಿದ್ದರು. ವೈಯಕ್ತಿಕ ಪ್ರಭಾವದಿಂದ ಅನೇಕ ಶ್ರಮಣ-ಶ್ರಾವಕರನ್ನು ತಮ್ಮ ಸುತ್ತ ಸಂಘಟಿಸಿಕೊಂಡು, ಆಧ್ಯಾತ್ಮಿಕವಾಗಿಯೂ ಆರ್ಥಿಕವಾಗಿಯೂ ಸಂಘ-ಸಂಸ್ಥೆಗಳನ್ನು ಭದ್ರಗೊಳಿಸುವಲ್ಲಿ ಇವರು ಸಫಲರಾಗಿದ್ದರು. ಈ ಚೈತನ್ಯಶೀಲ ಆಚಾರ್ಯರ ಸಿದ್ಧಿ-ಸಾಧನೆಗಳು ಅವರ ಪೂರ್ವಜರ ಸಿದ್ಧಿ-ಸಾಧನೆಗಳಿಗಿಂತ ಕೊಂಚ ಭಿನ್ನವಾಗಿದ್ದವು.

7-9ನೆಯ ಶತಮಾನಗಳ ಕಾಲಾವಧಿಯ ಶ್ರವಣರು ಬಹುಮಟ್ಟಿಗೆ ಸಂಪತ್ತು, ಆಸ್ತಿ, ಮಠ, ಭೂಮಿ-ಕಾಣಿ, ದೇವಾಲಯ, ಶ್ರಾವಕವರ್ಗ ಹಾಗೂ ರಾಜಾಶ್ರಯದ ಬಂಧನಗಳಿಂದ ದೂರವಿದ್ದು, ಸರಳ ಹಾಗೂ ನೇಮನಿಷ್ಠ ಜೀವನವನ್ನು ಸಾಗಿಸುವುದರಲ್ಲಿ ತೃಪ್ತಿ ಕಂಡುಕೊಂಡಿದ್ದರು. ಅವರು ಶಾಶ್ವತವಾದ ವಾಸಸ್ಥಾನವನ್ನಾಗಲಿ, ಸಾಂಸ್ಥಿಕ ಸುಖಸೌಕರ್ಯಗಳನ್ನಾಗಲಿ, ಬಯಸಿರಲಿಲ್ಲ. ಹಿರಿಯರಿಂದ ಆಧ್ಯಾತ್ಮಿಕ ಮಾರ್ಗದರ್ಶನ ಪಡೆಯಲು ಮಾತ್ರ ಅವರು ಸಂಘವನ್ನು ಸೇರಿದ್ದರೇ ವಿನಃ, ವೈಯಕ್ತಿಕ ಸ್ಥಾನಮಾನದ ಲಾಭದಾಶೆಯಿಂದಲ್ಲ. ಇದರಂತೆ ಅವರು ಶ್ರಾವಕರಿಗೆ ಮಾರ್ಗದರ್ಶನ ನೀಡುತ್ತಿದ್ದುದ್ದು ಅದು ತಮ್ಮ ಕರ್ತವ್ಯವೆಂದು ಭಾವಿಸಿ ಮಾತ್ರ; ತಮ್ಮನ್ನಾಗಲಿ, ತಮ್ಮ ಸಂಘವನ್ನಾಗಲಿ, ಬಲಪಡಿಸಿಕೊಳ್ಳಲೆಂದಲ್ಲ. ಕಳ್ಬಪ್ಪುವಿಗೆ ಬರುತ್ತಿದ್ದ ಆ ಕಾಲದ ಬಹುತೇಕ ಶ್ರಮಣರು ಮೋಕ್ಷವನ್ನರಸಿ ಬಂದವರಾಗಿದ್ದರು. ಅವರು ತಮ್ಮ ಹಿರಿಯರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು

ಅವರ ಆದರ್ಶಗಳನ್ನು ಅಳವಡಿಸಿಕೊಳ್ಳುತ್ತಿದ್ದರು. ಅಂಥವರ ಭೌತಿಕ ಆವಶ್ಯಕತೆಗಳೂ ಅತ್ಯಲ್ಪವಾಗಿದ್ದು ಅವು ಬಹುತೇಕ ಕಮಂಡಲು ಮತ್ತು ಮಯೂರಪಿಂಛಕ್ಕೆ ಸೀಮಿತವಾಗಿದ್ದವೆನ್ನಬಹುದು. ಕಾಡಿನಲ್ಲಿ, ಗುಹೆಗಳಲ್ಲಿ ವಾಸಿಸಿ, ಗೆಡ್ಡೆ ಗೆಣಸುಗಳನ್ನು ಸೇವಿಸಿ, ತೃಪ್ತರಾಗಿರುತ್ತಿದ್ದ ಇವರು ಬೇಯಿಸಿದ ಆಹಾರವನ್ನು ಶ್ರಾವಕರು ಕೊಟ್ಟಾಗ ಮಾತ್ರ ಸ್ವೀಕರಿಸುತ್ತಿದ್ದರು. ಅಪರಿಗ್ರಹದಲ್ಲಿ ಸಂಭ್ರಮಿಸುತ್ತಿದ್ದ ಆ ಮುನಿಗಳು ಶೀತ, ಉಷ್ಣ ಮತ್ತು ಸೋನೆಯನ್ನು ಸಂಭ್ರಮದಿಂದ ಸ್ವಾಗತಿಸಿ, ಸಹಿಸುತ್ತಿದ್ದರು. ಬೆವರು ಅವರಿಗೆ ಸ್ನಾನಜಲವಾಗಿತ್ತು. ದೇಹಕ್ಕೆ ಮೆತ್ತಿದ ಮಲವು ಅವರಿಗೆ ಸುಗಂಧಲೇಪನವಾಗಿತ್ತು. ಶ್ರಾವಕಾನುಯಾಯಿಗಳನ್ನು ಬಯಸದ ಇವರು ಒಂದು ಊರಿನೊಡನಾಗಲೀ ಒಂದು ಪರಿಸರದೊಡನಾಗಲೀ ಬೆಳೆಯಬಹುದಾದ ಮೋಹದ ತಿಲಮಾತ್ರ ಸಂಕೇತದಿಂದಲೇ ಗಾಬರಿಗೊಳ್ಳುತ್ತಿದ್ದರು. ಧಾರ್ಮಿಕತೆ, ಸರಳತೆ, ನಿರ್ಲಿಪ್ತತೆಯಿಂದ ಅವರು ಲೋಕಮಾನ್ಯರಾಗಿದ್ದರು. ಇಂತಹ ಪರಿವ್ರಾಜಕ ಮುನಿಗಳ ಆಧ್ಯಾತ್ಮಿಕ ಮೋಡಿಯು ಶ್ರಾವಕ ಪ್ರಮುಖರ ಮೇಲೆ ಬಹಳಷ್ಟು ಪ್ರಭಾವ ಬೀರಿದ ಬಗ್ಗೆ ಶಾಸನ ಮತ್ತು ಸಾಹಿತ್ಯದಲ್ಲಿ ವಿಪುಲ ಉದಾಹರಣೆಗಳು ದೊರೆಯುವುವು. ಆದರೆ, ಅದೊಂದು ಸಾಧನೆ ಎಂದೇನೂ ಹೆಮ್ಮೆಪಡುವ ಗೋಜಿಗೆ ಈ ಮುನಿಗಳು ಹೋಗುತ್ತಿರಲಿಲ್ಲ.

ಶ್ರಮಣರು ಮಠಾಧೀಶರಾಗುವರು: ಬೆಳ್ಗೊಳದ ಶ್ರಮಣರು ಮಠೀಯ ಸಂಸ್ಥೆ ಮತ್ತು ಸಮಾಜದ ಮಧ್ಯೆ ಸೇತುವೆಯಾಗತೊಡಗಿದಾಗ ಅವರ ಜೀವನದ ಗತಿ ಬದಲಾಗತೊಡಗಿತು. 10ನೆಯ ಶತಮಾನದ ನಂತರ ಕಾಣಿಸಿಕೊಳ್ಳುವ ಈ ಬದಲಾವಣೆಯ ಪ್ರಮುಖ ಲಕ್ಷಣಗಳು ಇಂತಿವೆ: (ಅ) ಸಮಾಜದಿಂದ ಪ್ರತ್ಯೇಕತೆ ಮತ್ತು ನಿರ್ಲಿಪ್ತತೆಯನ್ನು ಇವರು ಗಂಭೀರವಾಗಿ ಪರಿಗಣಿಸಲಿಲ್ಲ; (ಆ) ನಿರಂತರ ಸಂಚಾರವು ಆವಶ್ಯಕವೆಂದು ಅವರು ಬಗೆಯಲಿಲ್ಲ; (ಇ) ತಮ್ಮ ಹಾಗೂ ತಮ್ಮ ಸಂಘದ ಸುತ್ತ ಶ್ರಾವಕರನ್ನು ಆಕರ್ಷಿಸಿಕೊಳ್ಳುವುದು ಅನುಚಿತವೆಂದು ಅವರು ತಿಳಿಯಲಿಲ್ಲ; (ಈ) ದೇವಾಲಯಗಳ ನಿರ್ಮಾಣ ಮತ್ತು ಲೌಕಿಕರ ಪೋಷಣೆ ಅಥವಾ ಆಶ್ರಯ, ತಪಾಚರಣೆಗಿಂತ ಕಡಿಮೆ ಮಹತ್ವದ್ದೆಂದು ಅವರು ಭಾವಿಸಲಿಲ್ಲ; ಮತ್ತು (ಉ) ಗಣ್ಯರನ್ನು ಗೌರವಿಸುವುದು ಅಥವಾ ಗಣ್ಯರಿಂದ ಗೌರವಿಸಿಕೊಳ್ಳುವುದು ಅಸ್ವಾಭಾವಿಕವೆಂದು ಅವರು ಭಾವಿಸಲಿಲ್ಲ. ಅಂದರೆ, ಕಠೋರ ವ್ರತಾಚರಣೆಯನ್ನು ಅನುಸರಿಸಿ ವೈಯಕ್ತಿಕ ಮೋಕ್ಷ ಪಡೆಯುವಲ್ಲಿ ಕಂಡ ಸಾರ್ಥಕತೆಯನ್ನು ಅವರು ಸಂಘ, ಧರ್ಮ ಮತ್ತು ಸಮಾಜದ ಸೇವೆ ಮಾಡುವುದರಲ್ಲಿಯೂ ಕಂಡುಕೊಂಡರೆಂದರ್ಥ.

ಶ್ರಮಣರ ಜೀವನ ಮತ್ತು ಆಕಾಂಕ್ಷೆಗಳಲ್ಲಾದ ಈ ಬದಲಾವಣೆಯಂತೆ ಬೆಟ್ಟದ ಪರಿಸರದಲ್ಲೂ ಸರಿಸುಮಾರು ಇದೇ ಕಾಲದಲ್ಲಿ ಮಹತ್ವದ ಬದಲಾವಣೆಗಳು ಸಂಭವಿಸಿದವು. ಆಗ ಬಸದಿಗಳು ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳ ಕೇಂದ್ರಗಳಾದವು; ಅದರ ಆಚಾರ್ಯರು ಅವುಗಳ ಅಮೂಲ್ಯ ಆಧಾರ ಸ್ತಂಭಗಳಾದರು. ಸ್ಥಾನಿಕರಾಗಿ,

ಪುರೋಹಿತರಾಗಿ, ಗುರುಗಳಾಗಿ, ಆಸ್ತಿಯ ವ್ಯವಸ್ಥಾಪಕರಾಗಿ, ಶ್ರಮಣರು ತಮ್ಮ ಕಾರ್ಯಕಕ್ಷೆಯನ್ನು ವಿಸ್ತರಿಸಿಕೊಂಡು, 'ಮಂಡಲಾಚಾರ್ಯ'[1] ಅಥವಾ 'ಮಹಾಮಂಡಲಾಚಾರ್ಯ'[2] ಎಂದು ಕರೆದುಕೊಂಡು ತಮ್ಮನ್ನು ತಾವು ಉನ್ನತ ಸ್ಥಾನಕ್ಕೇರಿಸಿಕೊಂಡರು. ಕೆಲವರು 'ಬೆಳ್ಗೊಳದ ಪ್ರಭು'ಗಳೆಂದು ಕರೆದುಕೊಂಡು, ವಿಶಿಷ್ಟ ಲಾಂಛನಗಳನ್ನು ಧರಿಸಿದರು ; ಮತ್ತೆ ಕೆಲವರು ವರ್ಚಸ್ವೀ ಶ್ರಾವಕರನ್ನು ಸಂಪಾದಿಸಿಕೊಂಡು, ತಮ್ಮ ಸ್ಥಾನಮಾನವನ್ನು ಹೆಚ್ಚಿಸಿಕೊಂಡರು.

ಈ ಕಾಲದ ಶ್ರೀಮಂತ ಶ್ರಾವಕರ ಪ್ರಭಾವವು ಅಧಿಕಗೊಂಡು, ಮಂತ್ರಿಗಳು, ದಂಡನಾಯಕರು, ವರ್ತಕರು, ಹೆಗ್ಗಡೆಗಳು, ಮತ್ತಿತರರು ಕೊಟ್ಟ ದಾನಗಳು ಶ್ರಮಣರ ಪೋಷಣೆ ಅಥವಾ ಸಮೃದ್ಧಿಗೆ ಮೂಲ ಸಾಧನಗಳಾದವು.

ಏಕೋವಿಹಾರಿ ಮತ್ತು ಅನಾಮಿಕ ಶ್ರಮಣರು ಲೌಕಿಕ ವರ್ಗದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳತೊಡಗಿದರು. ಪ್ರತಿವಾದಿಗಳೊಂದಿಗೆ ಘರ್ಷಣೆಗಿಳಿಯುವುದು, ಅವರನ್ನು ವಾದಕ್ಕೆ ಆಹ್ವಾನಿಸುವುದು, ವಾದದಲ್ಲಿ ಸೋಲಿಸಿ ಹೆಮ್ಮೆಪಡುವುದು, ಇಂದಿನ ಮುನಿಗಳ ಸಾಮಾನ್ಯಪ್ರವೃತ್ತಿಗಳಾದವು. ಶ್ರೀಮಂತ ಶ್ರಾವಕರನ್ನು ಓಲೈಸಿಕೊಳ್ಳುವ ತಮ್ಮ ಕ್ಷಮತೆಯ ಬಗೆಗೂ ಅವರು ಹೆಮ್ಮೆಗೊಳ್ಳತೊಡಗಿದರು. 12ನೆಯ ಶತಮಾನದಲ್ಲಿ ಶ್ರವಣಬೆಳ್ಗೊಳದ ಎರಡೂ ಬೆಟ್ಟಗಳ ಶಿಖರಭಾಗಗಳು ದೇವಾಲಯಗಳಿಂದ ತುಂಬತೊಡಗಿದ್ದಲ್ಲದೆ, ಈ ಬೆಟ್ಟಗಳ ನಡುವಿನ ಕೊಳ್ಳ ಪ್ರದೇಶವೂ ಸಮೃದ್ಧ ನೆಲಸುನಾಡಾಗಿ ಪರಿವರ್ತನೆಗೊಂಡಿತು. ಬೆಟ್ಟಗಳನ್ನು ಸುತ್ತುವರಿದ ಕಾಡನ್ನು ಕಡಿದು, ಅಲ್ಲಿ ತೋಟ-ತೋಪುಗಳನ್ನು ನಿರ್ಮಾಣ ಮಾಡಿದುದರಿಂದ, ಈ ನಗರ ಪರಿಸರದಲ್ಲಿ ತೋಡಿದ ಚಿಕ್ಕದೊಡ್ಡ ಕೆರೆಗಳಿಂದ, ಸಾಮಾಜಿಕ ಜೀವನಕ್ಕೆ ಸ್ಥಿರತೆಯೊದಗಿ ಮರಣಬೆಟ್ಟದಾಚೆಗೂ ಧಾರ್ಮಿಕ-ಸಾಮಾಜಿಕ ಚಟುವಟಿಕೆಗಳನ್ನು ವಿಸ್ತರಿಸಲು ಸಾಧ್ಯವಾಯಿತು.

ಮರಣ : ಒಂದು ಸಾಮಾಜಿಕ ಘಟನೆ : ಸಮಾಧಿ ಮರಣವೆಂಬುದು ಎಷ್ಟು ಮಹತ್ತರವಾದ ಧಾರ್ಮಿಕ ವಿಧಿಯಾಗಿತ್ತೋ ಅಷ್ಟೇ ಮಹತ್ತರವಾದ ಸಾಮಾಜಿಕ ಸಮಾರಂಭವೂ ಆಗಿತ್ತು. ಕೆಲವು ಆಚಾರ್ಯರು ತಮ್ಮ ಅಂತ್ಯವನ್ನು ತ್ವರೆಗೊಳಿಸಲು ಸಮಾಧಿವ್ರತವನ್ನು ಆಚರಿಸಿದರು; ಇನ್ನು ಕೆಲವರು ತಮ್ಮ ಸಹಜ ಸಾವಿಗೆ ಸ್ವಲ್ಪ ಮುಂಚೆ ಮಾತ್ರ ಔಪಚಾರಿಕವಾಗಿ ಇಲ್ಲವೆ ಸಾಂಕೇತಿಕವಾಗಿ ವ್ರತವನ್ನಾಚರಿಸಿ ತೃಪ್ತಿಪಟ್ಟುಕೊಂಡರು. ಧಾರ್ಮಿಕ ಅಥವಾ ಆಡಳಿತಾತ್ಮಕ ಕಾರ್ಯನಿಮಿತ್ತ ಈ ಪುಣ್ಯಕ್ಷೇತ್ರದ ಹೊರಗೆಲ್ಲೋ ಹೋದಾಗ ಅದನ್ನಾಚರಿಸಿದವರು ಕೆಲವರು; ಇನ್ನು ಕೆಲವರು ತಮ್ಮ ಜೀವನದ ಕೊನೆಗಳಿಗೆಯಲ್ಲೂ

1. ಎಕ II, 175.
2. 71. 348, 456, 535 ಮತ್ತು 557.

ವ್ರತವನ್ನು ಆಚರಿಸಲು ಸಮಯವನ್ನಾಗಲಿ ಸ್ಥೈರ್ಯವನ್ನಾಗಲಿ ಕಂಡುಕೊಳ್ಳಲಿಲ್ಲ. ಆದರೆ ಈ ಎಲ್ಲ ಬಗೆಯ ಅಂತ್ಯಗಳೂ ಅತಿ ಆಡಂಬರದ ಉತ್ಸವಕ್ಕೆ ತಕ್ಕ ಸಂದರ್ಭಗಳೆಂದೇ ಪರಿಗಣಿಸಲಾಯಿತು. ಇಂಥ ಸಂದರ್ಭಗಳಲ್ಲಿ ನಾಲ್ಕು ಸಮಯಗಳು, ಸಂಘದ ಎಲ್ಲ ಸದಸ್ಯರು ಹಾಗೂ ಸಮಾಜದ ಪ್ರತಿಷ್ಠಿತರು ಸಮಾವೇಶಗೊಳ್ಳುತ್ತಿದ್ದುದನ್ನು ಶಾಸನಗಳು ಮೇಲಿಂದ ಮೇಲೆ ಪ್ರಸ್ತಾಪಿಸುವುವು.

7-9ನೆಯ ಶತಮಾನಗಳ ಧರ್ಮಿಷ್ಠ ಶ್ರಮಣರು ಕಠಿಣತಮ ತಪಸ್ಸು ಮತ್ತು ವ್ರತಗಳನ್ನು ಆಚರಿಸಿ ಮಡಿದರೂ, ಅವರು ಸಾಮಾಜಿಕ ಕುತೂಹಲವನ್ನು ಅಷ್ಟೊಂದು ಕೆರಳಿಸಲಿಲ್ಲ. ಆದರೆ, 12-13ನೆಯ ಶತಮಾನಗಳ ಮಠಾಧಿಪತಿಗಳು ವ್ರತವನ್ನು ಆಚರಿಸದೆ ಮಡಿದರೂ ಅಪಾರ ಸಂಖ್ಯೆಯ ಶ್ರಾವಕರಿಂದ ಗೌರವ ಪಡೆದುಕೊಳ್ಳಲು ಯಶಸ್ವಿಯಾದರು. ಆದಿಕಾಲದ ನಿಸಿಧಿಗಳು ತಳಬಂಡೆಯ ಮೇಲೆ ಕೊರೆದ ಸರಳ ಕೆತ್ತನೆಗಳಾಗಿದ್ದರೆ, ಈ ಕಾಲದ ಸ್ಮಾರಕಗಳು ವಿಶದವಾದ ಶಿಲಾಫಲಕ, ಕಟ್ಟಡ, ಶಿಲ್ಪಗಳ ಸ್ವರೂಪವನ್ನು ಪಡೆದುಕೊಂಡವು. ಆಗ 'ಉನ್ನತ ಶಿಖರಗಳಿಂದ..., ಬಂಡೆಗಳಿಂದ... ನಾನಾ ಜಾತಿಯ ಮರಗಳಿಂದ, ಪುಷ್ಪ-ಫಲ ರಾಶಿಯಿಂದ... ವಿಸ್ತೃತ ಕೊಳ್ಳಗಳಿಂದ, ಕಂದರಗಳಿಂದ, ಆಳವಾದ ನೆಲಗವಿಗಳಿಂದ, ಮಿಕ, ಚಿರತೆ, ಹುಲಿ, ಕತ್ತೆಕಿರುಬ, ಸರ್ಪ ಮತ್ತು ಜಿಂಕೆಗಳಿಂದ ತುಂಬಿದ ದುರ್ಗಮ ಪ್ರದೇಶ'ಗಳೆಲ್ಲ ಬಯಲಾಗಿ,[3] ಅವು ದೇವಾಲಯ, ಮಂಟಪ, ಕೆರೆಗಳಿಂದ ತುಂಬಿಕೊಂಡವು. ವರ್ಚಸ್ವಿ ಶ್ರಾವಕರು 'ಇಟ್ಟಿಗೆಗಳಿಗಾಗಿ ತೋಡಿದ ನೆಲ ಕೆರೆಯಾಗಿ ಮಾರ್ಪಟ್ಟರೆ, ಕಲ್ಲಿಗಾಗಿ ಕೊರೆದ ಬೆಟ್ಟಗಳು ಕಂದರಗಳಾದವು.[4] 'ತಾವು ನಡೆದಲ್ಲೆಲ್ಲ, ಬೀಡು ಬಿಟ್ಟಲ್ಲೆಲ್ಲ, ಕಣ್ಮನ ಹಾಯಿಸಿದಲ್ಲೆಲ್ಲ', ಕೆಲವರು ದೇವಾಲಯಗಳನ್ನು ಸ್ಥಾಪಿಸಿದರು.[5] ತಮ್ಮ ಸುತ್ತಲೂ ಇಂಥ ಬಲಿಷ್ಠ ವರ್ಚಸ್ವಿ ಮತ್ತು ಉತ್ಸಾಹಿ ಗುಡ್ಡರನ್ನು ಹೊಂದಿದ್ದ ಧಾರ್ಮಿಕ ನಾಯಕರು ನಿಜಕ್ಕೂ ತಮ್ಮ ಸ್ಥಾನ, ಪ್ರತಿಷ್ಠೆ ಮತ್ತು ಸಮೃದ್ಧಿಯ ಬಗ್ಗೆ ವಿಶೇಷ ಅಭಿಮಾನ ಬೆಳೆಸಿಕೊಳ್ಳುವುದು ಅನಿವಾರ್ಯವಾಯಿತು.

ಸಂಪತ್ತು, ಶ್ರಾವಕರು ಮತ್ತು ನಾಯಕತ್ವ : ಜೀವನವು ಸಂಕೀರ್ಣವಾಗತೊಡಗಿದಂತೆ, ಶ್ರಮಣ-ಶ್ರಾವಕರ ನಡುವಿನ ಅಂತರ ತೆಳುವಾಗುತ್ತ ನಡೆದಂತೆ, ಬಾಹ್ಯ ಬೆದರಿಕೆಗಳು ಭೀಕರವಾಗತೊಡಗಿದಂತೆ, ಆಂತರಿಕ ಶಕ್ತಿ ಕುಗ್ಗಲಾರಂಬಿಸಿದಂತೆ, ಮಠಾಧಿಪತಿಗಳು ಆಧ್ಯಾತ್ಮಿಕ ಸಿದ್ಧಿಗಳಿಗಿಂತ ಹೆಚ್ಚಾಗಿ ಸಂಸ್ಥೆ ಹಾಗೂ ಶ್ರಾವಕಾನುಯಾಯಿಗಳ ಗಳಿಕೆಯ ಬಗ್ಗೆ ಹೆಚ್ಚು ಆಸಕ್ತರಾಗತೊಡಗಿದರು. ಅಂಥ ಶ್ರಾವಕರಿಂದ ಮಠಕ್ಕೆ ಹೆಚ್ಚು ಸಂಪತ್ತು ಹರಿದುಬರತೊಡಗಿತು. ಸಂಸ್ಥೆಗಳೂ-ಸಂಪತ್ತೂ ಬೆಳೆದಂತೆ ಆಚಾರ್ಯರು ಅದರ ನಿರ್ವಹಣೆಯ ಕಾರ್ಯದಲ್ಲಿ ಆಳವಾಗಿ

3. 1.
4. 176.
5. 136.

ಸಿಲುಕಿಕೊಳ್ಳುವುದು, ತಮ್ಮ ಸಮಯದ ಸಿಂಹಪಾಲನ್ನು ಆಸ್ತಿರಕ್ಷಣೆಗೆ, ಆದಾಯದಭಿವೃದ್ಧಿ, ಭಂಡಾರ ಭದ್ರತೆ, ಸೇವೆಗಳ ಮೇಲ್ವಿಚಾರಣೆ, ಈ ಮೊದಲಾದುವುಗಳಿಗೆ ವಿನಿಯೋಗಿಸಿ, ಜ್ಞಾನ, ತಪಸ್ಸು, ವ್ರತ, ಮುಂತಾದವಕ್ಕೆ ಸಮಯ ಕಂಡುಕೊಳ್ಳಲು ಪರಿಶ್ರಮಪಡಬೇಕಾಯಿತು. ಸಾಮಾಜಿಕ ಮತ್ತು ಲೌಕಿಕ ಅಧಿಕಾರವಲಯವೊಂದು ಧಾರ್ಮಿಕ ಪ್ರಾಧಿಕಾರದ ಸಂಪತ್ತು ಮತ್ತು ಪ್ರಭಾವದ ಬಗ್ಗೆ ಅಸೂಯೆಪಡತೊಡಗಿದಾಗ, ಮಠಾಧಿಪತಿಗಳ ಸಮಸ್ಯೆಗಳು ಇನ್ನೂ ಉಲ್ಬಣಗೊಂಡವು. ಕೆಲವು ಶ್ರಾವಕಾನುಯಾಯಿಗಳು ಮಠಾಧಿಪತಿಗಳ ಬೆಂಬಲಕ್ಕೆ ನಿಂತರು. ಆದರೆ, ದೇವಾಲಯದ ಸಂಪತ್ತು ಸಮಾಜದ ಅತಿ ಶ್ರೀಮಂತರಲ್ಲಿಯೂ ಮತ್ಸರ ಹುಟ್ಟಿಸಲಾರಂಭಿಸಿದಾಗ, ಸಹಧಾರ್ಮಿಕರೂ ಪರಮತೀಯ ಪ್ರತಿದ್ವಂದಿಗಳಿಗಿಂತ ಹೆಚ್ಚು ಅಪಾಯಕಾರಿಯಾಗತೊಡಗಿದರು. ಆಧ್ಯಾತ್ಮಿಕರು ಇಂಥ ಪರಿಸ್ಥಿತಿಯ ವಿರುದ್ಧ ಹೇಗೆ ಹೆಣಗಿದರು, ಹೇಗೆ ಬೆಳ್ಗೊಳದ ಕೆಲವು ವರ್ತಕರು ಮುಖಂಡರ ಸೋಗು ಹಾಕಿ ಮಠದ ಆಚಾರ್ಯರಿಗೆ ಕುಟಿಲತೆಯನ್ನು ಕಲಿಸಿದರು, ಎಂಬುದನ್ನೆಲ್ಲ ಈಗಾಗಲೆ ಗಮನಿಸಿದ್ದನ್ನು ಇಲ್ಲಿ ಮತ್ತೊಮ್ಮೆ ಸ್ಮರಿಸಿಕೊಳ್ಳಬಹುದು.[6]

ಈ ಕಾಲದ ಆಚಾರ್ಯರು ಸಮಾಜದ ಮೇಲೆ ಹೆಚ್ಚು ಪರಾವಲಂಬಿಗಳಾಗಿ ಪ್ರಶ್ನಾರ್ಹ ಉದ್ದೇಶಗಳಿಗೆ ಹಣ ಬಳಸಿದ್ದಲ್ಲದೆ, ಧಾರ್ಮಿಕ ಸಂಸ್ಥೆಗಳ ಸಂಪತ್ತು ಅನಪೇಕ್ಷಿತ ಕಾಲುವೆಗಳಲ್ಲಿ ಬಸಿದು ಹೋಗಿ, ನಿರರ್ಥಕಗೊಳ್ಳುವುದಕ್ಕೆ ಕಾರಣರಾದರು. ನೀತಿಗೆಟ್ಟ ಕೆಲವರು ದೇವಾಲಯದ ಆಸ್ತಿಯನ್ನು ಅಡವು ಹಾಕಲೂ ಹೇಸಲಿಲ್ಲ. ಕಬಳಿಸಲು ದೊರಕಿದ ಇಂತಹ ಪ್ರತಿಯೊಂದು ಅವಕಾಶವನ್ನು ಅತ್ಯಾಸೆ ಮತ್ತು ಆತುರದಿಂದ ಒಂದು ಶ್ರಾವಕ ವರ್ಗವು ಬಳಸಿಕೊಳ್ಳಲೂ ಹಿಂಜರಿಯಲಿಲ್ಲ.[7] ಈ ಕಾಲದ ಊಳಿಗಮಾನ್ಯ ದೊರೆಗಳು ಧಾರ್ಮಿಕ ಸಂಸ್ಥೆಗಳ ಮೇಲೆ ಒತ್ತಾಯದ ಹೊಸ ಕರಗಳನ್ನು ಹೇರಲು, ಹೇಯ ವಿಧಾನಗಳಿಂದ ಅವನ್ನು ಸಂಗ್ರಹಿಸಿಕೊಳ್ಳಲು ಹಿಂಜರಿಯಲಿಲ್ಲ.[8]

ಬೆಳ್ಗೊಳದ ಇತಿಹಾಸದ ಆರಂಭ ಕಾಲದ (7-9ನೆಯ ಶತಮಾನಗಳು) ಶ್ರಮಣರು ಆಸ್ತಿವಂತರಾಗಿರಲಿಲ್ಲ; ಹೀಗಾಗಿ, ಅವರಿಗೆ ದೇವಾಲಯಗಳನ್ನು ಕಟ್ಟುವ ಹಾಗೂ ದತ್ತಿಗಳನ್ನು ನೀಡುವ ತಕ್ಕಿಯಾಗಲಿ, ಅವಶ್ಯಕತೆಯಾಗಲಿ ಇರಲಿಲ್ಲ. ಮುನಿವರ್ಯರು ಸಮಾಧಿ ವ್ರತಾಚರಣೆ ಮಾಡಿ ಮಡಿದಾಗ ಅವರ ಶಿಷ್ಯರು, ಯಾತ್ರಿಗಳು, ಇಲ್ಲವೆ ಇವರಿಬ್ಬರೂ ಸೇರಿ, ಹಾಸುಬಂಡೆಯ ಮೇಲೆ ಸರಳ ನಿಸಿಧಿ ಶಾಸನಗಳನ್ನು ಕೊರೆಸಿ, ಅವರನ್ನು ಗೌರವಿಸಿದ್ದರು. ಇಂತಹ ಧರ್ಮಕಾರ್ಯಗಳಿಗೆ ಅಧಿಕ ಧನವಾಗಲಿ, ಅಸಾಧಾರಣ ಕಲಾಕೌಶಲ್ಯವಾಗಲಿ, ಬೇಕಿರಲಿಲ್ಲ. ಇವರಲ್ಲಿ ಕೆಲವರು ಆಗೊಮ್ಮೆ-ಈಗೊಮ್ಮೆ 'ರಾಜಮಾನ್ಯ'ರೆಂದು, 'ರಾಜ್ಯಸಂಸ್ಥಾಪಕ'ರೆಂದು

6. 455.
7. 352.
8. ಅನುಕ್ರಮವಾಗಿ 352 ಮತ್ತು 476.

ಕರೆದುಕೊಂಡರೂ, ಯಾವುದೇ ನಿರ್ದಿಷ್ಟವಾದ ಲೌಕಿಕ ಸ್ಥಾನದೊಂದಿಗೆ ಜೋಡಿಸಿಕೊಳ್ಳಲು ಅವರಲ್ಲಿ ಬಹುತೇಕರು ಆಸಕ್ತರಾಗಿರಲಿಲ್ಲ. ಆಚಾರ್ಯರು ಲೌಕಿಕ ಕಾರ್ಯಗಳಲ್ಲಿ ಹೆಚ್ಚು ತೊಡಗಿಸಿಕೊಂಡಾಗ, (ವಿಶೇಷತಃ ಸುಮಾರು 12ನೆಯ ಶತಮಾನದ ನಂತರ), ಮಠ ಮತ್ತು ದೇವಾಲಯದ ಆಡಳಿತೆಯ ಭಾರವು ಅವರ ಮೇಲೆ ಹೆಚ್ಚು ಬೀಳತೊಡಗಿತು. ಕೆಲವರು ಹೊಸ ಯಾತ್ರಾಕೇಂದ್ರಗಳನ್ನು ಇಲ್ಲವೆ ಪಟ್ಟಣಗಳನ್ನು ಸ್ಥಾಪಿಸಿದರು;[9] ಇನ್ನು ಕೆಲವರು ದತ್ತಿಗಳನ್ನು ಸ್ವತಃ ನೀಡಿದರು.[10] ಇಂತಹ ನಿದರ್ಶನಗಳೇನೂ ಬಹಳ ಇಲ್ಲ ನಿಜ, ಆದರೆ ದೊರೆಯುವ ಉದಾಹರಣೆಗಳು ಅಂದು ಬದಲಾಗುತ್ತಿದ್ದ ಧಾರ್ಮಿಕ ಜೀವನದ ದಿಕ್ಕು-ದೆಸೆಯನ್ನು ಸ್ಪಷ್ಟವಾಗಿ ಸೂಚಿಸುವಂಥವುಗಳಾಗಿವೆ.

ಪ್ರಕರಣಗಳ ವಿಶ್ಲೇಷಣೆ : ಆಚಾರ್ಯರಲ್ಲಾದ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಕೆಲವು ನಿದರ್ಶನಗಳನ್ನಿಲ್ಲಿ ಕೈಗೆತ್ತಿಕೊಳ್ಳಬಹುದು. ಅವುಗಳಲ್ಲಿರುವ ಸಾಮಾನ್ಯ ಅಂಶಗಳೆಂದರೆ (ಅ) ನಿಸಿಧಿಗಳಿಂದ ಗೌರವಿಸಲಾದ ನೇತಾರರೆಲ್ಲರೂ ಬೆಳ್ಗೊಳದ ಹಿತಸಂವರ್ಧನೆಯಲ್ಲಿ ತೊಡಗಿದವರಾಗಿದ್ದುದು, ಮತ್ತು (ಆ) ಅವರಲ್ಲಿ ಅನೇಕರು ತಮ್ಮ ಜೀವಿತವನ್ನು, ಇಲ್ಲವೆ ಜೀವನದ ಪ್ರಮುಖ ಘಟಕಗಳನ್ನು, ಈ ಕೇಂದ್ರದಲ್ಲಿ ಕಳೆದಿದ್ದದು.

ಇಲ್ಲಿ ಕೊಟ್ಟಿರುವ ಮೊದಲಿನೆರಡು ಉದಾಹರಣೆಗಳು ಆರಂಭಿಕ ಹಂತದಲ್ಲಿ ಪ್ರಚಲಿತವಿದ್ದ ಸ್ಥಿತಿಗತಿಯನ್ನು, ಉಳಿದವು 12-14ನೆಯ ಶತಮಾನಗಳಲ್ಲಿಯ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುವು.

1. ಇಂದ್ರನಂದಿ : ಸು. 7ನೆಯ ಶತಮಾನ : ಆರಾಧನಾ ವ್ರತವನ್ನಾಚರಿಸಿ ಸುಮಾರು 7ನೆಯ ಶತಮಾನದಲ್ಲಿ ಮೃತಪಟ್ಟ ಇಂದ್ರನಂದಿಯನ್ನು ಕನಿಷ್ಠ 14ನೆಯ ಶತಮಾನದ ವರೆಗೂ ಸ್ಮರಿಸಲಾಗಿದೆ.[11] 'ಭೂಷಣ' ಎಂಬ ಪದದಿಂದ ಗೌರವಿಸಲ್ಪಟ್ಟ ಈತನು ದೇಸಿಯ ಗಣ, ನಂದಿಸಂಘ, ಪುಸ್ತಕಗಚ್ಛ ಮತ್ತು ಇಂಗುಳೇಶ್ವರ ಶಾಖೆಯ ಅತಿ ಪ್ರಾಚೀನ ಮುನಿಗಳಲ್ಲೊಬ್ಬನಾಗಿದ್ದ. ಇವನ ಪೂರ್ವಜರಲ್ಲಿ ವಿದ್ಯಾನಂದಿ, ದಾಮನಂದಿ ಮತ್ತು ಚಂದ್ರನಂದಿ ಪ್ರಮುಖರಾಗಿದ್ದರು.[12] ಈ ಸಂಘದ ಹಿತಸಂವರ್ಧನೆಗೆ ಶ್ರಮಿಸಿದ ಇನ್ನುಳಿದ ಮುನಿವರ್ಯರಲ್ಲಿ ಪುಷ್ಪಸೇನ ಮತ್ತು ವಿಮಲಚಂದ್ರರಿಗೆ ವಿಶೇಷ ಸ್ಥಾನವಿತ್ತು.[13]

'ಕೋಟಿ **ಕೋಟಿ** ವಾದಸರಣಿಗಳಲ್ಲಿ ಪಾರಂಗತನೂ, ಪಂಡಿತವಾಗ್ಮಿಯೂ, ಎನಿಸಿದ ಇಂದ್ರನಂದಿಯು ರಾಜಮನ್ನಣೆಗೆ ಪಾತ್ರನಾಗಿದ್ದನಲ್ಲದೆ, 'ಪರವಾದಿಮಲ್ಲದೇವ' ಎಂಬ **ವಿಶಿಷ್ಟ**

9. 71.
10. 478.
11. 110.
12. 360.
13. 77.

ಬಿರುದನ್ನೂ ಪಡೆದಿದ್ದನು.[14] ರಾಷ್ಟ್ರಕೂಟ ಅರಸ ಕೃಷ್ಣನು ಒಮ್ಮೆ ಇದರ ಅರ್ಥವನ್ನು ಬಿಡಿಸಿಹೇಳಲು ಕೇಳಿದಾಗ, ಅವನು ಹೀಗೆ ವಿವರವಿತ್ತನು : "(ಈಗ) ತೆಗೆದುಕೊಂಡಿರುವ ಸ್ಥಾನಕ್ಕಿಂತ ಬೇರೆಯಾದುದು *ಪರ*; ಅದನ್ನು ಸಲಹಿದವರು *ಪರವಾದಿನಃ*; ಅವರೊಂದಿಗೆ ವಾಗ್ಯುದ್ಧಕ್ಕೆ ಇಳಿಯಲು ಸಮರ್ಥನೆನಿಸಿದವನು *ಪರವಾದಿಮಲ್ಲ*. ಉತ್ತಮರು ಇದೇ ನನ್ನ ಹೆಸರೆಂದು ಹೇಳುವರು."

ಮಾಯೆಯ ತೀಕ್ಷ್ಣತೆಯಿಂದ ಮತ್ತು ರಾಗ ದ್ವೇಷಗಳ ಒತ್ತಡಗಳಿಂದ ಮುಕ್ತಿಗೊಳಿಸಿಕೊಂಡು, ಕಟವಪ್ರ ಶಿಖರದ ಮೇಲೆ ಆರಾಧನಾ ವ್ರತವನ್ನಾಚರಿಸಿ, ಈ ಮುನಿಯು ಯೋಗ್ಯ ಅಂತ್ಯವನ್ನು ಸಾಧಿಸಿದನು.

ಚಾವುಂಡರಾಯ ಬಸದಿ ಮತ್ತು ಎರಡುಕಟ್ಟೆ ಬಸದಿಗಳ ಮಧ್ಯದ ಹಾಸುಬಂಡೆಯ ಮೇಲೆ ಅವನ ನಿಸಿಧಿ ಶಾಸನವನ್ನು ಕೆತ್ತಲಾಗಿದೆ. 1129ರಲ್ಲಿ ಮಲ್ಲಿಷೇಣನು ಅಂತ್ಯ ಸಾಧಿಸಿದಾಗ, 1398ರಲ್ಲಿ ಪಂಡಿತರಾಯನು ಸನ್ಯಸನ ವ್ರತಾಚರಣೆಯಿಂದ ಮಡಿದಾಗ, ಈ ಇಂದ್ರನಂದಿಯನ್ನು ಸ್ಮರಿಸಲಾಗಿದೆ. ಈ ಮುನಿಯ ಆಧ್ಯಾತ್ಮಿಕ ಹಾಗು ಶ್ರಾವಕ ಶಿಷ್ಯರ ಬಗ್ಗೆ ಹೆಚ್ಚಿನ ವಿವರಗಳು ದೊರೆಯುವುದಿಲ್ಲ. ಅವನ ಅನಾಮಧೇಯ ಶ್ರಮಣ ಶಿಷ್ಯರಲ್ಲೊಬ್ಬ ಈ ನಿಸಿಧಿಯನ್ನು ಕೊರೆಸಿದನೆಂದು ತೋರುವುದು.

2. ಮೇಘಚಂದ್ರ ತ್ರೈವಿದ್ಯದೇವ : 1115 : ಸಕಲೇಂದುಮುನಿಯ ಶಿಷ್ಯನೂ, ಪ್ರಭಾಚಂದ್ರಸಿದ್ಧಾಂತದೇವನ ಗುರುವೂ ಆಗಿದ್ದ ಮೇಘಚಂದ್ರ ತ್ರೈವಿದ್ಯೆದೇವನು, 1115ರಲ್ಲಿ ಸಮಾಧಿವ್ರತವನ್ನು ಆಚರಿಸಿ ಮೃತಪಟ್ಟನು.[15] ಅವನು ಮೂಲಸಂಘ, ದೇಸಿಯ ಗಣ, ಪುಸ್ತಕಗಚ್ಛ ಮತ್ತು ಕೊಂಡಕುಂದಾನ್ವಯಕ್ಕೆ ಸೇರಿದ್ದನು. ಅಣ್ಣಿತಟಾಕದ ಮಲಧಾರಿಸ್ವಾಮಿ, ಶ್ರೀಧರದೇವ, ದಾಮಣಂದಿ ತ್ರೈವಿದ್ಯದೇವ, ಮೊದಲಾದವರು ಇವನ ಸಮಕಾಲೀನರಾಗಿದ್ದರು.[16] 'ಚಂದ್ರ' ಪ್ರತ್ಯಯ ಹೊಂದಿದ್ದ ನಂದಿಸಂಘದ ನಾಗಚಂದ್ರ,



34 ಮೇಘಚಂದ್ರನ ನಿಸಿಧಿ (156)

14. 360.
15. 156.
16. 73.

ದೇವಚಂದ್ರ, ಉದಯಚಂದ್ರ, ರವಿಚಂದ್ರ ಮತ್ತು ಜಿನಚಂದ್ರರಂತೆ ಇವನ ಹೆಸರಿಗೂ ಚಂದ್ರ ಪ್ರತ್ಯಯ ಸೇರಿಸಲಾಗಿತ್ತು.[17] ಈ ಮುನಿಯನ್ನು 14ನೆಯ ಶತಮಾನದ ವರೆಗೂ ಸ್ಮರಿಸಲಾಗಿದೆ.[18]

ಮೇಘಚಂದ್ರನ ಸಂಘಪರಂಪರೆಯ ಬಗ್ಗೆ ನಮಗೆ ಹೆಚ್ಚು ತಿಳಿಯದು. ಆದರೆ, ಸಕಲೇಂದು ಮತ್ತು ಶುಭಕೀರ್ತಿದೇವರೆಂಬ ಅವನ ಇಬ್ಬರು ಗುರುಗಳ ಉಲ್ಲೇಖಗಳಿವೆ.[19] ಅವನ ಶಿಷ್ಯನಾದ ಪ್ರಭಾಚಂದ್ರಸಿದ್ಧಾಂತದೇವನೇ ಅವನ ಖ್ಯಾತಿಯನ್ನು ಪಸರಿಸಿದಂತೆ ಕಂಡುಬರುವುದು. ಅವನ ಗುಡ್ಡಿಯೂ ಗಂಗರಾಜನ ಮಡದಿಯೂ ಆದ ಲಕ್ಷ್ಮೀಮತಿಯ ನೆರವಿನಿಂದ ಮೇಘಚಂದ್ರನ ಗೌರವಾರ್ಥ ಪ್ರಭಾಚಂದ್ರನು ನಿಸಿಧಿಯನ್ನು ನಿಲ್ಲಿಸಿದನು. ಈ ನಿಸಿಧಿಯು ಈಗ ಚಂದ್ರಗಿರಿಯ ಎರಡುಕಟ್ಟೆಯ ಬಸದಿ ಬಳಿಯ ಮಂಟಪದಲ್ಲಿದೆ.[20]

ವ್ರತಗಳ ನಿಷ್ಠ ಪರಿಪಾಲಕನೂ, ಶಾಂತಚಿತ್ತತೆಯ ಶಿಲಾದ್ಭುತವೂ, ಸಂಯಮ ಸಾಗರವೂ ಆಗಿದ್ದ ಮೇಘಚಂದ್ರನು, ತ್ರೈವಿದ್ಯಗಳ ಚಕ್ರವರ್ತಿಯೆನಿಸಿದ್ದನು. ತ್ರಿದಂಡಿಗಳನ್ನು (ಮೂರು ಪಾಪಕೃತ್ಯಗಳನ್ನು) ಮತ್ತು ಶಲ್ಯಗಳನ್ನು (ಅಕ್ಷರಾರ್ಥದಲ್ಲಿ 'ಮುಳ್ಳುಗಳು' : ಮಾಯಾ = ಮೋಸ, ಮಿಥ್ಯಾ = ಹುಸಿ, ನಿದಾನ = ಲೌಕಿಕ ಹಿತದ ಬಯಕೆ) ಕಿತ್ತೆಸೆದು, ಅವನು ಜಿನಾಗಮಗವನ್ನಲ್ಲದೆ, ವ್ಯಾಕರಣ, ತರ್ಕ, ದರ್ಶನ ಮತ್ತು ಸನ್ಯಸನದಲ್ಲಿ ಪ್ರಾವೀಣ್ಯತೆ ಗಳಿಸಿದ್ದನು. ಆಳರಸನಿಂದ ಗೌರವ ಪಡೆದಿದ್ದ ಈ ತ್ರೈವಿದ್ಯಚಕ್ರವರ್ತಿಯನ್ನು ಮೂಲಸಂಘ ದೇಸಿಯಗಣ, ಪುಸ್ತಕಗಚ್ಛದ ನೇತಾರನೆಂದು ಪಂಡಿತರು ಮಾನ್ಯ ಮಾಡಿದ್ದರು.

ಸಿದ್ಧಾಂತದಲ್ಲಿ ಜಿನಸೇನ ಮತ್ತು ವೀರಸೇನರಿಗೆ, ಷಡ್ದರ್ಶನಗಳಲ್ಲಿ ಅಕಳಂಕನಿಗೆ, ವ್ಯಾಕರಣದಲ್ಲಿ ಪೂಜ್ಯಪಾದನಿಗೆ ಸಮಾನನೆಸಿದ್ದಂತೆ ಈ ಮುನಿಯು ಪ್ರತಿವಾದಿ ಗಜಗಳಿಗೆ ಸಿಂಹನೆನಿಸಿದ್ದ. ಶಿವನ ಕಂಠವನ್ನು, ಚಂದ್ರನ ಕಲೆಯನ್ನು, ಸುವರ್ಣಪೀತ ಗಿರಿಯನ್ನು (ಮೇರು)...ರಾಹು, ವಿಷ್ಣು, ಬ್ರಹ್ಮರ ದೇಹಗಳನ್ನು ಹೆಚ್ಚು ಉಜ್ವಲಗೊಳಿಸಿದ ಕೀರ್ತಿಗೆ ಇವನು ಪಾತ್ರನಾಗಿದ್ದನು.

ಹತ್ತು ಬಿಲ್ಲುಗಳನ್ನು (ಹತ್ತು ಬಗೆಯ ಧರ್ಮ), ಮೂವತ್ತಾರು ಹೆದೆಗಳನ್ನು (ಲಕ್ಷಣಗಳನ್ನು) ಹಾಗೂ ದಿವ್ಯ ಬತ್ತಳಿಕೆಯನ್ನು ಪಡೆದ ಈ ಮುನಿಯನ್ನು 'ಒಂದೇ ಹೆದೆ ಮತ್ತು ಐದೇಐದು ಪುಷ್ಪಬಾಣಗಳನ್ನು ಹೊಂದಿದ್ದ ವೈರಿ ಕಾಮದೇವನಿಗೆ ಆಕ್ರಮಣ ಮಾಡಲು ಸಾಧ್ಯವೇ? ವ್ಯಾಕರಣ, ತರ್ಕ ಮತ್ತು ದರ್ಶನಗಳಲ್ಲಿ ಅವನ ಪ್ರಗಲ್ಭತೆಯನ್ನು

---

17. 360.
18. 72.
19. 156 ಮತ್ತು 79.
20. 156.

ಕಂಡು ಪಂಡಿತರು ಅವನ ಬಗ್ಗೆ ಮೆಚ್ಚಿಗೆ ಸೂಚಿಸಿದ್ದರು. ಅವನಿಂದ ಸಹನಾದೇವಿಯು ಪ್ರೌಢಿಮೆಯನ್ನು, ತಪ್ಪೋದೇವಿಯು ಸೌಂದರ್ಯವನ್ನು ಮತ್ತು ಪುಣ್ಯಾದೇವಿಯು ಅನನ್ಯತೆಯನ್ನು ಪ್ರಾಪ್ತಿಸಿಕೊಂಡರೆಂಬ ಅಭಿಮತವಿತ್ತು.

ಚಂದ್ರನಂತೆ ಶೋಭಾಯಮಾನನಾದ ಈ ಮುನಿಯು ವೃಷಭಗಣದ ನಭೋಮಂಡಲದಲ್ಲಿ ಪ್ರಜ್ವಲಿಸಿದನು. ಅವನು ಪಂಡಿತರನ್ನು ಸನ್ಮಾನಿಸಿದನು; ಪ್ರತಿಯಾಗಿ, ಮುನಿವರ್ಯರೆಲ್ಲ ಅವನನ್ನು ಗೌರವಿಸಿದರು. ಮರಣ ಸನ್ನಿಹಿತವಾದುದನ್ನರಿತಾಗ ಆತ್ಮದ ನಿಜಸ್ವರೂಪದ ಬಗ್ಗೆ, ಅನಂತ ಜ್ಞಾನದ ಬಗ್ಗೆ ಚಿಂತಿಸಿ, ತ್ಯಜಿಸಬೇಕಾದುದನ್ನೆಲ್ಲ ತ್ಯಜಿಸಿ, ಚಿತ್ತ ನೆಡಲು ನೆರವಾಗುವ ಪಲ್ಯಂಕಾಸನ ಬದ್ಧನಾಗಿ, ಧ್ಯಾನಭಂಗಿಯಲ್ಲಿದ್ದು, 2 ಡಿಸೆಂಬರ್ 1115ರಂದು ಅವನು ಮರಣವನ್ನಪ್ಪಿದನು. ಅವನ ಪ್ರಧಾನ ಶಿಷ್ಯನೂ 'ಗುರುವಿನ ವಂಶೋದ್ಧಾರಕನೂ' ಆದ ಪ್ರಭಾಚಂದ್ರಸಿದ್ಧಾಂತದೇವನು ಮಹಾ ಸಾಮಂತಾಧಿಪತಿ, ಮಹಾಪ್ರಚಂಡದಂಡನಾಯಕ, ಗಂಗರಾಜನ ಮಡದಿ ಲಕ್ಷ್ಮೀಮತಿ ದಂಡನಾಯಕಿತಿಯಿಂದ ನಿಸಿಧಿಯನ್ನು ಮಾಡಿಸಿ, 'ತನ್ನ ಗುರುವಿಗೆ ಭಕ್ತಿಕೃತ್ಯವೆಂದು' ಅದ್ದೂರಿಯಿಂದ ಅದನ್ನು ಪ್ರತಿಷ್ಠಾಪಿಸಿದನು.[21]

ಇಷ್ಟೊಂದು ಕೊಂಡಾಡಲಾದ ಪ್ರಭಾಚಂದ್ರನ ಈ ಗುರುವನ್ನು ತರುವಾಯದ ಮುನಿಗಳಾರೂ ಹೆಸರಿಸದಿರುವುದು ಆಶ್ಚರ್ಯಕರ. ಮೇಘಚಂದ್ರನು ಬೆಳ್ಗೊಳದಲ್ಲಿ ಜೈನಧರ್ಮವನ್ನು ಭದ್ರಪಡಿಸುವ ಗೋಜಿಗೆ ಹೋಗದೆ, ತನ್ನ ಪೂರ್ವಜರಂತೆ ಸ್ವಯಂ ಪರಿಪೂರ್ಣತೆಯ ಮಾರ್ಗದಲ್ಲಿ ಸರಳ, ಧರ್ಮಿಷ್ಠ ಜೀವನ ಸಾಗಿಸಲು ಹೆಚ್ಚು ಗಮನವಿತ್ತಿರಲು ಸಾಧ್ಯ. ಪುಣ್ಯವಶಾತ್, ಅವನು ಹಲವಾರು ಗಣ್ಯ ಶಿಷ್ಯರನ್ನು ಪಡೆದಿದ್ದನು. ಪ್ರಭಾಚಂದ್ರನ ಗುಡ್ಡಿಯೂ ಗಂಗರಾಜನ ಮಡದಿಯೂ ಆದ ಲಕ್ಷ್ಮೀಮತಿಯು ತನ್ನ ಗುರುವಿನ ಗುರುವಾದ ಮೇಘಚಂದ್ರನ ಗೌರವಾರ್ಥ ನಿಸಿಧಿಯನ್ನು ನಿಲ್ಲಿಸಿದಳು.

ತನ್ನ ಪೂರ್ವಜರ (7-8ನೆಯ ಶತಮಾನಗಳ) ಮಾರ್ಗೀಯ ಆದರ್ಶಗಳನ್ನು ಅಳವಡಿಸಿಕೊಂಡಿದ್ದ ಮೇಘಚಂದ್ರನು 11ನೆಯ ಶತಮಾನದ ಕೊನೆ ಮತ್ತು 12ನೆಯ ಶತಮಾನದ ಆರಂಭದಲ್ಲಿ ಜೀವಿಸಿದ್ದನು. ಆದರೆ, ಅವನ ಶಿಷ್ಯನಾದ ಪ್ರಭಾಚಂದ್ರನು ಬದಲಾದ ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು, ಧಾರ್ಮಿಕ ನೇತಾರನಾಗಿ, ಬಲಿಷ್ಠ ಹಾಗೂ ವರ್ಚಸ್ವಿ ಗುಡ್ಡರನ್ನು ಒಲೈಸಿಕೊಂಡು, ಧರ್ಮಸಂಸ್ಥೆಗಳನ್ನು ಬಲಪಡಿಸಲು ಹೆಚ್ಚು ಶ್ರಮಿಸಿದನು.

3. ಶುಭಚಂದ್ರರು : 1123-1313 : ಬೆಳ್ಗೊಳದ ಸುಮಾರು ಇಪ್ಪತ್ತೊಂದು

---

21. ಅದೇ.

ಶಾಸನಗಳು ಮೂಲಸಂಘದ ಮೂವರು ಶುಭಚಂದ್ರಮುನಿಗಳನ್ನು ಉಲ್ಲೇಖಿಸುವುವು. ಇವರಲ್ಲಿ ಮೊದಲನೆಯವನು ದೇವಕೀರ್ತಿಯ ಶಿಷ್ಯ (1163); ಕೊನೆಯವನು ಮಲಧಾರಿ ರಾಮಚಂದ್ರದೇವನ ಶಿಷ್ಯ (1313). ಗಂಗರಾಜನ ಗುರುವಾದ ಮತ್ತೊಬ್ಬ ಶುಭಚಂದ್ರನ (1123) ಎತ್ತರಕ್ಕೇರದ ಎರಡನೆಯ ಮತ್ತು ಮೂರನೆಯ ಮುನಿಗಳ ಬಗ್ಗೆ ಮೊದಲು ತಿಳಿದುಕೊಳ್ಳೋಣ.

(ಅ) ಶುಭಚಂದ್ರ ತ್ರೈವಿದ್ಯದೇವ : 1163 : ದೇವಕೀರ್ತಿಯ ಶಿಷ್ಯನಾದ ಶುಭಚಂದ್ರಸಿದ್ಧಾಂತದೇವ ಅಥವಾ ಇಮ್ಮಡಿ ಶುಭಚಂದ್ರನು, ಗಂಡವಿಮುಕ್ತದೇವ, ವಾದಿಚತುರ್ಮುಖ ತ್ರೈವಿದ್ಯದೇವ [22] ಮತ್ತು ಅಕಳಂಕ ತ್ರೈವಿದ್ಯದೇವರುಗಳ ಸಮಕಾಲೀನನಾಗಿದ್ದನು. ಕೊಲ್ಲಾಪುರದ ಸಾವಂತ ಬಸದಿಯ ಮಾಘಣಂದಿಸಿದ್ಧಾಂತದೇವನ ಶಿಷ್ಯನೆಂದು ಒಂದು ಶಾಸನದಲ್ಲಿ ಅವನನ್ನು ಗುರುತಿಸಲಾಗಿದೆ.[23] ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಮಂತ್ರಿಯಾಗಿದ್ದ ರೇಚಣದಂಡನಾಯಕನು ಇವನ ಪ್ರಧಾನ ಗುಡ್ಡ; ಸಾಗರನಂದಿಯು ಇವನ ಖ್ಯಾತ ಶ್ರಮಣ ಶಿಷ್ಯ.[24] ಹುಳ್ಳರಾಜನ ತರುವಾಯ ಅತ್ಯಂತ ಪ್ರಭಾವೀ ಶ್ರಾವಕನಾದ ರೇಚಣನು ಜಿನನಾಥಪುರದ ಶಾಂತಿನಾಥ ಬಸದಿ ಮತ್ತು ಅರಸಿಯಕೆರೆಯ ಸಹಸ್ರಕೂಟ ಜಿನಾಲಯದ ನಿರ್ಮಾಪಕನು. 1163ರಲ್ಲಿ ಸಮಾಧಿಯನ್ನಾಚರಿಸಿ ತನ್ನ ಅಂತ್ಯವನ್ನು ದೇವಕೀರ್ತಿಯು ಸಾಧಿಸಿಕೊಂಡಾಗ ಹುಳ್ಳರಾಜನು ಅವನ ಗೌರವಾರ್ಥ ನಿಲ್ಲಿಸಿದ ನಿಸಿಧಿ ಕಾರ್ಯದಲ್ಲಿ ಈ ಶುಭಚಂದ್ರತ್ರೈವಿದ್ಯದೇವನು ಪಾಲ್ಗೊಂಡಿರಬಹುದು. ಈ ಮುನಿಯ ಬಗ್ಗೆ ಇದಕ್ಕಿಂತ ಹೆಚ್ಚಿಗೆ ತಿಳಿಯದು.

(ಆ) ಆಧ್ಯಾತ್ಮಿ ಶುಭಚಂದ್ರದೇವ : 1313 : ರಾಮಚಂದ್ರದೇವನ ಶಿಷ್ಯನಾದ ಶುಭಚಂದ್ರಮುನಿ ಅಥವಾ ಆಧ್ಯಾತ್ಮಿ ಶುಭಚಂದ್ರದೇವನು 1313ರ ವರೆಗೆ ಜೀವಿಸಿದ್ದನು.[25] ಪದ್ಮಣಂದಿಪಂಡಿತ ಮತ್ತು ಮಾಧವೇಂದು (ಮಾಧವಚಂದ್ರ) ಇವನ ಶಿಷ್ಯರಾಗಿದ್ದರು. ಆರ್ತ ಮತ್ತು ರೌದ್ರ ರಾಗಗಳ ಪ್ರಭಾವದಿಂದ ಬಿಡಿಸಿಕೊಂಡು, ಪಂಚಪದಗಳನ್ನು ಪಠಿಸುತ್ತಾ, ಅವನು 21 ಆಗಸ್ಟ್, 1313ರಂದು ದೇಹ ತ್ಯಜಿಸಿದನು. ಅವನ ಶಿಷ್ಯರಾದ ಪದ್ಮಣಂದಿ, ಮಾಧವೇಂದು ಮತ್ತು ಬೆಳುಕೆರೆಯ ರಾಯರಾಜಗುರು ಗೊಮ್ಮಟನು ಅವನ ಗೌರವಾರ್ಥ ನಿಸಿಧಿಯನ್ನು ಮಾಡಿಸಿದರು. ಈ ನಿಸಿಧಿಯು ದಕ್ಷಿಣ ಮಹಾನವಮಿ ಮಂಟಪದಲ್ಲಿದೆ. ಅವಸರದಲ್ಲಿ ಸೇರ್ಪಡೆ ಮಾಡಿದ ಈ ನಿಸಿಧಿಯು ಹುಳ್ಳರಾಜನು 1163ರಲ್ಲಿ ನಿಲ್ಲಿಸಿದ ದೇವಕೀರ್ತಿಯ ನಿಸಿಧಿಯ ಪಕ್ಕದಲ್ಲಿಂದು ಎಡವಟ್ಟಾಗಿ ನಿಂತಿದೆ.


22. 'ತ್ರೈವಿದ್ಯದೇವ' ಪ್ರತ್ಯೇಯದಿಂದ ಅವನನ್ನು ಇನ್ನುಳಿದ ಶುಭಚಂದ್ರರಿಂದ ಪ್ರತ್ಯೇಕಿಸಲಾಗಿದೆ, ಅದೇ 71.

23. 526 ಮತ್ತು 72.

24. 526.

25. 72.

(ಇ) ಶುಭಚಂದ್ರ ಸಿದ್ಧಾಂತದೇವ : 1123 : ಮೇಲಿನ ಇಬ್ಬರು ಶುಭಚಂದ್ರರಿಗೆ, ಅವರ ಪ್ರಖ್ಯಾತ ಪೂರ್ವಜನೂ ಗಂಗರಾಜನ ಗುರುವೂ ಆಗಿದ್ದ ಶುಭಚಂದ್ರಸಿದ್ಧಾಂತದೇವನ ಹೆಸರನ್ನಿಟ್ಟಿದ್ದು ಸ್ಪಷ್ಟ. ಇವನು ಮೂಲಸಂಘ, ದೇಸಿಯಗಣ, ಪುಸ್ತಕಗಚ್ಛ ಮತ್ತು





35 ಆಧ್ಯಾತ್ಮಿ ಶುಭಚಂದ್ರನ ನಿಸಿಧಿ (72)   36 ಶುಭಚಂದ್ರ ಸಿದ್ಧಾಂತದೇವನ ನಿಸಿಧಿ (135)

ಕೊಂಡಕುಂದಾನ್ವಯದ ಕುಕ್ಕುಟಾಸನ ಮಲಧಾರಿದೇವನ ಶಿಷ್ಯನಾಗಿದ್ದನು.[26] ಕುಕ್ಕುಟಾಸನನ ಗುರುವಾದ ದಿವಾಕರಣಂದಿಯು ತನ್ನ ಎರಡನೆಯ ಗುರುವೆಂದು ಗೌರವದಿಂದ ಈತನು ಹೇಳಿಕೊಂಡಿರುವನು.[27]

ಈ ಶುಭಚಂದ್ರಸಿದ್ಧಾಂತದೇವನಿಗೆ ಹಲವಾರು ಧಾರ್ಮಿಕ ಹಾಗೂ ಲೌಕಿಕ ಶಿಷ್ಯರಿದ್ದರು. ಧಾರ್ಮಿಕ ಶಿಷ್ಯರಲ್ಲಿ ಮಾಧವಚಂದ್ರನು ಖ್ಯಾತನಾಗಿದ್ದರೆ,[28] ಶ್ರಾವಕರಲ್ಲಿ ಗಂಗರಾಜ ಮತ್ತು ಅವನ ಕುಟುಂಬದ ಸದಸ್ಯರು ಪ್ರಮುಖರಾಗಿದ್ದರು.[29] ಈ ಮುನಿಯು ಜೈನಧರ್ಮದ ನೆಲೆಗಟ್ಟನ್ನು ಭದ್ರಗೊಳಿಸಿದನಲ್ಲದೆ, ಅದರ ಕೀರ್ತಿಯನ್ನು ಎತ್ತರಿಸಿ, ವಿಸ್ತರಿಸಿದನು. ದೇವಾಲಯಗಳನ್ನು-ಕೆರೆಗಳನ್ನು ಕಟ್ಟಿಸಲು, ಭೂದತ್ತಿ ನೀಡಲು, ನಿಸಿಧಿಯಿಂದ ಧರ್ಮಾತ್ಮರನ್ನು ಗೌರವಿಸಲು, ಅವನು ತನ್ನ ಶ್ರಾವಕ ವರ್ಗವನ್ನು ಪ್ರೇರೇಪಿಸಿದನಲ್ಲದೆ, ಅನೇಕ ವ್ರತಗಳನ್ನು ಸ್ವತಃ ಆಚರಿಸಿ ಇತರರಿಗೆ ಮಾದರಿಯಾದನು.

---

26. 355, 531, 484 ಮತ್ತು 135.
27. 482.
28. 532.
29. ಗಂಗರಾಜ (82, 547, 154, 342, 355, 561, 69, 80, 84 ಮತ್ತು 135) ಅವನ ನಾದಿನಿ ಜಕ್ಕಿಮಬ್ಬೆ (504, 503 ಮತ್ತು 135), ಅವನ ಸೋದರನ ಮಗ ಏಚಿರಾಜ (179, 531 ಮತ್ತು 532) ಅವನ ಮಡದಿ ಲಕ್ಷ್ಮೀಮತೀ (160 ಮತ್ತು 157) ಈ ಮುನಿಯನ್ನು ತಮ್ಮ ಗುರುವೆಂದು ಸ್ವೀಕರಿಸಿದ್ದರು.

ಹೊಯ್ಸಳ ರಾಜ್ಯಕ್ಕೆ ಮಾಡಿದ ಸೇವೆಯನ್ನು ಮೆಚ್ಚಿ ಗಂಗರಾಜನಿಗೆ ಅರಸ ವಿಷ್ಣುವರ್ಧನನು ಪರಮ ಮತ್ತು ಗೋವಿಂದನಹಳ್ಳಿಗಳನ್ನು ದತ್ತಿ ನೀಡಿದಾಗ, ಅವುಗಳನ್ನು ಶುಭಚಂದ್ರಸಿದ್ಧಾಂತದೇವನಿಗೆ ಹಸ್ತಾಂತರಿಸಿ,[30] ಗೊಮ್ಮಟ ಮಹಾವಿಗ್ರಹ, ಪಾರ್ಶ್ವನಾಥ ಬಸದಿ,[31] ಕತ್ತಲೆ ಬಸದಿ (ಇಂದ್ರಕುಳಾಗೃಹ)[32] ಮತ್ತು ಎರಡುಕಟ್ಟೆ ಬಸದಿಗಳ (ಆದಿನಾಥ ಬಸದಿ)[33] ನಿರ್ವಹಣೆಗಾಗಿ ಅವನ್ನು ವಿನಿಯೋಗಿಸಬೇಕೆಂದು ಗಂಗರಾಜನು ಕೋರಿದನು. ಕೊನೆಯ ಎರಡು ದೇವಾಲಯಗಳನ್ನು ಅನುಕ್ರಮವಾಗಿ ಗಂಗರಾಜನ ತಾಯಿ ಪೋಚಿಕಬ್ಬೆ ಮತ್ತು ಅವನ ಮಡದಿ ಲಕ್ಷ್ಮೀಮತಿಯು ಕಟ್ಟಿಸಿದ್ದರು. ಈ ಗುರುವಿನ ಮಾರ್ಗದರ್ಶನದಲ್ಲಿ ಗಂಗರಾಜನು ಇಲ್ಲಿನ ಅನೇಕ ಬಸದಿಗಳನ್ನು ಜೀರ್ಣೋದ್ಧಾರಗೊಳಿಸಿದನಲ್ಲದೆ, ಗೊಮ್ಮಟ ಮಹಾವಿಗ್ರಹಕ್ಕೊಂದು ಸುತ್ತಾಲಯವನ್ನೂ ಕಟ್ಟಿಸಿಕೊಟ್ಟನು.[34] ಮೇಲ್ನೋಟಕ್ಕೆ ತೋರುವಂತೆ, ಲಕ್ಷ್ಮೀಮತಿಯು ಚಿಕ್ಕಬೆಟ್ಟದ ಮೇಲೆ ಇಂದ್ರಕುಳಾಗೃಹ ದೇವಾಲಯವನ್ನು ಕಟ್ಟಲು ಮತ್ತು ತನ್ನ ಜೀವನದ ಮುಸ್ಸಂಜೆಯಲ್ಲಿ ಸಮಾಧಿವ್ರತವನ್ನಾಚರಿಸಲು, ಈ ಶುಭಚಂದ್ರನೇ ಕಾರಣನಾಗಿದ್ದನು.[35]

ಗಂಗರಾಜನ ನಾದಿನಿ ಜಕ್ಕಣಬ್ಬೆಯು ಕೆರೆ ಕಟ್ಟಿಸುವಾಗ, ಮೋಕ್ಷತಿಳಕ ವ್ರತವನ್ನು ಆಚರಿಸುವಾಗ ಹಾಗೂ ಬೆಟ್ಟದಡಿಯಲ್ಲಿ ನೊಂಬರೆ ನಯಣದದೇವನನ್ನು ಪ್ರತಿಷ್ಠಾಪಿಸುವಾಗ, ಸ್ವತಃ ಶುಭಚಂದ್ರನೇ ಅವಳಿಗೆ ಮಾರ್ಗದರ್ಶನ ನೀಡಿದನು.[36] ಜಕ್ಕಣವ್ವೆಯು ಒಂದು ಕೆರೆಯನ್ನು ತೋಡಿಸುವುದಕ್ಕಿಂತ ಮುಂಚೆ, ನೆಲಸಿಗರನ್ನು ಆಕರ್ಷಿಸುವಂಥಹ ನೀರಿನ ಅನುಕೂಲತೆಯು ಇಲ್ಲಿರಲಿಲ್ಲವೆಂದು ಕಾಣುವುದು. ಹಾಗೆ ನೋಡಿದರೆ, ಜಕ್ಕಣವ್ವೆಯನ್ನು ಮತ್ತು ಅವಳ ಗುರು ಶುಭಚಂದ್ರನನ್ನು ಬೆಳ್ಗೊಳ ಪಟ್ಟಣದ ಸಂಸ್ಥಾಪಕರೆಂದೇ ಪರಿಗಣಿಸಬೇಕು.

ಶುಭಚಂದ್ರಸಿದ್ಧಾಂತದೇವನು ಜಿನನಾಥಪುರದ ಸ್ಥಾಪನೆಗೂ ಪರೋಕ್ಷವಾಗಿ ಕಾರಣನಾಗಿದ್ದನು. ಏಕೆಂದರೆ, ಈ ಗ್ರಾಮದ ಇತಿಹಾಸವೂ ಗಂಗರಾಜನ ಭ್ರಾತ್ರೀಯನಾದ ಏಚಿರಾಜನು ಕಟ್ಟಿಸಿದ ಅರೆಗಲ್ಲು ಬಸದಿಯಿಂದ ಪ್ರಾರಂಭಗೊಳ್ಳುವುದು. ಏಚಿರಾಜನ ಜಿನನಾಥಪುರದ ಮತ್ತು ಚಿಕ್ಕಬೆಟ್ಟದ ದೇವಾಲಯಗಳಲ್ಲಿಯ ವಿಗ್ರಹಗಳನ್ನು

30. ಪರಮಕ್ಕಾಗಿ ನೋಡಿ 82, 154 ಮತ್ತು 561 ; ಗೋವಿಂದನಹಳ್ಳಿಗಾಗಿ ನೋಡಿ, 547).
31. 547.
32. 561, 154 ಮತ್ತು 80.
33. 160.
34. ಬಸ್ತಿಗಳ **ಜೀರ್ಣೋದ್ಧಾರ** (355 ಮತ್ತು 561) ಮತ್ತು ಗೊಮ್ಮಟನ ಸುತ್ತಾಲಯದ (154 ಮತ್ತು 355) ಉಲ್ಲೇಖಗಳು ಬರುವುವು.
35. 160 ಮತ್ತು 157.
36. 504 ಮತ್ತು 503.

ಪ್ರತಿಷ್ಠಾಪಿಸಿದವನೂ ಇದೇ ಮುನಿಯು.[37] ಏಚಿರಾಜನು ಸನ್ಯಸನ ವ್ರತಾಚರಣೆ ಕೈಕೊಂಡು ಮೃತಪಟ್ಟಾಗ, ಈತನು ಗಂಗರಾಜನ ಮಗ ಬೊಪ್ಪನಿಂದ ನಿಸಿಧಿಯನ್ನು ಮಾಡಿಸಿದನು.[38] ಗಂಗಸಮುದ್ರ, ಬೆಕ್ಕ, ಬೆಳ್ಗೊಳ ಮತ್ತು ಇತರೆಡೆಗಳಲ್ಲಿ ದತ್ತಿ ನೀಡುವಂತೆ ಬೊಪ್ಪನನ್ನು ಒಪ್ಪಿಸಿದ ಕೀರ್ತಿಯೂ ಈ ಆಚಾರ್ಯನದಾಗಿದೆ.[39]

''ಕಾಮದೇವನ ಕೊಬ್ಬನ್ನು ಕರಗಿಸಿ, ಜೈನ ಸಿದ್ಧಾಂತದ ಸಾಗರವೆನಿಸಿದವನು, ಸಕಲ ಜೀವಿಗಳಿಗೆ ದಯಾಮಯನು, ಇಂದ್ರಿಯ ಭೋಗಗಳ ಶತ್ರುವು, ದುಷ್ಕರ್ಮಗಳ ವಿನಾಶಕನು, ಕಮಲಗಳಿಗೆ ಸೂರ್ಯನು ಆದ ಪುಣ್ಯಶಾಲಿ ಶುಭಚಂದ್ರಸಿದ್ಧಾಂತ ಮುನೀಂದ್ರ ನನ್ನು ಸಾಗರಾವೃತ ಪೃಥ್ವಿಯು ಕೊಂಡಾಡಿತು'', ಎಂದು ಕವಿಯೊಬ್ಬ ಶ್ಲಾಘಿಸಿರುವನು.[40]

ಇವನ ಪಂಚೇಂದ್ರೀಯ ನಿಗ್ರಹ, ಸನ್ನಡತೆ, ಆಧ್ಯಾತ್ಮಿಕ ಸಿದ್ಧಿಗಳನ್ನು ಅನೇಕ ಶಬ್ಧಗಳಲ್ಲಿ ವೈಭವೀಕರಿಸಲಾಗಿದೆ. ಅವನು ಯಾವ ದಿಕ್ಕಿನಲ್ಲಿ ಸಂಚರಿಸಿದನೋ ಅಲ್ಲಲ್ಲಿ ಧರ್ಮ ಜ್ಯೋತಿಯನ್ನು ಬೆಳಗಲು ಶಕ್ತನಾದನು. ಭೋಗವಸ್ತುಗಳ ವೈರಿಯೂ, ದುಷ್ಕರ್ಮಗಳ ಸಂಹಾರಕನೂ ಆಗಿದ್ದ ಇವನು ಸರ್ವಜೀವಿಗಳಿಗೆ ಜೈನ ದರ್ಶನದ ಅಭ್ಯಂಜನ ಮಾಡಿಸಿದನೆಂದು ತಿಳಿಸಲಾಗಿದೆ.

'ಜಿನದರ್ಶನದ ಮಕುಟಮಣಿ'ಯಾದ ಈತನು ಸ್ವರ್ಗ ಸೇರಿದಾಗ, 'ಸನ್ನಡತೆಯ ಪ್ರಜ್ವಲ ದೀಪ ನಂದಿಹೋಯಿತು, ದಯೆಯಂಬ ಲತೆಯು ಮುರುಟಿಕೊಂಡಿತು, ಭೂಮಂಡಲವೆಲ್ಲ ಅಂಧಕಾರದಲ್ಲಿ ಮುಳುಗಿತು', ಎಂದು ಅವನ ಶಿಷ್ಯರು ಪರಿತಪಿಸಿದರು.

ಶುಭಚಂದ್ರಸಿದ್ಧಾಂತದೇವನು 3, ಆಗಸ್ಟ್ 1123ರ ಶುಕ್ರವಾರದಂದು ಸಾವನ್ನಪ್ಪಿದಾಗ, ಅವನ ಖ್ಯಾತ ಗುಡ್ಡನೂ ಮಹಾಪ್ರಧಾನ ದಂಡನಾಯಕನೂ ಆದ ಗಂಗರಾಜನು ನಿಸಿಧಿ ನಿಲ್ಲಿಸಿದನು. ಗಂಗರಾಜನ ನಾದಿನಿ ಜಕ್ಕಣವ್ವೆಯು ಈ ಸಂದರ್ಭದಲ್ಲಿ ಜಿನನ ವಿಶೇಷ ಪೂಜೆ ಏರ್ಪಡಿಸಿದಳು.[41] ಚಾವುಂಡರಾಯ ಬಸದಿಯ ದಕ್ಷಿಣಕ್ಕಿರುವ ಮಂಟಪದಲ್ಲಿ ಈ ನಿಸಿಧಿಯು ಈಗ ನೋಡಸಿಗುವುದು.

ಸಾಂಪ್ರದಾಯಿಕ ಶೈಲಿಯಲ್ಲಿದ್ದರೂ, ಶುಭಚಂದ್ರಸಿದ್ಧಾಂತದೇವನ ಈ ವೃತ್ತಾಂತವು ಸತ್ಯಕ್ಕೆ ತೀರಾ ದೂರವಾದುದಾಗಿಲ್ಲ. ಅವನ ವೈಯಕ್ತಿಕ ಸಿದ್ಧಿಗಳು ನಿಸ್ಸಂದೇಹವಾಗಿಯೂ ಅಂದಿನ ಅಗ್ರಗಣ್ಯ ಜೈನರಿಂದ ಗೌರವಿಸಲ್ಪಡುವಷ್ಟು ಹಿರಿಮೆಯನ್ನು ಪಡೆದಿದ್ದವು. ಸಾಮಾಜಿಕ

37. 531 ಮತ್ತು 179.
38. 532.
39. ಅದೇ.
40. 484.
41. 135.

ಸಂಬಂಧಗಳಿಂದ ಈ ಮುನಿಯು ಸಂಪೂರ್ಣವಾಗಿ ದೂರವಿರಲಿಲ್ಲ; ಏಕೆಂದರೆ, ಜೈನ ಧರ್ಮದ ಭವಿಷ್ಯವು ಜ್ಞಾನಸಂಪನ್ನ ಮತ್ತು ಧರ್ಮಿಷ್ಠರೆನಿಸಿದ್ದ ಶ್ರಮಣರಷ್ಟೇ ವರ್ಚಸ್ವಿ ಶ್ರಾವಕರನ್ನೂ ಅವಲಂಬಿಸಿದೆ ಎಂಬುದನ್ನು ಅವನು ಮನಗಂಡಿದ್ದನು.

ದಕ್ಷಿಣ ಭಾರತದ ದಿಗಂಬರ ಜೈನ ಕೇಂದ್ರವಾಗಿ ಬೆಳ್ಗೊಳವು ಹೊರಹೊಮ್ಮಿದ್ದು ಬಹುಮಟ್ಟಿಗೆ ಈ ಮುನಿಯ ದೂರದೃಷ್ಟಿ ಮತ್ತು ಪರಿಶ್ರಮದ ಫಲವಾಗಿ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆಳ್ಗೊಳ ಮತ್ತು ಜಿನನಾಥಪುರಗಳ ಸ್ಥಾಪನೆಗೆ ಅವನು ಕಾರಣನಾಗಿದ್ದನು. ಅಂತೆಯೆ, ಕನಿಷ್ಠ ನಾಲ್ಕು ಬಸದಿಗಳ ನಿರ್ಮಾಣಕ್ಕೂ ಗೊಮ್ಮಟ ಮಹಾವಿಗ್ರಹದ ಸುತ್ತಾಲಯದ ರಚನೆಗೂ ಅವನು ಸ್ಫೂರ್ತಿ ನೀಡಿದನು. ಸಮಾಧಿ ವ್ರತಾಚರಣೆ ಮಾಡಿ ತಮ್ಮ ಅಂತ್ಯ ಸಾಧಿಸಿದವರ ಗೌರವಾರ್ಥ ಒಂದೆರಡು ನಿಸಿಧಿಗಳನ್ನು ನಿಲ್ಲಿಸಲು, ಬೆಕ್ಕ, ಪರಮ, ಗೋವಿಂದನಹಳ್ಳಿ, ಮುಂತಾದ ಗ್ರಾಮ ದತ್ತಿಗಳನ್ನು ದೊರಕಿಸಿಕೊಳ್ಳಲು, ಬೆಳ್ಗೊಳ ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿ ಹಲವಾರು ಕೆರೆಗಳನ್ನು ಕಟ್ಟಿಸಲು, ಅವನು ಕಾರಣಕರ್ತನಾಗಿದ್ದನು. ನಿಜಕ್ಕೂ, ಶುಭಚಂದ್ರನು ಬೆಳ್ಗೊಳದಲ್ಲಿ ದಿಗಂಬರ ಜೈನಧರ್ಮವನ್ನು ಸ್ಥಿರಗೊಳಿಸಿದ 12ನೆಯ ಶತಮಾನದ ಆಚಾರ್ಯರಲ್ಲಿ ಅಗ್ರಜನಾಗಿದ್ದನೆನ್ನಬಹುದು. ಅವನು ಸಮಾಧಿವ್ರತದಿಂದ ಮಡಿದನೋ-ಇಲ್ಲವೋ, ಎಂಬುದು ಮಾತ್ರ ಸ್ಪಷ್ಟಗೊಳ್ಳುವುದಿಲ್ಲ. ಸಮಾಧಿ ವಿಧಿಯನ್ನಾಚರಿಸಿ ಮರಣ ಹೊಂದಲು ಸಾಧ್ಯವಾಗದಿದ್ದರೂ, ವರ್ಚಸ್ವಿ ಶಿಷ್ಯರು ಅವನ ಗೌರವಾರ್ಥ ಒಂದು ನಿಸಿಧಿ ನಿರ್ಮಿಸುವ ಮೂಲಕ ಈ ಮುನಿಯ ಹೆಸರನ್ನು ಶಾಶ್ವತಗೊಳಿಸಿದರು.

ಸಮಾಜದೊಂದಿಗೆ ಸಂಪರ್ಕವಿಟ್ಟುಕೊಳ್ಳುವುದು ತನ್ನ ಕರ್ತವ್ಯವೆಂದು ಶುಭಚಂದ್ರನು ಬಲವಾಗಿ ನಂಬಿದ್ದನು. ಹೀಗಾಗಿ, ಆಧ್ಯಾತ್ಮಿಕ ಜೀವನವನ್ನು ಸಾಂಸ್ಥೀಕರಿಸಲು ಕೆಲಮಟ್ಟಿಗೆ ಅವನು ಕಾರಣನೆನಿಸಿದನು. ಅದುವರೆಗೆ ಮಹಾವಿಗ್ರಹ ಮತ್ತು ಶ್ರಮಣರಿಂದ ಪ್ರಸಿದ್ಧವಾಗಿದ್ದ ಶ್ರವಣ ಬೆಳ್ಗೊಳವು ಈ ಮುನಿಯ ಕಾಲದಲ್ಲಿ ದೇವಾಲಯ ಮತ್ತು ವರ್ಚಸ್ವಿ ಶ್ರಾವಕರ ಮೂಲಕ ಹೆಸರು ಗಳಿಸತೊಡಗಿತು.

4. ಪ್ರಭಾಚಂದ್ರರು : 1115-1145 : ಶಾಂತಲೆಯ ಗುರು ಪ್ರಭಾಚಂದ್ರನಲ್ಲದೆ ಇನ್ನೂ ನಾಲ್ವರು ಪ್ರಭಾಚಂದ್ರ ಮುನಿಗಳನ್ನು ಬೆಳ್ಗೊಳದ ಸುಮಾರು ಹತ್ತೊಂಬತ್ತು ಶಾಸನಗಳು ಹೆಸರಿಸುವುವು. ಅವರಲ್ಲೊಬ್ಬ 7ನೆಯ ಶತಮಾನದಲ್ಲಿದ್ದರೆ, ಮಿಕ್ಕ ಮೂವರು 12ನೆಯ ಶತಮಾನದಲ್ಲಿದ್ದರು.

(ಅ) ಪ್ರಭಾಚಂದ್ರ : 7ನೆಯ ಶತಮಾನ : ಪ್ರಭಾಚಂದ್ರರಲ್ಲಿ ಮೊದಲನೆಯವನು ಈ ಪುಣ್ಯಕ್ಷೇತ್ರದ ಅಡಿಪಾಯ ಹಾಕಿ, ಸಮಾಧಿ ವ್ರತಾಚರಣೆಯಿಂದ ಇಲ್ಲಿ ಮಡಿದ ಮುನಿಗಳಲ್ಲಿ ಅತ್ಯಂತ ಪ್ರಾಚೀನನು.[42] ಭದ್ರಬಾಹುವಿನ ನೇರ ಮುನಿ ವಂಶಜನೂ ಹಾಗೂ ಅಷ್ಟವಿಧ

42. 1.



37 ಪ್ರಭಾಚಂದ್ರಸಿದ್ಧಾಂತದೇವನ ನಿಸಿಧಿ (173)

ಶಕುನಶಾಸ್ತ್ರದಲ್ಲಿ ಪಾರಂಗತನೂ ಆದ ಈ ಮುನಿಯು 12 ವರ್ಷಕಾಲ ಉಜ್ಜೈನಿಯಲ್ಲಿ ಸಂಭವಿಸಲಿದ್ದ ವಿಪತ್ತಿನ ಬಗ್ಗೆ ಮೊದಲೇ ತಿಳಿದು, ತನ್ನ ಸಂಘದೊಂದಿಗೆ ದಕ್ಷಿಣಾಭಿಮುಖಿಯಾಗಿ ಹೊರಟು, ಹಲವು ನೂರು ಗ್ರಾಮಗಳನ್ನು ಬಳಸಿ, ಬೆಳ್ಗೊಳವನ್ನು ಸೇರಿದ್ದನು. ಆಗ ಈ ನಾಡು 'ಸುಖೀ ಜನ, ಸಂಪತ್ತು, ಸುವರ್ಣ, ಧವಸಧಾನ್ಯ, ಹಸು-ಪಶು, ಆಡು-ಕುರಿಗಳ ಮಂದೆಗಳಿಂದ' ತುಂಬಿತ್ತು. ತನ್ನ ಅಂತ್ಯ ಸನ್ನಿಹಿತವಾದುದನ್ನರಿತು, ಸಂಘದಿಂದ ದೂರ ಸರಿದ ಈ ಆಚಾರ್ಯನು ಸಮಾಧಿ ಪ್ರಾಪ್ತಿಸಿಕೊಳ್ಳಲು ನಿರ್ಧರಿಸಿ, ಉನ್ನತ ಶಿಖರಗಳ ಬೆಟ್ಟವಾದ ಕಟವಪ್ರವನ್ನು ಆಯ್ದುಕೊಂಡನು. 'ಜಲಭರಿತ ಮೇಘರಾಶಿಯಂತೆ ಕಪ್ಪು ಬಂಡೆಗಳಿಂದ, ಉತ್ಕೃಷ್ಟ ಮರಗಳ ಬಗೆ ಬಗೆಯ ಫಲಪುಷ್ಪಗಳಿಂದ, ವಿಸ್ತೃತ ಕಣಿವೆಗಳಿಂದ, ಗಿರಿಗಹ್ವರಗಳಿಂದಲ್ಲದೆ, ಮಿಕ, ಚಿರತೆ, ಹುಲಿ, ಕರಡಿ, ಕತ್ತೆಕಿರುಬ, ಸರ್ಪ, ಜಿಂಕೆಗಳ ಮಂದೆಗಳಿಂದ ತುಂಬಿದ ದುರ್ಗಮ ಸ್ಥಳವೇ' ಅಂದಿನ ಕಟವಪ್ರ. ತನ್ನ ಅನುಯಾಯಿಗಳಿಗೆ ವಿದಾಯ ಹೇಳಿ, ಸಂಘವನ್ನು ಸಂಪೂರ್ಣವಾಗಿ ತ್ಯಜಿಸಿ, ಒಬ್ಬ ಶಿಷ್ಯನನ್ನು ಮಾತ್ರ ಹೊಂದಿ, ಈ ಬೆಟ್ಟದ ವಿಸ್ತಾರ ಶೀತಲ ಬಂಡೆಯ ಮೇಲೆ ದೇಹದಂಡಿಸಿ, ಅವನು ಮರಣವನ್ನಪ್ಪಿದನು.

ಭದ್ರಬಾಹು ಮುನಿಯನ್ನು ಪ್ರಪ್ರಥಮವಾಗಿ ಉಲ್ಲೇಖಿಸುವ ಈ ಶಾಸನವು ಬೆಳ್ಗೊಳದ ಇತಿಹಾಸದಲ್ಲಿಯೆ ಅತಿ ಮಹತ್ವದ ದಾಖಲೆ. ಸಂಘ, ಗಣ, ಗಚ್ಛವನ್ನಾಗಲಿ, ಪ್ರಭಾಚಂದ್ರನ ವಂಶಜ-ಶಿಷ್ಯರನ್ನಾಗಲಿ, ಇಲ್ಲಿ ಪ್ರಸ್ತಾಪಿಸದಿರುವುದು ಕುತೂಹಲಕರ. ಭದ್ರಬಾಹುವನ್ನನುಸರಿಸಿ ಈ ಬೆಟ್ಟದ ಮೇಲೆ ಪ್ರಭಾಚಂದ್ರನು ಜೀವನವನ್ನು ಅಂತ್ಯಗೊಳಿಸಿದ್ದು ನಿಸ್ಸಂದೇಹ; ಆದರೆ, ಅಚ್ಚರಿಯ ವಿಷಯವೆಂದರೆ, ಮುಂದಿನ ಕಾಲದ ಯಾವ ಶಾಸನವೂ ಅವನನ್ನು ಉಲ್ಲೇಖಿಸದಿರುವುದು!

(ಆ) ನಯಕೀರ್ತಿ ಸಿದ್ಧಾಂತಚಕ್ರವರ್ತಿಯ ಶಿಷ್ಯ ಪ್ರಭಾಚಂದ್ರ : 1176ರ ನಿಸಿಧಿ ಶಾಸನದಿಂದ ಇನ್ನೊಬ್ಬ ಪ್ರಭಾಚಂದ್ರನನ್ನು ಗುರುತಿಸಲಾಗಿದೆ.[43] ಅವನು ಭಾನುಕೀರ್ತಿಸಿದ್ಧಾಂತಿ, ಮಾಘಣಂದಿಭಟ್ಟಾರಕ, ಮಂತ್ರವಾದಿಪದ್ಮಣಂದಿದೇವ, ನೇಮಿಚಂದ್ರಪಂಡಿತದೇವ, ದಾಮಣಂದಿತ್ರೈವಿದ್ಯದೇವ, ಬಾಳಚಂದ್ರದೇವ, ಮುಂತಾದವರ ಸಮಕಾಲೀನನಾಗಿದ್ದನು. ಇವರೆಲ್ಲರೂ ನಯಕೀರ್ತಿಸಿದ್ಧಾಂತಚಕ್ರವರ್ತಿಯ ಶಿಷ್ಯರು.

ಮುನಿಶ್ರೇಷ್ಠನಾದ ಈ ಪ್ರಭಾಚಂದ್ರನು ಪೃಥ್ವಿಯ ಮೇಲೆ ಜಾಜ್ವಲ್ಯಮಾನನಾಗಿ, ಭೂಮಂಡಲಕ್ಕೆ ಆನಂದದಾಯಕನಾಗಿ, ಉದಾರ ದಾನಗಳಿಂದ ಎಲ್ಲರನ್ನೂ ತೃಪ್ತಿಪಡಿಸಿದನು. ಇಂಥ ಉನ್ನತ ಸಾಧನೆಗಳಿಂದ ಸರ್ವಮಾನ್ಯನಾಗಿದ್ದರೂ[44] ನಯಕೀರ್ತಿಸಿದ್ಧಾಂತದೇವನ ಶಿಷ್ಯರಲ್ಲಿ ಪ್ರಭಾಚಂದ್ರನ ಸ್ಥಾನವು ಭಾನುಕೀರ್ತಿ ಮತ್ತು ಬಾಳಚಂದ್ರರಷ್ಟು ಹಿರಿದಾಗಿರಲಿಲ್ಲವೆಂದು ತೋರುವುದು. ಬೊಮ್ಮೆಯನಹಳ್ಳಿಯನ್ನು ಆಚಿಯಕ್ಕಳು ದತ್ತಿ ಬಿಟ್ಟಾಗ,[45] ಈ ದಾನಕಾರ್ಯವನ್ನು ನಿರ್ವಹಿಸಿಕೊಟ್ಟವನು ಬಾಳಚಂದ್ರನಾಗಿದ್ದನಲ್ಲದೆ, ಪ್ರಭಾಚಂದ್ರನಲ್ಲ. ಆದರೆ, ನಾಗದೇವನು ಜಿಗಣಿಕಟ್ಟೆಯನ್ನು ನಿರ್ಮಿಸಿದಾಗ,[46] ಪ್ರಭಾಚಂದ್ರನು ಆ ಸಮಾರಂಭದಲ್ಲಿ ಪಾಲ್ಗೊಂಡಿರಲು ಸಾಧ್ಯ. ಭಾನುಕೀರ್ತಿಭಟ್ಟಾರಕ, ನೇಮಿಚಂದ್ರಪಂಡಿತದೇವ ಮತ್ತು ಪ್ರಭಾಚಂದ್ರದೇವರು ಭೂದತ್ತಿಯನ್ನಿತ್ತು ನಾಗದೇವನನ್ನು ಗೌರವಿಸಿದಾಗ, ಇದನ್ನು ನೆರವೇರಿಸಿಕೊಟ್ಟವನೂ ಬಾಳಚಂದ್ರಮುನಿ. ಹೊಯ್ಸಳ ಅಧಿಕಾರಿಗಳು ಸಿಂಗಸಮುದ್ರವನ್ನು ಕಟ್ಟಿಸಿದಾಗ ಅದು ನಯಕೀರ್ತಿದೇವನ ಇಚ್ಛೆಯ ಮೇರೆಗೆ ಮಾಡಿಸಿದ್ದಾದರೂ ಇದನ್ನು ನಡೆಸಿಕೊಟ್ಟವರು ಪ್ರಭಾಚಂದ್ರ ಮತ್ತು ಅವನ ಐವರು ಸಹೋದ್ಯೋಗಿಗಳು.[47] ಮಂತ್ರಿ ನಾಗದೇವನು ನೇಮಿಚಂದ್ರಸಿದ್ಧಾಂತಿಯ ಗೌರವಾರ್ಥ ನಿಸಿಧಿಯನ್ನು ನಿಲ್ಲಿಸಿದಾಗ, ಪ್ರಭಾಚಂದ್ರನು ಅದರಲ್ಲಿ ಪಾಲ್ಗೊಂಡ ಸಾಧ್ಯತೆಯುಂಟು.[48] ಆದರೆ, ದೇವಕೀರ್ತಿಪಂಡಿತದೇವನ ಗೌರವಾರ್ಥ ನಿಸಿಧಿಯನ್ನು ಹುಳ್ಳರಾಜನು ನಿಲ್ಲಿಸಿದಾಗ, ಉಪಸ್ಥಿತನಿದ್ದ ಮುನಿಯ ಹೆಸರನ್ನು ಖಚಿತವಾಗಿ ಗುರುತಿಸಲಾಗಿಲ್ಲ.[49] ಕುಲಭೂಷಣ ಯತಿಯ ಸಮಕಾಲೀನನಾಗಿದ್ದ ದೇವಕೀರ್ತಿಪಂಡಿತದೇವನನ್ನು ಒಂದು ಶಾಸನದಲ್ಲಿ ಚತುರ್ಮುಖದೇವನ ಶಿಷ್ಯನೆಂದೂ ದಾಮಣಂದಿ, ಗುಣಚಂದ್ರ, ಮಾಘಣಂದಿ ತ್ರೈವಿದ್ಯದೇವ

---

43. ಅನುಕ್ರಮವಾಗಿ 564, 443, 445, 73, 444, 457 ಮತ್ತು 71
44. 73.
45. 444.
46. 334.
47. 564.
48. 63.
49. 70, 71.

ಮತ್ತಿತರರ ಸಹೋದ್ಯೋಗಿಯೆಂದೂ ಉಲ್ಲೇಖಿಸಲಾಗಿದೆ.[50] ಬೆಳ್ಗೊಳದಲ್ಲಿ ಈ ಪ್ರಭಾಚಂದ್ರನಿಗೆ ನಿಸಿಧಿ ಗೌರವ ದೊರೆಯದಿರುವುದು ಕುತೂಹಲಕಾರಕ.

(ಇ) ಪ್ರಭಾಚಂದ್ರಭಟ್ಟಾರಕದೇವ : 13ನೆಯ ಶತಮಾನ : 13ನೆಯ ಶತಮಾನದ ಎರಡು ಶಾಸನಗಳು ಪ್ರಭಾಚಂದ್ರಭಟ್ಟಾರಕದೇವನೆಂಬ ಮುನಿಯನ್ನು ಉಲ್ಲೇಖಿಸುವುವು.[51] ಈ ಮುನಿಯ ಬಗ್ಗೆ, ಅವನ ಸಾಧನೆಯ ಬಗ್ಗೆ, ಮತ್ತು ಅವನ ಅಂತ್ಯದ ಬಗ್ಗೆ ನಮಗೆ ಏನೂ ತಿಳಿಯದು. ಆದರೆ, ಬಾರಕಕೂರ ಮತ್ತು ಗೆರೆಸೊಪ್ಪೆಯ ಅವನ ಶಿಷ್ಯರಿಬ್ಬರು ಬೆಳ್ಗೊಳಕ್ಕೆ ಬಂದು ಗೊಮ್ಮಟ ಮಹಾವಿಗ್ರಹದ ಪೂಜೆಗಾಗಿ ದತ್ತಿಯೊಂದನ್ನು ಕೊಟ್ಟರೆಂದು ತಿಳಿದುಬರುವುದು.

(ಈ) ಪ್ರಭಾಚಂದ್ರಸಿದ್ಧಾಂತದೇವ : 1115-1145 : ಪ್ರಭಾಚಂದ್ರರಲ್ಲಿಯೇ ಅತ್ಯಂತ ಖ್ಯಾತಿ ಪಡೆದವನು ಶಾಂತಲೆಯ ಗುರು. ದಿಗಂಬರ ಸಂಘವು ಸೇನ, ನಂದಿ, ದೇವ ಮತ್ತು ಸಿಂಹ ಶಾಖೆಗಳಾಗಿ ವಿಭಜಿತಗೊಂಡಾಗ, ದೇಸಿಯಗಣ ಮತ್ತು ಪುಸ್ತಕಗಚ್ಛದ ಇಂಗುಳೇಶ್ವರ ಶಾಖೆಯು ಬಹಳ ಪ್ರಸಿದ್ಧಿ ಪಡೆಯಿತು. 'ಚಂದ್ರ' ಪ್ರತ್ಯಯಾಂತ ಹೊಂದಿದ ಮುನಿಗಳಲ್ಲಿ ಪ್ರಭಾಚಂದ್ರನಲ್ಲದೆ, ನಾಗಚಂದ್ರ, ದೇವಚಂದ್ರ, ಉದಯಚಂದ್ರ, ರವಿಚಂದ್ರ, ಜಿನಚಂದ್ರ ಮತ್ತು ಮೇಘಚಂದ್ರರು ಪ್ರಮುಖರು. ಇಲ್ಲಿಯ ಪ್ರಭಾಚಂದ್ರನು ಬಾಳಚಂದ್ರನ ಸಮಕಾಲೀನನೂ ಮೇಘಚಂದ್ರ ತ್ರೈವಿದ್ಯದೇವನ ಶಿಷ್ಯನೂ ಆಗಿದ್ದನು.

ಬೆಳ್ಗೊಳದ ಇತಿಹಾಸವನ್ನು ಈ ಪ್ರಭಾಚಂದ್ರನು 1115ರಲ್ಲಿ ಪ್ರವೇಶಿಸುವನು.[52] ಮುನಿ ಮೇಘಚಂದ್ರ ತ್ರೈವಿದ್ಯದೇವನು ಸಮಾಧಿ ವ್ರತಾಚರಣೆಯಿಂದ ಅಂತ್ಯ ಸಾಧಿಸಿದಾಗ, ಈ ಪ್ರಭಾಚಂದ್ರಸಿದ್ಧಾಂತದೇವನು ಗುಡ್ಡ ಗಂಗರಾಜ ಮತ್ತು ಗುಡ್ಡಿ ಲಕ್ಷ್ಮೀಮತಿಯರ ಮೂಲಕ ತನ್ನ ಗುರುವಿನ ಗೌರವಾರ್ಥ ನಿಸಿಧಿ ನಿಲ್ಲಿಸಿದನು. ಎರಡುಕಟ್ಟೆ ಬಸದಿಯ ಬಲಬದಿಯ ಮಂಟಪದಲ್ಲಿರುವ ಈ ನಿಸಿಧಿ ಶಾಸನದ ಪಾಠವನ್ನು ಚಾವರಾಜ ರಚಿಸಿದರೆ, ಪ್ರಭಾಚಂದ್ರಸಿದ್ಧಾಂತದೇವನ ಗುಡ್ಡನಾದ ಗಂಗಾಚಾರಿ ಅದನ್ನು ಕಂಡರಿಸಿದನು.[53]

ಏಚಿರಾಜನ ಮಡದಿ ಹಾಗೂ ಗಂಗರಾಜನ ತಾಯಿಯಾಗಿದ್ದ ಪೋಚಿಕಬ್ಬೆಯು ಬೆಳ್ಗೊಳದಲ್ಲಿಯಲ್ಲದೆ ಇತರೆಡೆಯಲ್ಲೂ ಬಸದಿಗಳನ್ನು ಕಟ್ಟಿಸಿದಳು. ಸನ್ಯಸನ ವ್ರತದಿಂದ 1120ರಲ್ಲಿ ಅವಳು ಮಡಿದಾಗ ಗಂಗಾಚಾರಿಯು ಈಕೆಯ ನಿಸಿಧಿಯನ್ನು ಕಂಡರಿಸಿದನು. ಇದರ ಶಾಸನ-ಪಾಠವನ್ನು ಚಾವರಾಜ ರಚಿಸಿದ್ದನು. ಏಚಿಕಾಂಗನನ್ನು (ಏಚಿರಾಜ)

---

50. 79.
51. 346 ಮತ್ತು 349.
52. 156.
53. 136.

ಮುಳ್ಳೂರಿನ ಕನಕನಂದಿಯ ಶಿಷ್ಯನೆಂದು ಉಲ್ಲೇಖಿಸಲಾಗಿದ್ದರೂ ಗಂಗರಾಜನನ್ನಾಗಲಿ ಪೋಚಿಕಬ್ಬೆಯನ್ನಾಗಲಿ ಈತನ ಶಿಷ್ಯವರ್ಗದಲ್ಲಿ ಸೇರಿಸಿಲ್ಲ. ಗಂಗರಾಜ ಮತ್ತು ಅವನ ತಾಯಿಯು ಪ್ರಭಾಚಂದ್ರನನ್ನು ತಮ್ಮ ಗುರುವೆಂದು ಗುರುತಿಸಿಕೊಂಡಿದ್ದರು. ಇದನ್ನು ಮೇಘಚಂದ್ರತ್ರೈವಿದ್ಯದೇವನ ಗೌರವಾರ್ಥ ನಿಲ್ಲಿಸಿದ ನಿಸಿಧಿಯ ಆಧಾರದ ಮೇಲೆ ದೃಢೀಕರಿಸಿಕೊಳ್ಳಬಹುದು. ಮಲಧಾರಿದೇವನ ಶಿಷ್ಯನಾದ ಶುಭಚಂದ್ರದೇವನು 1123ರಲ್ಲಿ ತನ್ನ ಅಂತ್ಯ ಸಾಧಿಸಿಕೊಂಡನು.

ಶುಭಚಂದ್ರದೇವನು ಗಂಗರಾಜ ಮತ್ತು ಅವನ ನಾದಿನಿ ಜಕ್ಕಣಬ್ಬೆಯ ಗುರುವಾಗಿದ್ದನು. ಅವರೀರ್ವರೂ ಕೂಡಿ ಈ ಮುನಿಯ ಗೌರವಾರ್ಥ ನಿಸಿಧಿಯನ್ನು ನಿಲ್ಲಿಸಿದರು. ಇವನ ಸ್ಮರಣ-ಕಾವ್ಯವನ್ನು ಪ್ರಭಾಚಂದ್ರಸಿದ್ಧಾಂತದೇವನ ಶಿಷ್ಯನಾದ ಪೆರ್ಗ್ಗಡೆ ಸಿಂಗಿಮಯ್ಯನು ರಚಿಸಿದನು.[54] ಇದರಲ್ಲಿ ಗಂಗರಾಜ ಮತ್ತು ಜಕ್ಕಣಬ್ಬೆಯರು ಶುಭಚಂದ್ರದೇವನ ಶಿಷ್ಯರೆಂದು ಸ್ಪಷ್ಟವಾಗಿ ಗುರುತಿಸಿಕೊಂಡಿರುವರು. ಈ ಉದಾಹರಣೆಗಳಿಂದ ವ್ಯಕ್ತಗೊಳ್ಳುವುದೇನೆಂದರೆ, ಗಂಗರಾಜನ ಪತ್ನಿ ಲಕ್ಷ್ಮೀಮತಿಯು ಪ್ರಭಾಚಂದ್ರಸಿದ್ಧಾಂತದೇವನ ಗುಡ್ಡಿಯಾಗಿದ್ದರೆ, ಗಂಗರಾಜ, ಪೋಚಿಕಬ್ಬೆ ಮತ್ತು ಜಕ್ಕಣಬ್ಬೆಯರು ಈ ಮುನಿಯನ್ನು ಬಹಳ ಗೌರವದಿಂದ ಕಂಡರೂ ಅವನನ್ನು ವೈಯಕ್ತಿಕವಾಗಿ ತಮ್ಮ ಗುರುವೆಂದು ಅಂಗೀಕರಿಸಿರಲಿಲ್ಲವೆಂಬುದು.

ಈ ಮೂವರು ಮೇಘಚಂದ್ರ ತ್ರೈವಿದ್ಯದೇವನ ಮತ್ತು ಶುಭಚಂದ್ರಸಿದ್ಧಾಂತದೇವನ ಶಿಷ್ಯರಾಗಿದ್ದರೆ, ಶಾಂತಲೆಯು ಶುಭಚಂದ್ರಸಿದ್ಧಾಂತದೇವನನ್ನು ವೈಯಕ್ತಿಕವಾಗಿ ಗುರುವೆಂದು ಅಂಗೀಕರಿಸಿಕೊಂಡಿದ್ದಳು. 1123ರಲ್ಲಿ ಅವಳು ಸವತಿಗಂಧವಾರಣ ಬಸದಿಯನ್ನು ಕಟ್ಟಿಸಿ, ಅದರ ನಿರ್ವಹಣೆಗೆ ಕಲ್ಕಣಿ ನಾಡಿನ ಮೊಟ್ಟೆನವಿಲೆ ಗ್ರಾಮವನ್ನು ದತ್ತಿ ಬಿಟ್ಟಾಗ, ಪ್ರಭಾಚಂದ್ರನು ಪೌರೋಹಿತ್ಯ ವಹಿಸಿ, ವಿಗ್ರಹವನ್ನು ಪ್ರತಿಷ್ಠಾಪಿಸಿ, ದತ್ತಿಯನ್ನು ಸ್ವೀಕರಿಸಿದ್ದನು.[55] ಶಾಂತಲೆಯು ಎಳಸನಕಟ್ಟೆಯನ್ನು ಕಟ್ಟಿಸಿ, ಗಂಗಸಮುದ್ರದ ಕೆಳಗಿನ ಐವತ್ತು ಕೊಳಗ ಭೂಮಿಯನ್ನು ದತ್ತಿ ನೀಡುವಂತೆ ವಿಷ್ಣುವರ್ಧನನ ಮನವೊಲಿಸಿದಾಗ, ಈ ದತ್ತಿಯನ್ನು ಸ್ವೀಕರಿಸಿದ್ದೂ ಪ್ರಭಾಚಂದ್ರಸಿದ್ಧಾಂತದೇವನೆ.[56] ಇದರಿಂದ ಭೂದತ್ತಿಗಳನ್ನು ಸಂಘಟಿಸುವ ಹಾಗೂ ಬೆಳ್ಗೊಳದ ಕೆಲವು ಬಸದಿಗಳಲ್ಲಿ ಸ್ಥಾನಿಕನ ಕಾರ್ಯವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಪ್ರಭಾಚಂದ್ರದೇವರಿಗೆ ಒಪ್ಪಿಸಲಾಗಿತ್ತು ಎಂಬುದು ಸ್ಪಷ್ಟಗೊಳ್ಳುವುದು. ಮಹೇಂದ್ರಕೀರ್ತಿ ಎಂಬ ಅವನ ಶಿಷ್ಯನೊಬ್ಬ ಶಾಂತಲೆಯು ಕಟ್ಟಿಸಿದ ಬಸದಿಗೆ ಲೋಹಪಾತ್ರೆಯೊಂದನ್ನು ಮಾಡಿಸಿಕೊಟ್ಟನೆಂದೂ ತಿಳಿದುಬರುವುದು.[57]

---

54. 135.
55. 162.
56. ಅದೇ.
57. 162.

ಶಾಂತಲೆಯ ತಾಯಿ ಮಾಚಿಕಬ್ಬೆಯು ಪ್ರಭಾಚಂದ್ರಸಿದ್ಧಾಂತದೇವನ ಇನ್ನೋರ್ವ ಗುಡ್ಡಿ. 1131ರಲ್ಲಿ ಅವಳು ತನ್ನ ಜೀವನ ಕೊನೆಗೊಳಿಸಿಕೊಳ್ಳಲು ನಿರ್ಧರಿಸಿದಾಗ, ಅವಳಿಗೆ ಸಮಾಧಿ ವ್ರತದ ದೀಕ್ಷೆಯನ್ನು ಈ ಪ್ರಭಾಚಂದ್ರ ಮತ್ತು ಅವನ ಸಹೋದ್ಯೋಗಿಗಳಾದ ವರ್ಧಮಾನದೇವ ಮತ್ತು ರವಿಚಂದ್ರದೇವ ನೀಡಿದರು. ಅವರು ಮಾಡಿದ ಸಮಾಧಿ ಕಥನವನ್ನು ಆಲಿಸುತ್ತ ಮಾಚಿಕಬ್ಬೆಯು ಕೊನೆಯುಸಿರೆಳೆದಳು. ಚಾರುಕೀರ್ತಿದೇವನ ಗುಡ್ಡ ಬೋಕಿಮಯ್ಯನು ಈ ನಿಸಿಧಿಶಾಸನವನ್ನು ರಚಿಸಿದರೆ, ಗಂಗಾಚಾರಿಯ ಸೋದರ ಕಾಮ್ಮಾಚಾರಿಯು ಅದನ್ನು ಕಂಡರಿಸಿದನು.[58]

ಮಾಚಿಕಬ್ಬೆಯ ಕೆಲವು ಸಂಬಂಧಿಗಳು ಬಳ್ಳಾರಿ ಜಿಲ್ಲೆಯ ಮೋರಿಂಗೆರೆಯಲ್ಲಿ ಸನ್ಯಸನ ವ್ರತವನ್ನಾಚರಿಸಿ ಮೃತಪಟ್ಟರೆಂದು ತಿಳಿದುಬರುವುದು. ಅವಳ ತಾಯಿ ನಾಗಿಯಕ್ಕ ಮತ್ತು ಸೋದರಿ ಏಚಿಯಕ್ಕ ಜೊತೆಗೂಡಿ ಮೃತರ ಗೌರವಾರ್ಥ ಕಳ್ಬಪ್ಪುನಾಡಿನ ಒಮ್ಮಳಿಗೆಹಳದಲ್ಲಿ ಪಟ್ಟಸಾಲೆಯೊಂದನ್ನು ಕಟ್ಟಿಸಿದರು. ಇದರ ಜೊತೆಗೆ ಅವರು ಪ್ರಭಾಚಂದ್ರಸಿದ್ಧಾಂತದೇವನಿಗೆ ಅರಕೆರೆಯ ಕೆಳಗಿನ ಭೂಭಾಗವನ್ನು ದತ್ತಿ ಬಿಟ್ಟರು.[59] ಮಾಚಿಕಬ್ಬೆಯ ಇನ್ನೊಬ್ಬ ಸೋದರ ಪೆರ್ಗ್ಗಡೆ ಸಿಂಗಿಮಯ್ಯನು 1139ರಲ್ಲಿ ಸಮಾಧಿ ವ್ರತದಿಂದ ಮೃತಪಟ್ಟಾಗ ಪ್ರಭಾಚಂದ್ರಸಿದ್ಧಾಂತದೇವನ ಗುಡ್ಡಿಯೂ ಸಿಂಗಿಮಯ್ಯನ ಪತ್ನಿಯೂ ಆದ ಸಿರಿಯವ್ವೆ ಮತ್ತು ಸಿಂಗಿಮಯ್ಯನ ಸೋದರ ನಾಗದೇವನ ಪತ್ನಿ ನಾಗಿಯಕ್ಕ ಜೊತೆಗೂಡಿ ಅವನ ಗೌರವಾರ್ಥ ನಿಸಿಧಿಯನ್ನು ನಿಲ್ಲಿಸಿದರು.[60]

ಹೀಗೆ, ಪ್ರಭಾಚಂದ್ರನಿಗೆ ಗಂಗರಾಜನ ಮನೆತನದವರಲ್ಲದೆ ಶಾಂತಲೆಯ ಹಾಗೂ ಅವಳ ತಾಯಿಯ ಮನೆತನಗಳಲ್ಲೂ ವರ್ಚಸ್ವಿ ಗುಡ್ಡ-ಗುಡ್ಡಿಯರಿದ್ದುದನ್ನು ಕಾಣುವೆವು. ಅವನಿಗೆ ಶ್ರಾವಕರಿಗಿಂತ ಶ್ರಾವಕಿಯರೇ ಅಧಿಕ ಸಂಖ್ಯೆಯಲ್ಲಿದ್ದರು. ಅವರಲ್ಲಿ ಪ್ರಮುಖರೆಂದರೆ ಗಂಗರಾಜನ ಪತ್ನಿ ಲಕ್ಷ್ಮೀಮತಿ, ವಿಷ್ಣುವರ್ಧನನ ಮಡದಿ ಶಾಂತಲೆ, ಶಾಂತಲೆಯ ತಾಯಿ ಮಾಚಿಕಬ್ಬೆ, ಮಾಚಿಕಬ್ಬೆಯ ನಾದಿನಿಯರಾದ ಸಿರಿಯವ್ವೆ ಮತ್ತು ನಾಗಿಯಕ್ಕ. ಚಾವರಾಜ, ಪೆರ್ಗ್ಗಡೆ ಮರ್ದಿಮಯ್ಯರಂಥ ಕವಿಗಳು ಮತ್ತು ಗಂಗಣ್ಣನಂತಹ ರೂವಾರಿಗಳು ಇವನ ಶಿಷ್ಯವರ್ಗದಲ್ಲಿದ್ದರು. 1139ರ ಸುಮಾರಿಗೆ ಪ್ರಭಾಚಂದ್ರನ ಖ್ಯಾತಿ ಮತ್ತು ಜನಪ್ರಿಯತೆ ಎಷ್ಟು ಮಹತ್ತರ ಹಂತ ಮುಟ್ಟಿತ್ತೆಂದರೆ ಸರ್ವರೂ ಅವನನ್ನು 'ಮಹಾಮಂಡಲಾಚಾರ್ಯ'ನೆಂದೇ ಸಂಬೋಧಿಸುತ್ತಿದ್ದರು.

ಈ ಅವಲೋಕನದಿಂದ ವ್ಯಕ್ತವಾಗುವುದೇನೆಂದರೆ (ಅ) ಮೇಘಚಂದ್ರ ತ್ರೈವಿದ್ಯದೇವನ

58. 176.
59. 174.
60. 175.

ಪ್ರಧಾನ ಶಿಷ್ಯನಾದ ಈ ಪ್ರಭಾಚಂದ್ರನು 12ನೆಯ ಶತಮಾನದ ಪ್ರಥಮಾರ್ಧದಲ್ಲಿ ಆಧ್ಯಾತ್ಮಿಕ ಪ್ರಪಂಚದ ಮೇಲೆ ಸಾಕಷ್ಟು ಪ್ರಭುತ್ವ ಹೊಂದಿದ್ದನು; (ಆ) ಆಳರಸಿಯರ ಮತ್ತು ದಂಡನಾಯಕ ಮನೆತನಗಳೊಂದಿಗೆ ಸಂಬಂಧ ಹೊಂದಿದ್ದ ಇವನು ಜಿನಧರ್ಮದ ಸಂರಕ್ಷಣೆ ಮತ್ತು ಸಂವರ್ಧನೆಯ ಜವಾಬ್ದಾರಿಯನ್ನೂ ಹೊತ್ತಿದ್ದನು, ಮತ್ತು (ಇ) ತನ್ನ ಶಿಷ್ಯವರ್ಗದಲ್ಲಿ ಶ್ರೀಮಂತ ಗುಡ್ಡರಲ್ಲದೆ, ಸಾಮಾನ್ಯರಾದ ಲಿಪಿಕಾರರನ್ನೂ ರೂವಾರಿಗಳನ್ನೂ ಪಡೆದಿದ್ದನು.

ಶುಭಚಂದ್ರಸಿದ್ಧಾಂತದೇವ, ವರ್ಧಮಾನದೇವ, ರವಿಚಂದ್ರದೇವ, ಚಾರುಕೀರ್ತಿದೇವ ಮತ್ತು ವೀರನಂದಿಸಿದ್ಧಾಂತಿಯರ ಸಮಕಾಲೀನನಾಗಿದ್ದ ಆಚಾರ್ಯ ಪ್ರಭಾಚಂದ್ರನು[61] 1139ರಲ್ಲಿ 'ಮಹಾಮಂಡಲಾಚಾರ್ಯ'ನ ಸ್ಥಾನಕ್ಕೇರಿ, 1145ರಲ್ಲಿ ಸಾವನ್ನಪ್ಪುವವರೆಗೆ ಬೆಳ್ಗೊಳದ ಬೆಳವಣಿಗೆಗೆ ಪ್ರಮುಖ ಕಾರಣೀಪುರುಷನಾಗಿದ್ದನು. ಅವನು ತನ್ನ ಕೆಲವು ಶಿಷ್ಯರಿಗೆ ಸಮಾಧಿವ್ರತದ ದೀಕ್ಷೆ ನೀಡಿದನಾದರೂ ತಾನು ಮಾತ್ರ ಈ ವ್ರತವನ್ನಾಚರಿಸಲು ಸಾಕಷ್ಟು ಸಮಯ ಮತ್ತು ಅವಕಾಶ ದೊರಕಿಸಿಕೊಳ್ಳದೆ, ಇಹಜೀವನವನ್ನು ಅಂತ್ಯಗೊಳಿಸಿದನೆಂದು ಕಾಣುವುದು. ಅವನು ಅಂತ್ಯ ಕಂಡ ವಿಧಾನಕ್ಕಿಂತ ಬೆಳ್ಗೊಳದಲ್ಲಿ ಅವನು ವಹಿಸಿದ ಪಾತ್ರಕ್ಕಾಗಿ, ಹೆಚ್ಚು ಗೌರವಾನ್ವಿತನಾಗಿ ನಿಸಿಧಿಯನ್ನು ಗಳಿಸಿಕೊಂಡನು.

ಶಾಸನದ ಸ್ಮರಣ ಪಾಠದಲ್ಲಿ 'ನಿಸಿಧಿ' ಎಂಬ ಪದದಿಂದ ಸ್ಪಷ್ಟವಾಗಿ ಗುರುತಿಸಲಾಗಿದ್ದರೂ, ಗಂಗಣ್ಣನಿಂದ ರಚಿತಗೊಂಡು ದಾಸೋಜನ ಮಗ ರಾಮೋಜನಿಂದ ಕಂಡರಿಸಲ್ಪಟ್ಟ ಈ ಸ್ಮಾರಕವು ಈಗ ಸವತಿಗಂಧವಾರಣ ಬಸದಿಯ ಬಳಿಯ ಮಂಟಪದಲ್ಲಿದ್ದು, ಸ್ಥೂಲವಾಗಿ ಇದು ಉಳಿದ ಸ್ಮಾರಕಸ್ತಂಭಗಳನ್ನು ಹೋಲುವುದು. ಅವನ ಪ್ರಖ್ಯಾತ ಶಿಷ್ಯರಲ್ಲಿ ಬಹುತೇಕರು 1115ರಲ್ಲಿ ಮೃತರಾಗಿದ್ದುದರಿಂದ ಈ ಮುನಿಯನ್ನು ಗೌರವಿಸುವ ಹೊಣೆಯನ್ನು ಲಿಪಿಕಾರನಾದ ಗಂಗಣ್ಣನು ಹೊರಬೇಕಾಯಿತೆಂದು ಕಾಣುವುದು. ರೂವಾರಿ ಗಂಗಣ್ಣನು ಇವನ ಪಾದಚಿಹ್ನೆಗಳನ್ನು ಜಿನನಾಥಪುರದ ಅರೆಗಲ್ಲು ಬಸದಿಯ ಬಳಿಯ ಬಂಡೆಯ ಮೇಲೂ ಕೆತ್ತಿದನು. ಗಂಗಣ್ಣನ ಹಸ್ತಾಕ್ಷರಗಳು ಆ ಚಿಹ್ನೆಗಳು ಪ್ರಭಾಚಂದ್ರಸಿದ್ಧಾಂತದೇವನವೆಂದು ಗುರುತಿಸುತ್ತವೆ.[62] ಇದರ ಸಮೀಪದಲ್ಲಿರುವ ಇನ್ನೊಂದು ಶಾಸನವೂ 'ಶ್ರೀ ಪ್ರಭು' ಎಂಬ ಹೆಸರನ್ನು ಸ್ಮರಿಸುತ್ತಿದ್ದು ಅದೂ ಪ್ರಭಾಚಂದ್ರಸಿದ್ಧಾಂತದೇವನನ್ನೇ ಸೂಚಿಸುತ್ತಿರಬಹುದು.[63]

5. ಭಾನುಕೀರ್ತಿದೇವರು: 1117-1180 : ಭಾನುಕೀರ್ತಿ ಎಂಬ ಮುನಿಯು ಶಾಂತಲೆ, ಮಾಚಿಕಬ್ಬೆ, ಗಂಗರಾಜ ಮತ್ತು ಹಳ್ಳರಾಜನ ಕುಟುಂಬಗಳ ಆಚಾರ್ಯನಾಗಿದ್ದನು. ಆದರೆ, ಈ ಹೆಸರಿನ ಒಬ್ಬ ಮುನಿಯಿದ್ದನೊ ಅಥವಾ ಒಬ್ಬನಿಗಿಂತ ಹೆಚ್ಚು ಮುನಿಗಳಿದ್ದರೋ ಎಂಬುದು ಸ್ಪಷ್ಟಗೊಳ್ಳುತ್ತಿಲ್ಲ.

61. 156.
62. 533.
63. 534.

(ಅ) ಭಾನುಕೀರ್ತಿ : 1117 : ಭಾನುಕೀರ್ತಿ ಹೆಸರಿನ ಮುನಿಯ ಅತ್ಯಂತ ಪ್ರಾಚೀನ ಉಲ್ಲೇಖ ದೊರೆಯುವುದು 1117ರದೆನ್ನಲಾದ ಶಾಸನದಲ್ಲಿ. ಶುಭಚಂದ್ರದೇವನ ಕಿರಿಯ ಸಮಕಾಲೀನನಾಗಿ, 'ಪೃಥ್ವಿಯ ಮೇಲಿನ ಜೈನರಿಗೆ ಮಾತೆಯಂತಿದ್ದ' ಮಾಚಿಕಬ್ಬೆ ಮತ್ತು ಶಾಂತಿಕಬ್ಬೆಯರ ಪುತ್ರರಾದ ಪೊಯ್ಸಳಸೆಟ್ಟಿ ಮತ್ತು ನೇಮಿಸೆಟ್ಟಿಯರಿಗೆ ದೀಕ್ಷೆ ನೀಡಿದವನೇ ಈ ಭಾನುಕೀರ್ತಿ. ಈ ಸೆಟ್ಟಿದ್ವಯರು ತೇರಿನ ಬಸದಿಯನ್ನು ಕಟ್ಟಿಸಿ, ಅದರ ನಿರ್ವಹಣೆಗಾಗಿ ಭೂದತ್ತಿ ನೀಡಿದರು. ಇಲ್ಲಿ ಪ್ರಸ್ತಾಪಿಸಿದ ಶಾಂತಿಕಬ್ಬೆ ಮತ್ತು ಮಾಚಿಕಬ್ಬೆಯರು ಯಾರೆಂಬುದರ ಬಗ್ಗೆ ಸ್ವಲ್ಪ ಅನಿಶ್ಚಿತತೆ ಇದೆ. ಏಕೆಂದರೆ, ಅವರು ಇದೇ ಹೆಸರಿನ ವಿಷ್ಣುವರ್ಧನನ ಮಡದಿ ಮತ್ತು ಅವಳ ತಾಯಿಯು ಆಗಿದ್ದರೋ ಇಲ್ಲವೋ ಎಂಬುದು ಖಚಿತಗೊಳ್ಳುತ್ತಿಲ್ಲ. 'ಪೃಥ್ವಿಯ ಮೇಲಿನ ಸಕಲ ಜೈನರ ತಾಯಿಯರೆಂದು' ಪ್ರಸಿದ್ಧರಾಗಿದ್ದ ಮತ್ತು ಅಂದಿನ ಕಾಲದ ಅತಿ ಧರ್ಮಿಷ್ಠ ಹಾಗೂ ವರ್ಚಸ್ವಿ ಜೈನರಾಗಿದ್ದವರ ಪುತ್ರರೆಂದು ಆಧ್ಯಾತ್ಮಿಕ ಅರ್ಥದಲ್ಲಿ ಅವರು ಕರೆದುಕೊಂಡಿರಲೂ ಸಾಧ್ಯ.

ಲಕ್ಷ್ಮೀಮತಿಯ ಸೋದರಿಯಾದ ದೇಮತಿಯನ್ನು ವರಿಸಿ, ಪೊಯ್ಸಳಸೆಟ್ಟಿಯು ಗಂಗರಾಜನ ನೆಂಟನಾದಂತಿದೆ.[64] ನೊಳಂಬಸೆಟ್ಟಿಯೆಂದು ಜನ್ಮನಾಮ ಧರಿಸಿದ್ದರೂ ಅವನು ಪೊಯ್ಸಳಸೆಟ್ಟಿ ಮತ್ತು ಚಾವುಂಡ ಎಂದೇ ಹೆಚ್ಚು ಜನಪ್ರಿಯನಾಗಿದ್ದನು. ಇವು ಅಂದಿನ ಅರಸು ಮನೆತನ ಮತ್ತು ಬೆಳ್ಗೊಳದ ಇತಿಹಾಸದಲ್ಲಿಯೆ ಕೀರ್ತಿವಂತ ವ್ಯಕ್ತಿಯನ್ನು ಗೌರವಿಸಲು ಇಟ್ಟುಕೊಂಡಿದ್ದ ಉಪನಾಮಗಳಾಗಿರಬಹುದು. ಶುಭಚಂದ್ರಸಿದ್ಧಾಂತದೇವನ ಗುಡ್ಡಿಯಾಗಿದ್ದ ದೇಮತಿಯು 1120ರಲ್ಲಿ ಮೃತಪಟ್ಟಾಗ, ಲಕ್ಷ್ಮೀಮತಿಯು ಗಂಗರಾಜನೊಡಗೂಡಿ ಅವಳ ಗೌರವಾರ್ಥ ನಿಸಿಧಿ ನಿಲ್ಲಿಸಿದಳು. ದೇಮತಿ, ಲಕ್ಷ್ಮೀಮತಿ, ಅವರ ಸೋದರ ಬೂಚಣ, ಲಕ್ಷ್ಮಿಯ ಗುರು ಮೇಘಚಂದ್ರ ತ್ರೈವಿದ್ಯದೇವರ ನಿಸಿಧಿಗಳೆಲ್ಲ ಸವತಿಗಂಧವಾರಣ ಬಸದಿಯ ಪಶ್ಚಿಮಕ್ಕಿರುವ ಒಂದೇ ಮಂಟಪದಲ್ಲಿರುವುದು ಗಮನಾರ್ಹವಾಗಿದೆ.

ಶಾಂತಲೆ, ಮಾಚಿಕಬ್ಬೆ, ದೇಮತಿಯರಿಗೆ ಮಾಡಿದ ಈ ಉಲ್ಲೇಖಗಳನ್ನು ಬಿಟ್ಟರೆ ಉಳಿದವರಾರೂ ಭಾನುಕೀರ್ತಿಯ ಶಿಷ್ಯರೆಂದು ಸ್ಪಷ್ಟವಾಗಿ ಹೇಳಿಕೊಂಡಿಲ್ಲ. 1117ರ ಸುಮಾರಿಗೆ ಬಾಹುಬಲಿ ಬಸದಿಯನ್ನು ನಿರ್ಮಿಸಲು ಆಧ್ಯಾತ್ಮಿಕ ಪ್ರೇರಣೆ ಒದಗಿಸಿದ್ದನ್ನು ಬಿಟ್ಟರೆ, ಈ ಮುನಿಯ ಬಗ್ಗೆ ಹೆಚ್ಚಿನ ವಿವರಗಳು ದೊರೆಯುವುದಿಲ್ಲ. ಅವನು ಎಷ್ಟು ಕಾಲ ಜೀವಿಸಿದ್ದನೆಂದಾಗಲಿ, ಯಾವಾಗ ಮತ್ತು ಹೇಗೆ ಅಂತ್ಯ ಸಾಧಿಸಿದನೆಂದಾಗಲಿ, ಅವನ ಆಧ್ಯಾತ್ಮ ಗುರುಗಳು ಮತ್ತು ಶಿಷ್ಯರ ಬಗ್ಗೆಯಾಗಲಿ, ವಿವರಗಳು ದೊರೆತಿಲ್ಲ.

---

64. ಎಕ IV ಕೃಸಾ. 3.

(ಆ) ಭಾನುಚಂದ್ರ : 1118 : ಭಾನುಚಂದ್ರ ಎಂಬ ಮತ್ತೊಬ್ಬ ಮುನಿಯು ನಾಲ್ಕು ಸಂಘಗಳ ಮತ್ತು ಎಲ್ಲ ಗಣಗಳ ಶ್ರಮಣರು, ಕಂತಿಯರು ಮತ್ತು ಗುಡ್ಡ ಗುಡ್ಡಿಯರೊಂದಿಗೆ 1118ರಲ್ಲಿ ಗೊಮ್ಮಟನ ಪಂಚಕಲ್ಯಾಣ ಉತ್ಸವದಲ್ಲಿ ಪಾಲ್ಗೊಂಡಿದ್ದನೆಂದು ಹೇಳಲಾಗಿದೆ.[65] ಈ ಮುನಿಯು ಪೊಯ್ಸಳಸೆಟ್ಟಿ ಮತ್ತು ನೇಮಿಸೆಟ್ಟಿಯರ ಗುರುವಿಗಿಂತ ಬೇರೆಯವನಾಗಿದ್ದನೆಂಬುದನ್ನು ಅವರ ಭಿನ್ನ ಭಿನ್ನ ಪ್ರತ್ಯೇಯಾಂತಗಳು ಸೂಚಿಸುವುವು. ಈ ಭಾನುಚಂದ್ರನು ನೇಮಿಚಂದ್ರಸಿದ್ಧಾಂತ ಚಕ್ರವರ್ತಿ, ಚತುರ್ಮುಖ ಸಿಂಹನಂದಿ, ಶಾಂತಿಚಂದ್ರ, ಕನಕಚಂದ್ರ, ನೇಮಿಚಂದ್ರ ಮತ್ತು ಮಲಧಾರಿ ಮುನಿಗಳ ಸಮಕಾಲೀನನಾಗಿದ್ದನು.

(ಇ) ಭಾನುಕೀರ್ತಿ ಸಿದ್ಧಾಂತದೇವ : 12ನೆಯ ಶತಮಾನದ ಆರಂಭ : ಭಾನುಕೀರ್ತಿದೇವ ಮತ್ತು ಭಾನುಚಂದ್ರರಿಗಿಂತ ಭಿನ್ನನಾಗಿದ್ದ ಭಾನುಕೀರ್ತಿಸಿದ್ಧಾಂತದೇವನೊಬ್ಬ 12ನೆಯ ಶತಮಾನದ ದ್ವಿತೀಯಾರ್ಧದ ಶಾಸನದಲ್ಲಿ ಕಾಣಿಸಿಕೊಳ್ಳುವನು.[66] ನಯಕೀರ್ತಿಸಿದ್ಧಾಂತದೇವನ ಶಿಷ್ಯನಾದ ಈ 'ಮಹಾಮಂಡಲಾಚಾರ್ಯ' ಭಾನುಕೀರ್ತಿಸಿದ್ಧಾಂತದೇವನು, ದಾಮಣಂದಿತ್ರೈವಿದ್ಯ ಮತ್ತು ಆಧ್ಯಾತ್ಮಿಬಾಳಚಂದ್ರದೇವರನ್ನಲ್ಲದೆ, ಪ್ರಭಾಚಂದ್ರಸಿದ್ಧಾಂತದೇವ, ಮಾಘಣಂದಿಭಟ್ಟಾರಕದೇವ, ಪದುಮಣಂದಿದೇವರ ಸಮಕಾಲೀನನಾಗಿದ್ದನು.[67] ಬಹುತೇಕ ಶಾಸನಗಳು ಅವನನ್ನು ನಯಕೀರ್ತಿಸಿದ್ಧಾಂತದೇವನ ಶಿಷ್ಯನೆಂದು ಗುರುತಿಸಿದರೆ, ಒಂದು ಶಾಸನದಲ್ಲಿ ಗಂಡವಿಮುಕ್ತದೇವ ಮತ್ತು ದೇವಕೀರ್ತಿಮುನಿಗಳ ಶಿಷ್ಯನೆಂದು ಈತನನ್ನು ಉಲ್ಲೇಖಿಸಲಾಗಿದೆ.[68]

ಭಾನುಕೀರ್ತಿಯು ಹುಳ್ಳರಾಜನ ಕುಟುಂಬದೊಂದಿಗೆ ನಿಕಟ ಸಂಪರ್ಕ ಹೊಂದಿದ್ದನು. ಬೆಳ್ಗೊಳದ ಇತಿಹಾಸದಲ್ಲಿ 1159ರಲ್ಲಿ ಕಾಲಿರಿಸುವ ಇವನು ಕ್ರಮೇಣ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಂಡನು. 1159ರಲ್ಲಿ ಹುಳ್ಳರಾಜನು ಭಂಡಾರಬಸದಿಯನ್ನು ಕಟ್ಟಿಸಿ, ನಯಕೀರ್ತಿಸಿದ್ಧಾಂತದೇವನನ್ನು ಅದರ ಆಚಾರ್ಯನನ್ನಾಗಿ ನೇಮಿಸಿ, ಈ ದೇವಾಲಯದ ನಿರ್ವಹಣೆಗಾಗಿ ಸವಣೇರು ಗ್ರಾಮವನ್ನು ದತ್ತಿ ನೀಡಿದನು.[69] ಆದರೆ ಈ ದತ್ತಿಯ ವಾಸ್ತವ ಆಡಳಿತೆಯನ್ನು ನಿರ್ವಹಿಸಿದವನು ಭಾನುಕೀರ್ತಿ.[70] 'ಕೀರ್ತಿಕಾಂತ, ಉರಗೇಂದ್ರ, ಕ್ಷೀರಸಾಗರ, ರಜತಗಿರಿ, ಶ್ವೇತಛತ್ರ, ಗಂಗೇಯ, ಹರನಹಾಸ, ಐರಾವತ, ಸ್ಫಟಿಕ, ವೃಷಭ, ಶುಭ್ರಾಭ್ರ, ನೀಹಾರ, ಮಣಿಹಾರ, ಇಂದ್ರ, ಶ್ವೇತಕಮಲ, ಬುಧಜನವಿನುತ'

---

65. ಎ ಕ II, 374.
66. 202.
67. 73, 444, 455, 457 ಮತ್ತು 564.
68. 71.
69. 476.
70. 481, 477.

ಎಂದೆಲ್ಲ ಖ್ಯಾತಿಗೊಂಡಿದ್ದ ಭಾನುಕೀರ್ತಿಯು ಆಗ ಮುನೀಂದ್ರನೆನಿಸಿದ್ದನು.[71] ಈ ವರ್ಣನೆಯ ಅಕ್ಷರಶಃ ಪುನರಾವರ್ತನೆ[72] ಹಾಗೂ ಅದರ ಸಂಕ್ಷಿಪ್ತ ರೂಪಾಂತರಗಳು[73] ಇನ್ನೂ ಹಲವಾರು ಶಾಸನಗಳಲ್ಲಿ ಬರುತ್ತವೆ.

1163ರಲ್ಲಿ ಭಾನುಕೀರ್ತಿಯ ಸಹೋದ್ಯೋಗಿಯಾದ ದೇವಕೀರ್ತಿಯು ಅಂತ್ಯ ಸಾಧಿಸಿದಾಗ, ಹುಳ್ಳರಾಜನ ಅಧೀನಾಧಿಕಾರಿಯಾಗಿದ್ದ ನಾಗಿದೇವನು ದೇವಕೀರ್ತಿಗೆ ನಿಸಿಧಿ ಮಾಡಿಸಿ ಅವನನ್ನು ಗೌರವಿಸಿದನು. ಈ ಸಂದರ್ಭದಲ್ಲಿ ಭಾನುಕೀರ್ತಿ ಮತ್ತು ದೇವಕೀರ್ತಿಯನ್ನು ಗಂಡವಿಮುಕ್ತದೇವನ ಶಿಷ್ಯರೆಂದು ಉಲ್ಲೇಖಿಸಲಾಗಿದೆ.[74] ಈ ನಿಸಿಧಿಗೂ ಭಾನುಕೀರ್ತಿಗೂ ಯಾವುದೇ ಸಂಬಂಧವಿಲ್ಲವೆಂಬುದು ಸ್ಪಷ್ಟ. ಆದರೆ, ಹುಳ್ಳರಾಜನ ಕುಟುಂಬದವರು ದೇವಕೀರ್ತಿ ಮತ್ತು ನಯಕೀರ್ತಿಸಿದ್ಧಾಂತದೇವರಿಗೆ ತೋರಿದಷ್ಟೆ ಗೌರವವನ್ನು ಭಾನುಕೀರ್ತಿಗೂ ತೋರಿದ್ದರಲ್ಲಿ ಅನುಮಾನವಿಲ್ಲ.

ನಯಕೀರ್ತಿಯು ಕ್ರಿಯಾಶೀಲನಾಗಿರುವವರೆಗೆ ಅವನ ಶಿಷ್ಯರೆಲ್ಲ ಈ ಹಿರಿಯನ ಹೆಸರಿನಲ್ಲಿಯೆ ವ್ಯವಹಾರಗಳನ್ನು ನಿರ್ವಹಿಸುತ್ತಾ, ಅವನ ಆಡಳಿತದ ಹೊರೆಯನ್ನು ಹಂಚಿಕೊಂಡಿದ್ದರು. ಆದರೆ, ನಯಕೀರ್ತಿಯು ಐಹಿಕ ಹೊಣೆಗಳಿಂದ ದೂರ ಸರಿಯತೊಡಗಿದಾಗ ಆ ಜವಾಬ್ದಾರಿಗಳನ್ನೆಲ್ಲ ಸಹಜವಾಗಿಯೆ ಅವನ ನೆಚ್ಚಿನ ಶಿಷ್ಯರು ಹೊರತೊಡಗಿದರು. 1173ರಲ್ಲಿ, ತನ್ನ ಮರಣಕ್ಕಿಂತ ಮೂರು ವರ್ಷ ಮುಂಚೆ, ನಯಕೀರ್ತಿಯು ತನ್ನ ಪ್ರಿಯ ಶಿಷ್ಯ ಭಾನುಕೀರ್ತಿಗೆ ಅಧಿಕಾರ ಬಿಟ್ಟುಕೊಟ್ಟು, ಬೊಮ್ಮದೇವ ನೀಡಿದ ಗ್ರಾಮದತ್ತಿಯ ನಿರ್ವಹಣೆಯನ್ನೂ ಒಪ್ಪಿಸಿದನು.[75] ಬೊಮ್ಮದೇವನು ಮಂತ್ರಿ ಹುಳ್ಳರಾಜನ ಅಧೀನ ಅಧಿಕಾರಿಯಾದ ನಾಗದೇವನ ತಂದೆ ಹಾಗೂ ನಯಕೀರ್ತಿಸಿದ್ಧಾಂತದೇವನ ಶಿಷ್ಯನಾಗಿದ್ದನು. ಪಾರ್ಶ್ವನಾಥ ಬಸದಿ ಮತ್ತು ಚತುರ್ವಿಂಶತಿ ಬಸದಿಗಳ ಸಂರಕ್ಷಣೆಗೆ ಮತ್ತು ಶ್ರಮಣರ ಜೀವನಾಧಾರಕ್ಕೆ ಮೇರುಹಳ್ಳಿ ಮತ್ತು ಬೆಕ್ಕ ಗ್ರಾಮಗಳನ್ನೂ ದತ್ತಿ ಕೊಡಲಾಯಿತು. ಇದಲ್ಲದೆ, ಹುಳ್ಳರಾಜನು ಗೊಮ್ಮಟ ಮಹಾವಿಗ್ರಹದ ಭಂಡಾರವನ್ನು ಕಾಪಾಡುವ ಹೊಣೆಯನ್ನೂ ಭಾನುಕೀರ್ತಿಗೆ ಒಪ್ಪಿಸಿದನು. ಮೂಲತಃ ಹೊಯ್ಸಳ ನರಸಿಂಹನು ನೀಡಿದ ಈ ದತ್ತಿಯನ್ನು, 1173ರಲ್ಲಿ ಇಮ್ಮಡಿ ಬಲ್ಲಾಳನು ನವೀಕರಿಸಿದನೆಂದು ತಿಳಿದುಬರುತ್ತದೆ. ನಯಕೀರ್ತಿದೇವನ ಗುಡ್ಡನಾದ ನಾಗದೇವನು ಇಲ್ಲಿ ಹಾಸುಕಲ್ಲನ್ನು ಹಾಕಿಸಿ, ಕಮಠಪಾರ್ಶ್ವನಾಥ ಬಸದಿಯ ನವರಂಗವನ್ನು (ಪುನರ್) ನಿರ್ಮಾಣ ಮಾಡಿದನು. ಅವನು ತನ್ನ ಗುರುವಿನ

71. 477.
72. 73 ಮತ್ತು 563.
73. 481.
74. 71.
75. 565.

ಗೌರವಾರ್ಥ ನಿಸಿಧಿ ಸ್ಮಾರಕವನ್ನು ನಿಲ್ಲಿಸಿದ್ದಲ್ಲದೆ ಬೆಳ್ಗೊಳದ ನಗರ ಜಿನಾಲಯವನ್ನೂ ಕಟ್ಟಿಸಿದನು.[76]

ಗುರು ನಯಕೀರ್ತಿಸಿದ್ಧಾಂತದೇವನ ಮರಣದ ನಂತರ ಭಾನುಕೀರ್ತಿಯು ತನ್ನ ಅಂತ್ಯ ಸಾಧಿಸಿಕೊಂಡನು. 1195ರವರೆಗೆ ಅವನನ್ನು ಉಲ್ಲೇಖಿಸಿದ್ದರೂ, 12ನೆಯ ಶತಮಾನದ ಅಂತ್ಯದವರೆಗೂ ಈ ಮುನಿ ಜೀವಿಸಿದ್ದ ಬಗ್ಗೆ ಖಚಿತತೆಯಿಲ್ಲ. 1195ರ ನಂತರ ಅವನನ್ನು ಸ್ಮರಿಸಿರುವುದು ಕ್ವಚಿತ್ತಾಗಿ ಮಾತ್ರ ಎಂಬುದನ್ನು ಗಮನಿಸುವುದವಶ್ಯ. ಅವನಿಗಿಂತ ದೀರ್ಘಕಾಲ ಬದುಕಿದ ಅವನ ಸಹೋದ್ಯೋಗಿ ಬಾಳಚಂದ್ರನು ಅವನ ಗೌರವಾರ್ಥ ನಿಸಿಧಿಯನ್ನು ನಿಲ್ಲಿಸಿದನು. ಆದರೆ, ಭಾನುಕೀರ್ತಿಯು ತನ್ನ ಕೊನೆಯ ದಿನಗಳನ್ನು ಬೆಳ್ಗೊಳದಲ್ಲಿ ಕಳೆಯದೆ ಉತ್ತರ ಕರ್ನಾಟಕದ ತೀರ್ಥಗಳಲ್ಲಿ ಕಳೆದು, ಕೂಂಡಿನಾಡಿನ ಹೂವಿನಬಾಗೆಯಲ್ಲಿ ಸಾವನ್ನಪ್ಪಿದನು.

'ವೈರಾಗ್ಯದ ಸಾಕಾರಮೂರ್ತಿ, ಪುಸ್ತಕಗಚ್ಛದ ಪ್ರಭುಶ್ರೇಷ್ಠ, ಮೂಲಸಂಘದ ದೇಸಿಗಗಣದ ಅಗ್ರಗಣ್ಯ, ಭಕ್ತರ ಕಷ್ಟಗಳ ಶೀಘ್ರ ಪರಿಹಾರಕ..., ಸನ್ನಡತೆಯ ಸಾಮ್ರಾಟ, ಸಮ್ಯಕ್ ಜ್ಞಾನಿ, ಸಹನಾಮೂರ್ತಿ, ಧಾರ್ಮಿಕ ಪುಣ್ಯದ ದಷ್ಟ ಸಂವರ್ಧಕ, ದ್ವಾದಶ ವಿಧ ಸದ್ಗುಣಗಳಲ್ಲಿ ಹಾಗೂ ಧಾರ್ಮಿಕ ನೇಮನಿಷ್ಠೆಗಳಲ್ಲಿ ಪಾರಂಗತ' ಎನಿಸಿದ ಭಾನುಕೀರ್ತಿಯು ದೇಶದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಸಂಚರಿಸುತ್ತಾ, ಪ್ರತಿ ಊರಿನಲ್ಲೂ ಧರ್ಮದ ಮಹತಿಯನ್ನು ಪಸರಿಸಿದನು. ಉತ್ತರದಲ್ಲಿ ಸಂಚರಿಸುತ್ತಾ ಕೂಂಡಿನಾಡಿನ ಹೂವಿನಬಾಗೆಯನ್ನು ತಲುಪಿದಾಗ, ಅವನು ಆಹಾರವನ್ನು ತ್ಯಜಿಸಿ, ಸನ್ಯಸವನ್ನು ಸ್ವೀಕರಿಸಿ, ಜೀವನ ಅಂತ್ಯಗೊಳ್ಳುವವರೆಗೆ ಧ್ಯಾನಗೈದನು. ಗಂಗರಾಜನ ನಾದಿನಿ ಹೆಗ್ಗಡತಿ ಬಾಗಣಬ್ಬೆಯು ಭಾನುಕೀರ್ತಿಯ ಮರಣವಾರ್ತೆಯನ್ನು ಕೇಳಿದಾಗ ಚಿಕ್ಕಬೆಟ್ಟದ ಮೇಲೆ ಪರೋಕ್ಷ ವಿನಯವೆಂದು ನಿಸಿಧಿಯನ್ನು ನಿಲ್ಲಿಸಿದಳು. ಭಾನುಕೀರ್ತಿಯ ಗುಡ್ಡನಾದ ಸಂಧಿವಿಗ್ರಹಿ ಮಲ್ಲಿಯಣನು ಈ ಕಾರ್ಯಪೂರೈಸುವಲ್ಲಿ ಸಹಕಾರವಿತ್ತನು. 'ಅವನ (ಭಾನುಕೀರ್ತಿಯ) ಖ್ಯಾತಿಗೊಪ್ಪುವ ಶಿಲಾ ಕೂಟವನ್ನು' ಬಾಲಚಂದ್ರ ಮುನೀಂದ್ರನು ಕಟ್ಟಿಸಿದನು.

ಬಹಳಷ್ಟು ಭಗ್ನಗೊಂಡು ಈಗ ಕತ್ತಲೆ ಬಸದಿಯ ಸಭಾಮಂಟಪದಲ್ಲಿಟ್ಟಿರುವ, ಈ ಶಾಸನದ ಖಚಿತ ದಿನಾಂಕವನ್ನು ಗೊತ್ತುಪಡಿಸಲು ಸಾಧ್ಯವಾಗುತ್ತಿಲ್ಲ.[77] ಗಂಗರಾಜನ ಸೋದರನಾದ ಬಮ್ಮ, ಏಚಿರಾಜನ ತಾಯಿ ಬಾಗಣಬ್ಬೆ, ಬಾಳಚಂದ್ರದೇವ, ಅಧಿಕಾರಿ ಮಲ್ಲಿಯಣ, ಮುಂತಾದವರನ್ನು ಈ ಶಾಸನವು ಪ್ರಸ್ತಾಪಿಸುವುದು. 12ನೆಯ ಶತಮಾನದ ಮೂವತ್ತರ ದಶಕದಲ್ಲಿ ಗಂಗರಾಜನು ಮೃತಪಟ್ಟನು; ಆದರೆ, ಬಾಗಣಬ್ಬೆಯು

76. 457.
77. 81.

ಶತಾಯುಷಿಯಾಗಿ 12ನೆಯ ಶತಮಾನದ ಕೊನೆಯವರೆಗೂ ಜೀವಿಸಿದ್ದಳೆಂದು ತೋರಿಬರುವುದು. 1176ರ ಸುತ್ತಮುತ್ತಲಲ್ಲಿ ಭಾನುಕೀರ್ತಿ ಮಡಿದಾಗ ಇವಳು ವಯೋವೃದ್ಧೆಯಾಗಿರಲು ಸಾಕು. ನಯಕೀರ್ತಿಯ ಇನ್ನೋರ್ವ ಶಿಷ್ಯನಾದ ಬಾಳ ಚಂದ್ರದೇವನೂ 12ನೆಯ ಶತಮಾನದಂತ್ಯದವರೆಗೆ ಜೀವಿಸಿದ್ದನು. ಅವನು 'ಪರಮಾಗಮ ಆಧ್ಯಾತ್ಮಿ' ಬಾಳಚಂದ್ರನೆಂದು ಮತ್ತು ಗೊಮ್ಮಟಸ್ತುತಿಯ ಪ್ರಸಿದ್ಧ ಕವಿ ಬೊಪ್ಪಣನ ಗುರುವೆಂದು ತಿಳಿದುಬರುವುದು.

6. ನಯಕೀರ್ತಿಗಳು : 1159-1176 : ಕನಿಷ್ಟ ಮೂವತ್ತು ಶಾಸನಗಳಲ್ಲಿ ಉಲ್ಲೇಖಗೊಂಡಿರುವ ನಯಕೀರ್ತಿಯರ ಹೆಸರಿನ ಕನಿಷ್ಠ ಇಬ್ಬರು ಮುನಿಗಳು ಬೆಳ್ಗೊಳದಲ್ಲಿ ಇದ್ದುದನ್ನು ಸೂಕ್ಷ್ಮ ಪರಿಶೀಲನೆಯಿಂದ ಗುರುತಿಸಬಹುದು.[78] ಇವರನ್ನು ಒಂದನೆಯ ನಯಕೀರ್ತಿ(ನಯಕೀರ್ತಿಸಿದ್ಧಾಂತದೇವ) ಮತ್ತು ಇಮ್ಮಡಿ ನಯಕೀರ್ತಿ ಎಂದು ಕರೆಯಬಹುದು. ಮೊದಲನೆಯ ಮುನಿಯನ್ನು ಹಿರಿಯ ನಯಕೀರ್ತಿ, 'ಮಹಾಮಂಡಲಾಚಾರ್ಯ' ಮತ್ತು 'ರಾಜಗುರು', ಇತ್ಯಾದಿಯಾಗಿ 13ನೆಯ ಶತಮಾನದಷ್ಟು ಹಿಂದೆಯೆ ಕರೆದರೆ, ಕಿರಿಯ (ಇಮ್ಮಡಿ ನಯಕೀರ್ತಿ) ಮುನಿಯನ್ನು ನಯಕೀರ್ತಿ ಎಂದು ಮಾತ್ರ ಕರೆಯಲಾಗಿದೆ. ಹಿರಿಯ ಮುನಿಯು ಚೇತನಶೀಲನು, ದೂರದೃಷ್ಟಿಯುಳ್ಳವನು ಮತ್ತು ಪ್ರಭಾವೀ ಪುರುಷನಾಗಿದ್ದರೆ, ಕಿರಿಯ ನಯಕೀರ್ತಿಯು ಸರಳ, ವಿನಮ್ರ ಮತ್ತು ಎಲೆಯ ಮರೆಯ ಕಾಯಿಯಂತೆ ಜೀವಿಸಿದವನಾಗಿದ್ದನು. ಎರಡು ಶಾಸನಗಳು ಮಾತ್ರ ಇಮ್ಮಡಿ ನಯಕೀರ್ತಿಯನ್ನು ನೇರವಾಗಿ ಉಲ್ಲೇಖಿಸಿದರೆ, ಒಂದನೆಯ ನಯಕೀರ್ತಿಯ ಮೇಲೆ ಬೆಳಕು ಚೆಲ್ಲುವ ಶಾಸನಗಳು ಸುಮಾರು ಹನ್ನೆರಡು.

(ಅ) ಒಂದನೆಯ ನಯಕೀರ್ತಿ (ನಯಕೀರ್ತಿ ಸಿದ್ಧಾಂತದೇವ) : 12ನೆಯ ಶತಮಾನ : ಹುಳ್ಳರಾಜನು 1159ರಲ್ಲಿ ಭಂಡಾರ ಬಸದಿಯನ್ನು ಕಟ್ಟಿಸಿ, ಆಚಾರ್ಯನೆಂದು ನೇಮಿಸಲಾದಂದಿನಿಂದ, ನಯಕೀರ್ತಿಸಿದ್ಧಾಂತದೇವನ ಉಲ್ಲೇಖಗಳು ಶಾಸನಗಳಲ್ಲಿ ಪ್ರಾರಂಭಗೊಳ್ಳುವುವು.[79] ಕುಂಡಕುಂದಾನ್ವಯದ ಗುಣಚಂದ್ರಸಿದ್ಧಾಂತಚಕ್ರವರ್ತಿಯ ಶಿಷ್ಯನಾದ[80] ಇವನನ್ನು ದೇಸಿಯಗಣ ಪುಸ್ತಕಗಚ್ಛದ ಪ್ರಕಾಶಮಾನ ತಟಾಕದಲ್ಲಿಯ ತಾವರೆ[81]

---

78. 202, 342, 566, 444, 571. 564, 535, 348, 455, 573, 457, 565, 477, 453, 336, 279, 278, 288, 289, 190, 293-298, 443, 562, 286ಮತ್ತು 476. ಇವುಗಳಲ್ಲಿ ಅತಿ ಪ್ರಾಚೀನವಾದುದು (477) 1159ರ ದೆಂದು ಮತ್ತು ತೀರ ಇತ್ತೀಚಿನದು (348) 1273 ರ ದೆಂದು ಗೊತ್ತುಪಡಿಸಲಾಗಿದೆ. 1300ರ ನಂತರ ಹೊರಡಿಸಿದ ಯಾವ ಶಾಸನಗಳಲ್ಲೂ ಈ ಮುನಿಯನ್ನು ಉಲ್ಲೇಖಿಸಿಲ್ಲ.

79. 476.

80. 342, 476, 455, 444, 476 ಮತ್ತು 571.

81. 73.

ಮತ್ತು ಮೂಲ ಸಂಘದ ಅಡಿಗಲ್ಲೆಂದು[82] ವರ್ಣಿಸಲಾಗಿದೆ. ಅವನು ಮೂಲಸಂಘದ ಹನಸೋಗೆ ಶಾಖೆಗೆ ಸೇರಿದ್ದನು.[83] ಮೂಲಸಂಘದ ಮತ್ತು ಆಧ್ಯಾತ್ಮಿಕ ಜ್ಞಾನದ ಭದ್ರ ಬುನಾದಿಯೂ ಪ್ರತಿಪಂಥಿಗಳಿಗೆ ಭಯಂಕರನೂ ಆದ ನಯಕೀರ್ತಿಸಿದ್ಧಾಂತದೇವನು 'ದರ್ಶನ ಸಿದ್ಧಾಂತ ಚಕ್ರವರ್ತಿ, ಕಾಮದೇವನಿಗೆ ಗಂಧರಾಜ, ಭಯವಿನಾಶಕ, ಲೋಭದ ವೈರಿ ಮತ್ತು ದಯಾಸಾಗರ' ಎಂದೂ ಖ್ಯಾತಗೊಂಡಿದ್ದನು.[84]

ಪ್ರಕಾಂಡ ಪಂಡಿತ, ಜೈನಶಾಸ್ತ್ರ ಪಾರಂಗತ, ಸನ್ನಡತೆಯ ಸಾಕಾರಮೂರ್ತಿ, ಎಂದು ಅವನು ಖ್ಯಾತಿಗೊಂಡಿದ್ದ; ತ್ರಿಶಲ್ಯ, ತ್ರಿಗವರ ಮತ್ತು ತ್ರಿದಂಡಗಳನ್ನು ನಾಶಮಾಡಿ, ಉನ್ನತ ಕೀರ್ತಿ ಗಳಿಸಿಕೊಂಡವನೆನಿಸಿದ್ದ. ಅಲ್ಲದೆ ದರ್ಶನ ಚಕ್ರವರ್ತಿಯೆಂದು ಲೋಕಮಾನ್ಯನಾಗಿದ್ದ. ದಾನ ನೀಡುವುದರಲ್ಲಿ ಆನಂದಪಡುತ್ತಿದ್ದ ಈತನು ಸ್ರಾವಕರ ಕಲ್ಪವೃಕ್ಷವೆಂದೇ ಹೆಸರು ಗಳಿಸಿದ್ದನು. ನಿಷ್ಕಲ್ಮಶ ಮನಸ್ಸಿನ ಈ ಮುನಿಯು ಸಕಲ ದೈಹಿಕ ಮತ್ತು ಭಾವನಾತ್ಮಕ ಬಂಧನಗಳಿಂದ ಮುಕ್ತನಾಗಿದ್ದನು.[85]

'ಅವನು ತಳೆದ ಅಭಿಮತಗಳೇ ದರ್ಶನವಾದವು. ಅವನು ಉಚ್ಚರಿಸಿದ ಶಬ್ದಗಳೇ ವೇದಗಳಾದವು. ಅವನು ತುಳಿದ ದಾರಿಯೇ ಸನ್ಮಾರ್ಗವಾಯಿತು', ಎಂದು ನಯಕೀರ್ತಿಯ ಸಾಧನೆಯನ್ನು ಕೊಂಡಾಡಲಾಗಿದೆ.[86]

'ಭಯ ಮತ್ತು ಅಜ್ಞಾನಗಳಿಂದ ತನ್ನನ್ನು ಮುಕ್ತಗೊಳಿಸಿಕೊಂಡ ಈ ಮುನಿಯು ಜ್ಞಾನವನ್ನು ಅಧಿಕಾರವಾಣಿಯಿಂದ ಪರಿಪೂರ್ಣಗೊಳಿಸಿಕೊಂಡನು. ಶಾಂತ ಮತ್ತು ಸುಂದರ ದೇಹಿಯಾದ ಅವನು ಮುನಿಗಳ ಇಂದ್ರನೆನಿಸಿದನು. ಇವನ ಸ್ಮರಣೆ ಮಾತ್ರದಿಂದಲೇ ಅವನ ಅನುಯಾಯಿಗಳಲ್ಲಿ ಮನೆಮಾಡಿಕೊಂಡಿದ್ದ ಪಾಪವೆಲ್ಲ ಪಲಾಯನಗೊಳ್ಳುತ್ತಿತ್ತು'.[87]

'ಮುನಿಗಳ ಚೈತನ್ಯ ಪ್ರಭುವಾಗಿದ್ದ ಅವನು ಪ್ರತಿಪಂಥಿ ಪಂಡಿತರುಗಳ ವಿರುದ್ಧ ವಾದಮಾಡಿ ಗಳಿಸಿದ ಹಲವಾರು ವಿಜಯಗಳಿಂದ ಪ್ರಖ್ಯಾತನಾಗಿದ್ದನು'.[88]

ಶ್ರಾವಕರ ಮನದಲ್ಲಿ ನಯಕೀರ್ತಿಯು ಪಡೆದಿದ್ದ ಉನ್ನತ ಸ್ಥಾನವನ್ನು ಈ ವರ್ಣನೆಗಳು ಪ್ರತಿಬಿಂಬಿಸುವುವು. ಅತಿಶಯೋಕ್ತಿಯ ವರ್ಷೆಯನ್ನು ಇಲ್ಲಿ ಸುರಿಸಿರುವುದಾದರೂ ಅವನು

82. 563.
83. 202 ಮತ್ತು 566.
84. 565.
85. 73.
86. 564.
87. 476. 455 ಮತ್ತು 457 ನೋಡಿ.
88. 444.

ಈ ಎಲ್ಲ ಪ್ರಶಂಸೆಗಳಿಗೆ ಪೂರ್ಣ ಅಪಾತ್ರನಾಗಿರಲಿಲ್ಲವೆಂದು ತೋರುವುದು. ಭಂಡಾರ ಬಸದಿಯ ಆಚಾರ್ಯನಾಗಿ ಅವನು ಬೆಳ್ಗೊಳದ ಆಧ್ಯಾತ್ಮಿಕ ಜೀವನವನ್ನು ಪುನಶ್ಚೇತನಗೊಳಿಸಿದನು. ನರಸಿಂಹ ಹೊಯ್ಸಳನಿಂದ ಸವಣೇರು, ಬೆಕ್ಕ ಮತ್ತು ಕೆಗ್ಗೆರೆಗಳನ್ನು ಹುಳ್ಳರಾಜನು ಪಡೆದು ಆ ಗ್ರಾಮಗಳನ್ನೆಲ್ಲ ನಯಕೀರ್ತಿಸಿದ್ಧಾಂತದೇವನಿಗೆ ಒಪ್ಪಿಸಿದಾಗ,[89] ಅವುಗಳ ನಿರ್ವಹಣೆಯನ್ನು ಸಮರ್ಥವಾಗಿ ಹೊತ್ತು, ಬೆಳ್ಗೊಳದ ಸಂಸ್ಥೆಗಳನ್ನು ಬಲಪಡಿಸಲು ಶ್ರಮಿಸಿದನು. ನಯಕೀರ್ತಿದೇವನಷ್ಟು ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದ, ಶಾಸನಗಳನ್ನು ಮತ್ತು ಸ್ಮಾರಕಗಳನ್ನು ನಿಲ್ಲಿಸಿದ, ಕೆರೆಗಳನ್ನು ತೋಡಿಸಿದ ಮತ್ತೊಬ್ಬ ವ್ಯಕ್ತಿ ಬೆಳ್ಗೊಳದ ಇತಿಹಾಸದಲ್ಲಿ ಕಂಡುಬರುವುದಿಲ್ಲ. ಅವನ ಗುಡ್ಡರಲ್ಲೊಬ್ಬನಾದ ಬಸವಿಸೆಟ್ಟಿಯು ಗೊಮ್ಮಟ ಮಹಾವಿಗ್ರಹಕ್ಕೆ ಸುತ್ತಾಲಯವನ್ನು ಕಟ್ಟಿಸಿ, ಅಲ್ಲಿ ತೀರ್ಥಂಕರರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದರೆ, ಈ ಸೆಟ್ಟಿಯ ನಾಲ್ವರು ಮಕ್ಕಳು ಆ ಸುತ್ತಾಲಯಕ್ಕೆ ಜಾಲಂಧ್ರಗಳನ್ನು ಮಾಡಿಸಿಕೊಟ್ಟರು.[90]


ನಯಕೀರ್ತಿಸಿದ್ಧಾಂತದೇವನು ಬೆಳ್ಗೊಳದ ಸುತ್ತಮುತ್ತಲ ಪ್ರದೇಶವನ್ನು ದೇವಾಲಯಗಳಿಂದ, ಕೆರೆಗಳಿಂದ, ಸಮೃದ್ಧಗೊಳಿಸಿದನು. ಬೆಕ್ಕದಲ್ಲಿ ಪಾರ್ಶ್ವನಾಥ ಬಸದಿ, ಬೊಮ್ಮೇನಹಳ್ಳಿಯಲ್ಲಿ ಕನ್ನೆವಸತಿ ಮತ್ತು ಬೆಕ್ಕದ ಬಳಿಯ (ಈಗ ಬೆಕ್ಕ ಕೆರೆಯೆಂದು ಕರೆಯುವ) ಸಿಂಗಿಸಮುದ್ರದ ನಿರ್ಮಾಣಕ್ಕಲ್ಲದೆ,[91] ನಾಗಸಮುದ್ರವನ್ನು (ಈಗಿನ ಜಿಗಣೆಕಟ್ಟೆ) ತೋಡುವುದಕ್ಕೂ, ಪಟ್ಟಣ ಪ್ರದೇಶದಲ್ಲಿ ಉದ್ಯಾನವನ್ನು ನಿರ್ಮಿಸುವದಕ್ಕೂ, ಇವನು ಕಾರಣ ಪುರುಷನಾಗಿದ್ದನು.[92]

ಹಲವಾರು ಶ್ರೀಮಂತ, ಧರ್ಮಿಷ್ಠ, ವರ್ಚಸ್ವಿ ಮತ್ತು ಬಲಿಷ್ಠ ಗುಡ್ಡರನ್ನು ಗಳಿಸಿಕೊಳ್ಳುವ ಸಾಮರ್ಥ್ಯ ಅವನಲ್ಲಿದ್ದುದರಿಂದ ನಯಕೀರ್ತಿಸಿದ್ಧಾಂತದೇವನಿಗೆ ಇಷ್ಟೆಲ್ಲ ಸಾಧಿಸಲು ಸಾಧ್ಯವಾಯಿತು. ಇವನ ಪ್ರಸಿದ್ಧ ಗುಡ್ಡರಲ್ಲಿ ಹೆಸರಿಸಬಹುದಾದವರು - ಇರುಂಗೊಳ, ಹಿರಿಯ ಭಂಡಾರಿ ಹುಳ್ಳಮಯ್ಯ, ಹುಳ್ಳನ ಮಂತ್ರಿ ನಾಗದೇವ,[93] ವೀರಬಲ್ಲಾಳನ ಮಂತ್ರಿ ಚಂದ್ರಮೌಳಿ, ಚಂದ್ರಮೌಳಿಯ ಮಡದಿ ಆಚಿಯಕ್ಕ,[94] ಮಂತ್ರಿ ಬೊಮ್ಮದೇವ, ಬೊಮ್ಮದೇವನ ಮಗ ನಾಗದೇವ, ನಾಗದೇವನ ಮಡದಿ ಚಂದವ್ವೆ,[95] ಬೊಮ್ಮೇನಹಳ್ಳಿಯ ಸೋವಣಗೌಡ,[96]

---

89. ಅನುಕ್ರಮವಾಗಿ 476, 275 ಮತ್ತು 278.
90. 279.
91. ಅನುಕ್ರಮವಾಗಿ 566, 571, 564.
92. 443.
93. 73.
94. 444.
95. 73.
96. 571.

ಪಟ್ಟಣಸೆಟ್ಟಿ ಮಲ್ಲಿದೇವ, ಮಲ್ಲಿಸೆಟ್ಟಿ ಮತ್ತು ಮಾಚವ್ವೆ ಸೆಟ್ಟಿತಿ,[97] ವಡ್ಡವ್ಯವಹಾರಿ ಬಸವಿಸೆಟ್ಟಿ, ಬಸವಿಸೆಟ್ಟಿಯ ನಾಲ್ಕು ಮಕ್ಕಳಾದ ನಂಬಿ, ಬೊಂಕಿ, ಜೆನ್ನಿ ಮತ್ತು ಬಾಹುಬಲಿ ಸೆಟ್ಟಿಗಳು,[98] ಮಹಾಪ್ರಧಾನಿ ಮತ್ತು ಹಿರಿಯ ಭಂಡಾರಿ ರಾಮದೇವ, ಭಂಡಾರಿ ಸಿಂಗಯ್ಯ, ಮಹಾವಡ್ಡವ್ಯವಹಾರಿ ಸಾತಿಸೆಟ್ಟಿ,[99] ನಾಗರಸನ ಮಗ ಚಾಮರಸ, ಇತ್ಯಾದಿ.[100] ವರ್ಚಸ್ವಿ ಅನುಯಾಯಿಗಳ ಇಂಥ ಸುದೀರ್ಘ ಪಟ್ಟಿಯನ್ನು ಬೆಳ್ಗೊಳದ ಬೇರಾವ ಆಚಾರ್ಯನೂ ಹೊಂದಿರಲಿಲ್ಲ. ಇವರಲ್ಲಿ ಕೆಲವರು ನಯಕೀರ್ತಿಯ ಮರಣಾನಂತರ, ಈ ಆಚಾರ್ಯನ ಶಿಷ್ಯರನ್ನು ತಮ್ಮ ಗುರುಗಳೆಂದು ಮಾನ್ಯ ಮಾಡಿದರು.



38 ನಯಕೀರ್ತಿಸಿದ್ಧಾಂತದೇವನ ನಿಸಿಧಿ (73)

ನಯಕೀರ್ತಿಗೆ ಹಲವಾರು ಶ್ರಮಣಶಿಷ್ಯರೂ ಇದ್ದರು. ಅವರೂ ಅವನ ಶ್ರಾವಕರಷ್ಟೇ ಕ್ರಿಯಾಶೀಲರೂ ಪ್ರಭಾವಿಗಳೂ ಆಗಿದ್ದರೆಂದು ಕಂಡುಬರುವುದು. ಭಾನುಕೀರ್ತಿವ್ರತೀಂದ್ರನು ಅವರಲ್ಲಿ ಪ್ರಮುಖನಾಗಿದ್ದನು. ಅವನು ನಯಕೀರ್ತಿಯ ಉತ್ತರಾಧಿಕಾರಿಯಾಗಿ ಮತ್ತು ಈ ಕೇಂದ್ರದ ಮುಖ್ಯಸ್ಥನಾಗಿ,[101] ಈ ಕ್ಷೇತ್ರದ ವಿಪುಲ ದತ್ತಿಗಳನ್ನು ಸಮರ್ಥವಾಗಿ ನಿರ್ವಹಿಸಿದನು.[102] ಆಧ್ಯಾತ್ಮಿಕ ಸಿದ್ಧಿಗಳಲ್ಲಿ ಅವನಷ್ಟೇ ದೊಡ್ಡವನಾಗಿದ್ದವನೆಂದರೆ ಪರಮಾಗಮ ಆಧ್ಯಾತ್ಮಿ ಬಾಳಚಂದ್ರ,[103] ದಾಮಣಂದಿತ್ರೈವಿದ್ಯದೇವ,[104] ಪ್ರಭಾಚಂದ್ರದೇವ, ಮಾಘಣಂದಿಭಟ್ಟಾರಕದೇವ, ಮಂತ್ರವಾದಿ ಪದ್ಮಣಂದಿದೇವ[105] ಮತ್ತು ನೇಮಿಚಂದ್ರಪಂಡಿತದೇವ.[106]

---

97. 459.
98. 287 ಮತ್ತು 279.
99. 564.
100. ಅದೇ.
101. 565.
102. 477 ಮತ್ತು 342.
103. 343, 457, 202, 443, 286, 455, 573 ಮತ್ತು 73.
104. 457, 202, 455.
105. 457, 564, 443, 455, 73.
106. 457, 564, 562, 455, 573 ಮತ್ತು 73.

ನಯಕೀರ್ತಿಸಿದ್ಧಾಂತದೇವನ ಗುಡ್ಡಗುಡ್ಡಿಯರಲ್ಲಿ ಅಕ್ಕನ ಬಸದಿಯ ಪೋಷಕನಾದ ಚಂದ್ರಮೌಳಿ ಮತ್ತು ಆಚಿಯಕ್ಕರು ಈತನಿಗೆ ಗುರು ಸ್ಥಾನ ಕೊಟ್ಟಿರುವರು.[107] ಅಂತೆಯೆ, ಹೊಯ್ಸಳ ನರಸಿಂಹನ ಅಧಿಕಾರಿಯಾಗಿದ್ದು, ಗೊಮ್ಮಟನಿಗೆ ಮತ್ತು ಚತುರ್ವಿಂಶತಿ ಬಸದಿಗೆ ಧನದತ್ತಿಯನ್ನಿತ್ತ ಗೊಮ್ಮಟಸೆಟ್ಟಿಯೂ ಈ ಮುನಿಯನ್ನು ಗುರುವೆಂದು ಸ್ವೀಕರಿಸಿದನು.[108] ಆದರೆ, ಬಾಲಚಂದ್ರನ ಅತ್ಯಂತ ಖ್ಯಾತ ಶಿಷ್ಯನೆಂದರೆ ಗೊಮ್ಮಟಸ್ತುತಿಯ ಕವಿ ಸುಜನೋತ್ತಂಸ ಬೊಪ್ಪಣ ಪಂಡಿತ.[109]

ನೇಮಿಚಂದ್ರನ ಒಬ್ಬ ಶಿಷ್ಯನು ತನ್ನ ಗುರುವಿನ ಗುರುವಾದ ನಯಕೀರ್ತಿಯ ಹೆಸರಿಟ್ಟುಕೊಂಡನು.[110] 13ನೆಯ ಶತಮಾನದ ಈ ಮುನಿಯನ್ನು ಇಮ್ಮಡಿ ನಯಕೀರ್ತಿ ಅಥವಾ ಕಿರಿಯ ನಯಕೀರ್ತಿ ಎಂದು ಗುರುತಿಸಬಹುದು.

(ಆ) ಇಮ್ಮಡಿ ನಯಕೀರ್ತಿ : 13ನೆಯ ಶತಮಾನ : ಇಮ್ಮಡಿ ನಯಕೀರ್ತಿಯು ಧಾರ್ಮಿಕ ಜೀವನದ ಅವನತಿಯ ಕಾಲದಲ್ಲಿ ಮತ್ತು ಸ್ವಾರ್ಥಿ ಶ್ರಾವಕರ ಮಧ್ಯೆ ಜೀವಿಸಿದ್ದನು. ಈ ಕಾಲದ ಶ್ರಾವಕರಲ್ಲನೇಕರು ಮಠದ ಆಚಾರ್ಯನನ್ನು ಅಡ್ಡದಾರಿಗೆಳೆಯಲು ಮತ್ತು ದೇವಾಲಯದ ಆಸ್ತಿಯನ್ನು ಕಬಳಿಸಲು ಆತುರರಾಗಿದ್ದರು. ಆಗ ರಾಜಾಶ್ರಯವೆಲ್ಲ ಬತ್ತಿಹೋಗಿದ್ದಿತಲ್ಲದೆ ಹೊಯ್ಸಳ ಸೋಮೇಶ್ವರನ ಆಳ್ವಿಕೆಯೂ ಜೈನರಿಗೆ ಅಷ್ಟೊಂದು ಹಿತಕರವೆನಿಸಿರಲಿಲ್ಲ. ಮನೆ ಮತ್ತು ಎಣ್ಣೆಗಾಣಗಳ ಮೇಲಿನ ಕರಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಈತನು ಎದುರಿಸಬೇಕಾಯಿತಲ್ಲದೆ, ತನ್ನ ಮೇಲೆ ತಂದ ಅನೇಕ ಒತ್ತಾಯದ ಬೇಡಿಕೆಗಳನ್ನು ಪೂರೈಸಬೇಕಾಯಿತು. ಅಲ್ಲದೆ, ದೇವಾಲಯದ ಸಂಪತ್ತನ್ನು ಕಬಳಿಸಲು ಉತ್ಸುಕರಾಗಿದ್ದ ಜೈನ ವರ್ತಕ ಸಮುದಾಯದಿಂದ ಕಾಪಾಡಿಕೊಳ್ಳಲೂ ಅವನು ಸತತವಾಗಿ ಹೆಣಗಾಡಬೇಕಾಯಿತು.[111]

ಮರೆತು ಹೋದ ವಿಧಿನಿಯಮ : ಹಿರಿಯ ನಯಕೀರ್ತಿಸಿದ್ಧಾಂತದೇವನು ಸಮಾಧಿ ವ್ರತವನ್ನಾಚರಿಸಲಿಲ್ಲ ಎಂಬುದು ಗಮನಾರ್ಹ. ಈ ಕಾಲಕ್ಕಾಗಲೆ ನಿಸಿಧಿ ಕ್ರಿಯೆಯೊಂದು ಉಪಚಾರವಾಗಿತ್ತು. ಒಂದು ಕಾಲದಲ್ಲಿ ಮರಣವನ್ನು ಸ್ವಾಗತಿಸುವವರಿಂದಲೇ ಕೀರ್ತಿಗೌರವವನ್ನು ಪಡೆಯುತ್ತಿದ್ದ ಕಳ್ಬಪ್ಪು ಈಗ ಸಂಪತ್ತು ಮತ್ತು ಆಸ್ತಿಗಳನ್ನು ಸಂಗ್ರಹಿಸುವ ಆಚಾರ್ಯರನ್ನು ಆಶ್ರಯಿಸಬೇಕಾಯಿತು. 12ನೆಯ ಶತಮಾನದ ಶ್ರಮಣರು ಮರಣವನ್ನು ಎದುರು ನೋಡಲಿಲ್ಲ; ಕಠಿಣ ವ್ರತವನ್ನಾಚರಿಸಿ ಸಾವನ್ನೂ ಸ್ವಾಗತಿಸಲು ಉತ್ಸುಕರಾಗಿರಲಿಲ್ಲ;

---

107. 444.
108. 286.
109. 336.
110. 535.
111. 445.

ಮಠದ ಮತ್ತು ಸಮಾಜದ ಮೇಲಿದ್ದ ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ; ವಿಧಿನಿಯಮಗಳನ್ನು ಆಚರಿಸದೆ ನಿಸಿಧಿ ಗಳಿಸುವುದು ತಪ್ಪೆಂದು ಭಾವಿಸಿರಲಿಲ್ಲ. ಅಂದರೆ ಇಚ್ಛಾಮರಣದ ವ್ರತಾಚರಣೆಯ ಕಠಿಣ ಕಟ್ಟಳೆಗಳನ್ನು ಕೈಬಿಟ್ಟ ಬಹುಕಾಲದ ನಂತರವೂ ನಿಸಿಧಿನಿರ್ಮಾಣ ಕಾರ್ಯವು ಮುಂದುವರಿಯಿತೆಂದು ಇದರ ಅರ್ಥ.

ಬಹುಶಃ 1273ರ ವರೆಗೂ ಕಿರಿಯ ನಯಕೀರ್ತಿಯು ಜೀವಿಸಿದ್ದನು.[112] ಆದರೆ, ಅವನು ಹೇಗೆ ಮತ್ತು ಎಲ್ಲಿ ಮಡಿದನೆಂಬ ವಿವರಗಳು ದೊರೆಯವು. 13ನೆಯ ಶತಮಾನದಂಚಿನಲ್ಲಿ ಪ್ರಾಯಶಃ ಅವನಿರಲಿಲ್ಲವೆಂದು ತೋರುವುದು.

ಅಧ್ಯಾಯ ಏಳು

ನಿಸಿಧಿ :

ಲಕ್ಷಣ

ವೈಶಿಷ್ಟ್ಯತೆ

ಕಲೆ

ಭಾಗ - ೧

ನಿಸಿಧಿ ಸ್ಮಾರಕದ ಸ್ವರೂಪವನ್ನು ನಿರ್ಧರಿಸುವ ಜಟಿಲ ಕಟ್ಟಳೆಗಳಿಲ್ಲದಿದ್ದುದರಿಂದ ಜೈನಾಗಮಗಳು ಈ ಬಗ್ಗೆ ಮೌನ ತಾಳಿವೆ. ಆದರೆ ಬೆಳ್ಗೊಳದಲ್ಲಿ ದೊರೆತ ನಿದರ್ಶನಗಳಿಂದ ಕನಿಷ್ಟ ಐದು ಬಗೆಯ ನಿಸಿಧಿ ಸ್ಮಾರಕಗಳನ್ನು ಗುರುತಿಸಬಹುದು. ಅವು :

1) ಬಂಡೆಗಲ್ಲು, ಗುಂಡುಗಲ್ಲು, ಶಾಸನಿತ ನಿಸಿಧಿ;

2) ಸ್ವತಂತ್ರವಾಗಿ ನಿಂತಿರುವ ನಿಸಿಧಿ-ಮಾನಸ್ತಂಭ;

3) ದೇವಾಲಯಗಳಲ್ಲಿ ಪ್ರತಿಷ್ಠಾಪಿಸಿದ ನಿಸಿಧಿ ಕಂಬ;

4) ನಿಸಿಧಿಮಂಟಪಗಳಲ್ಲಿ ಪ್ರತಿಷ್ಠಾಪಿಸಿದ ನಿಸಿಧಿ ಸ್ತಂಭ;

5) ವಿಗ್ರಹ, ಶಿಲಾಕೂಟ, ಮಂದರ, ಮುಂತಾದ ನಿಸಿಧಿ ಸ್ಮಾರಕಗಳು.

ಇವುಗಳಲ್ಲಿ ಬಂಡೆಗಲ್ಲು ಹಾಗೂ ಗುಂಡುಗಲ್ಲಿನ ಶಾಸನಿತ ನಿಸಿಧಿಗಳು ಉಳಿದೆಲ್ಲವುಗಳಿಗಿಂತ ಪುರಾತನವೂ ಸಂಖ್ಯೆಯಲ್ಲಿ ಅತ್ಯಧಿಕವೂ ಆಗಿವೆ. ಬಯಲಿನಲ್ಲಿರುವ ನಿಸಿಧಿ ಮಾನಸ್ತಂಭಗಳು 10ನೆಯ ಶತಮಾನದ ವಿಶೇಷತೆಗಳಾಗಿದ್ದು ಅನಂತರದ ಕಾಲದಲ್ಲಿ ಅವು ಅಪರೂಪವಾಗುವುವು. ಸುಮಾರು 1100ರಲ್ಲಿ ಶಾಸನೋಕ್ತ ನಿಸಿಧಿ ಕಂಬಗಳನ್ನು ದೇವಾಲಯ ಮತ್ತು ತೆರೆದ ಮಂಟಪಗಳಲ್ಲಿ ನಿಲ್ಲಿಸುವ ಸಂಪ್ರದಾಯ ಪ್ರಾರಂಭಗೊಂಡಿತು. ಇಂತಹ ನಿಸಿಧಿಗಳಿಗಾಗಿ ಪ್ರತ್ಯೇಕ ದೇವಾಲಯಗಳನ್ನು ಕಟ್ಟದಿದ್ದರೂ, ಪ್ರತ್ಯೇಕ ಮಂಟಪಗಳನ್ನು

ನಿರ್ಮಾಣ ಮಾಡಿದ್ದುಂಟು. ಸರಿಸುಮಾರು ಇದೇ ಕಾಲಾವಧಿಯಲ್ಲಿ ಇಲ್ಲವೆ ಮತ್ತೊಂದು ಶತಮಾನದ ನಂತರ ನಿಸಿಧಿ ವಿಗ್ರಹ ಮತ್ತು ಮಂದರಗಳನ್ನು ಮಾಡಿಸುವುದು ರೂಢಿಗೆ ಬಂತು.

ಇದೊಂದು ಪುರಾತನ ಸಂಪ್ರದಾಯವಾಗಿದ್ದರೂ ನಿಸಿಧಿಗಳನ್ನು ಶವಸಂಸ್ಕಾರ ಮಾಡಿದ ಸ್ಥಳದಲ್ಲಿಯೇ ನಿಲ್ಲಿಸಲಾಗುತ್ತಿತ್ತೊ, ಇಲ್ಲವೋ ಎಂಬುದರ ಬಗ್ಗೆ ನಮಗೆ ಖಚಿತ ವಿವರ ದೊರೆಯುತ್ತಿಲ್ಲ. ಈ ಸ್ಮಾರಕಗಳ ಸ್ವರೂಪ, ವೈವಿಧ್ಯತೆ ಹಾಗೂ ಕಲಾವೈಶಿಷ್ಟ್ಯತೆಯ ಬಗ್ಗೆಯೂ ನಮ್ಮ ಜ್ಞಾನ ಅಪೂರ್ಣವಾಗಿದೆ. ಶ್ರವಣಬೆಳ್ಗೊಳದ ಮಾದರಿಗಳು ಈ ಬಗ್ಗೆ ಸಾಕಷ್ಟು ವಿವರಗಳನ್ನು ಒದಗಿಸುತ್ತಿದ್ದು, ಅವುಗಳ ಅಭ್ಯಾಸವು ಒಂದು ಫಲಪ್ರದಪ್ರಯತ್ನವೆನಿಸುವುದರಲ್ಲಿ ಅನುಮಾನವಿಲ್ಲ.

1. ಬಂಡೆಗಲ್ಲು, ಗುಂಡುಗಲ್ಲ, ಶಾಸನಿತ ನಿಸಿಧಿಗಳು : ಹಾಸುಗಲ್ಲು ಇಲ್ಲವೆ ಗುಂಡುಗಲ್ಲಿನ ಮೇಲೆ ನಿಸಿಧಿಗಳನ್ನು ಕಂಡರಿಸುವ ಸಂಪ್ರದಾಯವು ಸುಮಾರು 600ರಲ್ಲಿ ಆಚರಣೆಗೆ ಬಂತು. ಅಲ್ಲಿಂದ ಮೊದಲ್ಗೊಂಡು ಸುಮಾರು ಅರವತ್ತೇಳು ನಿಸಿಧಿಗಳನ್ನು ಮುಂದಿನ ಮೂರು ಶತಮಾನಗಳಲ್ಲಿ ಚಿಕ್ಕಬೆಟ್ಟದ ಬಂಡೆಯ ಮೇಲೆ ಕೊರೆಯಲಾಯಿತು. ಈ ಎಲ್ಲ ನಿಸಿಧಿಗಳೂ ಬಂಡೆಗಲ್ಲ ಮೇಲೆ ಕೆತ್ತಿದ ಶಾಸನಗಳಾಗಿದ್ದು ಅವುಗಳಲ್ಲಿ ಹೆಚ್ಚಿನವು ಸಾವನ್ನಪ್ಪಿದವರ, ಅವರ ಗುರುಗಳ ಹಾಗೂ ಸಂಘಗಳ ಹೆಸರುಗಳನ್ನು ಮಾತ್ರ ಕೊಡುವ ಸಂಕ್ಷಿಪ್ತ ವರದಿಗಳಾಗಿವೆ. ಅಪರೂಪವಾಗಿ ಸುದೀರ್ಘವಾದ ಶಾಸನಗಳನ್ನು ಈ ಕಾಲದಲ್ಲಿ ಕೆತ್ತಿಸಲಾಯಿತು; ಆದರೆ, ಅವುಗಳ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ.

ಒರಟಾದ ಕಣಶಿಲೆಯ ಮೇಲ್ಮೈಯನ್ನು ನಯಗೊಳಿಸುವ ಗೋಜಿಗೂ ಹೋಗದೆ ಇಂತಹ ಶಾಸನಗಳನ್ನು ಕಂಡರಿಸಲಾಗುತ್ತಿತ್ತು. ಈ ಸಂಪ್ರದಾಯವನ್ನು ಅನುಸರಿಸಿ ಆ ಬಂಡೆಗಲ್ಲಿನ ಶಾಸನಗಳೆಲ್ಲ ಆಳವಾಗಿ ಕೊರೆದ, ದೊಡ್ಡ ದೊಡ್ಡ ಅಕ್ಷರಗಳನ್ನೊಳಗೊಂಡಿವೆ. ಸಾಲುಗಳನ್ನು ಸಮಾನ ರೇಖೆಯಲ್ಲಿರಿಸಲು ಸಾಕಷ್ಟು ಮುನ್ನೆಚ್ಚರಿಕೆ ವಹಿಸಿದ್ದರೂ ಬಂಡೆಗಲ್ಲಿನ ಉಬ್ಬುತಗ್ಗಿನ ಮೇಲ್ಮೈ ಇದನ್ನು ಸಾಧಿಸಲು ಕೆಲವು ಬಾರಿ ಅಡ್ಡಬಂದಂತೆ ತೋರುವುದು. ಇಂತಹ ಬಂಡೆಗಲ್ಲ ಶಾಸನಗಳಲ್ಲೆಲ್ಲ ಎದ್ದುಕಾಣುವುದು 'ಭದ್ರಬಾಹು' ನಿಸಿಧಿ ಎಂದು ಖ್ಯಾತಗೊಂಡಿರುವ ಪಾರ್ಶ್ವನಾಥ ಬಸದಿಯ ಬಲಬದಿಯಲ್ಲಿರುವ ನಿಸಿಧಿ.[1]

ಕೂಗೆಬ್ರಹ್ಮದೇವ ಮತ್ತು ಎರಡುಕಟ್ಟೆ ಬಸದಿಯ ನಡುವಿನವ ಹಾಸು ಬಂಡೆಯ ಮೇಲೆ ಕಂಡರಿಸಿದ ಇಂತಹ ಹಲವು ಶಾಸನಗಳ ಪ್ರಮುಖ ಲಕ್ಷಣಗಳು ಇಂತಿವೆ.

i) ಪ್ರಾಚೀನ ನಿದರ್ಶನಗಳು : ಏಳನೆಯ ಶತಮಾನದ್ದೆಂದು ಬಗೆಯಲಾಗಿರುವ ಐದು

---

1. ಎಕ II, 1.

(?) ಸಾಲುಗಳ ಒಂದು ಶಾಸನವು ಕನಕಸೇನ ಹಾಗೂ ಬಲದೇವ ಮುನಿಗಳ ಸಮಾಧಿ ಮರಣಗಳನ್ನು ಉಲ್ಲೇಖಿಸುವುದು.[2] ಕನಕಸೇನನು ಕಳ್ಬಪ್ಪುವಿನ ಮೇಲೆ ಮಡಿದರೆ, ಬಲದೇವನು ಈ ಬೆಟ್ಟದ ಪರಿಸರದಲ್ಲೆಲ್ಲೋ ಸಾವನ್ನು ಸ್ವೀಕರಿಸಿದ್ದನು. 'ಭದ್ರಬಾಹು - ಪ್ರಭಾಚಂದ್ರರ ನಿಸಿಧಿಯ ಬಳಿಯಿರುವ ಈ ಶಾಸನವು ಈ ಪುಣ್ಯಕ್ಷೇತ್ರದ ಬೇರೆ ಬೇರೆ ಎರಡು ತಾಣಗಳಲ್ಲಿ ಸಾವನ್ನು ಸ್ವಾಗತಿಸಿದ ಪುಣ್ಯಪುರುಷರಿಬ್ಬರನ್ನು ಜಂಟಿಯಾಗಿ ಗೌರವಿಸಿದ್ದನ್ನು ಸ್ಪಷ್ಟಪಡಿಸುವುದು. ಅಂದರೆ ಮರಣಹೊಂದಿದವನ ಗೌರವಾರ್ಥ ನಿಲ್ಲಿಸುತ್ತಿದ್ದ ನಿಸಿಧಿ ಸಂಪ್ರದಾಯದೊಡನೆ, ಒಂದೇ ಕಾಲಾವಧಿಯಲ್ಲಿ ಮಡಿದ – ಬಹುಶಃ ಒಂದೇ ಸಂಘಕ್ಕೆ ಸೇರಿದ - ಇಬ್ಬರು ಮೂವರು ಮುನಿಗಳ ಗೌರವಾರ್ಥ ಒಂದೇ ಶಾಸನ ನಿಸಿಧಿಯನ್ನು ಕಂಡರಿಸುವ ಸಂಪ್ರದಾಯವು ಈ ಕಾಲದಲ್ಲಿ ರೂಢಿಯಲ್ಲಿತ್ತೆಂದಾಗಿತು. ಭದ್ರಬಾಹುಸ್ವಾಮಿ ಮತ್ತು ಚಂದ್ರಗುಪ್ತ ಮುನಿಯ ಮರಣಗಳನ್ನು ಉಲ್ಲೇಖಿಸುವ ಬಂಡೆಗಲ್ಲ ಶಾಸನವು ವಾಸ್ತವವಾಗಿ ಮುನಿ ಪ್ರಭಾಚಂದ್ರನ ಮರಣದ ದಾಖಲೆಯಾಗಿತ್ತೆಂಬುದನ್ನು ಇಲ್ಲಿ ಗಮನಿಸುವುದವಶ್ಯ.

ಈ ಬಂಡೆಗಲ್ಲ ನಿಸಿಧಿಗಳ ಒಂದು ಪ್ರಮುಖ ಲಕ್ಷಣವೆಂದರೆ, ಅವು ರೂವಾರಿಯ ಹಾಗೂ ಕಲ್ಕುಟಿಗನ ಬಗ್ಗೆ ತಾಳಿರುವ ಮೌನ. ಆಗೊಮ್ಮೆ ಈಗೊಮ್ಮೆ ಪೋಷಕರ ಪ್ರಸ್ತಾಪಗಳು ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ಬಂದರೂ ಅವೂ ಇಲ್ಲವೆನ್ನುವಷ್ಟು ಅಪರೂಪ.

ii) ಇತ್ತೀಚಿನ ನಿದರ್ಶನ : ಬಂಡೆಗಲ್ಲ ಮೇಲೆ ನಿಸಿಧಿ ಕೊರೆಯುವ ಸಂಪ್ರದಾಯವು ಸುಮಾರು 900ರ ನಂತರ ಅಪರೂಪವಾಯಿತು; ಆದರೆ ಇದು ಸ್ಮೃತಿಪಟಲದಿಂದ ಸಂಪೂರ್ಣವಾಗಿ ಮಾಸಿಹೋಗಲಿಲ್ಲವೆಂಬುದಕ್ಕೆ 1809ರ ಅಜಿತಕೀರ್ತಿದೇವನ ನಿಸಿಧಿ ಶಾಸನ ನಿದರ್ಶನ ಒದಗಿಸುವುದು. ಒಂದು ತಿಂಗಳು ಕಾಲ ಭದ್ರಬಾಹು ಗುಹೆಯಲ್ಲಿ ನಿರಶನಗೈದ ಕುಂಡಕುಂದಾನ್ವಯದ ದೇಸಿಯಗಣದ ಈ ಮುನಿಯು ಆಚರಿಸಿದ ವ್ರತ ನಿಯಮಗಳಲ್ಲಿ ಮಾಸೋಪವಾಸವನ್ನು ಬಿಟ್ಟು ಇನ್ನಾವ ವಿವರಗಳನ್ನೂ ಕೊಡಲಾಗಿಲ್ಲ; ಅಲ್ಲದೆ, ಈ ಸ್ಮಾರಕವನ್ನು 'ನಿಸಿಧಿ' ಪದದಿಂದ ಗುರುತಿಸಿಯೂ ಇಲ್ಲ.[3]

iii) ಸರಳ ಶಾಸನಗಳು : ಮೃತರ ಬಗ್ಗೆ ಚುಟುಕು ಮಾಹಿತಿ ಮಾತ್ರ ನೀಡುವ ಒಂದೋ ಎರಡೋ ಸಾಲುಗಳ, ಶಾಸನ-ನಿಸಿಧಿಗಳು ಚಿಕ್ಕಬೆಟ್ಟದ ಬಂಡೆಗಲ್ಲನ್ನೆಲ್ಲ ಆವರಿಸಿವೆ. ಉಳ್ಳಿಕಲ್ ಗೊರವಡಿ, ಧಣ್ಣಿಕುಟ್ಟಾರೆವಿ ಗುರವಿ, ಗುಣಸೇನ ಗುರವ, ನೆಡುಬೋರೆಯ ಪಾನದ ಭಟಾರ, ಮಹಾವೀರ ಜಂಬುನಾಯ್ಗರ, ಕಿತ್ತರೆ, ನಾಗಮತಿಗಂತಿ, ಕಿತ್ತೂರಿನ ಬಲದೇವ, ಮಾಲನೂರಿನ ಉಗ್ರಸೇನ, ಪೆಗುರಮ, ಇನುಂಗೂರಿನ ಮೆಳ್ಳಗವಾಸ ಗುರುವರ್, ಸಿಂಗಣಂದಿ, ಸರ್ಬಣಂದಿ, ಪುಷ್ಪಣಂದಿ, ಕೊಳತ್ತೂರ ಸಂಘದ ವಿಶೋಕಭಟಾರ, ದೇವಾಚಾರ್ಯ, ನವಿಲೂರುಸಂಘದ

2. 2.
3. 1809ರ 252.

ಗುಣಮತಿಅವ್ವೆ, ಕೊತ್ತಯ್ಯ, ವೈಜಬ್ಬೆ - ಈ ಮುಂತಾದವರ ಗೌರವಾರ್ಥ ಮಾಡಿಸಿದ ನಿಸಿಧಿಗಳು ಇದಕ್ಕೆ ಪ್ರಧಾನ ಮಾದರಿಗಳಾಗಿವೆ.[4]

iv) ಪಾದಚಿನ್ಹೆಗಳು : ಪಾದದ್ವಯಗಳನ್ನು ಬಂಡೆಯ ಮೇಲೆ ಮೂಡಿಸುವ ಮೂಲಕ ಮತ್ತೊಂದು ಬಗೆಯ ನಿಸಿಧಿ ಸಂಪ್ರದಾಯವನ್ನು ಪ್ರಚಾರಕ್ಕೆ ತರಲಾಯಿತು. ಇಂತಹ ಪಾದಚಿಹ್ನೆಗಳಲ್ಲಿ ಕೆಲವನ್ನು ಶಾಸನಗಳ ಮೂಲಕ ಗುರುತಿಸಲಾಗಿದೆ; ಇನ್ನು ಹಲವು ಅನಾಮಧೇಯವಾಗಿವೆ. ಆದರೆ, ಈ ಚಿನ್ಹೆಗಳನ್ನೆಲ್ಲ ವ್ರತಾಚರಣೆಯ ಮೂಲಕ ಮರಣವನ್ನಪ್ಪಿದ ಶ್ರಮಣ-ಕಂತಿಯರ ಗೌರವಾರ್ಥ ಮೂಡಿಸಲಾಗಿತ್ತೆನ್ನುವುದರಲ್ಲಿ ಅನುಮಾನವಿಲ್ಲ.

ಸಂಕ್ಷಿಪ್ತ ಶಾಸನಗಳನ್ನೊಳಗೊಂಡ ನಿದರ್ಶನಗಳಲ್ಲಿ ಮುನಿ ಶ್ರೀದೇವನ ಪಾದಗಳನ್ನು ಭದ್ರಬಾಹು ಶಾಸನದ ದಕ್ಷಿಣ-ಪೂರ್ವಕ್ಕಿರುವ ತಳಬಂಡೆಯ ಮೇಲೆ ಕಾಣುವೆವು.[5] ಅಲ್ಲದೆ ಚಾವುಂಡರಾಯ ಬಸದಿಯ ಬಲಕ್ಕೆ[6] ಮತ್ತು ಎಡಕ್ಕೆ,[7] ಚಂದ್ರಪ್ರಭ ಬಸದಿಯ ಪಶ್ಚಿಮಕ್ಕೆ,[8] ತೇರಿನ ಬಸದಿಯ ಮುಂದೆ,[9] ಇರುವೆ ಬ್ರಹ್ಮದೇವ ಬಸದಿಯ ಬಳಿ,[10] ಕಂಚಿನದೋಣೆಯಲ್ಲಿ,[11] ಇವನ್ನು ಎದುರುಗೊಳ್ಳುವೆವು. ಭದ್ರಬಾಹು ಗುಹೆಯಲ್ಲಿ ಕೊರೆದಿರುವ ಪಾದದ್ವಯಗಳು[12] ಈ ಗುಹೆಯ ದಕ್ಷಿಣ-ಪೂರ್ವದ ಬಂಡೆಗಲ್ಲಿನ ಮೇಲಿರುವ ಇನ್ನೆರಡು ನಿದರ್ಶನಗಳು,[13] ಮತ್ತು ಈ ಬೆಟ್ಟದ ನೆತ್ತಿಯ ಮೇಲಿರುವ ಮತ್ತೆರಡು ಪಾದಗಳು[14] ಧಾರ್ಮಿಕರ ಗಮನವನ್ನು ಹೆಚ್ಚು ಸೆಳೆದಿವೆ. ಉದ್ದಳತೆಯಲ್ಲಿ ವೈವಿಧ್ಯತೆಯಿದ್ದರೂ ಈ ಕೆತ್ತನೆಗಳು ಸಮಿತ್ರಿಯನ್ನು ಕಾಯ್ದುಕೊಂಡು ಕಲಾತ್ಮಕವಾಗಿ ಮೂಡಿವೆ. ಆದರೆ ಇವುಗಳ ರೂವಾರಿಗಳು ಮಾತ್ರ ಅಜ್ಞಾತವಾಗಿ ಉಳಿದುಕೊಂಡಿರುವರು.

ಪಾದಚಿನ್ಹೆಗಳು ಚಿಕ್ಕಬೆಟ್ಟದಲ್ಲಲ್ಲದೆ, ದೊಡ್ಡಬೆಟ್ಟ, ಬೆಳ್ಗೊಳ, ಜಿನನಾಥಪುರದಲ್ಲೂ ನೋಡಸಿಗುವುವು. ಸಿದ್ಧರಗುಂಡಿನ ಬಳಿಯ ಬಂಡೆಯ ಲಕ್ಷುಮಿಸೇನ ದೇವನ,[15] ಜಕ್ಕಿಕಟ್ಟೆಯ

---

4. ಅನುಕ್ರಮವಾಗಿ 7, 9-11, 17, 21-23, 27-29, 31, 35, 39, 95, 104, 119, 129, 51 ಮತ್ತು 78.
5. 10ನೆಯ ಶತಮಾನದ 3.
6. 109 ಮತ್ತು 147.
7. 152 ಮತ್ತು 153.
8. 141.
9. 169.
10. 181.
11. 207 ಮತ್ತು 214.
12. 251.
13. 253.
14. 254.
15. 383.

ಪೂರ್ವಕ್ಕಿರುವ ಬಂಡೆಯ ಮಲ್ಲಿಷೇಣನ,[16] ಜಿನನಾಥಪುರದ ಅರೆಗಲ್ಲು ಬಸದಿಯ ಮುಂದಿನ ತಳಬಂಡೆಯ ಪ್ರಭಾಚಂದ್ರಸಿದ್ಧಾಂತ ದೇವನ ಪಾದದ್ವಯಗಳು ಇದಕ್ಕೆ ಉದಾಹರಣೆಗಳು.[17]

ಗುಂಡುಗಲ್ಲ ನಿಸಿಧಿಗಳು : ಬಂಡೆಗಲ್ಲುಗಳಿಗಿಂತ, ಗುಂಡುಗಲ್ಲ ನಿಸಿಧಿಗಳು ಹೆಚ್ಚು ಸಮಗ್ರವೂ ಕಲಾತ್ಮಕವೂ ಆಗಿವೆ. ಏಕೆಂದರೆ, ಇವುಗಳಲ್ಲಿ ಶಾಸನ ಪಾಠಕ್ಕಿಂತ ಶಿಲ್ಪಕ್ಕೆ ಹೆಚ್ಚು ಪ್ರಾಧಾನ್ಯತೆ ದೊರಕಿದೆ. ಇಂತಹ ಗುಂಡುಗಲ್ಲುಗಳನ್ನು ದೇವಾಲಯ ಮತ್ತು (ಕೋಟೆಯ) ಮಹಾದ್ವಾರಗಳ ಬಳಿ ಕಾಣುವೆವು. ಇವುಗಳಲ್ಲಿ ಅತ್ಯಂತ ದೊಡ್ಡವು 15' ರಿಂದ 20' ಎತ್ತರ, 10' ಅಗಲವಾಗಿವೆ. ಕೆಲವು ಗುಂಡುಗಳನ್ನು ಒಂದೇ ನಿಸಿಧಿ ಆವರಿಸಿದ್ದರೆ, ಇನ್ನು ಕೆಲವು ನಿಸಿಧಿ ಸಮುಚ್ಚಯವನ್ನು ಹೊಂದಿವೆ.

ಚಿಕ್ಕಬೆಟ್ಟದ ಭದ್ರಬಾಹು ಗುಹೆಯ ದ್ವಾರದ ಬಳಿಯ ಗುಂಡು ಮತ್ತು ದೊಡ್ಡಬೆಟ್ಟದ ಅಖಂಡಬಾಗಿಲ ಬಳಿಯ ಸಿದ್ಧರಗುಂಡು ಇವುಗಳಲ್ಲಿ ಹೆಚ್ಚು ಗಮನಾರ್ಹವಾಗಿವೆ. ಮೊದಲನೆಯದನ್ನು 14ನೆಯ ಶತಮಾನದಲ್ಲಿ ಲಕ್ಷ್ಮೀಸೇನಭಟ್ಟಾರಕ ದೇವರ ಶಿಷ್ಯ ಮಲ್ಲಿಸೇನದೇವರ ಗೌರವಾರ್ಥ ಕೆತ್ತಲಾಯಿತೆಂದು ಅಲ್ಲಿರುವ ಮೂರು ಸಾಲುಗಳ ಶಾಸನವು ತಿಳಿಸುವುದು. ಈ ಸ್ಮಾರಕವನ್ನು 'ನಿಸಿಧಿ' ಪದದಿಂದ ಗುರುತಿಸಿದ್ದರೂ, ಮೃತನು ಅನುಸರಿಸಿದ ವ್ರತಾಚರಣೆಯ ವಿವರಗಳನ್ನು ಕೊಡಲಾಗಿಲ್ಲ.[18] ಆದರೆ ಅವನು ಆರಾಧನಾವ್ರತ ಕೈಕೊಂಡಿದ್ದನೆಂದು ಊಹಿಸಬಹುದು.

ಎರಡನೆಯ ಗುಂಡಿನ ಮೇಲೆ ಅನೇಕ ನಿಸಿಧಿಗಳಿವೆ, ಆದರೆ ಅವುಗಳ ಕಾಲಮಾನದ ಬಗ್ಗೆ ಸ್ಪಷ್ಟ ವಿವರ ದೊರೆಯುವುದಿಲ್ಲ. ಸುಮಾರು 14ನೆಯ ಶತಮಾನದ ಸುತ್ತಮುತ್ತ ಇದೊಂದು ನಿಸಿಧಿ ಗುಂಡಾಗಿ ಪರಿವರ್ತನೆಗೊಂಡಿತೆಂದು ತಿಳಿಯಲು ಹೇಮಚಂದ್ರ ಕೀರ್ತಿದೇವನ ಶಾಸನವೊಂದು ಸಹಕಾರ ನೀಡುವುದು.

ದೊಡ್ಡಬೆಟ್ಟದ ಅಖಂಡ ಬಾಗಿಲ ಬಳಿಯಲ್ಲಿರುವ ಈ ಎರಡನೆಯ ಗುಂಡು ಈಗ ಪ್ರಚಲಿತವಿರುವ ಹೆಸರಿನಂತೆ 'ಸಿದ್ಧರಗುಂಡು' – ಅಂದರೆ ಅಮರತ್ವ ಸಾಧಿಸಿಕೊಂಡವರ ಸ್ಮಾರಕ ಎಂದು ಅರ್ಥ. ಈ ಗುಂಡಿನ ಮೇಲೆ ಐದಾರು ನಿಸಿಧಿಗಳಿಗೆ ಸಂಬಂಧಪಟ್ಟ ಒಟ್ಟು 96 ಉಬ್ಬುಶಿಲ್ಪಗಳಿವೆ.[19] ಕೆಲವು ಘಟನೆಗಳನ್ನು ವಿಸ್ತಾರವಾಗಿ ನಿರೂಪಿಸಲಾಗಿದ್ದರೆ, ಇನ್ನು ಕೆಲವನ್ನು ಸಂಕ್ಷಿಪ್ತವಾಗಿ ಸೂಚಿಸಲಾಗಿದೆ.

---

16. 505.
17. 533.
18. 253.
19. ಯು. ಪಿ. ಷಾ., ಮತ್ತು ಎಂ.ಎ. ಧಾರೆ, (ಸಂ), ಆಸ್ಪೆಕ್ಟ್ಸ್ ಆಫ್ ಜೈನ ಆರ್ಟ್ ಅಂಡ್ ಆರ್ಕಿಟೆಕ್ಚರ್, (ಅಹ್ಮದಾಬಾದ್, 1975), ಚಿತ್ರ 8 (ಪು. 130),32 (ಪು. 160), (ಪು.180).


ಇವುಗಳಲ್ಲಿ. ಪ್ರಧಾನವೂ ಅತ್ಯಂತ ವಿಸ್ತಾರವೂ ಆದ ನಿಸಿಧಿಯು ಗುಂಡಿನ ಶಿರೋಭಾಗದಲ್ಲಿದ್ದು, ಅದು ಸಾಕಷ್ಟು ಸ್ಥಳಾವಕಾಶ ಪಡೆದುಕೊಂಡಿದೆ. ಈ ಫಲಕದ ಕೇಂದ್ರಭಾಗದಲ್ಲಿ ಜಿನನು ಪರ್ಯಂಕಾಸನದಲ್ಲಿ ಕುಳಿತಿರುವನು; ಅವನ ಇಬ್ಬದಿಗಳಲ್ಲಿ ಕಾಯೋತ್ಸರ್ಗದಲ್ಲಿ ನಿಂತ ಮುನಿಗಳಿರುವರು. ಈ ಅಂಕಣವನ್ನು ಎಂಟು ಅಡ್ಡ ಸಾಲುಗಳಲ್ಲಿ ವಿಭಜಿಸಲಾಗಿದೆ. ಪದ್ಮಾಸನದಲ್ಲಿರುವ ಹನ್ನೊಂದು ಮುನಿಗಳ ಮತ್ತೊಂದು ಸಾಲಿನ ಮಧ್ಯೆ ಕವಣಿಕೆಯನ್ನಿಟ್ಟು ಅವರನ್ನು ಆರು, ಐದು ಮುನಿಗುಂಪುಗಳಲ್ಲಿ ವಿಂಗಡಿಸಲಾಗಿದೆ. ಮೂರು ಮತ್ತು ಎಂಟನೆಯ ಸಾಲುಗಳನ್ನೂ ಇದೇ ಬಗೆಯಲ್ಲಿ ವಿಭಜಿಸಲಾಗಿದೆ. ಆದರೆ ಇಲ್ಲಿ ಅನುಕ್ರಮವಾಗಿ 15,16, 18, 14 ಮತ್ತು 4 ಮುನಿಗಳ ಸಮೂಹಗಳಿವೆ.

ಮೂಲಸಂಘ ಬಲಾತ್ಕಾರಗಣದ ಧರ್ಮಭೂಷಣದೇವನ ಗೌರವಾರ್ಥ ಮುನಿ ವರ್ಧಮಾನಸ್ವಾಮಿಯು ಈ ಫಲಕವನ್ನು ಕೊರೆಸಿದನೆಂದು ಸಂಸ್ಕೃತ ಭಾಷೆಯ ಒಂದು ಶಾಸನವು ತಿಳಿಸುವುದು. ಸಾವನ್ನಪ್ಪಿದ ಮುನಿಯ ವಂಶಾವಳಿಯು ವನವಾಸ ಮುನಿಯಿಂದ ಆರಂಭಗೊಂಡು, ದೇವೇಂದ್ರ, ವಿಶಾಲಕೀರ್ತಿದೇವ, ಶುಭಕೀರ್ತಿದೇವ, ಧರ್ಮಭೂಷಣದೇವ, ಅಮರಕೀರ್ತಿ ಆಚಾರ್ಯರನ್ನೊಳಗೊಂಡು ಕೊನೆಯ ಮುನಿಯ ಶಿಷ್ಯನಾದ ಧರ್ಮಭೂಷಣದೇವನ ಮರಣದೊಂದಿಗೆ ಮುಕ್ತಾಯಗೊಳ್ಳುವುದು. ಈತನು ಆಚರಿಸಿದ ವ್ರತವಿಧಾನಗಳಿಗೆ ಇಲ್ಲಿ ಪ್ರಾಧಾನ್ಯತೆ ದೊರೆತಿಲ್ಲ. ಈ ಸ್ಮಾರಕವನ್ನು 'ನಿಸಿಧಿ' ಪದದಿಂದಲೂ ಗುರುತಿಸಿಲ್ಲ. ಈ ಶಾಸನವನ್ನು ಬರೆಸಿದ ವರ್ಧಮಾನಸ್ವಾಮಿಯು ಧರ್ಮಭೂಷಣದೇವನ ಶಿಷ್ಯನಾಗಿದ್ದರೆ,[20] ವಂಶಾವಳಿಯ ಆರಂಭದಲ್ಲಿ ಉಲ್ಲೇಖಗೊಂಡಿರುವ ವನವಾಸಸ್ವಾಮಿ[21] ಹಾಗೂ ಸಿಂಹಣಂದಿ ಆಚಾರ್ಯರು[22] ಈ ಮರಣಾರ್ಥಿಯ ಪೂರ್ವವರ್ತಿ ಇಲ್ಲವೆ ಸಮೀಪದ ಹಿರಿಯ ಮುನಿಗಳಾಗಿರಬಹುದೆಂದೆನಿಸುವುದು. ಈ ನಿಸಿಧಿಯ ವಿಶೇಷತೆ ಏನೆಂದರೆ, ಮರಣಾರ್ಥಿ ಮತ್ತು ಆತನ ಗುರುವನ್ನಲ್ಲದೆ ಸಂಘದ ಎಲ್ಲ ಪ್ರಮುಖ ಸದಸ್ಯರನ್ನೂ ಪ್ರದರ್ಶಿಸಿರುವುದು. ಸಮಾದಿಯಲ್ಲಿ ಸಂಘ ನಾಯಕರೆಲ್ಲ ಪಾಲ್ಗೊಂಡು, ಮರಣಾರ್ಥಿಗೆ ಮಾರ್ಗದರ್ಶನ ಮಾಡಿದ್ದನ್ನು ಮತ್ತು ಅವನ ಮರಣಾನಂತರ ಅವನನ್ನು ಗೌರವಿಸಿದ್ದನ್ನು ಇದು ನಿರೂಪಿಸುವಂತಿದೆ.

ಈ ಗುಂಡಿನ ಕೆಳಗಿನರ್ಧಭಾಗದಲ್ಲಿ ಇನ್ನೂ ಹಲವು ನಿಸಿಧಿಗಳನ್ನು ಕೊರೆಯಲಾಗಿದೆ. ಇದರಲ್ಲಿ ಒಬ್ಬ '...ಕೀರ್ತಿದೇವ' (ಹೆಸರಿನ ಸ್ವಲ್ಪಭಾಗ ಅಳಿಸಿಹೋಗಿದೆ) ನಾಗಿದ್ದನು.[23] ಈ ಉಬ್ಬುಶಿಲ್ಪಗಳಲ್ಲಿ (1'.10" × 1'.1") ಎಲ್ಲಡೆಯಂತೆ ಜಿನನಿರದೆ

20. ಎ ಕ II, 380.
21. 381.
22. 382.
23. 378.

ಪರ್ಯಂಕಾಸನದಲ್ಲಿರುವ ಬಾಹುಬಲಿ ಇರುವನು. ನಿಸಿಧಿಸ್ಮಾರಕಗಳಲ್ಲಿ ಬಾಹುಬಲಿಯನ್ನು- ಅದರಲ್ಲೂ ಕುಳಿತ ಭಂಗಿಯಲ್ಲಿ - ಪ್ರದರ್ಶಿಸುವ ಮತ್ತೊಂದು ನಿದರ್ಶನವು ಈ ಕೇಂದ್ರದಲ್ಲಾಗಲಿ, ಬೇರೆಡೆಯಲ್ಲಾಗಲಿ, ಇದುವರೆಗೂ ಕಂಡುಬಂದಿಲ್ಲ. ಅಖಂಡ ಬಾಗಿಲಿನ



39 ಸಿದ್ಧರಗುಂಡಿನ ನಿಸಿಧಿಗಳು : ಗೊಮ್ಮಟ (378)ನ ಸಮ್ಮುಖದಲ್ಲಿ ವ್ರತಾಚರಣೆ ಕೈಕೊಂಡ ಕೀರ್ತಿದೇವನ ನಿಸಿಧಿ ಮತ್ತು ಜಿನನ ಸನ್ನಿಧಿಯಲ್ಲಿ ವ್ರತಾಚರಣೆ ಕೈಕೊಂಡ ಅಜ್ಞಾತ ಶ್ರಾವಕರ ನಿಸಿಧಿ

ಮತ್ತೊಂದು ಕಡೆ ಪರ್ಯಂಕಾಸನದಲ್ಲಿ ಕುಳಿತ ಬಾಹುಬಲಿಯ ಶಿಲ್ಪವಿದ್ದರೂ ಅದು ನಿಸಿಧಿಗೆ ಸಂಬಂಧಿಸದೆ ಪಂಚಕಲ್ಯಾಣ ಮಹೋತ್ಸವಕ್ಕೆ ಸಂಬಂಧಿಸಿದ್ದಾಗಿದೆ.[24]

ಈ ಗುಂಡಿನ ಕೆಳಸ್ತರದಲ್ಲಿರುವ ಮತ್ತೊಂದು ನಿಸಿಧಿಯನ್ನು ಶಾಂತಿಕೀರ್ತಿದೇವನ ಶಿಷ್ಯನಾದ ಹೇಮಚಂದ್ರಕೀರ್ತಿದೇವನನ್ನು ಗೌರವಿಸಲು 14ನೆಯ ಶತಮಾನದಲ್ಲಿ ಕಂಡರಿಸಲಾಯಿತು. ಇದನ್ನು 'ನಿಸಿಧಿ'ಪದದಿಂದ ಸ್ಪಷ್ಟವಾಗಿ ಗುರುತಿಸಲಾಗಿದೆ.[25] ಇಲ್ಲಿಯ ಉಬ್ಬುಶಿಲ್ಪಗಳಲ್ಲಿ ಆಸೀನ ಜಿನನಿದ್ದು, ಅವನ ಇಬ್ಬದಿಯಲ್ಲಿ ಮುನಿಗಳಿರುವರು.

ಹೇಮಚಂದ್ರಕೀರ್ತಿದೇವನ ನಿಸಿಧಿಯ ಎಡಕ್ಕೆ ಮತ್ತೊಂದು ಫಲಕ ಹಾಗೂ ಶಾಸನವಿದೆ.[26] ಇದನ್ನು ಸೋಮಸೇನದೇವನ ಗುಡ್ಡ ಗುಡ್ಡಿಯರಾದ ಗೋಪಯ ಮತ್ತು ಬೈಚಕ್ಕಳ ಗೌರವಾರ್ಥ ಕೊರೆಸಲಾಯಿತು. ಅಂಜಲಿ ಮುದ್ರೆಯಲ್ಲಿ ಕುಳಿತವರೇ ಈ ದಂಪತಿಗಳೆಂಬುದರಲ್ಲಿ ಅನುಮಾನವಿಲ್ಲ.

ಈ ಗುಂಡಿನ ತೀರಾ ಕೆಳಸ್ತರದಲ್ಲಿ ಇನ್ನೆರಡು ನಿಸಿಧಿಗಳಿವೆ. ಇವುಗಳಲ್ಲಿಯೆ ದೀರ್ಘವಾದ (5'.6" × 1'.6") ಫಲಕದಲ್ಲಿ ಪರ್ಯಂಕಾಸನದಲ್ಲಿ ಕುಳಿತ ಇಬ್ಬರು ಜಿನರ

24. 374.
25. 379.
26. 377.

ಇಕ್ಕೆಲಗಳಲ್ಲಿ ಆರು ಜನ ಶ್ರಮಣ-ಶ್ರಾವಕರನ್ನು ತೋರಿಸಲಾಗಿದೆ. ಇದಕ್ಕೆ ಸಂಬಂಧಿಸಿದ ದಾಖಲೆಯು ಅಳಿಸಿಹೋಗಿರುವುದರಿಂದ, ಸಮಾಧಿ ಹೋದವರ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಾಗುತ್ತಿಲ್ಲ. ಇಲ್ಲಿಯ ಮತ್ತೊಂದು ನಿಸಿಧಿಯು ಚಿಕ್ಕದಾಗಿದ್ದು ಅದನ್ನು ಮುನಿಯೊಬ್ಬನ




40 ಅಖಂಡಬಾಗಿಲ ಗುಂಡುಗಲ್ಲ ಮೇಲಿನ ಶ್ರಾವಕ ದಂಪತಿಗಳ ನಿಸಿಧಿಯ ಫಲಕಗಳು.

ಗೌರವಾರ್ಥ ಕೊರೆಯಲಾಯಿತೆಂದು ತೋರುವುದು. ಈ ಫಲಕದಲ್ಲಿ ಜಿನನ ಇಬ್ಬದಿಗಳಲ್ಲಿ ಕುಳಿತ ಇಬ್ಬರು ಮುನಿಗಳನ್ನು ಮೂಡಿಸಲಾಗಿದೆ.

iii) ಇತರ ಗುಂಡುಗಲ್ಲ ನಿಸಿಧಿಗಳು : ಸಿದ್ಧರಗುಂಡು ಮತ್ತು ಅಖಂಡಬಾಗಿಲಿನ ಮಧ್ಯದಲ್ಲಿರುವ ಗುಂಡುಗಳ ಮೇಲೆ ಇನ್ನೂ ಕೆಲವು ಸ್ವಾರಸ್ಯಕರವಾದ ನಿಸಿಧಿಗಳನ್ನು, ಶಾಸನಗಳನ್ನು, ಕಾಣಬಹುದು. ಇದರಲ್ಲಿ ಶ್ರಾವಕನೊಬ್ಬನ ನಿಸಿಧಿಯನ್ನು ಅಪೂರ್ಣಾವಸ್ಥೆಯಲ್ಲಿಯೇ ಕೈಬಿಟ್ಟಂತೆ ಕಾಣುವುದು. ಮೇಲಿನ ಸ್ತರದ (10" × 1' 3 ¾ ") ಆಸೀನ ಜಿನ ಮತ್ತು ಚೌರಿಧಾರಿಗಳು, ಕೆಳಸ್ತರದಲ್ಲಿ ಅಂಜಲಿಹಸ್ತದಲ್ಲಿರುವ ಶ್ರಾವಕ ದಂಪತಿಗಳಿಗೆ ಬೋಧಿಸುವ ಯೋಗಪಟ್ಟಧಾರಿ ಮುನಿಯ ಚಿತ್ರಗಳು (1'.4 × 9') ಇದೊಂದು ನಿಸಿಧಿ ಎಂಬುದನ್ನು ಸಾಬೀತುಪಡಿಸುತ್ತವೆ. ಇದರ ಬಲಕ್ಕೆ ಇರುವ ನಿಸಿಧಿ ಫಲಕವನ್ನು ಮೂಲಸಂಘ, ದೇಸಿಯಗಣ, ಪುಸ್ತಕಗಚ್ಛ, ಕೊಂಡಕುಂದಾನ್ವಯದ ತ್ರೈವಿದ್ಯದೇವನ ಶಿಷ್ಯನಾದ ಪದ್ಮಣಂದಿದೇವನ ಗೌರವಾರ್ಥ ನಿಲ್ಲಿಸಲಾಯಿತು.[27] ಇದೂ ಎರಡು ಅಂಕಣಗಳಲ್ಲಿದ್ದು, ಮೇಲಿನದರಲ್ಲಿ ಸಾಂಪ್ರದಾಯಿಕ ಜಿನನನ್ನು, ಕೆಳಗಿನ ಅಂಕಣದಲ್ಲಿ ಎದುರ್ಮುಖರಾಗಿ ಕುಳಿತ ಇಬ್ಬರು ಮುನಿಗಳನ್ನಲ್ಲದೆ ಅವರ ಕಲಶ, ಪಿಂಛ, ಮತ್ತು ಠವಣೆಕೆಯನ್ನು ತೋರಿಸಲಾಗಿದೆ. ಈ ಅಂಕಣದ (4'.8" × 1'3 ½ ") ಎರಡು ಫಲಕಗಳೂ (1' × 1', 1' × 6½ ") ಅಸಮರ್ಪಕವಾಗಿದ್ದು, ಶಾಸನದಲ್ಲಿ 'ನಿಸಿಧಿ' ಪದಪ್ರಯೋಗವಾಗಲಿ, ವ್ರತದ ವಿವರಗಳಾಗಲಿ, ಬರುವುದಿಲ್ಲ.

27. 375.

ನಿಸಿಧಿಯನ್ನು ಹೋಲುವ ಗುಂಡುಗಲ್ಲ ಶಾಸನ : ನಿಸಿಧಿಯಂತೆ ಕಾಣುವ ಇನ್ನೊಂದು ಕುತೂಹಲಕಾರಿ ಉಬ್ಬುಶಿಲ್ಪಗಳ ಸಮುಚ್ಚಯವು ಪದ್ಮಣಂದಿದೇವನ ನಿಸಿಧಿಯ ಬಲಕ್ಕಿದೆ.



41 ಪದ್ಮಣಂದಿದೇವನ (375) ಗುಂಡುಗಲ್ಲಿನ ನಿಸಿಧಿ.

ಆದರೆ, ಇದು ವಾಸ್ತವವಾಗಿ ಗೊಮ್ಮಟನ ಪಂಚಕಲ್ಯಾಣೋತ್ಸವದ ದಾಖಲೆಯಾಗಿದೆ. ಈ ಉತ್ಸವವನ್ನು ಪುಸ್ತಕಗಚ್ಛದ ಮಹಾದೇಸಿಗಣದ ಭಾನುಕೀರ್ತಿಸಿದ್ಧಾಂತ ಚಕ್ರವರ್ತಿಯು ಶ್ರಮಣ-ಕಂತಿಯರೊಡಗೂಡಿ 1118ರಲ್ಲಿ ನೆರವೇರಿಸಿದನು. ಗೊಮ್ಮಟನ ದಾಖಲಿತ ಪಂಚಕಲ್ಯಾಣೋತ್ಸವಗಳಲ್ಲಿಯೇ ಇದು ಅತ್ಯಂತ ಪುರಾತನವಾದ ಉತ್ಸವವಾಗಿದೆ. ಈ ಫಲಕದಲ್ಲಿ (2'.5" × 1'4") ಕೂರ್ಚರ ಸಮೇತ ಕುಳಿತ ಇಬ್ಬರು ಮುನಿಗಳನ್ನು, ಪರ್ಯಂಕಾಸನದಲ್ಲಿರುವ ಗೊಮ್ಮಟನನ್ನು, ಫಲಕದ ಅಂಚಿನಲ್ಲಿ ಇಬ್ಬರು ಕಂತಿಯರನ್ನು ಕಾಣುವೆವು. ಮುನಿಗಳು ಪಂಚಕಲ್ಯಾಣದಾಚರಣೆಯಲ್ಲಿ ತೊಡಗಿರುವರು. ಇದರಲ್ಲಿ ಪಾಲ್ಗೊಂಡ ಇಪ್ಪತ್ತೆಂಟು ಶಾಖೆಗಳ ಶ್ರಮಣ-ಕಂತಿಯರ ಬಗ್ಗೆ, ಪುಸ್ತಕಗಚ್ಛ ಕೊಂಡಕುಂದಾನ್ವಯದ ಮಹಾದೇಸಿಗಣ ಬಗ್ಗೆ, ಇಲ್ಲಿಯ ಇಪ್ಪತ್ತುಮೂರು ಸಾಲುಗಳ ಶಾಸನವು ಸಮಗ್ರ ವಿವರ ಕೊಡುವುದು.

2) ಬಯಲಿನಲ್ಲಿರುವ ನಿಸಿಧಿ-ಮಾನಸ್ತಂಭಗಳು : ಬಯಲಿನಲ್ಲಿ ನಿರಾವಲಂಬವಾಗಿ ನಿಂತ ಮಾನಸ್ತಂಭಗಳ ಪೀಠಭಾಗದ ಮೇಲೆ ನಿಸಿಧಿ ಶಾಸನಗಳನ್ನು ಕೆತ್ತಿಸಿರುವುದು ಈ ಕೇಂದ್ರದ ಒಂದು ವೈಷಿಷ್ಟ್ಯ. ಹೆಚ್ಚು ಪ್ರಸಾರಕ್ಕೆ ಬಾರದ ಈ ಸಂಪ್ರದಾಯವು ಬಹುತೇಕ 10ನೆಯ ಶತಮಾನಕ್ಕೆ ಸೀಮಿತವಾಗಿದ್ದು, ಎರಡು ಪ್ರಮುಖ ನಿದರ್ಶನಗಳೊಂದಿಗೆ ಮುಕ್ತಾಯಗೊಂಡಂತೆ ಕಾಣುವುದು. ಇವುಗಳಲ್ಲಿ ಒಂದು ಚಿಕ್ಕಬೆಟ್ಟದ ಕೂಗೆಬ್ರಹ್ಮದೇವಸ್ತಂಭ; ಮತ್ತೊಂದು, ದೊಡ್ಡಬೆಟ್ಟದ ಜಾಗದಕಂಬ. ಆದರೆ ಇಂತಹ ಉದಾಹರಣೆಗಳನ್ನು ಕಂಚಿನದೊಣೆಯಲ್ಲಿರುವ ಭಗ್ನಕಂಬಗಳು ಪ್ರತಿನಿಧಿಸಬಹುದೇನೋ. ಮಾನಸ್ತಂಭಗಳು ಚಿಕ್ಕಬೆಟ್ಟ, ದೊಡ್ಡಬೆಟ್ಟ ಹಾಗೂ ನಗರ ಪ್ರದೇಶದಲ್ಲಿಯೂ ಇವೆ. ಆದರೆ ಅವಾವೂ ನಿಸಿಧಿ ಪ್ರಕ್ರಿಯೆಗೆ ಸಂಬಂಧಿಸಿದವುಗಳಾಗಿಲ್ಲ.

ಕಂಚಿನದೊಣೆಯಲ್ಲಿ ಅಳಿದುಳಿದು ಬಂದಿರುವ ಸ್ಮಾರಕಗಳಲ್ಲಿ ಒಂದು ಪೊಲ್ಲಬ್ಬೆ ಕಂತಿಯದೆಂದು,[28] ಮತ್ತೊಂದು ಚಲದಂಕಕಾರ ಹೊಯ್ಸಳಸೆಟ್ಟಿಯ ಮತ್ತು ಅವನ ಮಗ ಬೂಚಣರ ನಿಸಿಧಿಗಳೆಂದು[29] ಶಾಸನಗಳು ತಿಳಿಸುವುವು. ದೊಣೆಯ ಮಧ್ಯಭಾಗದಲ್ಲಿ ಈಗ ಭಗ್ನಗೊಂಡು ನಿಂತಿರುವ 'ಪೂರ್ಣಸ್ತಂಭ' ವನ್ನು ಮುನಿ ಧನಕೀರ್ತಿದೇವನ ಗೌರವಾರ್ಥ ನೆಡಲಾಯಿತೆಂದು ಅಲ್ಲಿಯ ಶಾಸನವು ಸಾರುವುದು. ಆದರೆ, ಇದನ್ನು 'ನಿಸಿಧಿ' ಎಂದು ಗುರುತಿಸಲಾಗಿಲ್ಲ.[30] ಈ ಕಾಲದಲ್ಲಿ ಬಯಲಿನಲ್ಲಿ ನಿಂತ ಕಂಬಗಳೆಲ್ಲ 'ನಿಸಿಧಿ' ಅಥವಾ 'ಮಾನಸ್ತಂಭ'ಗಳಾಗಿರಲಿಲ್ಲವಾದಕಾರಣ, ಶಾಸನದ ಆಧಾರದಿಂದ ಮಾತ್ರ ಅವುಗಳ ಸ್ವರೂಪವನ್ನು ಅರಿತುಕೊಳ್ಳಲು ಸಾಧ್ಯವೆಂದರ್ಥ.[31] ಮಾನಸ್ತಂಭ ನಿಸಿಧಿಯ ಪರಿಪೂರ್ಣ ನಮೂನೆಯನ್ನು ಕೂಗೆಬ್ರಹ್ಮದೇವ ಕಂಬವು ಮಾತ್ರ ಪ್ರತಿಬಿಂಬಿಸುವುದು.

ಕೂಗೆಬ್ರಹ್ಮದೇವ ಸ್ತಂಭ : ಈ ಹೆಸರಿನಲ್ಲಿ ಪ್ರಸಿದ್ಧಗೊಂಡಿರುವ ಮಾನಸ್ತಂಭವನ್ನು 10ನೆಯ ಶತಮಾನದಲ್ಲಿ ಗಂಗ ಮಾರಸಿಂಹನ ಗೌರವಾರ್ಥ ನಿಲ್ಲಿಸಲಾಯಿತು.[32] ವೀರನೂ ದಾನಿಯೂ ಆದ ಮಾರಸಿಂಹನು ಜೀವನದುದ್ದಕ್ಕೂ ರಣರಂಗದಲ್ಲಿ ಸೆಣಸಾಡಿ ಅಪಾರ ಯಶಸ್ಸನ್ನು ಕಂಡನು; ವೈರಿಯ ಅಲುಗಿಗೆ ಸಿಲುಕದ ಅವನನ್ನು ಆಲಿಂಗಿಸಿ ಆಹ್ವಾನಿಸಲು ಸ್ವರ್ಗದಲ್ಲಿ ಕಾದು ಕುಳಿತಿದ್ದ ಅಪ್ಸರೆಯರಿಗೆ ಇವನು ಪದೇ ಪದೇ ನಿರಾಶೆಯುಂಟುಮಾಡಿದನೆಂದು ಅವನ ಪ್ರತಾಪವನ್ನು ಬಣ್ಣಿಸಲಾಗಿದೆ. ತಾನು ಜಯಸಿದ ರಾಜ್ಯಗಳಲ್ಲೆಲ್ಲ ದೇವಾಲಯಗಳನ್ನು ಕಟ್ಟಿಸಿ, ಮಾನಸ್ತಂಭಗಳನ್ನು ನಿಲ್ಲಿಸಿ, ಮಾರಸಿಂಹನು ತನ್ನ ಕೀರ್ತಿಯನ್ನು ನೂರ್ಮಡಿ ಮಾಡಿಕೊಂಡನು. ಆದರೆ ಒಂದು ಹಂತದಲ್ಲಿ ವೈಭವ ಜೀವನವನ್ನೆಲ್ಲ ತೊರೆದು ಶ್ರಮಣ ಜೀವನವನ್ನು ಅವನು ಸ್ವೀಕರಿಸಿದನು. ಒಂದೇ ಸ್ಥಳಕ್ಕಂಟಿಕೊಳ್ಳದೆ ವಿಹಾರ ಕೈಕೊಂಡು ಒಂದು ವರ್ಷಕಾಲ ದೇಶಪರ್ಯಟನೆ ಮಾಡುತ್ತಾ, ಇಂದಿನ ಹಾವೇರಿ ಜಿಲ್ಲೆಯ ಬಂಕಾಪುರವನ್ನು ತಲುಪಿ, ಅಜಿತಸೇನಭಟ್ಟಾರಕನ ಪಾದತಲದಲ್ಲಿ ಸಮಾಧಿ ದೀಕ್ಷೆಯನ್ನು ಕೈಕೊಂಡು, ಮೂರುದಿನ ನಿರಸನಗೈದು, ಅವನು ಸಾವನ್ನು ಸ್ವಾಗತಿಸಿದನು. ಶಾಸನದಲ್ಲಿ ಈ ಕಂಬವನ್ನು 'ನಿಸಿಧಿ' ಎಂದು ಗುರುತಿಸಿಲ್ಲ; ಆದರೆ, ಸಮಾಧಿ ಮತ್ತು ಆರಾಧನಾವಿಧಿಗಳನ್ನು ಉಲ್ಲೇಖಿಸಲಾಗಿದೆ.

ಈ ಕಂಬದ ಪ್ರಸ್ತುತ ಹೆಸರು ಸ್ಥಳೀಯ ಐತಿಹ್ಯದೊಂದಿಗೆ ಬೆರೆತುಕೊಂಡಿದೆ. ಅದರ ಪ್ರಕಾರ, ಇದರ ಶಿಖರಾಗ್ರದಲ್ಲಿರುವ ವಿಗ್ರಹವು ಬ್ರಹ್ಮನದು. ಕೊಳ್ಳದ ಕಟ್ಟೆಯೊಡೆದು,

---

28. 203.
29. 208.
30. 210 ಎಂಬ ಪಾಠವಿದೆ : 'ಶ್ರೀ ಧನಕೀರ್ತಿದೇವರ ಮಾನಸ್ತಂಭದ ಕಂಭ'.
31. 208.
32. 64.

ನೀರು ಉಕ್ಕೇರಿ ಬರುತ್ತಿರವುದನ್ನು ಕಂಡ ಬ್ರಹ್ಮನು 'ಪ್ರವಾಹದಿಂದ ರಕ್ಷಿಸಿಕೊಳ್ಳಿರಿ' ಎಂದು ಕೂಗಿ ಅಲ್ಲಿಯ ನಿವಾಸಿಗಳನ್ನು ಎಚ್ಚರಿಸಿದನಂತೆ! ಈ ಕತೆಯನ್ನು ಸಮರ್ಥಿಸಲು ಸ್ತಂಭದ ಮೇಲಿನ ಬ್ರಹ್ಮ ವಿಗ್ರಹವು ಬೇರೆಡೆಯಂತೆ ದೇವಾಲಯದ ಕಡೆ ಮುಖಮಾಡಿರದೆ, ಕೊಳ್ಳದ ಕಡೆ ಮುಖಮಾಡಿರುವುದನ್ನು ಸ್ಥಳೀಯರು ತೋರಿಸುವರು.

ಸ್ವಾರಸ್ಯಕರವಾದ ಈ ಕತೆಯನ್ನು ಪೋಷಿಸಿಸಲು ಪ್ರಾಚ್ಯಾವಶೇಷಗಳಾಗಲಿ ಶಾಸನ ಸಾಹಿತ್ಯವಾಗಲಿ ಇಲ್ಲ. ಅಲ್ಲದೆ ಕಂಬವನ್ನು ಅಲಂಕರಿಸುವ ಮೂರ್ತಿಯು ಪ್ರಸಾರದಲ್ಲಿರುವಂತೆ ಬ್ರಹ್ಮನದಾಗಿರದೆ ಸರ್ವಾಹ್ಣ ಯಕ್ಷನದಾಗಿದೆ. ಅಂದರೆ ಜನರ ನಂಬಿಕೆಯಲ್ಲಿರುವಂತೆ ಇದು 'ಬ್ರಹ್ಮಸ್ತಂಭ'ವಾಗಿರದೆ, ಶಾಸನವೇ ತಿಳಿಸುವಂತೆ ಒಂದು 'ಮಾನಸ್ತಂಭ'ವಾಗಿದೆ.

ಕ್ಷೇತ್ರಪಾಲ ಬ್ರಹ್ಮನ ಮತ್ತು ಬ್ರಹ್ಮಸ್ತಂಭದ ಪರಿಕಲ್ಪನೆಗಳು 10ನೆಯ ಶತಮಾನದ ಜೈನರಿಗೆ ಅಪರಿಚಿತವಾದ ವಿಷಯಗಳಾಗಿದ್ದವೆಂದು ತೋರುವುದು. ಅಶ್ವಾರೂಢ ಬ್ರಹ್ಮನ ವಿಗ್ರಹಗಳು ಸುಮಾರು 12ನೆಯ ಶತಮಾನಕ್ಕಿಂತ ಮುಂಚೆ ಪ್ರಚಾರದಲ್ಲಿರಲಿಲ್ಲವೆಂದೇ ಕಾಣುವುದು. ಮಾನಸ್ತಂಭದ ಪೀಠದ ಮೇಲೆ ಮೂಡಿಸಿದ, ಇಲ್ಲವೆ ಸ್ತಂಭದ ಶಿಖರಾಗ್ರದಲ್ಲಿ ಪ್ರತಿಷ್ಠಾಪಿಸಿದ, ಬ್ರಹ್ಮನ ಮೂರ್ತಿಗಳನ್ನಾಗಲಿ, ಉಬ್ಬು ಶಿಲ್ಪಗಳನ್ನಾಗಲಿ, 15-16ನೆಯ ಶತಮಾನಗಳಿಗಿಂತ ಮುಂಚೆ ನಾವು ಸಾಮಾನ್ಯವಾಗಿ ಕಾಣೆವು.[33] ಈ ಎಲ್ಲ ಕಾರಣಗಳಿಂದಾಗಿ 'ಕೂಗೆಬ್ರಹ್ಮದೇವ ಸ್ತಂಭ' ಎಂದು ಈಗ ಕರೆಯಲ್ಪಡುವ ಸ್ತಂಭವು ಮೂಲತಃ ಮಾರಸಿಂಹನ ಗೌರವಾರ್ಥ ನೆಟ್ಟ ನಿಸಿಧಿ ಮಾನಸ್ತಂಭವಾಗಿತ್ತೆಂದು, ಮುಂದೆ ಅದನ್ನು ತಪ್ಪಾಗಿ 'ಬ್ರಹ್ಮದೇವಸ್ತಂಭ' ಎಂದು ಗ್ರಹಿಸಲಾಯಿತೆಂದು ತಿಳಿಯಬಹುದು.

ಅತ್ಯುತ್ತಮ ಮಾನಸ್ತಂಭ : ಕೂಗೆಬ್ರಹ್ಮದೇವ ಸ್ತಂಭವು ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡಿ ದೇಶದಲ್ಲಿಯೇ ಅತ್ಯುತ್ಕೃಷ್ಟ ಮಾನಸ್ತಂಭಗಳಲ್ಲೊಂದಾಗಿದೆ. ಕಂಬದಹಳ್ಳಿಯ (ಶ್ರವಣಬೆಳ್ಗೊಳದ ಹತ್ತಿರ) ಹಾಗೂ ಹೊಂಬುಚ್ಚದ (ಶಿವಮೊಗ್ಗ ಜಿಲ್ಲೆ) ಸ್ತಂಭಗಳು ಸರಿಸುಮಾರು ಇದೇ ಸಾಲಿನಲ್ಲಿ ನಿಲ್ಲಬಲ್ಲ ಮಾನಸ್ತಂಭಗಳೆನಿಸುವುವು. ಚಿಕ್ಕಬೆಟ್ಟದ ಈ ಪುರಾತನ ಮಾದರಿಯನ್ನು ಅನುಕರಿಸಿ ದೊಡ್ಡಬೆಟ್ಟದ ಗುಳ್ಳೇಕಾಯಿ ಅಜ್ಜಿಯ ಮಂಟಪದ 'ಪಾತಾಳ ಯಕ್ಷ ಸ್ತಂಭ' (12ನೆಯ ಶತಮಾನ), ಚನ್ನಣ್ಣ ಬಸದಿಯ ಮಾನಸ್ತಂಭ (16ನೆಯ ಶತಮಾನ) ಮತ್ತು ಬೆಳ್ಗೊಳ ಪಟ್ಟಣದ ಭಂಡಾರ ಬಸದಿಯ ಮಾನಸ್ತಂಭಗಳನ್ನು ನಿರ್ಮಾಣ ಮಾಡಲಾಯಿತೆಂದು ತೋರುವುದು.

---

33. ಶೆಟ್ಟರ, ಎಸ್., ``ದಿ ಬ್ರಹ್ಮದೇವ ಪಿಲ್ಲರ್ಸ್ : ಆನ್ ಇನ್‌ಕ್ವಾಯರಿ ಇಂಟು ದಿ ಆರಿಜಿನ್ ಅಂಡ್ ನೇಚರ್ ಆಫ್ ದ ಬ್ರಹ್ಮದೇವ ವರ್ಷಿಪ್ ಅಮಂಗ್ ದಿಗಂಬರ ಜೈನ್ಸ್", *ಆರ್ಟಿಬಸ್ ಏಶಿಯೆ,* XXXIII, 1-2, (ನ್ಯೂಯಾರ್ಕ್, MCMLXXI), ಪುಟ 17-38.

ಮಾರಸಿಂಹನ ಗೌರವಾರ್ಥ ನಿರ್ಮಿಸಲಾದ ಸ್ತಂಭವು ಸುಮಾರು ಐದು ಅಡಿ ಎತ್ತರದ ವೇದಿಕೆಯನ್ನು ಒಳಗೊಂಡು 30 ಅಡಿ ಇದೆ. ಇದರ ಶಿಖರಾಗ್ರವನ್ನು ಅಲಂಕರಿಸಿರುವ ಯಕ್ಷ ವಿಗ್ರಹವು ಸುಮಾರು 3 ಅಡಿ ಎತ್ತರವಿದೆ. ಸ್ತಂಭವೇದಿಕೆಯು ಮೂರು ಮಜಲಿನಲ್ಲಿ ಏರಿದೆ. ತೀರಾ ಕೆಳಗಿನದು ಚೌಕಾಕಾರವಾಗಿದ್ದು, ಅದು 1½ ಅಡಿ ಎತ್ತರದ ಅಷ್ಟಕೋನಾಕೃತಿಯ ಪಟ್ಟಿಕೆಗಳನ್ನು ಹೊಂದಿದೆ. ಈ ಪಟ್ಟಿಕೆಗಳ ಮೇಲಂಚಿನಲ್ಲಿ ಪದ್ಮವಿದೆ. ಕಮಲ ಗರ್ಭದಿಂದ ಮೇಲೇಳುವ ಅಷ್ಟಮುಖಿ ಸ್ತಂಭವನ್ನು ಸಮತಲ ಪಟ್ಟಿಗಳು ಸಮಾನಾಂತರದಲ್ಲಿ ವಿಭಜಿಸಿವೆ. ಕುಂಭಾಕಾರದ ಶಿಖರಾಗ್ರವು ಮತ್ತೆ ಬೋದಿಗೆಯನ್ನು ಹೊಂದಿದೆ. ಬಲಗೈಯಲ್ಲಿ ಪದ್ಮವನ್ನು ಎಡಗೈಯಲ್ಲಿ ಫಲವನ್ನು ಹಿಡಿದು, ಅರ್ಧಪರ್ಯಂಕಾಸನದಲ್ಲಿರುವ ಸರ್ವಾಹ್ಣ ಯಕ್ಷನು ಬಟ್ಟ ಬಯಲಿನಲ್ಲಿ ಕುಳಿತಿರುವನು. ಸಾಂಕೇತಿಕವಾಗಿ ಸ್ತಂಭವನ್ನು ಹೊತ್ತು ನಿಂತಿದ್ದ ಗಜಗಳು ಈಗ ಭಗ್ನಗೊಂಡಿವೆ. ಈ ಸ್ತಂಭದ ಪೀಠದಲ್ಲಿ 974ರ ಶಾಸನವಿದ್ದು, ಅದು ಗಂಗವಂಶಾವಳಿಯನ್ನು, ಗಂಗಮಾರಸಿಂಹನು ರಾಜ್ಯತ್ಯಜಿಸಿ ಬಂಕಾಪುರದಲ್ಲಿ ಅಜಿತಸೇನ ಭಟ್ಟಾರಕರ ಸಮ್ಮುಖದಲ್ಲಿ ಸಮಾಧಿವಿಧಿಯಿಂದ ಸಾವನ್ನು ಸ್ವಾಗತಿಸಿದ್ದನ್ನು ತಿಳಿಸುವುದು.[34]

ಈ ಸ್ತಂಭವು ಗಂಗಕಾಲದ ಕಲಾನೈಪುಣ್ಯತೆಯನ್ನು ಪ್ರತಿಬಿಂಬಿಸುವ ಕೆಲವೇ ಕೆಲವು ಉದಾಹರಣೆಗಳಲ್ಲೊಂದಾಗಿದೆ. ಸ್ತಂಭಾಗ್ರದಲ್ಲಿರುವ ಮಾಟವಾದ ಕುಂಭ ಮತ್ತು ಬೋದಿಗೆಗಳು, ಸಮಪ್ರಮಾಣದ ಫಲಕ, ಪೀಠವನ್ನು ಅಲಂಕರಿಸಿದ ಗಜಗಳು ಮತ್ತು ಸ್ತಂಭದ ಮೇಲಿರುವ ಯಕ್ಷ ವಿಗ್ರಹ – ಇವು ಗಂಗ ರೂವಾರಿಯ ಉನ್ನತ ಕಲಾ ಪ್ರೌಢಿಮೆಯನ್ನು ಪ್ರತಿಬಿಂಬಿಸುವುವು. ಈ ಸ್ತಂಭದಲ್ಲಿಯ ಪ್ರಮಾಣಬದ್ಧತೆ ಹಾಗೂ ತಾಂತ್ರಿಕ ಸಮತೋಲನವು ಗಮನಾರ್ಹವಾದ ಅಂಶಗಳಾಗಿವೆ. ಸಮವಸರಣದಲ್ಲಿರುವಂತೆ ಇಲ್ಲಿಯೂ ಭಕ್ತರನ್ನು ಎದುರುಗೊಳ್ಳುತ್ತಿರುವ ಈ ಸ್ತಂಭವು 'ಮಿಥ್ಯಾಜ್ಞಾನಿಯ ಮಾನವಂ ಸ್ತಂಭಿಸುವ ಮಾನಸ್ತಂಭ'ವನ್ನು ಸಂಕೇತಿಸುವಂತಿದೆ.

ಸಂಕ್ರಮಣ ಕಾಲದ ಮರುಹೊಂದಾಣಿಕೆಗಳು : ಸುಮಾರು 10ನೆಯ ಶತಮಾನದ ಅಂತ್ಯಕ್ಕೆ ಸಮಾಧಿ ವ್ರತದಲ್ಲಿ ಹಾಗೂ ಮರಣಾರ್ಥಿಯನ್ನು ಗೌರವಿಸುವ ಬಗೆಯಲ್ಲಿ ಹಲವು ಬದಲಾವಣೆಗಳುಂಟಾದವೆಂದು ತೋರುವುದು. ಇವುಗಳಲ್ಲಿ (1) ಸಮಾಧಿವ್ರತವನ್ನಾಚರಿಸಿ ಮಡಿದವರ ಗೌರವಾರ್ಥ ಮಾನಸ್ತಂಭಗಳ ಸ್ವರೂಪದಲ್ಲಿ ನಿಸಿಧಿಗಳನ್ನು ನಿರ್ಮಿಸುವುದು; (2) ಬೆಳ್ಗೊಳದಲ್ಲಿ ನಿಸಿಧಿ ಗೌರವ ಗಳಿಸಲು ಇಲ್ಲಿಯೇ ವ್ರತವನ್ನಾಚರಿಸಬೇಕೆಂಬ ಕಡ್ಡಾಯವಿಲ್ಲದಿರುವುದು; (3) ಸಮಾಧಿ ಮರಣಾರ್ಥಿಗಳನ್ನು ಸಾಂಕೇತಿಕವಾಗಿ ಗೌರವಿಸುವುದು, ಪ್ರಮುಖವಾಗಿದ್ದವು. ಅಂದರೆ ಕಾಯಕ್ಲೇಶ ಕೈಕೊಂಡ ಸ್ಥಳದಲ್ಲಿಯೇ ನಿಸಿಧಿಗಳನ್ನು ನಿರ್ಮಾಣ ಮಾಡಬೇಕೆಂಬ ಸಂಪ್ರದಾಯವು ಈ ಕಾಲಕ್ಕಾಗಲೇ ಸಾಕಷ್ಟು ಸಡಿಲಗೊಂಡಿತ್ತೆಂದು ಅರ್ಥ.

---

34. ಎ ಕ II, 64.

ಬಂಕಾಪುರದಲ್ಲಿ ಸಾವನ್ನಪ್ಪಿದ ಮಾರಸಿಂಹನಿಗೆ ಬೆಳ್ಗೊಳದ ಪವಿತ್ರ ಸ್ಥಳದಲ್ಲಿ ನಿಸಿಧಿಯನ್ನು ನಿಲ್ಲಿಸಲು ಇದರಿಂದ ಸುಲಭಸಾಧ್ಯವಾಯಿತೆಂದು ತೋರುವುದು. ಅಲ್ಲದೆ, ತನ್ನ ಸ್ವಂತ ಕೊಡುಗೆಗಳಿಂದ ಬೆಳೆಸಿ, ಅದರ ಪಾವಿತ್ರ್ಯತೆಯನ್ನು ಇಮ್ಮಡಿ-ಮುಮ್ಮಡಿಗೊಳಿಸಿದ ಇವನಿಗೆ ಬೆಳ್ಗೊಳದಲ್ಲಿಯೇ ನಿಸಿಧಿ ನಿಲ್ಲಿಸಿ ಗೌರವಿಸುವುದು ಅತ್ಯಂತ ಸಮರ್ಪಕವೂ ಸ್ತುತ್ಯವೂ ಎನಿಸಿರಲು ಸಾಕು.


ಚಾಗದ ಕಂಬ : ದೊಡ್ಡಬೆಟ್ಟದ ಮೇಲೆ ಚಾವುಂಡರಾಯನ ಗೌರವಾರ್ಥ ನಿಲ್ಲಿಸಿದ 'ಚಾಗದ ಕಂಬ'ವೂ ಇದೇ ವರ್ಗಕ್ಕೆ ಸೇರಿದ ಮತ್ತೊಂದು ಮಾದರಿ. ಇದಕ್ಕಿರುವ ಇನ್ನೊಂದು ಹೆಸರು 'ಚಾಗದ ಬ್ರಹ್ಮದೇವ ಸ್ತಂಭ' ಎಂದು. ಇಲ್ಲಿಯ ಬ್ರಹ್ಮದೇವ ಕಲ್ಪನೆಯೂ ನಮ್ಮ ಅಪೂರ್ಣ ಜ್ಞಾನದ ಪರಿಣಾಮದ್ದಾಗಿದೆ; ಏಕೆಂದರೆ ಸ್ತಂಭವನ್ನು ಅಲಂಕರಿಸುವ ಮೂರ್ತಿಯು ಇಲ್ಲಿಯೂ ಬ್ರಹ್ಮನದಾಗಿರದೆ ಸರ್ವಾಹ್ನ ಯಕ್ಷನದ್ದಾಗಿದೆ.

ಈ ಸ್ತಂಭವನ್ನು 10ನೆಯ ಶತಮಾನದಲ್ಲಿ ನಿಲ್ಲಿಸಲಾಯಿತು; ಆದರೆ ಇದರ ಶಿಖರಾಗ್ರವನ್ನು ಅಲಂಕರಿಸಿರುವ ಯಕ್ಷವಿಗ್ರಹವು 13ನೆಯ ಶತಮಾನದ್ದಾಗಿದ್ದು, ಸಭಾಮಂಟಪವು 17ನೆಯ ಶತಮಾನದ್ದಾಗಿದೆ. ಹೆಗ್ಗಡೆ ಕಣ್ಣನೆಂಬವನು ಸುಮಾರು 1200ರಲ್ಲಿ ಈ ಯಕ್ಷನ ಮೂರ್ತಿಯನ್ನು ಪ್ರತಿಷ್ಠಾಪಿಸಿದನಲ್ಲದೆ, ಪ್ರಥಮ ಬಾರಿಗೆ ಈ ಸ್ತಂಭವನ್ನು 'ಚಾಗದ ಕಂಬ' ಎಂದು ಗುರುತಿಸಿದನು. ಆದರೆ, 10ನೆಯ ಶತಮಾನದಲ್ಲಿ ಇದನ್ನು ಯಾವ ಹೆಸರಿನಿಂದ ಕರೆಯಲಾಗುತ್ತಿತ್ತೆಂಬುದು ನಮಗೆ ತಿಳಿಯದು.


ಈ ಎಲ್ಲ ವಿವರಗಳಿಂದ ಸ್ಪಷ್ಟಗೊಳ್ಳುವುದೇನೆಂದರೆ - (1) ಸುಮಾರು 10ನೆಯ ಶತಮಾನದಲ್ಲಿ ಈ ಕಂಬವು ಮಾನಸ್ತಂಭದಂತೆ ಬಯಲಿನಲ್ಲಿ ನಿಂತಿತ್ತು; (2) ಯಕ್ಷನ ವಿಗ್ರಹವನ್ನು ಅದರ ಮೇಲಿರಿಸಿ ಅದರ ಸ್ವರೂಪವನ್ನು ಸುಮಾರು 1200ರಲ್ಲಿ ಗಣನೀಯವಾಗಿ ಬದಲಾಯಿಸಲಾಯಿತು; (3) ಸುಮಾರು 500 ವರ್ಷಗಳಾದ ನಂತರ, ಈ ಕಂಬದ ಸುತ್ತ ಒಂದು ಮಂಟಪವನ್ನು ಕಟ್ಟಿ, ಅದರ ಸ್ವರೂಪವನ್ನು ಮತ್ತಷ್ಟು ಮಾರ್ಪಾಟು ಮಾಡಲಾಯಿತು. ಈ ಮೂರು ಹಂತಗಳ ಬೆಳವಣಿಗೆಯನ್ನು ಶಾಸನದ ಆಧಾರಗಳಲ್ಲದೆ ವಾಸ್ತುಶಿಲ್ಪ ಲಕ್ಷಣಗಳೂ ಸಮರ್ಥಿಸುವುವು.

ಏನನ್ನು ತ್ಯಾಗಮಾಡಲಾಯಿತು ? : 10ನೆಯ ಶತಮಾನದಲ್ಲಿ ಚಾಗದ ಕಂಬ ಎಂದು ಕರೆದಿರಲಿ ಬಿಡಲಿ, 13ನೆಯ ಶತಮಾನದಲ್ಲಿ ಇದಕ್ಕೆ ಕೊಡಲಾದ 'ಚಾಗ' ಪದದ ಮಹತ್ವವನ್ನು ತಿಳಿಯುವುದವಶ್ಯ. ಚಾವುಂಡರಾಯನು ಇಲ್ಲಿಂದ ದಾನಗಳನ್ನು ವಿತರಿಸುತ್ತಿದ್ದುದರಿಂದ ಚಾಗದ ಮಂಟಪ ಎಂಬ ಹೆಸರು ರೂಢಿಗೆ ಬಂತೆಂದು ಒಂದು ಐತಿಹ್ಯವಿದೆ. ಮಂತ್ರಿ ಚಾವುಂಡರಾಯನು ಈ ಕೇಂದ್ರದ ಶಾಶ್ವತ ನಿವಾಸಿಯಾಗಿದ್ದು ಪ್ರತಿನಿತ್ಯ ಇಲ್ಲಿ ದಾನಕಾರ್ಯದಲ್ಲಿ ತೊಡಗಿರಲು

ಸಾಧ್ಯವಿಲ್ಲದಿದ್ದರೂ ಈ ಕಾರ್ಯವನ್ನು ಸಾಂಕೇತಿಕವಾಗಿ ಇಲ್ಲಿ ಗುರತಿಸಿರಬಹುದೆಂದು ಗ್ರಹಿಸಬಹುದು. ಆದರೆ 10ನೆಯ ಶತಮಾನದ ಬೆಳ್ಗೊಳದಲ್ಲಿ ಜನವಸತಿಯೇನೂ ಅಷ್ಟು ಇರಲಿಲ್ಲ; ಅಲ್ಲದೆ, ಇಲ್ಲಿದ್ದ ಶ್ರಮಣರು ತಮ್ಮ ಉದರ ಪೋಷಣೆಗೆ ರಾಜಮನೆತನದವರಿಂದ ದಾನಗಳನ್ನು ಯಾಚಿಸುವಂತವರೂ ಆಗಿರಲಿಲ್ಲ.



'ಚಾಗ'ಅಥವಾ 'ತ್ಯಾಗ' ಪದದ ಅಕ್ಷರಾರ್ಥ 'ತ್ಯಜಿಸು', 'ತೊರೆ', 'ಎಸೆ', 'ವಿತರಿಸು' ಎಂದು. ಚಾವುಂಡರಾಯ ಐಹಿಕ ಬಂಧನಗಳಿಂದ ಬಿಡಿಸಿಕೊಂಡು ಅಂತ್ಯ ಸಾಧಿಸಿದ ಸ್ಥಳವನ್ನು ಸಾಂಕೇತಿಕವಾಗಿ ಗುರುತಿಸಲು ಅವನ ಬಂಧುಬಾಂಧವರು ಈ ಸ್ತಂಭವನ್ನು ನಿರ್ಮಿಸಿದರೆಂದು ತೋರುವದು. ಈ ವಾದವನ್ನು ಒಪ್ಪುವುದಾದರೆ, 'ಚಾಗ'ಪದವು ಇಲ್ಲಿ ಅವನು ಸಂಪತ್ತನ್ನು ವಿತರಿಸಿದ್ದನ್ನು ಸೂಚಿಸದೆ, ಜೀವನವನ್ನು ತೊರೆದುದನ್ನು ಸೂಚಿಸುವುದೆಂದರೆ ಹೆಚ್ಚು ಸಮಂಜಸವೆನಿಸುವುದು. ಹೀಗಿದ್ದರೂ, ಈ ವ್ಯಾಖ್ಯಾನಕ್ಕೆ ತೀರಾ ಒತ್ತುಕೊಡುವಂತಿಲ್ಲ; ಏಕೆಂದರೆ, ಚಾವುಂಡರಾಯನು ಸಮಾಧಿಮರಣದಿಂದ ಸಾವನ್ನಪ್ಪಿದನೆಂಬ ಉಲ್ಲೇಖವು ಯಾವ ಆಕರದಲ್ಲೂ ಇಲ್ಲ.



42 ಚಾಗದಕಂಬ ಮತ್ತು ಚಾವುಂಡರಾಯನ ಆರಾಧನಾ (388)

ಶಾಸನದ ಸ್ತವನ ಭಾಗ ಮತ್ತು ಸ್ತಂಭದ ಮೇಲಿನ ಉಬ್ಬು ಶಿಲ್ಪಗಳು ಚಾವುಂಡರಾಯನು ತನ್ನ ಪತ್ನಿಯೊಡಗೂಡಿ ಗುರುಗಳಿಂದ ಆರಾಧನಾ ದೀಕ್ಷೆಯನ್ನು ಪಡೆಯುತ್ತಿರುವುದನ್ನು ಪ್ರತಿಬಿಂಬಿಸುವುದು. ಈಗ ಅಳಿಸಿಹೋಗಿರುವ ಶಾಸನಾಂತ್ಯದಲ್ಲಿ ಅವನ ಮರಣದ ಪ್ರಸ್ತಾಪವಿತ್ತೋ ಇಲ್ಲವೋ ಎಂಬುದನ್ನು ಊಹಿಸಿ ಮಾತ್ರ ನಿರ್ಧರಿಸಬೇಕಾಗಿದೆ. ಸಾಮಾನ್ಯವಾಗಿ ಮರಣದ ಪ್ರಸ್ತಾಪವು ನಿಸಿಧಿ ಶಾಸನಗಳ ಅಂತ್ಯ ಭಾಗದಲ್ಲಿ ಬರುವುದರಿಂದ ಮೂಲದಲ್ಲಿ ಇದರ ಪ್ರಸ್ತಾಪವಿತ್ತೇನೋ ಅನ್ನುವ ಅನುಮಾನಬಾರದಿರದು.

ಒದೆಗಲ್ಲು ಬಸದಿಯ ಪಶ್ಚಿಮಕ್ಕೆ ಮತ್ತು ಅಖಂಡ ಬಾಗಿಲಿನ ಸೋಪಾನ ಪಂಕ್ತಿಯ ಉತ್ತರ-ಪೂರ್ವಕ್ಕೆ ತ್ಯಾಗದ ಮಂಟಪವಿದೆ. ಒರಟಾದ ತಳಬಂಡೆಯ ಅಸಮ ಬೆನ್ನಮೇಲೆ ಇದನ್ನು ಕಟ್ಟಲಾಗಿದ್ದು, ಬಂಡೆಗಲ್ಲಿನ ಉತ್ತರ ಇಳುಕಲನ್ನು ಕಲ್ಲುಚಪ್ಪಡಿಯನ್ನಿಟ್ಟು ಸಮಗೊಳಿಸಲಾಗಿದೆ. ಅನುಕ್ರಮದ ಹಂತಗಳಲ್ಲಿ ಮೂರು ಕಾರ್ನೀಸುಗಳಿದ್ದರೆ, ದ್ವಾದಶ ಮೂಲೆಗಳ ವೇದಿಕೆಯು ಚೌಕಾಗಿದೆ. ಜಗಲಿಯ ಮಧ್ಯದಲ್ಲಿ ನಿಂತಿರುವ 11' ಎತ್ತರದ ಕಂಬದ ಪ್ರಮುಖ ಅಂಗಗಳು ಇಂತಿವೆ : 1' ಎತ್ತರದ ಉಪಪೀಠ, 2' ಎತ್ತರದ ಘನಾಕೃತಿಯ ಪೀಠ, 6'ಎತ್ತರದ ಅಲಂಕೃತ ಶಲಾಖೆ ಮತ್ತು 2' ಎತ್ತರದ ಕುಂಭಾಕಾರದ ಶಿಖರಾಗ್ರ. ಮಂಟಪದ ಜಗಲಿಯನ್ನು ಅನುಸರಿಸಿಯೇ ಉಪಪೀಠ ನಿಂತಿದೆ; ಅದರ ನಾಲ್ಕು ದಿಕ್ಕಿನಲ್ಲಿ ನಾಲ್ಕು ಗಜಗಳಿದ್ದು ಮಧ್ಯದಲ್ಲಿ ಎಂಟು ಸಿಂಹ ಮೂರ್ತಿಗಳಿವೆ. ಘನಾಕೃತಿಯ ಪೀಠದಲ್ಲಿ ಎರಡು ಶಾಸನಗಳನ್ನು ಕಂಡರಿಸಲಾಗಿದೆ. ಇವುಗಳಲ್ಲಿ ಒಂದು ಚಾವುಂಡರಾಯನದು.

ಅರಸ ಇಂದ್ರನ ಪರವಾಗಿ ಜಗದೇವವೀರನನ್ನೊಡಗೂಡಿ ನೊಳಂಬರಾಯನ ವಿರುದ್ಧ ಮಾಡಿದ ಚಾವುಂಡರಾಯನ ಸಾಹಸದ ವೃತ್ತಾಂತವನ್ನಿಲ್ಲಿ ವರ್ಣಿಸಲಾಗಿದೆ. ಬ್ರಹ್ಮಕ್ಷಾತ್ರಕುಲವೆಂಬ ಸಾಗರದ ತೆರೆಗಳನ್ನು ಚಂದಿರನು ಉಕ್ಕೇರಿಸುವಂತೆ, ರಣಸಿಂಗನ ಸೈನ್ಯವನ್ನು ಹೊಡೆದೋಡಿಸಿ ಗಂಗ ಶಕ್ತಿಯು ಭೋರ್ಗರೆಯುವಂತೆ ಚಾವುಂಡರಾಯನು ಮಾಡಿದನೆನ್ನುವ ಈ ಶಾಸನವು ವೀರಗಲ್ಲಿನ ಧ್ವನಿಯನ್ನು ಮಾರುಲಿಸಿ, ವೀರನ ಸಾಹಸವನ್ನೂ, ಸ್ವರ್ಗದಲ್ಲಿ ಅವನ ಆಗಮನಕ್ಕಾಗಿ ಕಾಯುತ್ತಿದ್ದ ಅಪ್ಸರೆಯರನ್ನೂ ಪ್ರಸ್ತಾಪಿಸುವುದು. ಪ್ರತಿ ಯುದ್ಧದಲ್ಲೂ ಜಯ ಸಾಧಿಸಿ, ಜವರನ ಪಾಶದಿಂದ ತಪ್ಪಿಸಿಕೊಳ್ಳುತ್ತಿದ್ದ ಚಾವುಂಡರಾಯನನ್ನು ಕಂಡು 'ಈ ವೀರನ ಕೊರಳನ್ನು ಆಲಿಂಗಿಸಲು'ಕಾತರರಾಗಿದ್ದ ಅಪ್ಸರೆಯರಿಗೆ ಒಂದು ಬಗೆಯ ಜಿಗುಪ್ಸೆಯುಂಟಾಗಿತ್ತಂತೆ! ಅನೇಕ ಯುದ್ಧಗಳ ಈ ವೀರನ ಕತ್ತನ್ನು ಮುತ್ತಿಡಲು ಸಾಧ್ಯವಾಗದ ಆ ದೇವಕನ್ನೆಯರು ಚಾವುಂಡರಾಯನು ಸ್ವರ್ಗಕ್ಕಟ್ಟುತ್ತಿದ್ದ ಶತ್ರುಗಳನ್ನು ಆಹ್ವಾನಿಸುತ್ತಾ, ಅವನು ಸುರಿಸಿದ 'ಖಡ್ಗಧಾರಾ ಜಲದಿಂದ' ಮಾತ್ರ ತೃಪ್ತಿ ಪಟ್ಟುಕೊಳ್ಳಬೇಕಾಯಿತಂತೆ!

ಸ್ತಂಭಪೀಠದಲ್ಲಿ ಕೊರೆದ ಈ ಶಾಸನವು ಇಪ್ಪತ್ತನೆಯ ಸಾಲಿನ ನಂತರ ಹಠಾತ್ತಾಗಿ

ನಿಂತುಹೋಗುವುದು. ಇದಕ್ಕೆ ಎರಡು ಕಾರಣಗಳನ್ನು ಕೊಡಬಹುದು: ಒಂದು, ಯಾವುದೋ ಕಾರಣದಿಂದ ಕಂಡರಣೆಯನ್ನು ಹಠಾತ್ತಾಗಿ ನಿಲ್ಲಿಸಬೇಕಾದ ಪ್ರಸಂಗ ಉದ್ಭವಿಸಿರಬಹುದು; ಎರಡು, ತನ್ನನ್ನೇ ತಾನು ಉದ್ಘೋಷಿಸಿಕೊಳ್ಳಲೋಸುಗ ಸ್ಥಳಾವಕಾಶ ಮಾಡಿಕೊಳ್ಳಲೆತ್ನಿಸಿದ ಹೆಗ್ಗಡೆ ಕಣ್ಣನು ಈ ಶಾಸನದ ಮುಕ್ತಾಯ ಭಾಗವನ್ನು ಅಳಿಸಿಹಾಕಿಸಿರಬಹುದು. ಎರಡನೆಯ ವಿವರಣೆಯು ಈಗ ವ್ಯಾಪಕವಾಗಿ ಪ್ರಚಾರದಲ್ಲಿದ್ದರೂ, ಅದು ನಂಬಲರ್ಹವಾದುದಲ್ಲ- ಏಕೆಂದರೆ, ಚಾವುಂಡರಾಯನು ಬರೆಸಿದ ಶಾಸನವನ್ನು ಅಳಿಸಿಹಾಕುವಂತಹ ಅನೈತಿಕ ಕಾರಣ ಹೆಗ್ಗಡೆ ಕಣ್ಣನಿಗಿರಲಿಲ್ಲ. ಅಲ್ಲದೆ, ಅಂತಹ ಕಾರ್ಯವನ್ನು ಕೈಕೊಳ್ಳುವ ನೈತಿಕ ಅಧೋಗತಿಯನ್ನೂ ಈ ದಾನಿ ಮುಟ್ಟಿದವನಾಗಿರಲಿಲ್ಲ. ಪೂರ್ವಜರ ಶಾಸನಗಳನ್ನು ನಾಶಪಡಿಸುವುದೊಂದು ಮಹಾಪಾಪಕರ್ಮವೆಂದು ಸಾರ್ವತ್ರಿಕವಾಗಿ ಭಾವಿಸಲಾಗಿದ್ದ ಕಾಲದಲ್ಲಿ, ಬೆಳ್ಗೊಳವನ್ನು ಬೆಳೆಸಿ, 'ರಾಯ'ಶ್ರೇಷ್ಠನೆನಿಸಿದ ಚಾವುಂಡರಾಯನ ಅಗ್ಗಳಿಕೆಯನ್ನು ಮೆರೆಯುವ ಶಾಸನವನ್ನು ಅಳಿಸಿಹಾಕುವ ಧಾರ್ಷ್ಟ್ಯವನ್ನು 'ಬುದ್ಧಿಮತ್ತೆ ಹಾಗೂ ಪ್ರಗಲ್ಭ ಸದ್ಗುಣಿ' ಗಳ ಗಣೆಯನಿಸಿದ ಹೆಗ್ಗಡೆ ಕಣ್ಣನು ತೋರಿಸಿದನೆಂಬುದನ್ನು ನಂಬಲಾಗದು.

ಮಾರಸಿಂಹ ನಿಸಿಧಿ - ಮಾನಸ್ತಂಭದೊಂದಿಗೆ ತುಲನೆ : ಚಾಗದ ಕಂಬದ ಶಾಸನವು ನಿಸಿಧಿ ಸ್ಮಾರಕಗಳ ಶಾಸನಗಳನ್ನು ಹೋಲುವುದೆನ್ನುವುದರಲ್ಲಿ ಅನುಮಾನವಿಲ್ಲ. ಮಾರಸಿಂಹನ ನಿಸಿಧಿ ಮಾನಸ್ತಂಭದೊಡನೆ ಹೋಲಿಸಿನೋಡಿದಾಗ ಇದು ಸ್ಪಷ್ಟಗೊಳ್ಳುವುದು. ಈ ಎರಡೂ ಶಾಸನ ಪಾಠಗಳು ವೀರಗಲ್ಲಿನ ಧ್ವನಿ ಪಡೆದಿವೆ. ಏಕೆಂದರೆ, ಈ ಶಾಸನಗಳ ಪ್ರಧಾನ ಪುರುಷರು ರಾಜ್ಯಾಡಳಿತೆಯಲ್ಲಿ ಭಾಗಿಗಳಾಗಿದ್ದು, ತಮ್ಮ ಲೌಕಿಕ ಜೀವಿತಾವಧಿಯಲ್ಲಿ ಅನೇಕ ಬಾರಿ ಜಯಸಾಧಿಸಿ, ಕೀರ್ತಿಗಳಿಸಿಕೊಂಡವರಾಗಿದ್ದರು. ವಜ್ಜಿಲದೇವ, ನೊಳಂಬರಾಜ ಮತ್ತು ರಣಸಿಂಘರೊಂದಿಗೆ ಮಾಡಿದ ಯುದ್ಧಗಳಿಂದ ಚಾವುಂಡರಾಯನ ಹೆಸರು ಅವನ ಪ್ರಭುವಿಗೆ, ಪ್ರಭುವಿನ ಮಿತ್ರರಿಗಲ್ಲದೆ, ಸ್ವತಃ ಅವನಿಗೂ ಅಪಾರ ಸಂತಸ ತಂದಿತ್ತು; ಆದರೆ ಈ ವೀರನ ಕೊರಳನ್ನಪ್ಪಲು ಕಾತುರರಾಗಿದ್ದ ಅಪ್ಸರೆಯರಿಗೆ ಮಾತ್ರ ಅದು ನಿರಾಶೆಯನ್ನುಂಟುಮಾಡಿತ್ತು. ಚಾವುಂಡರಾಯನು 'ಅರಿ ರಾಜರನ್ನು ದೇವತೆಗಳನ್ನಾಗಿ ಮಾರ್ಪಡಿಸಿ' ಅವರಿಗೆ ಮುಕ್ತಿಯನ್ನು, ಅಪ್ಸರೆಯರಿಗೆ ಅಲ್ಪ ತೃಪ್ತಿಯನ್ನು ತಂದಿದ್ದನೆಂದು ಕವಿ ವರ್ಣಿಸಿರುವನು. ಘೋರವೂ, ನಿರ್ಣಾಯಕವೂ ಆಗಿದ್ದ ಚಾವುಂಡರಾಯನ ಯುದ್ಧಗಳು ಪಿಶಾಚಿಗಳಿಗೆ ಮಾತ್ರ ಸತತವಾಗಿ ಹಬ್ಬದೂಟವನ್ನು ಒಡಿಸುತ್ತಿದ್ದವು, ''ರತ್ನಖಚಿತ ಬಟ್ಟಲುಗಳಾಗಿದ್ದ ವೀರರ ಕಪಾಲದಿಂದ ಶೂರರ ರಕ್ತವನ್ನು ಸಂಭ್ರಮದಿಂದ ಕುಡಿಯಲು'' ಅವುಗಳು ಸದಾ ಆತುರವಾಗಿರುತ್ತಿದ್ದವಂತೆ!

ಚಾವುಂಡರಾಯನ ಕಲಿಜೀವನದ ಅವರೋಹಣವನ್ನು ಶಾಸನದ ಮುಕ್ತಾಯದ ವಾಕ್ಯಗಳಲ್ಲಿ ಕಂಡುಕೊಳ್ಳಬಹುದಿತ್ತೇನೋ; ಆದರೆ, ಅದು ಅಳಿಸಿರುವುದರಿಂದ ಈಗ ಸಾಧ್ಯವಾಗುತ್ತಿಲ್ಲ. ಸ್ತಂಭದ ಪೀಠಭಾಗದಲ್ಲಿ ಸವೆದ ಐದು ಮಾನವಾಕೃತಿಗಳಿದ್ದು ಅವು ಇದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲುವುವು. ಇಲ್ಲಿ ಅರ್ಧಾಸನದಲ್ಲಿರುವವನನ್ನು

ಚಾವುಂಡರಾಯನೆಂದು, ಬಲಕ್ಕಿರುವವಳನ್ನು ಅವನ ಅರಸಿ ಎಂದು, ಮತ್ತು ಆರಾಧನಾ ಗ್ರಂಥವನ್ನು ಹಿಡಿದಿರುವವನನ್ನು ಅವನ ಗುರುವೆಂದು, ಗುರುತಿಸಬಹುದು. ಚಾವುಂಡರಾಯನ ಹಿಂದೆ ನಿಂತಿರುವ ಚಾಮರಧಾರಿಗಳು ಅವನ ಪರಿಚಾರಕ ವರ್ಗಕ್ಕೆ ಸೇರಿದವರಾಗಿದ್ದರೆಂಬುದರಲ್ಲಿ ಅನುಮಾನವಿಲ್ಲ. ಇವನು ತನ್ನ ಎಡಗೈಯನ್ನು ಲಂಬಹಸ್ತದಲ್ಲಿಟ್ಟು, ಬಲಗೈಯಿಂದ ಮುದ್ರೆ (ಅಥವಾ ಕಮಲ ಹಿಡಿದಿರುವ) ಯೊಂದನ್ನು ಸೂಚಿಸುತ್ತಿರುವನು. ಆರಾಧನಾ ಗ್ರಂಥವನ್ನು ಬಲಗೈಯಲ್ಲಿ ಹಿಡಿದಿರುವ ಅವನ ಗುರುವಿನ ಮತ್ತೊಂದು ಹಸ್ತವು ವ್ಯಾಖ್ಯಾನ ಮುದ್ರೆಯಲ್ಲಿದೆ. ಠವಣಿಕೆ ಇಲ್ಲದಿರುವುದರನ್ನು ಬಿಟ್ಟರೆ ಎಲ್ಲ ಬಗೆಯಲ್ಲೂ ಇದು 'ನಿಸಿಧಿ' ಕಂಬದ ಉಬ್ಬುಶಿಲ್ಪಗಳನ್ನು ಹೋಲುವುದು. ತನ್ನ ಐಹಿಕ ಸುಖಗಳನ್ನು ತ್ಯಜಿಸುವ ಮುನ್ನ ಸಾಧಕನು ಗುರುವಿನಿಂದ ದೀಕ್ಷೆ ಮತ್ತು ಬೋಧನೆ ಪಡೆದುಕೊಳ್ಳುವುದನ್ನು ಸೂಚಿಸುವುದೆ ಈ ಉಬ್ಬು ಶಿಲ್ಪದ ಪ್ರಮುಖ ಉದ್ದೇಶವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ.

ಈ ಕಂಬದಲ್ಲಿಯ ಶಿಲ್ಪ ವಿಶೇಷತೆಯನ್ನು ಸುರುಳಿಯಲಂಕಾರದ ಶಲಾಕೆಯಲ್ಲಿ ಕಾಣಬಹುದು. ಒಂದೊಂದು ಮುಖದಲ್ಲಿರುವ ಐದು ಪದ್ಮ ಸುರುಳಿಗಳು, ಶಲಾಕೆಯ ನಾಲ್ಕು ಮುಖಗಳನ್ನು ಆವರಿಸಿವೆ. ಆಳವಾಗಿ, ಪ್ರಮಾಣಬದ್ಧವಾಗಿ, ಸುಂದರವಾಗಿ, ಕೊರೆದಿರುವ ಈ ಸುರುಳಿಗಳು ಗಂಗರೂವಾರಿಗಳ ಸೃಜನ ಕಲ್ಪನೆಯನ್ನು, ಕಲಾ ನೈಪುಣ್ಯತೆಯನ್ನು, ಸಮರ್ಥವಾಗಿ ಪ್ರತಿಬಿಂಬಿಸಿವೆ. ಶಲಾಕದಲ್ಲಿ ಕೊರೆದ ದಟ್ಟವಾದ ಲತಾ-ಪುಷ್ಪಗಳ ಪಟ್ಟಿಕೆಗೆ ಭಿನ್ನವೆನಿಸುವಂತೆ, ಸ್ತಂಭದ ಶಿಖರಾಗ್ರವು ಅರೆಕುಂಭಾಕೃತಿಯನ್ನು ಹೊಂದಿದ್ದು ಶಿಲ್ಪವಿಮುಕ್ತವಾಗಿದೆ. ಇದು ಗಂಗಕಾಲದಲ್ಲಿ ಬಳಕೆಯಲ್ಲಿದ್ದ ಸ್ತಂಭಗಳ ಮಾದರಿಯನ್ನನುಸರಿಸಿರುವುದನ್ನು ಚಿಕ್ಕಬೆಟ್ಟದ ಬಸದಿಗಳ ಕಂಬಗಳ ಆಧಾರದಿಂದ ಮನವರಿಕೆ ಮಾಡಿಕೊಳ್ಳಬಹುದು.

ಈ ಸ್ತಂಭಕ್ಕೆ ಕಾಲಾಂತರದಲ್ಲಿ ಸೇರಿಸಲಾದ ಮಂಟಪವು ವಾಸ್ತುಶಿಲ್ಪೀಯ ದೃಷ್ಟಿಯಲ್ಲಿ ಅಷ್ಟೊಂದು ಗಮನ ಸೆಳೆಯುವ ಅಂಗವಾಗಿಲ್ಲ. ಇಲ್ಲಿಯ ನಾಲ್ಕು ಕಂಬಗಳೂ ಘನಾಕೃತಿಯಲ್ಲಿದ್ದು, ಅವುಗಳನ್ನು ಅಷ್ಟಮುಖ ಪಟ್ಟಿಕೆಗಳು ವಿಂಗಡಿಸಿವೆ. ಮೇಲಂತಸ್ತನ್ನು ಇಟ್ಟಿಗೆ-ಗಾರೆಯಿಂದ ಕಟ್ಟಲಾಗಿದ್ದು ಅಲ್ಲಿ ಕಲೆಯ ಕೊರತೆಯು ಎದ್ದುಕಾಣುವುದು. ಮೇಲ್ಮನೆಯಲ್ಲಿ ಒಂದು ಮೂರ್ತಿ ಇದೆ. ಅದರ ಒಂದು ಹಸ್ತದಲ್ಲಿ ಪದ್ಮವಿದ್ದರೆ ಇನ್ನೊಂದರಲ್ಲಿ ಫಲವಿದೆ. ಸುಮಾರು 1200ರಲ್ಲಿ ಈ ವಿಗ್ರಹವನ್ನು ಹೆಗ್ಗಡೆ ಕಣ್ಣನು ಪ್ರತಿಷ್ಠಾಪಿಸಿದನೆಂದು ಶಾಸನವು ತಿಳಿಸುವುದು. ಈ ಮೂರ್ತಿಯು ಹೊಯ್ಸಳ ಶೈಲಿಯಲ್ಲಿದ್ದು ಆ ಸಂಪ್ರದಾಯಿಕ ಲಕ್ಷಣಗಳನೆಲ್ಲವನ್ನು ಪಡೆದಿದೆ. ಕಣ್ಣನು ಪ್ರತಿಷ್ಠಾಪಿಸಿದ ಈ ಯಕ್ಷನ ಮೂರ್ತಿಯು ಐನೂರು ವರ್ಷಕಾಲ ಬಯಲಿನಲ್ಲಿಯೇ ಇತ್ತು; ಸುಮಾರು 17ನೆಯ ಶತಮಾನದಲ್ಲಿ ಕಟ್ಟಿದ ಮೇಲಂತಸ್ತಿನಿಂದಾಗಿ ಈ ಮುಂಟಪವು ಮಂದಿರ ಸ್ವರೂಪ ಪಡೆದುಕೊಂಡಿತು.

ಕೂಗೆಬ್ರಹ್ಮದೇವಸ್ತಂಭವನ್ನು ಗಂಗಮಾರಸಿಂಹನ ಗೌರವಾರ್ಥ ನಿಲ್ಲಿಸಿದಂತೆ, ಚಾವುಂಡ ರಾಯನ ಧರ್ಮನಿಷ್ಠೆಯ ಅಂತ್ಯವನ್ನು ಸಾಂಕೇತಿಸಲು ಚಾಗದ ಕಂಬವನ್ನು ನಿರ್ಮಿಸಲಾಯಿತೇನೋ. ಮಾರಸಿಂಹನಂತೆ ಚಾವುಂಡರಾಯನ ಮರಣವೂ ಬೆಳ್ಗೊಳದ ಹೊರಗೆ ಸಂಭವಿಸಿರಲು ಸಾಧ್ಯ. ಆದರೆ ಇವರಿಬ್ಬರನ್ನೂ ಈ ಪುಣ್ಯ ಕ್ಷೇತ್ರದಲ್ಲಿ 'ನಿಸಿಧಿ ಮಾನಸ್ತಂಭ'ದಿಂದ ಮತ್ತು 'ಚಾಗದ ಕಂಬ'ದಿಂದ ಅನುಕ್ರಮವಾಗಿ ಗೌರವಿಸಲಾಯಿತು. 1200 ಕ್ಕಿಂತ ಮುಂಚೆ ಪ್ರಚಾರದಲ್ಲಿದ್ದ ಚಾವುಂಡರಾಯ ಸ್ತಂಭದ ಹೆಸರಿನ ಬಗ್ಗೆ ನಮಗೆ ಏನೂ ತಿಳಿಯುತ್ತಿಲ್ಲ. ಆದರೆ, ಹೆಗ್ಗಡೆ ಕಣ್ಣನು ಕೊಟ್ಟ 'ಚಾಗ'ಪ್ರತ್ಯಯವು ಆಗಲೇ ಪ್ರಸಾರದಲ್ಲಿದ್ದ ಪದದಿಂದ ಪಡೆದದ್ದಾಗಿತ್ತೆಂದರೆ ತಪ್ಪಾಗಲಿಕ್ಕಿಲ್ಲ. ಈ ಮೂಲಕ ತನ್ನ ಪ್ರಸಿದ್ಧ ಪೂರ್ವಜನ ಹೆಸರನ್ನು ಚಿರಸ್ಮರಣೀಯಗೊಳಿಸಿದ ಕೀರ್ತಿ ಮಾತ್ರ ಹೆಗ್ಗಡೆ ಕಣ್ಣನಿಗೆ ಸಲ್ಲುವುದು

ಧಾರ್ಮಿಕ ಹಾಗೂ ಸಾಮಾಜಿಕ ಘನತೆಗಳಿಸಿಕೊಂಡ ಗುಡ್ಡರ ಗೌರವಾರ್ಥ ನಿರಾಲಂಬ (ಮಾನ)ಸ್ತಂಭಗಳನ್ನು ನಿಲ್ಲಿಸುವ ಸಂಪ್ರದಾಯವು ಹೆಚ್ಚೂಕಡಿಮೆ ಗಂಗಮಾರಸಿಂಹ ಮತ್ತು ಚಾವುಂಡರಾಯ ಸ್ಮಾರಕಗಳೊಂದಿಗೆ, 10ನೆಯ ಶತಮಾನದಲ್ಲಿ, ಅಂತ್ಯಗೊಂಡಿತೆಂದು ತೋರುವುದು.

3) ದೇವಾಲಯದಲ್ಲಿ ಪ್ರತಿಷ್ಠಾಪಿಸಿದ ನಿಸಿಧಿ ಕಂಬಗಳು : ಶಾಸನಿತ ನಿಸಿಧಿಗಳಲ್ಲಿಯೇ ಗಮನಾರ್ಹವಾದವುಗಳೆಂದರೆ ದೇವಾಲಯಗಳಲ್ಲಿ ಪ್ರತಿಷ್ಠಾಪಿಸಿದ ನಿಸಿಧಿ ಕಂಬಗಳು. ಸಾಮಾನ್ಯವಾಗಿ ಘನಾಕೃತಿಯಲ್ಲಿರುವ ಈ ಕಂಬಗಳ ಶಿಖರಾಗ್ರವು ಗುಮ್ಮಟ, ಪಿರಮಿಡೀಯ ಇಲ್ಲವೆ ಗೋಪುರಾಕಾರವನ್ನು ಪಡೆದಿರುವುದು. ಅಖಂಡ ಬಾಗಿಲಿನ ಬಲಬದಿಯ ಒಂದು ನಿಸಿಧಿಯನ್ನು ಹೊರತುಪಡಿಸಿ, ಇಲ್ಲಿಯ ಉಳಿದೆವೆಲ್ಲ ಸ್ಮಾರಕಗಳು ಶಾಸನಯುಕ್ತವಾಗಿದೆ. ಪೀಠ ಭಾಗದ ನಾಲ್ಕು ಮುಖಗಳನ್ನು ಸಾಮಾನ್ಯವಾಗಿ ಈ ಶಾಸನಗಳು ಆವರಿಸಿರುವುವು; ಆದರೆ, ಕೆಲವು ಸಂಕ್ಷಿಪ್ತವಾಗಿದ್ದು ಪೀಠದ ಒಂದೇ ಮುಖದಲ್ಲಿ ಅಂತ್ಯಗೊಂಡಿರುವುವು. ಇವುಗಳಲ್ಲಿ ಕೆಲವು ಸರಳವಾಗಿದ್ದರೆ, ಇನ್ನು ಕೆಲವು ನಯನಾಜೂಕಿನಿಂದೊಡಗೂಡಿ ತುಂಬಾ ಕಲಾತ್ಮಕವಾಗಿವೆ.

ನಿರಾವಲಂಬ ಮಾನಸ್ತಂಭಗಳಂತೆ, ಈ ನಿಸಿಧಿ ಕಂಬಗಳು ಬಟ್ಟಬಯಲಿನಲ್ಲಿರದೆ (ಅ) ಬಸದಿಗಳಲ್ಲಿ, ಇಲ್ಲವೆ (ಆ) ಪ್ರತ್ತೇಕ ಮಂಟಪಗಳಲ್ಲಿವೆ.

ಬಸದಿಗಳಲ್ಲಿಯ ಕಲಾತ್ಮಕ ಕಂಬಗಳಲ್ಲಿ ಪಾರ್ಶ್ವನಾಥ ಬಸದಿಯ ಮಲ್ಲಿಷೇಣ ಮುನಿಯ[35], ಸಿದ್ದರ ಬಸದಿಯ ಪಂಡಿತರಾಯ ಯತಿಯ[36] ಹಾಗೂ ಶ್ರುತಮುನಿಗಳ[37]

35. 77.
36. 360.
37. 364.

ಸ್ಮಾರಕಗಳು ಹೆಚ್ಚು ಆಕರ್ಷಕವಾಗಿವೆ. ಚಿಕ್ಕಬೆಟ್ಟದ ಕತ್ತಲೆ ಬಸದಿ,[38] ಜಿನನಾಥಪುರದ ಅರೆಗಲ್ಲು ಬಸದಿ[39] ಮತ್ತು ಬೆಳ್ಗೊಳ ಮಠದ ನಿಸಿಧಿ ಕಂಬಗಳೂ ವಿಶೇಷ ಐತಿಹಾಸಿಕ ಮಹತ್ವವನ್ನು ಪಡೆದ ಸ್ಮಾರಕಗಳಾಗಿವೆ.

ಚಿಕ್ಕಬೆಟ್ಟದ ಮೇಲಿರುವ ಎಲ್ಲಾ ಏಳು ಮಂಟಪಗಳನ್ನು 'ನಿಷಧ್ಯಾಲಯಾಃ' ಗಳಾಗಿ ಯೋಜಿಸಲಾಯಿತು. ಇವೆಲ್ಲ ತೆರೆದ ಮಂಟಪಗಳಾಗಿದ್ದು, ಇಲ್ಲಿ ಮೇಲ್ಛಾವಣಿಯನ್ನು ಹೊತ್ತ ನಾಲ್ಕು ಕಂಬಗಳಿವೆ. ಇವುಗಳಲ್ಲಿ ಅತ್ಯಂತ ಪುರಾತನವಾದುದು ರಾಷ್ಟ್ರಕೂಟರ (982) ಕಾಲದ್ದಾದರೆ,[40] ಮಿಕ್ಕವುಗಳೆಲ್ಲ ಬಹುತೇಕ (12ನೆಯ ಶತಮಾನದ) ಹೊಯ್ಸಳ ಕಾಲದವುಗಳಾಗಿವೆ.[41] ಎರಡನೆಯ ಹಂತದಲ್ಲಿ ನಿರ್ಮಾಣಗೊಂಡ ಅತ್ಯಂತ ಕಲಾತ್ಮಕವಾದ ಸ್ಮಾರಕ ಕಂಬಗಳನ್ನು ಅವಳಿ ಮಹಾನವಮಿ ಮಂಟಪ ಹಾಗೂ ಮಾಚಿಕಬ್ಬೆಯ ಮಂಟಪಗಳಲ್ಲಿ ಕಾಣುವೆವು.

ಬಸದಿಗಳಲ್ಲಿಯ ಕಂಬಗಳು : ದೇವಾಲಯಗಳಲ್ಲಿ ಪ್ರತಿಷ್ಠಾಪಿಸಿದ ಸುಂದರವಾದ ನಿಸಿಧಿ ಸ್ಮಾರಕಗಳಲ್ಲಿ ಪಾರ್ಶ್ವನಾಥ ಬಸದಿಯ ಕಂಬಕ್ಕೆ ವಿಶೇಷ ಸ್ಥಾನವಿದೆ. ನವರಂಗದ ದಕ್ಷಿಣ ಗೋಡೆಯ ಬಳಿ ನಿಂತಿರುವ 8½' ಎತ್ತರದ (1'.9" × 1".3" ಅಡ್ಡಗಲ) ಆಯತಾಕಾರದ ಈ ಕಂಬದ ನಾಲ್ಕು ಮುಖಗಳ ಮೇಲೆ ಕನ್ನಡ ಲಿಪಿಯಲ್ಲಿ ಕಂಡರಿಸಲಾದ, ಶುದ್ಧ ಸಂಸ್ಕೃತ ಭಾಷೆಯ, 223 ಸಾಲುಗಳ ಶಾಸನವು ಮಲ್ಲಿಷೇಣ ಮುನಿಯ ವಂಶಾವಳಿ ಮತ್ತು ಸಾಧನೆಯನ್ನಲ್ಲದೆ, ಅವನ ಮರಣ ಪ್ರಕ್ರಿಯೆಯ ಬಗ್ಗೆ ವಿವರ ಕೊಡುವುದು.[42] ತಾಂತ್ರಿಕ ಸಾಧನೆಯಲ್ಲಿ ಈ ಕಂಬವು ಸರಿಸಾಟಿ ಇಲ್ಲದ್ದು. ಪ್ರತಿಯೊಂದು ಅಕ್ಷರವನ್ನು ಆಳವಾಗಿ ಕೊರೆದು, ಅಲ್ಲಲ್ಲಿ ಫಲ-ಪುಷ್ಪ-ಲತೆಗಳಿಂದ ಅಕ್ಷರಗಳನ್ನು ಅಲಂಕರಿಸಿ, ಸಾಲುಗಳ ಮಧ್ಯದ ಅಂತರವನ್ನು ಸಮರ್ಪಕವಾಗಿ ಸಾಧಿಸಿಕೊಂಡು, ಇದನ್ನು ಸಿದ್ಧಗೊಳಿಸಲಾಗಿದೆ. ಶಾಸನವನ್ನು ಮಲಧಾರಿದೇವನ ಶಿಷ್ಯನಾದ 'ಬಿರುದ ಲೇಖಕ ಮದನಮಹೇಶ್ವರ' ಮಲ್ಲಿನಾಥನು ರಚಿಸಿದನು. ಈ ಕವಿಯೊಡಗೂಡಿ 'ಬಿರುದ ರೂವಾರಿ ಮುಖತಿಳಕ' ಗಂಗಾಚಾರಿಯು ಇದನ್ನು ಕಂಡರಿಸಿದನು. ಮಲ್ಲಿನಾಥನು ಕಂಬದ ಮೇಲೆ ಬಳಪದಿಂದ ಅಕ್ಷರಗಳನ್ನು ಮೊದಲು ಮೂಡಿಸಿದನೆಂದು, ಪ್ರತಿಯೊಂದು ಅಕ್ಷರದ ಓರೆ-ಕೋರೆಯನ್ನು ಗುರುತಿಸುತ್ತಾ ಅತ್ಯಂತ ಸಮರ್ಥವಾಗಿ ಗಂಗಾಚಾರಿಯು ತನ್ನ ಉಳಿ-ಬಳ್ಳದಿಂದ ಶಾಸನವನ್ನು ಕೊರೆದನೆಂದು ವರ್ಣಿಸಲಾಗಿದೆ. ಅಕ್ಷರಗಳನ್ನಲ್ಲದೆ ಅಕ್ಷರಗಳೊಡನೆ ಪೋಣಿಸಿಕೊಂಡಿರುವ ಅಲಂಕಾರಿಕ

---

38. 79.
39. 532.
40. 484.
41. ಇವುಗಳಲ್ಲಿ ಕೆಲವು ಅನಂತರ ಕಾಲದ ನಿಸಿಧಿ ಸ್ತಂಭಗಳಿಗೆ ಸ್ಥಳಮಾಡಿಕೊಟ್ಟಿವೆ.
42. ಎ ಕ II, 77.

ಫಲ-ಪುಷ್ಪ-ಲತಾ-ಪಕ್ಷಿಗಳನ್ನು ಇವರಿಬ್ಬರು ಕೂಡಿಯೇ ಸಂಯೋಜಿಸಿದರೆಂದು ಕಾಣುವುದು. ಈ ನಿಷ್ಣಾತರ ಪರಿಶ್ರಮದಿಂದಾಗಿ ಬೆಳ್ಗೊಳದಲ್ಲಿಯೇ ಅತ್ಯಂತ ಸುಂದರವಾದ ನಿಸಿಧಿ ಸ್ತಂಭವೊಂದು ಸಿದ್ಧಗೊಳ್ಳಲು ಸಾಧ್ಯವಾಯಿತೆಂದು ಹೇಳಬಹುದು. ಶಾಸನ ಕವಿ, ರೂವಾರಿಗಳಿಬ್ಬರನ್ನೂ ತಿಳಿಸುವ ಅತಿ ಪುರಾತನ ನಿಸಿಧಿ ಶಾಸನವೂ ಇದಾಗಿದೆ.


ಖ್ಯಾತ ರೂವಾರಿ : 12ನೆಯ ಶತಮಾನದ ಅತ್ಯಂತ ಖ್ಯಾತಿವೆತ್ತ ರೂವಾರಿ ಗಂಗಾಚಾರಿಯು ತೀರ್ಥಂಕರ, ಯಕ್ಷ, ಮುಂತಾದ ದೇವತಾ ಮೂರ್ತಿಗಳನ್ನಲ್ಲದೆ, ಸುದೀರ್ಘವೂ, ಸುಂದರವೂ ಆದ ನಿಸಿಧಿಗಳನ್ನೂ ಶಾಸನಗಳನ್ನೂ ಕಂಡರಿಸಬಲ್ಲವನಾಗಿದ್ದನು. ಬೆಳ್ಗೊಳದಲ್ಲಿ ಈತನು ಕೆತ್ತಿದ ಏಳು ಶಾಸನಗಳು ಇಲ್ಲಿಯವರೆಗೂ ದೊರೆತಿವೆ.[43] ಅವುಗಳಲ್ಲಿ ನಾಲ್ಕು ನಿಸಿಧಿಗಳು,[44] ಎರಡು ಶಾಸನಗಳಾಗಿವೆ.[45]

ಚಾವುಂಡರಾಯ ಬಸದಿಯ ಆದಿನಾಥ ತೀರ್ಥಂಕರನನ್ನು ಹಾಗೂ ಅಲ್ಲಿಯ ಯಕ್ಷಯಕ್ಷಿಯರ ವಿಗ್ರಹಗಳನ್ನು ಈ ರೂವಾರಿ ಮಾಡಿದನೆಂದು ಈ ಶಾಸನಗಳಲ್ಲೊಂದು ತಿಳಿಸುವುದು.[46] ಹೊಯ್ಸಳಾಚಾರಿಯ ಇಬ್ಬರು ಮಕ್ಕಳಾದ ಗಂಗಾಚಾರಿ ಮತ್ತು ಕಾಮ್ಮಾಚಾರಿ[47] ಚಿಕ್ಕಬೆಟ್ಟದ ಮೇಲೆ ಎರಡು ಸುದೀರ್ಘ ನಿಸಿಧಿಗಳನ್ನು ಸಿದ್ಧಗೊಳಿಸಿದರು. ಗಂಗಾಚಾರಿ ಮಾಡಿದ ಮಲ್ಲಿಷೇಣನ ನಿಸಿದಿ ಶಾಸನವು 223 ಸಾಲುಗಳಲ್ಲಿದ್ದರೆ, ಕಾಮ್ಮಾಚಾರಿ ಮಾಡಿದ ಮಾಚಿಕಬ್ಬೆಯ ನಿಸಿಧಿಯು 224 ಸಾಲುಗಳಲ್ಲಿದೆ. ಇಲ್ಲಿಯ ನಿಸಿಧಿ ಶಾಸನಗಳಲ್ಲಿಯೇ ಇವು ಅತ್ಯಂತ ದೀರ್ಘವಾದ ಸ್ಮಾರಕಗಳಾಗಿವೆ.

ಗಂಗಾಚಾರಿಗೆ 'ವರ್ಧಮಾನಾಚಾರಿ' ಎಂಬ ಜೈನ ಹೆಸರೂ, 'ಬಿರುದ ರೂವಾರಿ ಮುಖತಿಲಕ'ನೆಂಬ ಬಿರುದೂ ಇದ್ದವು. ಆದಿನಾಥ ವಿಗ್ರಹದ ಮೇಲಿರುವ ಶಾಸನದಲ್ಲಿ ಇವನನ್ನು 'ಹೊಯ್ಸಳಾಚಾರಿಯ ಮಗ ಗಂಗಾಚಾರಿ-ವರ್ಧಮಾನಾಚಾರಿ'[48] ಎಂದು ಕರೆದಿದ್ದು, ಇಲ್ಲಿ ಅವನ ಎರಡು ಹೆಸರುಗಳನ್ನೂ ಕೊಡಲಾಗಿದೆ. 'ಗಂಗಾಚಾರಿ' ಎಂಬುದು ಅವನ ಜನ್ಮನಾಮವಾಗಿರಬಹುದು; ಇಲ್ಲವೆ ಅವನ ನಿಷ್ಠೆಯನ್ನು ಪ್ರದರ್ಶಿಸಿಕೊಳ್ಳಲು ತನ್ನ ಪೋಷಕವಾದ ಗಂಗರಾಜನಿಂದ ಅದನ್ನು ಪಡೆದುಕೊಂಡಿರಬಹುದು. ಪೋಷಕರೊಂದಿಗೆ ಗುರುತಿಸಕೊಳ್ಳುವ ಸಂಪ್ರದಾಯವು ತಲತಲಾಂತರದಿಂದ ಕಲಾಕಾರರಿಗೆ ಬಂದಿತ್ತೇನೋ ಅನಿಸುವುದು, ಏಕೆಂದರೆ ಗಂಗಾಚಾರಿಯ ತಂದೆಯೂ ತನ್ನ ಪೋಷಕ ಮನೆತನದ ಹೆಸರನ್ನೇ

43. 77, 82, 135, 136, 149, 156 ಮತ್ತು 547.
44. 136, 135, 77 ಮತ್ತು 156.
45. 547 ಮತ್ತು 82.
46. 149.
47. 176; ಕಾಮ್ಮಾಚಾರಿಗೆ ನೋಡಿ, 148.
48. 149.

ಇಟ್ಟುಕೊಂಡು 'ಹೊಯ್ಸಳಾಚಾರಿ'ಎಂದು ಕರೆದುಕೊಂಡಿದ್ದ. ಇನ್ನು ತನ್ನ ಧರ್ಮನಿಷ್ಠೆಯನ್ನು ಪ್ರದರ್ಶಿಸಲು ಅಥವಾ ತನ್ನನ್ನು ಜೈನನೆಂದು ಗುರುತಿಸಿಕೊಳ್ಳಲು 'ವರ್ಧಮಾನ' ಜಿನನ ಹೆಸರನ್ನು ಗಂಗಾಚಾರಿಯು ಪಡೆದುಕೊಂಡಿರಬೇಕು.




43 ಹೊಯ್ಸಳಾಚಾರಿಯ ಮಗ ಗಂಗಾಚಾರಿ-ವರ್ಧಮಾನಾಚಾರಿ (149)

ವರ್ಧಮಾನಾಚಾರಿಯ ಮಗ ಹಾಗೂ ಬಿರುದ ರೂವಾರಿ ಮುಖತಿಲಕನೆಂಬ ಗಂಗೋಜನನ್ನು ಹಾಸನ ಜಿಲ್ಲೆಯ ಕುಂದೂರಿನಲ್ಲಿರುವ ಒಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಬಹುಶಃ ಇವನೂ ಶ್ರವಣಬೆಳ್ಗೊಳದ ಶಿಲ್ಪಿಯೇ ಆಗಿರಬೇಕು. ಇದನ್ನು ಒಪ್ಪುವುದಾದರೆ, ಗಂಗಾಚಾರಿಯ ಕಾರ್ಯಕ್ಷೇತ್ರವು ಶ್ರವಣಬೆಳ್ಗೊಳದ ಗಡಿ ದಾಟಿ, ಸುತ್ತಲ ಪ್ರದೇಶಕ್ಕೆ ಪಸರಿಸಿತ್ತೆಂದು ಭಾವಿಸಬಹುದು.[49]

ಶಿಲ್ಪಿ, ಲಿಪಿಕಾರ ಹಾಗೂ ರೂವಾರಿಯಾದ ಗಂಗಾಚಾರಿಯು ಶಾಸನ, ಉಬ್ಬುಶಿಲ್ಪ ಹಾಗೂ ಜಿನ ಮೂರ್ತಿಗಳನ್ನು ಕೆತ್ತುವ ಕಲೆಯಲ್ಲಿ ನಿಷ್ಣಾತನಾಗಿದ್ದನು. ಪಾರ್ಶ್ವನಾಥ ಬಸದಿಯ ಮೂರ್ತಿಗಳು ಅವನೆಷ್ಟು ಉತ್ತಮ ಶಿಲ್ಪಿಯಾಗಿದ್ದನೆಂಬುದನ್ನು ತೋರಿಸುವುವು. ಈ ನಿಸಿಧಿ ಸ್ತಂಭದ ಶಿಖರ ಭಾಗದಲ್ಲಿ ಬಿಡಿಸಲಾದ ಉಬ್ಬುಶಿಲ್ಪಗಳು ಕಲಾದೃಷ್ಟಿಯಲ್ಲಿ ತುಂಬಾ ಸುಂದರವೂ ವ್ರತಾಚರಣೆಯ ದೃಷ್ಟಿಯಲ್ಲಿ ಅರ್ಥಪೂರ್ಣವೂ ಆಗಿವೆ. ಉತ್ತರ ಮುಖದ ಫಲಕವು ಜಿನನ ಸನ್ನಿಧಿಯಲ್ಲಿರುವ ಮುನಿಯನ್ನು ಪ್ರದರ್ಶಿಸುವುದು. ಇಲ್ಲಿ ಆದಿನಾಥನನ್ನು ಮುಕ್ಕೊಡೆಯ ಕೆಳಗೆ ಪರ್ಯಂಕಾಸನಾರೂಢನಾಗಿರುವಂತೆ ತೋರಿಸಿದ್ದರೆ, ಆರಾಧನಾ ಗ್ರಂಥವನ್ನು ಕೈಯಲ್ಲಿ ಹಿಡಿದು ಅರ್ಧಾಸನದಲ್ಲಿ ಕುಳಿತ ಮುನಿಯು ವ್ರತಾಚರಣೆಯಲ್ಲಿ ತೊಡಗಿರುವಂತೆ ತೋರಿಸಲಾಗಿದೆ. ಜಿನನು ಅಭಿಮುಖನಾಗಿದ್ದರೆ, ಮುನಿಯು ಪಾರ್ಶ್ವಮುಖಿಯಾಗಿರುವರು. ಠವಣೆಕೋಲು ಅಥವಾ ಆರಾಧನಾಪೀಠ ಇವರಿಬ್ಬರನ್ನೂ ಬೇರ್ಪಡಿಸಿದೆ. ಯೋಗಪಟ್ಟದಿಂದ ಬಂಧಿಸಿಕೊಂಡಿರುವ ಮುನಿಯ ಮಯೂರಪಿಂಛ ಹಾಗೂ ಕಳಶವನ್ನು ಪ್ರಧಾನವಾಗಿ ಪ್ರದರ್ಶಿಸಲಾಗಿದೆ. ಸ್ವತಃ ಜ್ಞಾನಿಯಾಗಿದ್ದ ಮಲ್ಲಿಷೇಣನು ತನಗೆ ಸೂಕ್ತವಾದ ವ್ರತಾಚರಣೆಯನ್ನು ಕೈಕೊಂಡು, ಜಿನನ ಸಮ್ಮುಖದಲ್ಲಿ ಅದನ್ನು ಆಚರಿಸಿ, ಸಾವನ್ನು

49. ಎ ಕ V, ಹಾ. 38 ; ಶೆಟ್ಟರ್, ಉಪರೋಕ್ತ, ಪು. 21.

ಸ್ವಾಗತಿಸಿದನೆಂಬುದನ್ನು ಸಂಕೇತಿಸುವುದು ಈ ಫಲಕದ ಉದ್ದೇಶವಾಗಿದೆ.[50] ಈ ಸ್ತಂಭದ ಉಳಿದ ಮೂರು ಮುಖಗಳಲ್ಲಿಯೂ ಉಬ್ಬು ಶಿಲ್ಪಗಳನ್ನು ಬಿಡಿಸಲಾಗಿದೆ; ಆದರೆ, ಅವು ಅಷ್ಟೊಂದು ವಿಶದವಾಗಿಲ್ಲ. ಪೂರ್ವ ಮತ್ತು ಪಶ್ಚಿಮ ಮುಖದ ಫಲಕಗಳು



44 ಮಲ್ಲಿಷೇಣನ ನಿಸಿಧಿ (77)


ಪರ್ಯಂಕಾಸನದಲ್ಲಿರುವ ಜಿನನನ್ನು, ಅವನ ಮುಕ್ಕೊಡೆ ಹಾಗೂ ಚೌರಿಗಳನ್ನು ಪ್ರದರ್ಶಿಸುವುವು. ದಕ್ಷಿಣ ಮುಖದ ಫಲಕವೂ ಉತ್ತರ ಮುಖದ ಫಲಕವನ್ನು ಪ್ರಮಾಣದಲ್ಲಿ ಅನುಕರಿಸಿದೆ. ಇಲ್ಲಿಯೂ ಮುಕ್ಕೊಡೆಯ ಕೆಳಗೆ ಕುಳಿತ ಆದಿನಾಥನನ್ನು, ಅವನ ಚೌರೀಧಾರಿ ಪರಿಚಾರಕ ವರ್ಗವನ್ನು ಪ್ರದರ್ಶಿಸಲಾಗಿದೆ. ಈ ಸ್ತಂಭವು ಚೌಕಾಕಾರದ ಗುಮ್ಮಟ ಹೊಂದಿದ್ದು ಅದು ಚಂದ್ರಗುಪ್ತ ಬಸದಿಯ ಶಿಖರವನ್ನು ಹಾಗೂ ಚಾವುಂಡರಾಯ ಬಸದಿಯ ಪಾಗಾರದ ವಾಸ್ತುವಾಂಗಗಳನ್ನು ನೆನಪಿಗೆ ತರುವುದು.

ಸಿದ್ಧರ ಬಸದಿಯ ಕಂಬಗಳು : ದೊಡ್ಡಬೆಟ್ಟದ ಸಿದ್ಧರ ಬಸದಿಯಲ್ಲಿರುವ ನಿಸಿಧಿಗಳು ಪಾರ್ಶ್ವನಾಥ ಬಸದಿಯ ಕಂಬದಷ್ಟೇ ಸ್ವಾರಸ್ಯಕರವಾಗಿವೆಯಾದರೂ ಇವುಗಳ ಪ್ರಮಾಣದಲ್ಲಿ ಹಾಗೂ ಕಲಾ ಕೌಶಲ್ಯದಲ್ಲಿ ಅಂತರವಿದೆ. ಸಿದ್ಧರ ಬಸದಿಯ ಎರಡು ಕಂಬಗಳು ಎರಡು ಬೇರೆ ಬೇರೆ ಶತಕಗಳಿಗೆ ಸೇರಿವೆ. ಒಂದು, 14ನೆಯ ಶತಮಾನದಲ್ಲಿ ಮರಣಹೊಂದಿದ ಪಂಡಿತಾರ್ಯನನ್ನು ಗೌರವಿಸಲು ಮಾಡಿದುದಾರೆ,[51] ಇನ್ನೊಂದು, 15ನೆಯ ಶತಮಾನದಲ್ಲಿ ಸಾವನ್ನಪ್ಪಿದ ಶೃತಮುನಿಯ ಗೌರವಾರ್ಥ ನಿಲ್ಲಿಸಿದುದಾಗಿದೆ.[52] ಮೊದಲನೆಯ ಶಾಸನ ಕಾವ್ಯವನ್ನು ಕವಿ ಅರ್ಹದ್ದಾಸನು, ಎರಡನೆಯ ಶಾಸನಕಾವ್ಯವನ್ನು ಕವಿ ಮಂಗರಾಜನು ರಚಿಸಿದರು. ಈ ಸ್ತಂಭಗಳನ್ನು ಕಂಡರಿಸಿದ ಶಿಲ್ಪಿಗಳು ಮಾತ್ರ ಅಜ್ಞಾತವಾಗಿ ಉಳಿದುಕೊಂಡಿರುವರು.


---

50. ಎ ಕ II, 77.
51. 360.
52. 364.

ಈ ಸ್ತಂಭಾಗ್ರಗಳೆಲ್ಲ ದ್ರಾವಿಡ ಶೈಲಿಯ ಗೋಪುರಗಳನ್ನು ಹೋಲುತ್ತವಾದರೂ ಅವುಗಳ ಕಾರ್ಯನೈಪುಣ್ಯತೆಯಲ್ಲಿ ವೈವಿಧ್ಯತೆ ಇದೆ. ಶೃತಮುನಿಯ ಕಂಬದ ಫಲಕದಲ್ಲಿ ಮುಕ್ಕೊಡೆಯ ಕೆಳಗೆ ಸಿಂಹಾಸನಾರೂಢನಾದ ಜಿನನನ್ನು, ವರ್ತುಲಾಕಾರದ ಹುಲ್ಲಿನ ಆಸನದ ಮೇಲೆ ಅರ್ಧಾಸನದಲ್ಲಿ ಕಾಯಕ್ಲೇಶದಲ್ಲಿ ನಿರತನಾದ ಮುನಿಯನ್ನು ನಿರೂಪಿಸಲಾಗಿದೆ. ಅಂಜಲಿ ಮುದ್ರೆಯಲ್ಲಿರುವ ವ್ರತಧಾರಿಯು ಜಿನನಲ್ಲಿ ಧ್ಯಾನನೆಟ್ಟು ಕುಳಿತಂತೆ ತೋರಿರುವುದರಿಂದ, ಅವನ ಮುಕ್ಕಾಲು ಭಾಗ ದೇಹ ಮಾತ್ರ ನಮ್ಮೆಡೆ ತಿರುಗಿದೆ. ಈ ಅಂಕಣದ ಉಳಿದ ಸ್ಥಳವನ್ನು ಕಲಶ, ಮಯೂರಪಿಂಛ, ಠವಣಿಕೆ, ಜಿನಪ್ರಭೆ, ಚೌರಿ, ಮೊದಲಾದವುಗಳು ಹಂಚಿಕೊಂಡಿವೆ. ಶಿಖರಾಗ್ರವನ್ನು ಅಲಂಕರಿಸಿರುವ ಗೋಪುರ ಮಾದರಿಯು ಸರಳವಾಗಿದ್ದರೂ ಆಕರ್ಷಕವಾಗಿದೆ. ಗೋಪುರದ ನಿಮ್ನತಮ ಭಾಗವು ಸಮಾಧಿಪೀಠವಾಗಿದ್ದು ಅಲ್ಲಿ ಚೌಕಾಕಾರದ ಸ್ತೂಪಿಯಿದೆ.




ಅಲ್ಲದೆ, ಕೇಂದ್ರದ ಅಂಕಣದಲ್ಲಿ ಇನ್ನೊಂದು ಸ್ವಾರಸ್ಯಕರ ಉಬ್ಬುಶಿಲ್ಪವಿದೆ. 'ಗಣಿಗಳ ಪ್ರಭುವಿನಿಂದ ಸೂಕ್ತವಾದ' ಸಲ್ಲೇಖನಾವ್ರತವನ್ನು ಶೃತಮುನಿಯು ಹೇಗೆ ಪಡೆದನೆಂಬುದನ್ನು ಇದು ಚಿತ್ರಿಸುವುದು. ಠವಣಿಕೆಯ ಒಂದು ಬದಿ ಅಂಜಲಿ ಮುದ್ರಿತನಾಗಿ ಅರ್ಧಾಸನದಲ್ಲಿ ಕುಳಿತ ವ್ರತಧಾರಿಯನ್ನು, ವರ್ತುಲಾಕಾರದ ಆಸನದ ಮೇಲೆ ಕುಳಿತು ಬಲಗೈಯನ್ನು ವ್ಯಾಖ್ಯಾನ ಮುದ್ರೆಯಲ್ಲಿರಿಸಿಕೊಂಡಿರುವ ದೀಕ್ಷಾಮುನಿಯನ್ನು ಪ್ರದರ್ಶಿಸಲಾಗಿದೆ. ಬೃಹತ್ ಪ್ರಮಾಣದ ಆರಾಧನಾ ಗ್ರಂಥವು ಆರಾಧನಾ ಪೀಠವನ್ನು ಅಲಂಕರಿಸಿದೆ. ಈ ಮುನಿಯು ''ಶಾಂತ ಚಿತ್ತನಾಗಿ, ಅರ್ಧನಿಮೀಲಿತನಾಗಿ, ಅಚಲ ಮನಸ್ಕನಾಗಿ, ತನ್ನ



45 ಪಂಡಿತಾರ್ಯನ ನಿಸಿಧಿ (360)

ನಿಜ ಸ್ವರೂಪದ ಬಗ್ಗೆ ಧ್ಯಾನಿಸುತ್ತ ಸಮಾಧಿನಿರತ"ನಾಗಿದ್ದನೆಂಬುದನ್ನು ಶಾಸನಪಾಠವು ಸ್ಪಷ್ಟಪಡಿಸುವದು.

ಪಂಡಿತರಾಯನ ಕಂಬವೂ ದ್ರಾವಿಡ ಶಿಖರ ಮಾದರಿಯನ್ನು ಅನುಕರಿಸಿದೆ. ಮುಂಜೂರಿನಂತಹ ಪ್ರಕ್ಷೇಪಣದ ಮೇಲೆ ಉಬ್ಬುಶಿಲ್ಪಗಳ ಎರಡು ಸಾಲುಗಳಿದ್ದು ಅಲ್ಲಿಯ ಪ್ರತಿಯೊಂದು ಸಾಲು ಮೂರು ಸಮತಲ ವಿಭಾಗಗಳಲ್ಲಿ ವಿಭಜಿಸಲ್ಪಟ್ಟಿದೆ. ಕೆಳಗಡೆಯ ಸಾಲಿನಲ್ಲಿ ಗ್ರಂಥವನ್ನು ಹೊತ್ತ ಠವಣಿಕೆ ಹಾಗೂ ಆರಾಧನಾ ವ್ಯಾಖ್ಯಾನದಲ್ಲಿ ನಿರತರಾದ ಇಬ್ಬರು ಮುನಿಗಳಿದ್ದರೆ; ಬದಿಯ ಚಿಕ್ಕ ಅಂಕಣದಲ್ಲಿ ಗಡ್ಡಧಾರಿಯೊಬ್ಬ ಅಂಜಲಿ ಮುದ್ರೆಯಲ್ಲಿ ಕುಳಿತಿರುವನು. ಎರಡನೆಯ ಸಾಲಿನಲ್ಲಿ ಜಿನನ ಹಾಗೂ ಚೌರಿಧಾರಿಗಳ ಶಿಲ್ಪಗಳಿವೆ. ಉಳಿದ ಅಂಕಣಗಳನ್ನು ತುಂಬಲಾಗಿಲ್ಲ. ಇದನ್ನೇ ಸ್ತಂಭದ ಉಳಿದ ಮುಖಗಳಲ್ಲಿ ಪುನರಾವರ್ತಿಸಲಾಗಿದೆ.



46 ಪಂಡಿತಾರ್ಯನ ನಿಸಿಧಿ (360)

ಅಧ್ಯಾಯ ಎಂಟು

ನಿಸಿಧಿ:

ಲಕ್ಷಣ

ವೈಶಿಷ್ಟ್ಯತೆ

ಕಲೆ

ಭಾಗ - ೨

1. ನಿಸಿಧಿ ಮಂಟಪಗಳು : ಪ್ರತ್ಯೇಕ ಮಂಟಪಗಳನ್ನು ಕಟ್ಟಿ ಅಲ್ಲಿ ನಿಸಿಧಿಗಳನ್ನು ಪ್ರತಿಷ್ಠಾಪಿಸುವ ಪದ್ಧತಿಯನ್ನು ಹತ್ತನೆಯ ಶತಮಾನದಲ್ಲಿ ರಾಷ್ಟ್ರಕೂಟರು ರೂಢಿಗೆ ತಂದರೆಂದು ತೋರುವುದು. ಇಲ್ಲಿಯವರೆಗೂ ದೊರೆತ ಇಂತಹ ಮಂಟಪಗಳಲ್ಲಿ ನಾಲ್ಕಡಿ ಇಂದ್ರನ ನಿಸಿಧಿ ಮಂಟಪವೇ ಅತ್ಯಂತ ಪುರಾತನವಾಗಿದೆ. ಚಿಕ್ಕಬೆಟ್ಟದ ಉತ್ತರ ಪೂರ್ವ ಮೂಲೆಯಲ್ಲಿ, ಸವತಿಗಂಧವಾರಣ ಮತ್ತು ತೇರಿನ ಬಸದಿಗಳ ನಡುವೆ, ಈ ಮಂಟಪವಿದೆ. ಇಲ್ಲಿಂದ ಮಹಾನವಮಿ ಮಂಟಪಗಳವರೆಗಿನ ಹಾಸುಗಲ್ಲನ್ನು ಹಂಚಿಕೊಂಡು ಇಂತಹ ಐದು ನಿಸಿಧಿ ಮಂಟಪಗಳು ನಿಂತಿವೆ. ಇವುಗಳಲ್ಲಿ ಕೆಲವು ಒಂಟಿಯಾಗಿದ್ದರೆ, ಇನ್ನು ಕೆಲವು ಜೋಡಿ ಮಂಟಪಗಳಾಗಿವೆ.

ಇವುಗಳ ವಿವರ ಹೀಗಿವೆ :

(1) 'ಮಹಾನವಮಿ ಮಂಟಪ' ವೆಂದು ಈಗ ಪ್ರಚಾರದಲ್ಲಿರುವ ಅವಳಿ ಮಂಟಪಗಳು, ಪಾರ್ಶ್ವನಾಥ ಬಸದಿಯ ಬಲ ಹಿಂಬದಿಗೆ ಹಾಗೂ ಶಾಂತಿನಾಥ ಬಸದಿಯ ಎಡಕ್ಕೆ ಇವೆ. ಅಂದರೆ, ಚಿಕ್ಕಬೆಟ್ಟದ ಬಸದಿಗಳ ಅಂಗಳವನ್ನು ಪ್ರವೇಶಿಸಿದೊಡನೆ ನಮ್ಮ ಎಡಕ್ಕೆ ಕಾಣುವ ಈ ಮಂಟಪಗಳು ತಮ್ಮ ವಿಶೇಷ ಸೊಬಗಿನಿಂದ ಗಮನವನ್ನು ಸೆಳೆಯುವುವು. ಈ ಎರಡು ಮಂಟಪಗಳಲ್ಲಿ ಒಟ್ಟು ಮೂರು ನಿಸಿಧಿ ಸ್ತಂಭಗಳಿವೆ.[1] ದಕ್ಷಿಣ ಮಂಟಪದಲ್ಲಿ 1163 ಮತ್ತು 1313ರಲ್ಲಿ ಪ್ರತಿಷ್ಠಾಪಿಸಿದ ಎರಡು ಸ್ತಂಭಗಳಿದ್ದರೆ, ಉತ್ತರ ಮಂಟಪದಲ್ಲಿ 1176ರಲ್ಲಿ ಸ್ಥಾಪಿಸಿದ ಒಂದು ಸ್ತಂಭವಿದೆ.

(2) ಚಾವುಂಡರಾಯ ಬಸದಿಯ ದಕ್ಷಿಣಕ್ಕಿರುವ ಮತ್ತೊಂದು ಮಂಟಪದಲ್ಲಿ 1120 ಮತ್ತು 1123ರಲ್ಲಿ ನಿಲ್ಲಿಸಿದ ಎರಡು ನಿಸಿಧಿಗಂಬಗಳಿವೆ. ಮೊದಲ ಶಾಸನದ ಆಧಾರದ ಮೇಲೆ ಇದನ್ನು 'ಪೋಚಿಕಬ್ಬೆಯ ಮಂಟಪ' ವೆಂದು ಕರೆಯಬಹುದು.[2]

(3) ಎರಡುಕಟ್ಟೆ ಬಸದಿಯ ಪೂರ್ವಕ್ಕಿರುವ ಇನ್ನೊಂದು ಮಂಟಪದಲ್ಲಿ ನಾಲ್ಕು ನಿಸಿಧಿ ಕಂಬಗಳಿವೆ. ಇವನ್ನು 1113, 1115, 1120 ಮತ್ತು 1121ರಲ್ಲಿ ಪ್ರತಿಷ್ಠಾಪಿಸ ಲಾಯಿತು.[3] ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಮಂಟಪಗಳಲ್ಲಿಯೆ ಇದು ಅತ್ಯಂತ ಪುರಾತನವಾದದ್ದು. ಇಲ್ಲಿ ಗೌರವಿಸಲಾಗಿರುವ ಗಂಗರಾಜನ ಮಡದಿಯ ಹೆಸರನ್ನಾಧರಿಸಿ ಇದನ್ನು 'ಲಕ್ಷ್ಮೀಮತಿ ಮಂಟಪ' ವೆಂದು ಕರೆಯಬಹುದು.

(4) ಲಕ್ಷ್ಮೀಮತಿ ಮಂಟಪದಿಂದ ಸ್ವಲ್ಪ ದೂರ ಸವತಿಗಂಧವಾರಣ ಬಸದಿಯ ಉತ್ತರ - ಪೂರ್ವಕ್ಕೆ ಜೋಡು ಮಂಟಪಗಳಿವೆ. ಇವುಗಳಲ್ಲಿ ದಕ್ಷಿಣ ದಿಕ್ಕಿನ ಮಂಟಪದಲ್ಲಿ ಒಂದು, ಉತ್ತರ ದಿಕ್ಕಿನ ಮಂಟಪದಲ್ಲಿ ಮೂರು ನಿಸಿಧಿಗಳಿದ್ದು, ಅವುಗಳ ಕಾಲ ಅನುಕ್ರಮವಾಗಿ 1123, 1139 ಮತ್ತು 1145.[4] ಒಂದೇ ಕುಟುಂಬ ವರ್ಗಕ್ಕೆ ಸೇರಿದ ಈ ನಿಸಿಧಿ ಗೌರವಕ್ಕೆ ಪಾತ್ರಳಾದ ಅಗ್ರಮಾನ್ಯ ವ್ಯಕ್ತಿಯಾದ ಮಾಚಿಕಬ್ಬೆಯ ಹೆಸರಿನಿಂದ ಇವನ್ನು ಗುರುತಿಸಿ 'ಮಾಚಿಕಬ್ಬೆ ಮಂಟಪ' ಎಂದು ಕೆರಯಬಹುದು.

(5) ಸವತಿಗಂಧವಾರಣ ಬಸದಿಯ ಉತ್ತರ-ಪೂರ್ವಕ್ಕೆ ಮತ್ತು ತೇರಿನ ಬಸದಿಯ ಉತ್ತರ-ಪಶ್ಚಿಮಕ್ಕಿರುವ ಮಂಟಪವೇ 982ರಲ್ಲಿ ನಿರ್ಮಾಣಗೊಂಡ 'ರಾಷ್ಟ್ರಕೂಟ ನಾಲ್ವಡಿ ಇಂದ್ರನ ಮಂಟಪ'.[5]

ನಿಸಿಧಿ ಮಂಟಪಗಳು ಚಿಕ್ಕಬೆಟ್ಟದ ವೈಶಿಷ್ಟ್ಯಗಳಾಗಿವೆ. ಏಕೆಂದರೆ, ಇಂತಹ ಕಟ್ಟಡಗಳು ದೊಡ್ಡಬೆಟ್ಟದ ಮೇಲಾಗಲಿ, ಪಟ್ಟಣ ಪರಿಸರದಲ್ಲಾಗಲಿ, ಕಂಡುಬರುವುದಿಲ್ಲ.

1. ಮಂಟಪಗಳ ಪ್ರಧಾನ ಲಕ್ಷಣಗಳು : ಇವೆಲ್ಲವೂ ತೆರೆದ ಮಂಟಪಗಳಾಗಿದ್ದು ವೇದಿಕೆ, ಕಂಬ ಹಾಗೂ ಚಾವಣಿಯನ್ನು ಹೊಂದಿವೆ. ಗಾತ್ರ ಮತ್ತು ಆಕಾರದಲ್ಲಿ ಅಲ್ಪ ಸ್ವಲ್ಪ ಬದಲಾವಣೆಯನ್ನು ಹೊಂದಿರುವ ಈ ಮಂಟಪಗಳೆಲ್ಲ ತಮ್ಮ ತಮ್ಮ ಕಾಲದ ವಾಸ್ತು ವಿನ್ಯಾಸವನ್ನು ಪ್ರತಿಬಿಂಬಿಸುವ ಕಟ್ಟಡಗಳಾಗಿವೆ.

---

1. ಎ ಕ II, ದೇವಕೀರ್ತಿಯ 1163ರ 70 ಮತ್ತು 71, ಶುಭಚಂದ್ರ ಮಹಾಯತಿಯ 1313 ರ 72, ನಯಕೀರ್ತಿದೇವನ 1176ರ 73.
2. 1120ರ 136 ಮತ್ತು 1123ರ 135.
3. 1113ರ 155, 1115ರ 156, 1120ರ 158, 1121-22ರ 157.
4. 1123ರ 176, 1139ರ 175 ಮತ್ತು 174, 1145ರ 173.
5. 163.

2. ಸ್ತಂಭ ಕೂಟ : ಒಂದು ಮಂಟಪದಲ್ಲಿ ಒಂದೇ ನಿಸಿಧಿಯನ್ನು ಪ್ರತಿಷ್ಠಾಪಿಸುವ ಪರಿಪಾಠವು ಮೊದಮೊದಲ ಹಂತದಲ್ಲಿ ಪ್ರಸಾರದಲ್ಲಿದ್ದು, ಕಾಲಕ್ರಮದಲ್ಲಿ ಇದು ಬದಲಾವಣೆಗೊಂಡಿತು. ಮೊದಲಿದ್ದ ಮಂಟಪದಲ್ಲಿ ರಕ್ತ ಸಂಬಂಧಿಗಳ ಮತ್ತು ಒಮ್ಮೊಮ್ಮೆ ಮನೆತನದ ಗುರುವಿನ ನಿಸಿಧಿ ಸ್ತಂಭಗಳನ್ನು ಸೇರಿಸುವುದು, ಕೆಲವೊಮ್ಮೆ ಈ ಸ್ತಂಭಗಳನ್ನು ಮರುಹೊಂದಾಣಿಕೆ ಮಾಡುವುದು ರೂಢಿಗೆ ಬಂತು. 12ನೆಯ ಶತಮಾನದಲ್ಲಿ ಆರಂಭವಾದ ಈ ಪದ್ಧತಿಯು ಸುಮಾರು 15-16ನೆಯ ಶತಮಾನಗಳವರೆಗೂ ಮುಂದುವರೆಯಿತು. ನಿಸಿಧಿ ಸ್ತಂಭಗಳನ್ನು ಮರುಹೊಂದಾಣಿಕೆ ಮಾಡುವಾಗ ಒಮ್ಮೊಮ್ಮೆ ಮಂಟಪದ ಸಮಪ್ರಮಾಣತೆಗೆ ಚ್ಯುತಿ ಉಂಟಾದುದನ್ನು ನಾವು ಕಾಣುವೆವು. ಇದಕ್ಕೆ ಕಾರಣ ಅವಸರದಲ್ಲಿ ಅವನ್ನು ಸೇರಿಸಿದ್ದಾಗಿರಬಹುದು; ಇಲ್ಲವೆ ನಿಸಿಧಿ ಕಾರ್ಯದಲ್ಲಿ ಪಾಲ್ಗೊಂಡವರ ಅಚಾತುರ್ಯದಿಂದಾಗಿರಲೂಬಹುದು. ನಿಸಿಧಿ ಸ್ತಂಭಗಳ ಕಾಲಮಾನದಲ್ಲಿ ಅಷ್ಟೊಂದು ದೀರ್ಘ ಅಂತರವಿಲ್ಲದಿದ್ದಾಗ ಸಮಪ್ರಮಾಣತೆ ಹಾಗೂ ಸಾಮರಸ್ಯವನ್ನು ಹೆಚ್ಚು ಸಮರ್ಥವಾಗಿ ಕಾಪಾಡಿಕೊಳ್ಳಲು ಸಾಧ್ಯವಾದಂತೆ ಕಂಡುಬರುವುದು. ಇದಕ್ಕೆ ಮಾಹಾನವಮಿ ಮಂಟಪ ಹಾಗೂ ಮಾಚಿಕಬ್ಬೆಯ ನಿಸಿಧಿ ಮಂಟಪಗಳು ಸಾಕ್ಷಿ.

3. ರಕ್ತ ಸಂಬಂಧಿಗಳ ಸಾಮೂಹಿಕ ನಿಸಿಧಿಗಳು : ಒಂದೇ ಕುಟುಂಬದ ಸದಸ್ಯರಿಗೆ, ವಿಶೇಷತಃ ರಕ್ತಸಂಬಂಧಿಗಳಿಗೆ, ಒಂದೇ ಮಂಟಪದಲ್ಲಿ ನಿಸಿಧಿ ಸ್ತಂಭ ನಿಲ್ಲಿಸುತ್ತಿದ್ದುದನ್ನು 12ನೆಯ ಶತಮಾನದ ಕೆಲವು ನಿದರ್ಶನಗಳಿಂದ ತಿಳಿದುಕೊಳ್ಳಬಹುದು. ಕೆಲವೊಮ್ಮೆ ಈ ಮಂಟಪಗಳಲ್ಲಿ ಕುಟುಂಬದ ಗುರುವಿನ ನಿಸಿಧಿಗೂ ಅನುವುಮಾಡಿಕೊಡಲಾಗುತ್ತಿತ್ತು. ಆದರೆ ಗಂಡನ ರಕ್ತಸಂಬಂಧಿಗಳ ನಿಸಿಧಿಯನ್ನು ಹೆಂಡತಿಯ ರಕ್ತಸಂಬಂಧಿಗಳ ನಿಸಿಧಿಗಳೊಡನೆ, ಅಥವ ಹೆಂಡತಿಯ ರಕ್ತಸಂಬಂಧಿಗಳ ನಿಸಿಧಿಗಳನ್ನು ಗಂಡನ ರಕ್ತಸಂಬಂಧಿಗಳ ನಿಸಿಧಿಗಳೊಡನೆ ಮಿಶ್ರಮಾಡಿ ಒಂದೇ ಮಂಟಪದಲ್ಲಿ ನಿಲ್ಲಿಸುವುದು ಆಚರಣೆಗೆ ವಿರೋಧವಾಗಿತ್ತೆಂದು ಕಾಣುವುದು. ಉದಾಹರಣೆಗೆ, ಗಂಗರಾಜ ನಿರ್ಮಾಣಮಾಡಿದ ಎರಡು ನಿಸಿಧಿ ಮಂಟಪಗಳನ್ನು ಇಲ್ಲಿ ನಿದರ್ಶಿಸಬಹುದು. ಅವನ ಹೆಂಡತಿಯ ಗೌರವಾರ್ಥ ಕಟ್ಟಿಸಿದ ಮಂಟಪದಲ್ಲಿ, ಅವಳ ತವರುಮನೆಯ ರಕ್ತಸಂಬಂದಿಗಳ ನಿಸಿಧಿಗಳನ್ನು ಮಾತ್ರ ಸೇರಿಸಿ, ತನ್ನ ತಾಯಿಯ ನಿಸಿಧಿಯನ್ನು ಪ್ರತ್ಯೇಕ ಮಂಟಪದಲ್ಲಿ ಅವನು ನಿಲ್ಲಿಸಿದನು.

4. ನಿಸಿಧಿಗಳು ಮರಣತಾಣದಲ್ಲಿರಬೇಕೆಂಬ ಕಡ್ಡಾಯವಿರಲಿಲ್ಲ : ಕಟವಪ್ರವು ಸಮಾಧಿ ಮರವಣವನ್ನಾಚರಿಸುವ ಬೆಟ್ಟವಾಗಿದ್ದರೂ, ವ್ರತಾಚರಣೆ ಕೈಕೊಂಡ, ಇಲ್ಲವೆ ಸಾವೆನ್ನಪ್ಪಿದ, ಸ್ಥಳದಲ್ಲಿಯೆ ನಿಸಿಧಿ ಶಾಸನಗಳನ್ನಾಗಲಿ, ಸ್ತಂಭಗಳನ್ನಾಗಲಿ, ನಿಲ್ಲಿಸಬೇಕೆಂಬ ಕಡ್ಡಾಯವಿರಲಿಲ್ಲವೆಂದು ತೋರುವುದು. ಅಲ್ಲದೆ, ದೇಹಾವಶೇಷಗಳ ಮೇಲೆ ನಿರ್ಮಾಣಗೊಳ್ಳುತ್ತಿದ್ದ ಆರಂಭಕಾಲದ ಆಚರಣೆಯು ಕಾಲಕ್ರಮದಲ್ಲಿ ಸಡಿಲಗೊಂಡು,

ಅಂಥವರನ್ನು ಸಾಂಕೇತಿಕವಾಗಿ ಗೌರವಿಸುವುದು ಸರ್ವಸಮ್ಮತಿಯ ಹಂತವನ್ನು ಗಳಿಸಿಕೊಂಡಿತೆಂದು ಕಾಣುವುದು. ಚಿಕ್ಕಬೆಟ್ಟದಲ್ಲಿ ಮರಣಹೊಂದಿದವರಿಗೆ ಮಾತ್ರ ಬೆಟ್ಟದ ನೆತ್ತಿಯ ಹಾಸುಗಲ್ಲಿನ ಮೇಲೆ ನಿಸಿಧಿ ಶಾಸನಗಳನ್ನು ಕೊರೆದು ಗೌರವಿಸುವುದು ಆರಂಭಕಾಲದಲ್ಲಿ (ಸುಮಾರು 600ರಿಂದ 900) ಸಾರ್ವತ್ರಿಕ ಸಂಪ್ರದಾಯವಾಗಿತ್ತು; ಆದರೆ ಕಾಲಾನಂತರ (ಸುಮಾರು 900ರ ನಂತರ) ಅದು ಬದಲಾಗಿ ಶ್ರವಣಬೆಳ್ಗೊಳದ ಸುತ್ತಮುತ್ತಲ ಪ್ರದೇಶದಲ್ಲಲ್ಲದೆ, ದೂರದ ಯಾವುದೇ ಗ್ರಾಮ–ಪಟ್ಟಣಗಳಲ್ಲಿ (ಉದಾ: ಬಂಕಾಪುರ, ಮೋರಿಂಗೆರೆ, ಮುಂತಾದವು) ಮಡಿದವರಿಗೂ ಇಲ್ಲಿ ನಿಸಿಧಿ ನಿಲ್ಲಿಸಿ, ಸಾಂಕೇತಿಕವಾಗಿ ಈ ಪವಿತ್ರ ಕ್ಷೇತ್ರದೊಳಕ್ಕೆ ಅವರನ್ನು ತೆಗೆದುಕೊಳ್ಳುವುದು ಸರ್ವಸಮ್ಮತಿ ಗಳಿಸಿಕೊಂಡಿತು. ಅಲ್ಲದೆ, ಮೊದಮೊದಲು ಕಠೋರ ವ್ರತಾಚರಣೆಯ ಮೂಲಕ ಕಾಯಕ್ಲೇಶವನ್ನು ಪೂರೈಸಿ, ನಿಯಮಬದ್ಧವಾಗಿ ಸಾವನ್ನಪ್ಪಿದವರಿಗೆ ಮಾತ್ರ ಸೀಮಿತವಾಗಿದ್ದ ಸ್ಮಾರಕ ಪ್ರಕ್ರಿಯೆಯು ಕಾಲಕ್ರಮದಲ್ಲಿ ಹೊಂದಾಣಿಕೆಗಳಿಗೊಳಗಾಗಿ, ಯಾವುದೇ ಬಗೆಯಲ್ಲಿ ಮರಣಹೊಂದಿದ ಸಾಮಾಜಿಕ, ಧಾರ್ಮಿಕ ಅಗ್ರಗಣ್ಯರಿಗೂ ಸಲ್ಲತೊಡಗಿತು.

5. ಸ್ಮಾರಕಗಳ ಪವಿತ್ರೀಕರಣ : ಆರಂಭ ಕಾಲದಲ್ಲಿ (ಸಮಾರು 600-900) ನಿಸಿಧಿಗಳನ್ನು ಕೊರೆದ ಬಂಡೆಗಲ್ಲನ್ನು ವಿಶಿಷ್ಟ ಬಗೆಯಲ್ಲಿ ಪವಿತ್ರೀಕರಿಸಿದ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಅಂದರೆ ಅಂತಹ ಸ್ಥಳಗಳು ಅನಾದರಕ್ಕೊಳಗಾಗುತ್ತಿದ್ದವೆಂದಲ್ಲ – ಅವುಗಳಿಗೆ ಪ್ರತಿನಿತ್ಯ ಪೂಜೆ ಪುನಸ್ಕಾರಗಳು ಸಲ್ಲುತ್ತಿರಲಿಲ್ಲವೆಂದು ಮಾತ್ರ. ಸುಮಾರು 12ನೆಯ ಶತಮಾನದ ನಂತರ, ನಿಸಿಧಿಗಳನ್ನು ದೇವಾಲಯದಲ್ಲಿ ನಿಲ್ಲಿಸುವುದು ಇಲ್ಲವೇ ಅವುಗಳಿಗಾಗಿ ಮಂಟಪವನ್ನು ನಿರ್ಮಾಣಮಾಡುವುದು, ಹೆಚ್ಚು ಹೆಚ್ಚು ಪ್ರಚಾರಕ್ಕೆ ಬಂತು. ದೇವಾಲಯದಂತೆ ಇವೂ 'ಚಂದ್ರ, ಸೂರ್ಯ, ನಕ್ಷತ್ರ ಹಾಗೂ ಮೇರು'ವಿನ ಶಾಶ್ವತತೆಯನ್ನು ಪಡೆದುಕೊಳ್ಳಲರ್ಹವಾದವುಗಳೆಂಬ ಭಾವನೆ ಬೆಳೆಯಿತು.[6] 'ನಿಷ್ಕಳಂಕ ಚರಿತರು ಪರಲೋಕಕ್ಕೆ ತೆರಳಿದ ತಾಣಕ್ಕೆ ಗೌರವ ತೋರಿಸುವುದೆಂದರೆ, ಅವರಿಗೆ ಗೌರವ ತೋರಿದಂತೆ', ಎಂಬುದನ್ನು ಒಂದು ಶಾಸನದಲ್ಲಿ ಒತ್ತಿ ಹೇಳಲಾಗಿದೆ.[7]

6. ಪ್ರಮಾಣದಲ್ಲಿ ವೈವಿಧ್ಯತೆ : ರಾಷ್ಟ್ರಕೂಟ ಇಂದ್ರನ ಕಣಶಿಲೆಯ ನಿಸಿಧಿಯನ್ನು ಹೊರತುಪಡಿಸಿದರೆ, ಇಲ್ಲಿಯ ಮಿಕ್ಕೆಲ್ಲ ನಿಸಿಧಿಗಂಬಗಳು ಬಳಪದ ಕಲ್ಲಿನಲ್ಲಿವೆ. ಗಾತ್ರದಲ್ಲಿ ಭಿನ್ನ-ಭಿನ್ನವಾಗಿದ್ದರೂ ಅವೆಲ್ಲವೂ ಆಯತಾಕಾರದಲ್ಲಿವೆ. ಇವುಗಳಲ್ಲಿ ನಾಲ್ಕಡಿ ಇಂದ್ರನ ನಿಸಿಧಿಯು ಅತ್ಯಂತ (9'.10" × 2' × 1½ ") ಎತ್ತರವಾಗಿದ್ದು, ಉಳಿದವುಗಳು ಸುಮಾರು 5'.9" ರಿಂದ (ಮಾಚಿಕಬ್ಬೆ ಮಂಟಪದ ಬಲದೇವನ ನಿಸಿಧಿ) 8'. 9" (ಪೋಚಿಕಬ್ಬೆಯ ನಿಸಿಧಿ)

---


6. 360.
7. 364.

ವರೆಗಿವೆ. ಶಾಸನಪಾಠಗಳ ಪರಿಮಿತಿಯಲ್ಲೂ ಸಾಕಷ್ಟು ವೈವಿಧ್ಯತೆಯಿದೆ. ಲಕ್ಷ್ಮೀಮತಿಯ ನಿಸಿಧಿ ಶಾಸನವು ಅತಿ ದೀರ್ಘವಾಗಿದೆ (224 ಸಾಲುಗಳು). ಶುಭಚಂದ್ರದೇವನ ಶಾಸನವನ್ನು ಹೊರತುಪಡಿಸಿ,[8] ಆಧ್ಯಾತ್ಮಿಕ ಆಚಾರ್ಯರ ಶಾಸನಗಳೆಲ್ಲ ಸಾಮಾನ್ಯವಾಗಿ ಶ್ರಾವಕರ ಶಾಸನಗಳಿಗಿಂತಲೂ ದೀರ್ಘವಾಗಿವೆ. ಮುನಿಗಳಾದ ಮೇಘಚಂದ್ರ ತ್ರೈವಿದ್ಯದೇವನ (156 ಸಾಲುಗಳ) ಮತ್ತು ಪ್ರಭಾಚಂದ್ರ ಸಿದ್ಧಾಂತದೇವನ (192 ಸಾಲುಗಳ) ಶಾಸನಗಳನ್ನು ಲಕ್ಷ್ಮೀಮತಿ (32 ಸಾಲುಗಳ), ಪೋಚಿಕಬ್ಬೆ (49 ಸಾಲುಗಳ), ದೇಮಿಯಕ್ಕ (64 ಸಾಲುಗಳ), ಬೂಚಣ (73 ಸಾಲುಗಳ), ಸಿಂಗಿಮಯ್ಯ (65 ಸಾಲುಗಳ), ಮೊದಲಾದ ಶ್ರಾವಕರ ಶಾಸನಗಳೊಡನೆ ಹೋಲಿಸಿ ನೋಡಿದರೆ ಇದು ಸ್ಪಷ್ಟಗೊಳ್ಳುವುದು. ಮುನಿ ಮಲ್ಲಿಷೇಣನ ಶಾಸನ (223 ಸಾಲುಗಳ) ಹಾಗೂ ಶ್ರಾವಕಿ ಮಾಚಿಕಬ್ಬೆಯ (224ಸಾಲುಗಳ) ಶಾಸನಗಳು ಅಸಾಧಾರಣ ಪ್ರಮಾಣದಲ್ಲಿದ್ದು ಇವು ಅಪರೂಪದ ನಿದರ್ಶನಗಳೆಂದು ಭಾವಿಸಬಹುದು.

7. ಉಬ್ಬುಶಿಲ್ಪಗಳು : ನಿಸಿಧಿ ಸ್ತಂಭಗಳ ನಾಲ್ಕು ಮುಖಗಳಲ್ಲೂ ಶಾಸನಗಳನ್ನು, ವ್ರತಾಚರಣೆಯನ್ನು ಸಂಕೇತಿಸುವ ಉಬ್ಬುಶಿಲ್ಪಗಳನ್ನು ಕೊರೆಯಲಾಗಿದೆ. ಆದರೆ, ಸ್ತಂಭದ ಒಂದೇ ಮುಖದಲ್ಲಿ ಮುಕ್ತಾಯಗೊಳ್ಳುವ ನಿಸಿಧಿಗಳು ಉಂಟು. ಮೇಲ್ಭಾಗದಲ್ಲಿ ಬಿಡಿಸಲಾದ ಉಬ್ಬುಶಿಲ್ಪ ಹಾಗೂ ಮಂದರ-ಮಾದರಿಗಳು ಇಂಥಹ ಸ್ತಂಭಗಳ ಪ್ರಧಾನ ಅಂಗಗಳು. ಮಹಾನವಮಿ ಮಂಟಪಗಳ ಕಂಬಗಳು ಪಿರಮಿಡೀಯ ರೂಪತಾಳಿದ್ದರೆ, ಅದರಲ್ಲೊಂದು ದೇವಾಲಯದ ಮುಂಜೂರಿಯನ್ನು ಅನುಕರಿಸಿದೆ. ಕೆಲವು ತ್ರಿಕೋನಾಕಾರದಲ್ಲಿದ್ದರೆ, ಕೆಲವು ದುಂಡಗಾಗಿವೆ. ರಾಷ್ಟ್ರಕೂಟ ಇಂದ್ರನ ನಿಸಿಧಿಯನ್ನು ಹೊರತುಪಡಿಸಿ, ಈ ಸ್ತಂಭಗಳೆಲ್ಲ ಉಬ್ಬುಶಿಲ್ಪಗಳನ್ನು ಹೊಂದಿವೆ. ಇವುಗಳ ಮಾಡಗಳ ವಿನ್ಯಾಸದಲ್ಲಿ, ಶಾಸನ ಸಾಲುಗಳ ಜೋಡಣೆ ಹಾಗೂ ಮತ್ತಿನ್ನಿತರ ಸಂಯೋಜನಾ ಕ್ರಮದಲ್ಲಿ, ಸಾಕಷ್ಟು ಭಿನ್ನತೆಗಳಿವೆ. ಅತ್ಯಂತ ಅಲಂಕೃತವಾದ ಫಲಕಗಳು ಮೂರು ಹಂತಗಳಲ್ಲಿ ವಿಭಜಿತಗೊಂಡಿದ್ದರೆ, ಅತ್ಯಂತ ಸರಳವಾದವುಗಳು ತೀರಾ ಒರಟಾಗಿದ್ದು ಒಂದೇ ಅಂಕಣದಲ್ಲಿ ಮುಕ್ತಾಯಗೊಂಡಿವೆ.


8. ಸಾಮಾಜಿಕ ಅಂತಸ್ತು ಮತ್ತು ಅವರ ಲಿಂಗ ವೈವಿಧ್ಯತೆ : ಸಾಧಕರ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಅಂತಸ್ತುಗಳನ್ನಲ್ಲದೆ, ಅವರ ಲಿಂಗಭೇದವನ್ನು ಸ್ತಂಭದ ಮೇಲಿರುವ ಉಬ್ಬು ಶಿಲ್ಪಗಳಿಂದ ಗುರುತಿಸಬಹುದು. ಜಿನನ ಸನ್ನಿಧಿಯಲ್ಲಿರುವ ವ್ಯಕ್ತಿಯನ್ನು ಗುರು, ಶ್ರಾವಕ ಇಲ್ಲವೆ ಶ್ರಾವಕಿಯರ ರೂಪದಲ್ಲಿ ತೋರಿಸಲಾಗಿದ್ದು, ಇವರು ಪರ್ಯಂಕಾಸನದಲ್ಲಿ ಕುಳಿತು, ಅಂಜಲಿ ಹಸ್ತರಾಗಿ (ಇಲ್ಲವೆ ಆರಾಧನಾ ವ್ಯಾಖ್ಯಾನ ಮುದ್ರೆಯಲ್ಲಿರುವಂತೆ) ರುವುದು ಸಾಮಾನ್ಯ. ನಿಸಿಧಿ ಸ್ಮಾರಕಗಳ ಕಲಾವೈವಿಧ್ಯತೆ ಸೀಮಿತ ಮಟ್ಟದ್ದಾಗಿದೆ. ಇದಕ್ಕೆ ಕಾರಣ, ಅವುಗಳನ್ನೆಲ್ಲ ಒಂದೇ ಬಗೆಯ ಸಾಂಪ್ರದಾಯಿಕ ಸೂತ್ರಗಳನ್ನನುಸರಿಸಿ

8. 72.




47 ಶುಭಚಂದ್ರಸಿದ್ಧಾಂತದೇವನ ನಿಸಿಧಿಸ್ತಂಭ (135)   48 ಪ್ರಭಾಚಂದ್ರನ ಸಿದ್ಧಾಂತದೇವನ ನಿಸಿಧಿಸ್ತಂಭ (173)   49 ಮೇಘಚಂದ್ರತ್ರೈವಿದ್ಯ ದೇವನ ನಿಸಿಧಿಸ್ತಂಭ (156)


ಸಿದ್ಧಗೊಳಿಸಿದ್ದಾಗಿರಬಹುದು. ಶ್ರೀಮಂತ ಹಾಗೂ ಪ್ರಭಾವಿ ವ್ಯಕ್ತಿಗಳಿಗೆ ಬೃಹತ್ ಪ್ರಮಾಣದ ಅಥವಾ ಹೆಚ್ಚು ಅಲಂಕೃತವಾದ ನಿಸಿಧಿ ಸ್ತಂಭಗಳನ್ನು ನಿಲ್ಲಿಸಿ, ಸಾಮಾನ್ಯರಿಗೆ ಸರಳ ಸ್ತಂಭಗಳನ್ನು ನಿಲ್ಲಿಸಲಾಗುತ್ತಿತ್ತೆಂದು ಭಾವಿಸಲು ಆಧಾರಗಳಿಲ್ಲ. ಉದಾಹರಣೆಗೆ, ಪ್ರಭಾವಿ ವ್ಯಕ್ತಿಯಾದ ಗಂಗರಾಜನು ತನ್ನ ಬಂಧುಬಾಂಧವರಿಗೆ ನಿಲ್ಲಿಸಿದ ನಿಸಿಧಿಗಳಲ್ಲಿ ಯಾವ ಅಂತರವೂ ಇರದೆ ಇವುಗಳಲ್ಲಿ ಹೆಚ್ಚಿನವು ನಿರಾಶಾದಾಯಕ ಕಲಾಕೃತಿಗಳಾಗಿವೆ.



50 ನಯಕೀರ್ತಿದೇವನ
ನಿಸಿಧಿಸ್ತಂಭ (73)



51 ಪೋಚಿಕಬ್ಬೆಯ
ನಿಸಿಧಿಸ್ತಂಭ (136)




52 ಮಾಚಿಕಬ್ಬೆಯ
ನಿಸಿಧಿಸ್ತಂಭ (176)

ಕಂಡರಿಸಿ, ಸಾಲುಗಳ ಮಧ್ಯದ ಅಂತರದಲ್ಲಿ ಸಾಮ್ಯತೆಯನ್ನು ಸಾಧಿಸಿಕೊಂಡು, ಸಾಲುಗಳು ಒಂದು ತುದಿಯಿಂದ ಇನ್ನೊಂದು ತುದಿಗೆ ಸರಾಗವಾಗಿ ಸಾಗುವಂತೆ ಎಚ್ಚರವಹಿಸಲಾಗಿದೆ. 600-900ರ ಕಾಲಾವಧಿಯಲ್ಲಿ ಹೆಚ್ಚು ಪ್ರಸಾರದಲ್ಲಿದ್ದ ಬಂಡೆಗಲ್ಲು ಶಾಸನಗಳ ಕೆಲವು ಲಕ್ಷಣಗಳನ್ನು ಮೈಗೂಡಿಸಿಕೊಂಡಿರುವ ಈ ಶಾಸನವು 12ನೆಯ ಶತಮಾನದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದ ಸ್ತಂಭಶಾಸನಗಳಿಗೆ ನಾಂದಿಹಾಕಿದಂತಿದೆ. ಬಂಡೆಗಲ್ಲಿನ ನಿಸಿಧಿಗಳಂತೆ ಇಲ್ಲಿ ಶಾಸನಪಾಠಕ್ಕೆ ಪ್ರಾಧಾನ್ಯತೆ ದೊರಕಿದೆ. ಹೀಗಾಗಿ, ಶಿಲ್ಪಾಲಂಕಾರವಿಲ್ಲಿ ಗೌಣಗೊಂಡಿದೆ. ಆದರೆ, ಈ ಸ್ತಂಭದ ಉತ್ತರ ಮುಖದಲ್ಲಿ ಬಿಡಿಸಲಾದ ಆಸೀನ ಜಿನನ ಸರಳ ಉಬ್ಬುಶಿಲ್ಪವು 12ನೆಯ ಶತಮಾನದ ಕಂಬಗಳ ಅಲಂಕಾರಿಕ ಅಂಕಣ ಫಲಕಗಳನ್ನು ನಿರೀಕ್ಷಿಸುವಂತಿದೆ. ಸ್ತಂಭದ ಶಿಖರಾಗ್ರವನ್ನಲಂಕರಿಸಿರುವ ಕಮಲವು ಮುಂಬರುವ ಶಿಖರ ಮಾದರಿಗಳಿಗಿಂತ ಭಿನ್ನವೆನಿಸಿದರೂ ಆಕರ್ಷಕವಾಗಿದೆ. ಚಿಕ್ಕಬೆಟ್ಟದ ಸ್ತಂಭ-ನಿಸಿಧಿಗಳಲ್ಲಿಯೇ ಅತ್ಯಂತ ಪ್ರಾಚೀನವಾದ ಈ ಸ್ಮಾರಕದ ಐತಿಹಾಸಿಕ ಮಹತ್ವ ಅಪಾರವಾದದ್ದು. ಗಾತ್ರದಲ್ಲಿ ದೊಡ್ಡದೂ ಕಲಾಕೌಶಲ್ಯದಲ್ಲಿ ಸರಳವೂ ಆಗಿರುವ ಈ ಕಣಶಿಲಾ ಸ್ತಂಭವು 12ನೆಯ ಶತಮಾನಗಳ ಬಳಪದ ಕಲ್ಲಿನ ಕಂಬಗಳಿಗಿಂತ ಸ್ವಲ್ಪ ಭಿನ್ನವಾಗಿರುವುದನ್ನು ಕಡೆಗಾಣುವಂತಿಲ್ಲ.

ಲಕ್ಷ್ಮೀಮತಿ ಮಂಟಪ (1113-1121): ಎರಡುಕಟ್ಟೆ ಬಸದಿಯ ಪೂರ್ವಕ್ಕಿರುವ ಲಕ್ಷ್ಮೀಮತಿ ಮಂಟಪವು ನಾಲ್ಕು ನಿಸಿಧಿಗಳಿಗೆ ಎಡೆಮಾಡಿಕೊಟ್ಟಿದೆ. ಅವುಗಳಲ್ಲಿ ಮೂರು ಲಕ್ಷ್ಮೀಮತಿಯ ಬಂಧುಗಳಿಗೆ, ನಾಲ್ಕನೆಯದು ಅವಳ ಕುಲಗುರುವಿಗೆ ಸಂಬಂಧಿಸಿದೆ. ಲಕ್ಷ್ಮಿಯ ಸೋದರ ಬೂಚಣನು ಇಲ್ಲಿ ಗೌರವಿಸಲಾದವರಲ್ಲಿ ಮೊದಲಿಗನು (1113); ಎರಡನೆಯವನು (1115) ಲಕ್ಷ್ಮಿಯ ಗುರುವಿನ (ಪ್ರಭಾಚಂದ್ರನ) ಗುರು, ಮೇಘಚಂದ್ರ ಸಿದ್ಧಾಂತದೇವನು; ಮೂರನೆಯವಳು (1120) ಲಕ್ಷ್ಮಿಯ ಸೋದರಿಯಾದ ದೇಮತಿ. ಕೊನೆಯವಳು (1121) ಸ್ವತಃ ಲಕ್ಷ್ಮಿ. ನಿಸಿಧಿಗಳ ಜೋಡಣೆಯ ಕ್ರಮವನ್ನು ಯಾವಾಗಲೋ ಕದಡಿ, ಲಕ್ಷ್ಮಿಯ ನಿಸಿಧಿಯನ್ನು ಮೇಘಚಂದ್ರ ಮತ್ತು ದೇಮತಿಯರ ನಿಸಿಧಿಗಳ ಮಧ್ಯೆ ಸೇರಿಸಿದಂತೆ ಕಂಡುಬರುವುದು.

ಲಕ್ಷ್ಮೀಮತಿಯು ಮೃತಪಟ್ಟವರಲ್ಲಿ ಕೊನೆಯವಳಾಗಿದ್ದುದರಿಂದ ಗಂಗಾರಾಜನೊಡನೆ ಸೇರಿ, ಅವಳು ಮೊದಲ ಮೂರು ನಿಸಿಧಿಗಳನ್ನು ಸ್ಥಾಪಿಸಿದಳೆಂದು ಊಹಿಸಬಹುದು. ಗಂಗರಾಜನು ತನ್ನ ತಾಯಿಯ ನಿಸಿಧಿಯನ್ನು ಈ ಮಂಟಪದಲ್ಲಿ ನಿಲ್ಲಿಸದೆ ಪ್ರತ್ಯೇಕ ಮಂಟಪದಲ್ಲಿ ನಿಲ್ಲಿಸಿರುವುದು ಇಲ್ಲಿಯ ವಿಶೇಷತೆ.

ಚಾವಣಿ ಹೊತ್ತ ನಾಲ್ಕು ಸರಳ ಕಂಭಗಳನ್ನು ಬಿಟ್ಟರೆ, ಈ ಚಚ್ಚೌಕು (11'.10" × 11'.10") ಮಂಟಪವು ಅತ್ಯಂತ ಸರಳವಾಗಿದೆ. ಇಲ್ಲಿನ ನಿಸಿಧಿಗಂಬಗಳು ಕಲಾದೃಷ್ಟಿಯಲ್ಲಿ ಒರಟಾಗಿದ್ದು, ಗಾತ್ರದಲ್ಲಿ ಹಾಳತಾಗಿವೆ.




53 ಶುಭಚಂದ್ರಸಿದ್ಧಾಂತದೇವನ ನಿಸಿಧಿಸ್ತಂಭದ ಫಲಕಗಳು (135)

i . ಬೂಚಣದ ನಿಸಿಧಿ ಸ್ತಂಭದ (5'.5" × 1") ಉತ್ತರ ಮತ್ತು ಪಶ್ಚಿಮ ಮೈಯನ್ನು ಶಾಸನ ಆವರಿಸಿದೆ. ಕೆಲವು ಗೀಚುಗಳನ್ನು ಬಿಟ್ಟರೆ, ಇದರ ಪೂರ್ವ ಮುಖ ಬರಿದಾಗಿದೆ. ಉತ್ತರ ಮುಖದಲ್ಲೊಂದು ಉಬ್ಬುಶಿಲ್ಪವಿದೆ. ಈ ಫಲಕವು (10 ½"× 9½") ಈಗ ಸಾಕಷ್ಟು ರೂಪುಗೆಟ್ಟಿದ್ದು ವಿಶೇಷ ಗಮನಾರ್ಹವೆನಿಸುವುದಿಲ್ಲ. ಅದು ಎರಡು ಲಂಬ ವಿಭಾಗಗಳಲ್ಲಿ ವಿಭಜಿತವಾಗಿದೆ. ಮೇಲಿನ ಕಮಾನಿನಾಕಾರದ ಮಾಡಿನಲ್ಲಿ ಆಸೀನ ಜಿನನಿದ್ದರೆ, ಕೆಳಗಿನ ಚೌಕಿನಲ್ಲಿ ಮುನಿಯನ್ನು, ಅವನ ಎದುರಿನ ಆರಾಧನಾಪೀಠದಾಚೆ ಶ್ರಾವಕನೊಬ್ಬನನ್ನು ಪ್ರದರ್ಶಿಸಲಾಗಿದೆ. ಅಂಜಲಿ ಮುದ್ರೆಯಲ್ಲಿ ಕುಳಿತ ಬೂಚಣನಿಗೆ ಮುನಿಯು ಆರಾಧನೆಯನ್ನು ಬೋಧಿಸುತ್ತಿರುವುದನ್ನು ಇದು ಸೂಚಿಸುವುದು. ಕಲೆಯ ದೃಷ್ಟಿಯಲ್ಲಿ ಇದೊಂದು ನಿರಾಶಾದಾಯಕ ಕೃತಿ. ಶಾಸನದ ಅಕ್ಷರಗಳು ಗಾತ್ರದಲ್ಲಿ ಭಿನ್ನ ಭಿನ್ನವಾಗಿವೆ; ಸಾಲುಗಳ ಮಧ್ಯದ ಅಂತರವನ್ನು ಶಿಸ್ತಿನಿಂದ ಕಂಡರಣೆಕಾರನು ಕಾಯ್ದುಕೊಂಡಿಲ್ಲ. ಲಿಪಿಕಾರನ ಹೆಸರನ್ನಾಗಲಿ, ರೂವಾರಿಯ ಹೆಸರನ್ನಾಗಿಲಿ, ಶಾಸನದಲ್ಲಿ ಸ್ಪಷ್ಟಪಡಿಸಿಲ್ಲ.

ii. ಮುನಿ ಮೇಘಚಂದ್ರ ತ್ರೈವಿದ್ಯದೇವನ ನಿಸಿಧಿಸ್ತಂಭದ ಅತ್ಯಂತ ಗಮನಾರ್ಹ ಭಾಗವೆಂದರೆ ಅದರ ಪದ್ಮಪೀಠ. ಇದರ ನಾಲ್ಕು ಮುಖಗಳಲ್ಲಿ ಆಸೀನ ಜಿನರಿದ್ದು, ನಾಲ್ಕೂ ಸರಳವಾಗಿವೆ ಎನ್ನುವುದಕ್ಕಿಂತ ಒರಟಾಗಿವೆ ಎಂದರೇ ಸರಿಯೆನಿಸುವುದು. ಸ್ತಂಭದ ಅಡಿಭಾಗದಲ್ಲಿರುವ ಸುರುಳಿಯ ಅಲಂಕಾರವನ್ನು ಬಿಟ್ಟರೆ ಈ ಸ್ತಂಭವೂ ಬೂಚಣನ ನಿಸಿಧಿ ಸ್ತಂಭದಷ್ಟೇ ನಿರಾಶಾದಾಯಕವಾಗಿದೆ.

ಅಂಕಣ ಫಲಕಗಳಲ್ಲಿ ಆರಾಧನಾವ್ರತದ – ಅಂದರೆ, ಗುರುವಿನ ಸಮಾಧಿ ದೀಕ್ಷೆ ಮತ್ತು ಆರಾಧನೆಯ ಪಾಲನೆ - ನಿರೂಪಣೆ ಇಲ್ಲದಿರುವುದು ಇಲ್ಲಿ ಗಮನಾರ್ಹ. ಸನ್ಯಸನ ಸಮಾಧಿ, ಸಲ್ಲೇಖನಾ ಮೊದಲಾದ ಯಾವ ಪದವನ್ನೂ ಶಾಸನದಲ್ಲಿ ಹೆಸರಿಸಿಲ್ಲವಾದುದರಿಂದ



54 ಪ್ರಭಾಚಂದ್ರ ಸಿದ್ಧಾಂತದೇವನ ನಿಸಿಧಿಸ್ತಂಭದ ಫಲಕಗಳು (173)


ನಿಸಿಧಿ ಪಡೆದವನು ಸಮಾಧಿವ್ರತವನ್ನಾಚರಿಸಿ ಮಡಿದನೋ ಅಥವಾ ಸಹಜವಾಗಿ ಸಾವನ್ನಪ್ಪಿದನೋ ಎಂಬುದರ ಬಗ್ಗೆ ಅನಿಶ್ಚಿತತೆ ಉಂಟಾಗುವುದು.[9] ಆದರೆ, ಮೇಘಚಂದ್ರನು 'ಪಲ್ಯಂಕಾಸನದೊಳಿರ್ದ್ದು ಆತ್ಮಭಾವನೆಯಂ ಭಾವಿಸುತ್ತಂ ದೇವಲೋಕಕ್ಕೆ ಸಂದರ್', ಎಂದು ಶಾಸನವು ವರ್ಣಿಸುವುದರಿಂದ ಅವನು ನಿಸಿಧಿ ಗೌರವಕ್ಕೆ ಅರ್ಹನಾಗಿದ್ದನೆಂದು ಭಾವಿಸಬಹುದು.

ಈ ಶಾಸನದ ಪಾಠವನ್ನು ಶ್ರೇಷ್ಠ ಕವಿಯೊಬ್ಬ ರಚಿಸಿದನು. ಆದರೆ 'ಮೃದು ರೇಖಾವಿಳಾಸ' ಎಂಬ ಬಿರುದು ಹೊತ್ತ ಹೆಗ್ಗಡೆ ಚಾವರಾಜನಾಗಲಿ, 'ಬಿರುದ ರೂವಾರಿ ಮುಖತಿಲಕ'ನೆಂದು ಸಾರಿಕೊಂಡಿರುವ ಗಂಗಾಚಾರಿಯಾಗಲಿ, ಈ ನಿಸಿಧಿಯನ್ನು ಒಂದು ಕಲಾತ್ಮಕ ಕೃತಿಯನ್ನಾಗಿಸಲು ಸಫಲರಾಗಿಲ್ಲವೆಂದೇ ಹೇಳಬೇಕಾಗುವುದು.

iii. ಮೂರನೆಯ ಸ್ತಂಭವನ್ನು ಲಕ್ಷ್ಮೀಮತಿಯ ಸ್ಮರಣಾರ್ಥ ನಿಲ್ಲಿಸಲಾಯಿತು. ಶಿಲೆಯ ಆಯ್ಕೆ ಮತ್ತು ಅದನ್ನು ನಯಗೊಳಿಸುವಿಕೆಯಿಂದ ಆರಂಭಿಸಿ ಅಕ್ಷರಗಳನ್ನು ಕಂಡರಿಸುವವರೆಗೆ ಎಳ್ಳಷ್ಟೂ ನೈಪುಣ್ಯವನ್ನು ತೋರದ, ಬಹುಶಃ ತರಾತುರಿಯಲ್ಲಿ ಮಾಡಿ ಮುಗಿಸಿದ, ಸ್ತಂಭವಿದಾಗಿದೆ. ಮುಕ್ಕಾಲು ಮೇಲ್ಭಾಗವನ್ನು ಲಂಬ ವಿಭಾಗದಲ್ಲಿ ವಿಭಜಿಸಿ, ಮೇಲಿನ ಅಂಕಣದಲ್ಲಿ ಆಸೀನ ಜಿನನನ್ನು, ಕೆಳಗಿನ ಅಂಕಣದಲ್ಲಿ ಲಕ್ಷ್ಮೀಮತಿ ಮತ್ತು ಅವಳ ಗುರುವನ್ನು ಪ್ರದರ್ಶಿಸಲಾಗಿದೆ. ಕೈಮುಗಿದುಕೊಂಡು ವಕ್ರವಾಗಿ ಕುಳಿತ ಲಕ್ಷ್ಮಿಗೆ ಅರ್ಧಾಸನದಲ್ಲಿರುವ ಗುರು ಬೋಧನೆ ನೀಡುತ್ತಿರುವನು. ಇಲ್ಲಿ ಠವಣೆ ಕೋಲು ಇಲ್ಲ. ಜಡತ್ವ ತುಂಬಿದ ಮೈಮಾಟ ಹಾಗೂ ಅಸಂತೃಪ್ತ ಬಗೆಯ ಅಂಕಣ ಸಂಯೋಜನೆ ಈ ಫಲಕಗಳ ಪ್ರಮುಖ ಲಕ್ಷಣಗಳಾಗಿವೆ.

---

9. 156.




55 ನಯಕೀರ್ತಿದೇವನ ನಿಸಿಧಿಸ್ತಂಭದ ಫಲಕಗಳು (73)

ಈ ಸ್ತಂಭದ ಉತ್ತರ ಮುಖದ ಮೇಲೊಂದು ಸಂಕ್ಷಿಪ್ತ ಶಾಸನವಿದ್ದು ಉಳಿದ ಮೂರು ಮುಖಗಳು ಬರಿದಾಗಿವೆ.[10]

iv. ದೇಮತಿಯನ್ನು ಗೌರವಿಸಲು ನಿರ್ಮಿಸಿದ ಸ್ತಂಭವೂ ಕಲಾಕೌಶಲ್ಯದಲ್ಲಿ ಮಿಕ್ಕವುಗಳಿಗಿಂತ ಭಿನ್ನವಾಗಿಲ್ಲ. ಶಾಸನಪಾಠವು ಈ ಸ್ತಂಭದ ಉತ್ತರ ಮತ್ತು ಪಶ್ಚಿಮ ಮುಖಗಳನ್ನಾವರಿಸಿದೆ. ಶಾಸನದ ಆರಂಭದಲ್ಲಿ (ಉತ್ತರ ಮುಖ) ಉಬ್ಬುಶಿಲ್ಪಗಳಿವೆ. ಈ ಅಂಕಣ ಫಲಕವನ್ನು ಲಂಬವಾಗಿ ವಿಭಜಿಸಿ, ಮೇಲಿನ ಭಾಗದಲ್ಲಿ ಜಿನನನ್ನು ಮತ್ತು ಕೆಳಗಿನ ಭಾಗದಲ್ಲಿ ಅಂಜಲಿ ಮುದ್ರೆಯಲ್ಲಿ ಗುರುವಿಗಭಿಮುಖಿಯಾಗಿ ಕುಳಿತ ದೇಮತಿಯನ್ನು ಪ್ರದರ್ಶಿಸಲಾಗಿದೆ. ಆರಾಧನಾಪೀಠವು ಅವರಿಬ್ಬರನ್ನು ಬೇರ್ಪಡಿಸಿದೆ. ಕೆಳಗಿನ ಫಲಕದಲ್ಲಿರುವವರು ಪಾರ್ಶ್ವಮುಖಿಗಳಾಗಿ ಅರ್ಧಾಸನದಲ್ಲಿ ಕುಳಿತಿರುವರು. ಮೂರ್ತಿಗಳನ್ನು ಒರಟೊರಟಾಗಿ ಬಿಡಿಸಲಾಗಿದೆ. ದೇಮತಿಯು ದೊಡ್ಡ ಮನೆತನಕ್ಕೆ ಸೇರಿದವಳಾಗಿದ್ದರೂ, ಧೈರ್ಯದಿಂದ ಸಾವನ್ನಪ್ಪಿ ಸಮಾಜದ ಗೌರವಕ್ಕೆ ಪಾತ್ರಳಾಗಿದ್ದರೂ, ಅವಳ ಮರಣವನ್ನು ಶಾಶ್ವತಗೊಳಿಸಲು ನೆಟ್ಟ ನಿಸಿಧಿಸ್ತಂಭವು ಎಳ್ಳಷ್ಟೂ ಕಲಾಕೌಶಲ್ಯದ ಔನ್ನತ್ಯವನ್ನು ಪಡೆದುಕೊಳ್ಳದಿರುವುದು ಆಶ್ಚರ್ಯಕರ.

ಈ ನಾಲ್ಕು ನಿಸಿಧಿಗಳು ಹೊಯ್ಸಳ ಕಾಲದ (12ನೆಯ ಶತಮಾನ) ನಿಸಿಧಿಮಂಟಪಗಳಲ್ಲಿಯೆ ಅತ್ಯಂತ ಪ್ರಾಚೀನವಾದವುಗಳು. ಆದರೆ ಕಲಾಕೌಶಲ್ಯದ ದೃಷ್ಟಿಯಲ್ಲಿ ಇವಾವೂ ಹೊಯ್ಸಳ ರೂವಾರಿಗಳ ಉನ್ನತ ಸಾಧನೆಯನ್ನು ಪ್ರತಿಬಿಂಬಿಸುವುದಿಲ್ಲ. ಮುನಿ ಮೇಘಚಂದ್ರನಿಗಾಗಿ ನಿರ್ಮಿಸಿದ ನಿಸಿಧಿಯ ಮೇಲೆ ಆರಾಧನಾ ದೀಕ್ಷೆ ಇಲ್ಲದಿರುವುದು

10. 157.



56 ಮಹಾನವಮಿ ಮಂಟಪದ ನಿಸಿಧಿಸ್ತಂಬಧ ಫಲಕಗಳು

ಮತ್ತು ನಿಸಿಧಿ ಗೌರವಕ್ಕೊಳಗಾದವಳೊಡನೆ ಇನ್ನೊಬ್ಬ ಮಹಿಳೆಯನ್ನು ಸೇರಿಸಿರುವುದು ಕುತೂಹಲಕಾರಕ.

ಪೋಚಿಕಬ್ಬೆಯ ಮಂಟಪ (1120-1123) : ಚಾವುಂಡರಾಯ ಬಸದಿಯ ದಕ್ಷಿಣಕ್ಕಿರುವ ಈ ಮಂಟಪವು (10'.2" × 2'.10") ಈವರೆಗೂ ಪರಿಶೀಲಿಸಿದ ಮಂಟಪಗಳ ವಾಸ್ತು ಶಿಲ್ಪಿಯ ಲಕ್ಷಣಗಳನ್ನೇ ಹೋಲುವುದು. ಇದೂ ತೆರೆದ ಮಂಟಪವಾಗಿದ್ದು ನಾಲ್ಕು ಕಂಬಗಳನ್ನೊಳಗೊಂಡಿದೆ. ನಿಸಿಧಿಸ್ತಂಭಗಳು 2'.3" ಎತ್ತರದ ಜಗಲಿಯ ಮಧ್ಯ ನಿಂತಿವೆ.

(ಅ) ಇಲ್ಲಿರುವ ಎರಡು ನಿಸಿಧಿಗಳಲ್ಲಿ ಉತ್ತರಕ್ಕಿರುವ ಸ್ತಂಭವನ್ನು ಜೂನ್ 3, 1120ರಂದು ಗಂಗರಾಜನ ತಾಯಿ ಪೋಚಿಕಬ್ಬೆಯ ಗೌರವಾರ್ಥ ನಿಲ್ಲಿಸಲಾಯಿತು. ದಕ್ಷಿಣಕ್ಕಿರುವುದನ್ನು ಗಂಗರಾಜನ ಗುರು ಶುಭಚಂದ್ರಸಿದ್ಧಾಂತದೇವನ ಗೌರವಾರ್ಥ ಆಗಸ್ಟ್ 3, 1123ರಂದು ನಿಲ್ಲಿಸಲಾಯಿತು. 1120ರಲ್ಲಿ, ಅಥವಾ ನಿಸಿಧಿ ಸ್ತಂಭಗಳ ಮರುಹೊಂದಾಣಿಕೆಮಾಡಿದ ನಂತರ, 1123ರಲ್ಲಿ, ಈ ಮಂಟಪವನ್ನು ಕಟ್ಟಿರಬೇಕು. ಪೋಚಿಕಬ್ಬೆಯ ನಿಸಿಧಿಸ್ತಂಭವು (8'.4" × 1') ಶುಭಚಂದ್ರಸಿದ್ಧಾಂತದೇವನ ಸ್ತಂಭಕ್ಕಿಂತ ಸ್ವಲ್ಪ ದೊಡ್ಡದಾಗಿದ್ದು ಅದು 49 ಸಾಲುಗಳ ಶಾಸನವನ್ನು ಹೊಂದಿದೆ.[11] ಪೂರ್ವಮುಖದ ಮೇಲಿನ ಫಲಕಗಳನ್ನು ಬಿಟ್ಟರೆ ಸ್ತಂಭದ ಶಿಖರ ಭಾಗವು ಅಪೂರ್ಣಾವಸ್ಥೆಯಲ್ಲಿಯೇ ಉಳಿದಿವೆ. ಕಮಾನಿನಾಕಾರದ ಅಂಕಣದಲ್ಲಿರುವ ಈ ಫಲಕದಲ್ಲಿ ಪೋಚಿಕಬ್ಬೆ (ಬಲಗಡೆ) ಮತ್ತು ಮುಕ್ಕೊಡೆಯ ಕೆಳಗೆ ಸಿಂಹಾಸನಾರೂಢನಾಗಿರುವ ಜಿನನನ್ನು (ಎಡಗಡೆ) ನಿರೂಪಿಸಲಾಗಿದೆ. ಜಿನನ ಹಿಂದೆ ಚೌರಿಧಾರಿಗಳಿರುವರು.

ಪೋಚಿಕಬ್ಬೆಯು ಆರಾಧನಾ ಭಂಗಿಯಲ್ಲಿ ಅಂಜಲಿ ಮುದ್ರಿತಳಾಗಿ ನೆಲದ ಮೇಲೆ

---

11. 136.

ಕುಳಿತಿದ್ದರೆ, ಚೌರಿ ಹಿಡಿದವನು ಅವಳ ಹಿಂದೆ ನಿಂತಿರುವನು. ಜಿನನನ್ನು ಬಿಟ್ಟರೆ ಉಳಿದಿಬ್ಬರು ಪಾರ್ಶ್ವಮುಖಿಗಳಾಗಿರುವರು. ಇಲ್ಲಿಯ ಶಿಲ್ಪಗಳಾವೂ ಕಲಾತ್ಮಕವಾಗಿಲ್ಲ. ಈ ಸ್ತಂಭದ ಉತ್ತರ, ಪಶ್ಚಿಮ ಮತ್ತು ದಕ್ಷಿಣ ಮುಖಗಳೆಲ್ಲ ಖಾಲಿ ಇವೆ. 12ನೆಯ ಶತಮಾನದ ಅಗ್ರಗಣ್ಯ ಜೈನ ಶ್ರಾವಕಿಯೂ ಮತ್ತು ಮಹಾನ್ ದಂಡನಾಯಕನ ತಾಯಿಯೂ ಆದ ಪೋಚಿಕಬ್ಬೆಯ ನಿಸಿಧಿಯನ್ನು ಇಷ್ಟೊಂದು ಒರಟಾಗಿ ಕೆತ್ತಿ, ತರಾತುರಿಯಲ್ಲಿ ನೆಟ್ಟಿರುವುದು ಆಶ್ಚರ್ಯಕರವೆನಿಸುವುದು. ಇದನ್ನು 12ನೆಯ ಶತಮಾನದಲ್ಲಿ ಶ್ರವಣಬೆಳ್ಗೊಳದ ಹೆಸರಾಂತ ರೂವಾರಿಯೊಬ್ಬ ಕೆತ್ತಿದನೆಂಬುದು ಇನ್ನೂ ದಿಗ್ಭ್ರಮೆಗೊಳಿಸುವ ವಿಷಯವಾಗಿದೆ.

(ಆ) ಮುನಿ ಶುಭಚಂದ್ರದೇವನ ನಿಸಿಧಿಯು (8'.3" × 1'.5") ಪೋಚಿಕಬ್ಬೆಯ ನಿಸಿಧಿಯಷ್ಟೇ ನಿರಾಶಾದಾಯಕವಾಗಿದೆ. 156 ಸಾಲಿನ ಶಾಸನವನ್ನು ಈ ಕಂಬದ ನಾಲ್ಕು ಬದಿಗಳಲ್ಲಿ ಕಂಡರಿಸಲಾಗಿದ್ದರೆ,[12] ನಿಸಿಧಿ ಪಟ್ಟಿಕೆಗಳು ಶಿಲಾಫಲಕದ ಮೇಲ್ಭಾಗವನ್ನು ಆವರಿಸಿವೆ. ಕಂಬದ ಶಿಖರವನ್ನು ಲಂಬ ಪಟ್ಟಿಕೆಗಳಲ್ಲಿ ವಿಂಗಡಿಸಲಾಗಿದ್ದು, ಸೂತ್ರಗಳನ್ನು ರೇಖಿಸಿದ ಮೇಲೆ ಕೆತ್ತನೆಯನ್ನು ಕೈಬಿಡಲಾಗಿರವುದರಿಂದ ಇದು ಅಪೂರ್ಣಾವಸ್ಥೆಯಲ್ಲಿ ಉಳಿದುಕೊಂಡಿದೆ.

ಪೂರ್ವ ಮುಖದ ನಿಸಿಧಿಫಲಕವನ್ನು ಮಿಕ್ಕವುಗಳಿಗಿಂತ ಹೆಚ್ಚು ನೈಪುಣ್ಯತೆಯಿಂದ ಕೆತ್ತಲಾಗಿದೆ. ಅದು ಎರಡು ಅಂಕಣಗಳನ್ನು ಹೊಂದಿದ್ದು ಅರೆಗಂಬ ಮತ್ತು ರವಣೆ ಕೋಲಿನಿಂದ ಅವು ಬೇರ್ಪಟ್ಟಿವೆ. ಎಡಗಡೆಯ ಅಂಕಣದಲ್ಲಿ, ಪರ್ಯಂಕಾಸನದಲ್ಲಿ ಕುಳಿತ ಜಿನನಿರುವನು; ಅವನ ಮೇಲೆ ಮುಕ್ಕೊಡೆ ಇದೆ. ಅವನು ಎಡಕ್ಕೆ ಮುನಿಯೊಬ್ಬನು ಮುಕ್ಕಾಲು ಪಾರ್ಶ್ವಮುಖಿಯಾಗಿ ಕುಳಿತಿರುವನು. ಅರ್ಧಾಸನದಲ್ಲಿರುವ ಈ ಮುನಿಯು ತನ್ನ ಕಟಿ ಮತ್ತು ಮಡಚಿದ ಬಲಗಾಲ ಸುತ್ತ ಯೋಗಪಟ್ಟಿಯನ್ನು ಸುತ್ತಿಕೊಂಡಿರುವನು. ಅವನು ಎಡಗೈಯನ್ನು ಲಂಬವಾಗಿ ಆಸನದ ಮೇಲಿಟ್ಟಿದ್ದರೆ, ತೂಗುಬಿಟ್ಟ ಅವನ ಬಲಗೈ ಬಲಮೊಣಕಾಲನ್ನು ಮುಟ್ಟಿದೆ. ಫಲಕದ ಖಾಲಿ ಜಾಗವನ್ನು ಪಿಂಛ ಮತ್ತು ಕಲಶ ತುಂಬಿವೆ. ಜಿನ ಮತ್ತು ಮುನಿಯನ್ನು ಅರೆಗಂಬ ಮತ್ತು ಆರಾಧನೆಪೀಠ ಬೇರ್ಪಡಿಸಿವೆ. ಮೇಲ್ಗಡೆಯ ಭಾಗವನ್ನು ಸ್ವಾರಸ್ಯಕರವಾದ ಸುರುಳಿಯಲಂಕಾರವೊಂದು ಆವರಿಸಿದೆ. ಈ ಭಾಗ ಹೆಚ್ಚು ಕಡಿಮೆ ಸವೆದುಹೋಗಿರುವುದಲ್ಲದೆ ಫಲಕವೂ ಸಾಕಷ್ಟು ಭಗ್ನಗೊಂಡಿದೆ.

ಆರಾಧನಾ ದೀಕ್ಷೆಯ ನಿರೂಪಣೆಗೆ ಇಲ್ಲಿ ಹೆಚ್ಚಿನ ಅವಕಾಶ ದೊರಕಿಲ್ಲ; ಆದರೆ, ಮುನಿಯು ಸಮಾಧಿ ವ್ರತವನ್ನಾಚರಿಸಿ 'ಸ್ವರ್ಗಕ್ಕೆ ಹೋದ'ನೆಂದು ಶಾಸನದಲ್ಲಿ ಸ್ಪಷ್ಟಪಡಿಸಲಾಗಿದೆ. ಅವನನ್ನು ''ಮರಣರೂಪಿ ರಾಹು ನುಂಗಿದ''ನೆಂದೂ ಬಣ್ಣಿಸಲಾಗಿದೆ.

---

12. 135.

ಶುಭಚಂದ್ರದೇವನು ಅತ್ಯಂತ ಪ್ರಭಾವಿ ಗುರುವಾಗಿದ್ದುದರಿಂದ, ಗಂಗರಾಜ ಮತ್ತು ಅವನ ಸಹೋದರಿ ಜಕ್ಕಣಬ್ಬೆಯರು ಅವನಿಗೆ ನಿಸಿಧಿಯನ್ನು ನೆಡಿಸಿ, ಜಿನನಿಗೆ ವಿಶೇಷ ಪೂಜೆ ಏರ್ಪಡಿಸಿ, ಅವನನ್ನು ಗೌರವಿಸಿದ್ದಲ್ಲದೇ, ಉದಾರ ದಾನಗಳನ್ನೂ ಕೊಟ್ಟರು. 12ನೆಯ ಶತಮಾನದ ಆಚಾರ್ಯರಲ್ಲಿ ಕಠೋರ ತಪಸ್ಸು ಮತ್ತು ವ್ರತಾಚರಣೆಗಳು ವಿರಳವಾಗುತ್ತಿದ್ದುದಕ್ಕೆ ಇದು ಮತ್ತೊಂದು ನಿದರ್ಶನ.

ಸ್ತಂಭದ ಉತ್ತರ ಮುಖದಲ್ಲಿಯ ಉಬ್ಬುಶಿಲ್ಪಗಳಲ್ಲಿ ವಿಶೇಷ ಗುಣಾಂಶಗಳೇನೂ ಇಲ್ಲ. ಅಲ್ಲಿ ಆಸೀನ ಜಿನನಿದ್ದು ಅವನ ಇಬ್ಬದಿಗಳಲ್ಲಿ ಚೌರಿಗಳಿವೆ. ಜಿನನ ತಲೆಯ ಮೇಲೆ ಲಂಬ ಪಟ್ಟಿಯೊಂದಿದೆ. ಮಧ್ಯದ ಮುಕ್ಕೊಡೆ ಮತ್ತು ಎರಡೂ ಬದಿಗಳಲ್ಲಿರುವ ಸುರುಳಿ ಅಲಂಕಾರವನ್ನು ಬಿಟ್ಟರೆ ಈ ಫಲಕದಲ್ಲಿ ವಿಶೇಷವಾದುದೇನೂ ಇಲ್ಲ. ದಕ್ಷಿಣ ಮುಖದ ಮೇಲೆ ಇದೇ ಬಗೆಯ ಉಬ್ಬುಶಿಲ್ಪಗಳಿವೆ.


ಪಶ್ಚಿಮ ಮುಖದ ಫಲಕವನ್ನು ಭಾಗಶಃ ಪೂರ್ತಿಗೊಳಿಸಲಾಗಿದೆ. ಇಲ್ಲಿ ಸಿಂಹಾಸನದ ಮೇಲೆ, ಮುಕ್ಕೊಡೆಯ ಕೆಳಗೆ, ಆಸೀನನಾದ ತೀರ್ಥಂಕರನಿದ್ದು, ಸಿಂಹಾಸನದ ಹಿಂಬದಿಯಲ್ಲಿ ಚೌರಿಧಾರಿಗಳಿರುವರು.

ಮಾಚಿಕಬ್ಬೆಯ ಮಂಟಪ (1131-1145): ಸವತಿಗಂಧವಾರಣ ಬಸದಿಯ ಗರ್ಭಗುಡಿಯ ಪೂರ್ವಕ್ಕಿರುವ ಅವಳಿ ಮಂಟಪಗಳು ಲಕ್ಷ್ಮೀಮತಿ ಮಂಟಪದಿಂದ ಅನತಿ ದೂರದಲ್ಲಿದ್ದು ನಾಲ್ಕು ನಿಸಿಧಿ ಸ್ತಂಭಗಳಿಗೆ ಎಡೆಮಾಡಿಕೊಟ್ಟಿವೆ. 1131 ಮತ್ತು 1145ರ ಕಾಲಾವಧಿಯಲ್ಲಿ ಸ್ಥಾಪಿಸಲಾದ ಇವೂ ತೆರೆದ ಮಂಟಪಗಳಾಗಿವೆ.

ಮೂರು ನಿಸಿಧಿ ಸ್ತಂಭಗಳಿರುವ ಚೌಕಾಕಾರವಾದ (13' × 13') 9'.3" ಎತ್ತರದ ಮಂಟಪವು 3'.5" ಎತ್ತರದ ವೇದಿಕೆಯ ಮೇಲೆ ನಿಂತಿದೆ. ಒಂದೇ ನಿಸಿಧಿ ಸ್ತಂಭವನ್ನು ಹೊಂದಿರುವ ಇನ್ನೊಂದು ಮಂಟಪವನ್ನು ಚೌಕಾಕಾರದ ಜಗುಲಿಯ ಮೇಲೆ ಕಟ್ಟಲಾಗಿದ್ದು ಅದು 3'.8" ಎತ್ತರವಿದೆ.

ಉತ್ತರದ ಮಂಟಪದಲ್ಲಿರುವ ಎಲ್ಲ ನಿಸಿಧಿಗಳು ಮಾಚಿಕಬ್ಬೆಯ ಬಂಧುವರ್ಗಕ್ಕೆ ಸೇರಿದವುಗಳಾದರೆ ಇದರ ಹತ್ತಿರದಲ್ಲಿಯ ಇನ್ನೊಂದು ಮಂಟಪದಲ್ಲಿ ಅವರ ಕುಲಗುರುವಿನ ನಿಸಿಧಿಗೆ ಸಂಬಂಧಿಸಿದೆ. 1131ರಲ್ಲಿ ಮಡಿದ ಮಾಚಿಕಬ್ಬೆಯು ಈ ಗೌರವ ಪಡೆದವರಲ್ಲಿ ಪ್ರಪ್ರಥಮಳು.[13] ಆ ಸುಮಾರಿಗಾಗಲೇ ಬಹುಶಃ ಉತ್ತರದ ಮಂಟಪವನ್ನೂ ನಿಲ್ಲಿಸಲಾಗಿತ್ತು. ಅವಳ ಒಬ್ಬ ಸೋದರ ಸಿಂಗಿಮಯ್ಯನು ಮತ್ತು ಇನ್ನೊಬ್ಬ ಸೋದರ ನಾಗದೇವನ ಮಗ

13. 176.



57 ಬೂಚಣನ ನಿಸಿಧಿ (155)



58 ದೇಮತಿಯ ನಿಸಿಧಿ (158)

ಬಲದೇವನು 1133ರಲ್ಲಿ ಮಡಿದಾಗ [14] ಇವರಿಬ್ಬರ ನಿಸಿಧಿಗಳನ್ನು ಮಾಚಿಕಬ್ಬೆಯ ನಿಸಿಧಿಯ ಇಕ್ಕಡೆಗಳಲ್ಲಿ ಇರಿಸಲಾಯಿತು. ಕುಲಗುರು ಪ್ರಭಾಚಂದ್ರನು 1145ರಲ್ಲಿ ಮೃತಪಟ್ಟಾಗ[15] ಅವನ ನಿಸಿಧಿಯನ್ನು ಇಲ್ಲಿ ಸೇರಿಸದೆ, ಪ್ರತ್ಯೇಕ ಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು.

1145ರ ನಿಸಿಧಿಯನ್ನು ಮಾಚಿಕಬ್ಬೆಯ ಗೌರವಾರ್ಥ ನಿರ್ಮಿಸಲಾಯಿತೋ ಅಥವಾ ಪ್ರಭಾಚಂದ್ರನ ಗೌರವಾರ್ಥ ನಿಲ್ಲಿಸಲಾಯಿತೋ ಎಂಬುದು ಅನಿಶ್ಚಿತವಾಗಿದೆ. ಏಕೆಂದರೆ, ಅವರಿಬ್ಬರ ಮರಣಗಳನ್ನೂ ಈ ಶಾಸನದಲ್ಲಿ ವಿಶದವಾಗಿ ವರ್ಣಿಸಲಾಗಿದೆ. ಉತ್ತರ ಮಂಟಪದಲ್ಲಿ ಮಾಚಿಕಬ್ಬೆಯ ಗೌರವಾರ್ಥ ಆ ಮೊದಲೆ ನಿಸಿಧಿಯನ್ನು ನಿರ್ಮಿಸಿದ್ದುದರಂದ, ಅವಳಿಗೆ ಮತ್ತೊಂದು ನಿಸಿಧಿಯನ್ನು ನಿಲ್ಲಿಸುವ ಅಗತ್ಯ ಇರಲಿಲ್ಲ. ಅಲ್ಲದೆ, ಈ ಸ್ತಂಭದ ಮೇಲೆ ಸ್ತ್ರೀಯ ಉಬ್ಬುಶಿಲ್ಪವೂ ಇಲ್ಲ. ಈ ಕಾರಣಗಳಿಂದಾಗಿ ಈ ನಿಸಿಧಿಯನ್ನು ಮೃತ ಮುನಿಯ ಗೌರವಾರ್ಥ ನೆಡಲಾಯಿತೆಂದರೆ ಹೆಚ್ಚು ಸಮರ್ಪಕವೆನಿಸುವುದು.

ಉತ್ತರದ ಮಂಟಪ : ಮಾಚಿಕಬ್ಬೆಯ 224 ಸಾಲುಗಳ ನಿಸಿಧಿ ಶಾಸನವು ಶ್ರವಣಬೆಳ್ಗೊಳದಲ್ಲಿಯೇ ಅತ್ಯಂತ ದೀರ್ಘವಾದ ಶಾಸನವಾಗಿದೆ.[16] ಈ ಸ್ತಂಭವು 7'.9" × 2'.1" ಇದ್ದರೆ, ಮೇಲ್ಭಾಗದ ಅಂಕಣ ಫಲಕವು 2'.6" × 2' ಇದೆ. ಶಾಸನವನ್ನು ಕಂಭದ ನಾಲ್ಕು ಮುಖಗಳಲ್ಲಿ ಕೆತ್ತಲಾಗಿದ್ದು, ಅದನ್ನು ವಿಶೇಷವಾಗಿ ಅಲಂಕರಿಸಲಾಗಿದೆ. ಉಬ್ಬುಶಿಲ್ಪಗಳು ಕಂಬದ ಗಾತ್ರಕ್ಕನುಗುಣವಾಗಿವೆ. ಕಂಬದ ಶಿಖರ ಭಾಗದಲ್ಲಿ ಪದ್ಮಾಲಂಕಾರದ

14. 175 ಮತ್ತು 174.
15. 173.
16. 176.



59 ಲಕ್ಷ್ಮೀಮತಿಯ ನಿಸಿಧಿ (157)




60 ಮಾರಸಿಂಘನ ನಿಸಿಧಿ (157)

ಚೌಕು ಗುಮ್ಮಟವಿದೆ. ಅಂಕಣ ಫಲಕಗಳಲ್ಲಿ ಪೂರ್ವ ಮುಖದ ಫಲಕವು ಅತ್ಯಂತ ವಿಶದವಾದುದಾಗಿದೆ. ಅಂಜಲಿ ಹಸ್ತದಲ್ಲಿರುವ ಮಾಚಿಕಬ್ಬೆ ಸುಖಾಸನದಲ್ಲಿ ಕುಳಿತಿರುವಳು; ಮುಕ್ಕೊಡೆಯ ಕೆಳಗೆ ಪರ್ಯಂಕಾಸನದಲ್ಲಿ ಕುಳಿತ ಜಿನನಿಗೆ ಅವಳು ಅಭಿಮುಖಿಯಾಗಿರುವಳು. ಇಬ್ಬರು ಚೌರಿಧಾರಿಗಳು ಮಾಚಿಕಬ್ಬೆಯ ಹಿಂದೆ ನಿಂತಿರುವರು. ಉತ್ತರ ಪಟ್ಟಿಕೆಯಲ್ಲಿ, ಮುಕ್ಕೊಡೆಯ ಕೆಳಗೆ, ಸಿಂಹಾಸನಾರೂಢ ತೀರ್ಥಂಕರನ ಎರಡೂ ಬದಿಗಳಲ್ಲಿ ಚೌರಿಧಾರಿಗಳಿರುವರು. ಪಶ್ಚಿಮದ ಪಟ್ಟಿಕೆಯನ್ನು ಎರಡು ಲಂಬ ವಿಭಾಗಗಳಲ್ಲಿ ವಿಭಜಿಸಲಾಗಿದೆ: ಬಲಭಾಗದಲ್ಲಿ ಆಸೀನ ಜಿನನಿದ್ದರೆ ಇನ್ನೊಂದರಲ್ಲಿ ಪರ್ಯಂಕಾಸನದಲ್ಲಿರುವ ಸ್ತ್ರೀಯ (ಮಾಚಿಕಬ್ಬೆಯ) ಶಿಲ್ಪವಿದೆ. ದಕ್ಷಿಣ ಮುಖದ ಫಲಕದಲ್ಲಿ ಆಸೀನ ಜಿನನಿಗೆ ಎದುರಾಗಿ ಅಂಜಲಿ ಮುದ್ರೆಯಲ್ಲಿರುವ ರೋಮಕಪೋಲದವನೊಬ್ಬನನ್ನು ಕೆತ್ತಲಾಗಿದೆ. ಅರ್ಧಾಸನದಲ್ಲಿರುವ ಈ ವ್ಯಕ್ತಿ ಮತ್ತಾರೂ ಆಗಿರದೆ ಮಾಚಿಕಬ್ಬೆಯ ಪತಿ ಪೆರ್ಗ್ಗಡೆ ಮಾರಸಿಂಗ ಎಂಬುದನ್ನು ಶಾಸನವು ಋಜುವಾತು ಮಾಡಿಕೊಡುವುದು.

ಶಾಸನವು ಮಾಚಿಕಬ್ಬೆಯ ಸಮಾಧಿ ಮರಣವನ್ನಲ್ಲದೆ ಮಾರಸಿಂಗ ಮತ್ತು ಶಾಂತಲೆ ಯರ ಮರಣಗಳನ್ನೂ ಉಲ್ಲೇಖಿಸುವುದು. ನಿಸಿಧಿಪಟ್ಟಿಕೆಗಳಲ್ಲಿರುವ ಇಬ್ಬರು ಮಹಿಳೆಯರ ಮತ್ತು ಒಬ್ಬ ಪುರುಷನ ಆಕೃತಿಗಳನ್ನು ಮಾಚಿಕಬ್ಬೆ, ಶಾಂತಲೆ ಮತ್ತು ಮಾರಸಿಂಗರೆಂದು ಗ್ರಹಿಸಬಹುದು.

ಮಾರಸಿಂಗಮಯ್ಯನು ನಿಷ್ಠಾವಂತ ಶೈವನಾಗಿದ್ದ, ಆದರೆ ಶಾಂತಲೆಯ ವೈಯಕ್ತಿಕ ಧಾರ್ಮಿಕ ಒಲುವನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಅವಳು ಶೈವ ಮತ್ತು ವೈಷ್ಣವ ಧರ್ಮಗಳೊಂದಿಗೆ ಗುರುತಿಸಿಕೊಂಡಂತೆ ಜೈನ ಧರ್ಮದೊಂದಿಗೂ ಗುರುತಿಸಿಕೊಂಡಿದ್ದಳು.



61 ಮಾಚಿಕಬ್ಬೆಯ ನಿಸಿಧಿ (176)

ಈ ಮನೆತನದಲ್ಲಿ ಮಾಚಿಕಬ್ಬೆ ಮಾತ್ರ ಕಟ್ಟಾ ಜೈನಳಾಗಿದ್ದಳೆಂದು ತೋರುವುದು. ಅವಳ ಪತಿಯ ಮತ್ತು ಮಗಳ ಮತಗಳು ಬೇರೆ ಬೇರೆಯಾಗಿದ್ದರೂ ಅವಳ ಪತಿಯ ಪ್ರತಿಕೃತಿಯನ್ನು ಅವಳ ನಿಸಿಧಿಯಲ್ಲಿ ಅಳವಡಿಸಿಕೊಳ್ಳುವುದಕ್ಕೆ ಧರ್ಮಕಟ್ಟಳೆಗಳು ಅಡ್ಡ ಬರಲಿಲ್ಲವೆಂಬುದು ಗಮನಾರ್ಹ.

ಚಾರುಕೀರ್ತಿದೇವನ ಗುಡ್ಡನಾದ ಬೋಕಿಮಯ್ಯನು ಈ ಶಾಸನಪಾಠವನ್ನು ರಚಿಸಿದನು. ಅದನ್ನು ಗಂಗಾಚಾರಿಯ ಸೋದರ 'ಬಿರುದ ರೂವಾರಿ ಮುಖತಿಲಕ' ಕಾಮ್ಮಾಚಾರಿಯು ಕಂಡರಿಸಿದನು. ಗಂಗರಾಜ ಮತ್ತು ಲಕ್ಷ್ಮೀಮತಿಯರ ಕುಟುಂಬದವರ ನಿಸಿಧಿ ರಚನೆಯಲ್ಲಿ ಗಂಗಾಚಾರಿಯು ಕಳಪೆ ಕೌಶಲ್ಯವನ್ನು ಪ್ರದರ್ಶಿಸಿದ್ದರೂ, ಪಾರ್ಶ್ವನಾಥ ಬಸದಿಯ ಉತ್ಕೃಷ್ಟ ಶಿಲಾಫಲಕ ಮತ್ತು ಚಾವುಂಡರಾಯ ಬಸದಿಯ ಆದಿನಾಥನ ವಿಗ್ರಹವು ಪ್ರಮಾಣೀಕರಿಸುವಂತೆ ಅವನೊಬ್ಬ ನಿಪುಣ ಕಲಾವಿದನಾಗಿದ್ದನು. ಅವನ ಸೋದರ ಕಾಮ್ಮಾಚಾರಿಯೂ ಗಂಗಾಚಾರಿಯಷ್ಟೇ ಕುಶಲಿಯಾಗಿದ್ದನೆಂಬುದನ್ನು ಪ್ರಸ್ತುತ ನಿಸಿಧಿ ಫಲಕವು ಸಿದ್ಧಪಡಿಸುವುದು.

1139ರಲ್ಲಿ ಅವಳ ಸೋದರ ಸಿಂಗಿಮಯ್ಯನ ಗೌರವಾರ್ಥ ನಿರ್ಮಿಸಿದ [17] ಮತ್ತು ಮಾಚಿಕಬ್ಬೆ ನಿಸಿಧಿಯ ದಕ್ಷಿಣಕ್ಕಿರುವ ಎರಡನೆಯ ನಿಸಿಧಿಗಂಬವು ಕಲಾಹೀನವಾಗಿದೆ. ಅದರ ಪೂರ್ವ ಮತ್ತು ಪಶ್ಚಿಮ ಬದಿಗಳಲ್ಲಿ 65 ಸಾಲುಗಳ ಶಾಸನವನ್ನು ಕೆತ್ತಲಾಗಿದ್ದು ಸ್ತಂಭದ ಪ್ರತಿಯೊಂದು ಮೇಲ್ಭಾಗದಲ್ಲಿ ಎರಡು ಅಂಕಣಗಳ ಫಲಕಗಳಿವೆ. ಎರಡರಲ್ಲೂ ಜಿನನು ಮುಕ್ಕೊಡೆಯ ಕೆಳಗೆ ಕುಳಿತಿದ್ದು, ಪರಿಚಾರಕರಿಂದ ಸುತ್ತುವರಿಯಲ್ಪಟ್ಟಿರುವನು. ಜಿನನ ಬಲಬದಿಗೆ ಕೈಮುಗಿದುಕೊಂಡು ಕುಳಿತ ಪುರುಷಾಕೃತಿಯು ಸಿಂಗಿಮಯ್ಯನದೆಂಬುದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ.

17. 175.

ಈ ಮಂಟಪದ ಉತ್ತರ ಭಾಗದಲ್ಲಿರುವ ಮತ್ತೊಂದು ನಿಸಿಧಿಯನ್ನು ಬಲದೇವನ ಗೌರವಾರ್ಥ ನಿರ್ಮಿಸಲಾಯಿತು.[18] ಅದು ಸಿಂಗಿಮಯ್ಯನ ನಿಸಿಧಿ ಸ್ತಂಭಕ್ಕಿಂತ ಚಿಕ್ಕದೂ (5'.6" × 1'.1"), ಸರಳವೂ ಆಗಿದೆ. ಇದರ ಪೂರ್ವ ಮತ್ತು ಪಶ್ಚಿಮ ಮುಖಗಳಲ್ಲಿ ಆಸೀನ ಜಿನರ ಉಬ್ಬುಶಿಲ್ಪಗಳು ಮತ್ತು ಉತ್ತರದಲ್ಲಿ ಅಂಜಲಿ ಮುದ್ರೆಯಲ್ಲಿ ಕುಳಿತ ಬಲದೇವನ ಶಿಲ್ಪಗಳಿವೆ.


ದಕ್ಷಿಣದ ಮಂಟಪ : ದಕ್ಷಿಣ ಮಂಟಪದ ನಟ್ಟನಡುವೆ ನೆಟ್ಟಿರುವ ನಿಸಿಧಿಸ್ತಂಭದ (7'.9" × 1'.4") ನಾಲ್ಕು ಬದಿಗಳಲ್ಲಿರುವ 192 ಸಾಲುಗಳ ಶಾಸನವು ಪ್ರಭಾಚಂದ್ರಸಿದ್ಧಾಂತದೇವನ ಮರಣದ ವಿವರ ಕೊಡುವುದು.[19]


ಕುತೂಹಲಕಾರವಾದ ಈ ಸ್ತಂಭವು ಮಹಾನವಮಿ ಮಂಟಪದಲ್ಲಿರುವ ನಿಸಿಧಿಗಂಬಗಳನ್ನು ನೆನಪಿಗೆ ತರುವುದು. ಸ್ತಂಭದ ನಾಲ್ಕು ಮೇಲ್ಮುಖದಲ್ಲಿರುವ ಅಂಕಣಫಲಕ ಮತ್ತು ಶಿಖರಾಂಗಗಳನ್ನು ಕರಾರುವಾಕ್ಕಾಗಿ ಯೋಜಿಸಿ, ಕುಶಲತೆಯಿಂದ ಕೆತ್ತಲಾಗಿದೆ. ಶಿಖರಾಂಗವು ಎರಡಂತಸ್ತುಗಳ ದ್ರಾವಿಡ ಶೈಲಿಯಲ್ಲಿದೆ. ಪ್ರಥಮ ಸಾಲಿನ ಪ್ರತಿಯೊಂದು ಮುಖವನ್ನು ಅರೆಗಂಬಗಳು ಮೂರು ಸಮತಲ ವಿಭಾಗಗಳಲ್ಲಿ ವಿಭಜಿಸಿವೆ. ಮಧ್ಯದಲ್ಲಿರುವ ಅಂಕಣವನ್ನು ಪರ್ಯಂಕಾಸನದಲ್ಲಿ ಕುಳಿತ ಜಿನನು ತುಂಬಿರುವನು. ಅವನ ಬಲಕ್ಕಿರುವ ಇನ್ನೊಂದು ಅಂಕಣದಲ್ಲಿ ಅರ್ಧಾಸನದಲ್ಲಿ ಕುಳಿತು, ಎಡಗೈಯಲ್ಲಿ ಗ್ರಂಥವನ್ನು ಹಿಡಿದು, ಬಲಗೈಯಿಂದ ವ್ಯಾಖ್ಯಾನ ಪ್ರದರ್ಶಿಸುವ ಮುನಿಯೊಬ್ಬನಿರುವನು. ಜಿನನ ಎಡಕ್ಕಿರುವ ಅಂಕಣದಲ್ಲಿ ಇನ್ನೊಬ್ಬ ಮುನಿಯ ಚಿತ್ರವಿದೆ; ಅವನೂ ಅರ್ಧಾಸನದಲ್ಲಿರುವನು. ದಕ್ಷಿಣ ಬದಿಯಲ್ಲಿರುವ ಉಬ್ಬುಶಿಲ್ಪವು ವ್ಯಾಖ್ಯಾನ ಮುದ್ರೆಯಲ್ಲಿರುವ ಮುನಿಗಳಿಬ್ಬರನ್ನು ತೋರಿಸುವುದು. ಅವರ ಬಲಕ್ಕಿರುವವನು ಆರಾಧನಾ ಗ್ರಂಥವನ್ನು ಹಿಡಿದಿರುವನು. ಮೇಲ್ಭಾಗದ ಫಲಕದಲ್ಲಿ ಹನ್ನೆರಡು ಜಿನರ ಸೂಕ್ಷ್ಮ ಶಿಲ್ಪಗಳಿದ್ದು, ಪ್ರತಿಬದಿಯಲ್ಲಿ ಮೂವರಂತೆ ಅವರು ಅಂಕಣಗಳನ್ನಲಂಕರಿಸಿರುವರು.

ಈ ಸ್ತಂಭದ ಶಿಖರಾಗ್ರದ ವಾಸ್ತುಶಿಲ್ಪೀಯ ಮತ್ತು ಕುಂಭಕಲೆಯ ವಿವರಗಳು ತೀರಾ ಪ್ರಸನ್ನಕರವಾಗಿವೆ. ಇದನ್ನು ರಾಮೋಜನ ಮಗನಾದ ರೂವಾರಿ ದಾಸೋಜನು ಕಡೆದ. ಚೌಕು ಪೀಠದ ಮೇಲೆ ನಿಂತಿರುವ ಈ ಸ್ತಂಭಶಾಸನದ ಅಕ್ಷರಗಳನ್ನು ಆಳವಾಗಿ ಕೊರೆದು, ಸಾಲುಗಳನ್ನು ಅಚ್ಚುಕಟ್ಟಾಗಿ ಹೊಂದಿಸಲಾಗಿದೆ. ಇಲ್ಲಿ ಸುರುಳಿಯ ಅಲಂಕಾರಗಳಿಲ್ಲ, ಆದರೆ ಅಕ್ಷರಗಳ ಅಡ್ಡಗೀಟು ಮತ್ತು ಒತ್ತಕ್ಷರಗಳು ಸುರುಳಿಯ ಸಂಕೀರ್ಣ ವಿನ್ಯಾಸವನ್ನು ಹೋಲುವಂತಿವೆ. 'ಸೇವಣು ಬಲ್ಲರದೇವ' ಎಂದು ಕರೆದುಕೊಂಡಿರುವ ರೂವಾರಿಯು ಇದನ್ನು ಪೂರೈಸುವಲ್ಲಿ ಲಿಪಿಕಾರ ಗಂಗಣ್ಣನಿಂದ ಸಾಕಷ್ಟು ನೆರವು ಪಡೆದಂತಿದೆ.

18. 174.
19. 173.

ಮಹಾನವಮಿ ಮಂಟಪ : ಪಾರ್ಶ್ವನಾಥ ಬಸದಿಯ ದಕ್ಷಿಣ-ಪಶ್ಚಿಮಕ್ಕಿರುವ ಅವಳಿ ಮಂಟಪಗಳನ್ನು 12ನೆಯ ಶತಮಾನದ ಮಹಾಮುನಿಗಳಿಬ್ಬರ ನಿಸಿಧಿಗಳನ್ನು ಪ್ರತಿಷ್ಠಾಪಿಸಲು ಕಟ್ಟಲಾಯಿತು. ದಕ್ಷಿಣಕ್ಕಿರುವುದನ್ನು ಭಂಡಾರಿ ಹುಳ್ಳರಾಜನು ತನ್ನ ಗುರುಗಳಲ್ಲೊಬ್ಬನಾದ





62 ಮಹಾನವಮಿಯ ಮಂಟಪದ ನಿಸಿಧಿಯ ಫಲಕಗಳು

ದೇವಕೀರ್ತಿಪಂಡಿತನ ಗೌರವಾರ್ಥ 1163ರಲ್ಲಿ ಮಾಡಿಸಿದನು.[20] ಈ ಸುಂದರ, ಚೌಕಾಕಾರದ ನಿಸಿಧಿಸ್ತಂಭವು 115 ಸಾಲುಗಳ ದೀರ್ಘ ಶಾಸನವನ್ನು ಹೊಂದಿದೆ. ಹದಿಮೂರು ವರ್ಷಗಳ ನಂತರ 1176ರಲ್ಲಿ ಹುಳ್ಳರಾಜನ ಅಧೀನಾಧಿಕಾರಿಯು ಉತ್ತರ ಮಂಟಪವನ್ನು ಕಟ್ಟಿಸಿ ಮುನಿ ನಯಕೀರ್ತಿದೇವನ ನಿಸಿಧಿಯನ್ನು ಪ್ರತಿಷ್ಠಾಪಿಸಿದನು.[21] ಈಸ್ತಂಭವು 160 ಸಾಲುಗಳ ಶಾಸನವನ್ನು ಹೊಂದಿದೆ. ಇದಾದ ನೂರೈವತ್ತು ವರ್ಷಗಳ ನಂತರ (1373ರಲ್ಲಿ) ಶುಭಚಂದ್ರ ಮಹಾಯತಿಯ ಗೌರವಾರ್ಥ ಅವನ ಶ್ರಮಣ ಶಿಷ್ಯರಾದ ಪದ್ಮಣಂದಿ ಮತ್ತು ಮಾಧವಚಂದ್ರದೇವರು ಒಂದು ನಿಸಿಧಿಯನ್ನು ಮಾಡಿಸಿ ಇಲ್ಲಿ ನಿಲ್ಲಿಸಿದರು.[22] ಇದನ್ನು ಎಷ್ಟು ಒರಟಾಗಿ ರಚಿಸಲಾಗಿದೆಯೋ ಅಷ್ಟೇ ಅಡ್ಡಾದಿಡ್ಡಿಯಾಗಿ ಈ ಮಂಟಪದಲ್ಲಿ ಸೇರಿಸಲಾಗಿದೆ.

ಈ ಅವಳಿ ಮಂಟಪಗಳ ಪ್ರಮುಖ ಲಕ್ಷಣಗಳು ಇಂತಿವೆ : (1) ಇವೆರಡನ್ನೂ ಆಚಾರ್ಯರ ಗೌರವಾರ್ಥ ಕಟ್ಟಲಾಗಿವೆ; (2) ಹೊಯ್ಸಳ ಮಂತ್ರಿಯಾಗಿದ್ದ ಹುಳ್ಳರಾಜನು ಅವುಗಳ ಪೋಷಕನಾಗಿದ್ದನು; (3) ಯೋಜನೆಯಲ್ಲಿ ಮತ್ತು ಕಾರ್ಯಕೌಶಲ್ಯದಲ್ಲಿ ಅವು ಸರಿಸುಮಾರು ಒಂದೇ ತೆರನಾಗಿವೆ; ಮತ್ತು (4) ಎರಡೂ ಶಾಸನಗಳಲ್ಲಿ ಸಮಾಧಿ ಮರಣದ ಉಲ್ಲೇಖವಿಲ್ಲದಿದ್ದರೂ 'ನಿಸಿಧಿ' ಪದವನ್ನು ಬಳಸಲಾಗಿದ್ದು, ಶುಭಚಂದ್ರ ಮಾಹಯತಿಯು ಪಂಚಪದಗಳನ್ನು ಪಠಿಸುತ್ತಾ ಸಾವನ್ನು ಸ್ವಾಗತಿಸಿದನೆಂದು ಹೇಳಲಾಗಿದೆ.

20. 71.
21. 73.
22. 72.

ಮಹಾನವಮಿ ಮಂಟಪಗಳು ತಮ್ಮ ಪ್ರಮಾಣದಿಂದ ಮಾತ್ರವಲ್ಲದೆ ವಾಸ್ತು ಶಿಲ್ಪೀಯ ಲಕ್ಷಣಗಳಿಂದಲೂ ವಿಶೇಷ ಗಮನ ಸೆಳೆಯುವ ಅವಳಿ ಮಂಟಪಗಳಾಗಿವೆ. ಚೌಕಾಕಾರದ (17'.5" x 17'.5") ಈ ಮಂಟಪಗಳು (15'.7" × 15'.7") ಸುಮಾರು 5'.5" ಎತ್ತರದ ವೇದಿಕೆಯ ಮೆಲೆ ನಿಂತಿವೆ. ಮಂಟಪಗಳ ಒಟ್ಟು ಎತ್ತರ 18'.10". ಪೀಠವನ್ನು ಕಾರ್ನೀಸುಗಳುಳ್ಳ ಸಮತಲ ವಿಭಾಗಗಳಲ್ಲಿ ವಿಭಜಿಸಲಾಗಿದೆ. ಕಂಬಗಳೆಲ್ಲ ದುಂಡಗಿದ್ದು ಉಪಾನ ಮತ್ತು ಬೋದಿಗೆಗಳಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಅವೆಲ್ಲ ಸ್ಥೂಲವಾಗಿ ಒಂದೇ ತೆರನಾಗಿವೆ. ದಕ್ಷಿಣ ಮಂಟಪವು ವಿಸ್ತಾರಗೊಳ್ಳುವ ಫಲಕಗಳುಳ್ಳ ಸರಿಸಮ ಬೋದಿಗೆಗಳನ್ನು ಹೊಂದಿದೆ; ಉತ್ತರ ಮಂಟಪದ ಫಲಕಗಳು ದುಂಡಗಿನ ಆಸರೆ ಬೋದಿಗೆಗಳನ್ನು ಹೊಂದಿವೆ. ಮಂಟಪಗಳ ವೇದಿಕೆಯನ್ನು ದೊಡ್ಡ ಹಾಸುಗಲ್ಲುಗಳಿಂದ ರಚಿಸಲಾಗಿದೆ. ಕಟ್ಟಡವನ್ನು ಕಣ ಶಿಲೆಯಲ್ಲಿ, ನಿಸಿಧಿಗಂಬಗಳನ್ನು ಬಳಪದ ಕಲ್ಲಿನಲ್ಲಿ ಮಾಡಲಾಗಿದೆ. ಸೂರ್ಯನ ತೀಕ್ಷ್ಣ ಕಿರಣಗಳಿಂದ ಮತ್ತು ಮುಂಗಾರಿನ ರೋಷದಿಂದ ನಿಸಿದಿಗಳನ್ನು ಸಂರಕ್ಷಿಸಲೆಂಬಂತೆ ಇಳಿಜಾರಾದ ಮುಂಜೂರುಗಳನ್ನು ಜೋಡಿಸಲಾಗಿದೆ.

ಮಧ್ಯದಲ್ಲಿರುವ ಎರಡು ಸ್ತಂಭಗಳು ಪ್ರಮಾಣ ಹಾಗೂ ಕಲಾಕೌಶಲ್ಯದಲ್ಲಿ ಒಂದೇ ತೆರನಾಗಿವೆ. ದಕ್ಷಿಣ ಮಂಟಪದಲ್ಲಿರುವ ಒಂದು ಸ್ತಂಭವು ಸುಮಾರು 7'.3" ಇದ್ದು, 1'. 8½" ಎತ್ತರವಿರುವ ಪೀಠದ ಮೇಲೆ ನಿಂತಿದೆ. ಭಗ್ನ ಶಿಖರಭಾಗದಿಂದಾಗಿ ಉತ್ತರ ಮಂಟಪದಲ್ಲಿಯ ನಿಸಿಧಿಸ್ತಂಭವು ದಕ್ಷಿಣ ಮಂಟಪ ದಲ್ಲಿರುವುದಕ್ಕಿಂತ ಸುಮಾರು 9" ಚಿಕ್ಕದಿದೆ. ಈ ಸ್ತಂಭಗಳ ಅತ್ಯಂತ ಆಕರ್ಷಕ ಅಂಗಗಳೆಂದರೆ ಅವುಗಳ ಶಿಖರಾಗ್ರಗಳು.

ದಕ್ಷಿಣ ಮಂಟಪದ ಸ್ತಂಭ ಶಿಖರಾಗ್ರವು (2'.10") ಒಂದು ಸೂಕ್ಷ್ಮ ಪ್ರಮಾಣದ ದ್ರಾವಿಡ ಗೋಪುರವಾಗಿದೆ. ಇದು ಮೂರು ಮಜಲಿನಲ್ಲಿ ಮೇಲೇರಿದೆ. ನಾಲ್ಕು ಬದಿಗಳಲ್ಲಿ ಒಂಭತ್ತು ಆಕೃತಿಗಳನ್ನು ಕೆತ್ತಿ ಅಷ್ಟೇ ಸಂಖ್ಯೆಯ ಅಂಕಣಗಳಲ್ಲಿ ಜೋಡಿಸಲಾಗಿದೆ. ತೀರಾ ಕೆಳಸಾಲಿನ ಅಂಕಣದ ಮಧ್ಯದಲ್ಲಿ ಆಸೀನ ಜಿನನಿದ್ದರೆ ಅವನ ಇಬ್ಬದಿಗಳಲ್ಲಿ ಒಬ್ಬೊಬ್ಬ ಮುನಿಯಿರುವನು. ಜಿನನ ಬಲಕ್ಕಿರುವ ಮುನಿಯು ಎಡಗೈಯಲ್ಲಿ ಗ್ರಂಥವನ್ನು ಹಿಡಿದಿದ್ದರೆ, ಬಲಗೈಯನ್ನು ವ್ಯಾಖ್ಯಾನ ಮುದ್ರೆಯಲ್ಲಿಟ್ಟುಕೊಂಡಿರುವನು; ಎಡಕ್ಕಿರುವ ಮುನಿಯು ಅಂಜಲಿ ಮುದ್ರೆಯಲ್ಲಿ ಕುಳಿತಿರುವನು. ಇಬ್ಬರೂ ಯೋಗಪಟ್ಟವಿಲ್ಲದ ಅರ್ಧಾಸನವನ್ನು ಅಳವಡಿಸಿಕೊಂಡಿರುವರು.

ಎರಡನೆಯ ಸಾಲಿನ ಮೂರು ಅಂಕಣಗಳಲ್ಲಿ ಮೂವರು ತೀರ್ಥಂಕರರನ್ನು ಪ್ರದರ್ಶಿಸಲಾಗಿದೆ. ಮಧ್ಯದ ತೀರ್ಥಂಕರನು ಮುಕ್ಕೊಡೆಯ ಕೆಳಗೆ ಸಿಂಹಾಸನಾರೂಢ ನಾಗಿದ್ದರೆ, ಉಳಿದಿಬ್ಬರು ಕಾಯೋತ್ಸರ್ಗದಲ್ಲಿರುವರು. ಇದೇ ಮಾದರಿಯನ್ನು ನಾಲ್ಕು ಬದಿಗಳಲ್ಲೂ ಪುನರಾವರ್ತಿಸಲಾಗಿದ್ದು, ಒಟ್ಟು ಹನ್ನೆರಡು (ನಾಲ್ಕು ಕುಳಿತಿರುವ, ಎಂಟು ನಿಂತಿರುವ) ಜಿನ

ವಿಗ್ರಹಗಳನ್ನು ಪ್ರದರ್ಶಿಸಲಾಗಿದೆ. ಪ್ರತಿಯೊಬ್ಬ ಜಿನನು ಒಂದೊಂದು ಅಂಕಣದಲ್ಲಿ ಪರ್ಯಂಕಾಸನದಲ್ಲಿದ್ದು, ಇನ್ನೂ ಹನ್ನೆರಡು ಜಿನರು ಮೂರನೆಯ (ಎಲ್ಲಕ್ಕೂ ಮೇಲಿನ) ಸಾಲಿನಲ್ಲಿರುವರು. ಅದರ ಮೇಲೆ ವಿಸ್ತಾರಗೊಳ್ಳುವ ಮುಂಜೂರಿಯ ಮತ್ತು ಪಾಗಾರದ ಮಾದರಿಗಳಿವೆ.

ಅಂಕಣಸಾಲುಗಳು ಚಿಕ್ಕದಾಗುತ್ತ ಏರಿದಂತೆ ಉಬ್ಬುಶಿಲ್ಪಗಳೂ ಅದೇ ಕ್ರಮದಲ್ಲಿ ಚಿಕ್ಕದಾಗಿವೆ. ಆಕೃತಿಗಳು ಚಿಕ್ಕ ಗಾತ್ರಕ್ಕಿಳಿದರೂ ಮೂಲ ಸೂತ್ರದ ನಿಯಮಗಳನ್ನು ಕೈ ಬಿಟ್ಟಿಲ್ಲ. ಒಂದೊಂದು ಆಕೃತಿಯ ಕಲಾಕೌಶಲ್ಯವೂ ಉತ್ಕೃಷ್ಟತರವಾಗಿದೆ. ಈ ಮಂಟಪದಲ್ಲಿ ಪ್ರದರ್ಶಿಸಿದ ವಾಸ್ತು ಹಾಗೂ ಶಿಲ್ಪ ಕೌಶಲ್ಯದ ಒಟ್ಟು ಪ್ರಭಾವವು ನಿಸ್ಸಂದೇಹವಾಗಿಯೂ ಮನಸ್ಸಿನಲ್ಲಿ ಬಹುಕಾಲ ನಿಲ್ಲುವಂತಹದಾಗಿದೆ.

ಉತ್ತರ ಮಂಟಪದಲ್ಲಿರುವ ಸ್ತಂಭವು ಹೆಚ್ಚೂಕಡಿಮೆ ದಕ್ಷಿಣ ಮಂಟಪದ ನಿಸಿಧಿ ಸ್ತಂಭದಂತಿದೆ. ಆದರೆ, ಅದರ ಶಿಖರ ಭಾಗವು ಹೆಚ್ಚು ಆಕರ್ಷಕವಾಗಿದೆ. ಮುಂಜೂರಿಯು ಚೌಕು ಕಂಬದ ಮೇಲೆ ವಿಸ್ತಾರಗೊಂಡಿದೆ. ಅದನ್ನಲಂಕರಿಸಿದ ಮೂರು ಮಜಲಿನ ಗೋಪುರವೊಂದು ಮೊದಲಿತ್ತು. ಈಗ ಅದರ ಕೆಳಗಿನ ಮತ್ತು ಮಧ್ಯದ ಭಾಗಗಳು ಮಾತ್ರ ಉಳಿದಿವೆ. ಸಮ ಪ್ರಮಾಣದ ಈ ಗೋಪುರವು ಚೌಕಾಕಾರವಾಗಿದೆ.

ದಕ್ಷಿಣ ಮಂಟಪದಲ್ಲಿರುವ ಶಿಲಾಶಾಸನವು (1'.10 × 1/2") ಸ್ತಂಭದ ನಾಲ್ಕು ಮುಖಗಳನ್ನಾವರಿಸಿ 115 ಸಾಲುಗಳಲ್ಲಿದೆ. ಜೂನ್ 12, 1183ರಂದು ಹುಳ್ಳರಾಜನಿಂದ ಸ್ಥಾಪಿತಗೊಂಡ ಈ ಸ್ತಂಭವು ಮುನಿ ದೇವಕೀರ್ತಿಯ ಮರಣವನ್ನು ಸ್ಮರಿಸುವುದು. ಇದರ ಲಿಪಿಕಾರ, ಅಕ್ಷರಾಲಂಕಾರಿ ಹಾಗೂ ರೂವಾರಿಯ ಬಗ್ಗೆ ವಿವರ ದೊರೆಯುವುದಿಲ್ಲ; ಆದರೆ ಈ ಶಾಸನ ಮತ್ತು ಉಬ್ಬುಶಿಲ್ಪಗಳನ್ನು ಕೆತ್ತಿದವನು ನಿಷ್ಣಾತ ಕಲಾವಿದನಾಗಿದ್ದನೆಂಬುದರಲ್ಲಿ ಅನುಮಾನವಿಲ್ಲ. ಸಾಲುಗಳು ಸರಾಗವಾಗಿ ಸಾಗಿದ್ದು, ಅಕ್ಷರಗಳು ಸ್ಫುಟವಾಗಿ ಮೂಡಿವೆ. ಆದರೆ, ಶಾಸನದ ಅಂತಿಮ ಭಾಗ (ಉತ್ತರ ಬದಿ) ವನ್ನು ತರಾತುರಿಯಲ್ಲಿ ಮುಕ್ತಾಯಗೊಳಿಸಿದಂತಿದ್ದು ಇಲ್ಲಿ ಸಾಲುಗಳ ಮಧ್ಯದ ಅಂತರವನ್ನಾಗಲಿ, ಅಕ್ಷರಗಳ ಗಾತ್ರದಲ್ಲಿ ಏಕರೂಪತೆಯನ್ನಾಗಲಿ ಕಾಪಾಡಿಕೊಳ್ಳಲಾಗಿಲ್ಲ.

ಉತ್ತರ ಮಂಟಪದ ಸ್ತಂಭವನ್ನು ಹುಳ್ಳರಾಜನ ಅಧೀನ ಮಂತ್ರಿಯಾದ ನಾಗದೇವನು ಏಪ್ರಿಲ್ 24, 1176ರಂದು ಮುನಿ ನಯಕೀರ್ತಿದೇವನ ಗೌರವಾರ್ಥ ನಿರ್ಮಿಸಿದನು. 160ಸಾಲುಗಳ ಈ ಶಾಸನದಲ್ಲಿ ಯಾವ ಬಗೆಯ ದೋಷಗಳನ್ನೂ ಕಾಣೆವು. ದೀರ್ಘವಾದ ಈ ಶಾಸನ ಪಾಠದ ಅಕ್ಷರಗಳನ್ನು ಮತ್ತು ಸಾಲುಗಳನ್ನು ಎಚ್ಚರಪೂರ್ವಕವಾಗಿ ಸಂಯೋಜಿಸಲಾಗಿದೆ. ಒತ್ತಕ್ಷರಗಳನ್ನು ಮುತುವರ್ಜಿವಹಿಸಿ ರೂವಾರಿ ಅಂದಗೊಳಿಸಿರುವನು. ಲತಾಸುರುಳಿಯಿಂದ ಅವನು ಲೇಖನವನ್ನು ಆರಂಭಿಸಿರುವನು.

ಇವೆರಡು ನಿಸಿಧಿಗಳಿಗಿಂತ ಭಿನ್ನವಾದ ಇನ್ನೊಂದು ನಿಸಿಧಿಸ್ತಂಭವು ದಕ್ಷಿಣ ಮಂಟಪದಲ್ಲಿದೆ. ಅದನ್ನು ಆಗಸ್ಟ್ 1313 ರಲ್ಲಿ ಮುನಿಗಳಾದ ಪದ್ಮಣಂದಿ ಮತ್ತು ಮಾಧವಚಂದ್ರದೇವರು ತಮ್ಮ ಗುರು ಶುಭಚಂದ್ರ ಮಹಾಯತಿಯ ಗೌರವಾರ್ಥ ಮಾಡಿಸಿ, ಅವಸರದಲ್ಲಿ ಸೇರ್ಪಡೆ ಮಾಡಿದಂತಿದೆ. ಆಯತಾಕಾರದ ಚಿಕ್ಕ ಚಪ್ಪಡಿಯ ಒಂದೇ ಮಗ್ಗುಲ ಮೇಲೆ ಅದನ್ನು ಕೆತ್ತಲಾಗಿದ್ದು, ಶಾಸನವಾಗಲಿ, ಉಬ್ಬುಶಿಲ್ಪಗಳಾಗಲಿ, ಗಮನಾರ್ಹವೆನಿಸುವುದಿಲ್ಲ. ಸರಿಯಾದ ಯೋಜನೆಯಿಲ್ಲದ್ದರಿಂದ ರೂವಾರಿಯು ಕೆತ್ತನೆಯ ಅಂತಿಮ ಭಾಗದಲ್ಲಿ ಸಮಾನ ಅಂತರ ದಕ್ಕಿಸಿಕೊಳ್ಳುವಲ್ಲಿ ಪ್ರಯಾಸ ಪಡುವಂತಾಗಿದೆ. ಮೇಲ್ಭಾಗವನ್ನು ಎರಡು ಲಂಬ ವಿಭಾಗಗಳಲ್ಲಿ ವಿಭಜಿಸಲಾಗಿದೆ. ಮೊದಲಿನದರಲ್ಲಿ ಚೌರಿಧಾರಿಯೊಂದಿಗೆ ಜಿನನು ಕುಳಿತಿದ್ದರೆ, ಇದರ ಕೆಳಗಿರುವ ಇನ್ನೊಂದರಲ್ಲಿ ಠವಣಿಕೆಯ ಆಚೆ ಈಚೆ ಮುನಿಗಳಿಬ್ಬರು ಎದುರುಬದುರಾಗಿ ಕುಳಿತಿರುವರು. ಜಿನನ ಬಲಕ್ಕಿರುವ ಮುನಿಯು ತನ್ನ ಒಂದು ಹಸ್ತದಲ್ಲಿ ಗ್ರಂಥವನ್ನು ಹಿಡಿದು ಬೋಧಿಸುತ್ತಿರುವನು. ಎಡಕ್ಕಿರುವವನು ಅಂಜಲಿ ಮುದ್ರೆಯಲ್ಲಿರುವನು. ಅವರು ಯೋಗಪಟ್ಟವನ್ನು ಧರಿಸದೇ ಅರ್ಧಾಸನದಲ್ಲಿರುವರು.

2. **ವಿಗ್ರಹ, ಕಟ್ಟಡ, ತೇರು, ಇತ್ಯಾದಿ** : ಗೊಮ್ಮಟ ಸುತ್ತಾಲಯದಲ್ಲಿರುವ ಕೆಲವು ವಿಗ್ರಹಗಳನ್ನು ಮೃತ ಕುಟುಂಬದ ಸದಸ್ಯರ ಸ್ಮರಣಾರ್ಥ ನಿಲ್ಲಿಸಿದ ಸಾಧ್ಯತೆಯಿದೆ. ಇಂತಹ ನಿದರ್ಶನಗಳಲ್ಲಿ ಒಂದು ಯಕ್ಷಿಯ ವಿಗ್ರಹವನ್ನು ಮೊಸಳೆಯ ಪಟ್ಟಣಸ್ವಾಮಿ ನೇಮಿಸೆಟ್ಟಿಯ ಮಗನಾದ ಬಸವಣ್ಣನ ಸ್ಮರಣಾರ್ಥ ರಾಚಮಲ್ಲಸೆಟ್ಟಿಯು 12ನೆಯ ಶತಮಾನದಲ್ಲಿ ಮಾಡಿಸಿದನು.[23] ಇಲ್ಲಿ ಮೃತನು ಆಚರಿಸಿದ ವ್ರತದ ವಿವರವಿಲ್ಲ. ಇದನ್ನು 'ನಿಸಿಧಿ' ಪದದಿಂದ ಗುರುತಿಸಿಲ್ಲ. ಎಡಗೈಯಲ್ಲಿ ಫಲವನ್ನು ಹಿಡಿದು ಸುಖಾಸನದಲ್ಲಿ ಕುಳಿತ ಯಕ್ಷಿಯು ಅವಳ ಬಲಹಸ್ತವನ್ನು ಕೆಳಗಡೆ ಕುಳಿತ ಬಸವಣ್ಣನ ಮೇಲೆ ಇರಿಸಿ, ಅವನನ್ನು ಅನುಗ್ರಹಿಸುತ್ತಲಿರುವಳು. ಯಕ್ಷಿಗೆ ಅಭಿಮುಖನಾಗಿ ಬಸವಣ್ಣನು ಪರ್ಯಂಕಾಸನದಲ್ಲಿ ಕುಳಿತಿರುವನು.

1967ರಲ್ಲಿ ನಾನು ಆ ಶಾಸನವನ್ನು ಪ್ರಕಟಿಸಿದಾಗ ಈ ನಿಸಿಧಿಯನ್ನು ನೇಮಿಸೆಟ್ಟಿ ಮತ್ತು ದೇಮವ್ವೆ ಆಳವ್ವೆಯರ ಮಗ ಬಸವಣ್ಣನ ಗೌರವಾರ್ಥ ಅಥವಾ ಬಸವಣ್ಣ ಮತ್ತು ದೇಮವ್ವೆಯರ ಗೌರವಾರ್ಥ ನಿರ್ಮಿಸಲಾಯಿತೆಂದು, ಮತ್ತು ಅವರಿಬ್ಬರೂ ಬಹುಶಃ ಒಂದೇ ಸಮಯದಲ್ಲಿ ಮಡಿದಿರಬಹುದೆಂದು ಸೂಚಿಸಿದ್ದೆ. ಇಲ್ಲಿಯ ಎರಡನೆಯ ವಿವರಣೆಯನ್ನು ಶಾಸನ ಪಂಡಿತರು ಈಗ ಅನುಮೋದಿಸಿರುವರು.[24] ಆದರೆ, ಉಬ್ಬುಶಿಲ್ಪದ ಸ್ವರೂಪವನ್ನು ಕೂಲಂಕಷವಾಗಿ ಗಮನಿಸಿದರೆ ಈ ನಿಸಿಧಿಯ ಪ್ರಮುಖ ಉದ್ದೇಶ ಬಸವಣ್ಣನೊಬ್ಬನನ್ನೇ

---

23. 301.
24. 301 ನೋಡಿ, ಪು. 168.

ಗೌರವಿಸುವುದಾಗಿತ್ತಲ್ಲದೆ, ಬಸವಣ್ಣ ಮತ್ತು ದೇಮವ್ವೆಯರಿಬ್ಬರನ್ನೂ ಅಲ್ಲ, ಎಂಬುದು ಸ್ಪಷ್ಟಗೊಳ್ಳುವುದು. ಶಿಲ್ಪದಲ್ಲಿ ಪುರಷ ಆಕೃತಿಯೊಂದನ್ನು ಮಾತ್ರ ತೋರಿಸಿರುವುದು ಬಹುಶಃ ಆ ಕಾರಣಕ್ಕಾಗಿರಬಹುದು.

ಮಲ್ಲಸೆಟ್ಟಿಯ ಮಗಳ ಗೌರವಾರ್ಥ ಇನ್ನೊಂದು ನಿಸಿಧಿವಿಗ್ರಹವನ್ನು ಸುಮಾರು 13ನೆಯ ಶತಮಾನದಲ್ಲಿ ಪ್ರತಿಷ್ಠಾಪಿಸಲಾಯಿತು.[25] ಆದರೆ, ಶಾಸನದಲ್ಲಿ ಅವಳ ಹೆಸರನ್ನು ತಿಳಿಸಿಲ್ಲ. ಹಿಂದೊಮ್ಮೆ ಗುಳ್ಳೆಕಾಯಿ ಅಜ್ಜಿಯ ವಿಗ್ರಹದ ಎಡಕ್ಕಿದ್ದ ಈ ವಿಗ್ರಹವು ಈಗ ಕಣ್ಮರೆಯಾಗಿದೆ.

ಮೃತರ ಸ್ಮರಣಾರ್ಥ ದೇವಾಲಯಗಳನ್ನು ನಿರ್ಮಿಸುವುದು ಮಧ್ಯಯುಗದಲ್ಲಿ ಸರ್ವ ಸಾಮಾನ್ಯವಾಗಿದ್ದರೂ ಸಮಾಧಿ ವ್ರತವನ್ನಾಚರಿಸಿ ಮಡಿದವರ ಗೌರವಾರ್ಥ ದೇವಾಲಯ ಕಟ್ಟುವ ಸಂಪ್ರದಾಯ ಹೆಚ್ಚು ಪ್ರಸಾರದಲ್ಲಿರಲಿಲ್ಲವೆಂದು ಕಾಣುವುದು. ಮೊರಿಂಗೆರೆಯಲ್ಲಿ ಸನ್ಯಸನ ವ್ರತದಿಂದ ಸಾವನ್ನಪ್ಪಿದ ಬಲದೇವ ದಂಡನಾಯಕನ ಗೌರವಾರ್ಥ ಒಮ್ಮಳಿಗೆಹಳದಲ್ಲಿ ನಿರ್ಮಿಸಿದ ಪಟ್ಟಸಾಲೆಯ ಏಕೈಕ ಉಲ್ಲೇಖ ಶ್ರವಣಬೆಳ್ಗೊಳದ ಶಾಸನಗಳಲ್ಲಿ ನಮಗೆ ದೊರೆಯುವುದು. ಈ ಬಲದೇವನು ಏಚಿಯಕ್ಕಳ ಸೋದರನೂ ಮಂತ್ರಿ ನಾಗದೇವ ಮತ್ತು ನಾಗಿಯಕ್ಕರ ಪುತ್ರನೂ ಆಗಿದ್ದನು. ಚಿಕ್ಕಬೆಟ್ಟದ ಗಂಧವಾರಣಬಸದಿಯ ಬಳಿಯ ಮಂಟಪದಲ್ಲಿ ಈ ಸ್ಮಾರಕವನ್ನು ನಿಲ್ಲಿಸಲಾಗಿದೆ, ಆದರೆ ಆ ಪಟ್ಟಸಾಲೆಯ ಅವಶೇಷಗಳಾವೂ ಈಗ ನೋಡಸಿಗುವುದಿಲ್ಲ.[26]

ಬೈರೋಜನೆಂಬುವನು 1213ರಲ್ಲಿ ಜಿನನಾಥಪುರದಲ್ಲಿ ಕಟ್ಟಿಸಿದ ನಿಸಿಧಿ ಶಿಲಾಕೂಟವೊಂದು ಇಂದಿಗೂ ಉಳಿದುಬಂದಿದೆ.[27] ಬಹುಶಃ ಬಾಳಚಂದ್ರದೇವನ ಗುಡ್ಡಿಯಾಗಿದ್ದ ಮತ್ತು ಸಲ್ಲೇಖನಾ ವ್ರತವನ್ನಾಚರಿಸಿ ಮಡಿದ ಕಾಳಬ್ಬೆಯ ಗೌರವಾರ್ಥ ಇದನ್ನು ಕಟ್ಟಲಾಗಿತ್ತು. ಈ ಶಿಲಾಮಂಟಪ ತುಂಬಾ ಸ್ವಾರಸ್ಯಕರವಾಗಿದೆ. ಏಕೆಂದರೆ, ಮರಣ ಹೊಂದಿದವನು ಅಗ್ನಿ ಸಂಸ್ಕಾರಕ್ಕೊಳಗಾದ ತಾಣದಲ್ಲಿಯೆ ನಿರ್ಮಿಸಿದ ಏಕೈಕ ಶಾಸನಿತ ಸ್ಮಾರಕ ಇದಾಗಿದೆ. ಈ ಬಗೆಯ ಸಮಾಧಿಗಳನ್ನು ಅನಂತರದ ಕಾಲಾವಧಿಯಲ್ಲಿ ಮುಂದುವರಿಸಿಕೊಂಡು ಬಂದಂತೆ ಕಾಣುವುದು. ಚಿಕ್ಕಬೆಟ್ಟದ ಪಶ್ಚಿಮದಂಚಿನಲ್ಲಿರುವ ಸಮಾಧಿಗಳು ಇದಕ್ಕೆ ಉತ್ತಮ ಉದಾಹರಣೆಗಳು. ಆದರೆ ಇವುಗಳ ಐತಿಹಾಸಿಕ ವಿವರಗಳನ್ನು ಒದಗಿಸುವ ಅನೇಕ ಇಂಥಹ ಸಮಾಧಿಗಳು ಮೂಡಬಿದರೆಯಲ್ಲಿವೆ.

---

25. 358.
26. 174.
27. 539.

ಜಿನನಾಥಪುರದ ಶಿಲಾಕೂಟವು ಒಂದು ಹೊಲದಲ್ಲಿ ನಿಂತಿದೆ. ಹುಟ್ಟು ಬಂಡೆಯ ಮೇಲೆ ಕಟ್ಟಲಾದ ಈ ಒಕ್ಕೋಣೆಯ ಮಂಟಪವು ಸುಮಾರು 3'.6" ಎತ್ತರವಿದ್ದು, ಅದರ ಅಡಿಪಾಯ ಚಚ್ಚೌಕಾಗಿದೆ. ಅದರ ಶಿಖರ ಸೋಪಾನದಾಕೃತಿಯನ್ನು ಪಡೆದಿವೆ. ಒಂದರ ಮೇಲೊಂದೇರುವ ಕಾರ್ನಿಸುಗಳ ಈ ಸುಂದರ ಶಿಖರವು ಚಂದ್ರಗುಪ್ತ ಬಸದಿಯ ಗೋಪುರವನ್ನು ಮತ್ತು ಚಾವುಂಡರಾಯ ಬಸದಿಯ ಪಾಗಾರವನ್ನು ನೆನಪಿಗೆ ತರುವುದು. ಸಮಾಧಿಯ ನಾಲ್ಕು ಬದಿಗಳಲ್ಲಿ ಕೂಡುಗಳಿದ್ದು ಅವುಗಳಲ್ಲಿ ಕುಳಿತ ಜಿನರ ಉಬ್ಬುಶಿಲ್ಪಗಳಿವೆ. ಶಿಖರದ ತುದಿಯನ್ನು ಶಿಲಾಕಳಶ ಅಲಂಕರಿಸಿದೆ. ಪಕ್ಕದಲ್ಲಿರುವ ಬಂಡೆಯ ಮೇಲೆ ಕೊರೆದಿರುವ ಶಾಸನದಲ್ಲಿ ಈ ಕಟ್ಟಡವನ್ನು 'ಶಿಲಾಕೂಟ'ವೆಂದು ಗುರುತಿಸಲಾಗಿದೆ.[28]

ಈ ಶಿಲಾಕೂಟದಂತೆ ದೇವಾಲಯದ ಮುಂಭಾಗದಲ್ಲಿರುವ 'ತೇರು'ಗಳೂ ಸ್ಮಾರಕಗಳಾಗಿರುವ ಸಾಧ್ಯತೆಗಳಿವೆ. ಇವನ್ನು ಮಂದಾರಗಳೆಂದೂ ಗುರುತಿಸಲಾಗಿದೆ. ತೇರಿನ ಬಸದಿಯ ಎದುರಿಗಿರುವ ಇಂತಹ ಒಂದು ಕಟ್ಟಡವನ್ನು ಹೊಯ್ಸಳ ರಾಜವರ್ತಕರಾದ ಪೊಯ್ಸಳಸೆಟ್ಟಿ ಮತ್ತು ನೇಮಿಸೆಟ್ಟಿಯರ ತಾಯಂದಿರಾದ ಮಾಚಿಕಬ್ಬೆ ಮತ್ತು ಶಾಂತಿಕಬ್ಬೆಯರ ಗೌರವಾರ್ಥ ನಿರ್ಮಿಸಲಾಯಿತು.[29] ಭಂಡಾರ ಬಸದಿಯ ಗರ್ಭಗುಡಿಯಲ್ಲಿ ಸಂರಕ್ಷಿಸಿಡಲಾಗಿರುವ 'ಪಂಚಮಂದಾರ'ವನ್ನು ಮೂಲಸಂಘದ ಹನಸೋಗೆ ಶಾಖೆಯ ಮುನಿ ಬಾಹುಬಲಿ ಮಲಧಾರಿದೇವನ ಗೌರವಾರ್ಥ ಪ್ರತಿಷ್ಠಾಪಿಸಲಾಯಿತು.[30]

ಅನುಬಂಧ – I

ನಿಸಿಧಿ ಸ್ಮಾರಕಗಳ ಕಾಲಾನುಕ್ರಮಣಿಕೆಯ ಹಂಚಿಕೆ : 600 ರಿಂದ 1900

ಕಾಲಾನು ಕ್ರಮ ಕ್ರಿ.ಶ.	ಚಿಕ್ಕಬೆಟ್ಟ	ಒಟ್ಟು ಸಂಖ್ಯೆ	ದೊಡ್ಡ ಬೆಟ್ಟ	ಒಟ್ಟು ಸಂಖ್ಯೆ	ಶ್ರವಣ ಬೆಳ್ಗೊಳ ನಗರ	ಒಟ್ಟು ಸಂಖ್ಯೆ	ಜಿನನಾಥ ಪುರ	ಒಟ್ಟು ಸಂಖ್ಯೆ	ಚಲ್ಯ	ಒಟ್ಟು ಸಂಖ್ಯೆ	ಬೇರೀಜು
1	2	3	4	5	6	7	8	9	10	11	12
600-700	1, 2, 13-15, 20-37, 85-87, 90, 91, 94, 98., 104, 108, 110-114, 117-124, 126, 129, 130, **132**, 133, 134.	51	-	-	-	-	-	-	-	-	51
	(*99, *116)	*2	-	-	-	-	-	-	-	-	*2
701-800	6, 7, 9, 10, 11, 16, 17, 89, 92, 95, (*93, *96)	10	-	-	-	-	-	-	-	-	10
		*2	-	-	-	-	-	-	-		*2
801-900	68	1	-	-	-	-	-	-	-	-	1

1	2	3	4	5	6	7	8	9	10	11	12
901-1000	64, 78, 163, 168, 186, 188, **243** (*3, *187)	7 *2	-	-	-	-	-	-	-	-	7 *2
1001-1100	131, 203, 213 (*109, *147, *152, *164)	3 *5	-	-	-	-	524	1	-	-	4 *5
1101-1200	70, 71, 73, 77, 81, 135, 136, 155-158, **173**, 174, 175, **176**, 205, 208, **212**, (*181,*202,*207,*209,*210)	18, *5	305	1,	457 484	2	532 (*529) 533	*1 *1	-	-	22 *6
1201-1300	- (*254)	- *1	358, 375	2	-	-	539	1	(*570)	1	3 *2
1301-1400	72, 253, (*169)	2 *1	353, 360, 377, 378, 379, 380.	6	-	-	- -	- -	- -	-	8 *1

1	2	3	4	5	6	7	8	9	10	11	12
1401-1500	-	-	364	1	445, 446	2		-	-	·	3
1501-1600	-	-	-	-	-	-					
1601-1700	-	-	365	1	497	1		-		-	2
1701-1800	-	-	-	-	-	-		-		-	
1801-1900	252	1	324	1		-		-		-	2
	ಒಟ್ಟು	93 *18		12		5		3 *1		*1	113 *20

ಟಿಪ್ಪಣಿ :
1. ದಪ್ಪಂಕಿಗಳಲ್ಲಿ ಸೂಚಿಸಿರುವ ಶಾಸನಗಳು ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳಿಗೆ ಸಂಬಂಧಿಸಿವೆ.
2. * ಚಿಹ್ನೆಯು ಸಂದೇಹಾಸ್ಪದವಾದ ಶಾಸನಗಳನ್ನು ಸೂಚಿಸುವುದು. ಈ ಶಾಸನಗಳು ಸಮಾಧಿಮರಣವನ್ನು ಸ್ಪಷ್ಟವಾಗಿ ಹೆಸರಿಸುವುದಿಲ್ಲ.
3. ಈ ಅನುಬಂಧದಲ್ಲಿ ಮತ್ತು ಅನ್ಯ ಅನುಬಂಧಗಳಲ್ಲಿ ನೀಡಿದ ಅಂಕಿಗಳು ಎಪಿಗ್ರಾಫಿಯ *ಕರ್ನಾಟಿಕ,* (ಮೈಸೂರು, ೧೯೭೩) ರಲ್ಲಿ ಬರುವ ಶ್ರವಣ ಬೆಳ್ಗೊಳದ ಶಾಸನಗಳನ್ನು ಸೂಚಿಸುವುವು.

ಅನುಬಂಧ - II

ಶಾಸನಗಳಲ್ಲಿ ಬರುವ ವಿವಿಧ ವ್ರತಾಚರಣೆಗಳ ಉಲ್ಲೇಖಗಳು

ಕಾಲಾನುಕ್ರಮ ಕ್ರಿ.ಶ.	ಆರಾಧನ/ ಆರಾಧನಾಯೋಗ/ ಆರಾಧನಾ ವಿಧಿ/ ಇತ್ಯಾದಿ	ನಿಸಿಧಿ	ಪಂಚನಮಸ್ಕಾರ/ ಪಂಚನಮಷ್ಕಿಯೆ/ ಪಂಚಪದ/ ಇತ್ಯಾದಿ	ಪಂಡಿತ ಮರಣ	ಪೌಗ್ಗಮಣ	ಸನ್ಯಸನ	ಸಮಾಧಿ	ಸಲ್ಲೇಖನಾ
1	2	3	4	5	6	7	8	9
601-700	1, 2, 26, 86 110, 121	22, 32, 104 111, 118, 119, 129	117	-	-	1, 27, 28, 36, 37, 85, 98,112	1, 22, 108, 123, 132	-
701-800	-	17, 95	-	-	92	17	-	-
801-900	-	68	-	-	-	-	-	-
901-1000	64	-	-	-	-	78	64	-
1001-1100	-	131, 203, 213	-	-	-	524	-	-

1	2	3	4	5	6	7	8	9
1101-1200	81	70, 71, 73, **81**, 135, 136, 155, 156, 157, 175, 208, 212, 342, 457, 484, 532	136. 174, 175, 176	176	-	**81**, 136, 157, 158, 174, **176**, 484, 532	77, 157, 158, 175, **176**, 484	77,81, 136
1201-1300	-	358	935	-	-	539	569,539	539
1301-1400	-	**72**, 253, 360, 378 379,380	72	-	-	360	353	-
1401-1500	-	364	-	-	-	-	**364**	**364**
1501-1601	-	-	-	-	-	-	-	-
1601-1700	-	-	-	-	-	-	-	-
1701-1800	-	-	-	-	-	-	-	-
1801-1900	-	-	-	-	-	-	-	-
ಒಟ್ಟು	8	37+2	7	1	1	22+6	16	5

ಅನುಬಂಧ - III

ನಿಸಿಧಿ ಸ್ಮಾರಕಗಳ ಸಮಗ್ರ ಪಟ್ಟಿ ಮತ್ತು ಅವುಗಳ ಸಾಮಾಜಿಕ ಶ್ರೇಣೀಕರಣ

		ಧಾರ್ಮಿಕರು		ಶ್ರಾವಕರು – ಶ್ರಾವಕಿಯರು										
ಕಾಲಾನುಕ್ರಮ (ಕ್ರಿ. ಶ.)	ಸ್ಥಳ / ಊರು	ಶ್ರಾವಕರು	ಕಂತಿಯರು	ಅರಸರು	ಸಾಮಂತರು/ ಅಧಿಕಾರಿಗಳು	ವರ್ತಕರು	ಇತರರು	ರಾಣಿಯರು	ಸಾಮಂತರು/ ಅಧಿಕಾರಿಗಳು	ವರ್ತಕರು	ಇತರರು	ಅಳಿಸಿರುವ ಹೆಸರುಗಳು	ಅಸ್ಪಷ್ಟ	ಒಟ್ಟು
1	2	3	4	5	6	7	8	9	10	11	12	13	14	15
601-700	ಚಿಕ್ಕಬೆಟ್ಟ	38	8	-	-	-	-	-	-	-	-	8	2	54(*2)
	ದೊಡ್ಡಬೆಟ್ಟ	-	-	-	-	-	-	-	-	-	-	-	-	-
	ಶ್ರವಣಬೆಳ್ಗೊಳ	-	-	-	-	-	-	-	-	-	-	-	-	-
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	
701-800	ಚಿಕ್ಕಬೆಟ್ಟ	8	1	-	-	-	-	-	-	-	-	1	*2	10 (*2)
	ದೊಡ್ಡಬೆಟ್ಟ	-	-	-	-	-	-	-	-	-	-	-	-	-
	ಶ್ರವಣಬೆಳ್ಗೊಳ	-	-	-	-	-	-	-	-	-	-	-	-	-
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	

1	2	3	4	5	6	7	8	9	10	11	12	13	14	15
801- 900	ಚಿಕ್ಕಬೆಟ್ಟ	-	-	-	-	-	-	-	-	-	-	1		1
	ದೊಡ್ಡಬೆಟ್ಟ	-	-	-	-	-	-	-	-	-	-	-	-	-
	ಶ್ರವಣಬೆಳ್ಗೊಳ	-	-	-	-	-	-	-	-	-	-	-	-	-
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	
901- 1000	ಚಿಕ್ಕಬೆಟ್ಟ	-	-	1	2	-	4	-	-	-	1	-	*2	8 (*2)
	ದೊಡ್ಡಬೆಟ್ಟ	-	-	-	-	-	-	-	-	-	-	-	-	-
	ಶ್ರವಣಬೆಳ್ಗೊಳ	-	-	-	-	-	-	-	-	-	-	-	-	-
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು													
1001- 1100	ಚಿಕ್ಕಬೆಟ್ಟ	-	-	1	-	-	-	-	-	-	-	2	*5	3 (*5)
	ದೊಡ್ಡಬೆಟ್ಟ	-	-	-	-	-	-	-	-	-	-	-	-	-
	ಶ್ರವಣಬೆಳ್ಗೊಳ	-	-	-	-	-	-	-	-	-	-	1	-	1
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	-

1	2	3	4	5	6	7	8	9	10	11	12	13	14	15
1101- 1200	ಚಿಕ್ಕಬೆಟ್ಟ	8	-	-	3	2	2	1	3	1	1	1	*4	22 (*4)
	ದೊಡ್ಡಬೆಟ್ಟ	1	-	-	-	-	1	-	-	1	-	-	-	3
	ಶ್ರವಣಬೆಳ್ಗೊಳ	-	1	-	-	-	-	-	-	-	-	-	-	1
	ಜಿನನಾಥಪುರ	-	-	-	-	-	-	-	-	-	-	-	-	1
	ಇತರ ಗ್ರಾಮಗಳು	-			-	-	-	-	-	-	-	-	-	1
1201- 1300	ಚಿಕ್ಕಬೆಟ್ಟ	-	-	-	-	-	-	-	-	-	-	-	*1	(*1)
	ದೊಡ್ಡಬೆಟ್ಟ	1	-	-	-	-	-	-	-	1	-	-	*1	2(*1)
	ಶ್ರವಣಬೆಳ್ಗೊಳ	1	-	-	-	-	-	-	-	-	2	-	-	2
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	*1	*1
1301- 1400	ಚಿಕ್ಕಬೆಟ್ಟ	2	-	-	-	-	-	-	-	-	-	-	-	2
	ದೊಡ್ಡಬೆಟ್ಟ	4	-	-	-	1	1	-	-	-	1	-	-	7
	ಶ್ರವಣಬೆಳ್ಗೊಳ	-	-	-	-	-	-	-	-	-	-	-	-	-
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	-

1	2	3	4	5	6	7	8	9	10	11	12	13	14	15
1401- 1500	ಚಿಕ್ಕಬೆಟ್ಟ	-	-	-	-	-	-	-	-	-	-	-	-	-
	ದೊಡ್ಡಬೆಟ್ಟ	1	-	-	-	-	-	-	-	-	-	-	-	1
	ಶ್ರವಣಬೆಳ್ಗೊಳ	-	-	2	-	-	-	-	-	-	-	-	-	2
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	-
1501- 1600	ಚಿಕ್ಕಬೆಟ್ಟ	-	-	-	-	-	-	-	-	-	-	-	-	-
	ದೊಡ್ಡಬೆಟ್ಟ	-	-	-	-	-	-	-	-	-	-	-	-	-
	ಶ್ರವಣಬೆಳ್ಗೊಳ	-	-	-	-	-	-	-	-	-	-	-	-	-
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	-
1601- 1700	ಚಿಕ್ಕಬೆಟ್ಟ	-	-	-	-	-	-	-	-	-	-	-	-	-
	ದೊಡ್ಡಬೆಟ್ಟ	-	-	-	-	-	2	-	-	-	-	-	-	2
	ಶ್ರವಣಬೆಳ್ಗೊಳ	1	-	-	-	-	-	-	-	-	-	-	-	1
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	-

1	2	3	4	5	6	7	8	9	10	11	12	13	14	15
1701 - 1800	ಚಿಕ್ಕಬೆಟ್ಟ	-	-	-	-	-	-	-	-	-	-	-	-	-
	ದೊಡ್ಡಬೆಟ್ಟ	-	-	-	-	-	-	-	-	-	-	-	-	-
	ಶ್ರವಣಬೆಳ್ಗೊಳ	-	-	-	-	-	-	-	-	-	-	-	-	-
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	-
1801 - 1900	ಚಿಕ್ಕಬೆಟ್ಟ	1	-	-	-	-	-	-	-	-	-	-	-	1
	ದೊಡ್ಡಬೆಟ್ಟ	-	-	-	1	-	-	-	-	-	-	-	-	1
	ಶ್ರವಣಬೆಳ್ಗೊಳ	-	-	-	-	-	-	-	-	-	-	-	-	-
	ಜಿನನಾಥಪುರ	-	-	-	-	-	-	-	-	-	-	-	-	-
	ಇತರ ಗ್ರಾಮಗಳು	-	-	-	-	-	-	-	-	-	-	-	-	-
	ಒಟ್ಟು :	67	13	4	5	3	10	1	3	3	4	7	(*18)	125(*20)

ಅನುಬಂಧ - IV
ಮರಣಗಳ ಕಾಲಾನುಕ್ರಮದ ಪಟ್ಟಿ ಮತ್ತು ಮೃತರ ಸಾಮಾಜಿಕ ಶ್ರೇಣಿಗಳು

ಕಾಲಾನುಕ್ರಮ	ಸಾಮಾಜಿಕ ಅಂತಸ್ತು	ಹೆಸರು	ಉಲ್ಲೇಖಿತ ಸಂಖ್ಯೆ
1	2	3	4
601-700	**I - ಶ್ರಮಣರು**	1. ಪ್ರಭಾಚಂದ್ರ	ಎ ಕ II, 1
		2. ಕನಕಸೇನ	2
		3. ಬಲದೇವ	
		4. ಅರಿಷ್ಟನೇಮಿ	13
		5. ಚರಿತಶ್ರೀ	14
		6. ಸರ್ವಜ್ಞಭಟ್ಟಾರಕ	15
		7. ಜಂಬುನಾಯ್ಗಿರ	21
		8. ಕಿತ್ತರೆ	22
		9. ಅಕ್ಷಯಕೀರ್ತಿ	24
		10. ಕಳಂತೂರನ್	25
		11. ಗುಣದೇವ	26
		12. ಬಾಲದೇವಗುರವಡಿ	27
		13. ಉಗ್ರಸೇನಗುರವಡಿ	28
		14. ಪೆಗುರಮ	29

1	2	3	4
		15. ಮಾಸೇನ	30
		16. ಮೆಳ್ಳಿಗವಾಸಗುರುವರ್	31
		17. ಶ್ರೀಮ್ಮಡಿಗಳ್	33
		18. ಶಾಂತಿಸೇನ	34
		19. ಸಿಂಗಣಂದಿ ಗುರವಡಿ	35
		20. ಪರ್ಚಡಿಯ ಮೊದೆಯ ಕಲಾಪಕ ಗುರವಡಿ	36
		21. ನಾಗಸೇನಗುರವಡಿ	37
		22. ವೃಷಭನಂದಿ	85
		23. ಮಹಾದೇವ	90
		24. ಈಶಾನಪರಮೇಷ್ಠಿ	91
		25. ಚಂದ್ರದೇವಾಯಚಾರ್ಯ	94
		26. ನಂದಿಸೇನ	98
		27. ವಿಶೋಕಭಟಾರ	104
		28. ಇಂದ್ರನಂದಿಆಚಾರ್ಯ	110
		29. ಶ್ರೀ.. ರಾಚಾರ್ಯ	117
		30. ಪುಷ್ಪಸೇನಾಚಾರಿ	118
		31. ಶ್ರೀದೇವಾಚಾರ್ಯ	119
		32. ಗುಣಕೀರ್ತಿ	120
		33. ವೃಷಭನಂದಿ	121

1	2	3	4
		34. ಸೌಂದರ್ಯ ಆರ್ಯ	123
		35. ಮೇಘಣಂದಿಮುನಿ	124
		36. ವಿನಯದೇವಸೇನ	130
		37. ಶ್ರೀ ಪೂರ್ತ್ರಿಯ	133
		38. ಗಂಧವರ್ಮ	134
	II - ಕಂತಿಯರು	1. ನಾಗಮತೀಗಂತಿ	23
		2. ಶ್ರೀಮತೀಗಂತಿ	86
		3. ... ಖಂತಿ	111
		4. ರಾಜ್ಞೀಮತೀಗಂತಿ	112
		5. ಅನಂತಮತೀಗಂತಿಯಾರ್	113
		6. ಗುಣಮತೀ ಅವ್ವೆ	129
		7. ಪ್ರಭಾವತೀ	132
		8. ಅಮಿತಾಮತೀ	ಅದೇ
	III - ಶ್ರಾವಕರು	ಇಲ್ಲ	-
	IV - ಶ್ರಾವಕಿಯರು	ಇಲ್ಲ	-

1	2	3	4
701-800	I - ಶ್ರಮಣರು	1. (ಶ್ರೀತೀರ್ಥದ ಗೊರವಡಿಗಳು)	6
		2. ಉಳ್ಳಿಕಲ್ ಗೊರವಡಿಗಳು	7
		3. ಗುಣಸೇನಗುರವರ್	10
		4. ಪಾನದಭಟಾರರ್	11
		5. ಅರಿಷ್ಟನೇಮಿದೇವರ್	16
		6. ಶ್ರೀ ಮಹಾವೀರ ಆಳ್ದೂರ ತಮ್ಮಾಡಿ	17
		7. ಶ್ರೀ ಬಲದೇವಾಚಾರ್ಯ	92
		8. ಶ್ರೀ ಪುಷ್ಪಣಂದಿ	95
	II - ಕಂತಿಯರು	1. ಧಣ್ಣಿಕುಟ್ಟಾರೆವಿಗುರವಿ	9
	III - ಶ್ರಾವಕರು		
	IV - ಶ್ರಾವಕಿಯರು		
801-900	I - ಶ್ರಮಣರು		
	II - ಕಂತಿಯರು		
	III - ಶ್ರಾವಕರು		
	IV - ಶ್ರಾವಕಿಯರು		

1	2	3	4
901-1000	I - ಶ್ರಮಣರು	ಇಲ್ಲ	
	II - ಕಂತಿಯರು		
		1. ಸಾಯಿಬ್ಬೆಕಂತಿ	168
	III - ಶ್ರಾವಕರು		
		1. ಮಾರಸಿಂಹ	64
		2. ಇಂದ್ರರಾಜ	163
		3. ಗೊಗ್ಗಿ	188
		4. ಎರೆಯಪಗಾಮುಂಡ	243
		5. ಮದ್ದಯ್ಯ	ಅದೇ
	IV - ಶ್ರಾವಕಿಯರು	1. ವೈಜಬ್ಬೆ	78
1001-1100	I - ಶ್ರಮಣರು		
	II - ಕಂತಿಯರು	1. ಪೊಲ್ಲಬ್ಬೆ	203
	III - ಶ್ರಾವಕರು		
	IV - ಶ್ರಾವಕಿಯರು		

1	2	3	4
1101-1200	I - ಶ್ರಮಣರು	1. ದೇವಕೀರ್ತಿ	70,71
		2. ನಯಕೀರ್ತಿದೇವ	73
		3. ಮಲ್ಲಿಷೇಣ	77
		4. ಭಾನುಕೀರ್ತಿ	81
		5. ಶುಭಚಂದ್ರದೇವ	135
		6. ಮೇಘಚಂದ್ರತ್ರೈವಿದ್ಯದೇವ	156
		7. ಪ್ರಭಾಚಂದ್ರ ಸಿದ್ಧಾಂತದೇವ	173
		8. ಬಾಳಚಂದ್ರಮುನಿ	205
		9. ನಯಕೀರ್ತಿ	457
	II - ಕಂತಿಯರು	1. ಶ್ರೀಮತಿಗಂತಿ	484
	III - ಶ್ರಾವಕರು	1. ಬೂಚಣ	155
		2. ಬಲದೇವ	174
		3. ಸಿಂಗಿಮಯ್ಯ	175
		4. ಚಲದಂಕರಾವ ಹೊಯ್ಸಳಸೆಟ್ಟಿ	208
		5. ಬೂಚಣ	ಅದೇ
		6. ಶ್ರೀಧರ	212
		7. (ಒಬ್ಬನ ತಂದೆ)	ಅದೇ
		8. ಬಸವಣ್ಣ	301
		9. ಏಚಿರಾಜ	532

1	2	3	4
	IV - ಶ್ರಾವಕಿಯರು	1. ಪೋಚಾಂಬಿಕೆ	136
		2. ಲಕ್ಷ್ಮೀವತೀ	157
		3. ದೇಮಿಯಕ್ಕ	158
		4. ಮಾಚಿಕಬ್ಬೆ	173, 176
		5. ಶಾಂತಲಾದೇವೀ	176
		6. (ಒಬ್ಬನ ತಾಯಿ)	212
		7. ದೇಮವ್ವೆ	301
1201-1300	I - ಶ್ರಮಣರು	1. ಪದ್ಮಣಂದಿದೇವ	375
	II - ಕಂತಿಯರು	-	
	III - ಶ್ರಾವಕರು	-	
	IV - ಶ್ರಾವಕಿಯರು	1. ಕಾಳವ್ವೆ	539
		2. (ಮಲ್ಲಸೆಟ್ಟಿಯ ಪುತ್ರಿ)	358
1301-1400	I - ಶ್ರಮಣರು	1. ಶುಭಚಂದ್ರದೇವ	72
		2. ಮಲ್ಲಿಸೇನದೇವ	253
		3. ಪಂಡಿತಾರ್ಯಯತಿ	360
		4. ... ಕೀರ್ತಿದೇವ	378
		5. ಹೇಮಚಂದ್ರಕೀರ್ತಿದೇವ	379
		6. ಧರ್ಮಭೂಷಣದೇವ	380

1	2	3	4
	II - ಕಂತಿಯರು	-	-
	III - ಶ್ರಾವಕರು	1. ಪಾಯಿಸೆಟಿ	353
		2. ಗೋಪಯ	377
	IV - ಶ್ರಾವಕಿಯರು	1. ಬೈಚಕ್ಕ	ಅದೇ
1401-1500	I - ಶ್ರಮಣರು	1. ಶೃತಮುನಿ	364
	II - ಕಂತಿಯರು		
	III - ಶ್ರಾವಕರು	1. ದೇವರಾಟ	445
		2. ಹರಿಹರರಾಯ	446
	IV - ಶ್ರಾವಕಿಯರು		
1501-1600	I - ಶ್ರಮಣರು		
	II - ಕಂತಿಯರು		
	III - ಶ್ರಾವಕರು		
	IV - ಶ್ರಾವಕಿಯರು		

1	2	3	4
1601-1700	I - ಶ್ರಮಣರು	1. ಚಾರುಕೀರ್ತಿಪಂಡಿತ	497
	II - ಕಂತಿಯರು		
	III - ಶ್ರಾವಕರು	1. ಸಾಯಣ್ಣ	365
		2. ಹಿರಿಯಣ್ಣ	ಅದೇ
	IV - ಶ್ರಾವಕಿಯರು		
1701-1800	I - ಶ್ರಮಣರು		
	II - ಕಂತಿಯರು		
	III - ಶ್ರಾವಕರು		
	IV - ಶ್ರಾವಕಿಯರು		
1801-1900	I - ಶ್ರಮಣರು	1. ಅಜಿತಕೀರ್ತಿದೇವ	252
	II - ಕಂತಿಯರು		
	III - ಶ್ರಾವಕರು	1. ದೇವರಾಜ ಅರಸ	324
	IV - ಶ್ರಾವಕಿಯರು		

ಅನುಬಂಧ – V

ಇತರೆ : ಅನಿಶ್ಚಿತ ಹೆಸರುಗಳು ಮತ್ತು ನಿಸಿಧಿಗಳು

ಕಾಲಾನುಕ್ರಮ 1	ಅಳಿಸಿಹೋಗಿರುವ ಹೆಸರುಗಳು 2	ಉಲ್ಲೇಖಿತ ಸಂಖ್ಯೆ 3
601-700	1. ... ಗಳ (ಮುನಿಯಿರಬಹುದು)	20
	2. ಹೆಸರು ಸ್ಪಷ್ಟವಿಲ್ಲ	32
	3. ,, ,,	87
	4. ಹೆಸರು ಕಳೆದಿದೆ	108
	5. ಹೆಸರು ಕಳೆದಿದೆ (ಪೆರ್ಮ್ಮಾನ ಕುಟುಂಬ)	114
	6. ಸ್ತ್ರೀಯ ಹೆಸರು, ಸ್ಪಷ್ಟವಿಲ್ಲ	122
	7. ಹೆಸರು ಕಳೆದಿದೆ	126
701-800	1. ಹೆಸರು ಕಳೆದಿದೆ	89
801-900	1. ಹೆಸರು ಕಳೆದಿದೆ	68
901-1000	1. ಹೆಸರು ಅಳಿಸಿಹೋಗಿದೆ (ಶ್ರಾವಕ)	186
1001-1100	1. ಹೆಸರು ಕಳೆದಿದೆ	131
	2. ,, ,,	213
	3. ,, ,,	524
1201-1300	1. ಹೆಸರು ಕಳೆದಿದೆ	359

ನಿಸಿಧಿಗಳು		
1	2	3
601-700	1. ಹೆಸರು ಕಳೆದಿದೆ	99
	2. ,, ,,	116
701-800	1. ಪದ್ಮಣಂದಿ (ಮುನಿ)	93
	2. ಹೆಸರು ಕಳೆದಿದೆ	96
901-1000	1. ಶ್ರೀದೇವ (ಮುನಿ)	3
	2. ಹೆಸರು ಕಳೆದಿದೆ	187
1001-1100	1. ಗೌಡದೇವ (ಮುನಿ)	109
	2. ಲಖ್ಖಣ್ಣದೇವ (ಮುನಿ)	147
	3. ಶಾಂತಣಂದಿ (ಮುನಿ)	152
	4. ಚಂದ್ರಕೀರ್ತೀದೇವ (ಮುನಿ)	153
	5. ರವಿಚಂದ್ರದೇವ (ಮುನಿ)	164

1	2	3
1101-1200	1. ನೇಮಣ (ಮುನಿ)	181
	2. ಆಧ್ಯಾತ್ಮಿಬಾಳಚಂದ್ರದೇವ (ಮುನಿ)	202
	3. ಶೀಧಪರಿಲಿ (ಮುನಿ)	207
	4. ಹೆಸರು ಕಳೆದಿದೆ	209
	5. ಶ್ರೀ ದನಕೀರ್ತಿದೇವ (ಮುನಿ)	210
	6. ಅಭಯದೇವ (ಮುನಿ)	529
1201-1300	1. ಶ್ರೀ ಭದ್ರಬಾಹುಬಲಿ (ಮುನಿ)	254
	2. ಹೆಸರು ಕಳೆದಿದೆ	570
1101-1400	1. ದೇವ ಶ್ರೀಶರ (ಮುನಿ?)	169
	ಒಟ್ಟು ವ್ಯಕ್ತಿಗಳು : 125+*20 = 145	ಶಾಸನಗಳು = 113

ಪದಕೋಶ

ಚಿತ್ರಗಳು

ಪದಸೂಚಿ

ಪದಕೋಶ

ಅಂಜಲೀಮುದ್ರಾ	: ಪ್ರಾರ್ಥನಾಮುದ್ರಾ; ಹಸ್ತ ಚಿಹ್ನೆ
ಅಂತರ್ಗತ ಕೇವಲಿ	: ಸರ್ವಜ್ಞತೆಯನ್ನು ಗರ್ಭೀಕರಿಸಿಕೊಂಡವನು
ಅಂತ್ಯಕ್ರಿಯಾ	: ದೇಹದಂಡನೆಯ ಕ್ರಿಯಾಂತ್ಯ
ಅಅಆಉಮು	: ಓಉಮು = ಓಂ - ಪಂಚ ಪ್ರಣವ
ಅಖಂಡಬಾಗಿಲು	: ಶ್ರವಣಬೆಳ್ಗೊಳದ ದೊಡ್ಡಬೆಟ್ಟದ ಮೇಲೆ ಅಖಂಡ ಶಿಲೆಯಲ್ಲಿ ಮಾಡಲಾದುದೆಂದು ನಂಬಲಾದ ಬಾಗಿಲು
ಅಗ್ರಹಾರ	: ಬ್ರಾಹ್ಮಣರು ನೆಲೆಸಲು ಸ್ಥಾಪಿಸಿದ ಇಲ್ಲವೆ ಮಾರ್ಪಡಿಸಿದ ಗ್ರಾಮ, ಗ್ರಾಮಕೂಟ, ಗ್ರಾಮವಿಭಾಗ
ಅತಿಚಾರಗಳು	: ಉಲ್ಲಂಘನೆಗಳು; ಅತಿಕ್ರಮಗಳು
ಅಥ	: ಶುಭಸೂಚಕ ಮತ್ತು ಕ್ರಿಯಾರಂಭಸೂಚಕ ಅವ್ಯಯ
ಅರ್ಧಪರ್ಯಂಕಾಸನ	: ಕಾಲುಗಳನ್ನು ಮಡಚಿ, ಒಂದರಲ್ಲಿ ಮತ್ತೊಂದು ತೊಡರದಂತೆ ಕುಳಿತುಕೊಳ್ಳುವ ಭಂಗಿ; ಅರ್ಧಾಸನ
ಅರ್ಧಾಸನ	: ಅರ್ಧಪರ್ಯಂಕಾಸನ
ಅನಾಕುಳಚಿತ್ತ	: ಸಂಪೂರ್ಣ ಶಾಂತಿಯುತ ಚಿತ್ತ; ಅಚಂಚಲ ಮನಸ್ಕ; ಮಗ್ನ ಧ್ಯಾನಿ
ಅನ್ಯಾಯ	: ಒಂದು ತೆರಿಗೆ
ಅನೇಕಾಂತ	: ಸ್ಯಾದ್‌ವಾದ
ಅಭ್ಯಂತರ	: ಆಂತರಿಕ
ಅಭ್ಯಾಗತ	: ಅತಿಥಿ; ಒಂದು ತೆರಿಗೆ
ಅಭಿಮಾನ	: ಗರ್ವ; ಅಹಂಕಾರ
ಅರುಕುಲ	: ಒಂದು ಜಾತಿ ಅಥವಾ ಸಮುದಾಯದ ವಂಶಾವಳಿ
ಅರುಂಗಳಾನ್ವಯ	: ದ್ರಾವಿಡ ಸಂಘದ ಮರೀಯ ಶಾಖೆ
ಅರೆಗಲ್ ಬಸ್ತಿ	: ಚಿಕ್ಕಬೆಟ್ಟದ ಪಾರ್ಶ್ವನಾಥ ಬಸ್ತಿ
ಅಶ್ವಾಧ್ಯಕ್ಷ	: ಅಶ್ವಸೈನ್ಯದ ದಂಡನಾಯಕ
ಅಸಂಪ್ರಜ್ಞಾತಾ	: ಸಮಾಧಿಯ ದ್ವಿವಿಧ ವರ್ಗೀಕರಣಗಳಲ್ಲೊಂದು
ಅರ್ಹಂತ	: ಸರ್ವಜ್ಞಾನಿ; ತೀರ್ಥಂಕರ
ಅಹಿಂಸಾ	: ಹಿಂಸೆ ಮಾಡದಿರುವುದು

ಅಕ್ಷಪಾದ	:	ನ್ಯಾಯದರ್ಶನ ಪ್ರತಿಪಾದಕ; ಗೌತಮಮುನಿ
ಅಕ್ಷತೆ ಪೂಜೆ	:	ಅರಿಶಿಣ-ಕುಂಕುಮ ಮಿಶ್ರಿತ ಅಕ್ಕಿಕಾಳಿನ ಪೂಜೆ
ಆಗಮ	:	ಧರ್ಮಗ್ರಂಥ; ಧರ್ಮಸೂತ್ರ
ಆಗಾರಾವೊ ಅಣಗರಿಯಂ	:	ಅನಿಕೇತನ; ಪರಿವ್ರಾಜಕ; ನೆಲೆ ಇಲ್ಲದ ವ್ಯಕ್ತಿ
ಆಚಾಮ್ಲ	:	ನೀರಿನಲ್ಲಿ ತೊಯ್ಸಿದ ಒಣ (ಬೇಯಿಸದ) ಆಹಾರ
ಆಚಾರ	:	ಸಾಂಪ್ರದಾಯಿಕ ಆಚರಣೆ
ಆಚಾರಾಂಗ	:	ಚಾರಣ ಅಥವಾ ಆಧ್ಯಾತ್ಮ ಗ್ರಂಥ; ಧರ್ಮಗ್ರಂಥ
ಆಚಾರಾಂಗಸೂತ್ರ	:	ಅರ್ಧಮಾಗಧಿ ಭಾಷೆಯ ಶ್ರುತಾಂಗ ಯಾ ಜೈನಾಗಮದ ಒಂದು ಭಾಗ
ಆಚಾರ್ಯ	:	ಸುಸ್ಥಾಪಿತ ಆಚಾರವನ್ನು ಪಾಲಿಸುವವನು; ಪುರೋಹಿತ ಮತ್ತು ಧರ್ಮಗುರುವಿನ ಹೆಸರಿನ ಅಂತ್ಯ ಪ್ರತ್ಯಯ
ಆಜಿ	:	ಜೈನ ಮುನಿಗಣ
ಆತ್ಮಭಾವನೆ	:	ಅರಿವು
ಆರ್ತ	:	ದುಃಖ; ಧ್ಯಾನದ ನಾಲ್ಕು ವಿಧಗಳಲ್ಲೊಂದು
ಆರ್ತರೌದ್ರ ಪರಿಣಾಮ	:	ದುಃಖ-ಕೋಪಗಳ ಪರಿಣಾಮ
ಆದಿನಾಥ	:	ಪ್ರಥಮ ತೀರ್ಥಂಕರ; ವೃಷಭನಾಥ
ಆಧ್ಯಾತ್ಮ	:	ಪರತತ್ವಶಾಸ್ತ್ರ; ಆತ್ಮವಸ್ತುವಿನ ಶಾಸ್ತ್ರ
ಆಧ್ಯಾತ್ಮಿ	:	ಆಧ್ಯಾತ್ಮ ಪಾಲಿಸುವವನು
ಆರ್ತರೌದ್ರಪರಿಣಾಮ	:	ದುಃಖ ಅಥವಾ ದುಗುಡಿನ ಪರಿಣಾಮ
ಆರಾಧನಾ	:	ಮರಣಪ್ರಕ್ರಿಯೆ; ಚಾರಣ ಗ್ರಂಥ
ಆರಾಧನಾಕಲಕ	:	ಆರಾಧನಾ ಗ್ರಂಥಗಳಲ್ಲೆಲ್ಲ ಅತ್ಯಂತ ಅಡಕವಾದ, ಕೇವಲ ಹದಿನೇಳು ಪದ್ಯಗಳ, ಗ್ರಂಥ.
ಆರಾಧನಾಪೀಠ	:	ಆರಾಧನಾ ಗ್ರಂಥವನ್ನಿಡುವ ಠವಣೆಕೋಲು
ಆರಾಧನಾಮಾಲಾ	:	*ಸಮ್ವೇಗರಂಗಶಾಲಾ;* ಜಿನಚಂದ್ರಸೂರಿಯ *ಆರಾಧನಾ ಗ್ರಂಥ*
ಆರಾಧನಾವಿಧಿ	:	ಸಮ್ಯಕ್ ವಿಶ್ವಾಸ; ಆರಾಧನಾ ವ್ರತ
ಆಶುಪದ್ಯ	:	ಮರಣಕ್ಕೆ ಮುಂಚೆ ರಚಿಸಿದ ಕಾವ್ಯ
ಆಸಿಯ / ಆಸಿಕಾ	:	ತನ್ನ ಆಸನದಿಂದ ಕದಲುವ ಮುನ್ನ ಇಂಗಿಣೀಮರಣ ಸಾಧಕನು ಪಠಿಸುವ ಪದ
ಇಂಗಿಣೀ	:	ಇಂಗಿಣೀ ಮರಣ; ಪಂಡಿತ ಮರಣದ ಮೂರು ವಿಧಗಳಲ್ಲಿ ಒಂದು

ಇಂಗಿಣೀ ಆತ್ಮಾನೊ	:	ಆತ್ಮ ಸಾಕ್ಷಾತ್ಕಾರ
ಇಂಗಿತ	:	ಸಾಕ್ಷಾತ್ಕಾರ.
ಇಂಗುಳೇಶ್ವರ ಬಳಿ	:	ಮೂಲಸಂಘದ ಶಾಖೆ
ಇಂದ್ರ	:	ದೇವೇಂದ್ರ
ಇಂದ್ರಪಾದ	:	ಇಂದ್ರನ ಪಾದತಲ; ಇಂದ್ರ ಸನ್ನಿಧಿ
ಇಂದ್ರಮಂಟಪ	:	ಇಂದ್ರನ ಸಭಾಮಂಟಪ
ಇಂದ್ರಲೋಕ	:	ದೇವೇಂದ್ರಲೋಕ
ಉಪಾಧ್ಯಾಯ	:	ಭೋದನಾ ಗುರು
ಉಪಾನ	:	ಪೀಠದ ಮೊದಲ ಪಟ್ಟಿಕೆ; ಪೀಠ
ಉಪಪೀಠ	:	ಜಗತಿಯ ವಿಭಾಗ
ಋಷಿಗಿರಿ	:	ಋಷಿಗಳ ಬೆಟ್ಟ ; ಶ್ರವಣಬೆಳ್ಳೊಳದ ಚಿಕ್ಕಬೆಟ್ಟ
ಎರಡುಕಟ್ಟೆ ಬಸದಿ	:	ಚಿಕ್ಕಬೆಟ್ಟದ ಬಸ್ತಿ
ಎಳೆಯಿ	:	ವೃತ್ತಿ ಸಂಘ; ವ್ಯಾಪಾರಿಗಳ ಸಂಘ; ಶ್ರೇಣಿ
ಐರಾವತ	:	ಒಂದು ಪೌರಾಣಿಕ ಕಲ್ಪನೆ; ಇಂದ್ರನ ವಾಹನ; ಐದು ಸೊಂಡಿಲುಗಳ ಆನೆ
ಒದೆಗಲ್ಲು ಬಸ್ತಿ	:	ದೊಡ್ಡಬೆಟ್ಟದ ಜಿನಾಲಯ
ಓಜ	:	ಉಪಾಧ್ಯಾಲಯ; ರೂವಾರಿ, ಲಿಪಿಕಾರ, ಲೋಹಕಾರ, ಇತ್ಯಾದಿ ಕಲಾವಿದರ ಅಥವಾ ಕುಶಲಕರ್ಮಿಗಳ ಹೆಸರಿನ ಪ್ರತ್ಯಯ.
ಕಂತಿ	:	ಪರಿವ್ರಾಜಕಿ; ಸನ್ಯಾಸಿನಿ
ಕಟಕಸೇಸೆ	:	ರಾಜನ ಸಮರ ಸನ್ನಾಹಕ್ಕೆ ಸಂಗ್ರಹಿಸುವ ನಿಧಿ; ಕರ
ಕಟವಪ್ರ	:	ಕಳ್ವಪ್ಪು
ಕಟ್ಟೆ	:	ವೇದಿಕೆ; ಕೆರೆ
ಕತ್ತಲೆ ಬಸ್ತಿ	:	ಚಿಕ್ಕಬೆಟ್ಟದ ಜಿನಾಲಯ
ಕನ್ನೆಬಸದಿ	:	ಪವಿತ್ರ ಮಂದಿರ; ಹೊಸ ದೇವಾಲಯ
ಕಮ್ಮಟ	:	ಟಂಕಸಾಲೆ
ಕಮಠ	:	ಒಂದು ದುಷ್ಟ ಶಕ್ತಿ; ಪಾರ್ಶ್ವನಾಥ ತೀರ್ಥಂಕರನ ಶತ್ರು
ಕರ್ಮ	:	ಕಾರ್ಯ; ವಿಧಿ
ಕಲ್ಪ	:	ಯುಗ; ಕಾಲಾವಧಿ
ಕಲಿ	:	ನಾಲ್ಕನೆಯ ಅಥವಾ ಪ್ರಸ್ತುತ ಯುಗ
ಕವಿತಾಕಾಂತ	:	ಕವಿಶ್ರೇಷ್ಠ

ಕಷಾಯಗಳು	: ನಾಲ್ಕು ರಾಗಗಳಾದ ಕೋಪ, ಅಹಂಕಾರ, ವಂಚನೆ ಮತ್ತು ದ್ವೇಷ
ಕಷಾಯ ಸಲ್ಲೇಖನಾ	: ಮೋಹ, ದ್ವೇಷ, ಇತ್ಯಾದಿ ರಾಗಗಳಿಂದ ಮುಕ್ತಗೊಳಿಸುವ ತಪಸ್ಸು
ಕಳ್ಬಪ್ಪು	: ಕಳ್ಬಪ್ಪು. ಕರಿಬೆಟ್ಟ (?)
ಕಾಪಾಲಿಕ	: ಮಾನವ ಕಪಾಲದಲ್ಲಿ ತಿನ್ನುವ, ಕುಡಿಯುವ, ಶಿವಭಕ್ತ; ಒಂದು ಉಗ್ರ ಶೈವ ಪಂಥದ ಅನುಯಾಯಿ
ಕಾಯೆ ಬ್ರತಸಮಾರೋಪಂ	: ದೇಹ ದಂಡನೆ
ಕಾಯೋತ್ಸರ್ಗ	: ಜಿನನ ನಿಂತ ಭಂಗಿ; ದೇಹವನ್ನು ಡೊಂಕುಗೊಳಿಸದ, ಹಸ್ತಮುದ್ರೆಯಿಲ್ಲದ, ನಿಂತ ಭಂಗಿ
ಕಾಷ್ಠಸಂಘ	: ಕುಮಾರಸೇನ ಸ್ಥಾಪಿಸಿದ ದಿಗಂಬರ ಜೈನ ಪಂಥ
ಕಿತ್ತೂರು ಸಂಘ	: ಜೈನ ಸಂಘ.
ಕುಂದ	: ಒಂದು ಬಗೆಯ ಮಲ್ಲಿಗೆ
ಕೂಗೇಬ್ರಹ್ಮದೇವ ಸ್ತಂಭ	: ಚಿಕ್ಕಬೆಟ್ಟದ ಮೇಲಿರುವ ಒಂದು ಸ್ತಂಭ
ಕೂಟ	: ಸಮಾವೇಶ
ಕೂಡು	: ಮಾಡ
ಕೆರೆ	: ಕೊಳ
ಕೊಳಗ	: ಕಾಳು ಅಳೆಯುವ ಒಂದು ಪ್ರಮಾಣ
ಕೊಳತ್ತೂರು ಸಂಘ	: ಜೈನ ಸಂಘ
ಕೊಂದಕುಂದಾನ್ವಯ	: ಮೂಲಸಂಘದ ಶಾಖೆ
ಖಣ	: ಒಂದು ತೆರಿಗೆ
ಗಂಗಮಂಡಲ	: ಗಂಗ ರಾಜವಂಶವು ಆಳಿದ ಕರ್ನಾಟಕದ ಪ್ರದೇಶ
ಗಂಗಾ	: ಗಂಗಾನದಿ; ಗಂಗಾದೇವಿ
ಗಂತಿ	: ಕಂತಿ; ಶ್ರಮಣಿ
ಗಂಧಮಯ ಜಲ	: ದೇವರಕ್ತ
ಗಚ್ಛ	: ಜೈನ ಸಂಘದ ಶಾಖೆ; ಒಂದು ಮತೀಯ ಸಂಘ
ಗಣ	: ಸಮೂಹ, ಕೂಟ, ಇತ್ಯಾದಿ. ಜೈನ ಮತೀಯ ಸಂಘ
ಗಣಾಧೀಶ್ವರ	: ಗಣಗಳ ಮುಖ್ಯಸ್ಥ ಅಥವಾ ನಾಯಕ
ಗಣಿ	: ಗಣದ ಸದಸ್ಯ
ಗಾವುಂಡ	: ಗ್ರಾಮಾಧಿಪತಿ.
ಗಾವುಂಡಿ	: ಗೌಡನ ಹೆಂಡತಿ

ಗಿರಿ	:	ಬೆಟ್ಟ
ಗುಡ್ಡ	:	ಶ್ರಾವಕ
ಗುಡ್ಡಿ	:	ಶ್ರಾವಕಿ
ಗುರವ	:	ಜೈನ ಗುರು
ಗುರವಡಿ	:	ಬೋಧಕಳು; ಸಾಧಕಳು
ಗುರವಿ	:	ಜೈನ ಸನ್ಯಾಸಿನಿ
ಗುರು ನಿಷಧ್ಯಾ	:	ಗುರುವಿನ ಗೌರವಾರ್ಥ ನಿರ್ಮಿಸಿದ ನಿಸಿಧಿ ಸ್ಮಾರಕ
ಗುರುವ	:	ಗುರವಡಿ
ಗುಳ್ಳೇಕಾಯಿ ಅಜ್ಜಿ	:	ಹೆಸರು; ಗುಳ್ಳಡಿಕೆ ಹಿಡಿದ ಅಜ್ಜಿ
ಗೆರ್ವಾಳಿ	:	ಉತ್ತರ ಭಾರತದ ಒಂದು ಜೈನ ಪಂಥ
ಗೊಮ್ಮಟ	:	ಬಾಹುಬಲಿಯ ಜನಪ್ರಿಯ ಹೆಸರು
ಗೊಮ್ಮಟಸ್ತುತಿ	:	ಗೊಮ್ಮಟನನ್ನು ಸ್ತುತಿಸಿ ಬೊಪ್ಪಣ ಪಂಡಿತನು (ಕ್ರಿ.ಶ. 1180) ರಚಿಸಿದ ಒಂದು ಶಾಸನ ಕಾವ್ಯ.
ಗ್ರಹಣ	:	ಗ್ರಹಿಸುವುದು; ತಿಳಿದುಕೊಳ್ಳುವುದು
ಘಾಟ್	:	ಘಟ್ಟ
ಜ್ಞಾನ	:	ಅನಂತ ಚತುಷ್ಟಯಗಳಲ್ಲೊಂದು; ನೋಡಿ, ದರ್ಶನ ಮತ್ತು ಚಾರಿತ್ರ
ಜ್ಞಾನ ಪ್ರಣವ	:	ಪಂಚಮರಮೇಷ್ಠಿಗಳ ಪ್ರಥಮಾಕ್ಷರದಿಂದ ರೂಪಿತವಾದ ಪವಿತ್ರ ಸ್ವರೋಜ್ಞಾನದ ಫಲವಾದ ಅಅಿಆಉಮ, ಆಉಂ, ಓಂ.
ಚಂಪಕ	:	ಸಂಪಿಗೆ
ಚಗಭಕ್ಷಣಾ ಚಕ್ರವರ್ತಿ	:	ಅರಸನ ಬಿರುದು
ಚತುರ್ವಿಂಶತಿ ಬಸ್ತಿ	:	ದೊಡ್ಡಬೆಟ್ಟದ ಬಸ್ತಿ
ಚಲದಂಕರಾವ	:	ಬಿರುದು; ಚಾರಿತ್ರ್ಯ ಬಲದಿಂದ ಖ್ಯಾತನಾದ ಜೆಟ್ಟಿ
ಚವೀಶ ತೀರ್ಥಂಕರ	:	ಇಪ್ಪತ್ನಾಲ್ಕು ತೀರ್ಥಂಕರರು
ಚಾಗ	:	ತ್ಯಾಗ
ಚಾಗದಕಂಬ	:	ದೊಡ್ಡಬೆಟ್ಟದ ಚಾವುಂಡರಾಯ ಮಂಟಪದಲ್ಲಿಯ ಕಂಬ
ಚಾಗದ ಮಂಟಪ	:	ಚಾಗದ ಕಂಬವಿರುವ ಮಂಟಪ
ಚಾರಣ	:	ಜೈನ ಸಾಹಿತ್ಯ ರಾಶಿ
ಚಾರಿತ್ರ	:	ಅನಂತ ಚತುಷ್ಟಯಗಳಲ್ಲೊಂದು; ದರ್ಶನ
ಚಾರ್ವಾಕ	:	ಲೋಕಾಯತ

ಚಾವುಂಡರಾಯ ಬಸ್ತಿ	:	ಚಿಕ್ಕಬೆಟ್ಟದ ಬಸ್ತಿ
ಚಿಂತಾಮಣಿ	:	ಚಿಂತಾಮಣಿಯ ಗ್ರಂಥ
ಚಿತ್ತೆ ಶುಭಾವನಾಮ್		
ಜೈನೀಮ್	:	ಜಿನನನ್ನು ಧ್ಯಾನಿಸುವ ಬಗೆ
ಚೂಳಾಮಣಿ	:	ಶ್ರೀವರ್ಧದೇವ ವಿರಚಿತ ಕಾವ್ಯ
ಚೌರಿ	:	ಕೂದಲ ಬೀಸಣಿಕೆ
ಛತ್ರತ್ರಯ	:	ಜಿನನ ಮೇಲಿರುವ ಮೂರು ಛತ್ರಗಳು; ಮುಕ್ಕೊಡೆ
ಜಕ್ಕಿಕಟ್ಟೆ	:	ಜಕ್ಕಿಯಬ್ಬೆ ಕಟ್ಟಿಸಿದ ಕೆರೆ.
ಜಟಾಯು	:	ಮಹಾಕಾವ್ಯದಲ್ಲಿ ಬರುವ ಪಕ್ಷಿವೀರ
ಜಹಾಹಿ	:	(ಪ್ರತಿವಾದಿಯನ್ನು) ತೊಲಗಿಸಿಬಿಡು
ಜಹಿ	:	(ವಾದಿಯನ್ನು) ಸದೆಬಡಿ
ಜಹಿಹಿ	:	(ಪ್ರತಿಸ್ಪರ್ಧಿಯನ್ನು) ಹೊಡೆದೋಡಿಸು
ಜಹೀಹಿ	:	(ಪ್ರತಿಸ್ಪರ್ಧಿ ಕವಿಗಳನ್ನು) ಓಡಿಸು
ಜಹುನು	:	ಗಂಗೆಯ ತಂದೆ
ಜಾತಿಮಂತ್ರಗಳು	:	ಸಾಮಾನ್ಯಸೂತ್ರ; ವ್ರತಾರಾಧನೆಗೆ ನಿರ್ದಿಷ್ಟಪಡಿಸಿದ ಮಂತ್ರೋಚ್ಚಾರಣೆ
ಜಾಂಬವಕುಲ	:	ವಂಶ
ಜಿಗಣಿ ಕಟ್ಟೆ	:	ಒಂದು ಕೆರೆ
ಜಿನಧರ್ಮ	:	ಜೈನ ಮತ
ಜಿನಾಗಮ	:	ಜೈನರ ಪವಿತ್ರ ಗ್ರಂಥಗಳು
ಜಿನಾಲಯ	:	ಜಿನನ ಆಲಯ; ಜೈನ ದೇವಾಲಯ; ಬಸ್ತಿ; ಚೈತ್ಯಾಲಯ
ಜೈನ ಪ್ರಣವ	:	ಪಂಚಪದ
ಜೈಮಿನಿ	:	ಮೀಮಾಂಸಾ ದರ್ಶನದ ಸಂಸ್ಥಾಪಕ
ಠವಣಿಕಾ	:	ತಾಳೆ ಗ್ರಂಥಗಳ ಪೀಠ; ಆರಾಧನಾ ಪೀಠ
ಠವಣಿಕೋಲು	:	ಠವಣಿಕಾ
ತಂತ್ರಾಧಿಕಾರಿ	:	ಆಡಳಿತಾ ಅಧಿಕಾರಿ
ತಥಾಗತ	:	ಬುದ್ಧ
ತಾರ	:	ಹದಿನೆಂಟನೆಯ ತೀರ್ಥಂಕರ ಅರನಾಥನ ಯಕ್ಷ
ತಾರ್ಕಿಕ ಚಕ್ರವರ್ತಿ	:	ವಾದಿಯ ಬಿರುದು
ತೀರ್ಥ	:	ಪವಿತ್ರಸ್ಥಾನ
ತೀರ್ಥಂಕರ	:	ಜಿನ

ತೀರ್ಥಗಿರಿ	:	ಪವಿತ್ರವಾದ ಬೆಟ್ಟ; ಚಿಕ್ಕಬೆಟ್ಟದ ಹೆಸರು.
ತೀರ್ಥಸ್ಥಳ	:	ಪವಿತ್ರಸ್ಥಳ; ತೀರ್ಥ
ತ್ರಿಕೂಳ	:	ವಂಶ
ತ್ರಿದಂಡ	:	ಮೂರು ಪಾಪಕೃತ್ಯಗಳು
ತ್ರಿರತ್ನ	:	ರತ್ನತ್ರಯಗಳು
ತ್ರಿಲಕ್ಷಣ	:	ವಕ್ರಗ್ರೀವನು ಹುಸಿಗೊಳಿಸಿದ ಸಿದ್ಧಾಂತ
ತ್ರಿಷಷ್ಟಿ ಲಕ್ಷಣ ಪುರುಷ ಚರಿತೆ	:	ಆಚಾರ್ಯ ಹೇಮಚಂದ್ರನ ಕೃತಿ
ತೇರಿನ ಬಸ್ತಿ	:	ಚಿಕ್ಕಬೆಟ್ಟದ ಜಿನಾಲಯ
ತ್ಯಾಗದ ಬ್ರಹ್ಮದೇವಸ್ತಂಭ	:	ದೊಡ್ಡಬೆಟ್ಟದಲ್ಲಿ ಗೊಮ್ಮಟನ ಎದುರಿರುವ ಒಂದು ಯಕ್ಷಸ್ತಂಭ
ತ್ರೈವಿದ್ಯ	:	ಮೂರು ಶಾಸ್ತ್ರಗಳಲ್ಲಿ ಪಾರಂಗತ
ದಂಡ	:	ಅಧಿಕಾರ; ದಂಡ
ದಂಡಾಧಿಪ	:	ದಂಡನಾಯಕ
ದಂಡನಾಯಕಿತಿ	:	ದಂಡನಾಯಕನ ಮಡದಿ
ದರ್ಶನ	:	ಅನಂತ ಚತುಷ್ಟಯಗಳಲ್ಲೊಂದು
ದಾನಶಾಸನ	:	ದಾನಹಾಕಿಕೊಟ್ಟ ದಾಖಲೆ
ದಿಗಂಬರ	:	ದಿಕ್ಕುಗಳನ್ನೆ ಅಂಬರ(ವಸ್ತ್ರ)ವನ್ನಾಗಿಸಿಕೊಂಡವನು
ದೀಕ್ಷೆ	:	ದೀಕ್ಷೆಗೊಳಗಾಗುವುದು
ದುರ್ಗ	:	ಕೋಟೆ
ದುರ್ಧರ	:	ಕಠಿಣ; ಪ್ರಯಾಸದಾಯಕ
ದೇವದಾನ	:	ದೇವರಿಗೆ ಅಥವಾ ದೇವಾಲಯಕ್ಕೆ ಕೊಟ್ಟ ದಾನ
ದೇವಲೋಕ	:	ಸ್ವರ್ಗ
ದೇವಸಂಘ	:	ಜೈನ ಸಂಘ
ದೇಸಿಯಗಣ-ಪುಸ್ತಕಗಚ್ಛ- ಕೊಂಡಕುಂದಾನ್ವಯ	:	ಮೂಲಸಂಘದ ಪ್ರಮುಖ ಶಾಖೆ
ದೊಣೆ	:	ಕಟ್ಟೆ
ದ್ವೇಷ	:	ವೈರತ್ವ
ಧರ್ಮ	:	ಮತ; ಧಾರ್ಮಿಕ ಕ್ರಿಯೆ
ಧರ್ಮಧ್ಯಾನ	:	ಇಂದ್ರಿಯ ಮತ್ತು ರಾಗಗಳನ್ನು ನಿಗ್ರಹಿಸುವ ಧ್ಯಾನ
ಧವಳ ಸರಸ್ಸು	:	ಶುಭ್ರವಾದ ಸರೋವರ

ಧವಳ ಸರೋವರ	: ಬಿಳಿ(ಶುಭ್ರವಾದ)ಕೆರೆ
ಧ್ಯಾನ	: ಚಿಂತನೆ
ಧಿಷಣ	: ಬೃಹಸ್ಪತಿ
ಧೂರ್ಜಟಿ	: ಶಿವ
ನಖರ/ನಗರ	: ಪಟ್ಟಣ; ವರ್ತಕರ ಸಂಘ
ನಮಸ್ಕಾರ ಮಂತ್ರ	: ಪಂಚಪದ
ನಮಸ್ಕಾರಗಳು	: ಐವರು ಮಹಾಗುರುಗಳ ನಾಮ ಪಠಣ
ನವರಂಗ	: ದೇವಾಲಯದ ಪ್ರಮುಖ ಭಾಗ; ನಾಟ್ಯಗೃಹ
ನವಸ್ತೋತ್ರ	: ವಜ್ರನಂದಿಯ ಕೃತಿ; ಅರ್ಹತರ ಬೋಧನಾ ಗ್ರಂಥ.
ನಾಡಗಾವುಂಡ/ನಾಳ್ಗಾವುಂಡ	: ನಾಡಿನ ಅಥವಾ ಜಿಲ್ಲೆಯ ಮುಖ್ಯಸ್ಥ.
ನಾಡು	: ಪ್ರಾಚೀನ ಮತ್ತು ಮಧ್ಯಯುಗದ ದಕ್ಷಿಣ ಭಾರತದ ಶಾಸನಗಳು ನಿರ್ದೇಶಿಸುವ ಭೌಗೋಳಿಕ, ಆಡಳಿತಾತ್ಮಕ ಘಟಕ
ನ್ಯಾಯ	: ಒಂದು ತೆರಿಗೆ; ಋಣ
ನಿರ್ಗ್ರಂಥ	: ದಿಗಂಬರ ಜೈನಮುನಿ; ಸವಣ
ನಿರ್ಗ್ರಂಥಿ	: ನಿರ್ಗ್ರಂಥದ ಸ್ತ್ರೀ ರೂಪ
ನಿರ್ಬೀಜ	: ನಿರಾಲಂಬನ
ನಿರಾಲಂಬನೆ	: ಸಮಾಧಿಯ ಎರಡು ವಿಧಗಳಲ್ಲೊಂದು
ನಿಷದ್ಯಾ/ನಿಫದ್ಯಾಲಯ	: ನಿಸಿಧಿಗಂಬಗಳ ಮಂಟಪ
ನೈಶೇಧಕಿ	: ನಿಸಿಧಿಯ ಸಂಸ್ಕೃತ ರೂಪ
ನೈಶೇಧಿಕಾ	: *ಆಚಾರಾಂಗದ* ಪ್ರಕಾರ, ನಿಸಿಹಿಯಾ ಅಥವಾ ಅಧ್ಯಯನಕ್ಕೆ ಆರಿಸಿಕೊಂಡ ಸ್ಥಳ; *ಭಗವತೀಆರಾಧನಾ* ಪ್ರಕಾರ, ದೇಹದಂಡನೆಕಾರನ ಮೃತ ದೇಹವನ್ನು ಸಂಸ್ಕಾರ ಮಾಡುವ ಸ್ಥಳ
ನೋಂಪಿ	: ವ್ರತ; ಹರಕೆ
ಪಂಚಕಲ್ಯಾಣ	: ತೀರ್ಥಂಕರನ ಜೀವನದ ಐದು ಮಹಾಘಟನೆಗಳ ಉತ್ಸವಗಳು.
ಪಂಚಗಂದೇಭ	: ಪಂಚೇಂದ್ರಿಯಗಳು
ಪಂಚಗುರು/ಪಂಚಪರಮೇಷ್ಠಿ	: ಜೇಷ್ಠರಾದ ಐವರು ಜಿನ ಗುರುಗಳು: ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧು
ಪಂಚಾಕ್ಷರ ಪದ/ಪಂಚಪದ/	

ಪಂಚನಮಸ್ಕಾರ	:	ಪ್ರಾಮಾಣ್ಯರಾದ ಐವರು ಜೈನ ಮಹಾಗುರುಗಳ ನಾಮಸ್ಮರಣೆ; ಶ್ರೇಷ್ಠ ಮಂತ್ರ ಸೂತ್ರ
ಪಂಡಿತ	:	ಜ್ಞಾನಿ; ಮುನಿ
ಪಂಡಿತಮರಣ	:	ಜ್ಞಾನಿಯ ಮರಣ; ಉತ್ತಮ ಮರಣ
ಪಂಡಿತಪಂಡಿತಮರಣ	:	ಮಹಾಜ್ಞಾನಿಯ ಮರಣ
ಪಟ್ಟಣಸೆಟ್ಟಿ	:	ನಗರದ ವರ್ತಕ; ಪಟ್ಟಣದ ಮುಖ್ಯಸ್ಥ
ಪಟ್ಟಣಸ್ವಾಮಿ	:	ಪಟ್ಟಣದ ಪ್ರಮುಖ ವರ್ತಕ; ಮಹಾಪೌರ
ಪಟ್ಟಸಾಲೆ	:	ಪಡಸಾಲೆ; ಹಜಾರ
ಪದ್ಮ	:	ತಾವರೆ ಪುಷ್ಪ
ಪದ್ಮಾವತೀ	:	ಯಕ್ಷಿ; ದೇವಿ; ಪಾರ್ಶ್ವನಾಥನ ಸೇವಕಿ
ಪನಸೋಗೆಸಂಘ	:	ಶ್ರಮಣರ ಒಂದು ಸಂಘ
ಪರ್ಯಂಕ/ಪರ್ಯಂಕಾಸನ	:	ನೋಡಿ, ಪಲ್ಯಂಕ
ಪರ	:	ಮತ್ತೊಂದು; ಬೇರೊಂದು
ಪರಮಾಗಮ ಆಧ್ಯಾತ್ಮಿ	:	ಶ್ರೇಷ್ಠ ಆಗಮಗಳಲ್ಲಿ ಪಾರಂಗತನಾದವನು
ಪರವಾದಿಮಲ್ಲ	:	ಅನ್ಯ ಮತ ವಾದಿಗಳೊಂದಿಗೆ ವಾದ ಮಾಡುವ ಪಂಡಿತಜಟ್ಟಿ
ಪರೀಷಹಗಳು	:	ಮೋಕ್ಷಮಾರ್ಗದಲ್ಲಿ ಎದುರಾಗುವ ಇಪ್ಪತ್ತೆರಡು ಸಂಕಟಗಳು
ಪರೋಕ್ಷವಿನಯ	:	ಗೌರವ
ಪಲ್ಯಾಂಕ/ಪಲ್ಯಂಕಾಸನ/	:	ಪರ್ಯಂಕಾಸನ; ಯೋಗಾಸದಲ್ಲಿ (ಕುಳಿತ) ಭಂಗಿ.
ಪಲಿತಂಕ	:	ಕ್ಷೀಣಿಸುವ ಸ್ಥಿತಿ
ಪಾತಾಳ	:	ಕೆಳಗಿನ ಲೋಕ
ಪಾತಾಳ ಯಕ್ಷ	:	ಹದಿನಾಲ್ಕನೆಯ ತೀರ್ಥಂಕರ ಅನಂತನಾಥನ ಅನುಚರ
ಪಾವಜ್ಞಾ	:	ಗೃಹಸ್ಥ ಜೀವನದಿಂದ ನಿರ್ಗಮನ
ಪಾಶುಪತ	:	ಪಶುಪತಿ ಯಾ ಶಿವನಿಂದ ವ್ಯುತ್ಪತ್ತಿಯಾದ ಪದ : ಪಾಶುಪತ ಶೈವ ಪಂಥದ ಅನುಯಾಯಿ
ಪೀಠ	:	ಆಸನ; ಸ್ಥಾನ
ಪೀಠಿಕ ಮಂತ್ರಗಳು	:	ನೋಡಿ, ಜಾತಿ ಮಂತ್ರಗಳು
ಪುಸ್ತಕಗಚ್ಛ	:	ಮೂಲಸಂಘದ ಶಾಖೆ
ಪೂಜಕಾರಿ	:	ಪೂಜಾರಿ
ಪೂರ್ವಪುರಾಣ	:	ಜಿನಾಸೇನಾಚಾರ್ಯರ ಕೃತಿ
ಪೆರ್ಗ್ಗಡೆ	:	ಹೆಗ್ಗಡೆ

ಪೆರ್ಗ್ಗಟ್ಟಿಪ್ಪು	:	ಹಿರಿಯ ಬೆಟ್ಟ; ದೊಡ್ಡ ಬೆಟ್ಟ
ಪೈಣ್ಣಿ ಪ್ರತ್ಯಾಖ್ಯಾನ	:	ತ್ಯಾಜ್ಯ; ತ್ಯಾಜ್ಯವಸ್ತು
ಪೌಗ್ಗಮಣ	:	ಆಹಾರ, ಪಾನೀಯ, ಇತರರ ಸೇವೆ ಹಾಗೂ ಸ್ವಸಹಾಯ, ಚಲನ ಸ್ವಾತಂತ್ರ್ಯ, ಮುಂತಾದುವನ್ನು ತ್ಯಜಿಸುತ್ತಾ, ಜೀವನ ಅಂತ್ಯಗೊಳಿಸುವುದು; ಪಾದೋಪಗಮನ.
ಪ್ರತ್ಯಾಖ್ಯಾನ	:	ತ್ಯಾಜ್ಯ ಯೋಗ್ಯವಾದುದು
ಪ್ರಭು	:	ಹಿರಿಯ; ಶ್ರೇಷ್ಠ ದೇವ
ಪ್ರಶಾಂತಸಮಾಧಿ	:	ನಿಶ್ಚಿಂತ ಮನಸ್ಕ
ಪ್ರಾಯೋಪಗಮನ	:	ಪಾವುಗ್ಗಮಣ; ಪೌಗ್ಗಮಣ
ಫಲ	:	ಹಣ್ಣು
ಬಣಜ್ಜಿಗ	:	ವರ್ತಕ ಸಮುದಾಯ; ವಣಜಿಗ
ಬಳ್ಳಿವಾಡ	:	ಲತಾ ಮಂಟಪ
ಬಲಾತ್ಕಾರ ಗಣ	:	ಮೂಲಸಂಘದ ಒಂದು ಶಾಖೆ
ಬಲಿ	:	ಶಾಖೆ
ಬಸ್ತಿ	:	ಜೈನ ದೇವಾಲಯ; ವಸತಿ ಮತ್ತು ಬಸದಿಗಳಿಂದ ವ್ಯುತ್ಪತ್ತಿಯಾದ ಪದ
ಬಾಲಪಂಡಿತ	:	ಅಪಕ್ವ ವ್ಯಕ್ತಿ
ಬಾಲಪಂಡಿತರ ಮರಣ	:	ಅಪೂರ್ಣ ಪಂಡಿತನ ಮರಣ; ಪಂಡಿತಮರಣದ ಮೂರು ಬಗೆಗಳಲ್ಲೊಂದು
ಬಾಹ್ಯ	:	ಹೊರಗಿನ
ಬಾಹುಬಲಿ	:	ಪ್ರಥಮ ತೀರ್ಥಂಕರ ಆದಿನಾಥನ ಪುತ್ರ
ಬಿರುದ-ರೂವಾರಿ-ಮುಖತಿಲಕ	:	ಬಿರುದಾಂಕಿತ ರೂವಾರಿಗಳ ಮಸ್ತಕಾಭರಣ; ರೂವಾರಿಯ ಬಿರುದು
ಬಿರುದಲೇಖಕ-ಮದನ-ಮಹೇಶ್ವರ	:	ಬಿರುದಾಂಕಿತ ಲೇಖಕ; ಮನ್ಮಥನಿಗೆ ಶಿವ; ಒಬ್ಬ ರೂವಾರಿ-ಲಿಪಿಕಾರನ ಬಿರುದು.
ಬೆಳ್ಗೊಳ	:	ಅಕ್ಷರಶಃ ಬಿಳಿಕೊಳ, ಈಗ ಆ ಹೆಸರಿನ ಪಟ್ಟಣ
ಬೌದ್ಧರು	:	ಬುದ್ಧನ ಅನುಯಾಯಿಗಳು
ಬ್ರಹ್ಮ	:	ಸೃಷ್ಟಿಕರ್ತ; ಜಿನಯಕ್ಷ.

ಬ್ರಹ್ಮಚರ್ಯ	:	ಸ್ವಯಂಸಂಯಮ; ಭೋಗವರ್ಜನೆ: ಪರಿಶುದ್ಧತೆ
ಬ್ರಹ್ಮಯಕ್ಷ	:	ಅಧೀನ ದೇವತೆ; ಹತ್ತನೆಯ ತೀರ್ಥಂಕರ ಶೀತಲನಾಥನ ಅನುಚರ
ಬ್ರಹ್ಮರಾಕ್ಷಸ	:	ವಾದಗಳಲ್ಲಿ ಸೋತ ಬ್ರಾಹ್ಮಣ-ದೈತ್ಯ; ದುಷ್ಟ ಪಿಶಾಚಿ
ಬ್ರಹ್ಮಸ್ತಂಭ	:	ಬ್ರಹ್ಮನ ವಿಗ್ರಹದಿಂದ ಅಲಂಕರಿಸಲ್ಪಟ್ಟ ಸ್ತಂಭ
ಬ್ರಹ್ಮಕ್ಷಾತ್ರ	:	ಬ್ರಾಹ್ಮಣ ಮತ್ತು ಕ್ಷತ್ರೀಯ ದಂಪತಿಗಳಿಗೆ ಜನಿಸಿದವನು
ಬೃಹಸ್ಪತಿ	:	ದೇವ ಗುರು
ಭಂಡಾರ ಬಸ್ತಿ	:	ಭಂಡಾರಿ ಅಥವಾ ಕೋಶಾಧ್ಯಕ್ಷನ ಹೆಸರಿನ ಜಿನಾಲಯ
ಭಕ್ತರು	:	ರಾಮಾನುಜನ ಅನುಯಾಯಿಗಳು ; ಶ್ರೀ ವೈಷ್ಣವರು
ಭಕ್ತಪ್ರತ್ಯಾಖ್ಯಾನ	:	ಪಂಡಿತಮರಣದ ಮೂರು ಬಗೆಗಳಲ್ಲೊಂದು
ಭಗವತೀ ಆರಾಧನಾ	:	ಉಪಲಬ್ಧವಿರುವ ಆರಾಧನಾ ಗ್ರಂಥಗಳಲ್ಲಿ ಒಂದು; ಅದನ್ನು ಶಿವಾರ್ಯ ರಚಿಸಿದನು.
ಭಜ್ಜತೆ	:	ಅರಗಿಸಿಕೊಳ್ಳಬೇಕಾದುದು
ಭಟಾರ/ಭಟ್ಟಾಚಾರ್ಯ	:	ಭಟ್ಟಾರಕ
ಭಟ್ಟಾರಕ	:	ಮುನಿ ; ಜೈನ ಆಚಾರ್ಯರ ಹೆಸರಿನ ಪ್ರತ್ಯಯ ; ಭಟ್ಟಾಚಾರ್ಯ
ಭವ್ಯರು	:	ಪುಣ್ಯಶಾಲಿಗಳು; ಜೈನರು
ಭವ್ಯಚೂಡಾಮಣಿ	:	ಅಕ್ಷರಾರ್ಥದಲ್ಲಿ 'ಶ್ರೇಷ್ಠ ಮುಕುಟಮಣಿ'; ಅದರ ಪೋಷಕನು ಧರಿಸಿದ ಬಿರುದಿನಿಂದಾಗಿ ಜೈನ ದೇವಾಲಯವೊಂದಕ್ಕೆ ನೀಡಲಾದ ಹೆಸರು. ನೋಡಿ, ಸಂಯುಕ್ತಚೂಡಾಮಣಿ
ಭಕ್ಷಿ	:	ಮೈಸೂರು ಸಂಸ್ಥಾನದ ಉನ್ನತ ಹುದ್ದೆ
ಭಾವನಮಸ್ಕಾರ	:	ಪಂಚಪದ
ಭಿಕ್ಕು	:	ಪರಿವ್ರಾಜಕ; ಭಿಕ್ಷೆಯನ್ನವಲಂಬಿಸಿದವನು
ಭಿಕ್ಷಾ	:	ಬೇಡಿ ಪಡೆದ ಆಹಾರ
ಭಿಕ್ಖುಣಿ	:	ಶ್ರಮಣಿ; ಭಿಕ್ಷೆಯನ್ನವಲಂಬಿಸಿದ ಪರಿವ್ರಾಜಕಿ
ಭುಕ್ತಾ	:	ಭಜ್ಜತೆ
ಭೋಗಾಂಕ	:	ಭೋಗದ ಹಂತಗಳು
ಭ್ರಮೆ	:	ಭ್ರಾಂತಿ; ಮಾಯೆ
ಮಂಡಲಾಚಾರ್ಯ	:	ಮಹಾಮಂಡಲಾಚಾರ್ಯ
ಮಂತ್ರ	:	ಸ್ತುತಿ; ಮಂಗಳ ನುಡಿ

ಮಂತ್ರವಾದಿ	:	ಮಂತ್ರಿಸುವವ
ಮಜ್ಜಿಗಣ ಬಸದಿ	:	ಚಿಕ್ಕಬೆಟ್ಟದ ಮೇಲಿನ ಒಂದು ಜಿನಾಲಯ
ಮಠ	:	ಗುರುಮನೆ
ಮಣಿಕ್ಷತ	:	ಒಂದು ತೆರಿಗೆ
ಮಧ್ಯಸ್ಥಾ	:	ಇನ್ನೊಬ್ಬನಲ್ಲಿಯ ದಾರ್ಷ್ಟ್ಯ ಸಹನೆ
ಮಲಧಾರಿ	:	ಮಲವನ್ನು ಧರಿಸಿದವನು
ಮಸ್ತಕಾಭಿಷೇಕ	:	ಶಿರಸ್ಸಿನ ಮೇಲಿಂದ ಮಾಡುವ ಅಭಿಷೇಕ
ಮಹಾನವಮಿ ಮಂಟಪ	:	ಚಿಕ್ಕಬೆಟ್ಟದ ಮೇಲಿರುವ ಜೋಡಿಮಂಟಪಗಳು
ಮಹಾಪ್ರಚಂಡ	:	ಉಗ್ರ ಅಥವಾ ದಿಟ್ಟ ಎಂಬರ್ಥದ ಬಿರುದು; ದಂಡನಾಯಕರ ಹೆಸರಿನ ಪೂರ್ವ ಪ್ರತ್ಯಯ
ಮಹಾಪೂಜೆ	:	ಮಹೋತ್ಸವ
ಮಹಾಮಂಡಲಾಚಾರ್ಯ	:	ಮುನಿಶ್ರೇಷ್ಠರ ಬಿರುದು
ಮಹಾಮಂಡಲೇಶ್ವರ	:	ಅಧೀನ ಅರಸ
ಮಹಾವಡ್ಡವ್ಯವಹಾರಿ	:	ದೊಡ್ಡ ಅಥವಾ ಹಿರಿಯ ವರ್ತಕ
ಮಹಾಸಾಮಂತಾಧಿಪತಿ	:	ಸಾಮಂತರ ಅಧಿಪತಿ
ಮಹಾಯತಿ	:	ಹಿರಿಯ ಮುನಿ
ಮಳಬ್ರಯ	:	ಒಂದು ತೆರಿಗೆ
ಮಾಂಗಾಯಿ ಬಸ್ತಿ	:	ಶ್ರವಣಬೆಳ್ಗೊಳ ನಗರದ ಜಿನಾಲಯ
ಮಾಣಿಕ್ಯ ಭಂಡಾರಿ	:	ರತ್ನಭಂಡಾರದ ಅಧಿಕಾರಿ
ಮಾಣಿಕ್ಯನಗರಂ	:	ರತ್ನ ವ್ಯಾಪಾರಿಗಳ ಸಮಾಜ
ಮಾನಸ್ತಂಭ	:	(ಸಾಮಾನ್ಯವಾಗಿ ಜಿನಾಲಯಗಳ ಮುಂದೆ ನಿಲ್ಲಿಸಿದ) ನಿರಾಲಂಬ ಸ್ತಂಭ
ಮಾರವಾಡಿ	:	ಮಾರವಾಡ ದೇಶದವನು
ಮಾವನ ಗಂಧಹಸ್ತಿ	:	ತನ್ನ ಮಾವನಿಗೆ ಮದಗಜವಿದ್ದಂತೆ; ಒಂದು ಬಿರುದು
ಮಿಥ್ಯಾಜ್ಞಾನಿ	:	ಅಹಂಕಾರಿ; ತಪ್ಪು ಮಾರ್ಗದಲ್ಲಿರುವವನು
ಮುಕ್ಕೊಡೆ	:	ಮೂರು ಕೊಡೆಗಳು; ಛತ್ರತ್ರಯ
ಮುದ್ರಾ	:	ಹಸ್ತ ವಿನ್ಯಾಸ
ಮುನಿ	:	ಋಷಿ
ಮುನಿವ್ರತ	:	ಮುನಿಗಳು ಪರಿಪಾಲಿಸುವ ನಿಯಮಗಳು
ಮುನಿವಂಶಾಭ್ಯುದಯ	:	ಚಿದಾನಂದ ಕವಿಯ ಗ್ರಂಥ
ಮುನೀಂದ್ರ/ಮುನೀಶ್ವರ	:	ಮುನಿಶ್ರೇಷ್ಠ

ಮೂಲಮಂತ್ರ	:	ಪಂಚ ಪದಗಳು
ಮೂಲಸಂಘ	:	ಪುರಾತನ ಜೈನ ಮುನಿಸಂಘ
ಮೂಲಾರಾಧನಾ	:	ಶಿವಾರ್ಯನು ಪ್ರಾಕೃತದಲ್ಲಿ ರಚಿಸಿದ ಗ್ರಂಥ
ಮೇರು	:	ಪುರಾಣ ಪ್ರಸಿದ್ಧ ಗಿರಿ
ಮೋಷ್ಠಿಕರು	:	ಒಂದು ಸಾಂಘಿಕ ಬಳಗ
ಮೋಹ	:	ಪ್ರೀತಿ; ಒಲಮೆ
ಮೋಕ್ಷ	:	ಶಾಶ್ವತ ಸುಖ
ಮೋಕ್ಷ ತಿಲಕ	:	ಒಂದು ವ್ರತ
ಮೌನಿ ಆಚಾರ್ಯ	:	ಮೌನವ್ರತ ಪರಿಪಾಲಕ
ಮೃದುರೇಖಾವಿಳಾಸ	:	ಚತುರ ಲೇಖಕಕನ ಬಿರುದು
ಯತಿ	:	ಮುನಿ
ಯಮ	:	ಮರಣ ದೇವತೆ
ಯಕ್ಷ	:	ತೀರ್ಥಂಕರನ ಅನುಚರ ದೇವತೆ: ಜೈನ ದೇವತಾಗಣದಲ್ಲಿ ಅರ್ಧದೇವತೆ ಅಥವಾ ಅಧೀನ ದೇವತೆ
ಯಕ್ಷಸ್ತಂಭ	:	ಮೇಲ್ತುದಿಯಲ್ಲಿ ಯಕ್ಷನಿರುವ ನಿರಾಲಂಬ ಸ್ತಂಭ
ಯಕ್ಷಿ	:	ಯಕ್ಷನ ಸ್ತ್ರೀ ಪ್ರತಿರೂಪ
ಯಾಮ	:	ಜೀವಿತಾವಧಿಯ ಒಂದು ಅವಧಿ
ಯೋಗ್ಯ	:	ತಪಸ್ಸು; ಧ್ಯಾನ
ಯೋಗಪಟ್ಟ	:	ಧ್ಯಾನನಿರತ ಮುನಿ ತನ್ನ ಬೆನ್ನು ಮತ್ತು ಮಡುಚಿದ ಕಾಲುಗಳ ಸುತ್ತ ಬಳಸುವ ವಸ್ತ್ರ
ರತ್ನಕರಂಡಕ ಶ್ರಾವಕಾಚಾರ	:	ಸಮಂತ್ರಭದ್ರನ ಕೃತಿ
ರತ್ನತ್ರಯ	:	ಮೂರು ರತ್ನಗಳು; ಮೋಕ್ಷಸಾಧನೆಗೆ ಬೇಕಾದ ಮೂರು ಅಗತ್ಯತೆಗಳು - ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರ
ರತ್ನತ್ರಯ ನೋಂಪಿ	:	ರತ್ನತ್ರಯ ವ್ರತ
ರಾಗ	:	ಅಭೀಪ್ಸೆ; ಮೋಹ
ರಾಜಗುರು	:	ಗುರುಶ್ರೇಷ್ಠ; ರಾಜನಿಂದ ಪೂಜಿತನಾದವನು
ರಾಜಪಾತ್ರದ ಚೂಡಾಮಣಿ	:	ರಾಜನರ್ತಕಿ
ರಾಯ	:	ಶ್ರೇಷ್ಠ; ಚಾವುಂಡರಾಯನನ್ನು ಸೂಚಿಸುವ ಪದ
ರಾಯರಾಜಗುರು	:	ಬಿರುದು
ರಾಷ್ಟ್ರಕೂಟ ಮಂಟಪ	:	ಚಿಕ್ಕಬೆಟ್ಟದಲ್ಲಿಯ ಮಂಟಪ

ರಾಹು	:	ದುಷ್ಟಗ್ರಹ
ರಿಷಿಗಿರಿ	:	ರಿಷಿಗಳ ಬೆಟ್ಟ; ಚಿಕ್ಕಬೆಟ್ಟದ ಹೆಸರು
ರೂಪಸಿದ್ಧಿ	:	ದಯಪಾಲಮುನಿ ರಚಿಸಿದ ಜೈನ ಗ್ರಂಥ
ರೂವಾರಿ	:	ಶಿಲ್ಪಿ ಅಥವಾ ಲಿಪಿಕಾರ
ರೌದ್ರ	:	ನಾಲ್ಕುಬಗೆಯ ಧ್ಯಾನಗಳಲ್ಲೊಂದು; ಉದ್ವಿಗ್ನ
ಲಂಬಹಸ್ತ	:	ಹಸ್ತ ಮುದ್ರೆ
ಲೋಕಾಯತ	:	ಚಾರ್ವಾಕನ ನಾಸ್ತಿಕ ದರ್ಶನ
ವಕ್ರಗಚ್ಛ	:	ಮೂಲಸಂಘದ ಶಾಖೆ
ವಡ್ಡವ್ಯವಹಾರಿ	:	ಹಿರಿಯ ವರ್ತಕ
ವಡ್ಡಾರಾಧನೆ	:	ಶಿವಕೋಟ್ಯಾಚಾರ್ಯರ ಆರಾಧನಾ ಕೃತಿ
ವರ್ಣ	:	ಬಣ್ಣ; ಸಾಮಾಜಿಕ ಶ್ರೇಣಿ
ವಾಚನ	:	ಅಧ್ಯಯನ
ವಾದಿಕೋಲಾಹಲ	:	ವಾದಿಗಳಲ್ಲಿ ಕೋಲಾಹಲ ಉಂಟುಮಾಡುವವನು
ವಾದಿರಾಜ	:	ವಾದಿಚಕ್ರವರ್ತಿ
ವಾದೀಭ ಕಂಠೀರವ	:	ವಾದಿಯ ಬಿರುದು; ಪ್ರತಿವಾದಿಗಳೆಂಬ ಆನೆಗಳಿಗೆ ಸಿಂಹ
ವಾದೀಭಕುಲಕುಠಾರ	:	ವಾದಿಕುಲಕ್ಕೆ ಕೊಡಲಿ
ವಜ್ರಾಯುಧ	:	ವಾದಿಕುಲಕ್ಕೆ ಸಿಡಿಲು
ವಾದೀಭಸಿಂಹ	:	ವಾದಿಕಂಠೀರವ
ವಿಜಯವಿಳಾಸ	:	ಶ್ರೀಪಾಲ ತ್ರೈವಿದ್ಯದೇವನ ಕೃತಿ
ವಿದ್ಯಾಧನಂಜಯ	:	ಮಹಾಪಂಡಿತ
ವಿಧಾನ	:	ಬಗೆ; ಪದ್ಧತಿ
ವಿಧಿ	:	ವಿಧಾನ
ವೀತರಾಗ ಚಾರಿತ	:	ರಾಗರಹಿತ
ವೆಳ್ಗೊಳ	:	ಬೆಳ್ಗೊಳ
ವೈಷ್ಣವ	:	ವಿಷ್ಣುವಿನ ಅನುಯಾಯಿ
ವೈಶೇಷಿಕ	:	ಆರು ಸಾಂಪ್ರದಾಯಿಕ ಹಿಂದೂ ದರ್ಶನ ಪದ್ಧತಿಗಳಲ್ಲೊಂದು
ವ್ರತಗುರು	:	ಆಧ್ಯಾತ್ಮಿಕ ಗುರು
ವೃಷಭಗಣ	:	ಮೂಲಸಂಘದ ಶಾಖೆ
ವ್ಯಾಖ್ಯಾನ ಮುದ್ರಾ	:	ಬೋಧನೆ ಸೂಚಿಸುವ ಹಸ್ತಮುದ್ರೆ
ಸಂಘ	:	ಮುನಿಸಮುದಾಯ

ಸಂಘನಾಯಕ : ಗುರುಶ್ರೇಷ್ಠ; ಮುನಿಶ್ರೇಷ್ಠ
ಸಂಧಾನೋಪಾಯ : ಧ್ಯಾನದ ಮೂಲಕ ಸಂಧಾನ
ಸಂಧಿವಿಗ್ರಹಿ : ಮಹತ್ವದ ರಾಜ್ಯಪತ್ರಗಳ ಲೇಖಕ, ರಾಯಭಾರಿ
ಸಂಪ್ರಜ್ಞಾತಾ : ಸಮಾಧಿಯ ಎರಡು ಪ್ರಕ್ರಿಯೆಗಳಲ್ಲೊಂದು
ಸಬೀಜ : ಸಮಾಧಿಯ ದ್ವಿವಿಧ ವರ್ಗಗಳಲ್ಲೊಂದು
ಸನ್ಯಸನ ಯೋಗ : ಸನ್ಯಸನ ವಿಧಿ
ಸನ್ಯಸನ ವಿಧಿ : ಸನ್ಯಸನ ಮರಣ ಪ್ರಕ್ರಿಯೆ
ಸನ್ಯಸನ ಸಮನ್ವಿತಂ/
ಸನ್ಯಸನ ಸನ್ನದ್ಧ : ಸನ್ಯಸನ ಮರಣ ವಿಧಿಯಲ್ಲಿ ನಿರತ
ಸನ್ಯಸನ ಶಾಸ್ತ್ರಕ್ರಮ : ಸನ್ಯಾಸ ಶಾಸ್ತ್ರ ವಿಧಾನ
ಸನ್ಯಸನ ಸ್ವೀಕಾರ : ಸನ್ಯಸನ ಅಂಗೀಕಾರ
ಸನ್ಯಾಸ/ ಸನ್ಯಸನ : ಐಹಿಕ ಬಂಧನಗಳ ಮತ್ತು ಆಸಕ್ತಿಗಳ ತ್ಯಾಗ
ಸಮದಾ : ಸಂಯಮ
ಸಮಯ : ತತ್ವ, ಕಾನೂನು ಅಥವಾ ನಿಯಮ
ಸಮಯಿ : ಜನಜೀವನದ ಧಾರ್ಮಿಕ- ಸಾಮಾಜಿಕ ಸಂಪ್ರದಾಯಗಳ ಮೇಲ್ವಿಚಾರಕ
ಸಮವಸರಣ : ತೀರ್ಥಂಕರರ ಪ್ರವಚನಗಳನ್ನು ನೀಡಲು ಇಂದ್ರನ ಆಜ್ಞಾನುಸಾರ ಕಟ್ಟಲಾದ ಸೌಧ.
ಸಮಾಧಿ : ಧ್ಯಾನಸ್ಥಿತಿ
ಸಮಾಧಿಮರಣ : ಮರಣ ಪ್ರಕ್ರಿಯೆ
ಸಮಾಧಿಯೋಗ : ಸಮಾಧಿಯ ಯೋಗಕ್ರಿಯೆ
ಸಮಾಧಿವಿಧಿ : ಸಮಾಧಿಯೋಗ
ಸಮ್ಯಕ್‌ಚಾರಿತ್ರ : ಶುದ್ಧವಾದ ಜ್ಞಾನ; ತ್ರಿರತ್ನಗಳಲ್ಲೊಂದು
ಸಮ್ಯಕ್ ತಪಃ : ಪರಿಶುದ್ಧ ತಪಸ್ಸು; ತ್ರಿರತ್ನಗಳಲ್ಲೊಂದು
ಸಮ್ಯಕ್ತ್ವ ಚೂಡಾಮಣಿ : ಹುಳ್ಳರಾಜನ ಬಿರುದು
ಸಮ್ಯತ ಸಮ್ಯತ : ಆಂಶಿಕ ಆತ್ಮಸಂಯಮ
ಸರಸ್ವತಿ : ವಿದ್ಯಾದೇವತೆ
ಸಲ್ಲೇಖನಾ/ಸಲ್ಲೇಖನಾ ತಪ : ಮರಣ ಪ್ರಕ್ರಿಯೆ. ಸಮಾಧಿಮರಣ ಪ್ರಭೇದ. ಆತ್ಮವನ್ನು ಉಳಿಸಲು ದೇಹವನ್ನು ಕಳಚುವ ವಿಧಾನ
ಸಲ್ಲೇಖನಾ ಅತಿಚಾರಗಳು : ಸಲ್ಲೇಖನಾ ಸಾಧಿಸುವ ಮಾರ್ಗದಲ್ಲಿ ಎದುರಾಗುವ ಐದು ಅಡಚಣೆಗಳು

ಸವತಿಗಂಧವಾರಣ ಬಸ್ತಿ	:	ರಾಣಿ ಶಾಂತಲೆ ಧರಿಸಿದ ಬಿರುದಿನಿಂದಲೆ ಹೆಸರಿಸಲಾದ ಜೈನ ದೇವಾಲಯ; ಸವತಿಯರಿಗೆ ಮದಗಜ, ಎಂಬುದು ಬಿರುದಿನ ಅರ್ಥ
ಸರ್ವಾಹ್ಣ ಯಕ್ಷ	:	ನೇಮಿನಾಥ ತೀರ್ಥಂಕರನ ಅನುಚರ
ಸರ್ವ್ವಾಧಿಕಾರಿ	:	ಇಲಾಖಾ ಮೇಲಾಧಿಕಾರಿ
ಸಹಸ್ರಕೂಟ ಜಿನಾಲಯ	:	ಹಾಸನಜಿಲ್ಲೆಯ ಅರಸೀಕೆರೆಯಲ್ಲಿರುವ ಜಿನಮಂದಿರ
ಸಾಂಖ್ಯಾ	:	ಆರು ಸಾಂಪ್ರದಾಯಿಕ ಹಿಂದೂ ದರ್ಶನಲ್ಲಿ ಒಂದು; ಕಪಿಲನ ಸಿದ್ಧಾಂತ
ಸಾ	:	ಮಾರ್ವಾಡಿಗಳ ಹೆಸರಿನ ಪ್ರತ್ಯಯ
ಸಾಗಾರ ಧರ್ಮಾಮೃತ	:	ಆಶಾಧರನ ಕೃತಿ
ಸಾತ್ವಿಕರು	:	ಸದ್ಗುಣಿಗಳು
ಸಾಧಕ	:	ಸಾಧನೆಯಲ್ಲಿ ತೊಡಗಿದವನು
ಸಾಧನಿ	:	ಸಾಧನೆಯಲ್ಲಿ ತೊಡಗಿದವಳು; ಕಂತಿ
ಸಾಧನೋಪಾಯ	:	ಧ್ಯಾನದಿಂದ ಸಾಧಿಸುವುದು
ಸಾಧು	:	ಮುನಿ
ಸಾಧು ಸಮಾಧಿ	:	ಧ್ಯಾನದ ಯುಕ್ತ ಮಾರ್ಗ
ಸಾಮಂತ	:	ಅಧೀನರಾಜ
ಸಾರತ್ರಯ	:	ಚಾರುಕೀರ್ತಿಮುನಿ ಪ್ರಚುರಪಡಿಸಿದ ಮೂರು ಸಾರಗಳು
ಸಾಲಂಬನಾ	:	ಸಮಾಧಿಯ ದ್ವಿವಿಧ ವರ್ಗಗಳಲ್ಲೊಂದು
ಸಾವಂತ ಬಸ್ತಿ	:	ಕೊಲ್ಲಾಪುರದಲ್ಲಿ ಮಾಘಣಂದಿಮುನಿ ಸ್ಥಾಪಿಸಿದ ಬಸದಿ
ಸಾವಂತ ಬೋವರು	:	ನಾಯಕ ಕಲಿಗಳು
ಸಿಂಹಸಂಘ	:	ಜಿನಸಂಘ
ಸಿದ್ಧ	:	ಪರಿಪೂರ್ಣ
ಸಿದ್ಧರ ಗುಂಡು	:	ದೊಡ್ಡಬೆಟ್ಟದ ಒಂದು ಗುಂಡು
ಸಿದ್ಧರ ಬಸ್ತಿ	:	ಶ್ರವಣ ಬೆಳ್ಗೊಳದ ಬಸ್ತಿ
ಸಿದ್ಧಶಾಸ್ತ್ರ	:	ಜಿನನ ಪವಿತ್ರವಿದ್ಯೆ
ಸಿದ್ಧಸ್ತ	:	ಪರಿಪೂರ್ಣ
ಸಿದ್ಧಸಮಯ	:	ಸಿದ್ಧರ ಕಾನೂನು
ಸಿದ್ಧಾಂತ ಚಕ್ರವರ್ತಿ	:	ಬಿರುದು
ಸಿದ್ಧಾಂತಿ	:	ತತ್ವವನ್ನು ಪ್ರತಿಪಾದಿಸುವವನು
ಸಿದ್ಧಾಂತಿಕ	:	ಸಿದ್ಧಾಂತಿ

ಸುಖ ಸಮಾಧಿ	:	ಮರಣದಲ್ಲಿಯ ಸುಖಮಯ ಅನುಭವ
ಸುಖಾಸನ	:	ಆಸನ ಅಥವಾ ಪೀಠದಿಂದ ಒಂದು ಕಾಲು ಕೆಳಗಿಟ್ಟು ಕುಳಿತುಕೊಳ್ಳುವ ಸುಲಭ ಭಂಗಿ.
ಸುಗತ	:	ಬುದ್ಧ
ಸುಚರಿತ ತಪಸ್ಯಾ	:	ತಪಸ್ವಿಯ ಸ್ಥಿತ
ಸುಜನೋತ್ತಂಶ	:	ಗೌರವಾನ್ವಿತ ವ್ಯಕ್ತಿಗಳ ಮುಕುಟ; ಗೊಮ್ಮಟಸ್ತುತಿ ಕರ್ತೃ ಬೊಪ್ಪಣಪಂಡಿತ
ಸುತ್ತಾಲಯ	:	ದೊಡ್ಡಬೆಟ್ಟದ ಮೇಲಿರುವ ಗೊಮ್ಮಟ ವಿಗ್ರಹದ ಸುತ್ತಲಿನ ಮಂಟಪ
ಸುಮತಿ ಶತಕ	:	ಕೋಟ್ಯಾಂತರ ಸುಭಾಷಿತಗಳಿರುವ ಸುಮತಿ ದೇವಿಯ ಗ್ರಂಥ
ಸುರಪಾದ	:	ದೇವಸನ್ನಿಧಿ
ಸುರಲೋಕ	:	ದೇವಲೋಕ
ಸೂರಿ	:	ಜ್ಞಾನಿ
ಸೆಟ್ಟಿ	:	ಶ್ರೇಷ್ಠಿ; ವರ್ತಕ
ಸೆಟ್ಟಿಕವ್ವೆ/ಸೆಟ್ಟಿತಿ	:	ವರ್ತಕನ ಮಡದಿ
ಸೇನಸಂಘ	:	ಜಿನಸಂಘ
ಸ್ವರ್ಗಾಗ್ರ	:	ಸ್ವರ್ಗಶಿಖರ
ಸ್ವರ್ಗಾಲಯ	:	ದೇವಲೋಕ
ಸ್ತಾನಿಕಾಚಾರ್ಯ	:	ಆಚಾರ್ಯ ಪದವಿ
ಸ್ಥಾನಾಂಗ	:	ಜೈನ ಗ್ರಂಥ; ಶೃತಾಂಗದ 42,000 ಪದ್ಯಗಳ ಒಂದು ಭಾಗ.
ಸ್ಥಾನಿಕ	:	ದೇವಾಲಯ ಸಿಬ್ಬಂದಿಯ ಮುಖ್ಯಸ್ಥ, ದೇವಾಲಯದ ಆಸ್ತಿಯ ಪ್ರಬಂಧಕ
ಸ್ಯಾದ್ವಾದ	:	ಬಹುಮುಖಿ ಸಿದ್ಧಾಂತ; ಜೈನ ತರ್ಕದ ವಿಶಿಷ್ಟ ಲಕ್ಷಣ
ಸ್ವಾಮಿ	:	ಹಿರಿಯ; ಒಡೆಯ
ಶತ್ರುಭಯಂಕರ	:	ಶತ್ರುಗಳಿಗೆ ಭಯಂಕರನಾದವನು
ಶಲ್ಯ	:	ಮುಳ್ಳುಗಳು; ಮಾಯಾ, ಮಿಥ್ಯಾ ಮತ್ತು ವಿದಾನ (ಇಹಲೋಕದ ಲಾಭದ ಬಯಕೆ) ಎಂಬ ಮೂರು ಕಂಟಕಗಳು
ಶಾಂತಿನಾಥಬಸ್ತಿ	:	ಚಿಕ್ಕಬೆಟ್ಟದ ಮೇಲಿನ ಬಸದಿ
ಶಾಸನಬಸ್ತಿ	:	ಚಿಕ್ಕಬೆಟ್ಟದ ಬಸ್ತಿ

ಶಾಸನದೇವತೆ	:	ಯಕ್ಷರು
ಶಾಸ್ತ್ರ	:	ಕಟ್ಟಳೆ; ಧರ್ಮಗ್ರಂಥ
ಶಿಖರ	:	ಗೋಪುರ; ಗರ್ಭಗುಡಿಯ ಮೇಲಿನ ಕಟ್ಟಡ
ಶಿಲಾಕೂಟ	:	ಕಲ್ಲಿನ ಗುಡಿ
ಶೀತಲನಾಥ	:	ಹತ್ತನೆಯ ತೀರ್ಥಂಕರ
ಶುದ್ಧಾನುಭಾವ	:	ವಿಚಾರ ಶುದ್ಧಿ ಹೊಂದಿದ
ಶುಕ್ಲಾಧ್ಯಾನ	:	ಚಿತ್ತೈಕಾಗ್ರತೆ ಮತ್ತು ಆಸೆಗಳ ತ್ಯಾಗಕ್ಕೆ ಸಹಕಾರಿಯಾದ ಧ್ಯಾನ ಪ್ರಭೇದ; ಒಂದು ಬಗೆಯ ಧ್ಯಾನ
ಶೈಲ	:	ಬೆಟ್ಟ, ಶ್ರೇಣಿ
ಶೈಲ ಶಿಖರ	:	ಬೆಟ್ಟದ ತುದಿ
ಶೈಲಾಕ್ಷರ	:	ಶಿಲೆಯ ಮೇಲೆ ಕೊರೆದ ಅಕ್ಷರ; ಶಿಲಾಶಾಸನ
ಶೈವ	:	ಶಿವನ ಭಕ್ತ
ಶೃತಬಿಂದು	:	ಚಂದ್ರಕೀರ್ತಿಗಣಿ ರಚಿಸಿದ ಜೈನ ಗ್ರಂಥ
ಶ್ರಮಣ	:	ಜೈನ ಮುನಿ
ಶ್ರಾವಕ	:	ಗೃಹಸ್ಥ
ಶ್ರಾವಕಿ	:	ಗೃಹಸ್ಥೆ
ಶ್ರೀಪೂರ್ವಾನ್ವಯ	:	ಶ್ರೀಪುರ ವಂಶಾವಳಿ; ಜೈನ ಮಠೀಯ ಶಾಖೆ
ಶ್ರೀಸಂಘ	:	ಜೈನಸಂಘ
ಶ್ರೀವೈಷ್ಣವರು	:	ರಾಮಾನುಜನ ಅನುಯಾಯಿಗಳು
ಶ್ರೇಯಾಂಸು	:	ಹನ್ನೊಂದನೆಯ ತೀರ್ಥಂಕರ
ಶ್ವೇತಸರೋವರ	:	ಬೆಳ್ಗೊಳ
ಹಣ	:	ಪಣ; ನಾಣ್ಯ ಪ್ರಮಾಣ
ಹೆಗ್ಗಡೆ	:	ಗೌಡ

ಗ್ರಂಥಸೂಚಿ

ಪ್ರಾಕ್ತನಶಾಸ್ತ್ರ ಮತ್ತು ಶಾಸನಶಾಸ್ತ್ರ ಮಾಲಿಕೆ

ಎಪಿಗ್ರಾಫಿಯಾ ಕರ್ನಾಟಕಾ: (ಮೈಸೂರ ಆರ್ಕಿಯಾಲಾಜಿಕಲ್ ಸೀರೀಜ್) ಸಂ. ಲ್ಯೂಯಿಸ್ ರೈಸ್. (ಬೆಂಗಳೂರು, 1886) ; ಸಂಪುಟಗಳು I, II (1889), III (1894), IV (184), V (1092), VI (1901), VII (1902), VIII (1904), IX (1905), X (1905), XI (1903), ಮತ್ತು XII (1904). ಇವುಗಳಲ್ಲಿ ಸಂಪುಟ II ಶ್ರವಣಬೆಳ್ಗೊಳಕ್ಕೆ ಮೀಸಲಾಗಿದೆ. ಈ ಸಂಪುಟವನ್ನು ಕೆಳಕಂಡಂತೆ ಪರಿಷ್ಕರಿಸಲಾಯಿತು:
1923 : ಪರಿಷ್ಕೃತ, ವಿಸ್ತೃತ ಮತ್ತು ಸಂಪಾದಿತ : ಆರ್. ನರಸಿಂಹಾಚಾರ್
1973 : 73 ಶಾಸನಗಳ ಸೇರ್ಪಡೆಯೊಂದಿಗೆ (ಬಹುತೇಕವಾಗಿ ಬೇರೆ ವಿದ್ವಾಂಸರಿಂದ ಗುರುತಿಸಿದ ಮತ್ತು ಪ್ರಕಟಿಸಿದ, ಅನೇಕ ಸಂಪುಟಗಳಲ್ಲಿ ಚದುರಿರುವ), ಆದರೆ ಅನುಕ್ರಮ ಸಂಖ್ಯೆಗಳ ಕ್ರಮವನ್ನು ಬದಲಿಸಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಪ್ರಕಟಿಸಿದ್ದು, 1973 (3ನೆಯ ಆವೃತ್ತಿ). ಪ್ರಸ್ತುತ ಕೃತಿಯಲ್ಲಿ 3ನೆಯ ಆವೃತ್ತಿಯಲ್ಲಿರುವ ಸಂಖ್ಯೆಗಳನ್ನು ಬಳಸಲಾಗಿದೆ.

ಎಪಿಗ್ರಾಫಿಯಾ ಇಂಡಿಕಾ : (ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಸೀರೀಜ್, ದಿಲ್ಲಿ, ಕಲಕತ್ತಾ, 1892)

ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ : (ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಸೀರೀಜ್, ಮದ್ರಾಸ್ ಗವರ್ನ್‌ಮೆಂಟ್ ಪ್ರೆಸ್, 1890)

ಆರ್ಕ್ಯಾಲಾಜಿಕಲ್ ಸರ್ವೆ ಆಫ್ ಮೈಸೂರ್, ಆನ್ಯುಅಲ್ ರಿಪೋರ್ಟ್ಸ್ : (ಮೈಸೂರ್ ಆರ್ಕಿಯಾಲಾಜಿಕಲ್ ಸೀರೀಜ್) 1886-1905; 1906 - 1976 : 1906 - 1909ರ (ಸಂಪುಟ II), 1910 ರ (ಸಂಪುಟ III) ಮತ್ತು 1912 ರ (ಸಂಪುಟ IV) ವಾರ್ಷಿಕ ವರದಿಗಳನ್ನು 'ಎ ಸ್ಟಡಿ' ಎಂಬ ಅಂಕಿತದಡಿ ಎಸ್.ಶೆಟ್ಟರ್ ಸಂಪಾದಿಸಿದ್ದು. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (ಧಾರವಾಡ, 1976) ಪ್ರಕಟಣೆ.

ಪ್ರಾಚೀನ ಪ್ರಾಕೃತ ಮತ್ತು ಸಂಸ್ಕೃತ ಗ್ರಂಥಗಳು

ಅಭಯದೇವ (ಟೀಕೆ), *ಭಗವತೀ ಸೂತ್ರ,* ಬಾಂಬೆ, 1974-1988

ಸ್ಥಾನಾಂಗಸೂತ್ರ, ಅಹ್ಮದಾಬಾದ್, 1937

ಆಶಾಧರ, *ಪ್ರತಿಷ್ಠಾ ಸಾರೋದ್ಧಾರ,* ಸಂ.ಮನೋಹರಲಾಲ ಶಾಸ್ತ್ರಿ, ವ್ಹಿ.ಎಸ್. ಬಾಂಬೆ, 1907

ಗುಣಭದ್ರಾಚಾರ್ಯ, *ಮಹಾಪುರಾಣಂ-ಉತ್ತರಪುರಾಣಂ,* ಕನ್ನಡ ಟೀಕೆಯೊಂದಿಗೆ ಸಂ. ಶಾಂತರಾಜಶಾಸ್ತ್ರಿ, ಎ., ಮೈಸೂರು, 1933

ಹರಿಸೇಣಾಚಾರ್ಯ, *ಬೃಹತ್‌ಕಥಾಕೋಶ,* ಸಂ.ಉಪಾಧ್ಯೆ, ಎ.ಎನ್., ಎಸ್.ಜೆ.ಸೀರೀಜ್, ಬಾಂಬೆ, 1943

ಜಟಾಸಿಂಹನಂದಿ, *ವಾರಾಂಗಚರಿತಂ,* ಸಂ.ಉಪಾಧ್ಯೆ, ಎ.ಎನ್., ಎಂ.ಡಿ.ಜೆ. ಗ್ರಂಥಮಾಲಾ, ಬಾಂಬೆ, 1938

ಜಿನೇಂದ್ರ ವರ್ಣಿ, *ಜೈನೇಂದ್ರ ಸಿದ್ಧಾಂತಕೋಶ,* 1-4, ದಿಲ್ಲಿ, 1970

ಜಾಕೋಬಿ (ಸಂ), *ಆಯಾರಾಂಗ ಸುತ್ತ ಸುಗ್ಗ ಗಾಮೆ* I, ಎಸ್‌ಬಿಐ, ಸಂಪುಟ 22

ಜಿನಸೇನಾಚಾರ್ಯ, *ಪೂರ್ವಪುರಾಣಂ,* ಕನ್ನಡ ಟೀಕೆಯೊಂದಿಗೆ ಸಂ. ಶಾಂತರಾಜಶಾಸ್ತ್ರಿ, ಎ., ಮೈಸೂರು, 1933

ಜೊಹ್ರಾಪುರ್ಕರ್, ಯು.ಪಿ., *ಭಟ್ಟಾರಕ ಸಂಪ್ರದಾಯ,* ಸೊಲಾಪುರ, 1958

ಕಾರ್ತಿಕೇಯ, *ಕಾರ್ತಿಕೇಯಾನುಪ್ರೇಕ್ಷ,* ಶುಭ ಚಂದ್ರನಿಂದ, ಸಂ.ಉಪಾಧ್ಯೆ, ಎ.ಎನ್., ಆಗಸ್, 1960

ಕೊಂಡಕುಂದಾಚಾರ್ಯ, *ಪ್ರವಚನಸಾರ,* ಸಂ. ಉಪಾಧ್ಯೆ, ಎ.ಎನ್., ಬಾಂಬೆ, 1955

ಸಮಯಸಾರ ಟೀಕೆ, ಜಯಚಂದ್ರ, ದಿಲ್ಲಿ, 1959

ನೇಮಿಚಂದ್ರ, *ಪ್ರತಿಷ್ಠಾ ತಿಲಕ,* ಮರಾಠಿ ಟೀಕೆಯೊಂದಿಗೆ, ಸೊಲಾಪುರ, 1915

ನೇಮಿಚಂದ್ರಸಿದ್ಧಾಂತಚಕ್ರವರ್ತಿ, *ದ್ರವ್ಯ ಸಂಗ್ರಹ,* ದಿಲ್ಲಿ 1956

ಪ್ರಭಾಚಂದ್ರ, *ಕಥಾಕೋಶ,* ಸಂ.ಉಪಾಧ್ಯೆ, ಎ.ಎನ್., ಬಿಜೆಪಿ, ನ್ಯೂ ದಿಲ್ಲಿ, 1914

ಸಮಂತಭದ್ರ, *ರತ್ನಕರಂಡಕಶ್ರಾವಕಾಚಾರ,* ಕನ್ನಡಾನುವಾದ ಮತ್ತು ಟೀಕೆಯೊಂದಿಗೆ, ಮಿರ್ಜಿ ಅಣ್ಣಾರಾಯ, ಸೊಲಾಪುರ, 1981

ಶಾಂತರಾಜಶಾಸ್ತ್ರಿ, ಎ., ಸಂ. *ಚತುರ್ವಿಂಶತಿ ತೀರ್ಥಂಕರಾಧನಾ,* ಮೈಸೂರು, 1935

ಶಿವಾರ್ಯ, *ಭಗವತೀ ಆರಾಧನಾ,* ಸಂ. ಕೈಲಾಸಚಂದ್ರ ಸಿದ್ಧಾಂತಶಾಸ್ತ್ರಿ, ಸೊಲಾಪುರ, 1978

ಸೋಮದೇವಸೂರಿ, *ಉಪಾಸಕಾಧ್ಯಯನ,* ಸಂ. ಕೈಲಾಸಚಂದ್ರ ಸಿದ್ಧಾಂತಶಾಸ್ತ್ರಿ, ಬಿಜೆಪಿ ಸೀರೀಜ್, ಕಾಶಿ, 1964

ಶ್ರಾವಕಾಚಾರಸಂಗ್ರಹ, ಭಾಗಗಳು 1-5, ಸಂ. ಹೀರಾಲಾಲಶಾಸ್ತ್ರಿ, ಸೊಲಾಪುರ, 1976-87

ತ್ರಿಷಷ್ಠಿ ಶಲಾಕಾಪುರುಷಚರಿತ್ರ I - V, ಸಂ. ಜಾನ್ಸನ್, ಎಚ್.ಎಂ., ಬರೋಡಾ, 1937

ಉಮಾಸ್ವಾತಿ, *ತತ್ವಾರ್ಥಾಧಿಗಮಸೂತ್ರ,* ಎಸ್‌ಬಿಜಿ ಸೀರೀಜ್, ಅರ್ಹಾ 1920

ಉಪಾಧ್ಯೆ, ಎ.ಎನ್., ಜೈನ್, ಎಸ್.ಸಿ., ಮತ್ತು ಸಿದ್ಧಾಂತಶಾಸ್ತ್ರಿ, ಸು. *ಪುಣ್ಯಾಶ್ರವ ಕಥಾಕೋಶ,* ಸೊಲಾಪುರ, 1964

ಉತ್ತರಾಧ್ಯಯನ ಸೂತ್ರ, ಅನುವಾದ, ಜಾಕೋಬಿ, ಎಚ್., ಎಸ್‌ಬಿಇ ಆಕ್ಸ್‌ಫರ್ಡ್, 1895
ವೈದ್ಯ, ಪಿ.ಎಲ್., ಸಂ. *ಉಪಸಗದಸಾಒ*, ಅಭಯದೇವನ ಟೀಕೆ, ಹಾರ್ನೇಲ್‌ನ ಅನುವಾದ, ಕಲಕತ್ತಾ, 1888
ಯೋಗೀಂದು ದೇವನ *ಪರಮಾತ್ಮ ಪ್ರಕಾಶ (ಪರಮಪ್ಪಪಯಾಸು)* ಮತ್ತು *ಯೋಗಸಾರ*, ಸಂ. ಉಪಾಧ್ಯೆ, ಎ.ಎನ್., ಬಾಂಬೆ 1937

ಪ್ರಾಚೀನ ಕನ್ನಡ ಗ್ರಂಥಗಳು

ಆಚಣ್ಣ, *ವರ್ಧಮಾನ ಪುರಾಣಂ*, ಸಂ. ಮರಿಯಪ್ಪ ಭಟ್ಟ, ಮದ್ರಾಸ್, 1952
ಅಗ್ಗಳ, *ಚಂದ್ರಪ್ರಭ ಪುರಾಣಂ*, ಸಂ. ನರಸಿಂಹಾಚಾರ್, ಎಸ್.ಜಿ., ಮತ್ತು ರಾಮಾನುಜ ಐಯಂಗಾರ್ ಎಂ.ಎ. ಮೈಸೂರು, 1901
ಬಾಹುಬಲಿ, *ಧರ್ಮನಾಥಪುರಾಣಂ*, ಸಂ. ಬಸವಾರಾಧ್ಯ ಎನ್., ಮೈಸೂರು, 1975
ಬಂಧುವರ್ಮ, *ಜೀವಸಂಬೋಧನೆ*, ಸಂ. ಶೇಷ ಐಯಂಗಾರ್, ಎಚ್., ಮದ್ರಾಸ್, 1955
ಚಾವುಂಡರಾಯ, *ತ್ರಿಷಷ್ಠಿ ಲಕ್ಷಣ ಮಹಾಪುರಾಣಂ*, ಸಂ. ಕುಲಕರ್ಣಿ, ಬಿ.ಎಸ್., ಧಾರವಾಡ, 1975
ಇಮ್ಮಡಿ ಗುಣವರ್ಮ, *ಪುಷ್ಪದಂತ ಪುರಾಣಂ*, ಸಂ. ವೆಂಕಟರಾಮ್, ಎ., ಮತ್ತು ಶೇಷ ಐಯಂಗಾರ್. ಎಚ್., ಮೈಸೂರು, 1933
ಹಸ್ತಿಮಲ್ಲಿಷೇಣಾಚಾರ್ಯ, *ಪೂರ್ವಪುರಾಣಂ*, ಸಂ. ಕುಂದಣಗಾರ, ಕೆ.ಜಿ., ಕೊಲ್ಹಾಪುರ, 1943
ಜನ್ನ, *ಅನಂತನಾಥ ಪುರಾಣಂ*, ಸಂ. ರಾಮಾನುಜ ಐಯಂಗಾರ್, ಎಂ.ಎ., ಮೈಸೂರು, 1912
ಕರ್ಣಪಾರ್ಯ, *ನೇಮಿನಾಥ ಪುರಾಣಂ*, ಸಂ. ಸಣ್ಣಯ್ಯ, ಬಿ.ಎಸ್, ಮೈಸೂರು, 1977
ಮಂಗರಸ, *ನೇಮಿಜಿನೇಶ ಸಂಗತಿ*, ಸಂ. ಮಹಿಷವಾಡಿ, ಬಿ.ಬಿ., ಧಾರವಾಡ, 1979
ನಾಗಚಂದ್ರ, *ಮಲ್ಲಿನಾಥ ಪುರಾಣಂ*, ಸಂ. ಹೆಂಡಿ, ಬಿ.ಬಿ., ಧಾರವಾಡ, 1974
ನಾಗಚಂದ್ರ, *ರಾಮಚಂದ್ರಚರಿತ ಪುರಾಣಂ*, ಸಂ. ಹಿರೇಮಠ, ಆರ್.ಸಿ., ಹೊಸದಿಲ್ಲಿ, 1975
ಇಮ್ಮಡಿ ನಾಗವರ್ಮ, *ವರ್ಧಮಾನ ಪುರಾಣಂ*, ಸಣ್ಣಯ್ಯ, ಬಿ.ಎಸ್., ಮೈಸೂರು, 1974
ನಾಗವರ್ಮ, *ಕಾವ್ಯಾವಲೋಕನ*, ಸಂ. ರಾಮಸ್ವಾಮಿ ಐಯಂಗಾರ್, ಎಚ್.ಆರ್., ಮೈಸೂರು, 1939
ನಯಸೇನ, *ಧರ್ಮಾಮೃತ*, ಸಂ. ಶಾಮಾಶಾಸ್ತ್ರಿ, ಮೈಸೂರು, 1924
ನೇಮಿಚಂದ್ರ, *ನೇಮಿನಾಥ ಪುರಾಣಂ*, ಸಂ. ಕುಲಕರ್ಣಿ, ಬಿ.ಎಸ್., ಧಾರವಾಡ, 1968

ಪಂಪ, *ಆದಿಪುರಾಣ,* ಸಂ. ಬಸವರಾಜು, ಎಲ್., ಮೈಸೂರು, 1976
ಪಾರ್ಶ್ವಪಂಡಿತ, *ಪಾರ್ಶ್ವನಾಥ ಪುರಾಣಂ,* ಸಂ. ಕುಲಕರ್ಣಿ, ಬಿ.ಎಸ್., ಧಾರವಾಡ, 1968
ಪೊನ್ನ, *ಶಾಂತಿಪುರಾಣಂ,* ಸಂ. ವೆಂಕಟರಾವ್, ಎ., ಮತ್ತು ಶೇಷ ಐಯಂಗಾರ್, ಎಚ್., ಮದ್ರಾಸ್, 1929
ರನ್ನ, *ಅಜಿತನಾಥಪುರಾಣತಿಲಕಂ,* ಸಂ. ಜವರೇಗೌಡ, ಡಿ., ಮತ್ತು ದೇವೀರಪ್ಪ, ಎಚ್., ಮೈಸೂರು, 1959
ಶಾಂತಿನಾಥ, *ಸುಕುಮಾರಚರಿತ,* ಸಂ. ಶಾಮರಾವ್, ಟಿ.ಎಸ್., ಮತ್ತು ನರಸಿಂಹಾಚಾರ್, ಡಿ.ಎಸ್., ಶಿವಮೊಗ್ಗ, 1954
ಶಿವಕೋಟ್ಯಾಚಾರ್ಯ, *ವಡ್ಡಾರಾಧನೆ,* ಸಂ. ನರಸಿಂಹಾಚಾರ್, ಡಿ.ಎಲ್., ಮೈಸೂರು, 1972

ಆಧುನಿಕ ಕನ್ನಡ ಗ್ರಂಥಗಳು

ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಮೈಸೂರು 1966
- *ಸಂಶೋಧನ ತರಂಗ* I, ಬೆಂಗಳೂರು, 1966
- *ಸಂಶೋಧನ ತರಂಗ* II, ಬೆಂಗಳೂರು, 1977
- "ಶ್ರವಣಬೆಳ್ಗೊಳಕ್ಕೆ ಮೂಲ ಹಳೆಬೆಳ್ಗೊಳ", *ಸಾಧನೆ,* 1985, ಪು. 11-41

ಕಲಬುರ್ಗಿ, ಎಂ.ಎಂ., *ಶಾಸನ ವ್ಯಾಸಂಗ,* ಧಾರವಾಡ, 1974
- *ಧಾರವಾಡ ತಾಲೂಕಿನ ಶಾಸನಗಳು,* ಧಾರವಾಡ, 1976
- *ಧಾರವಾಡ ಜಿಲ್ಲೆಯ ಶಾಸನಸೂಚಿ,* ಧಾರವಾಡ, 1975

ಮಿರ್ಜಿ ಅಣ್ಣಾರಾಯ, *ಜೈನ ಧರ್ಮ,* ಮೈಸೂರು, 1969
ಮುಗಳಿ, ಆರ್.ಎಸ್., *ಕನ್ನಡ ಸಾಹಿತ್ಯ ಚರಿತೆ,* ಮೈಸೂರು, 1953
ನಾಯಕ, ಹಾ.ಮಾ., ಸಂ. *ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ,* ಮೈಸೂರು ವಿ.ವಿ., ಮಾಲಿಕೆ, 1974-1977
ಶಿವರುದ್ರಪ್ಪ, ಜಿ.ಎಸ್., ಸಂ. *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ,* ಬೆಂಗಳೂರು, ವಿ.ವಿ., ಮಾಲಿಕೆ, ಬೆಂಗಳೂರು, 1974-1978
ಶಿರೂರ, ಬಿ.ವ್ಹಿ., *ಶ್ರವಣಬೆಳ್ಗೊಳ, ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವ,* ಧಾರವಾಡ, 1976

ಶೆಟ್ಟರ್, ಎಸ್., (ಜೊತೆಗೂಡಿ) "ಮೈಸೂರು ಪ್ರದೇಶದ ಪ್ರಕಟಿತ ಶಾಸನಗಳ ಸಮೀಕ್ಷೆ ಮತ್ತು ಅಪ್ರಕಟಿತ ಶಾಸನಗಳ ಸೂಚಿ", *ಕರ್ನಾಟಕ ಭಾರತಿ,* ಧಾರವಾಡ, ಸಂಪುಟ VII ಸಂಖ್ಯೆ 1 ಮತ್ತು ತದನಂತರದ ಸಂಪುಟಗಳು.

ಶೆಟ್ಟರ್, ಎಸ್.,
- "ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ಧಾರ್ಮಿಕ-ಸಾಮಾಜಿಕ ಜೀವನ", *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ,* ಸಂಪುಟ 3, ಬೆಂಗಳೂರು ವಿಶ್ವವಿದ್ಯಾಲಯ ಮಾಲಿಕೆ, ಬೆಂಗಳೂರು, 1976
- "ಹಳೆಯಬೀಡಿನ ಹಲವು ಶಾಸನಗಳು: ಕಾಲ ಹಾಗೂ ವಿಷಯ ವಿಮರ್ಶೆ", *ಸಾಧನೆ,* ಸಂ. V-2, ಬೆಂಗಳೂರು ವಿಶ್ವವಿದ್ಯಾಲಯ ಮಾಲಿಕೆ, ಬೆಂಗಳೂರು, 1976
- ಕನ್ನಡ ಸಾಹಿತ್ಯ ಮತ್ತು ಕಲೆ - ಜೈನ ಸಾಹಿತ್ಯವು ಮೂರ್ತಿ ಲಕ್ಷಣಗಳ ಮೇಲೆ ಚೆಲ್ಲುವ ಬೆಳಕಿನ ಒಂದು ಕಿರಣ", *ಶ್ರೀಕಂಠತೀರ್ಥ,* ಬೆಂಗಳೂರು, 1976
- "ವೀರ ಸಿದ್ಧಾಂತ", *ಸಾಧನೆ,* ಸಂಪುಟ VIII - 3, ಬೆಂಗಳೂರು, 1979
- " ತುಳಿಲಾಳ್", ಸಾಧನೆ, ಸಂಪುಟ IX - 3, ಬೆಂಗಳೂರು, 1980

ಇಂಗ್ಲೀಷ್ ಭಾಷೆಯ ಗ್ರಂಥಗಳು

Aiyangar, R., and Rao, S., *Studies in South Indian Jainism,* Madras, 1922

Barodia, U.K., *History and Literature of Jainism,* Bombay, 1909

Basham, A.L., *History and Doctrines of the Ajivikas,* Delhi, 1951

Bhargava, D., *Jaina Ethics,* Delhi, 1968

Bhattacharya, B.C., *The Jaina Iconography,* Lahore, 1939

Buehler, G., *The Indian Sect of the Jains,* London, 1903

Chakravarti, A., *Jaina Literature in Tamil,* Arrah, 1941

Deo, S.B., *History of Jaina Monachism- From Inscriptians and Literature,* Poona, 1956

Desai, P.B., *Jainism in South India and Some Jain Epigraphs,* Sholapur, 1957

Handiqui, K.K., *Yasastilaka and Indian Culture,* Sholapur, 1949

Jain, J.P., *Jaina Sources of the History of India,* Delhi, 1963

Jain, Muni Uttam Kamal, *Jaina Sects and Schools,* Delhi, 1975

Jaina, J.C., *Life in Ancient India as Depicted in Jaina Canons*, Bombay, 1947

Kapadia, H.R., *A History of Canonical Literature of Jains*, Bombay, 1941

Khadabadi, B.K., *Vaddaradhane: A Study*, Dharwad, 1979

Rice, E.P., *Kanarese Literature*, Culcutta, 1921

Roychaudhury, P.C., *Jainism in Bihar*, Patna, 1956

Saletore, B.A., *Medieval Jainism*, Bombay, 1938

Schubring, W., *The Doctrine of the Jains*, Delhi, 1962

Sen, A.C., *Schools and Sects in Jaina Lierature*, Calcutta, 1932

Settar, S. *Hoysala Sculpture in the National Museum*, Copenhagen, Copenhagen, 1975

- *Sravana Belgola - An Illustrated Study*, Dharwad, 1981

- *Archaeological Survey of Mysore, Annual Reports:* A Study, Vol. II-IV, (ed.) Dharwad, 1976

-*Sravana Belgola Monuments* (Ph.D.) Dissertation submitted to Karnatak University, (1967 - unpublished)

-"The Brahmadeva Pillars: An Inquiry into the Origin and Nature of the Brahmadeva Worship among Digambara Jains", *Artibus Asiae*, XXXIII, New York.

- "The Authors of Gommata Suttalaya", *Journal of Indian History*, XI, VIII, Trivandrum, 1969

- "The Origin of the Cult of Jvalamalini and the Earliest Images of Jvala and Syama", *Artibus Asiae*, XXI, New York, 1969

- "Cakresvari in Karnataka Art and Literature", *Oriental Art*, Swansea, Spring, 1971.

- "Four Hoysala Inscriptions from Chandragiri, Sravana Belgola", *Journal of Karnatak University*, *(Social Science)*, Vol. VIII, (1972)

- "The Classical Kannada Literature and the Digambara Jaina Iconography", *Aspects of Jaina Art and Architecture*, ed. Shah, U.P., and Dhaky, N.A., (Ahmedabad, 1975)

- "The Tale of Two Hillocks", *March of Karnataka*, XIV, 3, March 1981

- "Nisidhis in Karnataka", with Ravi Korisettar, *Memorial Stones*, Dharwad, 1982

Settar, S. and Sontheimer, G.D., *Memorial Stones: A Study of their Origin, Significance and Variety*, Dharwad, 1982

Shah, C.J., *Jainism in Northern India*, London, 1832

Shah, U.P., and Dhaky, M.A. (Ed.), *Aspects of Jaina Art and*

Architecture, Ahmedabad, 1975
Shah, U.P., *Studies in Jaina Art,* Banares, 1955
Sharma, S.B., *Jainism and Karnatak Culture,* Dharwad 1940
Sikdar, J.C., *Studies in the Bhagavati-Sutra,* Muzaffarpur, 1964
Sircar, D.C., *Indian Epigraphical Glossary,* Varanasi, 1966
Sogani, K.C. *Ethical Doctrines in Jainism,* J.G. Series, Sholapur, 1967
Tukol, T.K., *Sallekhana is not Suicide,* Ahmedabad, 1976
Upadhye, A.N. (ed.), *Mahavira and his Teachings,* Bombay, 1977.

ಚಿತ್ರಗಳು

ಚಿತ್ರ i :

ಈಗ ಚಂದ್ರಗಿರಿ ಎಂದು ಕರೆಯಲಾಗುವ ಶ್ರವಣಬೆಳ್ಗೊಳದ ಚಿಕ್ಕಬೆಟ್ಟ. ಶಾಸನಗಳಲ್ಲಿ ಅದು ಸಮಾಧಿ ಬೆಟ್ಟ (ಕಟವಪ್ರ, ಕಳ್ವಪ್ಪು, ಇತ್ಯಾದಿ) ಎಂದು ಹೆಸರಿಸಲಾಗಿದೆ. ಕ್ರಿ.ಪೂ.ಸು. 3ನೆಯ ಶತಮಾನ ಮತ್ತು ಕ್ರಿ.ಶ. ಸು. 6ನೆಯ ಶತಮಾನಗಳ ಕಾಲಾವಧಿಯಲ್ಲಿ ಇದೊಂದು ದುರ್ಗಮ ಪ್ರದೇಶವಾಗಿತ್ತು. ಜೀವನವನ್ನು ಅಂತ್ಯಗೊಳಿಸಬಯಸಿವವರಿಗೆ 6ನೆಯ ಶತಮಾನದ ನಂತರ ಇದೊಂದು ಅತ್ಯಂತ ಪ್ರಿಯ ತಾಣವಾಯಿತು. ಭದ್ರಬಾಹು, ಚಂದ್ರಗುಪ್ತ, ಮೊದಲ್ಗೊಂಡು ಹಲವಾರು ಪ್ರಖ್ಯಾತ ಶ್ರಮಣರು ಈ ಬೆಟ್ಟದೊಂದಿಗೆ ನಿಕಟ ಸಂಬಂಧ ಹೊಂದಿದ್ದರೆಂದು ತಿಳಿದುಬರುವುದು.

ಬೃಹತ್ ಕಣಶಿಲೆಯ ಈ ಬೆಟ್ಟವು ಅನೇಕ ದೊಡ್ಡಪುಟ್ಟ ಬಂಡೆ, ಗುಹೆ, ಬಂಡೆಗೂಡುಗಳನ್ನು ಮತ್ತು ಪ್ರಾಕೃತಿಕ ಕೊಳಗಳನ್ನು ತನ್ನ ಹೆಗಲ ಮೇಲೆ ಧರಿಸಿಕೊಂಡಿದೆ. ಅದರ ಶಿಖರಭಾಗವು ಪ್ರಾಚೀನ ಶಾಸನಗಳ ಮತ್ತು ಮಧ್ಯಯುಗದ ದೇವಾಲಯಗಳ ಆಗರವಾಗಿದೆ. ಅದು ನೆಲಮಟ್ಟದಿಂದ 200' ಇದ್ದು, ದೊಡ್ಡಬೆಟ್ಟದ ಸುಮಾರು ಅರ್ಧದಷ್ಟು ಎತ್ತರವಾಗಿದೆ.

ಚಿತ್ರ ii :

ಚಿಕ್ಕಬೆಟ್ಟದ ಶಿಖರಕ್ಕೆ ಕೊಂಡ್ಯೊಯುವ ಮಾರ್ಗ. ಬಹುಶಃ 19ನೆಯ ಶತಮಾನದಲ್ಲಿ ಕೊರೆದ ಈ ಮೆಟ್ಟಲು ಮಾರ್ಗವು ಅಲ್ಲಲ್ಲಿ ಮೂಲೆ ಮತ್ತು ತಿರುವುಗಳನ್ನು ಒಳಗೊಂಡಿವೆ; ಇದರ ಬಹುಭಾಗ ನೆಲಗಟ್ಟು ಮತ್ತು ಸೋಪಾನ ಪಂಕ್ತಿಯನ್ನು ಹೊಂದಿದೆ. 935' ದೂರದ ಶಿಖರ ತಲುಪಲು, ಬೆಟ್ಟದಡಿಯಿಂದ 240 ಮೆಟ್ಟಲುಗಳನ್ನು ಏರಬೇಕು. ಧರ್ಮಿಷ್ಠರು ಮತ್ತು ಪಂಡಿತರು ಮರಣ ಸಾಧಿಸಲು ಏರಬೇಕಾದ ಸಮಾಧಿವ್ರತದ ಮೆಟ್ಟಲುಗಳೇನೋ ಇವು ಎಂಬ ಭಾವನೆ ಬರಿಸುವಂತಿರುವುವು ಈ ಸೋಪಾನ ಪಂಕ್ತಿಗಳು. "ಸಿದ್ಧನ ರೂಪವನ್ನು ಹೃದಯಕಮಲದ ಮಧ್ಯ ಇರಿಸಿಕೊಂಡು ....ಶೃತಮುನಿ...... ಭೋಗಾಂಕಗಳಲ್ಲಿ ಅಮೃತಕಲ್ಪವನ್ನು ತಲುಪಿದನು. ಈ ಕಲ್ಪವು ರಮ್ಯವೂ ಹಾಗೂ ಕಲ್ಮಶಮುಕ್ತವೂ ಆದ ಅಂತರ್ಧ್ಯಾಮ ಸೋಪಾನಗಳನ್ನು ಹೊಂದಿತ್ತು", ಎಂಬ ಒಂದು ಶಾಸನ ಕಾವ್ಯವನ್ನು ಇವು ನೆನೆಪಿಸಿಕೊಡುವುವು.

ಚಿತ್ರ iii :

ಚಿಕ್ಕಬೆಟ್ಟದ ಮೇಲಿರುವ ಒಂದು ಬಂಡೆ. ಇಳಿಜಾರು ತಳಬಂಡೆಯ ಮೇಲೆ ಕುಕ್ಕರು ಕುಳಿತಿರುವ ಈ ಬಂಡೆ ಮರಣಾಂತಿಕವಾಗಿ ದೇಹದಂಡಿಸುವವರನ್ನು ಪ್ರತಿನಿಧಿಸುವಂತಿದೆ. ನಿಧಾನವಾಗಿ ಕ್ಷೀಣವಾಗುತ್ತಿರುವ ತನ್ನ ಕಾಯದ ಪರಿವೆಯೇ ಅದಕ್ಕಿಲ್ಲವೆನ್ನುವಂತೆ ಅದು

ನಿಂತಿದೆ. ಪ್ರಾಣಿ, ಪಕ್ಷಿ, ಮಾನವರ ಧಾಳಿಯಂತಿರಲಿ, ಸೂರ್ಯನ ತೀಕ್ಷ್ಣ ಕಿರಣ, ಧಾರಾಕಾರ ಮಳೆ ಮತ್ತು ಕೊರೆಯುವ ಚಳಿ ಮುಂತಾದವುಗಳನ್ನೆಲ್ಲ ಸಹಿಸುವ ಮೂಲಕ ಅದು ತನ್ನ ಸಂಕಲ್ಪ ಶಕ್ತಿಯನ್ನು ಗಟ್ಟಿಗೊಳಿಸಿಕೊಂಡಂತಿದೆ. ಯುಗಗಳುದ್ದಕ್ಕೂ ಹಲವಾರು ಶ್ರಮಣರು ದೇಹವನ್ನು ದಂಡಿಸಿದ್ದನ್ನು ಮೂಕಸಾಕ್ಷಿಯಾಗಿ ಇದು ಕಂಡಿರಬೇಕು; ಅಂಥವರಲ್ಲಿ ಕೆಲವರಾದರೂ ಧ್ಯಾನಕ್ಕಾಗಿ ಇದರಡಿಯನ್ನು ಆಯ್ಕೆ ಮಾಡಿಕೊಂಡಿರಲೂ ಸಾಕು. ಆಧ್ಯಾತ್ಮಿಕ ದೇಹದಂಡನೆಕಾರನು ಸಹಿಸಬೇಕಾಗಿದ್ದ ತ್ಯಾಗ, ಕಾಠಿಣ್ಯತೆಗಳೆನ್ನೆಲ್ಲ ಸಂಕೇತಿಸುವಂತೆ ಈ ಬಂಡೆಗಲ್ಲು ಬೆಂಡಾಗಿ ನಿಂತಿದೆ.

ಚಿತ್ರ iv :

ಚಿಕ್ಕ ಬೆಟ್ಟದ ಶಿಖರ ಮತ್ತು ಅದರಾಚೆಗಿನ ಕೊಳ್ಳ ಪ್ರದೇಶ - ಪ್ರಮುಖವಾಗಿ ಜಿನನಾಥಪುರ ಗ್ರಾಮವನ್ನು - ತನ್ನ ಒಡಲಲ್ಲಿಟ್ಟುಕೊಂಡಂತೆ ಕಾಣಿಸುವ ದೃಶ್ಯ. ದೊಡ್ಡಬೆಟ್ಟದ ಮೇಲಿಂದ ಸೆರೆಹಿಡಿದ ಈ ಪಕ್ಷಿನೋಟ ಸಮಾಧಿಬೆಟ್ಟದ ಸುತ್ತಲೂ ಹಿಂದೊಮ್ಮೆ ಇದ್ದ ಕಾಡಿನ ಕಲ್ಪನೆಯನ್ನು ಕೆಲಮಟ್ಟಿಗೆ ತಂದುಕೊಡುವುದು.

ಚಿತ್ರ v :

ಚಿಕ್ಕಬೆಟ್ಟದ ಹದಿಮೂರು ದೇವಾಲಯಗಳು, ಏಳು ನಿಸಿಧಿಮಂಟಗಳು ಮತ್ತು ಎರಡು ನಿರಾಲಂಬ ಸ್ತಂಭಗಳ ಗುಚ್ಛ. ಪಟ್ಟಣಸೆಟ್ಟಿಯೊಬ್ಬ ಕಳೆದ ಶತಮಾನದಲ್ಲಿ ಕಟ್ಟಿಸಿದ ಒಂದು ಒರಟು ಕೋಟೆಯ ಮಧ್ಯ ಇವು ಸಾಂದ್ರಗೊಂಡಿವೆ. ಆವರಣದ ಮುಖ್ಯ ದ್ವಾರವು ದಕ್ಷಿಣದಲ್ಲಿದ್ದು, ಅದು ಕೂಗೆಬ್ರಹ್ಮದೇವಸ್ತಂಭವನ್ನು ಎದುರಿಸುತ್ತಿದೆ. ಈ ಛಾಯಾಚಿತ್ರದಲ್ಲಿ ಮರವೊಂದು ಭಾಗಶಃ ಅದನ್ನು ಮರೆಮಾಚಿದೆ. ಇಲ್ಲಿಯ ದೇವಾಲಯಗಳ ಗುಚ್ಛವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು: ಪ್ರಮುಖವಾದ ಮೂರು ಬಸ್ತಿಗಳು (ಅವುಗಳ ಅಲಂಕೃತ ಗೋಪುರದೊಂದಿಗೆ) ಮತ್ತು ಮಹಾನವಮಿ ಮಂಟಪ; ಮಿಕ್ಕ ದೇವಾಲಯಗಳು ಮತ್ತು ಮಂಟಪಗಳು ಮುಂಭಾಗದಲ್ಲಿರುವ ಪ್ರಾಕೃತಿಕ ಕೊಳವನ್ನು (ಚಿತ್ರದಲ್ಲಿ ಕಾಣಿಸುವುದಿಲ್ಲ) ಸುತ್ತುಗಟ್ಟಿದ ಮರಗಳ ಒಂದು ಸಾಲು ಇದೆ. ಒಂದೊಮ್ಮೆ ಗಿಡಮರಗಳು ಎಲ್ಲೆಂದರಲ್ಲಿ ಚೆಲ್ಲುವರಿದು "ಫಲಪುಷ್ಪಗಳ ರಾಶಿಯನ್ನೇ" ಹೊತ್ತು, ಬೆಟ್ಟನ್ನೆಲ್ಲ ಕಾಡನ್ನಾಗಿ ಪರಿವರ್ತಿಸಿದ್ದವು (ಶ್ರ.ಬೆ.1). ಪ್ರಸ್ತುತ ಚಿತ್ರದಲ್ಲಿ ತೋರುತ್ತಿರುವುದು ಆ ಕಾಡಿನ ಸೊರಗಿದ ದೃಶ್ಯ ಮಾತ್ರ. ದೇವಾಲಯ ಗುಚ್ಛವು ಆವರಣದ ದಕ್ಷಿಣ-ಪಶ್ಚಿಮ ಪ್ರದೇಶವನ್ನು ಆವರಿಸಿದೆ.

ಚಿತ್ರ vi :

12 ನೆಯ ಶತಮಾನದಲ್ಲಿ ಹೊಯ್ಸಳರು ಕಟ್ಟಿದ ಸರಳ ದ್ರಾವಿಡ ಶೈಲಿಯ ದೇವಾಲಯಗಳು. ಈ ಗುಂಪು ಆವರಣದ ಉತ್ತರ-ಪೂರ್ವ ಪ್ರದೇಶವನ್ನೆಲ್ಲ ಆವರಿಸಿದೆ. ಕೊಳ್ಳದಲ್ಲಿರುವ (ಎಡಗಡೆಯ ಮೇಲ್ಭಾಗ) ಚಿಕ್ಕ ಕೆರೆಯನ್ನು ಸೆರೆಹಿಡಿದಿದ್ದರೂ ಈ ಬೆಟ್ಟದ ಉತ್ತರ-ಪೂರ್ವದಡಿಯ ದಕ್ಷಿಣ ಮೂಲೆಯಲ್ಲಿರುವ ಜಿನನಾಥಪುರ ಕೆರೆಯ ಕಿರುನೋಟವನ್ನು ಮಾತ್ರ ಈ ದೃಶ್ಯ ಪ್ರದರ್ಶಿಸುವುದು. ಎಡಕ್ಕಿರುವ ಸವತಿಗಂಧವಾರಣ ಬಸ್ತಿ ಎಂದು

ಕರೆಯಲಾಗುವ ಗೋಪುರದ ದೇವಾಲಯದ ಇಬ್ಬದಿಗಳಲ್ಲಿ ನಿಸಿಧಿ ಮಂಟಪಗಳ ಎರಡು ಗುಂಪುಗಳನ್ನು ಕಾಣುವೆವು. ದೇವಾಲಯದ ಎಡಗಡೆಯಲ್ಲಿರುವುವು ಲಕ್ಷ್ಮೀದೇವಿ ಅವಳಿ ನಿಸಿಧಿಮಂಟಪಗಳು; ಅವುಗಳ ಎಡಕ್ಕಿರುವ ಎರಡು ಮಂಟಪಗಳು ಮಾಚಿಕಬ್ಬೆಯ ಅವಳಿ ಮಂಟಪಗಳು.

ಚಿತ್ರ vii :

ಚಿಕ್ಕಬೆಟ್ಟದ ಪೂರ್ವಭಾಗದಲ್ಲಿರುವ ಪ್ರಾಕೃತಿಕ ತಳಬಂಡೆ. ಬಹಳಷ್ಟು ಧಾರ್ಮಿಕ ಆಸಕ್ತಿ ಕೆರಳಿಸಿರುವ ಇಲ್ಲಿಯ ಸ್ಮಾರಕವೆಂದರೆ ಭದ್ರಬಾಹು ಗುಹೆ.

ಚಿತ್ರ viii :

ಭದ್ರಬಾಹು ಗುಹೆಯ ನಿಕಟ ಚಿತ್ರ. ಮೇಲೆ ಚಾಚಿಕೊಂಡಿರುವ ಬಂಡೆಯು ಮೂಲತಃ ಪ್ರಾಕೃತಿಕ ಗುಹೆಯಾಗಿತ್ತು. ಭದ್ರಬಾಹುವಿನ ಮರಣದ ಬಗ್ಗೆ ಜನಾದರಣೆ ಹೆಚ್ಚುತ್ತಾ ನಡೆದಂತೆ ಬೆಟ್ಟಕ್ಕೆ ಹೆಚ್ಚು ಪ್ರಾವಿತ್ರ್ಯತೆ ಪ್ರಾಪ್ತವಾದುದರಿಂದ, ಅದನ್ನು ದೇವಾಲಯವನ್ನಾಗಿ ಪರಿವರ್ತಿಸಲಾಯಿತು. ಪ್ರಪ್ರಥಮ ಬಾರಿಗೆ ಇಲ್ಲಿ ಮರಣ ಸಂಭವಿಸಿದ್ದು ಕ್ರಿ.ಪೂ. 3ನೆಯ ಶತಮಾನದಲ್ಲಿ ಅದೇ ಸ್ಥಳದಲ್ಲಿ ಚಂದ್ರಗುಪ್ತಮುನಿ ಮರಣವನ್ನಪ್ಪಿದನೆಂಬ ಐತಿಹ್ಯವೂ ಇದೆ. ಭದ್ರಬಾಹುವಿನ ಪದಚಿಹ್ನೆಗಳನ್ನು ಇಲ್ಲಿ ಮೂಡಿಸಲಾಗಿದೆ; ಆ ನಂತರದ ಶಾಸನಗಳು ಭದ್ರಬಾಹುವಿನ ಪವಿತ್ರ ಪದಚಿಹ್ನೆಗಳನ್ನು ಉಲ್ಲೇಖಿಸುವುವು.

ಚಿತ್ರ ix :

ಪ್ರಾಚೀನ ಹಾಗೂ ಮಧ್ಯಯುಗದಲ್ಲಿದ್ದಂತೆ ಈಗಲೂ ಭದ್ರಬಾಹು ಗುಹೆಯು ಧರ್ಮಿಷ್ಠರನ್ನು ಆಕರ್ಷಿಸುತ್ತಲಿದೆ. ವಿಶಿಷ್ಟ ಸಂದರ್ಭಗಳಲ್ಲಿ ಗೌರವಾನ್ವಿತ ದಿಗಂಬರ ಮುನಿಗಳು ನೂರಾರು ಕಿಲೊಮೀಟರ್ ಕಾಲ್ನಡಿಗೆಯಲ್ಲಿ ಕ್ರಮಿಸಿ, ಬೆಟ್ಟವನ್ನು ತಲುಪುವರು. ಅವರಲ್ಲಿ ಎಷ್ಟು ಮುನಿಗಳು ಭದ್ರಬಾಹುವಿನ ಮರಣಪಥವನ್ನು ಅನುಸರಿಸಲು ಸ್ಫೂರ್ತಿ ಪಡೆಯುವರೊ ತಿಳಿಯದು; ಆದರೆ, ಇವರೆಲ್ಲರೂ ಈ ಸ್ಥಳದ ಪಾವಿತ್ರತೆಯಿಂದ ಪ್ರಭಾವಿತರಾಗಿದ್ದರೆಂಬುದರಲ್ಲಿ ಸಂದೇಹವಿಲ್ಲ.

ಚಿತ್ರ x :

ಈ ಬೆಟ್ಟದ ಮೇಲಿನ ಹಲವಾರು ಬಂಡೆ ಶಾಸನಗಳಲ್ಲಿ ಇದೂ ಒಂದು. ಇದರಲ್ಲಿ ಅತ್ಯಂತ ಪ್ರಸಿದ್ಧವಾದುದು ಆಚಾರ್ಯ ಪ್ರಭಾಚಂದ್ರನ ಮರಣವನ್ನು ದಾಖಲಿಸಿರುವ ಶಾಸನವಾಗಿದೆ. ಅದರಲ್ಲಿ ಸಕಲ ಸಂಘದೊಂದಿಗೆ ಭದ್ರಬಾಹು ಉಜ್ಜೈನಿಯಿಂದ ವಲಸೆ ಬಂದುದನ್ನು ಸ್ಮರಿಸಲಾಗಿದೆ. (ಶ್ರ.ಬೆ.1). ಅನತಿ ದೂರದಲ್ಲಿರುವ ಮತ್ತೊಂದು ಶಾಸನವನ್ನು ಬಹುಶಃ 8ನೆಯ ಶತಮಾನದಲ್ಲಿ ಶ್ರೀವಲ್ಲಭಮಹಾರಾಜನ ಮಗನಾದ ರಣಾವಲೋಕ ಕಂಬನು ಆಳುತ್ತಿದ್ದಾಗ ಕೊರೆಯಲಾಯಿತು. ಅದು ಸಮಾಧಿ ಮರಣವನ್ನು ಉಲ್ಲೇಖಿಸುವುದಿಲ್ಲ; ಆದರೆ, ಈ ಕೇಂದ್ರವು ಪಡೆದ ಪ್ರಪ್ರಥಮ ಭೂದತ್ತಿಯನ್ನು, ಗೋವಿಂದವಾಡಿ ಗ್ರಾಮವನ್ನು, ಉಲ್ಲೇಖಿಸುವುದು.

ಚಿತ್ರ xi :

ಈ ಕೇಂದ್ರದ ಜಿನಾಲಯಗಳಲ್ಲಿಯೆ ಅತ್ಯಂತ ಸುಂದರವಾದ ಚಾವುಂಡರಾಯ ಬಸದಿ; ಗಂಗ ಕಲಾವಿದರು ಈ ಕೇಂದ್ರಕ್ಕೆ ನೀಡಿದ ಅತ್ಯುತ್ಕೃಷ್ಟ ಕೊಡುಗೆಯೂ ಇದಾಗಿದೆ. ಇದನ್ನು ಅರಸ ರಾಚಮಲ್ಲನ ಮಂತ್ರಿ ಚಾವುಂಡರಾಯನಾಗಲಿ ಇಲ್ಲವೆ ಅವನ ಹೆಸರಿನಲ್ಲಿ ಬೇರೊಬ್ಬರಾಗಲಿ ಕಟ್ಟಿಸಿರಬಹುದು. ದೊಡ್ಡಬೆಟ್ಟದ ಮೇಲೆ ಗೊಮ್ಮಟ ಮಹಾವಿಗ್ರಹವನ್ನು ನಿರ್ಮಿಸಿ ಪ್ರಸಿದ್ಧನಾದ ಚಾವುಂಡರಾಯನು *ತ್ರಿಷಷ್ಠಿ ಶಲಾಕಪುರುಷಚರಿತ್ರೆ*ಯನ್ನು ಕನ್ನಡ ಭಾಷೆಯಲ್ಲಿ ಪರಿಚಯಿಸಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶಾಶ್ವತ ಸ್ಥಾನ ಗಳಿಸಿಕೊಂಡನು. ದ್ರಾವಿಡ ಶೈಲಿಯಲ್ಲಿ 10 ನೆಯ ಶತಮಾನದಲ್ಲಿ ನಿರ್ಮಿಸಲಾದ ಈ ಕಣಶಿಲೆಯ ದೇವಾಲಯವು ಅತ್ಯುತ್ಕೃಷ್ಟ ವಿಗ್ರಹಗಳನ್ನು, ಉಬ್ಬುಶಿಲ್ಪಗಳನ್ನು, ಹೊಂದಿದೆ.

ಚಿತ್ರ xii :

ಚಾವುಂಡರಾಯ ಬಸ್ತಿಯ (ಚಿತ್ರ xi) ಪ್ರಾಕಾರವನ್ನಲಂಕರಿಸಿರುವ ಮತ್ತು ಸಮಾಧಿ ಧ್ಯಾನದಲ್ಲಿರುವ ಒಂದು ವಿಗ್ರಹ. ಪರ್ಯಂಕಾಸನದಲ್ಲಿ ಕುಳಿತು ದೃಷ್ಟಿಯನ್ನು ನಾಶಿಕದಂಚಿನಲ್ಲಿ ಕೇಂದ್ರೀಕರಿಸಿ, ಚಿತ್ತವನ್ನು ಜಿನನ ಪಾದಗಳಲ್ಲಿ ಧ್ಯಾನಸ್ಥನು ನೆಟ್ಟಿರುವನು. ಈ ಸಮಾಧಿ ಧ್ಯಾನ ವಿಧಾನವೇ ದೇಹದಂಡನೆಕಾರನನ್ನು ಸಿದ್ಧತ್ವಕ್ಕೆ ಏರಿಸುವಂತಿದೆ. ಪಂಡಿತ ಅಥವಾ ಪಂಡಿತ-ಪಂಡಿತ ಮಾರ್ಗದಿಂದ ಸಮಾಧಿ ಲಕ್ಷ್ಯದ ಫಲಪ್ರಾಪ್ತಿಯು ತೀರ್ಥಂಕರನ ಅಂತಸ್ತಿಗೆ ಒಯ್ದು, ಸಾಧಕ ಮತ್ತು ಆರ್ಹತನ ನಡುವಣ ಅಂತರವನ್ನು ಅಳಿಸಿ, ಜೀವಾತ್ಮ-ಪರಮಾತ್ಮರನ್ನು ಒಂದುಗೂಡಿಸುವುದು.

ಚಿತ್ರ xiii :

ಪಥದರ್ಶಕನಿಗೆ ಅಥವ ಆಚೆಯ ತೀರಕ್ಕೆ ಪಯಣಿಸಲು ಸಹಾಯ ಒದಗಿಸುವವನಿಗೆ ಪ್ರಣಾಮ ಸಲ್ಲಿಸುತ್ತಿರುವ ಗುಡ್ಡನೊಬ್ಬನ ಉಬ್ಬುಚಿತ್ರ. ಸೌಷ್ಟವವನ್ನು ಚಿಮ್ಮುತ್ತಿರುವ ದೈಹಿಕ ಚೈತನ್ಯವನ್ನು ಸಂಕೇತಿಸುವ ಯೌವನವನ್ನು, ಅದರ ಕ್ಷಣಭಂಗುರತೆಯನ್ನು ಎತ್ತಿ ತೋರಿಸಲೋಸುಗವೇನೋ ಎನ್ನುವಂತೆ, ಈ ಶಿಲ್ಪಗಳನ್ನು ಮೂಡಿಸಲಾಗಿದೆ. ಜೈನರು ಮರಣಕ್ಕೆ ಮಾತ್ರ ಮಹತ್ವ ನೀಡದೆ, ಗೃಹಸ್ಥನ ಸಮಾಜಿಕ ಕರ್ತವ್ಯಗಳಿಗೂ ಒತ್ತು ಕೊಟ್ಟಿರುವರು; ಆದುದರಿಂದ, ಶ್ರಮಣಧರ್ಮದಿಂದ ಭಿನ್ನವಾದ ಶ್ರಾವಕಧರ್ಮವನ್ನೂ ಅವರು ವಿಕಸಿಸಿರುವರು. ಗೃಹಸ್ಥನು ತನ್ನ ಕುಟುಂಬ, ಸಮಾಜ, ಧರ್ಮ, ಇತ್ಯಾದಿಗಳಿಗೆ ತನ್ನ ಕರ್ತವ್ಯಗಳನ್ನು ಪೂರೈಸಬೇಕು - ಆಗ ಮಾತ್ರ ಅವನು ಅನಿಕೇತನ ಜೀವನಕ್ಕೆ ಅರ್ಹನಾಗುವನು. ಇವೆರಡೂ ಹಂತಗಳನ್ನು ದಾಟದೆ ಅವನು ಸಾವನ್ನು ಸ್ವಾಗತಿಸಲು ಪ್ರಯತ್ನಿಸಕೂಡದೆಂದು ಅವರ ಅಭಿಮತ.

ಚಿತ್ರ xiv :

ಚಿಕ್ಕಬೆಟ್ಟದ ಮೇಲಿನ ಅತಿ ಪ್ರಾಚೀನ ನಿಸಿಧಿ ಮಂಟಪ. ಈ ಸ್ತಂಭವನ್ನು 982, ಮಾರ್ಚ್ 5ರಂದು, ನಿರ್ಮಿಸಲಾಯಿತು. ಇದು ನಾಲ್ವಡಿ ಇಂದ್ರರಾಜನ ಮರಣವನ್ನು ಸ್ಮಾರಕೀಕರಿಸುವುದು. ಅವನು ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನ ಮೊಮ್ಮಗ. ಪರಿಣತ

ಪೋಲೊ ಆಟಗಾರ. ಮಹಾ ಕಲಿ. ಇಲ್ಲಿ ಮರಣವನ್ನು ಆಹ್ವಾನಿಸಿದ ಅತಿ ಪ್ರಾಚೀನ ಅರಸರಲ್ಲಿ ಇಂದ್ರನು ಒಬ್ಬ.

ಇದರ ಮುಂಭಾಗದಲ್ಲಿ, ಆದರೆ ತೇರಿನ ಬಸ್ತಿಗೆ ಸಂಬಂಧಿಸಿದ, ಒಂದು ಮಂದಾರವಿದೆ. ಇಲ್ಲಿ ಉಲ್ಲೇಖಿತಗೊಂಡಿರುವ ಇತರ ಸ್ಮಾರಕಗಳು ಮಂಟಪದ ಎದುರುಗಿವೆ.

ಚಿತ್ರ XV :

ಚಿಕ್ಕಬೆಟ್ಟದ ಮೇಲಿನ ಭದ್ರಬಾಹು ಹಾಗೂ ಪ್ರಾಚೀನ ದೇಹದಂಡನೆಕಾರರ ಬಂಡೆ ಸ್ಮಾರಕಗಳನ್ನು ಸುತ್ತುವರಿದ ಒಂದು ಪ್ರಾಕಾರ. ಈ ಬೆಟ್ಟಕ್ಕೆ ಯಾತ್ರಿಗಳು ಬರುವ ಸಂಖ್ಯೆ ಹೆಚ್ಚಿ, ಇಲ್ಲಿಯ ಶಾಸನಗಳಿಗೆ ಅಪಾಯ ಉಂಟಾಗಲಾರಂಭಿಸಿದಾಗ, ಹೊಯ್ಸಳರ ವಾಸ್ತುಕೌಶಲ್ಯವನ್ನು ಅನುಕರಣೆ ಮಾಡಿ ಈ ಪ್ರಾಕಾರವನ್ನು ಬಹುಶಃ ನಿರ್ಮಿಸಲಾಯಿತು. ಹಿನ್ನೆಲೆಯಲ್ಲಿ, ಹೊಯ್ಸಳ ಕಾಲದ 'ಮಹಾನವಮಿ ಮಂಟಪ'ಗಳೆಂದು ಕರೆಯಲಾಗುವ ಎರಡು ಮಂಟಪಗಳಿವೆ. 'ಮಹಾನವಮಿ' ಅಂದರೆ ದೊಡ್ಡ ಹಬ್ಬ. 'ಮರಣವೇ ಮಹಾನವಮಿ' ಎಲ್ಲ ಹಬ್ಬಗಳಿಗೂ ಮಿಗಿಲಾದ ಉತ್ಸವ ಎಂಬ ಮಾತು ಈ ಪ್ರದೇಶದಲ್ಲಿ ಇಂದಿಗೂ ಜನ ಜನಿತವಾಗಿದೆ.

ಚಿತ್ರ XVi :

ಪ್ರಾಕಾರದ ದಕ್ಷಿಣ ದ್ವಾರದ ಬಳಿಯಲ್ಲಿರುವ ಕೂಗೆಬ್ರಹ್ಮದೇವ ಸ್ತಂಭವೆಂಬ ಒಂದು ನಿರಾಲಂಬ ಸ್ತಂಭ. ವ್ರತಮರಣವನ್ನು ಆಹ್ವಾನಿಸಿದ ವ್ಯಕ್ತಿಯ ಗೌರವಾರ್ಥ ನಿಲ್ಲಿಸಲಾದ ಅತಿ ಪ್ರಾಚೀನ ಮಾನಸ್ತಂಭಗಳಲ್ಲಿ ಇದು ಒಂದು. ಆರಾಧನಾ ವ್ರತವನ್ನಾಚರಿಸಿ ಬಂಕಾಪುರದಲ್ಲಿ ಮಡಿದ ಗಂಗ ಮಾರಸಿಂಹನನ್ನು ಈ ಸ್ತಂಭ-ಶಾಸನವು ಉಲ್ಲೇಖಿಸುವುದು. ಇತರೆಡೆ ಸಮಾಧಿಮರಣವನ್ನಪ್ಪಿದವರಿಗೂ ಶ್ರವಣಬೆಳ್ಗೊಳದಲ್ಲಿ ನಿಸಿಧಿಗಳನ್ನು ನಿಲ್ಲಿಸಲಾಗುತ್ತಿದ್ದುದರ ಪ್ರಥಮ ಉದಾಹರಣೆ ಇದಾಗಿದೆ.

ಚಿತ್ರ XVii ಅ, ಆ :

ಜೀವನ ಕೊನೆಗೊಳಿಸಿದವರ ಗೌರವಾರ್ಥ ಚಿಕ್ಕಬೆಟ್ಟದ ತಳಬಂಡೆಯ ಮೇಲೆ ಪದಚಿಹ್ನೆಗಳನ್ನು ಕಡೆಯಲಾಗುತ್ತಿತ್ತು. ಇದರಲ್ಲಿ ಮೊದಲಿನದು (ಅ) ಭದ್ರಬಾಹುವಿನ ಪದಚಿಹ್ನೆಗಳನ್ನು ಪ್ರತಿನಿಧಿಸುವುದು.

ಚಿತ್ರ XViii :

ಮಧ್ಯಯುಗದ ನಿಸಿಧಿಗಂಬ. ಚಿಕ್ಕಬೆಟ್ಟದ ಪಾರ್ಶ್ವನಾಥ ಬಸ್ತಿಯಲ್ಲಿರುವ ಈ ಸ್ತಂಭವನ್ನು 1129 ರ ಮಾರ್ಚ್ ತಿಂಗಳಲ್ಲಿ ಮುನಿ ಮಲ್ಲಿಷೇಣನ ಗೌರವಾರ್ಥ ನಿರ್ಮಿಸಲಾಯಿತು. ಇದರ ಶಾಸನ ಪಾಠವನ್ನು 'ಮದನಮಹೇಶ್ವರ' ಮಲ್ಲಿನಾಥನು ರಚಿಸಿದರೆ, 12 ನೆಯ ಶತಮಾನದ ಆರಂಭಕಾಲದ ಪ್ರಖ್ಯಾತ ರೂವಾರಿಯಾದ 'ಬೀರುದರೂವಾರಿ ಮುಖತಿಲಕ' ಗಂಗಾಚಾರಿಯು ಅದನ್ನು ಕಡೆದನು. ಕೆತ್ತನೆಯ ಸ್ಥಿರತೆ ಮತ್ತು ಸ್ತಂಭದ ಮೊದಲ ಹಾಗೂ ಕೊನೆಯ ಸಾಲುಗಳಲ್ಲಿಯ ಪುಷ್ಪಾಲಂಕಾರ ಗಮನಾರ್ಹ. (ನೋಡಿ, ಚಿತ್ರ XiX)

ಚಿತ್ರ xix:

ಮೇಲಿನ ಸ್ತಂಭದ ಮೇಲಿರುವ ಮೇಲ್ಪಟ್ಟಿಕೆಯ ನಿಕಟಚಿತ್ರ. ಕವಣಿಕೆಯ ಮೇಲಿರಿಸಿರುವ ಆರಾಧನಾ ಗ್ರಂಥ, ಮಯೂರಪಿಂಛ ಮತ್ತು ಕಳಶಗಳು ಗಮನಾರ್ಹ.

ಚಿತ್ರ xx :

ದಕ್ಷಿಣ ಪಶ್ಚಿಮ ದಿಕ್ಕಿನಿಂದ ಮಹಾನವಮಿ ಮಂಟಪದ ದೃಶ್ಯ. ಹಿನ್ನೆಲೆಯಲ್ಲಿ ಪಾರ್ಶ್ವನಾಥ ಬಸ್ತಿ ಮತ್ತು ಅದರ ಮಾನಸ್ತಂಭ, ಭಾಗಶಃ ಮರೆಯಾಗಿರುವ ಕತ್ತಲೆ ಬಸ್ತಿಗಳನ್ನು ಗುರುತಿಸಬಹುದು. ಮಹಾನವಮಿ ಮಂಟಪಗಳೆರಡೂ ಒಂದೇ ಬಗೆಯಲ್ಲಿರುವಂತೆ ಕಾಣುವುವು. ದಕ್ಷಿಣ ಮಂಟಪವನ್ನು ಅರಸ ಒಂದನೆಯ ನರಸಿಂಹನ ಹಿರಿಯ ಭಂಡಾರಿ ಹುಳ್ಳರಾಜನು ಸುಮಾರು 1163 ರಲ್ಲಿ ನಿರ್ಮಿಸಿ, ಜೂನ 1163 ರಲ್ಲಿ ಮರಣಿಸಿದ ಮಹಾಮಂಡಲಾಚಾರ್ಯ ಶ್ರೀದೇವಕೀರ್ತಿಯ ನಿಸಿಧಿಯನ್ನು ಇಲ್ಲಿ ಪ್ರತಿಷ್ಠಾಪಿಸಲಾಯಿತು. 1313 ರಲ್ಲಿ ಶುಭಚಂದ್ರಮಹಾಯತಿಯ ಗೌರವಾರ್ಥ ಕೊರೆದ ನಿಸಿಧಿಯನ್ನು ಈ ಮಂಟಪದಲ್ಲಿ ಸೇರಿಸಲಾಯಿತು. ಶ್ರೀ ನಯಕೀರ್ತಿದೇವನ ನಿಸಿಧಿಗೆ ಎಡೆ ಮಾಡಲೋಸುಗ ಉತ್ತರ ಮಂಟಪವನ್ನು 1176 ರಲ್ಲಿ ಹುಳ್ಳರಾಜನ ಅಧೀನ ಮಂತ್ರಿ ನಾಗದೇವನು ನಿರ್ಮಿಸಿದನು.

ಚಿತ್ರ xxi :

ಉತ್ತರ ಮಹಾನವಮಿ ಮಂಟಪದಲ್ಲಿ ನಯಕೀರ್ತಿದೇವನ ಗೌರವಾರ್ಥ ನಿಲ್ಲಿಸಲಾದ ನಿಸಿಧಿಗಂಬದ ಶಿಖರ ಭಾಗದ ನಿಕಟ ಚಿತ್ರ.

ಚಿತ್ರ xxii, xxiii :

ಸಪ್ಟಂಬರ 1145 ರಲ್ಲಿ ಮರಣವನ್ನು ಆಹ್ವಾನಿಸಿದ ಮುನಿ ಪ್ರಭಾಚಂದ್ರ ಸಿದ್ಧಾಂತದೇವನ ಗೌರವಾರ್ಥ ನಿಲ್ಲಿಸಿದ ನಿಸಿಧಿಗಂಭದ ಶಿಖರಭಾಗದ ಎರಡು ನಿಕಟ ದೃಶ್ಯಗಳು. ಅವಳಿ ಮಾಚಿಕಬ್ಬೆ ಮಂಟಪಗಳೊಂದರಲ್ಲಿ ಇದು ಕಾಣಸಿಗುವುದು. ಈ ಬೆಟ್ಟದ ಮೇಲಿನ ಅತ್ಯಂತ ಅಲಂಕೃತ ನಿಸಿಧಿಗಂಬಗಳಲ್ಲಿ ಇದೂ ಒಂದು. ಈ ಮಂಟಪವು ಗಂಧವಾರಣ ಬಸ್ತಿಯ ಪಕ್ಕದಲ್ಲಿದೆ.

ಚಿತ್ರ xxiv :

ಜಿನನ ಸಮ್ಮುಖದಲ್ಲಿ ಪಂಡಿತವ್ರತವನ್ನು ಆಚರಿಸುತ್ತಿರುವ ಮಾಚಿಕಬ್ಬೆಯ ನಿಸಿಧಿಪಟ್ಟಿಕೆ. ಅವಳ ಇಬ್ಬದಿಗಳಲ್ಲಿ ಇಬ್ಬರು ಚಾಮರಧಾರಿಗಳಿರುವರು. ನಿಸಿಧಿಸ್ತಂಭದ ಶಿಖರ ಭಾಗದ ಒಂದು ಪಟ್ಟಿಕೆ ಇದಾಗಿದೆ. ಗಂಧವಾರಣ ಬಸ್ತಿಯ ಎರಡನೆಯ ಮಂಟಪದಲ್ಲಿ ಮಾಚಿಕಬ್ಬೆಯ ಗೌರವಾರ್ಥ ಈ ನಿಸಿಧಿಯನ್ನು ನಿಲ್ಲಿಸಲಾಯಿತು.

ಚಿತ್ರ xxv :

ಅದೇ ಸ್ತಂಭದ ಇನ್ನೊಂದು ಮಗ್ಗಲಿನಲ್ಲಿ ಶಿವಭಕ್ತನಾದ ಮಾಚಿಕಬ್ಬೆಯ ಪತಿ ಮಾರಸಿಂಗಮಯ್ಯನು ಜಿನನಿಗೆ ಪ್ರಾರ್ಥನೆ ಸಲ್ಲಿಸುತ್ತಿರುವ ಕುತೂಹಲಕರವಾದ ಚಿತ್ರವಿದೆ. ಈ ನಿಸಿಧಿ ಶಾಸನದಲ್ಲಿ "ಉನ್ನತ ಔದಾರ್ಯದಲ್ಲಿ, ಧರ್ಮನಿಷ್ಠೆಯಲ್ಲಿ, ಹರನ ಪಾದಪದ್ಮಗಳ

ಭಕ್ತಿಯಲ್ಲಿ, ಧಾರ್ಮಿಕ ಆಚರಣೆಗಳಲ್ಲಿ, ಪರಿಶುದ್ಧ ನಡತೆಯಲ್ಲಿ, ಪೆರ್ಗಡೆ ಮಾರಸಿಂಗ ವಿಭುವನ್ನು ಈ ಯುಗದಲ್ಲಿ ಯಾರಾದರೂ ಸರಿಗಟ್ಟಿಯಾರೆ?" ಎಂದು ಪ್ರಶ್ನಿಸಲಾಗಿದೆ. ಪೆರ್ಗಡೆ ಮಾರಸಿಂಹನ ಭಾವಚಿತ್ರವನ್ನು ಲಭ್ಯಗೊಳಿಸಲಾಗಿರುವುದಲ್ಲದೆ ಧಾರ್ಮಿಕ ಸಹಜೀವನದ ಉದಾತ್ತ ಉದಾಹರಣೆಯನ್ನು ನಮ್ಮ ಮುಂದೆ ತೆರದಿಡಲಾಗಿದೆ. ತಮ್ಮ ವೈಯಕ್ತಿಕ ವಿವೇಕವನ್ನು ಅನುಸರಿಸುತ್ತಲೇ, ಮಾರಸಿಂಹ-ಮಾಚಿಕಬ್ಬೆಯರು ಜೀವನದಲ್ಲಿ ಒಂದಾಗಿ ಬಾಳಿದರು; ಅಲ್ಲದೆ, ಮರಣದಲ್ಲೂ ಅನನ್ಯರಾಗಿ, ಧರ್ಮ ದುರಭಿಮಾನಿಗಳು ಮತ್ತು ವಿಚಾರಹೀನ ದೇವತಾಶಾಸ್ತ್ರಜ್ಞರು ಸೃಷ್ಟಿಸಿರುವ ಬೇರೆ ಬೇರೆ ಸ್ವರ್ಗಗಳನ್ನು ಇವರು ಒಂದುಗೂಡಿಸಿದರೆಂಬುದರಲ್ಲಿ ಸಂಶಯವಿಲ್ಲ.

ಚಿತ್ರ xxvi :

ಪ್ರಭಾಚಂದ್ರ ಸಿದ್ಧಾಂತದೇವನ ಗೌರವಾರ್ಥ ನಿರ್ಮಿಸಿದ ನಿಸಿಧಿಗಂಬದ ಎರಡು ಪಟ್ಟಿಕೆಗಳ ನಿಕಟಚಿತ್ರ.

ಚಿತ್ರ xxvii :

ಲಕ್ಷ್ಮೀಮತಿಯ ಸೋದರಿ ದೇಮತಿಯು ವ್ರತವನ್ನಾಚರಿಸುತ್ತಿರುವ ನಿಸಿಧಿಪಟ್ಟಿಕೆ. ಅಷ್ಟೇನೂ ಕಲಾತ್ಮಕವಾಗದ ಈ ಶಿಲ್ಪವು ಎರಡುಕಟ್ಟೆ ಬಸ್ತಿಯ ಬಲಕ್ಕಿರುವ ಮಂಟಪದಲ್ಲಿರುವ ನಿಸಿಧಿಗಂಬವನ್ನಲಂಕರಿಸಿದೆ. ಫೆಬ್ರವರಿ 1120 ರಲ್ಲಿ ದೇಮತಿ ಸಾವನ್ನು ಸ್ವಾಗತಿಸಿದಳು.

ಚಿತ್ರ xxviii :

ಸುಮಾರು 12 ನೆಯ ಶತಮಾನದಲ್ಲಿ ಮಡಿದ ಮುನಿ ಗೋಪಣಂದಿದೇವನ ನಿಸಿಧಿಪಟ್ಟಿಕೆ. ಈ ಸ್ತಂಭವು ಈಗ ಕತ್ತಲೆ ಬಸ್ತಿಯ ದ್ವಾರದಲ್ಲಿದೆ.

ಚಿತ್ರ xxix :

ಗಂಗರಾಜನ ಗುರು ಶುಭಚಂದ್ರಸಿದ್ಧಾಂತದೇವನ ಗೌರವಾರ್ಥ ಚಾವುಂಡರಾಯ ಬಸ್ತಿಯ ದಕ್ಷಿಣಕ್ಕಿರುವ ಮಂಟಪದಲ್ಲಿ ನಿರ್ಮಿಸಲಾದ ನಿಸಿಧಿಗಂಬದ ಪಟ್ಟಿಕೆ. ಈ ಪಟ್ಟಿಕೆಯನ್ನು ಬಹುಶಃ 'ಬಿರುದರೂವಾರಿ ಮುಖತಿಲಕ' ವರ್ಧಮಾನಾಚಾರಿಯು ಕಡೆದಿರ ಬೇಕೆಂದು ಊಹಿಸಬಹುದು.

ಚಿತ್ರ xxx :

ಚಿಕ್ಕಬೆಟ್ಟಕ್ಕೆ ಸಂದರ್ಶನವಿತ್ತ ಪರಿವ್ರಾಜಕ ದಿಗಂಬರ ಮುನಿ. ಅವರೊಂದಿಗೆ ಕೂರ್ಚರು ಮತ್ತು ಕೆಲವು ಶ್ರಾವಕಾನುಯಾಯಿಗಳಿರುವರು.

ಚಿತ್ರ xxxi :

ಸೂರ್ಯಾಸ್ತ ಸಮಯದಲ್ಲಿ ದೊಡ್ಡಬೆಟ್ಟದಿಂದ ಸುಮಾರು 8 ಕಿ.ಮೀ. ದೂರದಿಂದ ಸೆರೆಹಿಡಿದ ದೃಶ್ಯ.

ಚಿತ್ರ xxxii :

ಚಿಕ್ಕಬೆಟ್ಟದಿಂದ ಕಾಣುವ ದೊಡ್ಡಬೆಟ್ಟದ ವಿಹಂಗಮ ದೃಶ್ಯ. ದೊಡ್ಡಬೆಟ್ಟದ ಶಿಖರದ ಸಮತಲ ಭಾಗವು ಚಿಕ್ಕಬೆಟ್ಟದ ಮುಂಭಾಗವನ್ನು ಕೂಡಿಕೊಂಡಿದ್ದು ಕೊಳ್ಳವನ್ನು ಪೂರ್ತಿ ಮರೆಮಾಚಿದೆ. ತುತ್ತತುದಿಯಲ್ಲಿರುವ ಗೊಮ್ಮಟ ಮಹಾವಿಗ್ರಹವು ಒಳ-ಹೊರಗಿನ ಆವರಣಗಳಿಂದ ಸುತ್ತುವರಿಯಲ್ಪಟ್ಟಿದೆ. ಮಧ್ಯದಲ್ಲಿರುವ ಸೋಪಾನ ಪಂಕ್ತಿಯು ತ್ಯಾಗದ ಮಂಟಪ ಮತ್ತು ಅಖಂಡ ಬಾಗಿಲನ್ನು ಬೆಸೆಸಿದೆ. ಎಡಕ್ಕೆ ಒದೆಗಲ್ ಬಸ್ತಿ, ಬಲತುದಿಗೆ ಚನ್ನಣ್ಣ ಬಸ್ತಿಗಳಿವೆ.

ಈ ಬೆಟ್ಟವು ಒಂದೇ ಹೆಬ್ಬಂಡೆಯಿಂದ ನಿರ್ಮಿತವಾಗಿದ್ದು ಅದರ ಹೆಗಲ ಮೇಲೆ ಚಿಕ್ಕ ದೊಡ್ಡ ಬಂಡೆಗಳು ಹರಡಿಕೊಂಡಿವೆ. ಇಂದು ವಿಂಧ್ಯಗಿರಿಯೆಂದು ಜನಪ್ರಿಯವಾಗಿರುವ ಈ ಬೆಟ್ಟವನ್ನು 8ನೆಯ ಶತಮಾನದಲ್ಲಿ 'ಪೆರ್ಗ್ಗಳ್ವಪ್ಪು' ಎಂದು ಉಲ್ಲೇಖಿಸಲಾಗುತ್ತಿತ್ತು. ಆದರೆ, 10ನೆಯ ಶತಮಾನದ ಅಂತ್ಯದವರೆಗೂ ಚಿಕ್ಕಬೆಟ್ಟವೇ ಇಲ್ಲಿಯ ಕೇಂದ್ರ ಆಕರ್ಷಣೆಯಾಗಿದ್ದುದರಿಂದ, ಈ ಬೆಟ್ಟಕ್ಕೆ ಹೆಚ್ಚಿನ ಪ್ರಾಧ್ಯಾನ್ಯತೆ ದೊರೆತಿರಲಿಲ್ಲ. ಸಮುದ್ರ ಪಾತಳಿಯಿಂದ ಸುಮಾರು 3298 ' ಮತ್ತು ನೆಲಮಟ್ಟದಿಂದ ಸುಮಾರು 438' ಎತ್ತರವಿರುವ ಈ ಬೆಟ್ಟವನ್ನು ಎಂಟು ಚಿಕ್ಕ-ದೊಡ್ಡ ದೇವಾಲಯ, ನಾಲ್ಕು ಮಂಟಪ, ಎರಡು ಕೊಳ, ಐದು ಪ್ರವೇಶದ್ವಾರ, ಮೂರು ದೊಡ್ಡ ಸ್ತಂಭ, ಎರಡು ತೋರಣಗಳಲ್ಲದೆ ಸುಮಾರು 172 ಶಾಸನಗಳು ಹಂಚಿಕೊಂಡಿವೆ.

ಚಿತ್ರ xxxiii :

58' 8"ಎತ್ತರವಿರುವ ಈ ಮಹಾವಿಗ್ರಹವನ್ನು ಶ್ವೇತಕಣಶಿಲೆಯಲ್ಲಿ ಹುಟ್ಟುಬಂಡೆಯನ್ನು ಕೊರೆದು ರೂಪಿಸಲಾಗಿದೆ. ಗಂಗ ಅರಸ ರಾಚಮಲ್ಲನ ಮಂತ್ರಿ ಚಾವುಂಡರಾಯನು ಇದನ್ನು ಪ್ರಾಯಶಃ 980 ರಲ್ಲಿ ಪ್ರತಿಷ್ಠಾಪಿಸಿದನು.

ಆದಿನಾಥ ತೀರ್ಥಂಕರನ ಪುತ್ರ ಬಾಹುಬಲಿಯ ಸ್ಥಳೀಯ ಹೆಸರು ಗೊಮ್ಮಟ. ಬಾಹುಬಲಿಯ ತೀರ್ಥಂಕರನಲ್ಲ, ಕೇವಲಿ ಮಾತ್ರ. ಅವನು ಅನುಸರಿಸಿದ ಕಠೋರ ದೇಹದಂಡನೆ ಮತ್ತು ಮಾಡಿದ ಮಹಾತ್ಯಾಗಗಳಿಂದ ಪ್ರಭಾವಿತನಾದ ಚಾವುಂಡರಾಯನು ಈ ಕೇಂದ್ರದಲ್ಲಿ ಬಾಹುಬಲಿಯ ಮಹಾವಿಗ್ರಹವನ್ನು ನಿರ್ಮಿಸಲು ಇಷ್ಟಪಟ್ಟನೆಂದು ತೋರುವುದು.

ಈ ಮಹಾವಿಗ್ರಹದ ಮುಂಭಾಗದಲ್ಲಿರುವ ದಿಗಂಬರ ಮುನಿ, ಭಟ್ಟಾರಕರು ಹಾಗೂ ಕೂರ್ಚರು, ವಿರಕ್ತಿ ಮತ್ತು ಸಾಧನೆಗಳ ವಿವಿಧ ಹಂತಗಳನ್ನು ಸಂಕೇತಿಸುವಂತಿರುವರು.

ಚಿತ್ರ xxxiv :

ಗೊಮ್ಮಟನು ಭದ್ರವಾದ ಸಮಪದದಲ್ಲಿರುವ; ಅವನ ದೇಹವು ಕಾಯೋತ್ಸರ್ಗ ಧ್ಯಾನಭಂಗಿಯಲ್ಲಿದೆ. ತನ್ನನ್ನು ಸುತ್ತುವರಿದ ಹುತ್ತಗಳು, ದೇಹವನ್ನು ಬಂಧಿಸಿದ ಬಳ್ಳಿಗಳು, ಹಾಗೂ ಅವನನ್ನು ಬಳಸಿ ಹರಿದಾಡುತ್ತಿರುವ ಸರ್ಪಗಳ ಪರಿವೆಯಿಲ್ಲದೆ, ಅವನು ಏಕಾಗ್ರಚಿತ್ರನಾಗಿ ನಿಂತಿರುವನು. ಪಂಡಿತಮರಣದಲ್ಲಿ ಅಡಕವಾಗಿರುವ ಕಠೋರತಮ

ವ್ರತವಿಧಿಯಾದ ಪೌಗ್ಗಮಣ ತಪಸ್ಸನ್ನು ಅವನು ಆಚರಿಸುತ್ತಿರುವನು. ಪಾದಗಳು 8' ಉದ್ದ ಮತ್ತು 2' 8"ದಪ್ಪ ಇವೆ.

ಚಿತ್ರ XXXV :

ದೊಡ್ಡಬೆಟ್ಟದ ತ್ಯಾಗದ ಮಂಟಪದಲ್ಲಿರುವ ತ್ಯಾಗದಬ್ರಹ್ಮದೇವಸ್ತಂಭ. ಸುಮಾರು 983 ರಲ್ಲಿ ಚಾವುಂಡರಾಯನಾಗಲಿ ಅವನ ಗೌರವಾರ್ಥ ಬೇರೆಯವರಾಗಲಿ ನಿರ್ಮಿಸಿದ ಸುಮಾರು 11' ಎತ್ತರದ ಅಲಂಕೃತ ಸ್ತಂಭಕ್ಕೆ ಈ ಮಂಟಪ ಎಡೆ ನೀಡಿದೆ. 'ಚಾಗ' ಎಂದರೆ ತ್ಯಜಿಸುವುದು, ತನ್ನಲ್ಲಿರುವುದನ್ನೆಲ್ಲ ಉದಾರವಾಗಿ ಹಂಚಿಕೊಳ್ಳುವುದು ಎಂದರ್ಥ.

ಚಿತ್ರ XXXVi :

ತ್ಯಾಗದ ಕಂಬದ ಪೀಠಭಾಗದ ಪಟ್ಟಿಕೆಯಲ್ಲಿ ಗುರುವಿನೊಂದಿಗೆ ಸಮಾಲೋಚನೆಯಲ್ಲಿ ತೊಡಗಿರುವ ಚಾವುಂಡರಾಯನ ಭಾವಚಿತ್ರ. ಅವನ ಜೊತೆ ಅವನ ರಾಣಿಯಿದ್ದು ಅವರ ಹಿಂಬದಿಯಲ್ಲಿ ಚೌರಿಧಾರಿಯರಿರುವರು. ವ್ರತಾಚರಣೆ ಕೈಗೊಂಡು, ಜೀವನವನ್ನು ಅಂತ್ಯಗೊಳಿಸಲೋಸುಗ ಸನ್ಯಾಸದೀಕ್ಷೆ ಪಡೆಯಬಯಸಿದ ಚಾವುಂಡರಾಯನ ಚಿತ್ರವನ್ನು ಸೂಚಿಸುವಂತಿದೆ.

ಚಿತ್ರ XXXVii :

ಬಾಹುಬಲಿಗೆ ಪಂಚಕಲ್ಯಾಣ ಪೂಜೆ. ಭಾನುಚಂದ್ರಸಿದ್ಧಾಂತಚಕ್ರವರ್ತಿಯ ನಾಯಕತ್ವದಲ್ಲಿ ಶ್ರಮಣ ಕಂತಿಯರ 28 ತಂಡಗಳು ಫೆಬ್ರುವರಿ 14, 1118 ರಂದು ಆಚರಿಸಿದ ಈ ಉತ್ಸವವು ಪ್ರಥಮ ಶಾಸನಿತ ಘಟನೆಯಾಗಿದೆ. ಇಬ್ಬದಿಗಳಲ್ಲಿ ಶ್ರಮಣರು ಮತ್ತು ಕಂತಿಯರಿರುವರು, ಕುಳಿತ ಭಂಗಿಯಲ್ಲಿ ಬಾಹುಬಲಿಯ ಉಬ್ಬುಚಿತ್ರವನ್ನು ತೋರಿಸಲಾಗಿದೆ. ದೊಡ್ಡಬೆಟ್ಟದ ಮೇಲಿರುವ ಅಖಂಡ ಬಾಗಿಲಿನ ದಕ್ಷಿಣಕ್ಕಿರುವ ಬಂಡೆಯ ಮೇಲೆ ಇದನ್ನು ಕೆತ್ತಲಾಗಿದೆ.

ಚಿತ್ರ XXXViii :

ಜನವರಿ 1398 ರಲ್ಲಿ ಮರಣವನ್ನು ಆಹ್ವಾನಿಸಿದ ಪಂಡಿತರಾಯಯತಿಯ ಗೌರವಾರ್ಥ ನಿಲ್ಲಿಸಿದ ನಿಸಿಧಿಗಂಭದ ಶಿಖರಭಾಗ. ಈಗ ಸಿದ್ಧರ ಬಸ್ತಿಯ ಮುಖ ಮಂಟಪದಲ್ಲಿರುವ ಈ ನಿಸಿಧಿಯ ಪಾಠವನ್ನು ಕವಿ ಅರ್ಹದ್ದಾಸನು ರಚಿಸಿದನು.

ಚಿತ್ರ XXXiX :

ಜುಲೈ 1432 ರಲ್ಲಿ ಶೃತಮುನಿಯ ಗೌರವಾರ್ಥ ನಿಲ್ಲಿಸಿದ ನಿಸಿಧಿಗಂಬದ ಶಿಖರಭಾಗ. ಸಿದ್ಧರ ಬಸ್ತಿಯ ಮುಖ ಮಂಟಪದಲ್ಲಿ ಸ್ಥಾಪಿಸಲಾದ ಈ ದೀರ್ಘ ಶಾಸನ ಪಾಠವನ್ನು ಪ್ರಖ್ಯಾತ ಕನ್ನಡ ಕವಿ ಮಂಗರಾಜನು ರಚಿಸಿದನು. ಮಹಾ ನಿಸಿಧಿಸ್ತಂಬಗಳಲ್ಲಿಯೆ ಕೊನೆಯದಾದ ಈ ಸ್ಮಾರಕವು ತನ್ನ ಶಾಸನ ಕಾವ್ಯದಿಂದಲ್ಲದೆ ಕುಂಭಕಲಾ ಕೌಶಲ್ಯದಿಂದಲೂ ಪ್ರಸಿದ್ಧಿಪಡೆದಿದೆ.

ಚಿತ್ರ xl :

ಶ್ರವಣಬೆಳ್ಗೊಳದ ಬಂಡೆಗಲ್ಲ ನಿಸಿಧಿಗಳಲ್ಲಿಯೆ ಅತ್ಯಂತ ವಿಶದವಾದ ಸಿದ್ಧರಗುಂಡು ಅಖಂಡ ಬಾಗಿಲಿನ ಬಳಿ ಸ್ಥಿತಗೊಂಡಿದೆ. ಈ ಬಂಡೆಯ ಮೇಲೆ ಸುಮಾರು ಆರೇಳು ನಿಸಿಧಿಗಳನ್ನು ಕಡೆಯಲಾಗಿದೆ. ಅವುಗಳಲ್ಲಿ ಕೆಲವನ್ನು ಶಾಸನದ ಮೂಲಕ ಗುರುತಿಸಲಾಗಿದ್ದರೆ ಇನ್ನು ಕೆಲವು ಅನಾಮಧೇಯವಾಗಿ ಉಳಿದಿವೆ.

ಚಿತ್ರ xli :

ಅದೇ ಬಂಡೆಯ ಮೇಲಿನ ನಿಸಿಧಿ ಸ್ಮಾರಕಗಳಲ್ಲೊಂದರ ನಿಕಟ ಚಿತ್ರ.

ಚಿತ್ರ xlii :

ಅದೇ ಬಂಡೆಯ ಮೇಲಿನ ಮತ್ತೊಂದು ನಿಸಿಧಿ ಸ್ಮಾರಕದ ಚಿತ್ರ.

ಚಿತ್ರ xliii :

14ನೆಯ ಶತಮಾನದಲ್ಲಿ ಮರಣವನ್ನು ಆಹ್ವಾನಿಸಿದ ಮುನಿ ಮಲ್ಲಿಷೇಣನ ಗೌರವಾರ್ಥ ಕೆತ್ತಿದ ಬಂಡೆಗಲ್ಲ ನಿಸಿಧಿ. ಇದು ಚಿಕ್ಕಬೆಟ್ಟದ ಮೇಲಿರುವ ಭದ್ರಬಾಹುಗುಹೆಯ ಬಳಿ ಇದೆ. ಅದನ್ನು ದೊಡ್ಡಬೆಟ್ಟದ ಮೇಲಿರುವ ಸಿದ್ಧರಗುಂಡಿನ ಮೇಲಿನ ನಿಸಿಧಿಗಳೊಂದಿಗೆ ಹೋಲಿಸಿ ನೋಡಬಹುದು.

ಚಿತ್ರ xliv :

ತೋಟಗಳಿಂದ ಸುತ್ತುವರಿದ ಶ್ರವಣಬೆಳ್ಗೊಳ ಪಟ್ಟಣ. ಪಟ್ಟಣದ ಅತಿ ದೊಡ್ಡ ಕಲ್ಯಾಣಿಯು ಹಿನ್ನೆಲೆಯಲ್ಲಿ ಕಾಣುವುದು.

ಚಿತ್ರ xlv :

ಪಟ್ಟಣದ ಕಲ್ಯಾಣಿ ಅಥವಾ ದೊಡ್ಡಹೊಂಡ. ಸ್ಥಳೀಯ ವೃತ್ತಾಂತಗಳು ಇದನ್ನು 'ಬೆಳ್'(ಬಿಳಿ) 'ಕೊಳ'ಎಂದು ಗುರುತಿಸುತ್ತವೆ; ಆದರೆ, ಇದರ ದಾಖಲಿತ ಇತಿಹಾಸ 17ನೆಯ ಶತಮಾನದಿಂದ ಮಾತ್ರ ಆರಂಭವಾಗುವುದು. ಮೈಸೂರಿನ ಚಿಕ್ಕದೇವರಾಯ ಒಡೆಯರ ಟಂಕಾಧಿಕಾರಿಯಾಗಿದ್ದ ಅಣ್ಣಯ್ಯನು ಇದನ್ನು 1672-1704 ಕಾಲಾವಧಿಯಲ್ಲಿ ನಿರ್ಮಾಣಮಾಡಿದನು. ಅದು ಚಿಕ್ಕಬೆಟ್ಟವನ್ನು ದೊಡ್ಡ ಬೆಟ್ಟದೊಂದಿಗೆ ಜೋಡಿಸುವಷ್ಟು ವಿಶಾಲವಾಗಿದೆ.

ಚಿತ್ರ xlvi :

ಮಂದಾರ-ಬಲಿಪೀಠಗಳು. ಇವುಗಳಲ್ಲಿ ದೊಡ್ಡದು ಅತ್ಯಂತ ಸುಂದರವಾದ ಮಂದರ ಸ್ಮಾರಕ, ಇದು ತೇರಿನ ಬಸದಿಯ ಎದುರಿಗಿದೆ. ಪೊಯ್ಸಳ ಮತ್ತು ನೇಮಿಸೆಟ್ಟಿಯರ ಮಾತೆಯರಾದ ಮಾಚಿಕಬ್ಬೆ ಮತ್ತು ಶಾಂತಿಕಬ್ಬೆಯರ ಸ್ಮರಣಾರ್ಥ ಇದನ್ನು ನಿರ್ಮಿಸಲಾದುದನ್ನು ಶಾಸನಾಧಾರದಿಂದ ತಿಳಿಯಬಹುದು. ಮತ್ತೊಂದು ಬಲಿಪೀಠವು ನೈವೇದ್ಯ ವಿತರಣೆಯ ವೇದಿಕೆಯಾಗಿದೆ.

ಚಿತ್ರ xlvii :

ದೇವಾಲಯಗಳಲ್ಲಿ ಪ್ರತಿಷ್ಠಾಪಿಸಲಾದ ಮಂದಾರಗಳ ಸೂಕ್ಷ್ಮ ಮಾದರಿಗಳ ಎರಡು ಉದಾಹರಣೆಗಳು. ಒಂದು (ಎಡಕ್ಕಿರುವುದು) ದೊಡ್ಡ ಬೆಟ್ಟದ ಮೇಲಿನ ಗೊಮ್ಮಟ ಸುತ್ತಾಲಯದಲ್ಲಿದೆ. ಇನ್ನೊಂದು (ಬಲಕ್ಕಿರುವ)ಪಟ್ಟಣದಲ್ಲಿರುವ ಭಂಡಾರ ಬಸ್ತಿಯಲ್ಲಿದೆ.


ಚಿತ್ರ xlviii :

ವಿಗ್ರಹ ರೂಪದ ನಿಸಿಧಿ ಸ್ಮಾರಕ. ಅದರಲ್ಲಿ ಗೌರವಿಸಲಾದವನನ್ನು ಯಕ್ಷಿಯು ಆಶೀರ್ವದಿಸುತ್ತಿರುವಳು. ನೇಮಿಸೆಟ್ಟಿಯರ ಮಗ ಬಸವಣ್ಣನ ಸ್ಮರಣಾರ್ಥ ಇದನ್ನು ಸ್ಥಾಪಿಸಲಾಯಿತೆಂದು ಶಾಸನವೊಂದು ಹೇಳುವುದು. ಅದು ದೊಡ್ಡ ಬೆಟ್ಟದ ಮೇಲಿನ ಗೊಮ್ಮಟ ಸುತ್ತಾಲಯದಲ್ಲಿದೆ.


ಚಿತ್ರ xlix :

ಜಿನನಾಥಪುರದಲ್ಲಿರುವ ಶಿಲಾಕೂಟ ನಿಸಿಧಿ. ಮೃತರ ಅಂತ್ಯಕ್ರಿಯೆಗಳನ್ನು ನೆರವೇರಿಸಿದ ಸ್ಥಳವನ್ನು ಅದು ಬಹುಶಃ ಸೂಚಿಸುವುದು.


ಚಿತ್ರಗಳು




i ಶ್ರವಣಬೆಳ್ಗೊಳದಲ್ಲಿ ಈಗ ಚಂದ್ರಗಿರಿ ಎಂದು ಕರೆಯಲ್ಪಡುವ ಚಿಕ್ಕಬೆಟ್ಟ




ii ಚಿಕ್ಕಬೆಟ್ಟದ ಶಿಖರಾಗ್ರಕ್ಕೆ ಕೊಂಡೊಯ್ಯುವ ಸೋಪಾನಮಾರ್ಗ




iii ಕಟವಪ್ರದ ಶಿಖರಾಗ್ರದಲ್ಲಿ ಕಾಯಕ್ಲೇಶಕ್ಕೊಳಗಾಗುತ್ತಾ ಒರಗಿ ನಿಂತಿರುವ ಹೆಬ್ಬಂಡೆ



iv ಚಿಕ್ಕಬೆಟ್ಟದ ಶಿಖರಾಗ್ರ ಮತ್ತು ಆದರಾಚೆಯ ಕೊಳ್ಳಪ್ರದೇಶ




V ಚಿಕ್ಕಬೆಟ್ಟದ ನೆತ್ತಿಯ ಮೇಲಿರುವ ಹದಿಮೂರು ಬಸದಿಗಳು, ಏಳು ನಿಸಿಧಿಮಂಟಪಗಳು
ಹಾಗೂ ಎರಡು ನಿರಾಲಂಬ ಸ್ತಂಭಗಳ ಗುಚ್ಛ



vi ಹನ್ನೆರಡನೆಯ ಶತಮಾನದಲ್ಲಿ ಹೊಯ್ಸಳರು ನಿರ್ಮಾಣಮಾಡಿದ ದ್ರಾವಿಡ ಶೈಲಿಯ
ಸರಳ ದೇವಾಲಯಗಳ ಸಂಕೀರ್ಣ



vii ಚಿಕ್ಕಬೆಟ್ಟದ ಪೂರ್ವ ಭಾಗದಲ್ಲಿರುವ ಹಾಸುಬಂಡೆ ಮತ್ತು ದುಂಡುಬಂಡೆಗಳ ಸರಮಾಲೆ




viii ಭದ್ರಬಾಹು ಗುಹೆಯ ನಿಕಟ ದೃಶ್ಯ



ix ನೂರಾರು ಮೈಲು ದಾರಿ ತುಳಿದು ಇಂದಿಗೂ ಬೆಟ್ಟಕ್ಕೆ ಬರುವ ದಿಗಂಬರ ಮುನಿಮಾನ್ಯರು



X ಚಿಕ್ಕಬೆಟ್ಟದ ಹಾಸುಬಂಡೆಯ ಮೇಲೆ ಕೊರೆದ ಶಾಸನಗಳಲೊಂದು



xi ಈ ಕೇಂದ್ರದ ಅತ್ಯಂತ ಕಲಾತ್ಮಕವೆನಿಸಿದ ಚಾವುಂಡರಾಯ ಬಸದಿ




xii ಚಾವುಂಡರಾಯ ಬಸದಿಯ ಪ್ರಾಗಾರವನ್ನು ಅಲಂಕರಿಸಿರುವ ಸಮಾಧಿಸನ್ನದ್ಧನೊಬ್ಬನ ಉಬ್ಬುಶಿಲ್ಪ




xiii ತೀರ್ಥಂಕರನ ಇಲ್ಲವೆ ಮುಕ್ತಿಮಾರ್ಗದರ್ಶಕನಿಗೆ ಪ್ರಾರ್ಥನೆ ಸಲ್ಲಿಸುತ್ತಿರುವ ಶ್ರಾವಕಿಯ
ಉಬ್ಬುಶಿಲ್ಪ ಚಾವುಂಡರಾಯ ಬಸದಿಯ ಪಾಗಾರ



xiv ಚಿಕ್ಕಬೆಟ್ಟದ ಮೇಲಿನ ಅತ್ಯಂತ ಪುರಾತನ ನಿಸಿಧಿ ಮಂಟಪ



XV. ಚಿಕ್ಕಬೆಟ್ಟದ ಭದ್ರಬಾಹು ಬಂಡೆಯ ಶಾಸನವನ್ನು ಬಳಸಿ ನಿಂತಿರುವ ಶಿಲಾಪರಿಸೂತ್ರ




xvi ಚಿಕ್ಕಬೆಟ್ಟದ ಪ್ರಾಕಾರದ ದಕ್ಷಿಣದ್ವಾರದ ಬಂಡೆಶಾಸನವನ್ನು ಬಳಸಿ ನಿಂತಿರುವ ಶಿಲಾಪರಿಸೂತ್ರ



xvii ಆ.ಆ. ಮರಣವನ್ನು ಆಹ್ವಾನಿಸಿದವರ ಗೌರವಾರ್ಥ ಚಿಕ್ಕಬೆಟ್ಟದ ಹಾಸುಬಂಡೆಯ ಮೇಲೆ ಮೂಡಿಸಿದ ಪಾದಚಿಹ್ನೆಗಳು



xviii ಅ.ಆ. ಮರಣವನ್ನು ಆಹ್ವಾನಿಸಿದವರ ಗೌರವಾರ್ಥ ಚಿಕ್ಕಬೆಟ್ಟದ ಹಾಸುಬಂಡೆಯ
ಮೇಲೆ ಮೂಡಿಸಿದ ಪಾದಚಿಹ್ನೆಗಳು




xix ಮಧ್ಯಯುಗದಲ್ಲಿ ಸ್ಥಾಪಿಸಲಾಗುತ್ತಿದ್ದ ನಿಸಿಧಿ ಸ್ತಂಭಗಳ ಒಂದು ಪರಿಪೂರ್ಣ ಮಾದರಿ



xx ನಿಸಿಧಿಸ್ತಂಭ (xviii ನೋಡಿ) ಅಗ್ರಭಾಗವನ್ನು ಅಲಂಕರಿಸಿರುವ ಉಬ್ಬುಶಿಲ್ಪದ ಪಟ್ಟಿಕೆಯ ನಿಕಟದೃಶ್ಯ



xxi ದಕ್ಷಿಣ ಪಶ್ಚಿಮ ದಿಕ್ಕಿನಿಂದ ಕಾಣುವ ಮಹಾನವಮಿ ಮಂಟಪದ ದೃಶ್ಯ



xxii ಶ್ರೀನಯಕೀರ್ತಿದೇವರ ನಿಸಿಧಿಸ್ತಂಭದ ಶಿಖಾರಾಗ್ರದಲ್ಲಿಯ ಉಬ್ಬುಶಿಲ್ಪ



xxiii ಮುನಿ ಪ್ರಭಾಚಂದ್ರದೇವನ ನಿಸಿಧಿ ಸ್ತಂಭದ ಮೇಲಂಚಿನಲ್ಲಿಯ ಉಬ್ಬುಶಿಲ್ಪ



xxvi ಜಿನನಿಗೆ ಪ್ರಾರ್ಥನೆ ಸಲ್ಲಿಸುತ್ತಿರುವ ಮಾಚಿಕಬ್ಬೆಯ ಪತಿ ಮಾರಸಿಂಗಮಯ್ಯನ ಉಬ್ಬುಶಿಲ್ಪ



xxvii ಪ್ರಭಾಚಂದ್ರ ಸಿದ್ಧಾಂತದೇವರ ನಿಸಿಧಿಸ್ತಂಭಾಗ್ರದಲ್ಲಿಯ ಎರಡು ಸ್ಪಷ್ಟ ದೃಶ್ಯಗಳು




xxviii ದೀಕ್ಷಾಕ್ರಿಯೆಯನ್ನು ಪೂರೈಸುತ್ತಿರುವ ಲಕ್ಷ್ಮೀಮತಿಯ ಸೋದರಿ ದೇಮತಿ



xxix ಮುನಿಗೋಪಣಂದಿದೇವನ ಗೌರವಾರ್ಥ ಪನ್ನೆರಡನೆಯ ಶತಮಾನದಲ್ಲಿ ನೆಡಲಾದ ನಿಸಿಧಿಯ ಒಂದು ದೃಶ್ಯ




XXX ಚಾವುಂಡರಾಯ ಬಸದಿಯ ದಕ್ಷಿಣ ದಿಕ್ಕಿನ ಮಂಟಪದಲ್ಲಿ ಗಂಗರಾಜನ ಗುರು ಶುಭಚಂದ್ರಸಿದ್ಧಾಂತದೇವನ ಗೌರವಾರ್ಥ ಸ್ಥಾಪಿಸಲಾದ ನಿಸಿಧಿ ಸ್ತಂಭಾಗ್ರದ ಉಬ್ಬುಶಿಲ್ಪ




xxxi ಅನಿಯತವಾಸಿಯಾದ ದಿಗಂಬರಮುನಿಯು ಚಿಕ್ಕಬೆಟ್ಟಕ್ಕೆ ಗೌರವ ಸಲ್ಲಿಸಲು
ಬಂದಾಗ ಅವರನ್ನು ಹಿಂಬಾಲಿಸಿರುವ ಕೂರ್ಚರು ಹಾಗೂ ಶ್ರಾವಕರು





xxxiii ಚಿಕ್ಕಬೆಟ್ಟದಿಂದ ಕಾಣುವ ದೊಡ್ಡಬೆಟ್ಟದ ವಿಹಂಗಮ ದೃಶ್ಯ



xxxiv ಹುಟ್ಟುಹೆಬ್ಬಂಡೆಯನ್ನು ಕೊರೆದು ಮಾಡಿದ ೫೮'. ೮' ಎತ್ತರದ
ಬಿಳಿಕಣ ಶಿಲೆಯ ಗೊಮ್ಮಟ ಮಹಾವಿಗ್ರಹ



XXXV ಕಾಯೋತ್ಸರ್ಗದಲ್ಲಿ ಧ್ಯಾನಾಸಕ್ತನಾಗಿ ನಿಂತಿರುವ ಗೊಮ್ಮಟನ ಪಾದದ್ವಯಗಳು



xxxvi ದೊಡ್ಡಬೆಟ್ಟದ ಮೇಲಿರುವ ತ್ಯಾಗದ ಮಂಟಪದ ಸ್ತಂಭ



xxxvii ತ್ಯಾಗದ ಮಂಟಪದಲ್ಲಿರುವ ಸ್ತಂಭದ ಪೀಠಭಾಗದಲ್ಲಿ ಮೂಡಿಸಿರುವ ಉಬ್ಬುಶಿಲ್ಪ






xxxix ಸಾವನ್ನು ಆಹ್ವಾನಿಸಿದ ಪಂಡಿತಾರ್ಯಮುನಿಯ ಗೌರಾವಾರ್ಥ ಜನವರಿ ೧೩೯೮ ರಲ್ಲಿ ಪ್ರತಿಷ್ಠಾಪಿಸಲಾದ ನಿಸಿಧಿಸ್ತಂಭದ ಉಬ್ಬುಶಿಲ್ಪ



xl ಸಾವನ್ನು ಆಹ್ವಾನಿಸಿದ ಶೃತಮುನಿಯ ಗೌರವಾರ್ಥ ಜುಲೈ ೧೪೩೨ರಲ್ಲಿ ನೆಟ್ಟ ನಿಸಿಧಿಸ್ತಂಭಾಗದಲ್ಲಿಯ ಉಬ್ಬುಶಿಲ




xli ಶ್ರವಣ ಬೆಳ್ಗೊಳದಲ್ಲಿಯೇ ಸವಿಸ್ತಾರವಾದ ಗುಂಡುಗಲ್ಲ ನಿಸಿಧಿಯಾದ ಅಖಂಡ ಬಾಗಿಲ ಬಳಿಯ ಸಿದ್ಧರಗುಂಡು



xlii ಸಿದ್ಧರಗುಂಡಿನ ಮೇಲಿನ ಒಂದು ಉಬ್ಬುಶಿಲ್ಪ




xliii ಸಿದ್ಧರಗುಂಡಿನ ಮೇಲೆ ಕೊರೆದ ಮತ್ತೊಂದು ಉಬ್ಬುಶಿಲ್ಪ



xliv ಸಾವನ್ನು ಆಹ್ವಾನಿಸಿದ ಮಲ್ಲಿಷೇಣಮುನಿಯ ೧೪ನೆಯ ಶತಮಾನದ
ಗುಂಡುಗಲ್ಲು ನಿಸಿಧಿ




xlv ಶ್ರವಣಬೆಳ್ಗೊಳ ಪಟ್ಟಣದಲ್ಲಿಯ ಒಂದು ತೋಟಪಟ್ಟಿ

xlviii ದೇವಾಲಯಗಳಲ್ಲಿ ರಕ್ಷಿಸಿಡಲಾದ ಎರಡು ಮಂದರ ಮಾದರಿ



xlix ಮೂರ್ತಿ ಸ್ವರೂಪದ ನಿಸಿಧಿಸ್ಮಾರಕ. ಯಕ್ಷಿಯ ಅನುಗ್ರಹ
ಪಡೆಯುತ್ತಿರುವ ಮರಣಾರ್ಥಿ



1 ಜಿನನಾಥಪುರದ ಅಜ್ಞಾತ ವ್ಯಕ್ತಿಯ ಶಿಲಾಕೂಟ ಸ್ಮಾರಕ

ಆಚಾಯಸಿವಯಸಿನು, 62
ಆಚಾರ, 108
ಆಚಾರಾಂಗಸೂತ್ರ, 120, 124, 126
ಆಚಿಯಕ್ಕ, 57, 187, 188
ಆತ್ಮಸಾಕ್ಷಾತ್ಕಾರಾಮೃತ, 137
ಆತ್ಮಪತ್ಯೆ, 138
ಆತ್ಮಾಸ್ಸೋ, 124
ಆದಿನಾಥ, 210
ಆದಿನಾಥ ಬಸದಿ, 171
ಆದಿನಾಥನ ಸಿಗ್ರಹ, 230
ಆದಿಪುರಾಣ, 108
ಆದಿಶೇಷ, 44
ಆಧಾರಸ್ತಂಭ, 59
ಆಧೀಶ್ವರ, 80
ಆಧೀಶ್ವರ ಬಸದಿ, 83
ಆಧುನಿಕ ಶ್ರೇಯಾಂಸು, 149
ಆಧ್ಯಾತ್ಮಿ ಬಾಳಚಂದ್ರದೇವ, 181
ಆಧ್ಯಾತ್ಮಿ ಶುಭಚಂದ್ರ, 170
ಆಧ್ಯಾತ್ಮಿ ಶುಭಚಂದ್ರದೇವ, 93, 169
ಆಧ್ಯಾತ್ಮಿಕ ಕಠೋರತೆ, 93
ಆಧ್ಯಾತ್ಮಿಕ ಅನ್ವೇಷಣೆ, 93
ಆನೆಗೊಂದಿ, 75
ಆಯತವಮಸಿ, 117, 119
ಆರನೆಯ ಚಾಳುಕ್ಯಸಿಕ್ರಮಾದಿತ್ಯ, 53
ಆರಾಧನಾಕಲಕ, 108
ಆರಾಧನಾಗ್ರಂಥ, 107, 109, 206, 210, 213, 231
ಆರಾಧನಾ, 98, 99, 100, 101, 105, 107, 108, 110, 111, 114, 117, 119,121, 122, 159, 203
ಆರಾಧನಾ ದೀಕ್ಷೆ, 225
ಆರಾಧನಾ ಪಠಣ, 109
ಆರಾಧನಾ ಪೀಠ, 222, 224
ಆರಾಧನಾ ಮರಣ, 109
ಆರಾಧನಾ ಮಾಲ, 108
ಆರಾಧನಾ ಯೋಗ, 106, 109, 137
ಆರಾಧನಾಸಿಧಿ, 199
ಆರಾಧನಾ ವ್ಯಾಖ್ಯಾನ, 218, 107, 213
ಆರಾಧನಾವ್ರತ, 22, 110, 137, 165, 194, 223
ಆರಾಧನಾ ಶ್ರವಣ, 108
ಆರಾಧನೆ, 222
ಆರಾಧನೆಪೀಠ, 226
ಆರಾಧ್ಯ ರತ್ನತ್ರಯಂ ಆಗಮೋಕ್ತಂ, 144
ಆರ್.ನರಸಿಂಹಾಚಾರ್, 91
ಆಳರಸ, 66
ಆಸಿಯ (ಆಸಿಕಾ), 126

ಇಂಗಿಣೀ, 124, 125, 124
ಇಂಗಿತಮ್, 124
ಇಂಗಿತಮರಣ, 126
ಇಂಗುಳೇಶ, 151
ಇಂಗುಳೇಶ್ವರ ಬಳಿ, 27, 34, 35, 157, 165, 176
ಇಂದ್ರ, 134, 154, 182, 185, 204
ಇಂದ್ರಕುಳಾಗೃಹ, 171
ಇಂದ್ರಣಂದಿಮುನಿ, 48
ಇಂದ್ರನಂದಿ, 109, 165, 165, 166
ಇಂದ್ರನ ಮಾನಸ್ತಂಭ, 21
ಇಂದ್ರನ ವ್ರತಾ, 21
ಇಂದ್ರಪಾದ, 98
ಇಂದ್ರಲೋಕ, 98, 114, 150
ಇಂದ್ರಿಯ, 156
ಇಚ್ಛಾಮರಣ, 19, 26, 68, 97, 99, 102, 103, 104, 141, 155, 189
ಇನುಂಗೂರ್, 192
ಇಪ್ಪತ್ತೆರಡು ಪಸೀಷಹ, 126
ಇಪ್ಪತ್ನಾಲ್ಕು ಸಿಗ್ರಹ, 60
ಇಮ್ಮಡಿ ಗಂಗರಾಚಮಲ್ಲ, 29
ಇಮ್ಮಡಿ ನಯಸೀತಿಸಿ, 184, 188
ಇಮ್ಮಡಿ ನಾಗವಮಸಿ, 118
ಇಮ್ಮಡಿ ಬಲ್ಲಾಳ, 55, 58, 183
ಇಮ್ಮಡಿ ಸೀರಬಲ್ಲಾಳ, 57
ಇಮ್ಮಡಿ ಶುಭಚಂದ್ರ, 169
ಇರುಂಗೊಳ, 187
ಇರುಗಪ್ಪ ದಂಡನಾಥ, 82, 83

ಇರುವೆ ಬ್ರಹ್ಮದೇವ, 19
ಇಸರಯ್ಯ, 15

ಈಶಾನಪರಮೇಷ್ಠಿ, 11
ಉಗ್ರಸೇನ ಗುರವಡಿ, 132
ಉಜ್ಜೈನಿ, 1, 174
ಉತ್ತರ ಕರ್ನಾಟಕ, 142, 183
ಉತ್ತರ ಭಾರತ, 80
ಉತ್ತರಾಧ್ಯಯನ ಸೂತ್ರ, 120
ಉದಯಚಂದ್ರ, 167, 176
ಉನ್ನತಾಧಿಕಾರಿ, 61
ಉಪವಾಸಪರಗುರು, 11, 52
ಉಪಾಧ್ಯಾಯ, 110, 111, 112
ಉಪಾಧ್ಯೆ, 107, 108
ಉಪಾಧ್ಯೆ.ಎ.ಎನ್., 98, 111
ಉಮಾಸ್ವಾತಿ, 151
ಉರಗೇಂದ್ರ, 182
ಉಳಿ-ಬಳ್ಳ, 208
ಉಳ್ಳಿಕಲ್ ಗೊರವ, 192

ಋಷಭಸೇನ ಗುರವಡಿ, 13
ಋಷಿಗಿರಿ, 98

ಏಕಪಾರ್ಶ್ವರ್ ನಿಯಮ, 98, 136, 106
ಏಕಪಾರ್ಶ್ವಾರ್ಸನ 146, 147
ಏಕಶಿಲಾ ವಿಗ್ರಹ, 25
ಏಚಯ್ಯ, 16
ಏಚಿಕಾಂಗ, 177
ಏಚಿಯಕ್ಕ, 142, 149, 178
ಏಚಿಯಕ್ಕ ಮತ್ತು ನಾಗಿಯಕ್ಕ, 68
ಏಚಿರಾಜ, 67, 68, 170, 171, 172, 184
ಏಳನೆಯ ಚಾಮರಾಜ ಒಡೆಯರ, 85

ಎಂ.ಎ.ಧಾರೆ, 194
ಎಂ.ಜಾನ್ಸನ್, 109
ಎಕ್ಕೋಟಿ ಜಿನಾಲಯ, 61
ಎಥಿಕಲ್ ಡಾಕ್ಟ್ರಿನ್ ಆಫ್ ಜೈನಿಸಮ್ 120
ಎರಡನೆಯ ಪಾರ್ಶ್ವನಾಥ ಬಸದಿ, 23
ಎರಡುಕಟ್ಟೆ ಬಸದಿ, 57, 166, 167, 171, 176, 191, 221
ಎರೆಯಂಗ, 29, 29, 53
ಎರೆಯಂಗನ ರಾಣಿ, 53
ಎರೆಯಪ್ಪರಸರ, 30
ಎಳಸನಕಟ್ಟೆ, 177
ಎಸ್.ಶೆಟ್ಟರ್, 98

ಐರಾವತ, 182
ಐವರು ಜಿನಗುರುವಯರುರು, 110
ಐಹೊಳೆ, 140

ಒದೆಗಲ್ಲು ಬಸದಿ, 204
ಒಮ್ಮಳಿಗೆಹಳ, 149, 178, 142

ಕಂಚಿನದೊಣೆ, 193, 198, 199
ಕಂಚೀಪುರ, 44
ಕಂಸೀವರಾಯಪುರ, 88
ಕಂತಿಗೆ, 109
ಕಂತಿಯರು, 103
ಕಂಬದಹಳ್ಳಿ, 52, 200
ಕಂಬಯ್ಯ, 84
ಕಟ, 96, 97
ಕಟಕ, 64
ಕಟವಪ್ರ, 2, 4, 5, 8, 10, 13, 14, 15, 18, 19, 22, 23, 25, 26, 28, 29, 30, 31, 39, 73, 93, 95, 96, 97, 166, 174 216
ಕಟವಪ್ರಗಿರಿ, 96
ಕಟವಪ್ರಬೆಟ್ಟ, 18
ಕಟವಪ್ರಶಿಖರ, 23, 96
ಕಟವಪ್ರಶೈಲ, 96
ಕಡಲೂರು, 15
ಕಣ್ಣಬ್ಬರಸಿ, 16, 17
ಕತ್ತಯ್ಯ, 16
ಕತ್ತಲೆ ಬಸದಿ, 57, 142, 171, 184, 208
ಕನಕಚಂದ್ರ, 38, 181
ಕನಕನಂದಿ, 177

ಪದಸೂಚಿ

ಅಂಕಣಫಲಕ, 231
ಅಂಕಬೋಯ, 16
ಅಂಸಿಸೆಟ್ಟಿ, 60
ಅಂಗಡಿ, 60
ಅಂಜಲಿ ಹಸ್ತ, 218
ಅಂದಮಾರಯ್ಯ, 16
ಅಂದಮಾಸಲ, 15
ಅಕಚೆಯ್ಯ, 16
ಅಕಳಂಕ, 167
ಅಕಳಂಕತ್ರೈಸಿದ್ಧದೇವ, 169
ಅಕಳಂಕದೇವ, 45
ಅಕಳಂಕಸೂಸಿ, 151
ಅಕ್ಕನ ಬಸದಿ, 42
ಅಕ್ಷಪಾದ, 51
ಅಖಂಡ ಬಾಗಿಲ, 40, 83, 194, 196, 197, 204
ಅಗಾರೂ ಅಣಗಸಿಯಮ್, 113
ಅಚಲಾದೇಸಿ, 42
ಅಜಿಗಣ, 9
ಅಜಿತಸೀತಿಸಿದೇವ, 93, 132
ಅಜಿತಸೀತಿಸಿದೇವನ ನಿಸಿಧಿ, 192
ಅಜಿತಸೇನ, 26, 49
ಅಜಿತಸೇನಪಂಡಿತದೇವ, 144
ಅಜಿತಸೇನಭಟ್ಟಾರಕ, 26, 27, 106, 199, 201
ಅಣ್ಣನ ಕಾಳೆಯ ಪಣ್ಣಿಗ, 16
ಅಣ್ಣಿತಟಾಕ, 166
ಅದಿಯಮು, 55
ಅನಂತ.ಪು., 111
ಅನಂತಮತೀ, 52, 140
ಅನಂತಮತೀಕಂತಿ, 136
ಅನಾಕುಳಚಿತ್ತ, 136
ಅನಿಕೇತನ, 113, 129
ಅಪ್ಸರೆ, 199, 204, 205
ಅಭಗ ನರಸಿಂಘಯ್ಯ, 16
ಅಸಿನವ ಚಾರುಸೀತಿಸಿದೇವ, 79
ಅಭ್ಯಂತರ ಶುದ್ಧೀಕರಣ, 118
ಅಭ್ಯಾಗತ, 64
ಅಮರಸೀತಿಸಿ ಆಚಾಯಸಿ, 195
ಅಮಾತ್ಯ, 68
ಅಸಿತಮತಿ, 140
ಅಮೂತಸಿಧ್ಯಾನ, 120
ಅಮೃತಶಿಲೆಯ ಸಿಗ್ರಹ, 88
ಅಮ್ಮಳಿ, 60
ಅರಕೆರೆ ಗ್ರಾಮ, 149
ಅರಸ ನಾಲ್ವಡಿ, 134
ಅರಸ ದಿಣ್ಣಿಕ, 14
ಅರಸಿಯಕೆರೆ, 169
ಅಸಿಭಯಂಕರ, 51
ಅಸಿಷ್ಟನೇಸಿ, 8, 14, 23
ಅರುಂಗಳಾನ್ವಯ, 35
ಅರೆಗಲ್ ಬಸದಿ, 57, 179, 208
ಅರೆಗಲ್ಲು, 171, 194
ಅಧಸಿಪಯಸಿಂಕಾಸನ, 201
ಅಧಾಸಿಸನ, 205, 210, 212, 231
ಅಹಸಿಂತ, 110
ಅಹಸಿತ, 112
ಅಹಸಿದ್ದಾಸ, 211
ಅವಳಿ ಮಂಟಪ, 232
ಅಶ್ವಾಧ್ಯಕ್ಷ, 71
ಅಶ್ವಾರೂಢ ಬ್ರಹ್ಮ, 200
ಅಷ್ಟಾರಾಧನೆ, 61
ಅಸಂಪ್ರಜ್ಞಾತಾ, 120

ಆಚಣ್ಣ, 118, 121
ಆಚಾಮ್ಲ ಸಲ್ಲೇಖನಾ, 121
ಆಚಾಯಸಿ, 8, 34, 42, 59, 66, 74, 84, 85, 89, 91, 92, 110, 111, 112
ಆಚಾಯಸಿ ಪ್ರಭಾಚಂದ್ರ, 179
ಆಚಾಯಸಿರ ಅರಮನೆ, 65
ಆಚಾಯಸಿರು, 90

ಕನಕಶ್ರೀ, 38
ಕನಕಸೇನ, 8, 105, 109, 192, 192
ಕನ್ನಡ ಸಾಹಿತ್ಯ, 50
ಕನ್ನಡ ಸಾಹಿತ್ಯ ಚಸಿತ್ರೆ, 50
ಕನ್ನಡನಾಡಿನ ವತಸಿಕ, 86
ಕನ್ನೆಬಸದಿ, 39
ಕನ್ನೆವಸತಿ, 186
ಕಪಿಲ, 70
ಕಪ್ಪುಗುಡ್ಡ, 97
ಕಬ್ಬಪ್ಪು, 2
ಕಬ್ಬಪ್ಪುತೀಥಸಿ, 29
ಕಬ್ಬಪ್ಪುನಾಡು, 4
ಕಮಠಪಾಶ್ವಸಿ, 64
ಕಮಠಪಾಶ್ವಸಿನಾಥ, 183
ಕಮ್ಮಟದ ಮಾಚಯ್ಯ, 71
ಕಮ್ಮಟದ ರಾಸಿುಸೆಟ್ಟಿ, 60
ಕರ್, 97
ಕರಹಾಟಿಕ, 44
ಕಸಿಯ ಗೊಮ್ಮಟಸೆಟ್ಟಿ, 82
ಕಣಾಸಿ, 115
ಕನಾಸಿಟಕ, 1, 200
ಕನಾಸಿಟಕ ಪ್ರದೇಶ, 17
ಕನಾಸಿಟಕ ರಾಜ್ಯ, 140
ಕಲದುಗಸಿ, 15
ಕಲಶ, 197, 212, 226
ಕಲಿ, 104
ಕಲ್ಕುಟಿಗ, 17, 192
ಕಲ್ಪವೃಕ್ಷ, 185
ಕಲ್ಯಾಣಿ ಚಾಳುಕ್ಯ, 28
ಕಲ್ಲುಪ್ಪಾರ, 90
ಕಲ್ಲೆಹ ಪಟ್ಟಣ, 75, 77
ಕಳಂತೂಸಿನ, 132, 140
ಕಳ್, 97, 97, 97, 97
ಕಳಲ್, 97
ಕಳಶ, 210
ಕಳ್ಬಪ್ಪು, 2, 96, 97, 139, 160, 192, 136, 140, 142, 178, 189
ಕಳ್ಬಪ್ಪುಬೆಟ್ಟ, 29
ಕಳ್ಬಪ್ಪುತೀಥಸಿ, 30
ಕಳ್ಬಪ್ಪು ನಾಡಿನ, 149
ಕಳ್ವಪ್ಪಿನ ಶೈಲ, 98
ಕಸಿ, 17, 85, 184
ಕಸಿಕಾಂತ, 50
ಕಸಿರತ್ನ, 16, 17
ಕವುಟಿಲ್ಯ (ಕುಟಿಲ) ಬುದ್ಧಿಯಂ, 65
ಕಷಾಯ ಸಲ್ಲೇಖನಾ, 118
ಕಾಂಚಿ, 91
ಕಾಂತರಾಜಪುರ, 61
ಕಾಪಾಲಿಕ, 48
ಕಾಮದೇವ, 167, 172, 185
ಕಾಮ್ವಾಚಾಸಿ, 178, 209, 209, 209, 230, 230
ಕಾಯಕ್ಲೇಶ, 18
ಕಾಯೆಬ್ರತ ಸಮಾರೋಪಮ್, 113
ಕಾಯೋತ್ಸಗಸಿ, 98, 195, 234
ಕಾಸಿುಸಿಕ, 90
ಕಾಳಬ್ಬೆ, 112, 112, 106, 237
ಕಾವೇಸಿ, 154
ಕಾಷ್ಠಸಂಘ, 87
ಸಿತ್ತಯ್ಯ, 15, 16 , 23
ಸಿತ್ತರೆ, 16, 192
ಸಿತ್ತೂಸಿನ ಬಲದೇವ, 192
ಸಿತ್ತೂರು, 8, 10, 140
ಸಿತ್ತೂರುಸಂಘ, 9
ಸಿಸಿಯ ನಯಸೀತಿಸಿ, 188
ಸೀತಸಿನಕಾರ ಕಸಿ, 146
ಸೀತಿಸಿಕಾಂತ, 182
ಸೀತಿಸಿದೇವ, 70, 70, 195
ಸೀತಿಸಿದೇವನ ನಿಸಿಧಿ, 196
ಕುಂಡಕುಂದಾನ್ವಯ, 185, 192
ಕುಂದಾದ ಹೆಗ್ಗಡೆ, 71
ಕುಂದೂರ್, 210
ಕುಂಬಕೋಣಂ, 91
ಕುಂಬೆಯನಹಳ್ಳಿ, 52, 71
ಕುಕ್ಕುಟಾಸನ, 37, 98, 98, 170
ಕುಕ್ಕುಟಾಸನ ಮಲಧಾಸಿದೇವ, 170

ಕುಬೇರ, 154
ಕುಮಾರಣಂದಿಭಟಾರಕ, 9
ಕುಮಾರಸೇನಭಟಾರ, 30
ಕುಮಾರಸೇನಸಿದ್ಧಾಂತಿಕ, 37
ಕುಲಗುರು, 91
ಕುಲಚಂದ್ರದೇವ, 39
ಕುಲಭೂಷಣಯತಿ, 176
ಕೂಂಡಿನಾಡ್, 183
ಕೂಗೆಬ್ರಹ್ಮದೇವ, 191, 199, 200
ಕೂಗೆಬ್ರಹ್ಮದೇವಸ್ತಂಭ, 198, 200, 207, 142
ಕೊಪಣನಗರ, 82
ಕೃಷ್ಣ, 166
ಕೃಷ್ಣರಾಜ ಒಡೆಯ, 92
ಕೆಂಪಣ್ಣ, 84
ಕೆಗ್ಗೆರೆ, 55, 56, 186
ಕೇತಿಶೆಟ್ಟಿಕೇಸಿ, 61
ಕೇಶವಯ್ಯ, 16
ಕೊಂಡಕುಂದ, 151
ಕೊಂಡಕುಂದ ವಂಶಾವಳಿ, 39
ಕೊಂಡಕುಂದಾಚಾಯಸಿ, 34
ಕೊಂಡಕುಂದಾನ್ವಯ , 27, 166, 170, 197
ಕೊಂಡಕುಂದಾನ್ವಯ-ಮಹಾದೇಸಿಗಣ-ಪುಸ್ತಕಗಚ್ಛ, 38
ಕೊಂಡಕುಂದಾನ್ವಯ-ಮೂಲಸಂಘ-ದೇಸಿಯಗಣ, 33
ಕೊತ್ತಯ್ಯ, 16, 193
ಕೊಪ್ಪಳ, 86
ಕೊಲೆಕವತ್ತೆಸಿಗೊಡೆಯರು, 65
ಕೊಲ್ಲಾಪುರ, 87, 169
ಕೊಲ್ಲಾಪುರ ತೀರ್ಥಸಿ, 39
ಕೊಳತ್ತೂರು, 105
ಕೊಳತ್ತೂರ ಸಂಘದ ಸಿಕೋಕಭಟಾರ 192
ಕೊಳಾತ್ತೂರು, 8, 10
ಕೋಟೆ, 80
ಕ್ಯಾತನಹಳ್ಳಿ, 30
ಕ್ರಿಯೆ, 122
ಕ್ಷಮಾಮ್ ಚ ಕೃತ್ವಾ ಜಿನಪಾದಮೂಲೇ, 144
ಕ್ಷೀರಸಾಗರ, 182
ಕ್ಷೇತ್ರ, 93, 103
ಕ್ಷೇತ್ರಪಾಲ, 200
ಖಡಬಡಿ, 111
ಖಾಣ, 64

ಗಂಗ, 53, 199, 201
ಗಂಗ ಅರಸ ರಾಚಮಲ್ಲ, 25
ಗಂಗಕಾಲ, 206
ಗಂಗಗಂಗೇಯ, 20
ಗಂಗಣ್ಣ, 56
ಗಂಗಣ್ಣ, 178, 179
ಗಂಗ ಮಂಡಲಾಧಿಪತಿ, 53
ಗಂಗ ಮಂತ್ರಿ ಚಾವುಂಡರಾಯ, 19
ಗಂಗ ಮಾರಸಿಂಹ, 19, 26, 103, 109, 122, 201, 207
ಗಂಗದಂಡಾಧಿಪ, 58
ಗಂಗರಾಜ, 29, 32, 42, 52, 55, 57, 58, 59, 60, 67, 68, 69, 70, 106, 112, 119, 141, 167, 168, 170, 171, 172, 176, 177, 178, 184, 215, 216, 221, 225, 227, 230
ಗಂಗರಾಜನ ಮಡದಿ ಲಕ್ಷ್ಮೀ, 141
ಗಂಗರಾಜ್ಯ, 29
ಗಂಗರು, 53
ಗಂಗ ರೂವಾಸಿ, 101, 206
ಗಂಗವಂಶ, 26
ಗಂಗ ವಂಶಾವಳಿ, 201
ಗಂಗ ಶಸ್ತ್ರಿ, 204
ಗಂಗ ಶೈಲಿ, 24
ಗಂಗ ಸತ್ಯವಾಕ್ಯ ಪೆಮಾಸಿಡಿ, 30
ಗಂಗಸಮುದ್ರ, 57, 172, 177
ಗಂಗಾ, 45
ಗಂಗಾಚಾಸಿ, 70, 176, 177, 208, 209, 210, 223, 230,
ಗಂಗೇಯ, 182

ಗಂಗೋಜ, 210
ಗಂಡಸಿಮುಕ್ತದೇವ 169, 181, 182
ಗಂಧಗಜ ಗೋಪಣಂದಿ, 51
ಗಂಧರಾಜ, 185
ಗಂಧವಾರಣಬಸದಿ, 237
ಗಣ, 153
ಗಣದೇವ, 8
ಗಣಾಧಿಪತಿ, 66
ಗಣಾಧೀಶ, 42
ಗಣೆಗಳ ಪ್ರಭು, 212
ಗಣ್ಡಸಿಮುಸ್ತಿ ಮಲಧಾರದೇವ, 27
ಗಾವುಂಡ, 94
ಗಿಸಿ, 2
ಗೀವಾಸಿಳಿ ಸಂಘ, 87
ಗುಂಡುಗಲ್ಲ ನಿಸಿಧಿ, 194
ಗುಂಡುಗಲ್ಲ ಶಾಸನ, 198
ಗುಂಡುಗಲ್ಲಿನ ನಿಸಿಧಿ, 198
ಗುಂಡುಗಲ್ಲಿನ ಮೇಲೆ ನಿಸಿಧಿ, 191
ಗುಂಡುಗಲ್ಲು, 104
ಗುಜರಾತ್, 87
ಗುಡ್ಡ, 103, 176
ಗುಡ್ಡಿಯರು, 104
ಗುಣಸೀತಿಸಿ, 52
ಗುಣಚಂದ್ರ, 176
ಗುಣಚಂದ್ರನ ಶಿಷ್ಯ, 70
ಗುಣಚಂದ್ರಮಲಧಾಸಿದೇವ, 29
ಗುಣಚಂದ್ರಸಿದ್ಧಾಂತಚಕ್ರವತಿಸಿ, 185
ಗುಣದೇವ, 109
ಗುಣದೇವಮುನಿ, 136
ಗುಣನಂದಿ, 37
ಗುಣಭೂಷಿತ, 8
ಗುಣಮತಿ, 140
ಗುಣಮತಿಅವ್ವೆ, 193
ಗುಣಮತೀ, 52
ಗುಣಸೇನ ಗುರವ, 192
ಗುಮ್ಮಟ, 211
ಗುಮ್ಮಣ್ಣ, 85
ಗುರು ನಿಷಧ್ಯಾಃ, 39
ಗುರುನಿಷಧ್ಯಾ, 70
ಗುಳ್ಳೆಕಾಸಿ ಅಜ್ಜಿ, 47, 200, 236
ಗುಹೆ, 140
ಗೆಝುವಲ ಜಿನಸಾ, 80
ಗೆರಸೊಪ್ಪೆ , 80, 84, 86, 89, 176
ಗೊಮ್ಮಟ, 3, 25, 35, 60, 61, 64, 74, 79, 80, 82, 87, 89, 169, 173, 188, 196, 198,
ಗೊಮ್ಮಟತೀಥಸಿ, 3, 4, 59, 82, 85
ಗೊಮ್ಮಟದೇವ, 55, 87
ಗೊಮ್ಮಟ ಮಹಾಸಿಗ್ರಹ, 38, 73, 81, 89, 171, 176 183, 186
ಗೊಮ್ಮಟ ಸಿಗ್ರಹ, 76
ಗೊಮ್ಮಟ ಸಂಸೀಣಸಿ, 58, 79
ಗೊಮ್ಮಟ ಸುತ್ತಾಲಯ, 171, 235
ಗೊಮ್ಮಟನ ಪಂಚಕಲ್ಯಾಣ, 40, 181
ಗೊಮ್ಮಟಪುರ, 3
ಗೊಮ್ಮಟನ ಬಳ್ಳಿವಾಡ, 83
ಗೊಮ್ಮಟಸ್ತುತಿ, 184, 188
ಗೊಮ್ಮಟಸೆಟ್ಟಿ, 188
ಗೊಮ್ಮಟೇಶ್ವರ, 83, 90
ಗೊಳ, 96
ಗೋಪ, 92, 196
ಗೋಪಣಂದಿ, 28, 29, 37, 46, 51, 53
ಗೋಪಣಂದಿದೇವ, 37
ಗೋಪುರ, 212, 234
ಗೋವಣಯ್ಯ, 16
ಗೋಸಿಂದನಹಳ್ಳಿ, 171, 173
ಗೋಸಿಂದಪಾಡಿ, 14, 15, 55, 56
ಗೌಡ, 82, 85, 89
ಗೌತಮ ಗಣಧರ, 143
ಗೌರಶ್ರೀ, 38
ಗೌಳದೇವ, 29
ಗೌಳಮುನಿ, 27
ಗ್ರಾಮಣಿ, 65
ಗ್ರಾಮಲೆಸ್ಕಿಗ, 104

ಚಂಗಾಳ್ವ, 80, 83

ಚಂದವ್ವೆ, 187
ಚಂದಿರ, 204
ಚಂದ್ರ, 166-168, 176, 217
ಚಂದ್ರಸೀತಿಸಿ, 50, 90
ಚಂದ್ರಸೀತಿಸಿಪಂಡಿತಮುನಿ, 80
ಚಂದ್ರಗಿಸಿ, 1-3, 167
ಚಂದ್ರಗೀತಯ್ಯ, 16
ಚಂದ್ರಗುಪ್ತ, 1, 13, 24, 97, 139, 140, 142, 143, 151
ಚಂದ್ರಗುಪ್ತ ಬಸದಿ, 23, 24, 140, 211, 237
ಚಂದ್ರಗುಪ್ತಮುನಿ, 192
ಚಂದ್ರಗುಪ್ತನ ಬಸದಿ, 80
ಚಂದ್ರಗುಪ್ತರ ಪಾದ, 30
ಚಂದ್ರದೇವಾಚಾಯಸಿ, 7
ಚಂದ್ರನಂದಿ, 165
ಚಂದ್ರನಂದಿಪಂಡಿತದೇವ, 29
ಚಂದ್ರಪ್ರಭ, 44
ಚಂದ್ರಪ್ರಭದೇವ, 37
ಚಂದ್ರಪ್ರಭ ಬಸದಿ, 28, 193
ಚಂದ್ರಮೌಳಿ, 32, 57, 59, 187, 188
ಚಂದ್ರಯ್ಯ, 16
ಚಂಪಕವೃಕ್ಷ, 82, 84
ಚಕ್ಕಣಬ್ಬೆ, 68
ಚಕ್ರವತಿಸಿ, 167, 198
ಚಕ್ರವತಿಸಿ ಗೊಗ್ಗಿ, 18
ಚಗಭಕ್ಷಣ, 18
ಚಟ್ಟಕಬ್ಬೆ, 68
ಚತುಮುಸಿಖ, 151
ಚತುಮುಸಿಖದೇವ, 17, 176
ಚತುಮುಸಿಖಮುನಿ, 28
ಚತುಮುಸಿಖ ಸಿಂಹನಂದಿ, 181
ಚತುಮುಸಿಖ ಸ್ತಂಭ, 20
ಚತುಮುಸಿಖನ ಶಿಷ್ಯ, 29
ಚತುಮುಸಿಖಭಟ್ಟಾರಕದೇವ, 38
ಚತುಸಿಸಿಂಶತಿ ಬಸದಿ, 182, 188
ಚತುಸಿಸಿಂಶತಿ ತೀಥಸಿಂಕರ, 80
ಚನಪೌಸ, 16
ಚನ್ನಣ್ಣ, 84, 91
ಚನ್ನಣ ಬಸದಿ, 80, 200
ಚರಣ, 84
ಚಸಿತ್ರಾಶ್ರೀ, 11
ಚರೆಂಗಯ್ಯ, 16
ಚಲದಂಕಕಾರ, 199
ಚಲದಂಕರಾವ, 137
ಚಲ್ಕ, 42, 71
ಚಾಗ, 202, 203, 207
ಚಾಗದಕಂಬ, 202, 203, 205, 207
ಚಾಗದ ಬ್ರಹ್ಮದೇವಸ್ತಂಭ, 202
ಚಾಮರಾಜ ಒಡೆಯ, 85
ಚಾಮುಂಡ, 68
ಚಾಮುಂಡನ ಮಡದಿ ದೇಮತಿ, 141
ಚಾಮುಂಡಯ್ಯ, 16
ಚಾರಣ, 108
ಚಾಸಿತ್ತಮ್, 108
ಚಾರುಸೀತಿಸಿ, 82, 85, 90, 157
ಚಾರುಸೀತಿಸಿದೇವ, 90, 178, 179, 230
ಚಾರುಸೀತಿಸಿಪಂಡಿತ, 93
ಚಾರುಸೀತಿಸಿಪಂಡಿತದೇವ, 85, 91
ಚಾರುಸೀತಿಸಿಭಟ್ಟಾರಕಮುನಿ, 83
ಚಾರುಸೀತಿಸಿಮುನಿ, 82, 138, 152,
ಚಾವಾಸಿಕ, 52, 70
ಚಾಳುಕ್ಯ, 27
ಚಾಳುಕ್ಯ ಸಾಮ್ರಾಟ, 48
ಚಾವರಾಜ, 176, 177, 178
ಚಾವುಂಡ, 60, 180
ಚಾವುಂಡರಾಜ, 57
ಚಾವುಂಡರಾಯ, 23, 24, 25, 26, 38, 53, 57, 88, 115, 121, 126, 166, 172, 193, 202, 203, 204, 205, 206, 207, 209, 211, 215, 225, 230, 237
ಚಾವುಂಡರಾಯಸ್ತಂಭ, 207
ಚಿಂತಾಮಣಿ, 50
ಚಿಂತಾಮಣಿಮುನಿ, 50
ಚಿಕ್ಕಗುಡಿ, 80

ಚಿಕ್ಕಣ್ಣ, 80, 85
ಚಿಕ್ಕನೇಮಿಚಂದ್ರ, 39
ಚಿಕ್ಕಬಸದಿ, 80
ಚಿಕ್ಕಬೆಟ್ಟ, 1, 5, 8, 15, 22, 23, 24, 25, 26, 32, 47, 53, 55, 56, 57, 58, 59, 60, 73, 80, 81, 89, 97, 102, 104, 140, 142, 145, 150, 171, 172, 183, 191, 192, 193, 194, 198, 200, 206, 208, 209, 214, 215, 217, 221, 237
ಚಿಕ್ಕಬೆಟ್ಟದ ಬಸದಿ, 214
ಚಿತ್ತೂರ್, 140
ಚಿತ್ತೂರಿನ ಮೋನಿಗುರುವಡಿ, 9
ಚಿತ್ತೇಶುಭವನಾಮ್ ಜೈನೀಮ್, 113
ಚಿದಾನಂದಕವಿ, 3 90
ಚೂಳಾಮಣಿ, 50
ಚೆಗಪಾಮಿಸೆಟ್ಟಿ, 85
ಚೆನ್ನಣ್ಣ, 83
ಚೆನ್ನಪಾರ್ಶ್ವದೇವ ಬಸದಿ, 39
ಚೆನ್ನಬೊಮ್ಮರಸ, 80
ಚೋಳಸಾಮಂತ, 55
ಚೌಡಸೆಟ್ಟಿ / ಚೌಡಿಸೆಟ್ಟಿ, 84
ಚೌವಿ, 212
ಚೌವಿಧಾವಿ, 227, 235
ಚೌವೀಧಾವಿ, 211
ಚೌವೀಸ ತೀರ್ಥವಿಂಕರ, 88, 91
ಜಂಬುನಾಮ್ಥಿ, 16
ಜಕ್ಕಗ, 16
ಜಕ್ಕಣಬ್ಬೆ, 70, 171, 177, 227
ಜಕ್ಕಣವ್ವೆ, 171, 172
ಜಕ್ಕವ್ವೆಯ ಕೆರೆ, 43
ಜಕ್ಕಯ್ಯ, 16
ಜಕ್ಕಿಮಬ್ಬೆ, 170
ಜಗದೇವಸೀರ, 204
ಜಗಲಿ, 204
ಜನ್ನ, 111
ಜಲಾನಯನ, 83
ಜಶಸೀತಿಸಿಪಂಡಿತದೇವ, 29
ಜಹಾನಿ, 49
ಜಹಿ, 49
ಜಹೀನಿ, 49
ಜಾಂಬವಕುಲದ ನಾಯಕರು, 75
ಜಾಕೋವಿ, 120
ಜಾಗದಕಂಬ, 198
ಜಾನ್ಸನ್, ಎಚ್, 120, 126
ಜಾನ್ಸನ್ ಹೆಲೆನ್, 126
ಜಾಲಂದ್ರ, 186
ಜಾಹ್ನು, 45
ಜಿಗಣಿಕಟ್ಟೆ, 175, 186
ಜಿ.ಡಿ.ಸೊಂಥೈಮರ್, 98
ಜಿನಗಿವಿ, 3
ಜಿನಚಂದ್ರ, 16, 167, 176
ಜಿನಚಂದ್ರಪಂಡಿತದೇವ, 29
ಜಿನಚಂದ್ರಸೂವಿ, 108
ಜಿನದೇವ, 23, 24
ಜಿನದೇವಣ, 26
ಜಿನಧಮವಿ, 29
ಜಿನನಾಥಪುರ, 43, 56, 57, 64, 81, 83, 88, 89, 104, 169, 171, 172, 173, 179, 193, 194, 208, 237
ಜಿನಪ್ರಭೆ, 212
ಜಿನಸೇನ, 167
ಜಿನಸೇನಭಟ್ಟಾರಕ ಪಂಡಿತಾಚಾಯವಿ, 86
ಜಿನಸೇನಾಚಾಯವಿ, 112, 114, 117
ಜಿನಾಗಮ, 110, 124, 144, 167
ಜಿನಾಲಯ, 52, 71, 79
ಜಿನೇಂದ್ರ, 151
ಜಿನೇಂದ್ರವಣಿವಿ, 108
ಜಿನ್ನೇನಹಳ್ಳಿ, 83, 88, 91
ಜೀವನ್ಮುಕ್ತ, 12
ಜೀವಸಂಬೋಧನ, 118
ಜೆನ್ನಿ, 187
ಜೈನ, 76, 77
ಜೈನದಶವಿನ, 76, 172
ಜೈನಧಮವಿ, 102, 145, 168, 173

ಜೈನಧರ್ಮಸಿಜ್ಯೋತಿ, 37
ಜೈನ ಬಸದಿ, 77
ಜೈನ ವರ್ತಸಿಕ ಸಮುದಾಯ, 188
ಜೈನರು, 77
ಜೈನಶಾಸ್ತ್ರ ಪಾರಂಗತ, 185
ಜೈನ-ಶ್ರೀವೈಷ್ಣವ ಸಿರಸ, 75
ಜೈನಾಗಮ, 190
ಜೈನೇಂದ್ರಸಿದ್ಧಾಂತಕೋಶ, 108
ಜೈಮಿನಿ, 51
ಜ್ಞಾತೃ, 120
ಜ್ಞಾನದೇವತೆ ಸರಸ್ವತಿ, 50
ಜ್ಞಾನಿಯ ಮರಣ, 123
ಜ್ಞೇಯ, 120

ಠವಣೆ, 195
ಠವಣಿಕೆ, 197, 206, 212, 213, 235
ಠವಣಿಕೋಲು, 210, 226, 223

ಡಬ್ಲ್ಯು.ಷೂಸ್ರಿಂಗ್, 114
ಡಿ.ಎಲ್.ನರಸಿಂಹಾಚಾರ್, 109

ಣಮೋ ಆಸಿಸಿಯಾಣಮ್, 111
ಣಮೋ ಅರಹಂತಾಣಮ್, 110
ಣಮೋ ಉವಜ್ಝಾಯಾಣಮ್, 111
ಣಮೋ ಲೋಯೆ, 111
ಣಮೋ ಸಿದ್ಧಾಣಮ್, 111
ಣಿಷಿಧಿಯ, 126

ತಂಜಾವೂರ, 91
ತಂತ್ರಾಧಿಕಾಸಿ, 71
ತಚ್ಚೇರು, 91
ತಟಾಕ, 83
ತತ್ವಾರ್ಥಾಸಿಧಿಗಮಸೂತ್ರ, 119
ತಥಾಗತ, 48
ತಪಸ್ಸು, 136
ತಪೋದೇಸಿ, 168
ತಸಿಳುನಾಡಿನಭಕ್ತ, 91
ತರೆಕಾಡ ಪೆಜೆಸಿಡಿಯ ಗುರವಡಿ, 132
ತರೆಕಾಡು, 140
ತಲಕಾಡ್, 55
ತಲಾಸು ಶಿಲಾಸು ಶೀತಲಾಸು, 98
ತಾಸಿಸಿಕಚಕ್ರವತಿಸಿ, 52, 71
ತಾತಾಚಾಯಸಿ, 77
ತಿರುಕುಲ, 75
ತಿರುಕೋಸಿಲ್, 75
ತಿರುನಾರಾಯಣಪುರ, 75
ತಿರುಮಲೆ ತಾತಯ್ಯ, 76
ತೀರ್ಥಸಿ, 2, 3, 4, 17, 25, 84, 86
ತೀರ್ಥಸಿಂಕರ, 25, 186
ತೀರ್ಥಸಿಕ್ಕೆ, 17
ತೀರ್ಥಸಿಕ್ಷೇತ್ರ, 39
ತೀರ್ಥಸಿಗಿಸಿ, 98
ತುಂಗಭದ್ರಾ ನದಿ, 75
ತುಂಬೇನಹಳ್ಳಿ, 39
ತೆಲುಗು ಜಗದೇವ, 90
ತೇಸಿನ ಬಸದಿ, 59, 19, 214, 215
ತೇರು, 237
ತೋಪು, 83
ತೋರಣ, 81
ತ್ಯಾಗ, 203
ತ್ಯಾಗದ ಬ್ರಹ್ಮದೇವಾಲಯ, 84
ತ್ರಿಕೂಟ, 24
ತ್ರಿಗವರ, 185
ತ್ರಿದಂಡ, 185
ತ್ರಿದಂಡಿ, 167
ತ್ರಿಭುವನಾಖ್ಯಾನ, 70
ತ್ರಿಮುಷ್ಠಿದೇವ, 29
ತ್ರಿಮುಷ್ಠಿಮುನೀಂದ್ರ, 28, 29
ತ್ರಿರತ್ನ, 145
ತ್ರಿಲಕ್ಷಣಸಿದ್ಧಾಂತ, 45
ತ್ರಿಶಲ್ಯ, 185
ತ್ರಿಷಷ್ಠಿ, 109
ತ್ರಿಷಷ್ಠಿಲಕ್ಷಣಪುರಷಚಸಿತೆ, 108
ತ್ರಿಷಷ್ಠಿಶಲಾಕಪುರುಷಚಸಿತ್ರೆ ,126
ತ್ರೈಸಿದ್ಧ, 50, 167
ತ್ರೈಸಿದ್ಧಚಕ್ರವತಿಸಿ, 167

ತ್ರೈಸಿದ್ಯದೇವ, 166, 169, 176, 197
ತ್ರೈಸಿಧ್ಯಶ್ರೀಪಾಲ, 71

ದಂಡಕ, 111
ದಂಡನಾಯಕ, 53, 104
ದಂಡನಾಯಕ ಗಂಗ, 58
ದಂಡನಾಯಕ ಬಲದೇವ, 106
ದಂಡನಾಯಕ ಬೂಚ, 141
ದಂಡನಾಯಕ ಬೂಚಣ, 141
ದಂಡನಾಯಸಿ, 168
ದಂಡಿ, 50
ದಕ್ಷಿಣ ಭಾರತ, 173
ದಕ್ಷಿಣ ಮಂಟಪ, 233
ದಯಪಾಲ, 51
ದಯಪಾಲಮುನಿ, 50
ದಯಾಸಾಗರ, 185
ದಶಸಿನಚಕ್ರವತಿಸಿ, 185
ದಶಸಿನ ಸಿದ್ಧಾಂತಚಕ್ರವತಿಸಿ, 185
ದಾಮಣಂದಿ, 166, 176
ದಾಮಣಂದಿತ್ರೈಸಿದ್ಯ, 181, 188, 175
ದಾಮನಂದಿ, 165
ದಾಸೋಹ, 86
ದಿಗಂಬರ, 155, 173
ದಿಗಂಬರ ಸಿಮಲಚಂದ್ರ, 48
ದಿಗಂಬರಸಂಘ, 176
ದಿಣ್ಡಿಕ, 14
ದಿವಾಕರಣಂದಿ, 69, 170
ದೀಕ್ಷಾಗುರು, 158
ದೀಕ್ಷೆ, 155
ದುಖ್ಖ ಖಾಒ ಕವ್ಮ್ಮ ಖಾಒ ಸವಾಧಿ ಮರಣಮ್ ಚ ಬೋಹಿಲಹೋವೆ, 121
ದುಗಣ, 16, 17
ದುಗಸಿ, 2
ದೇಚಯ್ಯ, 16
ದೇಮತಿ, 115, 121, 124, 134, 180
ದೇಮವ್ವ, 68
ದೇಮವ್ವೆ, 141, 236
ದೇಮವ್ವೆ ಆಳವ್ವೆ, 236
ದೇಸಿಕಬ್ಬೆ, 60
ದೇಸಿಯಕ್ಕ, 67, 68, 106, 218
ದೇವ, 34, 151, 176
ದೇವಕನ್ಯೆ, 204
ದೇವಸೀತಿಸಿ, 67, 68, 69, 71, 141, 169, 170, 182, 235
ದೇವಸೀತಿಸಿದೇವ, 39, 71
ದೇವಸೀತಿಸಿಪಂಡಿತ, 175, 232
ದೇವಸೀತಿಸಿಪಂಡಿತದೇವ, 176
ದೇವಸೀತಿಸಿಮುನಿ, 181
ದೇವಸೀತಿಸಿಯ ಶಿಷ್ಯ, 29
ದೇವಚಂದ್ರ, 167
ದೇವಣಂದಿ ಭಳರನ ಶಿಷ್ಯ, 16
ದೇವಮೂತಿಸಿ, 76
ದೇವರಾಜ, 3, 141
ದೇವರಾಜಯ್ಯ, 86
ದೇವರಾಯ, 91, 92, 103
ದೇವಶ್ರೀ, 38
ದೇವಾಚಾಯಸಿ, 192
ದೇವಾಲಯ, 160
ದೇವೇಂದ್ರ, 20, 195
ದೇವೇಂದ್ರಮುನಿ, 28
ದೇವೇಂದ್ರಸಿದ್ಧಾಂತದೇವ, 27, 37
ದೇವ್.ಎಸ್.ಸಿ, 114
ದೇಸಿಗಗಣ, 27, 29, 34, 37
ದೇಸಿಯಗಣ, 34, 151, 165, 167, 170, 176, 185, 192, 197
ದೇಸಿಯಗಣ-ಪುಸ್ತಕಗಚ್ಛ, 33
ದೇಹಮ್ ಪಸಿತ್ಯಹ ದಿವ್ಯಂ ಸಿಶಾಮಹಃ, 144
ದೊಡ್ಡಸಿಗ್ರಹ, 24
ದೊಡ್ಡಣ್ಣ, 85
ದೊಡ್ಡದೇವರಾಜ ಒಡೆಯರು, 85
ದೊಡ್ಡಬೆಟ್ಟ, 3, 5, 8, 25, 26, 31, 35, 38, 56, 57, 73, 74, 80, 81, 83, 86, 89, 91, 94, 104, 193, 194, 198, 200, 202, 211, 215
ದ್ರಾಸಿಣಗಣ-ಪನಸೋಗೆ, 35

ದ್ರಾಸಿಡ, 27
ದ್ರಾಸಿಡ ಗೋಪುರ, 234
ದ್ರಾಸಿಡ ಮಾದಸಿ, 24
ದ್ರಾಸಿಡ ರೂಪಾಂತರ, 96
ದ್ರಾಸಿಡ ಶಿಖರ, 213
ದ್ರಾಸಿಡಶೈಲಿ, 212, 231
ದ್ರೋಹಘರಟ್ಟ, 52
ದ್ವಾದಶ, 136

ಧಣ್ಣೆಕುಟ್ಟಾರೆಸಿ ಗುರಸಿ, 192
ಧಮ್ಮ , 108
ಧಮಸಿಚಂದ್ರ, 80
ಧಮಸಿಧ್ಯಾನ, 131
ಧಮಸಿಭೂಷಣದೇವ, 35, 92, 195
ಧಮಸಿಸಿದ್ಧಾಂತ, 51
ಧಮಸಿಸೇನ, 52
ಧಮಸಿಕ್ಷೇತ್ರ, 81, 87, 87
ಧವಳಸರಸ್, 2, 4, 144
ಧವಳಸರಸಿ, 143
ಧವಳಸರೋವರ, 3, 4
ಧಾರವಾಡ, 109, 140
ಧಿಷಣ, 49
ಧೂಜಸಿಟಿ, 44
ಧ್ಯಾನ, 132
ಧ್ಯಾನದ ಸ್ಥಲ, 136

ನಂಜರಾಜಪಟ್ಟಣ, 80
ನಂದಿ, 34, 151, 157, 176 27
ನಂದಿಗಣ, 34, 35, 151, 165, 166
ನಂದಿಸೇಣ, 138
ನಂದಿಸೇನಮುನಿ, 12
ನಂಸಿ, 187
ನಕ್ಷತ್ರ, 217
ನಖರ, 62, 63, 65
ನಖರ ಸಮುದಾಯ, 61
ನಗರ ಕುಟುಂಬ, 61
ನಗರಜಿನಾಲಯ, 63, 63, 89
ನಮಸ್ಕಾರ ಮಂತ್ರ, 111
ನಸಿಲೂರು, 9
ನಯಸೀತಿ, 68, 141, 182, 184-189, 220
ನಯಸೀತಿಸಿದೇವ, 43, 64, 67, 68, 183, 186, 224, 232, 233, 235
ನಯಸೀತಿಸಿಮುನಿ, 141
ನಯಸೀತಿಸಿಸಿದ್ಧಾಂತ, 181, 182, 188, 189
ನಯಸೀತಿಸಿ ಸಿದ್ಧಾಂತಚಕ್ರವತಿಸಿ, 42, 175
ನಯಸೀತಿಸಿಸಿದ್ಧಾಂತದೇವ, 32, 37, 69, 70, 181, 183-187
ನಯಸೇನ, 121, 126
ನರಣಯ್ಯ, 16
ನರಸಿಂಗವಮಸಿ, 55
ನರಸಿಂಹ, 54, 55, 58
ನಲವತ್ತೆಂಟು ಮುಖಂಡರು, 75
ನವಲೂಸಿನ ನಾಳ್ಗಾವುಂಡ, 14
ನವಸ್ತೋತ್ರ, 50
ನಸಿಲೂರು 8-10, 15, 140
ನಸಿಲೂರ ಸಂಘ, 9, 105, 136, 192
ನಸಿಲೂವ್ವಸಿರ, 9
ನಸಿಲ್ವರ, 9
ನಾಗಚಂದ್ರ, 121, 166, 176
ನಾಗಣಂದಿ, 16, 23
ನಾಗದೇವ, 61, 63, 67, 69, 71, 148, 149, 175, 183, 187, 228, 235, 237
ನಾಗಪ್ಪ, 85
ನಾಗಮತಿಗಂತಿ, 9, 132, 140, 192
ನಾಗಯ್ಯ, 16
ನಾಗರನಸಿಲೆ, 60
ನಾಗರಸ, 187
ನಾಗವಮಸಿ, 16, 141
ನಾಗಸಮುದ್ರ, 186
ನಾಗಸೇನ, 13
ನಾಗಿದೇವ, 182
ನಾಗಿಯಕ್ಕ, 148, 149, 150, 178, 237
ನಾಡಗಾವುಂಡರು, 82
ನಾಡಗೌಂಡ, 82

ನಾಡು, 2
ನಾಯಕರು, 60
ನಾಲ್ಕು ಸಂಘ, 38
ನಾಲ್ವಡಿ ಇಂದ್ರ, 20, 21, 24, 103, 135, 217
ನಾಲ್ವಡಿ ಇಂದ್ರನ ನಿಸಿದಿ, 214
ನಾಲ್ವಡಿ ಕೃಷ್ಣ, 19
ನಿಕ್ಕಳಂಕ, 159
ನಿರಸನ, 132
ನಿರಾಲಂಬನಾ, 120
ನಿಸಿಸೀಜ, 120
ನಿಶಿಧಿಕಾ ಸಂತತಿ, 130
ನಿಶೀಧಿ, 127
ನಿಶೀಧಿಕಾ, 127
ನಿಶೀಹಿಯ, 98
ನಿಷದ್ಯ, 157
ನಿಷದ್ಯಾ, 127
ನಿಷದ್ಯಾಯಾ, 127
ನಿಷಧ್ಯಾಲಯಾಃ, 208
ನಿಷಿದ್ಯಾಲಯ, 128
ನಿಷಿದ್ದಿಗೆ, 128
ನಿಷಿಧಿ, 160
ನಿಷಿಧ್ಯಾಲಯ, 127, 128
ನಿಷ್ಕಂಳಕ ಗುಣ, 153
ನಿಸಿದಿ, 127, 127, 130
ನಿಸಿದಿಗೆ, 53
ನಿಸಿದ್ದಿ, 127
ನಿಸಿದ್ದಿಕಾ, 127
ನಿಸಿದ್ಧಿ, 143
ನಿಸಿಧಿ, 19, 35, 46, 47, 53, 57, 60, 67, 68, 93, 98, 100-104, 126-130, 141-143, 148-151, 157-159, 163, 165, 166, 168-170, 172, 174, 175, 177, 178, 180, 182, 187, 190, 192, 194, 197-199, 202, 211, 213, 214, 216, 225, 231, 232, 236
ನಿಸಿಧಿಗಂಬ, 217, 230, 231, 233
ನಿಸಿಧಿಗೆ, 127
ನಿಸಿಧಿ ಕಂಬ, 190, 206, 208
ನಿಸಿಧಿ ಗುಂಡು, 194
ನಿಸಿಧಿ ಗೌರವ, 19, 70, 129, 225
ನಿಸಿಧಿ ಪಟ್ಟಿಕೆ, 226, 229
ನಿಸಿಧಿ ಪ್ರಸ್ರಿಯೆ, 198
ನಿಸಿಧಿ ಫಲ, 71
ನಿಸಿಧಿ ಫಲಕ, 197
ನಿಸಿಧಿ ಮಂಟಪ, 18, 19, 58, 214
ನಿಸಿಧಿ ಮಾನಸ್ತಂಭ, 190, 198, 200, 207
ನಿಸಿಧಿ ಸಿಗ್ರಹ, 191, 236
ನಿಸಿಧಿ ಶಾಸನ, 18, 20, 166, 204, 217
ನಿಸಿಧಿ ಶಿಲಾಕೂಟ, 237
ನಿಸಿಧಿ ಶಿಲಾಫಲಕ, 104
ನಿಸಿಧಿ ಸಮುಚ್ಚಯ, 194
ನಿಸಿಧಿ ಸ್ತಂಬ, 19, 20, 70, 190, 209, 210, 216, 218-220, 222, 225, 227, 231-232, 234
ನಿಸಿಧಿಸ್ಮಾರಕ, 70, 196
ನಿಸಿಧಿಸ್ಥಿತಿ, 126
ನಿಸಿಧ್ಯಾಲಯ, 71
ನಿಸೀಹ, 126
ನಿಸೀಹಿಯ, 126, 128
ನಿಸೇಧಿಕಾ, 128
ನಿಸ್ತಿಗೆ, 127
ನಿಶೀಧಿ, 127
ನಿಶೀಧಿಕಾ, 127
ನಿಶೀಹಿಯ, 98
ನೃಸಿಂಹದೇವ, 56
ನೆಡುಬೋರೆಯ ಪಾನದ ಭಟಾರ, 192
ನೆತ್ತಗೆಯ, 65
ನೇಮಿಚಂದ್ರ, 181, 188
ನೇಮಿಚಂದ್ರಪಂಡಿತದೇವ, 34, 37, 39, 175, 188
ನೇಮಿಚಂದ್ರಮುನಿ, 26
ನೇಮಿಚಂದ್ರಸಿದ್ಧಾಂತಚಕ್ರವತಿಸಿ,181
ನೇಮೀಶ್ವರ ದೇವಾಲಯ, 39

ನೇಮಿಸೆಟ್ಟಿ, 59, 60, 180, 181, 236, 237, 236
ನೈಯಾಯಿಕ, 70
ನೈಷಿಧಿಸಿ, 128
ನೈಷೇಧಿಸಿ, 128
ನೈಷೇಧಿಕ, 128
ನೈಷೇಧಿಸೀ, 128
ನೈಸೇಧಿಸಿ, 126
ನೊಂಬರೆ ನಯಣದದೇವ, 171
ನೊಳಂಬಕುಲಾಂತಕ, 19
ನೊಳಂಬರಾಜ, 205
ನೊಳಂಬರಾಯ, 204
ನೊಳಂಬಸೆಟ್ಟಿ, 180
ನೋಂಪಿ, 137
ನ್ಯಾಸಾಧಿಕಾಸಿ, 61, 62

ಪಂಚಕಲ್ಯಾಣ ಮಹೋತ್ಸವ, 196
ಪಂಚಕಲ್ಯಾಣೋತ್ಸವ, 38, 198
ಪಂಚಗಂಧೇಭ, 133
ಪಂಚಗುರು, 113
ಪಂಚನಮಸ್ಕಾರ, 111, 112, 159
ಪಂಚನಮಸ್ಕ್ರಿಯೆ, 112
ಪಂಚಪದ, 98, 99, 101, 105, 106, 110-112, 117, 137, 146, 147, 149, 150, 169, 233
ಪಂಚಪದ ಪಠಣ, 137
ಪಂಚಪರಮೇಷ್ಠಿ, 110
ಪಂಚಬಾಣಕಸಿ, 85
ಪಂಚಮಂದಾರ, 238
ಪಂಚಾಕ್ಷರಪದ, 111
ಪಂಚೇಂದ್ರಿಯ, 172
ಪಂಡಿತ, 60, 98, 105, 146
ಪಂಡಿತ ಮರಣ, 123, 124
ಪಂಡಿತದೇವ, 82, 90, 141, 144
ಪಂಡಿತದೇವ ಮುನಿ, 82
ಪಂಡಿತಪಂಡಿತ ಮರಣ, 123
ಪಂಡಿತಪ್ರಭು, 50
ಪಂಡಿತಭಟಾರ, 30
ಪಂಡಿತಮರಣ, 99, 100, 101, 106, 128, 137
ಪಂಡಿತಮುನಿ, 154
ಪಂಡಿತಯತಿ, 89, 90, 93, 153
ಪಂಡಿತರಾಜ, 157
ಪಂಡಿತರಾಯ, 79, 83, 94, 166, 213
ಪಂಡಿತರು, 82
ಪಂಡಿತಾಯಸಿ, 149, 150, 211, 212, 213,
ಪಂಡಿತೇಂದ್ರಯೋಗಿ, 158
ಪಂಥನಾಯಕ, 49
ಪಂಪ, 108, 111, 112
ಪಟ್ಟಣ, 88
ಪಟ್ಟಣಪ್ರದೇಶ, 89
ಪಟ್ಟಣಸೆಟ್ಟಿ ಮಲ್ಲಿದೇವ, 187
ಪಟ್ಟಸಾಲೆ, 142, 149, 150, 178, 236, 237
ಪಟ್ಟಣಸ್ವಾಮಿ, 53, 60, 61, 66, 68
ಪಠಣಸ್ರಿಯೆ, 147
ಪತ್ನಿ, 178
ಪದಚಿಹ್ನೆ, 22
ಪದುಮಣಂದಿ, 181
ಪದುಮರಸಯ್ಯ, 85
ಪದ್ಮಣಂದಿ, 169, 232, 235
ಪದ್ಮಣಂದಿದೇವ, 69, 108, 197, 198
ಪದ್ಮಣಂದಿಪಂಡಿತ, 169
ಪದ್ಮನಾಭಪಂಡಿತ, 49
ಪದ್ಮಪ್ರಭ, 50
ಪದ್ಮಾವತಿ, 45
ಪದ್ಮಾಸನ, 195
ಪರ, 48
ಪರಮ, 42, 55, 56, 173
ಪರಮಾಗಮ ಆಧ್ಯಾತ್ಮಿ , 184
ಪರವಾದಿ ಮಲ್ಲದೇವ, 48
ಪರವಾದಿನಃ, 166
ಪರವಾದಿನರು, 48
ಪರವಾದಿಮಲ್ಲ, 48, 51, 71, 166
ಪರವಾದಿಮಲ್ಲಜಿನಾಲಯ, 39, 43, 52

ಪರವಾದಿಮಲ್ಲದೇವ, 165
ಪಸಿಪೂಣಸಿ ಶ್ರಾವಸಿ, 145
ಪಸಿಸೂತ್ರ, 60
ಪರೆಯಣಗೌಡ, 85
ಪರೋಕ್ಷ ಸಿನಯ, 149
ಪಯಸಿಂಕಾಸನ, 195, 196, 198, 211, 218, 226, 229, 231, 234
ಪಯಸಿಂಕಾಸನಾರೂಢ, 210
ಪವಸಿತ, 2
ಪಲ್ಯಂಕ, 98
ಪಲ್ಯಂಕ ಆಸನ, 129
ಪಲ್ಯಂಕಾಸನ, 128, 136, 168, 223
ಪಲ್ಲವಾಚಾಸಿ, 14
ಪಸಿತ್ರಕುಲ, 75
ಪಸಿತ್ರಪಾದ, 75
ಪಸಿತ್ರಸೇವೆಯ, 75
ಪಳಿತಂಕ, 136
ಪಾಖಂಡಿ ದೇವತೆಗಳು, 45
ಪಾಟಲೀಪುತ್ರ ನಗರ, 44
ಪಾತಾಳನಾಗ, 49
ಪಾತಾಳಯಕ್ಷ ಸ್ತಂಭ, 200
ಪಾತ್ರಕೇಸಸಿ, 45
ಪಾದ = ಪಾದ; ಗೌ = ಚಲಿಸುವ, 124
ಪಾದಚಿಹ್ನೆ, 23, 24, 30, 83, 179, 193
ಪಾದದ್ವಯ, 193, 194
ಪಾದೋಪಗಮಣ, 124
ಪಾಸಿಸೆಟ್ಟಿ, 82, 85, 92
ಪಾಸಿಸಸೆಟ್ಟಿ, 61
ಪಾವಜ್ಜಾ, 113
ಪಾಶುಪತ, 48
ಪಾರ್ಶ್ವಸಿದೇವ, 39
ಪಾರ್ಶ್ವಸಿನಾಥ ಬಸದಿ, 171, 182, 186, 191, 208, 210, 211, 214, 230, 232
ಪಾರ್ಶ್ವಸಿಪಂಡಿತ, 115, 118
ಪಿಂಛ, 197
ಪಿಶಾಚಿ, 205
ಪುಟ್ಟಸ್ವಾಸಿಸೆಟ್ಟಿ, 80
ಪುಣ್ಯಕ್ಷೇತ್ರ, 139
ಪುಣ್ಯದೇಸಿ, 168
ಪುಣ್ಯಶಾಲಿ ಶ್ರಾವಕ, 80
ಪುರೋಹಿತ, 66, 84, 90
ಪುಳಿಚೋರಯ್ಯ, 16
ಪುಳಿಯಣ್ಣ, 16
ಪುಷ್ಪ, 140
ಪುಷ್ಪಣಂದಿ, 192
ಪುಷ್ಪಬಾಣ, 167
ಪುಷ್ಪಸೇನ, 165
ಪುಸ್ತಕಗಚ್ಛ, 27, 34, 151, 165, 166, 167, 170, 185, 197, 198
ಪುಸ್ತಕಗಚ್ಛ ಕೊಂಡಕುಂದಾನ್ವಯ, 198
ಪೂಜಕಾರ, 66
ಪೂಜಾಸಿ, 63
ಪೂಜ್ಯಪಾದ, 151, 154, 167
ಪೂಣಸಿಸ್ತಂಭ, 199
ಪೂವಸಿಗಂಧಹಸ್ತಿಪಿಟ್ಟುಗ, 19
ಪೂವಸಿಪುರಾಣಂ, 112, 114
ಪೆಂದಣ್ಣ, 85
ಪೆಗುರಮ, 192
ಪೆಗ್ಗಸಿಡೆ ಮದಿಸಿಮಯ್ಯ, 178
ಪೆಗ್ಗಸಿಡೆ ಮಾರಸಿಂಗ, 229
ಪೆಗ್ಗಸಿಡೆ ಮಾರಸಿಂಗಯ್ಯ, 145
ಪೆಗ್ಗಸಿಡೆ ಸಿಂಗಿಮಯ್ಯ, 106, 134, 141, 148, 177, 178
ಪೆಗ್ಗಸಿಳ್ವಪ್ಪ, 3, 14, 15, 25
ಪೆಗ್ಗೊಸಿರವ, 140
ಪೆನುಗೊಂಡ, 75
ಪೆರುಮಾಳ್‌ಕೋಸಿಲ್, 75
ಪೆರುಮಾಳು ಗುರುವಡಿ, 9
ಪೈಣ್ಣ, 124
ಪೊಯ್ಸಳಸೆಟ್ಟಿ, 180, 181, 237
ಪೊಲ್ಲಬ್ಬೆ, 26
ಪೊಲ್ಲಬ್ಬೆಕಂತಿ, 9, 199
ಪೋಚಾಂಸಿಕೆ, 68
ಪೋಚಿಕಬ್ಬೆ, 67, 106, 112, 114, 119, 134, 136, 141, 171, 176, 177,

218, 220, 225, 226
ಪೋಚಿಕಬ್ಬೆಯ ನಿಸಿಧಿ, 225
ಪೋಚಿಕಬ್ಬೆಯ ಮಂಟಪ, 215
ಪೋಲೋ, 20
ಪೌಗ್ಗಮಣ, 98, 99, 101, 105, 124
ಪೌಗ್ಗಮಣ ಮರಣ, 125
ಪೌದನಪುರ, 3
ಪ್ರತಿವಾದಿ, 51
ಪ್ರತ್ಯಾಖ್ಯಾನ, 124
ಪ್ರಭಾಚಂದ್ರ, 69, 109, 110, 135, 136, 138, 167, 168, 173, 174, 175, 176, 177, 178, 179, 221, 228
ಪ್ರಭಾಚಂದ್ರ ಆಚಾಯಸಿ, 1
ಪ್ರಭಾಚಂದ್ರದೇವ, 141, 178, 188
ಪ್ರಭಾಚಂದ್ರ ಭಟ್ಟಾರಕದೇವ, 126
ಪ್ರಭಾಚಂದ್ರನ ಮರಣ, 192
ಪ್ರಭಾಚಂದ್ರ ಮುನಿ, 133
ಪ್ರಭಾಚಂದ್ರ ಸಿದ್ಧಾಂತ, 168
ಪ್ರಭಾಚಂದ್ರ ಸಿದ್ಧಾಂತದೇವ, 32, 42, 67, 68, 146, 147, 149, 167, 174, 177-179, 194, 218, 219, 223
ಪ್ರಭಾವತಿ, 140
ಪ್ರಭು, 94
ಪ್ರಾಯೋಪಗಮಣ, 123-125

ಬಂಕಾಪುರ, 21, 22, 142, 150, 199, 201, 202, 217
ಬಂಡೆಗಲ್ಲ ನಿಸಿದಿ, 192
ಬಂಡೆಗಲ್ಲ ಶಾಸನ, 191
ಬಂಡೆಗಲ್ಲು, 104, 194
ಬಂಧುವಮಸಿ, 115, 117, 118
ಬಡಗಿ, 90
ಬಣಂಜಿಗ ಪಗೆಯ, 65
ಬಮ್ಮ, 184
ಬಸ್ಮುಸೆಟ್ಟಿ, 60
ಬಸಿಗ್ಗೆ ಸಾಗಳು, 87
ಬಲತ್ಕಾರಗಣ, 62
ಬಲದೇವ, 46, 59, 67, 68, 105, 109, 112, 117, 135, 141, 148, 149, 150, 192, 228, 231, 237
ಬಲದೇವ ದಂಡನಾಯಕ, 145
ಬಲದೇವಮುನಿ, 8
ಬಲದೇವಾಚಾಯಸಿ, 125
ಬಲಾತ್ಕಾರ, 27, 195
ಬಲಾತ್ಕಾರಗಣ, 35
ಬಲಿಪೀಠ, 47
ಬಲ್ಲಣ, 149
ಬಲ್ಲಪ್ಪ, 148
ಬಲ್ಲಾಳ, 152
ಬಸದಿ, 64, 88, 91, 171, 194
ಬಸವಣ್ಣ, 68, 236
ಬಸವಯ್ಯ, 16
ಬಸಸಿಸೆಟ್ಟಿ, 77, 81,82, 186, 187
ಬಸ್ತಿಹಳ್ಳಿ, 39
ಬಳಾಕಪಿಂಛ, 151
ಬಳ್ಳಾಸಿ, 142, 178
ಬಳ್ಳಿಗಾಸಿ, 86
ಬಳ್ಳಿವಾಡ, 80
ಬಾಗಣಬ್ಬೆ, 184
ಬಾಚಿಕಬ್ಬೆ, 106 145, 149, 150
ಬಾನುಸೀತಿಸಿ, 180
ಬಾರಕೂರ, 176
ಬಾಲಚಂದ್ರ, 188
ಬಾಲಚಂದ್ರದೇವ, 42, 237
ಬಾಲಪಂಡಿತ, 125, 129
ಬಾಲಪಂಡಿತ ಮರಣ, 123, 126
ಬಾಲಯ್ಯ, 71
ಬಾಸ, 16
ಬಾಹುಬಲಿ, 25, 25, 61, 126, 139, 187, 196
ಬಾಹುಬಲಿ ಪಂಡಿತ, 121
ಬಾಹುಬಲಿ ಬಸದಿ, 180
ಬಾಹುಬಲಿ ಮಲಧಾಸಿದೇವ, 238
ಬಾಹುಬಲಿ ಸಿಗ್ರಹ, 80
ಬಾಹುಬಲಿಸೆಟ್ಟಿ, 61

ಬಾಹ್ಯ, 118
ಬಾಳಚಂದ್ರ, 28, 117, 138, 183, 184, 188
ಬಾಳಚಂದ್ರದೇವ, 32, 34, 62, 67, 175, 184
ಬಿಡತಿ, 86
ಬಿಡದಿ, 82
ಬಿದಿಯಮಸೆಟ್ಟಿ, 60
ಬಿದ್ದರಯ್ಯ, 16
ಬಿಧಿಯಮ್ಮ 16
ಬಿರುದ ರೂವಾಸಿ ಮುಖತಿಲಕ, 44, 208, 209, 223, 230
ಬಿರುದ ಲೇಖಕ ಮದನಮಹೇಶ್ವರ, 44, 208
ಬಿಳಿನೀರು, 97
ಬೀರರದಬಂಟ, 16
ಬುಕ್ಕ, 88
ಬುಕ್ಕರಾಯ, 85
ಬುಧಜನಬಿನುತ, 182
ಬುದ್ಧ, 45
ಬೂಚಣ, 67, 68, 180, 199, 218, 222, 222
ಬೂಷಣ, 165
ಬೃಹತ್‌ಸುತ್ತಾಲಯ, 89
ಬೃಹತ್‌ಕಥಾಕೋಶ, 107
ಬೃಹದ್ನಯಚಕ್ರ, 108
ಬೆಕ್ಕ, 55, 56, 172, 173, 186
ಬೆಕ್ಕಕೆರೆ, 186
ಬೆಕ್ಕಗ್ರಾಮ, 39, 43, 88
ಬೆಟ್ಟ, 2
ಬೆಡದಯ್ಯ, 85
ಬೆಸಿಸ್ಸೆಟ್ಟಿ, 85
ಬೆಳ್, 96
ಬೆಳುಕೆರೆ, 169
ಬೆಳ್‌ಕೊಳ, 97
ಬೆಳಗಾಬಿ, 37, 142
ಬೆಳ್ಗೊಳ, 2, 3, 4, 14, 15, 22, 26-30, 32, 33, 37, 38, 52, 53, 54, 56, 57, 59, 60, 62, 63, 64, 66, 68, 73, 77, 80, 81, 83-90, 91, 93, 94, 95, 97, 101, 133, 139-143, 147, 148, 149, 151, 159, 161, 164, 165, 168, 173, 174, 176, 177, 179, 180, 181, 183, 184, 186, 187, 190, 193, 200, 201, 202, 203, 209
ಬೆಳ್ಗೊಳದ ಇತಿಹಾಸ, 31
ಬೆಳ್ಗೊಳ ಗ್ರಾಮ, 83
ಬೆಳ್ಗೊಳತೀಥಬಿ, 62, 76
ಬೆಳ್ಗೊಳನಗರ, 4
ಬೆಳ್ಗೊಳನಾಡ್, 84
ಬೆಳ್ಗೊಳ ಪಟ್ಟಣ, 60, 79, 81, 104, 171
ಬೆಳ್ಗೊಳದ ಪ್ರಭು, 29, 162
ಬೆಳ್ಗೊಳ ಮಠ, 80, 208
ಬೆಳ್ಗೊಳನಾಡಿ, 82, 89
ಬೇಗೂಬಿನ ಸೆಟ್ಟಿ, 83
ಬೇಗೂರು, 86
ಬೈಚಕ್ಕ, 92, 196
ಬೈರಣ್ಣ, 85
ಬೈರಸೆಟ್ಟಿ, 85
ಬೈರೋಜ, 237
ಬೊಂಬಿ, 187
ಬೊಪ್ಪ, 172
ಬೊಮ್ಮಣ್ಣ ಕಬಿ, 85
ಬೊಮ್ಮಣ್ಣ ಮಂತ್ರಿ, 80
ಬೊಮ್ಮಣ್ಣದೇವ, 59
ಬೊಮ್ಮದೇವ, 55, 59, 182, 187
ಬೊಮ್ಮನಹಳ್ಳಿ, 42, 55, 56
ಬೊಮ್ಮಯ್ಯ, 85
ಬೊಮ್ಮೇನಹಳ್ಳಿ, 186, 187
ಬೋಬಿಮಯ್ಯ, 178, 230
ಬೋಬಿಗ, 19, 45
ಬೌದ್ಧ, 45, 52, 70
ಬ್ರಹ್ಮ 167, 199, 200, 202, 204
ಬ್ರಹ್ಮದೇವ, 200, 202
ಬ್ರಹ್ಮದೇವ ಬಸದಿ, 193
ಬ್ರಹ್ಮದೇವ ಮಂಟಪ, 91

ಬ್ರಹ್ಮದೇವ ಯಕ್ಷ, 81
ಬ್ರಹ್ಮದೇವಸ್ತಂಭ, 200
ಬ್ರಹ್ಮರಾಕ್ಷಸ, 45
ಬ್ರಹ್ಮಸ್ತಂಭ, 200

ಭಂಗಿ, 136
ಭಂಡಾರ, 61, 62
ಭಂಡಾರ ಬಸದಿ, 42, 54, 59, 181, 185, 186, 200, 238
ಭಂಡಾರಿ, 232
ಭಂಡಾರಿಗ, 53
ಭಂಡಾರಿ ರಾಮದೆ, 187
ಭಂಡಾರಿ ಸಿಂಗ, 187
ಭಂಡಾರಿ ಹುಳ್ಳಮಯ್ಯ, 187
ಭಂಡಾರಿ ಹುಳ್ಳರಾಜ, 70
ಭಕ್ತಪ್ರತ್ಯಾಖ್ಯಾನ, 124
ಭಕ್ತರ, 75, 92, 75
ಭಕ್ತಿ, 92
ಭಗವತೀ ಆರಾಧನಾ, 108, 111, 120, 126, 126, 138
ಭದ್ರ, 23
ಭದ್ರಬಾಹು, 1, 13, 22, 23, 30, 97 139, 140, 143, 151, 174
ಭದ್ರಬಾಹು ಗುಹೆ, 24, 25, 192, 193, 194
ಭದ್ರಬಾಹು ನಿಸಿಧಿ, 191
ಭದ್ರಬಾಹು ಮುನಿ, 174
ಭದ್ರಬಾಹು ಶಾಸನ, 192, 193
ಭದ್ರಬಾಹುಸ್ವಾಮಿ, 192
ಭವ್ಯಚೂಡಾಮಣಿ, 54
ಭವ್ಯರು, 75
ಭಾನುಕೀರ್ತಿ, 54, 69, 109, 110, 117, 141, 142, 180, 182, 183
ಭಾನುಕೀರ್ತಿದೇವ, 37, 42, 180
ಭಾನುಕೀರ್ತಿಮುನಿ, 106
ಭಾನುಕೀರ್ತಿವ್ರತೀಂದ್ರ, 187
ಭಾನುಕೀರ್ತಿಸಿದ್ಧಾಂತ, 175, 181, 198
ಭಾನುಕೀರ್ತಿ ಸಿದ್ಧಾಂತದೇವ, 59
ಭಾನುಚಂದ್ರ, 181
ಭಾನುಚಂದ್ರಸಿದ್ಧಾಂತ ಚಕ್ರವರ್ತಿಯ, 38
ಭಾರಗಾವೆ, 83, 86
ಭಾವನಮಸ್ಕಾರ, 111
ಭುಜ್ಜತೆ-ಭುಕ್ತ, 124
ಭೂ ಒಡೆಯ ವಗರಿ, 85
ಭೌತಿಕ, 52

ಮಂಗರಾಜ, 121, 157, 211
ಮಂಟಪ, 57
ಮಂಡಲಾಚಾರ್ಯ, 162
ಮಂಡಲಾಚಾರ್ಯ ನಯಕೀರ್ತಿದೇವ , 39
ಮಂತ್ರಿ, 104
ಮಂತ್ರವಾದಿಪದ್ಮಣಂದಿದೇವ, 175
ಮಂತ್ರಿ ಚಂದ್ರಮೌಳಿ, 55
ಮಂತ್ರಿ ನಾಗದೇವ, 70
ಮಂದರ, 191, 237
ಮಜ್ಜಿಗಣ, 24
ಮಜ್ಜಿಗಣ ಬಸದಿ, 24, 25
ಮಜ್ಝತ್ಥಮ್, 108
ಮಠ, 65, 92, 160, 165, 189
ಮಠದ ಆಚಾರ್ಯ, 62, 65, 79, 188
ಮಠಾಧಿಪತಿ, 65, 90, 91, 92, 95, 163, 164
ಮಠಾಧೀಶ, 78, 161
ಮಠೀಯ ತತ್ವಗಳು, 134
ಮಠೀಯ ಸಂಸ್ಥೆ, 161
ಮಠೀಯ ಸಮುದಾಯ, 129
ಮಣಿಹಾರ, 182
ಮತಿಸಾಗರ, 29, 48, 50
ಮದಗಜ ಮುನಿವರ್ಯ, 52
ಮಧುವಯ್ಯ, 16
ಮನನ, 120
ಮನನ ಸ್ಥಳ, 126
ಮನಸಿಜಾ, 14
ಮನ್ನಾರ್‌ಕೋಯಿಲ್, 91
ಮನ್ಮಥ, 143
ಮನ್ಮಥಸಿಗೆ, 44

ಮಯೂರ ಸಂಘ, 105
ಮಯೂರ ಗ್ರಾಮ, 8, 9, 140
ಮಯೂರಗ್ರಾಮ ಸಂಘ, 9
ಮಯೂರಪಿಂಛ, 161, 154, 210, 212
ಮರಣ, 125, 140
ಮರಣಬೆಟ್ಟ, 96, 97
ಮರಣಸಿಧಿ, 117
ಮರಣಶಯ್ಯೆ, 144
ಮರಣಸ್ಥಳ, 149
ಮರಣ ಸ್ವರೂಪ, 117
ಮರವ, 216
ಮಸಿಯಾನೆದಂಡನಾಯಕ, 58
ಮಲಧಾಸಿದೇವ, 38, 44, 70, 143, 143, 177, 208
ಮಲಧಾಸಿಮುನಿ, 181
ಮಲಧಾಸಿ ರಾಮಚಂದ್ರದೇವ, 169
ಮಲಧಾಸಿಸ್ವಾಮಿ, 166
ಮಲ್ಲಷೇಣ ಮಲಧಾಸಿ, 144
ಮಲ್ಲಸೆಟ್ಟಿ, 68, 236
ಮಲ್ಲಿದೇವ, 64
ಮಲ್ಲಿನಾಥ, 70, 208
ಮಲ್ಲಿನಾಥಕಸಿ, 44
ಮಲ್ಲಿಯಣ, 183, 184
ಮಲ್ಲಿಷೇಣ, 69, 106, 117, 143, 166, 194, 210, 211, 218
ಮಲ್ಲಿಷೇಣನ ನಿಸಿದಿ, 209
ಮಲ್ಲಿಷೇಣಮಲಧಾಸಿ, 35, 37, 144
ಮಲ್ಲಿಷೇಣಮಲಧಾಸಿದೇವ, 71, 143, 146
ಮಲ್ಲಿಷೇಣಮುನಿ, 207, 208
ಮಲ್ಲಿಸೆಟ್ಟಿ, 187
ಮಲ್ಲಿಸೇನ, 92
ಮಲ್ಲಿಸೇನದೇವ, 194
ಮಸ್ತಕಾಭಿಷೇಕ, 39, 89, 90, 94
ಮಸ್ತಕಾಭಿಷೇಕೋತ್ಸವ, 38
ಮಹದೇವಸೆ, 60
ಮಹಾದೇಸಿ, 92
ಮಹಾದೇಸಿಗಣ, 198
ಮಹಾನವಮಿ, 135
ಮಹಾನವಮಿ ಮಂಟಪ, 169, 208, 214, 218, 225, 231, 232, 233
ಮಹಾಪೂಜೆ, 150
ಮಹಾಪ್ರಚಂಡದಂಡನಾಯಕ, 168
ಮಹಾಪ್ರಧಾನಿ, 71, 187
ಮಹಾಬಲ, 115, 121
ಮಹಾಭಾರತ, 115
ಮಹಾಮಂಡಲಾಚಾಯಸಿ, 34, 37, 38, 42, 59, 64, 66, 162, 179, 181, 184
ಮಹಾಮಂಡಲಾಚಾಯಸಿ ನಯಸೀತಿಸಿ ಸಿದ್ಧಾಂತಚಕ್ರವತಿಸಿ, 59
ಮಹಾಮಂಡಲಾಚಾಯಸಿ ಪ್ರಭಾಚಂದ್ರ ಸಿದ್ಧಾಂತದೇವ, 150
ಮಹಾಮಂಡಲಾಧೀಶ್ವರ. 17
ಮಹಾಮಂಡಲೇಶ್ವರ, 16
ಮಹಾಮೂತಿಸಿ, 26
ಮಹಾಯತಿ, 232
ಮಹಾರಾಷ್ಟ್ರ, 87
ಮಹಾವಡ್ಡವ್ಯವಹಾಸಿ ಸಾತಿಸೆಟ್ಟಿ, 187
ಮಹಾಸಿಗ್ರಹ, 26, 61, 74, 80, 86, 89, 94, 173
ಮಹಾಸೀರ ಜಂಬುನಾಯ್ಗ 192
ಮಹಾಶ್ರವಣ, 151
ಮಹಾಸಂಘ, 151
ಮಹೇಂದ್ರಸೀತಿಸಿ, 178
ಮಹೇಂದ್ರ ಚಂದ್ರಪಂಡಿತದೇವ, 29
ಮಹೇಶ್ವರ, 45
ಮಹೋತ್ಸವದಾಚರಣ, 38
ಮಾಂಗಾಮಿ, 89
ಮಾಂಗಾಮಿ ಬಸದಿ, 80, 81
ಮಾಘಣಂದಿ, 176
ಮಾಘಣಂದಿಮುನಿ, 39
ಮಾಘಣಂದಿಭಟ್ಟಾರಕ, 175, 181
ಮಾಘಣಂದಿಭಟ್ಟಾರಕದೇವ, 188
ಮಾಘಣಂದಿಸಿದ್ಧಾಂತ ಚಕ್ರವತಿಸಿ, 37, 169
ಮಾಚಯ್ಯ, 16
ಮಾಚವ್ವೆ ಸೆಟ್ಟಿತಿ, 187

ಮಾಚಿಕಬ್ಬೆ, 67, 68, 106, 112, 113, 117, 125, 132, 135, 139, 141, 145, 146, 147, 148, 178, 180, 209, 215, 220, 228, 229, 230, 237
ಮಾಚಿಕಬ್ಬೆ ನಿಸಿಧಿ, 230
ಮಾಚಿಕಬ್ಬೆ ಮಂಟಪ, 208, 215, 218
ಮಾಣಿಕ್ಯ ನಖರ, 62
ಮಾಧವಚಂದ್ರ, 169, 170, 235
ಮಾಧವೇಂದು, 70, 169
ಮಾನವಂ ಸ್ತಂಪಿಸುವ ಮಾನಸ್ತಂಭ, 201
ಮಾನಸ್ತಂಭ, 21, 22, 24, 81, 142, 150, 190, 198, 199, 200, 201, 202, 205, 207
ಮಾಯಣ, 82
ಮಾರವಾಡ, 80, 87
ಮಾರವಾಡದ ಯಾತ್ರಿ, 74
ಮಾರಸಿಂಗ, 229
ಮಾರಸಿಂಗಮಯ್ಯ, 229
ಮಾರಸಿಂಘ, 229
ಮಾರಸಿಂಹ, 21, 22, 24, 27, 106, 110, 42, 150, 199, 200, 201, 202, 207
ಮಾರಸಿಂಹ ನಿಸಿಧಿ, 205
ಮಾರಸಿಂಹನ ನಿಸಿಧಿ, 205
ಮಾಸಿಕಬ್ಬೆಗಂತಿ, 69
ಮಾಲನೂಸಿನ ಉಗ್ರಸೇನ, 192
ಮಾಲನೂರು, 140
ಮಾಲೆಗಾರ, 61
ಮಾಳವ, 44
ಮಾವನಗಂಧಹಸ್ತಿ ಪಿಟ್ಟುಗ, 141
ಮಾಸೇನ, 8
ಮಾಸೇನ ಋಷಿ, 10
ಮಾಸೋಪವಾಸ, 192
ಮುಂಬಸಿ, 107
ಮುಕ್ಕೊಡೆ, 211, 212, 225, 226, 227, 229, 230, 234
ಮುಖತಿಲಕ, 210
ಮುಜಪರ್‌ಪುರ, 117
ಮುತ್ತಗೆಹೊನ್ನ(ವ)ಳಿ, 82, 89
ಮುದ್ದಣ್ಣ, 85
ಮುನಿಚಂದ್ರದೇವ, 43
ಮುನಿ ಭಾನುಸೀತಿಸಿ, 68
ಮುನಿ ಮಹೇಶ್ವರ, 45
ಮುನಿವಂಶಾಭ್ಯುದಯ, 90
ಮುನಿವಯಸಿ, 75
ಮುನಿವ್ರತ, 137
ಮುನಿ ಶ್ರೀಪಾಲತ್ರೈಸಿದ್ಯದೇವ, 42
ಮುನೀಂದ್ರ, 182
ಮುಮ್ಮಡಿ ಕೃಷ್ಣ, 20
ಮುಳ್ಳನಾಯಕ, 80
ಮುಳ್ಳೂರ್, 177
ಮುಳ್ಳೂಸಿನ ಗುಣಸೇನ, 50
ಮೂಲಮಂತ್ರ, 122
ಮೂಲಸಂಘ ಬಲಾತ್ಕಾರ ಗಣ, 34
ಮೂಲಸಂಘ, 23, 27, 29, 31, 32, 34, 36, 38, 39, 58, 59, 64, 73, 88, 94, 166, 167, 170, 185, 195, 197, 238
ಮೂಲಸಂಘ-ದೇಸಿಯಗಣ, 33
ಮೂಲಸಂಘ-ದೇಸಿಗಗಣ ಕೊಂಡಕುಂದಾನ್ವಯ, 35
ಮೂಲಸಂಘದ ಆಚಾಯಸಿ, 56
ಮೂಲಸಂಘದ ದೇಸಿಗಗಣ-ಪುಸ್ತಕಗಚ್ಛ-ಕೊಂಡಕುಂದಾನ್ವಯ, 27
ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛ, 59
ಮೂಲಸಂಘದ ವಕ್ರಗಚ್ಛ, 27
ಮೂಲಸಂಘದ ವಕ್ರಗಚ್ಛ ಶಾಖೆ, 28
ಮೂಲಸಂಘದ ಶ್ರಮಣರು, 58
ಮೂಲಸ್ತಂಭ, 58
ಮೂಲಸ್ತೋತ್ರ, 137
ಮೂಲಾರಾಧನಾ, 108
ಮೃದುರೇಖಾಶಿಳಾಸ, 223
ಮೆಳ್ಳಿಗವಾಸಗುರವ, 140
ಮೇಘಚಂದ್ರ, 166, 167, 168, 176, 221,

223, 225
ಮೇಘಚಂದ್ರ ತ್ರೈಸಿದ್ಯದೇವ, 34, 67, 69, 136, 166, 176, 177, 179, 180 218, 219, 222
ಮೇಘಚಂದ್ರ ಸಿದ್ಧಾಂತದೇವ, 221
ಮೇಘಚಂದ್ರ ಕಲ್ಯಾಣಕೀತಿಸಿ, 28
ಮೇಘಚಂದ್ರದೇವ, 141
ಮೇಘಣಂದಿ, 140
ಮೇರು, 167, 217
ಮೇರುಹಳ್ಳಿ, 55, 56
ಮೇಳಿಪಯ್ಯ, 16
ಮೈಸೂರು, 85, 112
ಮೈಸೂಸಿನ ಅರಸ, 90
ಮೈಸೂರು ಅರಸ, 85, 90
ಮೈಸೂರು ಒಡೆಯರ, 103
ಮೊಟ್ಟನಸಿಲೆ, 42, 56
ಮೊಟ್ಟನಸಿಲೆಗ್ರಾಮ, 55, 177
ಮೊಸಳೆ, 60
ಮೊಸಳೆಯ ಪಟ್ಟಣಸ್ವಾಮಿ, 236
ಮೊಸಳೆಯ ದೇಸಿಸೆಟ್ಟಿ, 60, 68
ಮೊಸಳೆಯ ವತಸಿಕವಗಸಿ, 60
ಮೋಕ್ಷತಿಳಕ ವ್ರತ, 171
ಮೋಕ್ಷಮಾಗಸಿ, 92
ಮೋನಿಗುರವ, 52
ಮೋಸಿಂಗರೆ, 140, 142, 148, 149, 178, 217
ಮೋಷ್ಟಿಕ, 75
ಮೌನಾಚಾಯಸಿ, 52
ಮೌನಿಯಾಚಾಯಸಿ, 32
ಮೌಯಸಿಸಾಮ್ರಾಟ, 1

ಯಕ್ಷ, 209
ಯಕ್ಷನ ಮೂತಿಸಿ, 202, 206
ಯಕ್ಷನ ಸಿಗ್ರಹ, 201, 202
ಯಕ್ಷಿ, 45
ಯಕ್ಷಿಪೂಜೆ, 51
ಯಾತ್ರಿ, 91
ಯಾತ್ರಿಕ, 86, 90
ಯು.ಪಿ.ಷಾ, 194
ಯೋಗಂಧರಾಯ, 59
ಯೋಗಪಟ್ಟ, 210, 235
ಯೋಗೀಂದ್ರ, 71

ರಂಗೈಯ, 91
ರಜತಗಿಸಿ, 182
ರಜನೀಮತಿ, 140
ರಜನೀಮತಿಗಂತಿ, 11
ರಜನೀಮತೀ, 52
ರಣಸಿಂಗ, 204
ರಣಸಿಂಘ, 205
ರಣಾವಲೋಕ, 14
ರತ್ನವ್ಯಾಪಾಸಿ, 61
ರತ್ನಕರಂಡಕ ಶ್ರಾವಕಾಚಾರ, 120, 132, 138
ರತ್ನತ್ರಯ, 131
ರತ್ನತ್ರಯ ನೋಂಪಿ, 82
ರತ್ನವ್ಯಾಪಾಸಿಗಳು, 57
ರತ್ನ.ಶ್ರಾ, 111
ರಸಿಚಂದ್ರ, 135, 146, 167, 176, 178, 179
ರಾಗಿಬೊಮ್ಮನಹಳ್ಳಿ, 86, 91
ರಾಚಮಲ್ಲ, 56, 60
ರಾಚಮಲ್ಲನ ಸೇನಬೋವ, 16, 17
ರಾಚಮಲ್ಲಸೆಟ್ಟಿ, 236
ರಾಚೇನಹಳ್ಳಿ, 53
ರಾಜ, 56
ರಾಜಗುರು, 34, 37, 38, 39, 42, 43, 62, 64, 66, 184
ರಾಜದ್ರೋಹ, 65
ರಾಜಪಾತ್ರದ ಚೂಡಾಮಣಿ ಮಾಂಗಾಸಿ, 79
ರಾಜವತಸಿಕ, 53
ರಾಜಶಾಸನ, 75
ರಾಜಸ್ಥಾನ, 87
ರಾಜಾ ಜಯಸಿಂಹ, 48
ರಾಣಿ ಮನಸಿಜಾ, 16
ರಾಮಚಂದ್ರ, 138
ರಾಮಚಂದ್ರದೇವ, 169

ರಾಮಣ್ಣ, 85
ರಾಮಪುರ ಶಾಸನ, 29
ರಾಮಾನುಜ, 75
ರಾಮೋಜ, 179, 231
ರಾಯಶ್ರೇಷ್ಠ, 205
ರಾಯಚೂಡಾಲಂಕೃತ, 36
ರಾಯರಾಜಗುರು, 169
ರಾಷ್ಟ್ರಕೂಟ, 15, 24, 208, 214
ರಾಷ್ಟ್ರಕೂಟ ಅರಸ, 19, 20, 103, 217,
ರಾಷ್ಟ್ರಕೂಟ ಅರಸ ಇಮ್ಮಡಿ ಇಂದ್ರ, 141
ರಾಷ್ಟ್ರಕೂಟ ಇಂದ್ರ, 218
ರಾಷ್ಟ್ರಕೂಟ ಕೃಷ್ಣರಾಜ, 48
ರಾಷ್ಟ್ರಕೂಟ ನಾಲ್ವಡಿ ಇಂದ್ರನ ಮಂಟಪ, 215
ರಾಷ್ಟ್ರಕೂಟ ಶ್ರೀವಲ್ಲಭ ಮಹಾರಾಜ, 14
ರಾಷ್ಟ್ರಕೂಟರಾಜ್ಯ, 15
ರಾಹು, 167, 227
ರುದ್ರ, 154
ರೂಪಸಿದ್ಧಿ, 50
ರೂವಾರಿ, 17, 179, 192, 193, 209, 210, 232, 235
ರೂವಾರಿ ಗಂಗಣ್ಣ, 179
ರೂವಾರಿ ಗಂಗಾಚಾರಿ, 70, 209
ರೂವಾರಿ ದಾಸೋಜ, 231
ರೇಚಣ, 169
ರೇಚಣದಂಡನಾಯಕ, 169
ರೇಚರಸ, 57, 59
ರೇಚಿಮಯ್ಯ, 32

ಲಕ್ಕಣಂದಿ, 70
ಲಕ್ಷ್ಮ, 221, 223
ಲಕ್ಷ್ಮಿಯ ನಿಸಿದಿ, 221
ಲಕ್ಷ್ಮೀ, 152, 180
ಲಕ್ಷ್ಮೀದೇವಿ, 68
ಲಕ್ಷ್ಮೀದೇವಿ ನಿಸಿಧಿ, 57
ಲಕ್ಷ್ಮೀಮತಿ, 60, 67, 68, 115, 117, 134, 167, 168, 170, 171, 176, 177, 178, 180, 218, 221, 223, 229, 230
ಲಕ್ಷ್ಮೀಮತಿ ಮಂಟಪ, 221, 227
ಲಕ್ಷ್ಮೀಸೇನಭಟ್ಟಾರ, 92, 194
ಲಕ್ಷುಮಿಸೇನ ದೇವ, 193
ಲಿಪಿಕಾರ, 179, 235
ಲಿಪಿಕಾರ ಗಂಗಣ್ಣ, 232
ಲೆಕ್ಕಿಗರು, 85
ಲೇಖಕ, 85
ಲೋಕಾಯತ, 51
ಲೋಹವಿಗ್ರಹ, 92
ಲೋಹಾಚಾರ್ಯ, 108

ವಂಕಾಪುರ, 27
ವಕ್ರ, 27, 51
ವಕ್ರಗಚ್ಛ, 29
ವಕ್ರಗಚ್ಛ ಉಪಶಾಖೆ, 32
ವಕ್ರಗಚ್ಛ ಬಸದಿ, 23, 24
ವಕ್ರಗಚ್ಛಶಾಖೆ, 23, 28
ವಕ್ರಗಚ್ಛಸಂಘದ, 29
ವಕ್ರಗ್ರೀವ, 44
ವಜ್ರಣಂದಿಮುನಿ, 50
ವಜ್ರಾಯುಧ, 49
ವಡ್ಡವ್ಯವಹಾರಿ, 187
ವಡ್ಡಾರಾಧನಾ, 109
ವಡ್ಡಾರಾಧನೆ, 109, 131
ವಣಜಿಗ, 79
ವನವಾಸಸ್ವಾಮಿ, 195
ವಪ್ರ, 2, 96
ವರ್ತಕ, 66, 90
ವರ್ತಕನಾಯಕ, 65
ವರ್ತಕಸಮುದಾಯ, 61, 62, 66, 68, 71, 81, 83
ವರ್ಧಮಾನ, 135, 210
ವರ್ಧಮಾನದೇವ, 146, 178, 179
ವರ್ಧಮಾನಸ್ವಾಮಿ, 35, 195, 195
ವರ್ಧಮಾನಾಚಾರಿ, 209, 210
ವಾಕ್ಯೆ ಪಂಚನಮಸ್ಕ್ರಿಯಾಮ್, 113
ವಾದಿಕಂಠೀರವ, 51
ವಾದಿಕುಳವಜ್ರಾಯುಧ, 51

ವಾದಿಕೋಲಾಹಲ, 49, 51, 52
ವಾದಿಚತುಮುಸಿಖ ತ್ರೈಸಿದ್ಯದೇವ, 169
ವಾದಿರಕ್ಕಸ, 45
ವಾದಿರಾಜ, 48, 49, 51
ವಾದಿರಾಜದೇವ, 39, 43
ವಾದಿರಾಜಮುನಿ, 52
ವಾದೀಕೋಲಾಹರ, 71
ವಾಧೀಭಕಂಸೀರವ, 49
ವಾದೀಭಸಿಂಹ, 32, 49, 51, 52, 71, 75
ವಾಸವಚಂದ್ರ, 27
ವಾಸವಚಂದ್ರಪಂಡಿತದೇವ, 29
ಸಿಂಧ್ಯಗಿಸಿ (ದೊಡ್ಡಬೆಟ್ಟ), 2
ಸಿಜಯನಗರ, 79, 82, 83, 103
ಸಿಜಯನಗರದರಸ, 75, 78
ಸಿಜಯನಗರ ರಾಜ್ಯ, 77
ಸಿಜಯನಗರ ಸಾಮಂತ, 83
ಸಿಜಯಸಿಲಾಸ, 52, 71
ಸಿಜಯಸ್ತಂಭ, 20, 22
ಸಿಜೆಯಣ್ಣ, 85
ಸಿಜ್ಜಿಲದೇವ, 205
ಸಿದ್ದೆಪಯ್ಯ, 16
ಸಿದ್ಯಾಧನಂಜಯ, 48, 50
ಸಿದ್ಯಾನಂದಿ, 165
ಸಿಧಾಯ ನಿಶ್ಶಲ್ಯಮ್ ಅಶೇಷ ಜಂತೋಃ, 144
ಸಿಧಿ, 122, 152
ಸಿಧಿರಹಿತ ಮರಣ, 92
ಸಿಧಿಸಂಹಿತೆ, 93
ಸಿನಯದೇವ, 52
ಸಿಮಲಚಂದ್ರ, 48, 165
ಸಿರಸ್ತಿ, 133
ಸಿಶಾಲಸೀತಿಸಿದೇವ, 195
ಸಿಶೋಕಭಟ್ಟಾರ, 140
ಸಿಷ್ಣು, 152, 167
ಸಿಷ್ಣುವಧಸಿನ, 42, 54, 55, 58, 71, 145, 171, 177, 178, 180
ಸಿಷ್ಣುಸಿನ ದಕ್ಷಮಂತ್ರಿ, 56
ಸೀಯರಾಯತಮ್, 108
ಸೀರ, 18
ಸೀರಗಲ್ಲು, 18, 19, 58, 204, 205
ಸೀರನಂದಿಸಿದ್ಧಾಂತಿ, 179
ಸೀರಬಣ್ಣ ಪಸಿಕರ ನಸಿಗ, 17
ಸೀರಬಲ್ಲಾಳ, 58, 187
ಸೀರಬುಕ್ಕರಾಯ, 75
ಸೀರಮರಣ, 89
ಸೀರಯ್ಯ, 85
ಸೀರಸೇನ, 167
ಸೀರಸ್ತಂಭ, 20
ವೃತ್ತಿ-ಶ್ರೇಣಿ, 61
ವೃಷಭ, 34, 182
ವೃಷಭಗಣ, 34, 168
ವೃಷಭಣಂದಿ, 11, 138, 140
ವೃಷಭಣಂದ್ಯಾಚಾಯಸಿ, 28
ವೃಷಭನಂದಿ, 109
ವೆಳ್ಗೊಳ, 96
ವೈಜಬ್ಬೆ, 193
ವೈಜಯ್ಯ, 16
ವೈದೇಶ, 44
ವೈದ್ಯರು, 82
ವೈಶೇಷಿಕ, 51, 70
ವೈಷ್ಣವ, 52, 229
ವೈಷ್ಣವದಶಸಿನ, 76
ವೈಷ್ಣವರ, 76
ವ್ಯವಹಾರ ಸಮ್ಯಕ್ತ್ವ, 124
ವ್ಯಾಪಾಸಿ, 85
ವ್ರತ, 18, 96, 104
ವ್ರತ ದೀಕ್ಷೆ, 115
ವ್ರತನಿಯಮ, 98
ವ್ರತಾಚರಣೆ, 101, 155

ಶಕುನಶಾಸ್ತ್ರ, 174
ಶಬ್ಧಚತುಮುಸಿಖ, 50
ಶಲ್ಯಗ್ರಾಮ, 42, 54, 62, 71
ಶಾಂತ, 173
ಶಾಂತರಾಜಶಾಸ್ತ್ರಿ, 112
ಶಾಂತಲೆ, 42, 52, 55, 58, 67, 69, 106,

112, 141, 145, 176, 177, 178, 180, 229
ಶಾಂತಿ.... ಭಟ್ಟಾಚಾಯಸಿ, 38
ಶಾಂತಿಕಬ್ಬೆ 180, 190, 237
ಶಾಂತಿಸೀತಿಸಿದೇವ, 92, 196
ಶಾಂತಿಸೀತಿಸಿಭಟ್ಟಾರಕದೇವ, 38
ಶಾಂತಿಚಂದ್ರ, 181,
ಶಾಂತಿಣಂದಿ, 52
ಶಾಂತಿದೇವ, 50
ಶಾಂತಿನಾಥ, 24, 50, 118
ಶಾಂತಿನಾಥ ಪಂಡಿತದೇವ, 49
ಶಾಂತಿನಾಥ ಬಸದಿ, 25, 169, 214
ಶಾಂತಿಸೇನ, 12
ಶಾಂತಿಸೇನಮುನಿ, 8
ಶಾಂತೀಶ್ವರ ಬಸದಿ, 57, 81, 84
ಶಾದೂಸಿಲ ಸಿಸ್ರೀಡೆ, 44
ಶಾಸನಕಸಿ, 56
ಶಾಸನ ದೇವತೆ, 44
ಶಾಸನ ನಿಸಿಧಿ, 192
ಶಾಸನ ಬಸದಿ, 57
ಶಾಸನ-ಸ್ಮಾರಕ, 104
ಶಾಸನಿತ ನಿಸಿಧಿ, 190
ಶಿಖರ, 166
ಶಿಖರ ಸೋಪಾನ, 237
ಶಿರೂರ, 3, 51
ಶಿಲಾಕೂಟ, 104, 143, 183, 190, 237
ಶಿಲಾಫಲಕ, 150, 163, 230, 237
ಶಿಲಾಶೈಲ, 18
ಶಿವ, 45, 51, 167
ಶಿವಕೋಟ್ಯಾಚಾಯಸಿ, 115, 118, 121, 126, 131
ಶಿವಗಂಗೆ, 145
ಶಿವನಿಲೆ, 7
ಶಿವಮಾರ, 23
ಶಿವಮಾರ ಬಸದಿ, 28
ಶಿವಾಕೋಟ್ಯಾಚಾಯಸಿ, 109
ಶಿವಾಯಸಿ, 108
ಶಿಷ್ಯ, 180, 182
ಶುಕ್ಲಧ್ಯಾನ, 14, 131, 136
ಶುಭಸೀತಿಸಿದೇವ, 167, 195
ಶುಭಚಂದ್ರ, 37, 68, 141, 168, 169, 171, 173, 232
ಶುಭಚಂದ್ರಸೀತಿಸಿದೇವ, 28
ಶುಭಚಂದ್ರದೇವ, 68, 177, 180, 218, 226, 227
ಶುಭಚಂದ್ರ ಮಹಾಯತಿ, 233, 235
ಶುಭಚಂದ್ರಮುನಿ, 169
ಶುಭಚಂದ್ರ ಸಿದ್ಧಾಂತ, 177, 219
ಶುಭಚಂದ್ರ ಸಿದ್ಧಾಂತದೇವ, 32, 42, 67, 69, 169-172, 179, 180, 222, 225
ಶುಭಚಂದ್ರಸಿದ್ಧಾಂತದೇವನ ಸ್ತಂಭ, 225
ಶುಭ್ರಾಭ್ರ, 182
ಶೃತಸೀತಿಸಿಭಟ್ಟಾರಕ, 151, 158
ಶೃತಸಿಂದು, 50
ಶೃತಮುನಿ, 94, 135, 138, 151-159, 207, 212
ಶೆಟ್ಟರ್, 23, 70, 140, 200, 210
ಶೇಷ, 154
ಶೇಸೆ, 64
ಶೈಲ, 2
ಶೈಲಶಿಖರ, 2
ಶೈಲಶಿಲೆ, 18, 22, 24
ಶೈವ, 48, 145, 229
ಶೌಚಾಯಸಿ, 52
ಶ್ರಮಣ, 203
ಶ್ರಮಣ ವಡ್ಡದೇವ, 27
ಶ್ರಮಣನ ಐತಿಹ್ಯ, 23
ಶ್ರವಣ-ಕಂತಿಯ, 198
ಶ್ರವಣಬೆಳ್ಗೊಳ, 1, 2, 4, 5, 22, 23, 27, 35, 41, 51, 53, 57, 59, 75, 76, 77, 81, 88, 96, 99, 100, 101, 105, 109, 112, 145, 116, 119, 120, 121, 123, 125, 127, 128, 129, 130, 138, 139, 157, 159, 160,

173, 191, 200, 210, 217, 226, 228, 236
ಶ್ರೀಕಂಠಯ್ಯ, 16
ಶ್ರೀಚಾವುಂಡಯ್ಯ, 16
ಶ್ರೀದೇವನ ಪಾದ, 193
ಶ್ರೀಧರದೇವ, 166
ಶ್ರೀಧರನ್, 15
ಶ್ರೀನಾಗವಮ್ಮಸಿ, 16
ಶ್ರೀಪ್ರಭು, 179
ಶ್ರೀಪಾಲತ್ರೈಸಿದ್ಯದೇವ, 37, 43, 52, 54, 62
ಶ್ರೀಪಾಲದೇವ, 50
ಶ್ರೀಪಾಲಯೋಗೀಂದ್ರ, 43, 71
ಶ್ರೀಪುಷ್ಪಣಂದಿ, 7
ಶ್ರೀಪೂರಾನ್ವಯ, 9
ಶ್ರೀಬಮ್ಮ 15
ಶ್ರೀಬಲದೇವಾಚಾಯಸಿ, 7
ಶ್ರೀಮಂತ ವತಸಿಕ, 104
ಶ್ರೀಮತಿಕಂತಿ, 117
ಶ್ರೀಮತಿಗಂತಿ, 69
ಶ್ರೀಮತೀ, 109
ಶ್ರೀರಂಗಪಟ್ಟಣ, 140
ಶ್ರೀರಣಧೀರ, 15
ಶ್ರೀರತ್ತ, 15
ಶ್ರೀಲಂಕೆಯ, 27
ಶ್ರೀವದ್ದಸಿದೇವ, 45, 50
ಶ್ರೀವಮ್ಮಸಿ, 16
ಶ್ರೀವೈಷ್ಣವ, 75, 76, 77, 78, 81, 82, 145
ಶ್ರೀವೈಷ್ಣವನಾಯಕ, 76, 77
ಶ್ರೀಸಂಘ, 8, 9, 10, 140
ಶ್ರೀಸಂದ್ವಿಗ್ನಸಂಘ, 8
ಶ್ರೀಹಸಿಷೇಣಾಚಾಯಸಿ, 107
ಶ್ವೇತಕಮಲ, 182
ಶ್ವೇತಛತ್ರ, 182
ಶ್ವೇತಸರೋವರ, 3, 4

ಷಡ್ದಶಸಿನ, 51, 167
ಷೂಸ್ಪ್ರಿಂಗ್, 126

ಸಂಕಯ್ಯ, 16, 17
ಸಂಘ, 35, 87, 94
ಸಂಘನಾಯಕ, 77, 195
ಸಂದ್ವಿಗ್ನಗಣ, 9
ಸಂಧಿಸಿಗ್ರಹಿ, 183
ಸಂಪ್ರಜ್ಞಾತಾ, 120
ಸಕಲೇಂದು, 167
ಸಕಲೇಂದುಮುನಿ, 166
ಸತೀಕಂಬ, 18
ಸನ್ನದ್, 64, 85
ಸನ್ನಸನ, 101, 126
ಸನ್ಮತಿಸಾಗರವಣಿಸಿ, 91
ಸನ್ಯಸನವ್ರತ, 115
ಸನ್ಯಸನಯೋಗದೊಳ್, 115
ಸನ್ಯಸ, 159
ಸನ್ಯಸ ಆರಾಧಿತ, 137
ಸನ್ಯಸನ, 98, 100, 105, 106, 110, 113, 114, 116, 117, 119, 121, 123, 128, 137, 146, 223
ಸನ್ಯಸನದೀಕ್ಷೆ, 106, 114
ಸನ್ಯಸನಮರಣ, 12, 113, 114 116
ಸನ್ಯಸನವ್ರತ, 137, 146, 148, 177, 178,
ಸನ್ಯಸನವ್ರತಾ, 166, 172
ಸನ್ಯಸನ ಶಾಸ್ತ್ರಕ್ರಮಾತ್, 115, 134
ಸನ್ಯಸನ ಸನ್ನ, 110
ಸನ್ಯಸನ ಸನ್ನದ್ಧ, 110, 115
ಸನ್ಯಸನ ಸಮನ್ವಿತಮ್, 115
ಸನ್ಯಸನದ ಸಿಧಿಸಿಮ್, 115
ಸನ್ಯಸನಮ್‌ಗೆಯ್ದು, 114, 115
ಸನ್ಯಸನಮ್‌ನೊಂತ, 115
ಸಸೀಜ, 120
ಸಭಾಮಂಟ, 202
ಸಮಂತಭದ್ರ, 44, 118, 151, 154
ಸಮಂತಭದ್ರಮುನಿ, 143
ಸಮದಾ, 108
ಸಮಯದ್ರೋಹ, 65

ಸಮುಸಿ, 75
ಸಮವಸರಣ, 201
ಸಮಾಧಿ, 67, 84, 93, 98, 99-101, 105, 106, 110, 113, 114, 115, 117, 119, 120, 121, 122, 126, 128, 139, 145, 146, 152, 159, 169, 179, 216, 223, 237
ಸಮಾಧಿ ಕಥನ, 178
ಸಮಾಧಿನಿರತ, 213
ಸಮಾಧಿ ಪತಣ, 113
ಸಮಾಧಿಪೀಠ, 212
ಸಮಾಧಿ ಪ್ರಭೇದ, 158
ಸಮಾಧಿ ಬೆಟ್ಟ, 4, 94, 96, 97
ಸಮಾಧಿ ಮರಣ, 8, 26, 34, 66, 69, 71, 73, 79, 82, 83, 92, 93, 95, 96, 98, 102, 103, 105, 106, 122, 123, 138, 159, 162, 192, 203, 233
ಸಮಾಧಿ ಮರಣಮ್ ಭವತು, 121
ಸಮಾಧಿ ಮರಣಾಥಿಸಿ, 201
ಸಮಾಧಿಯೋಗ, 120
ಸಮಾಧಿಯೋಗ್ಯ ತಪ, 158
ಸಮಾಧಿ ಲೇಖ, 36, 157
ಸಮಾಧಿ ಸಿಧಿ, 113, 201
ಸಮಾಧಿ ವ್ರತ, 60, 68, 113, 134, 141, 142, 150, 151, 153, 189, 166, 173, 189, 226
ಸಮಾಧಿ ವ್ರತಾಚರಣೆ, 54, 80, 104, 105, 121, 135, 151, 173, 176
ಸಮಾಧಿ ಶಾಸನ, 146, 147
ಸಮಾಧಿ ಸಾಧಕ, 22
ಸಮಾಧಿ ಸ್ವೀಕಾರ, 40
ಸಮ್ವೇಗರಂಗಶಾಲಾ, 108
ಸರಸ್ವತಿ, 45, 48, 49
ಸಬಸಿಣಂದಿ, 192
ಸವಸಿಸಾಧು, 111
ಸವಸಿಜ್ಞ ಭಟ್ಟಾರಕ, 8, 52
ಸವಸಿಸಂಗ ಪಸಿತ್ಯಾಗ ಪೂರ್ವ್ವಸಿಕ, 28
ಸವಸಿಸಾಹುಣಮ್, 111
ಸವಾಸಿಧಿಕಾಸಿ, 71
ಸವಾಸಿಹ್ಣಯಕ್ಷ, 200, 201-202
ಸಲ್ಲೇಖನ, 115
ಸಲ್ಲೇಖನಾ, 69, 93, 98-101, 105-106, 110, 113, 114, 117, 126, 128, 137, 144, 152, 158, 159, 223, 237
ಸಲ್ಲೇಖನಾ ಅತಿಚಾರ, 118
ಸಲ್ಲೇಖನಾ ನಿಸಿುತ್ತ, 110
ಸಲ್ಲೇಖನಾ ಮರಣ, 119
ಸಲ್ಲೇಖನಾ ಮಾಗಸಿ, 144
ಸಲ್ಲೇಖನಾ ವ್ರತ, 119, 212
ಸಲ್ಲೇಖನಾ-ಸಮಾಧಿ, 128
ಸಲ್ಲೇಖನಾ-ಸಮಾಧಿ-ಸನ್ಯಸನ, 128
ಸವಣೇರು, 55, 56, 186
ಸವಣೇರು ಗ್ರಾಮ, 42, 54-56
ಸವತಿಗಂಧವಾರಣ, 52, 214
ಸವತಿಗಂಧವಾರಣ ಬಸದಿ, 42, 55, 145, 177, 179, 180, 215, 227
ಸಸಿಮತಿ ಕಂತಿ, 105
ಸಸೀಮತಿ, 138
ಸಸಿಮತೀ, 52
ಸಹನಾದೇಸಿ, 168
ಸಹಸ್ರಕೂಟ ಜಿನಾಲಯ, 169
ಸಾ ಪ್ರತ್ಯಯ, 87
ಸಾಂಖ್ಯ, 51
ಸಾಗರನಂದಿ, 169
ಸಾಗರಾವೃತ್ತ, 172
ಸಾಗಾರಧಮಾಸಿಮೃತ, 138
ಸಾಣೇಹಳ್ಳಿ, 55
ಸಾತ್ವಿಕ, 75
ಸಾಧನಾ, 122
ಸಾಧು, 110, 112
ಸಾಮಂತ, 61, 66, 81
ಸಾಮಂತಪ್ರಭು, 16
ಸಾಮಂತ ಬಸದಿ, 39
ಸಾಮಂತರು, 17, 62

ಸಾಮಂತಾಧಿಪತಿ, 168
ಸಾಮಶ್ರೀ, 38
ಸಾಸಿಬ್ಬೆ, 10, 26
ಸಾಸಿಬ್ಬೆಕಂತಿ, 9
ಸಾಲಂಬನಾ, 120
ಸಾವಂತ ಬಸದಿ, 169
ಸಾವಂತಬೋವರು, 75
ಸಾಸಿಯಬ್ಬೆ, 19
ಸಿಂಗಣ, 149
ಸಿಂಗಣಂದಿ, 192
ಸಿಂಗಿಮಯ್ಯ, 47, 67, 68, 112, 113, 148, 150, 151, 178, 218, 228, 230, 231
ಸಿಂಗಿಸಮುದ್ರ, 175, 186
ಸಿಂದಯ್ಯ, 16
ಸಿಂದು, 44
ಸಿಂಹಶಾಖೆ, 176
ಸಿಂಹ, 34, 151
ಸಿಂಹಣಂದಿ, 26
ಸಿಂಹಣಂದಿ ಆಚಾಯಸಿ, 93, 195
ಸಿಂಹಣಂದಿಭಟ್ಟಾಚಾಯಸಿ, 38
ಸಿಕದರ್, 117
ಸಿದ್ದಾಂತ, 160
ಸಿದ್ಧಾಂತದೇವ, 69
ಸಿದ್ಧಾಂತಬಸದಿ, 88, 157
ಸಿದ್ಧಾಂತಯೋಗಿ, 153, 157
ಸಿದ್ಧ, 110, 111, 112, 122
ಸಿದ್ಧರ ಬಸದಿ, 207, 211
ಸಿದ್ಧರಗುಂಡು, 40, 193, 194, 196, 197
ಸಿದ್ಧಶಾಸ್ತ್ರ, 153
ಸಿದ್ಧಸಮಯ, 10 , 137
ಸಿದ್ಧಸ್ಥ, 98
ಸಿದ್ಧಸ್ವರೂಪ, 137, 156
ಸಿಸಿಯವ್ವೇ, 150, 178, 178, 178
ಸಿಸಿಯಾದೇಸಿ, 150
ಸೀತಾತಟಾಕ, 3
ಸುಗತ, 45, 51
ಸುಜನೋತ್ತಂಸ ಬೊಪ್ಪಣಪಂಡಿತ, 188
ಸುತ್ತಾಲಯ, 80, 81, 88, 173, 186
ಸುದ್ಧೋಬಾವೊ, 108
ಸುಭಕರಯ್ಯ, 16
ಸುಮತಿದೇವ, 50
ಸುಮತೀಶತಕ, 50
ಸುರಪಾದ, 98
ಸುರಲೋಕ, 98, 153
ಸುವಣಸಿಪೀತಗಿಸಿ, 167
ಸೂಯಸಿ, 217
ಸೂಸಿ, 153, 153
ಸೆಟ್ಟಪಯ್ಯ, 16
ಸೆಟ್ಟಿ, 60, 83, 94
ಸೆಟ್ಟಿಕವ್ವೆ, 68, 59
ಸೆಟ್ಟಿಗರು, 80
ಸೆಟ್ಟಿಗಳು, 86
ಸೆಟ್ಟಿಸೆಟ್ಟಿಕವ್ವೆಯರು, 61
ಸೇನ, 176
ಸೇನಅಡಿಗಳ್, 14
ಸೇನಬೋವ, 60, 85
ಸೇನಶಾಖೆ, 151
ಸೇನಸಂಘ, 34,
ಸೇನಾಚಾಸಿ, 141
ಸೇವಣುಬಲ್ಲರದೇವ, 232
ಸೊಗಾನಿ, 120
ಸೋಪಾನಪಂಸ್ತಿ, 89, 204
ಸೋಮಚಂದ್ರ ಸಿದ್ಧಾಂತಚಕ್ರವತಿಸಿ, 38
ಸೋಮನಾಥಪುರ, 103
ಸೋಮಸೇನದೇವ, 196
ಸೋವಣಗೌಡ, 187
ಸೌಂದಯಾಸಿಯಸಿ, 52, 140
ಸೌಳಯ್ಯ, 16
ಸ್ತಂಭ, 22, 24
ಸ್ತಂಭಕೂಟ, 216
ಸ್ತಂಭ-ನಿಸಿಧಿ, 221
ಸ್ತಂಭ-ಫಲಕ, 150
ಸ್ತಂಭಪೀಠ, 204
ಸ್ತಂಭಮಂಟಪ, 80
ಸ್ತಂಭವೇದಿಕೆ, 201

ಸ್ತಂಭಶಾಸನ, 221
ಸ್ಥಾನಾಂಗ, 125
ಸ್ಥಾನಿಕ, 63, 84, 90, 92, 94, 59, 82
ಸ್ಥಾನಿಕ ಪ್ರತಿಷ್ಠೆ, 91
ಸ್ಫಟಿಕ, 182
ಸ್ಮಾರಕ, 24
ಸ್ಮಾರಕಕಂಬ, 208
ಸ್ಮಾರಕ-ಕಟ್ಟಡ, 150
ಸ್ಮಾರಕ ಶಾಸನ, 93, 102
ಸ್ಮಾರಕಸ್ತಂಭ, 24, 179
ಸ್ಯಾದ್ವಾದ ಸಿದ್ಧಾಂತ, 153
ಸ್ವಗಾಸಿಗ್ರ, 98
ಸ್ವಗಾಸಿಲಯ, 98

ಹದಿನೆಂಟು ನಾಡು, 75
ಹನಸೋಗೆ ಶಾಖೆ, 185, 238
ಹರನಹಾಸ, 182
ಹಸಿಯಣ, 92
ಹಸಿಯಣ್ಣ ಹೆಗ್ಗಡೆ, 71
ಹಸಿಹರ, 103
ಹಳೇಬೆಳ್ಗೊಳ, 27, 29, 32
ಹಾರ್ನಲ್, 119, 120
ಹಾವೇಸಿ, 22, 199
ಹಿಮಶೀತಲ ರಾಜನ ಆಸ್ಥಾನ, 45
ಹಿಸಿಯ ನಯಸೀತಿಸಿದೇವ, 39, 43
ಹಿಸಿಯಭಂಡಾಸಿ, 71
ಹಿಸಿಯಭಂಡಾಸಿ ರಾಮನಾಯಕ, 64
ಹಿಸಿಯಭಂಡಾಸಿ ಹುಳ್ಳರಾಜ, 55
ಹಿಸಿಸ್ತಾಲೆ, 81
ಹುಳ್ಳ, 56, 59
ಹುಳ್ಳರಾಜ, 32, 38, 42, 54, 57-59, 67-69, 71, 141, 169, 175, 180-183, 185, 186, 232, 235
ಹುಳ್ಳರಾಯ, 70
ಹೂಸಿನಬಾಗಿ, 37, 142, 183
ಹೆಗ್ಗಡತಿ ಬಾಗಣಬ್ಬೆ, 68, 183, 142
ಹೆಗ್ಗಡಿತಿ, 60
ಹೆಗ್ಗಡೆ, 60
ಹೆಗ್ಗಡೆ ಕಣ್ಣ, 202, 205, 206, 207
ಹೆಗ್ಗಡೆ ಚಾವರಾಜ, 223
ಹೆಗ್ಗಡೆ-ಗೌಡರು, 104
ಹೆಲೆನ್ ಜಾನ್ಸನ್, 119, 128
ಹೇಮಚಂದ್ರ, 27, 92
ಹೇಮಚಂದ್ರ ಸೀತಿಸಿದೇವ, 194
ಹೇಮಚಂದ್ರಮಲಧಾಸಿಗಂಧಸಿಮುಕ್ತ, 29
ಹೇಮಚಂದ್ರಸೀತಿಸಿದೇವ, 196
ಹೇಮಸೇನ, 48, 50
ಹೊಂಬುಚ್ಚ, 200
ಹೊಯ್ಸಳ, 53, 55, 75, 79, 175, 186, 208, 215, 224
ಹೊಯ್ಸಳ ಅರಸ, 53, 145
ಹೊಯ್ಸಳ ಅರಸ ಎರೆಯಂಗ, 29
ಹೊಯ್ಸಳ ಇಮ್ಮಡಿ ಸೀರಬಲಾಳ್ಳ, 169
ಹೊಯ್ಸಳ ಜಿನಾಲಯ, 42, 43, 54
ಹೊಯ್ಸಳ ನರಸಿಂಹ, 183, 188
ಹೊಯ್ಸಳ ಬಲ್ಲಾಳ, 157
ಹೊಯ್ಸಳರಾಜ, 32
ಹೊಯ್ಸಳರಾಜಗುರು, 37
ಹೊಯ್ಸಳ ರಾಜವತಸಿಕ, 237
ಹೊಯ್ಸಳ ರಾಜ್ಯ, 59, 71, 171
ಹೊಯ್ಸಳರು, 53
ಹೊಯ್ಸಳ ರೂವಾಸಿ, 225
ಹೊಯ್ಸಳ ಸಿನಯಾದಿತ್ಯ, 54
ಹೊಯ್ಸಳ ಶೈಲಿ, 206
ಹೊಯ್ಸಳ ಸಾಮಂತ, 56, 59, 83
ಹೊಯ್ಸಳಸೆಟ್ಟಿ, 59, 68, 137, 141, 199
ಹೊಯ್ಸಳ ಸೋಮೇಶ್ವರ, 188
ಹೊಯ್ಸಳಾಚಾಸಿ, 209, 210
ಹೊಸಪಟ್ಟಣ, 75
ಹೊಸಹಳ್ಳಿ, 85
ಹೊಸಹೊಳಲು, 84

ಗ್ರಂಥ ಕರ್ತರ ಇತರ ಕೃತಿಗಳು

1975:	1.	Hoysala Sculpture in the National Museum, Copénhagen, (National Museum, Copenhagen, Denmark)
1976:	2.	2-4. Archaeological Survey of Mysore, Annual Reports: A Study - Vol. II to IV (ed), (Karnatak Uni. Dharwad).
1981:	5.	Sravana Belagola - An illustrated Study (Ruvari Publication, Bangalore)
1982:	6.	Memorial Stones : A Study of their origin, significance and variety, (ed. with Prof. G.D. Sontheimer, Heidelberg Uni. Germany). (South Asia Institute of Heidelberg University, Heidelberg, & Karnataka University, Dharwad)
1986:	7.	Inviting Death : Historical Experiments on Sepulcharal Hill (Inst. Indian Art History, Karnatak Uni. Dharwad).
1989:	8.	Inviting Death : Indian Attitude Toward the Ritual Death (E.J. Brill, Leiden, the Netherlands).
1990:	9.	Pursuing Death : Philosophy and Practice of Voluntary Termination of Life, (Institute of Art History, Karnataka Uni., Dharward).
	10.	Hampi : A Medieval Metropolis, (Kalayatra Publications, Bangalore)
1991-2:	11.	The Hoysala Temples, vol. I - II (Kalayatra, Bangalore & Karnataka University, Dharwad).
1994:	12.	Jaina Sources of Indian History : Annotated Concordance of Classical Kannada Literature 10th to 13th Century in forty volumes (work under progress).
1999:	13.	ABLA : South and South-East Asian Art and Archaeology Index : Vol.I (1996). (Co-edited with Professor K.R. Van Koiji, (Kern Inst. Leiden) E.M. Raven (Leiden) M.J.Klokke (Leidan), S.Settar (India) Doris Yapa (Sri Lanka), Hasan Djafar (Indonesia) and Wiłasinee Thabuengkarn (Thailand). (Kegan Paul International, London).
	14.	We Lived Together, (edited with P.K.V. Kaimal), (Paragati-ICHR, New Delhi)

15. Jallianwalla Bagh, (edited with Prof. V.N.Dutta), Pragati-ICHR, New Delhi).

16. Railway Construction in India, Vol I-III (Edited in association with three other scholars) (Northern Book Centre-ICHR).

2002 : 17-20. Indian Archaeology in Retrospect, Vol. I-IV (In Four Volumes), (edited with Prof. Ravi Korisettar). (Manohar-ICHR, New Delhi).

21-22. Pangs of Partition, Vol. I : The Parting of Ways : History, Politics, Economics ; Pangs of Partition, Vo. II : The Human Dimension : Culture, Society, Literature, (edited with I.B. Gupta), (Manohar - ICHR, New Delhi).

ಇಂಗ್ಲಿಷ್ ಅವತರಣಿಕೆಯ ವಿಮರ್ಶೆ

INVITING DEATH

"Basically, it is two books, two texts for different audiences. It is an historical analysis of the changing mortuary scene in ancient India up to roughly the fifteenth century. It is also a book of sepulcharal art, well supported by numerous diagrammes, drawings, and black and white illustrations.

The interlacing of hagiographical, architectural, and art histrorical detail... show the essential unity of all templates relevant to ritual death, regardless of the apparent incompatibilities of the disciplines marshalled.

Settar draws on his studies in Kannada Kavya-literature and a number of Jaina Puranas; in addition his work is epigraphical.... He is an art-historian as well as an engage Jaina Scholar. The ... appendices are an indologist delight.

-Agehananda Bharati, Syracuse University,
Journal of Americal Oriental Society, 110.4 (1990).

Professor Settar has made a very considerable contribution to the literature on ... religion. He says, modestly, that he has taken the first step into an unexplored territory. He has, in fact, done far more than this. Doubtless later scholars will widen the study... but the author of these two volumes has produced a work of valuable scholarship which is readable and enlightening for the scholar and non-expert alike.

- Prof. Paul Marrett, Journal of the Royal Asiatic Society, **London, 3rd Sr.I. 3, Nov. 1991.**

THis book, although highly specialized in its subject matter, is one

of the more important monographs on the Jains written in recent decades. It is recommended for any library which aims to represent adequately South Asian religion in it collection.

- **J.E.Cort, Harvard University,** *Religious Studies Review,* **Cambridge, Mass, Vol.17, No.4, Oct. 1989.**

Melange d'erudition et d'enthousiasme religieux alliant l'expose des faits a I'hagiographics, cet ouvrage est tres typiyuement jain. Source d'information sur unepratique rituelle tres particuliere en meme temps que temoignange vivant sur une mentalite, il est fort interessant a lire.

- **Andre Padoux, Parix,** *Archives de Sciences Socialess de Religions, 2-90.*

Inviting Death is a work of scholarship. It tells us not only about how death is invited and how release is obtained, but explains the meaning and significance of rituals... But overriding all the scholarship is the awesome study of the approach to death.

-**M.V. Kamath,** *The Times of India:Sunday Review,* 2 **February, 1986.**

"....an interesting book on a much neglected theme... another milestone... the author has set a pioneering pattern".

- *Tamil Civilization*

".... The subject is rather macabre.... This is an awesome scholarly compendium, which is nonetheless, quite readable".

- *Insight*

"There is something new in each and every aspect of the book: methodology, theory, analysis, organisation, presentation and even the lay-out of the book".

- *Indian and World Arts and Crafts.*

"Settar's approach is genuinely multi-desciplinary, which makes best use of historical-archaeology, art-history, religion and philosophy as well as socio-economic history.... Admittedly, this is an important contribution to the realm of Indian studies... We look forward to the publication of Pursuing Death - a sequel to the present volume".

- *Calcutta Review*

"One should praise this unassuming but solid endeavour of scholarship.... The reading can be quite entertaining at moments, when Settar quotes from often flowery or dramatic inscriptions, poems and myths".

- *Deccan Herald*

The book under review is probably the first of its kind which considers the phenomenon of death, from the psychological, religious and philosophical point of views.... The work is well written, printed and bound.

- *Gommatavani,*

ಪ್ರೊ. ಷ. ಶೆಟ್ಟರ್ ಅವರ Inviting Death ಇಂಗ್ಲಿಷಿನಲ್ಲಿ ಪ್ರಕಟವಾದಾಗ ಬಹುಖ್ಯಾತಿಯನ್ನು ಪಡೆಯಿತು. ಅದು ದೇಶ ವಿದೇಶಗಳ ವಿದ್ವಾಂಸರ ಗಮನವನ್ನು ಸೆಳೆಯಿತು. ಈ ಕೃತಿಯ ಮಹತ್ವವನ್ನು ನಮ್ಮ ದೇಶದ ವಿದ್ವಾಂಸರಿಗಿಂತ ಹೊರದೇಶದ ವಿದ್ವಾಂಸರೇ ಮುಕ್ತವಾಗಿ ಸ್ವೀಕರಿಸಿದ್ದು ಈಗ ಚರಿತ್ರೆಗೆ ಸಂದಿರುವ ಸಂಗತಿ. ಭಾರತದ ವಿದ್ವಾಂಸರು ಈ ಕೃತಿಯನ್ನು ಹಲವು ಮಗ್ಗುಲುಗಳಿಂದ ಈಗೀಗ ನೋಡುತ್ತಿದ್ದಾರೆ.

ಈ ಮಹಾಗ್ರಂಥವು ಜೈನ ಸಂಸ್ಕೃತಿಯ 'ಸಾವಿನ ಬಗೆ'ಯನ್ನು ಕುರಿತಿದೆ. ಇದೊಂದು ಜೈನ ಸಾಂಸ್ಕೃತಿಕ ಕೇಂದ್ರದ ಪರಿಕಲ್ಪನೆ ಯಾಗಿದೆ. ಈ ಪರಿಕಲ್ಪನೆಯು ಆ ಸಂಸ್ಕೃತಿಯ ಐತಿಹಾಸಿಕ, ಸಾಮಾಜಿಕ, ನೈತಿಕ, ಧಾರ್ಮಿಕ ನೆಲೆಗಳ ಜತೆ ಬಹು ವಿನ್ಯಾಸವನ್ನು ಪಡೆದಿದೆ. ಸಾವು ಒಂದು ರುದ್ರಭೀಕರ ಸನ್ನಿವೇಶವಲ್ಲ; ಅದೊಂದು ಅನೂಹ್ಯ ತತ್ವವಲ್ಲ; ಲೌಕಿಕದಲ್ಲಿದ್ದೂ ಅಲೌಕಿಕ ನೆಲೆಯನ್ನು ಹಿಡಿಯುವ ಒಂದು ಪರಿ. ಇದು ಆಹ್ವಾನವೇ ಹೊರತು ಪಲಾಯನವಲ್ಲ, ಜೈನ ಸಂಸ್ಕೃತಿಯು ಸಾವೆಂಬುದು 'ಆಹ್ವಾನ'ವೆಂದೇ ಉದ್ದಕ್ಕೂ ತಿಳಿದಿದೆ. ಈ ಆಹ್ವಾನದ ಹಲವು ಪರಿಗಳನ್ನೂ ಹಾದಿಗಳನ್ನೂ ಸೂಕ್ಷ್ಮಗಳನ್ನೂ ಈ ಮಹಾಕೃತಿ ಹಿಡಿಯುತ್ತದೆ. ಈ ಗ್ರಂಥದ ರಚನೆಯಲ್ಲಿ ಪ್ರೊ. ಷ. ಶೆಟ್ಟರ್ ಅವರ ವಿಪುಲ ವ್ಯಾಸಂಗ, ವಿಶ್ಲೇಷಣ ಸಾಮರ್ಥ್ಯ, ತಾತ್ವಿಕ ದೃಷ್ಟಿಕೋನಗಳು ನಮ್ಮಲ್ಲಿ ಅಚ್ಚರಿಯನ್ನು ಉಂಟು ಮಾಡುತ್ತವೆ. ಪ್ರೊ. ಷ. ಶೆಟ್ಟರ್ ನಮ್ಮ ನಡುವಿನ ಮೇಧಾವೀ ವಿದ್ವಾಂಸರು. ಅವರು ಹೊಸತೆಲ್ಲಿದ್ದರು ತಿಳಿಯಬಲ್ಲ ಸೂಕ್ಷ್ಮಜ್ಞರು. ಸದಾ ವ್ಯಾಸಂಗವೇ ಅವರ ಕ್ರಿಯಾಶಕ್ತಿಯ ಫಲವಾಗಿದೆ. ಕನ್ನಡ, ಇಂಗ್ಲಿಷ್, ಸಂಸ್ಕೃತ, ಪ್ರಾಕೃತ - ಹೀಗೆ ಹಲವು ಭಾಷಾ-ಸಾಹಿತ್ಯಗಳ ಜತೆ ನಂಟನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಅದು ಅವರ ಜೀವನದ ಸಾತತ್ಯ ಫಲವಾಗಿದೆ. ಕನ್ನಡದ ಜೈನಕಾವ್ಯಗಳ ವ್ಯಾಸಂಗಕ್ಕೆ ಇದು ಬಹು ಉಪಕಾರಕವಾದ ಗ್ರಂಥವೆಂದು ನನ್ನ ಭಾವನೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ISBN : 81-7713-119-2

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಬೆಲೆ : ರೂ 200/-